
# ಕಗ್ಗ ರಸಧಾರೆ

ಸಂಪುಟ ೪

ಕಗ್ಗ ರಸಧಾರೆ-ಸಂಪುಟ-4 (ಡಿವಿಜಿಯವರ ಮಂಕುತಿಮ್ಮನ
ಕಗ್ಗಗಳ ರಸಧಾರೆ)

JNANA002067

ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ



ವ್ಯಾಖ್ಯಾತ: ರವಿ ತಿರುಮಲೈ

# KAGGA RASADHARE

Vol - 4 (Muktakas 7ಸಂ1-945 Nos.)

A commentary in Kannada on D.V. Gundappa's
**'Mankuthimmana Kagga**
by **Ravi Tirumalai**

Pages: 352

©: Author

Published: 2ಸಂ17

Copies: 5ಸಂಸಂ

Price: Rs.: 25ಸಂ/-

Author: **Ravi Tirumalai**
Phone: 96322 46355, 99451 56255
: ಸಂ8ಸಂ 2668 5249, ಸಂ8ಸಂ 42ಸಂ8 8199

Publisher:
**Vijayaravi Prakashana**
No. 3ಸಂ6, Acharya Sankeerna
BOCHS - AICOBOO Nagar
BTM II Stage, Bangalore - 56ಸಂ ಸಂ76

Cover Page Picture: Sri Mohan Vernekar
Cover Page Layout: Vasanth Bantakal

Printed at:
**Bangalore Printers & Binders**
Prints India Process, Bangalore

ನನಗೆ ಬದುಕಿನ ಪಾಠ
ಹೇಳಿಕೊಟ್ಟ ಎಲ್ಲರಿಗೂ
**ಅರ್ಪಣೆ**

# ರಸಧಾರಾ ಸೂಚಿ


| ವಿಷಯ | ಮುಕ್ತಕದ ಸಂಖ್ಯೆ |
|---|---|
| ಎರಡು ಕೋಣೆಗಳು | ೭೦೧ - ೭೦೫ |
| ಭರತೋದಾಹರಣೆ | ೭೦೬ - ೭೧೧ |
| ನಿಷ್ಪ್ರಯತ್ನ ಧಾರ್ಮಿಕತೆ | ೭೧೨ - ೭೧೩ |
| ನಾಲ್ಕು ತಪಸ್ಸುಗಳು | ೭೧೪ - ೭೨೩ |
| ಓಲೆಕಾರನು ನೀನು | ೭೨೪ - ೭೨೮ |
| ಪಕ್ಷಿಮಾರ್ಗ | ೭೨೯ - ೭೩೩ |
| ಅದೃಶ್ಯ ಸೇನಾಧಿಪತಿ | ೭೩೪ - ೭೩೮ |
| ಜೀವನ ಕಲೆ | ೭೩೯ - ೭೪೩ |
| ತೃಣ ಸಾಧು | ೭೪೪ - ೭೪೮ |
| ಬಂಡವಾಳ ಬಡ್ಡಿ | ೭೪೯ - ೭೫೩ |
| ಸಾರ್ವಭೌಮಗುಣ | ೭೫೪ - ೭೫೮ |
| ಮುನ್ನೋಟ-ಮೇರು ಗುರಿ | ೭೫೯ - ೭೬೩ |
| ನಂದ-ಶಬರಿ-ಹನುಮಂತ-ಶುನಕ | ೭೬೪ - ೭೬೮ |
| ಮತತ್ರಯ | ೭೬೯ - ೭೭೩ |
| ಗುರು ಲಕ್ಷಣ | ೭೭೪ - ೭೭೮ |
| ಕಾಲಕ್ಕೆ ಪಾಲುಂಟು | ೭೭೯ - ೭೮೩ |
| ಇಂದ್ರಿಯ ಶಾಂತಿ | ೭೮೪ - ೭೮೮ |
| ಜಗತ್ತು ಗುಡಿ | ೭೮೯ - ೭೯೩ |
| ಬಂಧ ನಿವಾರಣೆ | ೭೯೪ - ೭೯೮ |
| ಅತೀತ ಪದವಿ | ೭೯೯ - ೮೦೩ |
| ಜಗದಾತ್ಮ ಜೀವನ | ೮೦೪ - ೮೦೮ |
| ಬಾಹ್ಯಾಂತರ್ಯ ಸಮುಚ್ಚಯ | ೮೦೯ - ೮೧೩ |
| ಜೀವಮರ್ಮ | ೮೧೪ - ೮೧೯ |
| ಮೂರನೆಯ ಭಾಗಸ್ಥ | ೮೨೦ - ೮೨೪ |

| ವಿಷಯ | ಮುಕ್ತಕದ ಸಂಖ್ಯೆ |
|---|---|
| ಜೀವನ ಕಲೆ | ೮೨೫ - ೮೨೮ |
| ಕೊಳೆ ಶುಚಿವ್ಯಾಪಕ | ೮೨೯ - ೮೩೩ |
| ಮೃತ್ಯುಭಯ | ೮೩೪ - ೮೩೮ |
| ಕರ್ಮಸೂತ್ರ ಗುಪ್ತಗಾಮಿನಿ | ೮೨೯ - ೮೪೩ |
| ಗುರುಪದವಿ ಬೇಡ | ೮೪೪ - ೮೪೯ |
| ವಿಶ್ವ ನರ್ತನ | ೮೫೦ - ೮೫೩ |
| ಲೋಕ ಪ್ರಗತಿ | ೮೫೪ - ೮೫೮ |
| ಪ್ರಕೃತಿ ಮನುಷ್ಯರನ್ಯೋನ್ಯ | ೮೫೯ - ೮೬೩ |
| ಕಿದ್ದು ಮುಗಿತ ಬೂದಿಯಾಗಿ | ೮೬೩ - ೮೬೮ |
| ಹಿತ ವಿವೇಕ | ೮೬೯ - ೮೭೩ |
| ಒಡೆಯದಿರು ತಳಹದಿಯ | ೮೬೪ - ೮೭೮ |
| ಜಗತ್ತಿಗೆ ಶ್ರೇಯಸ್ಸೆಂದು? | ೮೭೯ - ೮೮೩ |
| ಅಶ್ವತ್ಥ ಸೇವೆ | ೮೮೪ - ೮೮೮ |
| ಸಂಪೂರ್ಣ ಸುಖ | ೮೮೯ - ೮೯೩ |
| ಸಂಕೇತಮಯ ಲೋಕ | ೮೯೪ - ೮೯೮ |
| ಮೋಕ್ಷಾತುರ | ೮೯೯ - ೯೦೩ |
| ಚಿತ್ತ ಶುದ್ಧಿ | ೯೦೪ - ೯೦೮ |
| ತೇನ ತ್ಯಕ್ತೇನ ಭುಂಜೀಥಾ | ೯೦೯ - ೯೧೩ |
| ನಕ್ಕು ನಗಿಸಿರೆ ಸಾರ | ೯೧೪ - ೯೧೮ |
| ಎಲ್ಲರಿಗಮೀಗ ನಮೋ | ೯೧೯ - ೯೨೩ |
| ಒಣಗಿದೊಡೆ ಸವುದೆ | ೯೨೪ - ೯೨೮ |
| ನಿದ್ದೆವೊಲು ಸಾವು | ೯೨೯ - ೯೩೩ |
| ಮತಿಯಂತೆ ಮತ | ೯೩೪ - ೯೩೮ |
| ಬೇಡಿಕೆ | ೯೩೯ - ೯೪೩ |
| ಶರಣು | ೯೪೪ - ೯೪೫ |

# ಮುನ್ನುಡಿ

'ಡಿ.ವಿ.ಜಿ.' ಎಂಬ ಸಂಕೇತಾಕ್ಷರಗಳಿಂದ ಖ್ಯಾತರಾದ ಡಾ॥ ಡಿ. ವಿ. ಗುಂಡಪ್ಪನವರು ರಚಿಸಿದ 'ಮಂಕುತಿಮ್ಮನ ಕಗ್ಗ ಇಪ್ಪತ್ತನೇ ಶತಮಾನದ ಉತ್ತರಾರ್ಧದ ಕನ್ನಡ ಕೃತಿಗಳಲ್ಲಿ ಅತ್ಯಂತ ವಿಶಾಲ ಜನಾದರಣೆಯನ್ನು ಪಡೆದ ಕೃತಿ ಎಂಬ ಸಂಗತಿಯು ವಿವಾದಾತೀತವಾಗಿ ಸಿದ್ಧಪಟ್ಟಿದೆ. ನಿತ್ಯಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಯ ಪ್ರಸಕ್ತಿ ಬಂದಾಗಲೂ, ಹಲವಾರು ವೈಪರೀತ್ಯಗಳಿಂದ ಕೂಡಿದ ಜಗತ್ತಿನ ವಿಷಯದಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬನು ಯಾವ ಮನೋಭಂಗಿಯನ್ನು ಬೆಳೆಸಿಕೊಳ್ಳುವುದು, ನೆಮ್ಮದಿಗೆ ದಾರಿ ಮಾಡಬಹುದೆಂಬುದರ ಪ್ರಸಕ್ತಿ ಬಂದಾಗಲೂ, ಸರ್ವವಿದಿತ ಪೌರಾಣಿಕಾಖ್ಯಾನಗಳಿಂದ ಮತ್ತು ಐತಿಹಾಸಿಕ ಸಾಹಿತ್ಯಕ ಸಂದರ್ಭಗಳಿಂದ ನಾವು ಕಲಿಯಬಹುದಾದ ಪಾಠಗಳು ಏನೆಂದು ಚಿಂತಿಸುವಾಗಲೂ, ಪರಸ್ಪರ ವಿರುದ್ಧಗಳಂತೆ ತೋರುವ (ಉದಾಹರಣೆ: ಸಂಪ್ರದಾಯ ಮತ್ತು ಆಧುನಿಕತೆ, ಶ್ರದ್ಧೆ ಮತ್ತು ವೈಚಾರಿಕತೆ, ಇತ್ಯಾದಿ) ದ್ವಂದ್ವಗಳ ನಡುವೆ ಸಮನ್ವಯ ಕುರಿತು ಚಿಂತಿಸುವಾಗಲೂ, ಹೀಗೆ ಜೀವನದ ಪ್ರಮುಖ ಸನ್ನಿವೇಶಗಳಲ್ಲಿ ನೆರವನ್ನೀಯುವ ಹಿತವಚನಗಳ ಒಟ್ಟಿಲು 'ಮಂಕುತಿಮ್ಮನ ಕಗ್ಗ'. ಇದಿಷ್ಟು ಪ್ರಯೋಜಕತೆಯ ಮಾತಾಯಿತು. ಎರಡನೆಯದಾಗಿ, ಇಂದಿನವರಿಗೆ ಅತ್ಯಂತ ಉಪಕಾರಕವಾದ ಈ ಹಿತಬೋಧನೆಯನ್ನು ಕಾವ್ಯಮುಕ್ತಕಗಳಾಗಿ ಪದ್ಯರೂಪದಲ್ಲಿ ನಿವೇಶನಗೊಳಿಸಿರುವುದರಿಂದ ಲಬ್ಧವಾಗಿರುವ ಸ್ಮರಣಾನುಕೂಲತೆ, ಮೇಲಿನ ಎರಡೂ ಲಾಕ್ಷಣಿಕ ಅಂಶಗಳು. ಇವೆರಡಕ್ಕೂ ಮೀರಿದ ಒಂದು ಅನನ್ಯತೆ 'ಮಂಕುತಿಮ್ಮನ ಕಗ್ಗ'ದಲ್ಲಿದೆ. ಅದೆಂದರೆ, ಈ ಇಡೀ ಕೃತಿಯ ಅಂತಃಶ್ರುತಿಯಂತೆ ಓದುಗರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಸ್ನೇಹಧ್ವನಿ. ಇಲ್ಲಿಯ ಅನೇಕ ಉಕ್ತಿಗಳು ಉನ್ನತ ಪಾಂಡಿತ್ಯದಿಂದ, ಶಾಸ್ತ್ರಾಧ್ಯಯನದಿಂದ ಮತ್ತು ಗಾಢ ಲೋಕಾನುಭವದಿಂದ ಜನಿತವಾದವು. ಆದರೆ ಕೃತಿಯಲ್ಲಿ ಎಲ್ಲಿಯೂ 'ನಾನು ಜ್ಞಾನಿ', ಅನುಭವಿ; ನನ್ನ ಮಾತನ್ನು ನೀವೆಲ್ಲ ಕೇಳಿರಿ' ಎಂಬಂತಹ ಠೇಂಕಾರದ ಧ್ವನಿ ಇಲ್ಲ. ಪ್ರತಿಯಾಗಿ ಪದ್ಯಗಳುದ್ದಕ್ಕೂ ಎದ್ದು ಕಾಣುವುದು 'ನಾನು ನಿಮ್ಮಂತಹ ಒಬ್ಬ ಸಾಮಾನ್ಯ: ನಿಮ್ಮಂತೆ ನಾನೂ ಬವಣೆಪಟ್ಟವನು, ನಮ್ಮ ಅನುಭವಗಳನ್ನು ಹಂಚಿಕೊಳ್ಳೋಣ' ಎಂಬ ರೀತಿಯ ನಮ್ರತೆಯಿಂದಲೂ ಮೈತ್ರಿಭಾವದಿಂದಲೂ ಕೂಡಿದ ಪ್ರೇಮಳತೆ. ಲಕ್ಷಾಂತರ ಜನರಿಗೆ 'ಕಗ್ಗ'ದಿಂದ ಸಾಂತ್ವನವೂ ಸಮಾಧಾನವೂ ದೊರೆಯುತ್ತಿರುವುದು ಈ ಆದ್ರತೆಯಿಂದ. ಇದರಿಂದಾಗಿ ಅಸಂಖ್ಯ ಜನರ ಬಾಳಿನಲ್ಲಿ ಓರ್ವ ಆತ್ಮೀಯ ಸ್ನೇಹಿತನ ಸ್ಥಾನವನ್ನು 'ಕಗ್ಗ'ಪಡೆದುಕೊಂಡಿದೆ.

ವರ್ಷಗಳು ಕಳೆದಂತೆ 'ಕಗ್ಗ'ದ ಜನಪ್ರಿಯತೆ ನೂರ್ಮಡಿಯಾಗಿ ಹೆಚ್ಚುತ್ತಿರುವುದು ಸಾಹಿತ್ಯಲೋಕದ ಒಂದು ವಿಸ್ಮಯ. ಕಳೆದ ಅರ್ಧ ಶತಮಾನದುದಕ್ಕೂ ಗ್ರಂಥಗಳಲ್ಲಿ, ಲೇಖನಗಳಲ್ಲಿ, ಉಪನ್ಯಾಸಗಳಲ್ಲಿ, ಚಿಂತನಗೋಷ್ಠಿಗಳಲ್ಲಿ 'ಕಗ್ಗ'ದ ಪದ್ಯಗಳಷ್ಟು ಅಧಿಕವಾಗಿ ಮೇಲಿಂದ ಮೇಲೆ ಉತ್ಕೃತಗೊಳ್ಳುತ್ತ ಬಂದಿರುವ ಉಕ್ತಿಗಳು ಬೇರೆ ಇಲ್ಲ. 'ಕಗ್ಗ' ನಮ್ಮ

ಜನತೆಯ ಮನದಾಳದ ಯಾವುದೋ ಆಕಾಂಕ್ಷೆಗಳಿಗೆ ಸಮಾಧಾನ ನೀಡಲು ಶಕ್ತವಾಗಿದೆ ಎನ್ನಲು ಈ ವಿಶಾಲ ಜನಾದರಣೆಗಿಂತ ಬೇರೆ ಪುರಾವೆಯ ಅಗತ್ಯ ಇಲ್ಲ. ಯಾವ ರೀತಿಯ ಸಾಂತ್ವನಕ್ಕಾಗಿ ಜನತೆ ಕಾದಿದ್ದಿತೋ ಅದು 'ಕಗ್ಗದಿಂದ ಲಬ್ಧವಾಯಿತೆಂಬುದು ಸ್ಪಷ್ಟವಿದೆ. ಹೀಗೆ ಸಾಹಿತ್ಯಕೃತಿಯೊಂದು ಜನಸಾಮಾನ್ಯರಿಗೆ ಆಪ್ತವಾಗುವುದು ವಿರಳವಾಗಿಯಷ್ಟೆ ನಡೆಯುವ ವಿದ್ಯಮಾನ.

ಈ ಹಿನ್ನೆಲೆಯಲ್ಲಿ 'ಕಗ್ಗ'ದ ಹಲವಾರು ಗದ್ಯಾನುವಾದಗಳೂ, ಅವಲೋಕನಗಳೂ, ವ್ಯಾಖ್ಯಾನಗಳೂ ಪರಾಮರ್ಶನಗಳೂ ಬಂದಿರುವುದು ಮತ್ತು ಈಗಲೂ ಬರುತ್ತಿರುವುದು ಸಹಜವೇ ಆಗಿದೆ. ಈ ಬಗೆಬಗೆಯ ಅನುಕೃತಿಗಳೂ ವಿಶಾಲ ಪ್ರಸಾರವನ್ನು ಪಡೆದುಕೊಂಡಿವೆ ಎಂಬುದು ಡಿ.ವಿ.ಜಿ.ಯವರ ಮೂಲಕೃತಿಯ ಸತ್ತ್ವವಂತಿಕೆಗೆ ಸಾಕ್ಷ್ಯವಾಗಿದೆ. 'ಕಗ್ಗ'ವನ್ನು ಕುರಿತು ವಿವಿಧೆಡೆಗಳಲ್ಲಿ ಪದೇಪದೇ ನಡೆಯುವ ವಾಚನ- ವ್ಯಾಖ್ಯಾನ-ಪ್ರವಚನಗಳೂ ವಿಶಾಲ ಪ್ರಮಾಣದ ಶ್ರೋತೃಗಳನ್ನು ಆಕರ್ಷಿಸಿವೆ. ಮುದ್ರಿತ ರೂಪದಲ್ಲಿ ಮಾತ್ರವಲ್ಲದೆ, ವಿದ್ಯುನ್ಮಾನ ಮಾಧ್ಯಮದ ಮೂಲಕವೂ 'ಕಗ್ಗ'ವನ್ನು ಕುರಿತ ವ್ಯಾಖ್ಯಾನಗಳನ್ನು ದೂರದ ಪ್ರದೇಶಗಳ ಮತ್ತು ವಿದೇಶಗಳ ಸಹಸ್ರಾರು ಸಾಹಿತ್ಯ ಪ್ರೇಮಿಗಳು ಆಸ್ವಾದಿಸುತ್ತಿದ್ದಾರೆ. ಈ ಹಿಂದೆಯೇ ಹಲವಾರು ಅನುವಾದ ಅಥವಾ ಅವಲೋಕನ ಕೃತಿಗಳು ಪ್ರಕಟಗೊಂಡಿದ್ದರೂ ಹೊಸ ಕೃತಿಗಳಿಗೂ ಸ್ವಾಗತ ದೊರೆಯುತ್ತಿದೆ.

---

ಹೀಗೆ ವರ್ಧಿಸುತ್ತ ಸಾಗಿರುವ 'ಕಗ್ಗ ವಾಙ್ಮಯಕ್ಕೆ ಇದೀಗ ಸೇರ್ಪಡೆಯಾಗುತ್ತಿರುವುದು, ನನ್ನ ಮಿತ್ರರೂ ಮೌಲಿಕ ಸಾಹಿತ್ಯದ ಅಭ್ಯಾಸಿಗಳೂ ಅಧ್ಯಯನಶೀಲರೂ ಆದ ಶ್ರೀ ರವಿ ತಿರುಮಲೈ ರಚಿಸಿರುವ 'ಕಗ್ಗರಸಧಾರೆ' ಎಂಬ ಶೀರ್ಷಿಕೆಯ ನೂತನ ವ್ಯಾಖ್ಯಾನ.

ಕಗ್ಗ'ದ ಒಂದೊಂದು ಮುಕ್ತಕದಲ್ಲಿಯೂ ಜಗದ್ವಿಶಾಲವಾದ ಭಾವನಾ ಪ್ರಪಂಚವು ಘನೀಕೃತವಾಗಿದೆ. ಅಲ್ಲಿಯ ಶಬ್ದಗಳ ವಾಚ್ಯಾರ್ಥದ ಹತ್ತುಪಟ್ಟು ವಿಸ್ತ್ರತಾರ್ಥವು ಅಲ್ಲಿಯ ಮಾತುಗಳ ಹಿಂದಿನ ಧ್ವನಿಮೆಯಲ್ಲಿ ಸ್ಫೋಟಗೊಳ್ಳುತ್ತದೆ. ಹೀಗೆ ಒಳಹೊಕ್ಕಷ್ಟೂ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಪ್ರಕಟಗೊಳ್ಳುತ್ತ ಹೋಗುತ್ತವೆ. ಭೌತಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ 'ಕಗ್ಗ'ದ ಉಕ್ತಿಗಳು 'ಸ್ಟಾಟಿಕ್ 'ರೀತಿಯವಲ್ಲ. ಅವು 'ಡೈನಾಮಿಕ್' ರೀತಿಯವು, ಎಂದರೆ ಸಂಚಲನಾಶೀಲವಾದವು. ಈ ವೈಶಿಷ್ಟ್ಯದಿಂದಾಗೆಯೇ ಸಹೃದಯ ಓದುಗರಿಗೆ ಈ ಪದ್ಯಗಳಿಂದ ದೊರೆಯುವ ಒಡನಾಟವು ಪ್ರವಾಹರೂಪದ್ದೂ ಸಾತತ್ಯಗುಣವುಳ್ಳದ್ದೂ ಆಗಿದೆ. ಮನನಮಾಡಿ ಧ್ಯಾನಿಸಿದೆಂತೆಲ್ಲ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಹೊಳೆಯುತ್ತಾ ಹೋಗುತ್ತವೆ.

ಈ ಸತ್ತ್ವಂತಿಕೆಯ ಕಾರಣದಿಂದ 'ಕಗ್ಗ'ವನ್ನು ಕುರಿತು ಈಗಾಗಲೇ ಹಲವಾರು ಕೃತಿಗಳು ಹೊರಬಂದಿದ್ದರೂ ನೂತನ ಅರ್ಥಶೋಧಗಳಿಗೆ ಸದಾ ಅವಕಾಶ ಉಳಿದೇ ಇರುತ್ತದೆ. ಕೃತಿಯ ಬಳಿಸಾರುವ ಜಿಜ್ಞಾಸುಗಳ ವ್ಯುತ್ಪತ್ತಿಗೂ ಮತ್ತು ಭಂಗ್ಯಂತರಕ್ಕೂ ಅನುಗುಣವಾಗಿ ಒಂದೊಂದು ಅನುಕೃತಿಗೂ ಅದರದ್ದೇ ವೈಶಿಷ್ಟ್ಯವಿರುವುದು ಸಾಧ್ಯವಿದೆ. ಅದರಂತೆ ಪ್ರಕೃತ 'ಕಗ್ಗರಸಧಾರೆ' ವ್ಯಾಖ್ಯಾನ ಕೃತಿಯಲ್ಲಿ ಶ್ರೀ ರವಿ ತಿರುಮಲೈ ಅವರು ಒಂದು ವಿನೂತನ ಪ್ರಸ್ಥಾನವನ್ನು ಸಂಯೋಜಿಸಲು ಯತ್ನಿಸಿದ್ದಾರೆ. ಇಲ್ಲಿ ಪ್ರತಿ ಪದ್ಯದ ಪದವಿಭಾಗ, ಅಲ್ಲಲ್ಲಿ ಕಠಿಣ ಶಬ್ದಾರ್ಥ ಇದ್ದು ಅನಂತರ ಇಂಗಿತಾರ್ಥದ ವ್ಯಾಖ್ಯೆ ಇದೆ.

ಈ ವ್ಯಾಖ್ಯಾನವನ್ನು ಶ್ರೀಯುತರು ನಾಲ್ಕು ಸಂಪುಟಗಳಲ್ಲಿ ಪ್ರಕಟಗೊಳಿಸಲಿಚ್ಛಿಸಿ, ಈಗಾಗಲೇ ಮುಕ್ತಕ 1 ರಿಂದ 2ಸಂಸಂ ರ ವರೆಗಿನ ಮುಕ್ತಕಗಳನ್ನೊಳಗೊಂಡ 'ಮೊದಲ' ಸಂಪುಟವನ್ನೂ ಮತ್ತು 2ಸ01-45ಸಂ ಮುಕ್ತಕಗಳನ್ನೊಳಗೊಂಡ 'ಎರಡನೆಯ ಸಂಪುಟ ಮತ್ತು 451 ರಿಂದ 7ಸಂಸಂ ವರೆಗಿನ ಮುಕ್ತಕಗಳನ್ನೊಳಗೊಂಡ 3ನೆಯ ಸಂಪುಟವನ್ನೂ ಹೊರತಂದಿದ್ದಾರೆ. ಪ್ರಸ್ತುತ ಪ್ರಕಟವಾಗುತ್ತಿರುವುದು 7ಸ01 ರಿಂದ 945ರ ವರೆಗಿನ ಮುಕ್ತಕಗಳನ್ನೊಳಗೊಂಡ 'ಕಗ್ಗ-ರಸಧಾರೆ'ಯ ನಾಲ್ಕನೆಯ ಮತ್ತು ಅಂತಿಮ ಸಂಪುಟ.

ಅಭಿಜಾತ ಸಾಹಿತ್ಯದ ವ್ಯಾಸಂಗದ ಹಿನ್ನೆಲೆ ಇದ್ದವರಿಗೆ ಪರಿಚಯವೇ ಆಗಿದ್ದರೂ ಅಂತಹ ಹಿನ್ನೆಲೆ ಇಲ್ಲದವರಿಗೆ ಸುಗಮವಾಗಲೆಂಬ ದೃಷ್ಟಿಯಿಂದ ಪದ್ಯಗಳಲ್ಲಿನ ಗ್ರಾಂಥಿಕ ಪ್ರಯೋಗಗಳಿಗೆ ಹೊಸಗನ್ನಡ ಆಡುಭಾಷೆಯ ವಿವರಣೆಗಳನ್ನು ಇಲ್ಲಿ ಕೊಡಲಾಗಿದೆ. ಉದಾಹರಣೆ: ಕಗ್ಗ-135ರಲ್ಲಿ ಸಾಮಾನ್ಯ ಓದುಗರಿಗೆ ಸುಬೋಧವಲ್ಲದ 'ಶಂಪಾತರಂಗ' ಎಂದರೆ ಮಿಂಚಿನ ಅಲೆಗಳು ಎಂಬ ಮತ್ತು 'ಧಂಭೋಳಿ' ಎಂದರೆ ವಜ್ರಾಯುಧ ಎಂಬ ವಿವರಣೆ ಸೇರಿಸಲಾಗಿದೆ. ಮೂಲ ಪದ್ಯದೊಳಗಿನ ಉಲ್ಲೇಖಗಳ ಮತ್ತು ರೂಪಕಗಳ ಅರ್ಥದ ಗ್ರಹಿಕೆಗೆ ಪೂರಕವಾಗುವಂತೆ ಭೌತಜಗತ್ತಿನ ಮತ್ತು ಮಾನವ ಜೀವನದ ಸನ್ನಿವೇಶಗಳ ವಿವರಗಳನ್ನು ಅಳವಡಿಸಿರುವುದು ಪ್ರಾರಂಭಿಕ ಸ್ತರದ ವಾಚಕ ಸಮುದಾಯಕ್ಕೆ ಪ್ರಯೋಜಕವಾಗಿದೆ. ಅಲ್ಲಲ್ಲಿ ಸಮಾಂತರ ಆಶಯದ ಪೂರ್ವಸಾಹಿತ್ಯೋಲ್ಲೇಖಗಳನ್ನು ನೀಡಲಾಗಿದೆ. ಇಲ್ಲಿಯ ಉಕ್ತಿಗಳು ಪ್ರತಿಫಲಿಸುವ ದಾಸಸಾಹಿತ್ಯದ ಉದ್ಧತಗಳನ್ನು ಹಲವಾರೆಡೆ ಕೊಡಲಾಗಿದೆ. ಭೌತವಿಶ್ವದ ರಚನೆಯ ವಿಸ್ಮಯಗಳ ಅವಲೋಕನವೇ ಹೇಗೆ ತತ್ತ್ವಬೋಧಕವಾಗಬಲ್ಲದೆಂಬುದನ್ನು ಹಲವಾರೆಡೆ ಸೂಚಿಸಲಾಗಿದೆ. ಉದಾಹರಣೆಗೆ ಅಮಿತಪ್ರಪಂಚಾಕುಂಚನಾವರ್ತನ ಎಂಬ (ಕಗ್ಗ-91) ಸೂತ್ರರೂಪ ಪದಗುಚ್ಛವನ್ನು ಬೀಜದಿಂದ ಮರವಾಗುವ ಪ್ರಕ್ರಿಯೆಯ ಮತ್ತು ರೇಷ್ಮೆಹುಳುವಿನ ಜೀವನಚಕ್ರದ ನಿದರ್ಶನ ನೀಡಿ ಪುಷ್ಟಿಕರಿಸಲಾಗಿದೆ. ಕಗ್ಗ-147ರಲ್ಲಿ

ಒಮ್ಮೆ ಮೋಹಕವೆನಿಸಿ ಅನಂತರ ಮೈಮರೆತರೆ ಅಧಃಪತನಕಾರಿಯಾಗುವ ಮಾಯೆಯ ಸ್ವರೂಪವನ್ನು ವರ್ಣಿಸುವಲ್ಲಿ ಜೀವನನಿರ್ವಹಣೆಯಲ್ಲಿ ಅಂತರ್ವಿವೇಚನೆಗೆ ಇರಬೇಕಾದ ಮುಖ್ಯ ಸ್ಥಾನವನ್ನು ವಿವರಿಸಲಾಗಿದೆ.

---

'ಕರವೆರಡರದೃಷ್ಟಕ್ಕೆ' ಎಂಬ ಕಗ್ಗ -158ರಲ್ಲಿ ಅಧ್ಯಾಹೃತವಾಗಿರುವ ಹಸ್ತಸಾಮುದ್ರಿಕ ವಿವರವನ್ನು ಲೇಖಕರು ಸ್ಪುಟಗೊಳಿಸಿದ್ದಾರೆ. ಕಗ್ಗ-162ರಲ್ಲಿ 'ಬಿಗಿಯದಿರು ನೀಂ ಬೀಗಿ' ಎಂಬ ವಾಕ್ಯಖಂಡಿಕೆಯಲ್ಲಿ ಹುದುಗಿರುವ ಶರಣಾಗತಿತ್ವದ ಉಪಾಧೇಯತೆಯನ್ನು ಕಂಠೋಕ್ತಗೊಳಿಸಿದ್ದಾರೆ. ಕಗ್ಗ-185ರಲ್ಲಿ 'ಹೃದಯಜೀವನಕಿನಿತು ಬೆಲೆಯಿರದೇ?' ಎಂಬ ಮಾತುಗಳ ಆಶಯವನ್ನು ಸಾಂಪ್ರತಕಾಲದ ಕೇವಲ ವ್ಯವಹಾರ ಪ್ರಧಾನವೂ ಮೌಲ್ಯದೂರವೂ ಆದ ರೀತಿ-ನೀತಿಗಳ ಪ್ರಸ್ತಾಪದ ಮೂಲಕ ಮೊದಲ ಸಂಪುಟದಲ್ಲಿ ಸ್ಪಷ್ಟಗೊಳಿಸಿದ್ದಾರೆ.

ಇನ್ನು ಎರಡನೇ ಸಂಪುಟದಲ್ಲಿ ಅದೇ ಧಾಟಿಯನ್ನು ಮುಂದುವರೆಸುತ್ತಾ ಮುಕ್ತಕ 2ಸ01 ರಲ್ಲಿ ದುರ್ಯೋಧನನ ದೃಷ್ಟಾಂತದಿಂದ ಮಾನವರಲ್ಲಿರುವ ಅಸೂಯೆಯನ್ನು', ಮುಕ್ತಕ 231ರಲ್ಲಿ ಬದುಕನ್ನು ಹೇಗೆ ನೋಡಬೇಕು ಎನ್ನುವ ಸತ್ಯವನ್ನು, ಮುಕ್ತಕ 234 ರಲ್ಲಿ 'ಅನ್ಯಾಯ ವಿಕಟಗಳೆನಿತೋ ಸೃಷ್ಟಿ ಕ್ರಮದಿ' ಎಂದು ಪರಮಾತ್ಮನ ಸೃಷ್ಟಿಯನ್ನೇ ಪ್ರಶ್ನಿಸುವ ಮನುಷ್ಯನ ವಿಚಿತ್ರ ಮನೋಭಾವವನ್ನೂ, ಮುಕ್ತಕ 27ಸಂರಲ್ಲಿ ಸಮಾಜದಲ್ಲಿರಬೇಕಾದ 'ಏಕಾತ್ಮತಾ ' ಭಾವದ ಅವಶ್ಯಕತೆಯನ್ನೂ, ಮುಕ್ತಕ 3ಸಂ4ರಲ್ಲಿ ' ಗ್ರೀಕ್ ದೇಶದ ಸಿಸಿಫಸ್ ನ ಕಥೆಯನ್ನೂ ದೃಷ್ಟಾಂತವಾಗಿ ನೀಡುತ್ತಾ ಮಾನವ ಪ್ರಯತ್ನದ ಮಿತಿಗಳನ್ನೂ, ವಿಶದೀಕರಿಸುತ್ತ, ವ್ಯಾಖ್ಯಾನವನ್ನು ಮುಂದುವರೆಸಿದ್ದಾರೆ. ಹೀಗೆ 'ಕಗ್ಗ' ದ ಪದ್ಯಗಳ ಆಶಯದ ತಳಹದಿಯಾಗಿರುವ ಸತರ್ಕ ಚಿಂತನ ವಿನ್ಯಾಸದ ಹಂತಗಳನ್ನು ಸ್ಪುಟಗೊಳಿಸುವ ರೀತಿಯಲ್ಲಿ 'ಕಗ್ಗ ರಸಧಾರೆ ' ವ್ಯಾಖ್ಯಾನ ರೂಪುಗೊಂಡಿದೆ.

ಮೂರನೆಯ ಸಂಪುಟದದಲ್ಲಿ ತಮ್ಮ ವ್ಯಾಖ್ಯಾನವನ್ನು ಮುಂದುವೆರೆಸುತ್ತಾ ಶ್ರೀ ರವಿ ತಿರುಮಲೈಯವರು, ಮುಕ್ತಕ 462 ರಲ್ಲಿ ಬದುಕಿನಲ್ಲಿ ನಮ್ಮ ಅಸ್ತಿತ್ವವನ್ನು ಒಂದು ನಿರಂತರ ನೂತ್ನತೆಯನ್ನು ಕಾಪಾಡಿಕೊಳ್ಳುವ ಒಂದು ಅಶ್ವತ್ಥ ಮರದ ಎಲೆಗಳಿಗೆ ಹೋಲಿಸಿ, ಅವುಗಳು ಹೇಗೆ ಮರಕ್ಕೆ ಪೂರಕವಾಗಿದ್ದು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತದೆಯೋ, ಹಾಗೆಯೇ ಬದುಕಿನಲ್ಲಿ ಮನುಷ್ಯನ ಕರ್ತವ್ಯದ ಒಂದು ಆಯಾಮವನ್ನು ವಿಶದೀಕರಿಸಿದ್ದಾರೆ. ಮುಕ್ತಕ 527ರಲ್ಲಿ ಕತ್ತಲಲ್ಲಿ ದಾರಿ ಸಾಗಿಸಬೇಕಾದರೆ ಒಂದು ದೀವಿಗೆ ಇದ್ದರೆ ಸಾಕು. ಹಾಗೆಯೇ ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನದ ಕಡೆಗೆ ಹೋಗಬೇಕಾದರೆ ನಮ್ಮ ಮನಸ್ಸು ಬುದ್ಧಿಗಳೇ ನಮಗೆ ದೀವಿಗೆಯಾಗಬೇಕು ಎಂದು, ಮುಕ್ತಕ 566 ರಲ್ಲಿ, ಮಾನವ ತನ್ನನ್ನು ಎಷ್ಟೇ ವಿಕೃತಗೊಳಿಸಿದರೂ ತನ್ನನ್ನು ತಾನು ಸರಿಪಡಿಸಿಕೊಳ್ಳುವ ಮತ್ತು ಕಾಪಾಡಿಕೊಳ್ಳುವ ಶಕ್ತಿ ಪ್ರಕೃತಿಗಿದೆ, ಪ್ರಕೃತಿ ಮುನಿದರೆ ಮನುಷ್ಯನ ಬಾಳು

ದುಸ್ತರವಾಗುತ್ತದೆನ್ನುವುದಕ್ಕೆ ಹಲವಾರು ನಿದರ್ಶನಗಳಿವೆ ಎಂದು ಹೇಳಿ ಮನುಷ್ಯನಿಗೆ ಕಿಂಚಿತ್ತಾದರೂ ವಿವೇಕವಿದ್ದರೆ, ಪ್ರಕೃತಿಯಲ್ಲಿ ಒಂದಾಗಿ ಸಹಜತೆಯಿಂದ ಬಾಳಿದರೆ ಸುಖವೆನ್ನುತ್ತಾ, ಮುಕ್ತಕ 621 ರಲ್ಲಿ ಮನುಷ್ಯ 'ಎಲ್ಲ ಸುಖ ಸಂಪತ್ತುಗಳೂ ನನ್ನದೇ ಆಗಬೇಕು' ಎನ್ನುವ ಸಂಪೂರ್ಣ ಸ್ವಾರ್ಥ ಮನೋಭಾವ ಬಿಡದ ಹೊರತು ಒಟ್ಟು ಸಮಾಜದ ಹಿತವಾಗುವುದೇ ಇಲ್ಲ. ವೈಯಕ್ತಿಕವಾಗಿ ಬದಲಾವಣೆ ಬಂದಾಗ ಅದು ಇಹದ ಬದುಕನ್ನು ಸುಖವಾಗಿಸಿ, ಪಾರಮಾರ್ಥಿಕ ಪ್ರಯಾಣವೂ ಸುಗಮವಾಗಬಹುದು ಎಂದು ಹೇಳಿ ,ಮುಕ್ತಕ 685 ರಲ್ಲಿ 'ಕಷ್ಟ ಸುಖಗಳ ಜನನ ಮರಣಗಳ ವೃತ್ತದಿಂದ ನಮಗೆ ಬಿಡುಗಡೆಯೇ ಇಲ್ಲ. ಆದರೆ ನೆನಪುಗಳೆಲ್ಲ ಮಾಸಿ ಪ್ರತಿ ಬಾರಿಯೂ ಒಂದು ಹೊಸತನವನ್ನು ಹೊತ್ತು ಹೊಸ ಜೀವನವನ್ನು ಮಾಡುವ ಸದವಕಾಶ ಸಂತಸದ ವಿಷಯವೇ ಅಲ್ಲವೇ? ಎಂದು ಹೇಳುತ್ತಾ ಆತ್ಮದ ಪ್ರಯಾಣದಲ್ಲಿ ಹೊರ ಕಡಿಮೆಯಾದರೆಷ್ಟು ಸುಖ ಎನ್ನುವುದನ್ನು ಸ್ಪಷ್ಟೀಕರಿಸಿದ್ದಾರೆ.

---

ಇದೇ ಧಾಟಿಯನ್ನು ಮುಂದುವರೆಸುತ್ತಾ ಶ್ರೀಯುತರು ನಾಲ್ಕನೆಯ ಸಂಪುಟದಲ್ಲಿ ಮುಕ್ತಕ 7ಸ01 ರಲ್ಲಿ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ವಿಧಾನವನ್ನೂ ಮುಕ್ತಕ 7ಸ06 ರಿಂದ 711 ನೆಯ, ಮುಕ್ತಕದವರೆಗೆ ಶ್ರೀ ಡಿ ವಿ ಗುಂಡಪ್ಪನವರು ಉಲ್ಲೇಖಮಾಡಿರುವ ರಾಮಾಯಣದ ಭರತನ ವಿಚಾರವನ್ನು ವಿವರಿಸುತ್ತಾ, ಬದುಕಿನಲ್ಲಿ ನಾವು ನಿರ್ಲಿಪ್ತರಾಗಿ ನಮಗೆ ಸಂದ ಕರ್ತವ್ಯವನ್ನು ಮಾಡಬೇಕು ಮತ್ತು ಹಾಗೆ ಕರ್ತವ್ಯವನ್ನು ಮಾಡುವಾಗ ಯಾವುದಕ್ಕೂ ಅಂತದೇ ಇದ್ದರೂ ಅದು ನಮ್ಮದೇ' ಕೆಲಸವೆಂಬಂತೆ, ಹೇಗೆ ದುಡಿಯಬೇಕು ಎನ್ನುವುದನ್ನು ವಿಶದೀಕರಿಸಿದ್ದಾರೆ. ಮುಂದೆಸಾಗುತ್ತಾ ಮುಕ್ತಕ 77ಸಂ ರಲ್ಲಿ ಜಗತ್ತಿನಲ್ಲಿ ದ್ವೈತಾದ್ವೈತ'ಗಳ ಪರಸ್ಪರ ಪೂರಕತೆಯನ್ನು ವಿವರಿಸುತ್ತಾರೆ. ಹೀಗೆ ಮಾನ್ಯ ಗುಂಡಪ್ಪನವರ ಪ್ರತಿಯೊಂದು ಮುಕ್ತಕಕ್ಕೂ 'ಲೌಕಿಕ ನೆಲೆಗಟ್ಟಿನಲ್ಲಿ ಇದ್ದರೂ ಆಧ್ಯಾತ್ಮದ ಗುರಿ ಹೇಗಿರಬೇಕೆಂಬುದನ್ನೂ ಶ್ರೀ ರವಿ ತಿರುಮಲೈಯವರು ವಿಶದೀಕರಿಸಿದ್ದಾರೆ.

ಹೀಗೆ 'ಕಗ್ಗ'ದ ಪದ್ಯಗಳ ಆಶಯದ ತಳಹದಿಯಾಗಿರುವ ಸತರ್ಕ ಚಿಂತನ ವಿನ್ಯಾಸದ ಹಂತಗಳನ್ನು ಸ್ಪುಟಗೊಳಿಸುವ ರೀತಿಯಲ್ಲಿ ಪ್ರಕೃತ 'ಕಗ್ಗ-ರಸಧಾರೆ' ಯ ನಾಲ್ಕೂ ಸಂಪುಟಗಳ ವ್ಯಾಖ್ಯಾನವು
ರೂಪುಗೊಂಡಿದೆ.

ಶ್ರೀ ರವಿ ತಿರುಮಲೈ ಅವರ ಈ ಶ್ರದ್ಧಾಪೂರ್ವಕ ಸಾಹಿತ್ಯ ಕೈಂಕರ್ಯಕ್ಕಾಗಿ ಅವರನ್ನು ಅಭಿನಂದಿಸುತ್ತ ಈ ನೂತನ ವ್ಯಾಖ್ಯಾನಕ್ಕೆ ವಾಚಕರ ಪ್ರೋತ್ಸಾಹವೂ ಸಹೃದಯ ಸ್ಪಂದನವೂ ದೊರೆಯಲೆಂದು ಹಾರೈಸುತ್ತೇನೆ.

**- ಡಾ|| ಎಸ್. ಆರ್. ರಾಮಸ್ವಾಮಿ**

# ಪ್ರಸ್ತಾವನೆ

ನಾನು ಸಾಹಿತಿಯೂ ಅಲ್ಲ, ಲೇಖಕನೂ ಅಲ್ಲ. ಹತ್ತಾರು ವಿಧವಾದ ಜೀವನಾನುಭವಗಳನ್ನು ಪಡೆದ ನನಗೆ ಒಂದು ದಿನ ಶ್ರೀ ಶ್ರೀಕಾಂತರವರು ಸಂಪಾದಿಸಿದ ಪುಸ್ತಕ, ಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ "ಮಂಕುತಿಮ್ಮನ ಕಗ್ಗ - ತಾತ್ಪರ್ಯ" ಸಿಕ್ಕಾಗ, ಒಂದು ನಿಧಿಯೇ ಸಿಕ್ಕಂತಾಗಿತ್ತು. ಆ ಸಮಯದಲ್ಲಿ ಅಂತರ್ಜಾಲದ ಮುಖ ಪುಸ್ತಕ (face book) ದಲ್ಲಿ ಸಕ್ರಿಯನಾಗಿದ್ದರಿಂದ ಅಲ್ಲಿನ 'ಕನ್ನಡ ಬ್ಲಾಗ್'ನಲ್ಲಿ "ಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ, ಕನ್ನಡ ಸಾಹಿತ್ಯ ಲೋಕದ ಮೇರು ಕೃತಿ. ಆದರೆ ಈ ಕೃತಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿಯೋ ಅಥವಾ ಜ್ಞಾನಪೀಠ ಪ್ರಶಸ್ತಿಯೋ ಲಭ್ಯವಾಗಲಿಲ್ಲ. ಅಕಸ್ಮಾತ್ ಇದಕ್ಕೆ 'ನೋಬಲ್' ಬಹುಮಾನ ದೊರಕ್ಕಿದ್ದಿದ್ದರೆ 'ನೋಬಲ್' ಗೆ ಹಿರಿಮೆಯಾಗುತ್ತಿತ್ತೇ ಹೊರತು ಮಂಕುತಿಮ್ಮನ ಕಗ್ಗಕ್ಕಲ್ಲ, ಏಕೆಂದರೆ ಎಲ್ಲ ಹಿರಿಮೆಗಳೂ ಅಡಕವಾಗಿರುವ ಮಂಕುತಿಮ್ಮನ ಕಗ್ಗವನ್ನು ಯಾರಾದರೂ ಕೊಂಡಾಡಿದರೆ ಅದು ಕೊಂಡಾಡುವವರಿಗೆ ಹಿರಿಮೆಯಷ್ಟೇ! ವಾಚಕರು ಇಷ್ಟಪಟ್ಟಲ್ಲಿ, ಪ್ರತಿನಿತ್ಯ ಒಂದೊಂದು ಮುಕ್ತಕಕ್ಕೆ ವಿವರಣೆಯನ್ನು ಬರೆಯಲು ಉದ್ಯುಕ್ತನಾಗುತ್ತೇನೆ' ಎಂದು, ಒಂದು ಪ್ರಕಟಣೆಯನ್ನು ಇತ್ತೆ. ಮರುಕ್ಷಣವೇ ಬಹಳಷ್ಟು ಜನ ಸಹೃದಯ ಸದಸ್ಯರು ನನ್ನ ಕೋರಿಕೆಯನ್ನು ಮನ್ನಿಸುತ್ತಾ, ಬರೆಯಬಹುದೆಂದು ಅಪ್ಪಣೆ ಕೊಟ್ಟರು. ಅಂದು ಮೊದಲಾಗಿ ಸೆಪ್ಟೆಂಬರ್ 2ಸ015 ರಲ್ಲಿ 945 ಮುಕ್ತಕಗಳಿಗೂ ವ್ಯಾಖ್ಯಾನಮಾಡುವ ಕೈಂಕರ್ಯ ಸಂಪನ್ನಗೊಂಡು ಮುಕ್ತಕಗಳನ್ನೊಳಗೊಂಡ 3 ಸಂಪುಟಗಳನ್ನು ಈಗಾಗಲೇ ಪ್ರಕಟಿಸಿದ್ದೇನೆ. 7ಸಂಸಂರಿಂದ 945ನೇ ಮುಕ್ತಕದವರೆಗಿನ ವ್ಯಾಖ್ಯಾನದ ಹೊತ್ತಗೆಯೇ ನಿಮ್ಮ ಕೈಯಲ್ಲಿಂದಿರುವ "ಕಗ್ಗ ರಸಧಾರೆ - 4"

ಓದುಗರೇ, ಬರೆಯಲೇನೋ ಮೊದಲಾದೆ. ಆದರೆ ಮನಸ್ಸಿನ ಒಂದು ಮೂಲೆಯಲ್ಲಿ ಒಂದು "ಭಯ" ಎಚ್ಚರಿಸುತ್ತಲೇ ಇತ್ತು. ಕಾಳಿದಾಸ 'ರಘುವಂಶ' ಕಾವ್ಯವನ್ನು ಬರೆಯಲುದ್ಯುಕ್ತನಾದಾಗ ಅವನಿಗೆ ಉಂಟಾದ ಶಂಕೆಗಳೇ ನನ್ನ ಮನಸ್ಸಿನಲ್ಲೂ ಸುಳಿದಾಡಿದವು. ಕಾಳಿದಾಸ ಬರೆಯುತ್ತಾನೆ, "ಕ್ವ ಸೂರ್ಯಃ ಪ್ರಭವೋ ವಂಶಃ, ಕ್ವಚಾಲ್ಪ ವಿಷಯಾ ಮತಿಃ ತಿತೀರ್ಶುರ್ದುಸ್ತರಂ ಮೋಹಾತ್ ಉಡುಪೇನಾಸ್ಮಿ ಸಾಗರಂ' ಎಂದು, ಅರ್ಥಾತ್, ಸೂರ್ಯ ಪ್ರಭೆಯಷ್ಟು ಪಾಜ್ವಲ್ಯಮಾನವಾದ ರಘುವಂಶವೆಲ್ಲಿ, ಅಲ್ಪ ವಿಷಯಗಳನ್ನರಿತ ನಾನೆಲ್ಲಿ, ಒಂದು ಸಣ್ಣ ಹರಿಗೋಲಿನ ಸಹಾಯದಿಂದ, ದುಸ್ತರವಾದ ಮತ್ತು ವಿಶಾಲವಾದ ಸಾಗರವನ್ನು ದಾಟಲು ಅತ್ಯಾಸೆ ಪಡುವವನಂತಿದೆ ನನ್ನ ಸ್ಥಿತಿ" ಎಂದು ಹೇಳುತ್ತಾನೆ. ಜ್ಞಾನದ ಯಾವ ಭಾಗವನ್ನೂ ಆಳವಾಗಿ ಅಭ್ಯಾಸ ಮಾಡದ, ಅಲ್ಪ ಮತಿಯಾದ ನಾನು ಈ ಕಗ್ಗ"ವೆಂಬ ಮಹಾಸಾಗರದಲ್ಲಿ ಈಜಲು ಮತ್ತು ಈಜಿ ದಾಟಲು ಅತಿ ಆಸೆಯಿಂದ ಹೊರಟಂತೆ ಇತ್ತು ನನ್ನ ಪರಿಸ್ಥಿತಿ. ಮೊದಮೊದಲು ಬಹಳ ಅಳುಕಿನಿಂದಲೇ ಬರೆಯಲು ಶುರುಮಾಡಿದೆ. ಗುಂಡಪ್ಪನವರು ಈ ಮುಕ್ತಕಗಳಲ್ಲಿ ಎರಕ ಹೊಯ್ದಿರುವ

ವಿಚಾರಗಳನ್ನು ಮನದೊಳಕ್ಕೆ ಇಳಿಸುತ್ತಾ ನನ್ನ ವಿಚಾರಗಳೂ ವಿಕಾಸಗೊಳ್ಳತೊಡಗಿದವು. ನಾನೂ ಸಹ ಇದನ್ನೊಂದು ಕಲಿಕೆಯ ಮಾಧ್ಯಮವಾಗಿ ಅನುಭವಿಸುತ್ತಾ ಹೋದೆ.

---

ಇದಕ್ಕೂ ಮುಂಚೆ ನಾ ಆರನೇ ತರಗತಿಯಲ್ಲಿ ಓದುತ್ತಿದ್ದಾಗ, ಮಾನ್ಯ ಡಿ.ವಿ.ಜಿ.ಯವರ "ವನಸುಮದೊಲೆನ್ನ ಜೀವನವು ವಿಕಸಿಸುವಂತೆ" ಎನ್ನುವ ಪದ್ಯ ನನ್ನನ್ನು ಬಹಳ ಆಕರ್ಷಿಸಿತ್ತು. ಶ್ರಾವ್ಯವಾಗಿ ಹಾಡುವ ಪಯತ್ನವನ್ನೂ ಸಹ ಮಾಡಿದ್ದೆ. ವೇದಾಂತದ ಸಾರವನ್ನು ಆ ಪದ್ಯದ ಸಾಲುಗಳಲ್ಲಿ ಗುಂಡಪ್ಪನವರು ತುಂಬಿ ಬಿಟ್ಟಿದ್ದಾರೆ, ಎಂದು ನನಗೆ ಈಗ ಅನಿಸಿತು. ಈ ಕಗ್ಗದ ಮುಕ್ತಕಗಳನ್ನು ಓದಿದ ನಂತರ, ಆ ನಂಬಿಕೆ ದೃಢವಾಯಿತು. "ವಿಪುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ" ಎಂಬಂತೆ ತಮ್ಮ ಜೀವನವನ್ನೂ ಮಾನ್ಯ ಗುಂಡಪ್ಪನವರು ನಡೆಸಿದರೆಂದೂ ನಾ ಬಲ್ಲೆ. ಅಂತಹ ಮಹನೀಯರು ಬರೆದ ಈ ಮುಕ್ತಕಗಳಿಗೆ, ವಿವರಣೆ ನೀಡುವ ಸೌಭಾಗ್ಯವನ್ನೂ ಅವರೇ ನನಗೆ ದಯಪಾಲಿಸಿದ್ದೆಂದು ನಾ ತಿಳಿದಿದ್ದೇನೆ.

ಜೀವನದಲ್ಲಿ ಪ್ರತಿಯೊಬ್ಬರ ಮನಗಳಲ್ಲೂ ಸಹಜವಾಗಿ ಉದ್ಭವವಾಗುವ ಸಾವಿರಾರು ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ, ನಮಗೆ ಈ ಮುಕ್ತಕಗಳಲ್ಲಿ, ಇವುಗಳ ಪಠಣದಿಂದ ಆಧ್ಯಾತ್ಮಿಕವಾಗಿ ನಮಗಿರುವ ಸಂದೇಹಗಳಿಗೆ ಉತ್ತರವನ್ನು ಕಂಡುಕೊಳ್ಳುವ ಉಪಾಯವನ್ನು ನಮಗೆ ಮಾನ್ಯ ಗುಂಡಪ್ಪನವರು ಸೂಚಿಸಿದ್ದಾರೆ. ತತ್ವಶಾಸ್ತ್ರದ ಶಿಖರದಲ್ಲಿ ನಿಂತು, ಅಧಿಕಾರಯುಕ್ತವಾಗಿ ತತ್ವದ ಮತ್ತು ಸತ್ವದ ಸಮಗ್ರದರ್ಶನವನ್ನು ನೀಡುವ "ಮಂಕುತಿಮ್ಮನ ಕಗ್ಗ" ಕನ್ನಡ ಸಾಹಿತ್ಯದ ಮೇರುಕೃತಿ ಎಂಬುವುದರಲ್ಲಿ ಸಂದೇಹವೇ ಇಲ್ಲ. ಇದು ತತ್ವಶಾಸ್ತ್ರವಾಗಿ, ದರ್ಶನವಾಗಿ ಮತ್ತು ಅತ್ಯುತ್ತಮ ಸಾಹಿತ್ಯಕ ಕೃತಿಯಾಗಿ 7 ದಶಕಗಳಿಗೂ ಮೀರಿ, ಸಾರ್ವಕಾಲಿಕ ಸತ್ಯವನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ.

ಡಿ.ವಿ.ಜಿ.ಯವರು ಕ್ಲುಪ್ತವಾಗಿ ಮತ್ತು ಚೊಕ್ಕವಾಗಿ ಬರೆದ ನಾಲ್ಕು ಸಾಲುಗಳನ್ನು ಪುಟಗಟ್ಟಲೆ ಬರೆಯುವ ಅವಶ್ಯಕತೆ ಏನು? ಎಂದು ಒಂದು ಸಂದೇಹವೂ ನನ್ನ ಮನದಲ್ಲಿ ಬಂದದ್ದು ಉಂಟು. ಆದರೆ ಕಗ್ಗದ ಮುಕ್ತಕಗಳು ಹಳೆಗನ್ನಡದಲ್ಲಿವೆ. ಇಂದಿನ ಪೀಳಿಗೆಗೆ ಕನ್ನಡವನ್ನು ಓದುವುದೇ ಕಷ್ಟ, ಇನ್ನು ಅವರಿಗೆ ಹಳೆಗನ್ನಡವನ್ನು ಓದುವುದು ಸಾಧ್ಯವಿಲ್ಲ ಅಥವಾ ಕಷ್ಟ ಸಾಧ್ಯ. ಅಷ್ಟೇ ಅಲ್ಲ ಇದು ತತ್ವಶಾಸ್ತ್ರ ಬಹಳ ಕ್ಲಿಷ್ಟವಾದ ವಿಷಯ. ಹಾಗಾಗಿ ಹಳೆಗನ್ನಡದ ಪ್ರಯೋಗವಿರುವ ಮತ್ತು ಉನ್ನತವಾದ ತತ್ವಶಾಸ್ತ್ರವನ್ನು ಪ್ರತಿಪಾದಿಸುವ ಈ ಮುಕ್ತಕಗಳನ್ನು ಓದಿ ಅರ್ಥಮಾಡಿಕೊಳ್ಳುವುದೆಂದರೆ "ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯ್ತು ಎಂದು ಮುದ್ದಣನಿಗೆ

ಮನೋರಮೆ ಹೇಳಿದಂತಾಯ್ತು, ಕಗ್ಗವೆಂದರೆ 'ಕಗ್ಗಂಟು' ಎಂದು ಅದನ್ನು ನೋಡಿ “ಅಯ್ಯೋ ಇದು ನಮಗೆ ಅರ್ಥವಾಗುವುದಿಲ್ಲ” ಎನ್ನುವವರನ್ನು ನಾ ನೋಡಿದ್ದೇನೆ. ಆದ್ದರಿಂದಲೇ ಈ ಮುಕ್ತಕಗಳನ್ನು ಸರಳವಾದ ಭಾಷೆಯಲ್ಲಿ ಓದುಗರಿಗೆ ಇವುಗಳ ಸಾರಾಂಶವನ್ನು ತಿಳಿಸಲು ಪ್ರಯತ್ನಪಟ್ಟಿದೇನೆ. ಡಿ.ವಿ.ಜಿ.ಯವರ "ಮಂಕುತಿಮ್ಮನ ಕಗ್ಗ'ಗಳ ಒಂದೊಂದು ಮುಕ್ತಕವೂ ಮುಕ್ತವಾಗಿ ಒಂದು ತತ್ವವನ್ನು ಪ್ರತಿಪಾದಿಸುತ್ತದೆ. ಒಂದೊಂದು ಮುಕ್ತಕಕ್ಕೂ ಒಂದೊಂದು ಪುಸ್ತಕವನ್ನೇ ಬರೆಯಬಹುದು. ಒಂದೊಂದು ಮುಕ್ತಕವೂ ಜ್ಞಾನಿಗಳ ಕೈಯಲ್ಲಿ ಸಿಕ್ಕಾಗ, ವಜ್ರಕ್ಕೆ, ತಿಕ್ಕಿದಷ್ಟೂ ಹೊಳಪು ಹೆಚ್ಚಾಗುವಂತೆ, ಹೊಸ ಹೊಸ ಹೊಳಹುಗಳು, ಆಯಾಮಗಳ ವ್ಯಾಖ್ಯಾನ ಸಿಗುತ್ತದೆ. ಏಕೆಂದರೆ ಈ ಮುಕ್ತಕಗಳು ಪ್ರತಿಪಾದಿಸುವುದು ಸಾರ್ವಕಾಲಿಕ ತತ್ವಾಧಾರಿತ ಸತ್ಯಗಳು. ಆದರೆ ನಾನು ಜ್ಞಾನಿಯಲ್ಲ. ನಾನು ಜ್ಞಾನಪಿಪಾಸು. ಈ ಮುಕ್ತಕಗಳು ನನ್ನ ಪಿಪಾಸೆಯನ್ನು ತಣಿಸುವಲ್ಲಿ ಬಹಳ ಉಪಯುಕ್ತವಾಗಿವೆ. ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ, ಅವರವರ ವಿದ್ಯೆ, ಅನುಭವ, ಕಲಿಕೆ, ಮತ್ತು ಸಂಸ್ಕಾರಗಳ ಆಧಾರದ ಮೇಲೆ ಇದಕ್ಕೆ ತಮ್ಮದೇ ಒಂದು ಭಿನ್ನವಾದ ವ್ಯಾಖ್ಯಾನವನ್ನು ಮಾಡಬಹುದು. ಗುಂಡಪ್ಪನವರ ಈ ಮುಕ್ತಕಗಳು ಪ್ರತಿಯೊಬ್ಬರಿಗೂ ಅಂತಹ ಅವಕಾಶವನ್ನು ಕಲ್ಪಿಸಿದೆ. ಯಾರ ಪಾತ್ರೆ ದೊಡ್ಡದೋ ಅವರ ಗ್ರಹಿಕೆಯೂ ಅಷ್ಟೇ ದೊಡ್ಡದಾಗಿರುತ್ತದಲ್ಲವೇ?

---

ಹೀಗೆ ನನ್ನ ಜ್ಞಾನ ದಾಹವನ್ನು ತೀರಿಸಿಕೊಳ್ಳಲು ನಾ ಪ್ರಯತ್ನಪಟ್ಟಾಗ, ಫಲಸ್ವರೂಪದಲ್ಲಿ ಹೊರಬಂದದ್ದೇ "ಕಗ್ಗ ರಸಧಾರೆ", ಪ್ರತಿಯೊಂದು ಮುಕ್ತಕವನ್ನೂ ಬಿಡಿಸಲು ಕೈಗೆತ್ತಿಕೊಂಡಾಗ ಒಂದು ಹೊಸ ಹೊಳಹು, ಒಂದು ಹೊಸ ವಿಚಾರ ಮತ್ತು ಒಂದು ಹೊಸ ತತ್ವ ಕಣ್ಣಮುಂದೆ ನಿಲ್ಲುತ್ತಿತ್ತು. ಪ್ರತಿಯೊಂದು ಮುಕ್ತಕವನ್ನೂ, ನಾನು ನನ್ನ ಪರಿಮಿತ ಮತಿಯ ಪರಿಧಿಯೊಳಗೆ ಬಿಡಿಸಲು ಪಯತ್ನಪಟ್ಟಿದ್ದೇನೆ. ನಾ ಬರೆದಿರುವ ವಿವರಣೆ, ವ್ಯಾಖ್ಯಾನಗಳ ಪ್ರಸ್ತುತತೆ, ಕೇವಲ ನನ್ನ ಜೀವನಾನುಭವ, ನಾ ಹಲವರಿಂದ ಕಲಿತ ಜೀವನದ ಪಾಠ ಮತ್ತು ನಾನು ಓದಿದ ಪುಸ್ತಕಗಳ ಆಧಾರಿತವಾಗಿವೆ.

"ಕಗ್ಗ ರಸಧಾರೆ" ಕೇವಲ ಭಗವತ್ಪ್ರೇರಣೆಯಿಂದ ಬರೆಯಿಸಲ್ಪಟ್ಟಿದೆ. ಹೀಗೆ ನನ್ನನ್ನು ಬರೆಯಲು ಪ್ರೇರೇಪಿಸಿದ ಆ ಪರಮಚೇತನಕ್ಕೆ ಮತ್ತು ಆ ಪರಮಚೇತನದ ಪ್ರತಿರೂಪಗಳಾಗಿ ನನ್ನನ್ನು ಬರೆಯುವುದಕ್ಕೆ ಮತ್ತು ಇದನ್ನು ಪುಸ್ತಕ ರೂಪದಲ್ಲಿ ತರಲು ಪ್ರೋತ್ಸಾಹಿಸಿದ ನನ್ನ ಸಹೃದಯ ಮಿತ್ರರಿಗೂ ನನ್ನ ಅನಂತ ನಮನಗಳು.

ನನ್ನ ಈ ಪ್ರಯತ್ನದಲ್ಲಿ ನನಗೆ ದಾರಿದೀಪವಾಗಿ ಮಾನ್ಯ ಶ್ರೀ ಶ್ರೀಕಾಂತ್‌ರವರೂ ಮತ್ತು ಮಾನ್ಯ ಶ್ರೀ ಡಿ. ಆರ್. ವೆಂಕಟರಮಣನ್ ಅವರೂ ತಮ್ಮ ಕೃತಿರೂಪದಲ್ಲಿ ನನಗೆ ಸಹಕಾರಿಯಾಗಿದ್ದಾರೆ. ಅವರಿಗೆ ನನ್ನ ಅನಂತ ಧನ್ಯವಾದಗಳು.

**ಎಷ್ಟು ಚಿಂತಿಸಿದೊಡಂ ಶಂಕೆಯನೆ ಬೆಳೆಸುವೀ |**

**ಸೃಷ್ಟಿಯಲಿ ತತ್ತ್ವವೆಲ್ಲಿಯೋ ಬೆದಕಿ ನರನು ||**

**ಕಷ್ಟಪಡುತಿರಲೆನುವುದೇ ಬ್ರಹ್ಮ ವಿಧಿಯೇನೋ! |**

**ಅಷ್ಟೆ ನಮ್ಮಯ ಪಾಡು? - ಮಂಕುತಿಮ್ಮ ||**

ಎಂದು ಹಲವಾರು ಪಶ್ನೆಗಳನ್ನು ತಮ್ಮ ಮೊದಲ 4ಸಂ ಮುಕ್ತಕಗಳಲ್ಲಿ ನಮ್ಮ ಮುಂದೆ ಇರಿಸಿರುವ ಮಾನ್ಯ ಗುಂಡಪ್ಪನವರು, ನಮ್ಮ ಸ್ವತಂತ್ರ ಚಿಂತನೆಗೆ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಪ್ರತೀ ಮುಕ್ತಕದಲ್ಲೂ ಅವರು ಉಲ್ಲೇಖಿಸಿರುವ ಪ್ರಶ್ನೆಗಳು ಜಿಜ್ಞಾಸುವಿಗೆ ಒಂದು ದೀರ್ಘ ತಪಸ್ಸನ್ನು ಮಾಡುವಷ್ಟು ಹರಹನ್ನು ನೀಡುತ್ತದೆ. ಈ "ಮಂಕುತಿಮ್ಮನ ಕಗ್ಗ" ಒಂದು ಜೀವನ ದರ್ಶನ.

ಜಿಜ್ಞಾಸೆ ಹೆಚ್ಚಾಗಿ ಜ್ಞಾನ ಮನದಲ್ಲಿ ತುಂಬಿದಾಗ, ಲೋಕ ಕಲ್ಯಾಣಕ್ಕಾಗಿ ಅದನ್ನು ಹೊರಹಾಕುವುದು "ಋಷಿ ಸಂಸ್ಕೃತಿ". ಗುಂಡಪ್ಪನವರೇ ಒಂದು ಕಡೆ "ಯಾವ ತಿಳುವಳಿಕೆ ನಮ್ಮ ಜನಕ್ಕೆ ಇದ್ದರೆ ಸೂಕ್ತ ಎಂದು ನನಗೆ ಅನ್ನಿಸಿತೋ, ಅಂತಹ ತಿಳುವಳಿಕೆಯನ್ನು ನಾನು ಮೊದಲು ಸಂಪಾದಿಸಿಕೊಂಡು ಇತರರಿಗೆ ತಿಳಿಯಪಡಿಸಬೇಕೆಂದೂ, ಜೀವನದ ಯಾವ ಸೊಬಗನ್ನು ನಾನು ಅನುಭವಿಸಿದಾಗ, ಅದನ್ನು ಇತರರೂ ಅನುಭವಿಸಿಯಾರೆಂದು ನನಗನ್ನಿಸಿತೋ ಅಂತಹ ಸೊಗಸನ್ನು ತೋರಿಸುವುದು ನನ್ನ ಎಲ್ಲ ಬರವಣಿಗೆಯಲ್ಲೂ, ಮಾತಿನಲ್ಲೂ ಇರುವ ತಾತ್ಪರ್ಯ" ಎಂದು ಹೇಳುತ್ತಾರೆ. ಪುರಾತನ ಋಷಿ ಮುನಿಗಳು ಈ ಜಗತ್ತಿಗೆ ಯಾವ ಉದ್ದೇಶದಿಂದ ವೇದೋಪನಿಷತ್ತುಗಳನ್ನು ನೀಡಿದರೋ ಅಂತಹ ಉದಾತ್ತ ಉದ್ದೇಶವು ನಮ್ಮ ಗುಂಡಪ್ಪನವರದಾಗಿತ್ತು. ಆ ದೃಷ್ಟಿಯಲ್ಲಿ ನೋಡಿದಾಗ, ನಮ್ಮ ಗುಂಡಪ್ಪನವರು "ಋಷಿ" ತುಲ್ಯರು. ಅವರಿಗೆ ಸಾಷ್ಟಾಂಗ ನಮನಗಳು. ಮಾನ್ಯ ಗುಂಡಪ್ಪನವರ ಒಡನಾಟದ ಭಾಗ್ಯವನ್ನು ಪಡೆದ ಗೋಖಲೆ ಸಾರ್ವಜನಿಕ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ, ಸನ್ಮಾನ್ಯ 'ನಾಡೋಜ' ಡಾ. ಎಸ್.ಆರ್. ರಾಮಸ್ವಾಮಿಗಳ ಸಹೃದಯದ 'ಮುನ್ನುಡಿ'ಗೆ ನಾ ಆಭಾರಿಯಾಗಿದ್ದೇನೆ.

---

ಈ ಪುಸ್ತಕದ ಮುಖಪುಟಕ್ಕೆ, ತಾವು ಬರೆದ ಡಿ.ವಿ.ಜಿ.ಯವರ ಚುಕ್ಕಿ ಚಿತ್ರವನ್ನು ಉಪಯೋಗಿಸಲು ಅನುಮತಿ ನೀಡಿದ ಮಾನ್ಯ ಶ್ರೀ ಮೋಹನ್ ವರ್ಣೇಕರ್‌ರವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಈ ಪುಸ್ತಕದ ಪ್ರಕಟಣೆಗೆ ಕೃಪೆಮಾಡಿ ಅನುಮತಿಸಿದ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಗೆ ನಾನು ಆಭಾರಿಯಾಗಿದ್ದೇನೆ. ಈ ಪುಸ್ತಕದಲ್ಲಿ ಬರೆದ ಹಲವಾರು ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಿ, ನನ್ನನ್ನು ತಿದ್ದಿ ತಮ್ಮ ಅನುಭವವನ್ನು ನನಗೆ ಎರಕ ಹೊಯ್ದ "ಕಗ್ಗದ ಭಟ್ಟರು" ಎಂದೇ ಪ್ರಸಿದ್ಧರಾದ ಮಾನ್ಯ ಶ್ರೀ ಹೆಚ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು. ಈ ಪುಸ್ತಕದ ಪ್ರಕಟಣೆಗೆ ಅನುಕೂಲವಾದ ಅಮೂಲ್ಯ ಸಲಹೆಯನ್ನಿತ್ತ ನವಕರ್ನಾಟಕ ಪಬ್ಲಿಕೇಷನ್‌ನ ಶ್ರೀ ರಮೇಶ್ ಉಡುಪರಿಗೂ ನಾನು ಕೃತಜ್ಞನಾಗಿದ್ದೇನೆ. 'ಕಗ್ಗ ರಸಧಾರೆ'ಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಿ ಮಾನ್ಯತೆ ನೀಡಿದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಕ.ಆ.ಸೇ ರವರಿಗೆ ನಾ ಆಭಾರಿಯಾಗಿದ್ದೇನೆ.

ವಿಚಾರಗಳ ಸಂಕೀರ್ಣತೆ ಮತ್ತು ಕ್ಲಿಷ್ಟತೆಗಳು ಇದಿರಾದಾಗ, ನನ್ನ ಸಹಾಯಕ್ಕೆ ಬಂದವರು ಮತ್ತು ಕಗ್ಗಗಳನ್ನು ದೀರ್ಘಕಾಲದ ಅಭ್ಯಾಸದಿಂದ ಅರಿತವರೂ ಆದ ನನ್ನ ಸ್ನೇಹಿತರು ಮಾನ್ಯ ಶ್ರೀಪಾದರಾವ್ ಮಂಜುನಾಥ್‌ರವರು, ನನ್ನ "ಗುರು" ಸಮಾನರಾದ ಮೈಸೂರಿನ, ನಿವೃತ್ತ ಸಂಸ್ಕೃತ ಮಹೋಪಾಧ್ಯಾಯಿನಿ, ಶೀಮತಿ ಡಾ|| ಕೆ.ಎಲ್ ಪ್ರಸನ್ನಾಕ್ಷಿಯವರು. ಇವರೆಲ್ಲರಿಗೂ ನಾ ಚಿರಋಣಿ. ನನ್ನ ಈ ಪಯತ್ನದಲ್ಲಿ ನನಗೆ ಬೆನ್ನುಲುಬಾಗಿ ನಿಂತಿರುವ ನನ್ನ ಮಿತ್ರರಾದ ಎಮ್.ಎಸ್. ಪ್ರಸಾದ್, ಪುಷ್ಪರಾಜ ಚೌಟ, ಬದರೀನಾಥ ಪಲವಳ್ಳಿ, ಮುಂತಾದವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ನಮಸ್ಕಾರಗಳು. ಈ ಸಂಪುಟದ ಪ್ರಕಟಣೆಗೆ ಪ್ರೇರಕರಾಗಿ ಮತ್ತು ಪೂರಕವಾದ ಸಹಾಯವನ್ನು ಮಾಡಿದ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ತಿಮ್ಮಯ್ಯನವರಿಗೆ ತುಂಬುಮನದ ಕೃತಜ್ಞತೆಗಳು.

ಈ ಪುಸ್ತಕಕ್ಕೆ "ಕಗ್ಗ ರಸಧಾರೆ" ಎಂಬ ಹೆಸರನ್ನು ನೀಡಿದ ಶ್ರೀ ಪುಷ್ಪರಾಜ ಚೌಟ ಮತ್ತು ಸದಾ ನನಗೆ ಸೂಕ್ತ ಸಲಹೆಗಳನ್ನು ನೀಡುತ್ತಾ ಈ ಪುಸ್ತಕದ ಮುಖ ಪುಟದ ವಿನ್ಯಾಸವನ್ನು ಕೊಟ್ಟ ನನ್ನ ಮಿತ್ರ ಶ್ರೀ ವಸಂತ್ ಬಂಟಕಲ್ ಅವರಿಗೂ ನನ್ನ ಅನಂತ ನಮನಗಳು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮಿತ್ರ ಮತ್ತು ಸ್ವತಃ ಪ್ರಕಾಶಕರಾದ 'ಪುಲಿಯಾನಿ ಮತ್ತು ಪುಲಿಯಾನಿ' ಸಂಸ್ಥೆಯ ಶ್ರೀ ಯಶಪಾಲ್ ಪುಲಿಯಾನಿ ಅವರಿಗೂ ನನ್ನ ಅನಂತಾನಂತ ವಂದನೆಗಳು.

ನನ್ನ ಈ ಕಿರು ಪ್ರಯತ್ನವು ಓದುಗರಿಗೆ ಹಿಡಿಸಿದರೆ ನಾ ಧನ್ಯ ಓದುಗರ ಪ್ರೋತ್ಸಾಹವೇ ನನ್ನ ಈ ಪ್ರಯತ್ನಕ್ಕೆ ಸಿಗುವ ಪಾರಿತೋಷಕ.

ಬೆಂಗಳೂರು 16.4, 2ಸ೦17

**- ರವಿ ತಿರುಮಲೈ**

---

| | |
|---|---|
| ಕಗ್ಗರಸಧಾರೆ | ಎರಡು ಕೋಣೆಗಳು 7ಸ೦1-7ಸ೦2 |

## ಮುಕ್ತಕ – 7ಸ೦1

**ಎರಡು ಕೋಣೆಗಳ ನೀಂ ಮಾಡು ಮನದಾಲಯದಿ |**
**ಹೊರಕೋಣೆಯಲ್ಲಿ ಲೋಗರಾಟಗಳನಾಡು ||**
**ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ |**
**ವರಯೋಗಸೂತ್ರವಿದು – ಮಂಕುತಿಮ್ಮ ||**

ಮನದಾಲಯದಿ=ಮನದ+ಆಲಯದಿ, ಲೋಗರಾಟಗಳನಾಡು=ಲೋಗರ+ಆಟಗಳನು+ಆಡು,
ವಿರಮಿಸೊಬ್ಬನೆ=ವಿರಮಿಸು+ಒಬ್ಬನೆ, ಮೌನದೊಳಮನೆಯ=ಮೌನದ+ಒಳಮನೆಯ
ಲೋಗರ=ಲೋಕದ, ವಿರಮಿಸು=ವಿಶ್ರಮಿಸು, ಶಾಂತನಾಗು, ವರಯೋಗಸೂತ್ರ=ನಮ್ಮ ಪೂರ್ವಜರು ನಮಗೆ ವರದಂತೆ ಕೊಟ್ಟ ಸೂತ್ರ

ಮನದ ಆಲಯದಲ್ಲಿ ನೀನು ಎರಡು ಕೋಣೆಗಳನ್ನು ಮಾಡು. ಹೊರಗಿನ ಕೋಣೆಯಲ್ಲಿ ಲೋಕದ ಆಟವನ್ನಾಡು, ಒಳಗಿನ ಕೋಣೆಯಲಿ ಮೌನದಿಂದ ತುಂಬಿದ ಶಾಂತಿಯಲ್ಲಿ ವಿಶ್ರಮಿಸು, ಒಳಹೊರಗುಗಳ ಮಧ್ಯೆ ಒಂದು ಸಮನ್ವಯವನ್ನು ಕಾಪಾಡಿಕೊಳ್ಳಲು ಇದು ವರದಂತಹ ಸೂತ್ರ ಎಂದು, ನಮ್ಮ ಮನಃ ಘಟಲದ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಧಾನವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸೆಂಬುದು ಒಂದು ಒಂದು ವಿಶಾಲವಾದ ಹಜಾರದಂತೆ, ಬದುಕಿನ ಜಂಜಡದ ವಿಷಯಗಳೆಲ್ಲಾ ಅಲ್ಲಿಗೆ ದೂಳು, ಕಸದಂತೆ ಹಾರಿ ಬರುತ್ತಲೇ ಇರುತ್ತದೆ. ಮನೆಯಲ್ಲಿ ದಿನಕ್ಕೆರಡು ಬಾರಿ ಕಸ ಗುಡಿಸಿದಂತೆ ಮನವನ್ನು ಅನುಕ್ಷಣವೂ ಗುಡಿಸಿತ್ತಲೇ ಇರಬೇಕು. ಮನೆ, ಮಠ, ಸಂಸಾರ, ಹೆಂಡತಿ, ಗಂಡ, ಮಕ್ಕಳು, ರೋಗ, ಸಂಬಂಧಗಳು, ರಾಗ ದ್ವೇಷಗಳು, ಕೋಪಾಸೂಯೆಗಳು, ನಮ್ಮ 'ಗುಣ'ಗಳಾಗಿರುವ ವಾಸನೆಗಳು, ಹೀಗೆ ಎಷ್ಟೋ ವಿಷಯಗಳು ಕಸದಂತೆ ನಮ್ಮ ಮನಸ್ಸಿನಲ್ಲಿ ನುಗ್ಗಿ ಬರುತ್ತವೆ, ಬಂದು ತುಂಬಿಕೊಳ್ಳುತ್ತವೆ. ಈ ಎಲ್ಲಕ್ಕೆ ಸಂಬಂಧಿಸಿದ ವಿಚಾರಗಳು ಒಂದೇ ಸಮಯದಲ್ಲಿ ಮನಸ್ಸಿನಲ್ಲಿ ಇದ್ದು, ಮನಸ್ಸು ಅವುಗಳನ್ನು ಸದಾಕಾಲ ಮೆಲುಕು ಹಾಕುವಂತೆ ಮಾಡುತ್ತದೆ. ಇವುಗಳ ಭಾರದಿಂದ ಮನಸ್ಸು ನಲುಗುತ್ತದೆ, ಬುದ್ಧಿ ಕೊಡುತ್ತದೆ, ಆತ್ಮ ಸೊರಗುತ್ತದೆ. ಆದರೆ ನಾವು ಈ ಜಗತ್ತಿನಲ್ಲಿ ಬದುಕುತ್ತಿರುವುದರಿಂದ ನಮಗೆ ಅವುಗಳಿಂದ ಸಂಪೂರ್ಣ ಮುಕ್ತಿ ಸಾಧ್ಯವಿಲ್ಲ. ಅವುಗಳೊಂದಿಗೆ ಬದುಕಲೇ ಬೇಕು. ಇಂತಹ ಪರಿಸ್ಥಿತಿಯಲ್ಲಿ ಶಾಂತರಾಗುವುದು ಸಾಧ್ಯವಿಲ್ಲ ಮತ್ತು ಪರತತ್ವವನ್ನು ಅರಿತು ಆತ್ಮವನ್ನು ಲೇಸಾಗಿಸುವುದು ಸಾಧ್ಯವಿಲ್ಲ ಅಲ್ಲವೇ? ಹಾಗೆಂದು ಈ ಸಾಂಸಾರಿಕ ಜಂಜಡದಲ್ಲೇ ನಮ್ಮ ಜೀವನ ಕೊನೆಯಾಗಬೇಕೆ? ಎಂದರೆ, ಅದಕ್ಕೊಂದು ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಮನಃ ಫಟಲವನ್ನು ಇಬ್ಭಾಗವಾಗಿಸಿ ಎರಡು ಕೋಣೆಗಳನ್ನಾಗಿಸಬೇಕು. ಒಂದರಲ್ಲಿ 'ಲೋಗರಾಟಗಳನಾಡು ಎಂಬಂತೆ ಮೇಲೆ ಹೇಳಿದ ಲೋಕದ ವಿಚಾರಗಳಿಗೆ ಸ್ಥಾನ ಕಲ್ಪಿಸಿ ಮತ್ತೊಂದು ಕೋಣೆಯೊಳಕ್ಕೆ ಅವುಗಳು





ನುಗ್ಗದಂತೆ ಎಚ್ಚರವಹಿಸಿ, ಶಾಂತ ವಾತಾವರಣವನ್ನು ಸೃಷ್ಟಿಸಿಕೊಂಡು ಮೌನವಾಗಿ ಧ್ಯಾನ ಮುಂತಾದ ಆತ್ಮ ಚಿಂತನೆಗಳ ವಿಚಾರಗಳಿಗೆ ತಾವು ಮಾಡಿಕೊಟ್ಟರೆ ಪರತತ್ವದ ಬಗ್ಗೆ ಆಲೋಚಿಸುವ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ಮನಸ್ಸು ಒಂದೇ ಸಮಯದಲ್ಲಿ ಹಲವಾರು ಚಿಂತನೆಗಳನ್ನು ಮಾಡಬಲ್ಲ ಕ್ಷಮತೆಯನ್ನು ಹೊಂದಿರುತ್ತಾದ್ದರಿಂದ ಹೊರಕೋಣೆಯಲ್ಲಿ ಲೋಕದಾಟವನ್ನಾಡುತ್ತಾ, ಒಳಕೋಣೆಯಲ್ಲಿ ಮೌನದಿಂದ ಅಂತರಂಗದ ಶಕ್ತಿಯನ್ನು ಉದ್ದೀಪನ ಗೊಳಿಸಿದರೆ ಅಂತರ್ಮುಖಿಯಾಗಿ ನಿಚ್ಚಳವಾಗಿ ಪರತತ್ವದ ಚಿಂತನೆ ಮಾಡಬಹುದು.

ಉಪಾಯವೇನೋ ಬಹಳ ಸುಲಭ. ಆದರೆ ಅದರನುಷ್ಠಾನ ತೀವ್ರ ಕಷ್ಟತಮ. ಏಕೆಂದರೆ ಆ ಎರಡು ಕೋಣೆಗಳ ನಡುವಿನ ಗೋಡೆ ಬಹಳ ಸೂಕ್ಷ್ಮ ಮತ್ತು ತೆಳುವು. ಬಂಗಾಳದ 'ಮಸ್ಲಿನ್' ಬಟ್ಟೆಯಂತೆ.ಸ್ವಲ್ಪ ನಿರ್ಲಕ್ಷದಿಂದ ಅದು ಹರಿದುಹೋಗಬಹುದು. ಇಂದ್ರಿಯ ಪ್ರೇರಿತವಾದ ಹೊರಕೋಣೆಯ ವಿಚಾರಗಳು ಒಳಕೋಣೆಯೊಳಕ್ಕೆ ನುಗ್ಗಲು ಮತ್ತು ನಮ್ಮ ಅಂತರಂಗದ ಮೌನ ಮತ್ತು ಶಾಂತಿಯನ್ನು ಭಂಗಗೊಳಿಸಲು ಸದಾ ಹೊಂಚು ಹಾಕುತ್ತಿರುತ್ತದೆ. ಹಾಗಾಗಿ ಆ ಗೋಡೆಯನ್ನು ಭದ್ರಪಡಿಸಬೇಕು. ಇದೇ ನಾವು ಮಾಡಬೇಕಾದ, ಮಾಡಬಹುದಾದಂತಹ 'ಸಾಧನೆ'. ಅದಕ್ಕೆ ಬೇಕಾದಷ್ಟು ಮಾರ್ಗಗಳನ್ನು ನಮ್ಮ ಪೂರ್ವಜರು, ಧ್ಯಾನ, ಯೋಗ ಮುಂತಾದ ವಿಧಾನಗಳ ರೂಪದಲ್ಲಿಸೂಚಿಸಿದ್ದಾರೆ. ಇವೆಲ್ಲವೂ ಮನದೊಳಗೆ ನಾವು ನಿರ್ಮಿಸುವ ಎರಡು ಕೋಣೆಗಳ ನಡುವಿನ ಗೋಡೆಯನ್ನು ಗಟ್ಟಿಯಾಗಿಸುತ್ತದೆ, ಭದ್ರಪಡಿಸುತ್ತದೆ. ಹಾಗೆ ಭದ್ರವಾದರೆ, ಒಳಕೋಣೆಯಲ್ಲಿ ನಾವು 'ಮೌನದಿಂದ ಒಂಟಿಯಾಗಿ ವಿರಮಿಸಬಹುದು. ಪ್ರಯತ್ನ ಪಡಬೇಕು. ಅಷ್ಟೇ!!!!

**ಮುಕ್ತಕ – 7ಸಂ2**

**ಮನೆಯ ಸಂಸಾರದಲ್ಲಿ ವಾಸವಿರುತಾಗಾಗ |**

**ನೆನೆದು ನೀಂ ದೇಗುಳಕೆ  ಪೋಗಿಬರುವಂತೆ ||**

**ದಿನವೆಲ್ಲ ದೇವಸನ್ನಿಧಿಯೊಳಿರುತಾಗಾಗ |**

**ಮನೆಗೆ ಬರುವನವೊಲಿರು - ಮಂಕುತಿಮ್ಮ ||**

ವಾಸವಿರುತಾಗಾಗ= ವಾಸವಿರುತ+ಆಗಾಗ, ದೇವಸನ್ನಿಧಿಯೊಳಿರುತಾಗಾಗ=ದೇವ+ಸನ್ನಿಧಿಯೊಳು+ಇರುತ+ಆಗಾಗ
ಬರುವನವೊಲಿರು=ಬರುವಂ+ಒಲು +ಇರು
ದೇಗುಳಕೆ=ದೇವಸ್ಥಾನಕ್ಕೆ, ಪೋಗಿ=ಹೋಗಿ, ಬರುವನವೊಲಿರು=ಬರುವನಂತೆ ಇರು.

ಸಂಸಾರದಲ್ಲಿರುವ ನೀನು ಆಗಾಗ ದೇವಾಲಯಕ್ಕೆ ಹೋಗಿ ಬರುವಂತೆ, ಹೆಚ್ಚು ಕಾಲ ದೇವಾಲಯದಲ್ಲಿ ಕಳೆದು ಆಗಾಗ ಮನೆಗೆ ಬಂದುಹೋಗುವವನಂತಾಗು ಎಂದು ಸೂಚನೆಯನ್ನಿತ್ತು ಮನೋವ್ಯಾಪಾರವನ್ನು ಹೇಗಿಟ್ಟುಕೊಂಡರೆ ನಮಗದು ಹಿತವಾಗುತ್ತದೆ ಎಂದು ಬದುಕಿನ ಒಂದು ಸೂಕ್ಷ್ಮವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇದಕ್ಕೊಂದು ಕಥೆಯನ್ನು ಹೇಳಬಯಸುತ್ತೇನೆ. "ಒಂದು ಊರು ಆ ಊರಲ್ಲಿ ಒಂದು ಮುಖ್ಯ ಬೀದಿಕೊನೆಯಲ್ಲಿ ಒಂದು ದೇವಸ್ಥಾನ ಮತ್ತು ಅದರ ಎಂದು ಒಂದು ಬೃಹತ್ ಸೌಧ. ಆ ಸೌಧಲ್ಲಿದ್ದಾಕೆ ಓರ್ವ ವೇಶ್ಯ. ಆ ದೇವಸ್ಥಾನಕ್ಕೆ ಒಬ್ಬ ಪೂಜಾರಿ, ಧೀರ್ಘ ಕಾಲ ಬದುಕ ಸವೆಸಿ ಇಬ್ಬರೂ ಕಾಲವಾದ ನಂತರ 'ಯಮ'ನ ಸಧನದಲ್ಲಿ ಅವರ ಲೆಕ್ಕವನ್ನು ಪರಿಶೀಲಿಸಿ ವೇಶ್ಯೆಯನ್ನು ಸ್ವರ್ಗಕ್ಕೂ, ಆ ದೇವಸ್ಥಾನದ ಅರ್ಚಕನನ್ನು ನರಕಕ್ಕೂ ಕಳುಹಿಸಲು ಆದೇಶ, ಅರ್ಚಕನಿಗೆ ಸಿಟ್ಟು ಬಂದು ಹಾಗೇಕೆಂದು ವಿಚಾರಿಸಲಾಗಿ, ನೀನು ವೃತ್ತಿಯಿಂದ ಅರ್ಚಕನಾದರೂ ನಿನ್ನ ಮನಸೆಲ್ಲ ಆ ವೇಶ್ಯಯ ಮನೆಗೆ ಬಂದು ಹೋಗುವವರು, ಅಲ್ಲಿ ನಡೆಯಬಹುದಾದ ಕಾರ್ಯ ಕಲಾಪಗಳು ಮತ್ತು ಅಲ್ಲಿಗೆ ಹೋಗಲಾಗಲಿಲ್ಲವಲ್ಲ ಎನ್ನುವ ಚಿಂತನೆಯಲ್ಲೇ ಮುಳುಗಿತ್ತು, ಆದರೆ ಆ ವೇಶ್ಯಯಾದರೋ ವೃತ್ತಿಯಲ್ಲಿ ನಿರತಳಾದರೂ ತನ್ನ ಮನಸ್ಸನ್ನು ತಾನು ಹೋಗಲಾಗದ ಆ ದೇವಸ್ಥಾನದಲ್ಲಿ ನೆಟ್ಟು ಆಹಾ! ಒಂದು ಬಾರಿಯೂ ಅಲ್ಲಿಗೆ ಹೋಗಲಾಗಲಿಲ್ಲವಲ್ಲ ಇನ್ನುವ ಚಿಂತೆಯಿಂದ ಸದಾ ಭಗವನ್ನಾಮ ಸ್ಮರಣೆಯನ್ನು ಮಾಡುತ್ತಿದ್ದಳು. ಹಾಗಾಗಿ ನಿನಗೆ ನರಕ ಮತ್ತು ಆಕೆಗೆ ಸ್ವರ್ಗ." ಎಂದರಂತೆ

ಹೊರಗೆ ನಾವು ಏನು ಮಾಡುತ್ತೇವೆ ಎನ್ನುವುದಕ್ಕಿಂತ ನಮ್ಮ ಮನದೊಳಗಿನ ವಿಚಾರಗಳೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ಹಾಗಾಗಿ ಮಾನ್ಯ ಗುಂಡಪ್ಪನವರು ಹೇಳುವಂತೆ, ಮನೆ ಸಂಸಾರ, ವೃತ್ತಿ, ವ್ಯಾಪಾರ, ಕೆಲಸ, ಸಂಪಾದನೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಮತ್ತು ಆ ವಿಷಯಗಳಿಂದ ನಮಗುಂಟಾಗುವ ಸಂಬಂಧ ಸಂಪರ್ಕಗಳಿಂದ ನಮ್ಮ ಮನದೊಳಕ್ಕೆ ನುಗ್ಗುವ ವಿಚಾರಗಳ ಸುಳಿಯಲ್ಲಿ ಮುಳುಗಿ ವಾರಕ್ಕೊಮ್ಮೆ ದೇವಸ್ಥಾನಕ್ಕೆ ಹೋಗುವ ಪರಿಪಾಠ ನಮ್ಮಲ್ಲಿ ಇರುತ್ತದೆ. ಅಂದರೆ ಸಾಂಸಾರಿಕ ವಿಚಾರಗಳೇ ಅಧಿಕವಾಗಿ ಭಗವತ್ ಚಿಂತನೆ ಆಗಲೋ ಈಗಲೋ ಬಂದು ಹೋಗುವ ಭಾವವಾಗಿರುತ್ತದೆ. ಹಾಗಾಗಬಾರದು ಎನ್ನುತ್ತದೆ ಈ ಮುಕ್ತಕ.

ಈ ಹಿಂದಿನ ಮುಕ್ತಕದಲ್ಲಿ ಸೂಚಿಸಿದಂತೆ ನಾವು ಮನಸಿನಲ್ಲಿ ಮಾಡಿಕೊಂಡ ಲೋಕಾದಾಟದ ಹೊರ ಕೋಣೆಯಲ್ಲಿ ಅವಶ್ಯಕತೆಗಿಂತ ಅಧಿಕವಾಗಿರದೆ ಸದಾ ದೇವಾಲಯದಂತೆ ಇರುವ ಒಳ ಕೊನೆಯಲ್ಲಿ ಅಧಿಕ ಸಮಯ ಕಳೆದರೆ ಮನಸ್ಸು ಶಾಂತವಾಗಿರುತ್ತದೆ. ಹಾಗೆಂದು ಬದುಕಿನ ವ್ಯವಹಾರದಲ್ಲಿ ಅನಾಸಕ್ತಿಯನ್ನು ತೋರಬೇಕೆ? ಹಾಗಾದರೆ ನಮ್ಮ ಮತ್ತು ನಮ್ಮನ್ನು ನಂಬಿದವರ ಸಾಂಸಾರಿಕ ಬದುಕು ಹಾಳಾಗುವುದಲ್ಲವೇ?" ಎಂದರೆ, ಖಂಡಿತ ಅದನ್ನು ನಿರ್ಲಕ್ಷ್ಯ ಮಾಡಬಾರದು. ಅದಕ್ಕೆ ಎಷ್ಟು ಗಮನ ಕೊಡಬೇಕೋ ಅಷ್ಟನ್ನು ಕೊಡಬೇಕು ಮತ್ತು ಆ ಕೆಲಸಗಳನ್ನೂ

ಸಮರ್ಪಕವಾಗಿ ಮಾಡಬೇಕು ಆದರೆ ಅದೇ ವಿಷಯಗಳನ್ನು ಮನದೊಳಗೆ ಚಿಂತಿಸುತ್ತಾ, ಮನದೊಳಗೆ ಒಂದು ನರಕವನ್ನೇ ಸೃಷ್ಟಿಸಿಕೊಂಡು ಬದುಕಬಾರದು. ಹೊರಕೋಣೆಯಲ್ಲೇ ಇದ್ದರೆ 'ನರಕ' ಒಳ ಕೋಣೆಯ ಸ್ವರ್ಗ.

ನಮಗೆ ಏನು ಮತ್ತು ಎಷ್ಟು ಬೇಕು ಎಂದು ಆಯ್ದುಕೊಳ್ಳುವ ಮತ್ತು ನಿರ್ಧರಿಸುವ ಅಧಿಕಾರ ಮತ್ತು ಸಂಪೂರ್ಣ ಸ್ವಾತಂತ್ರ ಇದೆ. ಯಾರು ಯಾವುದನ್ನು ಆಯ್ದುಕೊಂಡರೆ ಅದರ ಅನುಭವ ಅವರಿಗೆ, ಹಾಗಾಗಿ ಆ ಒಂದು ಸ್ವಾತಂತ್ರವನ್ನು ಸೂಕ್ತವಾಗಿ ಉಪಯೋಗಿಸಿ ಬದುಕನ್ನು ಸುಗಮವಾಗಿಸಿಕೊಳ್ಳಬೇಕು, ಶಾಂತವಾಗಿಸಿಕೊಳ್ಳಬೇಕು, ಆನಂದಮಯವಾಗಿಸಿಕೊಳ್ಳಬೇಕು ಎನ್ನುವುದೇ ಈ ಮುಕ್ತಕದ ಆಂತರ್ಯ.





**ಮುಕ್ತಕ 7ಸ03**

**ಬೇಕು ಜೀವನಯೋಗಕೊಂದು ಬಹುಸೂಕ್ಷ್ಮನಯ |**

**ಬೇಕೊಂದು ಜಾಗರೂಕತೆ, ಬುದ್ದಿಸಮತೆ ||**

**ತಾಕನೊಂದನು ಯೋಗಿ,ನೂಕನೊಂದನು ಜಗದಿ |**

**ಏಕಾಕಿ ಸಹವಾಸಿ -ಮಂಕುತಿಮ್ಮ ||**

ಜೀವನಯೋಗಕೊಂದು=ಜೀವನ+ಯೋಗಕೆ+ಒಂದು, ತಾಕನೊಂದನು=ತಾಕನು+ಒಂದನು,

ನೂಕನೊಂದನು=ನೂಕನು+ಒಂದನು ನೂಕನು = ನಿರಾಕರಿಸನು,

ಜೀವನವೆನ್ನುದುವು ಒಂದು ಯೋಗದಂತೆ, ಅದು ಬಹಳ ಸೂಕ್ಷ್ಮ ಮತ್ತು ನಯ. ಇದನ್ನು ಸಮರ್ಪಕವಾಗಿಸಲು ನಾವು ಬಹಳ ಜಾಗರೂಕರಾಗಿ, ಸಮಬುದ್ಧಿಯಿಂದ ಇರಬೇಕು. ಯೋಗಿಯಾದವನು ಎಲ್ಲದರಲ್ಲೂ ಇದ್ದು,

ಯಾವುದರಲ್ಲೂ ಇರದಂತೆ ಇದ್ದು, ಅಂತರಂಗದಲ್ಲಿ ತನಗೆ ತಾನೇ ಹೇಗಿರುತ್ತಾನೋ ಹಾಗಿರಬೇಕು. ಎಂದು ಹೇಳಿ ನಾವು ಬದುಕಿನ ಪಯಣವನ್ನು ಹೇಗೆ ಸಾಗಿಸಬೇಕು ಎನ್ನುವುದನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಚಿತ್ತ ವೃತ್ತಿ ನಿರೋಧಕ" ಎಂದು ಯೋಗಕ್ಕೊಂದು ಪರಿಭಾಷೆ ಉಂಟು, ಚಿತ್ತದ ವೃತ್ತಿಯನ್ನು ತಡೆಹಿಡಿಯುವುದು ಎಂದು. ಮನಸ್ಸಿನ ಕ್ರಿಯೆಯನ್ನು ನಿಯಂತ್ರಿಸುವುದು ಅಷ್ಟು ಸುಲಭವಾಗಿದ್ದಿದ್ದರೆ ಈ ಜಗತ್ತಿನಲ್ಲಿ ಎಲ್ಲರೂ ಯೋಗಿಗಳಾಗುತ್ತಿದ್ದರು ಮತ್ತು ಪುರಂದರ ದಾಸರು 'ಹರಿದಾಡುವಂತಾ ಮನವ ನಿಲಿಸುವುದು ಬಲು ಕಷ್ಟ ಎಂದು ಖಂಡಿತ ಹಾಡುತ್ತಿರಲಿಲ್ಲ. ಮನಸ್ಸಿನ ಆಲಯದಲ್ಲಿ ಎರಡು ಕೋಣೆಗಳ ನಿರ್ಮಿಸಬಹುದು. ಆದರೆ ಹೊರಕೋಣೆಯಲ್ಲಿ ನಾವಾಡುವ ಲೋಕದ ಆಟದ ವಿಚಾರಗಳನ್ನು ಒಳಕೋಣೆಯ ಪ್ರಶಾಂತ ವಾತಾವರಣಕ್ಕೆ ನುಗ್ಗದಂತೆ ನೋಡಿಕೊಳ್ಳುವುದೇ ಸಾಹಸದ ಕೆಲಸ, ಹಾಗೆ ನೋಡಿಕೊಳ್ಳಲಾಗುವುದೇ ಯೋಗಸಾಧನೆ.

ಹಾಗೆ ಮಾಡಬೇಕಾದರೆ ಶ್ರೀ ಭಗವದ್ಗೀತೆಯಲ್ಲಿ ಒಂದು ಸೂತ್ರವನ್ನು ಕೊಡುತ್ತಾನೆ. "ಯೋಗಸ್ಯ ಕುರು ಕರ್ಮಾಣಿ ಸಂಗಮ್ ತ್ಯಕ್ತ್ವಾ ಧನಂಜಯ? ಸಿದ್ಧಾ ಸಿದ್ಧಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ"( ಭ.ಗೀ. 2- 48). ಈ ಶ್ಲೋಕದಲ್ಲಿ “ಸಮೋ ಭೂತ್ವಾ ಸಮತ್ವಂ ಯೋಗಮುಚ್ಯತೇ” ಎಂದು ಹೇಳಿ ಮಾನಸಿಕ ಸಂತುಲನೆಯನ್ನು ಕಾಯ್ದುಕೊಳ್ಳುವುದೇ ಯೋಗವೆನ್ನುತ್ತಾನೆ. ಕಷ್ಟ ಸುಖಗಳಲ್ಲಿ ಮಾನಸಿಕ ಸಂತುಲನೆಯನ್ನು ಕಾಪಾಡಿಕೊಳ್ಳುವುದು ಎಂದರೆ ಆ ಕಷ್ಟದ ಅಥವಾ ದುಃಖಕ್ಕೆ ಕಾರಣವಾದ ವಿಷಯಗಳಿಗೆ ಅಂಟದೆ ಇದ್ದರೆ, ಆ ಕಷ್ಟ ಸುಖಗಳಿಂದ ಉಂಟಾಗುವ ಭಾವ ತೀವ್ರತೆ ನಮ್ಮನ್ನು ತಟ್ಟದೆ ತಮ್ಮಷ್ಟಕ್ಕೆ ತಾವು ಬಂದು ಹೋಗುತ್ತವೆ. ತಾಕನೊಂದನು ಯೋಗಿ, ನೂಕನೊಂದನು" ಎಂದು ಹೇಳಿ ಯೋಗಿಯಾದವನು ಯಾವುದನ್ನೂ

ತಾಗಿಸಿಕೊಳ್ಳುವುದಿಲ್ಲ ಅಂದರೆ ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ ಎಂದೂ, ನೂಕನೊಂದನು, ಅಂದರೆ ಯಾವುದನ್ನೂ ದೂರಮಾಡುವುದಿಲ್ಲ ಎಂದು ಹೇಳಿ, ಹಾಗಿದ್ದವನೆ ಯೋಗಿ ಎಂದಿದ್ದಾರೆ. ಇಲ್ಲಿ ಕೃಷ್ಣ ಹೇಳುವ " ಸಂಗಮ್ ತ್ಯಾ " ಎಂದು ಹೇಳುವುದು ಬಹಳ ಸೂಕ್ತವಾಗಿದೆಯಲ್ಲವೇ? ಅಂಟಿಕೊಳ್ಳದೆ ಇರುವುದೇ 'ಯೋಗ' ಅಂತಹ ಯೋಗಶಕ್ತಿಯನ್ನು ನಾವು ಸಾಧನೆಯಿಂದ ಪಡೆಯಬೇಕು. ನಮ್ಮ ಮನಸ್ಸಿನಲ್ಲಿರುವ ಎರಡುಕೋಣೆಗಳ ನಡುವೆ ಇರುವ ಗೋಡೆಯನ್ನು ಈ ರೀತಿಯ ಯೋಗದ ಸಾಧನೆಯಿಂದ ದಪ್ಪಗಾಗಿಸಿ, ಗಟ್ಟಿಯಾಗಿಸಿಕೊಳ್ಳಬೇಕು.

ಜೀವನದಲ್ಲಿ ನಮ್ಮ ಬದುಕು ಬಹಳ ಸೂಕ್ಷ್ಮವಾಗಿರುತ್ತದೆ. ಒಂದು ತಪ್ಪು ಹೆಜ್ಜೆಯಿಟ್ಟರೂ ಅನಾಹುತವಾಗುವ ಸಂಭವವಿರುತ್ತದೆ. ಹಾಗಾಗಿ ಜಾಗರೂಕರಾಗಿರಬೇಕು. ಮನಸ್ಸನ್ನು ಸಂತುಲನೆಯಲ್ಲಿಟ್ಟುಕೊಳ್ಳಬೇಕು, ಇದ್ದರೂ ಇಲ್ಲದಂತೆ, ಇಲ್ಲದಿದ್ದರೂ ಇದ್ದಂತೆ ಭಾವಿಸುತ್ತಾ 'ಪದ್ಮ ಪತ್ರಮಿವಾಂಬಸಿ' ಎಂದು ಶ್ರೀ ಕೃಷ್ಣ ಹೇಳುವಂತೆ, ತಾವರೆಯ ಎಲೆಯ ಮೇಲಿನ ನೀರ ಹನಿಯಂತೆ ಇರಬೇಕು. ಹಾಗಿದ್ದರೆ ನಾವೂ ಸಹ ಯಾವುದಕ್ಕೂ ತಾಕದಂತೆಯೂ, ಯಾವುದನ್ನೂ ನೂಕದಂತೆಯೂ ಇರಬಹುದು. ಮಾಡಬೇಕಾದ ಕೆಲಸವನ್ನೆಲ್ಲಾ ನಿಷ್ಠೆಯಿಂದ ಸಂಪೂರ್ಣತಯಾ ತಮ್ಮನ್ನು ನಾವು ತೊಡಗಿಸಿಕೊಂಡು, ಆ ಕರ್ಮವೇ ನಮ್ಮ ಧರ್ಮವೆಂಬಂತೆ ಮಾಡಬೇಕು. ಹಾಗೆ ಮಾಡುವಾಗ, ನಾವು ಎಲ್ಲಕಡೆಯೂ ಇದ್ದರೂ ಅಂತರಂಗದಲ್ಲಿ ಯಾವುದಕ್ಕೂ ಅಂತದೆ ಒಂಟಿಯಾಗಿದ್ದರೆ ಆಗ ಧ್ಯಾನ ನಿರಂತರವಾಗಿ ಕಷ್ಟ ಸುಖಗಳಿಂದಾಗುವ ಪರಿಣಾಮಗಳಿಂದ ಮುಕ್ತರಾಗಬಹುದು.

**ಮುಕ್ತಕ – 7ಸಂ4**

**ಸಮತಸಂಯಮಶಮಗಳಿಂ ಭವವನೋಲಗಿಸೆ |**

**ಸಮನಿಪುದು ಮತಿಯ ಹದವಾತ್ಮಾನುಭವಕೆ ||**

**ಮಮತೆಯಳಿವಿಂ ಜ್ಞಾನ; ಪಾಂಡಿತ್ಯದಿಂದಲ್ಲ |**

**ಶ್ರಮಿಸಿಳೆಯ ಗಾಣದಲಿ - ಮಂಕುತಿಮ್ಮ ||**

ಸಮತೆಸಂಯಮಶಮಗಳಿಂ=ಸಮತೆ+ಸಂಯಮ+ಶಮಗಳಿಂ, ಹದವಾತ್ಮಾನುಭವಕೆ=ಹಡವು+ಆತ್ಮಾನುಭಾವಕೆ.

ಮಮತೆಯಳಿವಿಂ=ಮಮತೆಯ+ಅಳಿವಿಂ, ಶ್ರಮಿಸಿಳೆಯ=ಶ್ರಮಿಸು+ಇಳೆಯ

ಸಮತೆ=ಸಮಾನತೆ, ಶಮಗಳಿಂ=ಶಾಂತಿಯಿಂದ, ಸಮನಿಪುದು= ಸಮನಾಗುವುದು. ಮಮತೆಯಳಿವಿಂ=ಮಮಕಾರದ ನಾಶದಿಂದ,

ಸಮಾನತೆ, ಇಂದ್ರಿಯ ನಿಗ್ರಹ, ಮತ್ತು ಶಾಂತಿಯಿಂದ ಭವ, ಎಂದರೆ ಇಲ್ಲಿನ ಬದುಕನ್ನು ಪ್ರೀತಿಯಿಂದ ನಡೆಸಿಕೊಂಡರೆ, ಮನಸ್ಸು ಬುದ್ಧಿಗಳ ಹದವು ಆತ್ಮಾನುಭವಕ್ಕೆ ಸಮಾನವಾಗುತ್ತದೆ. ಮಮಕಾರವು ನಾಶವಾದರೆ ಮಾತ್ರ ಜ್ಞಾನದ ಹೊಳಪು ಅಂತರಂಗದಲ್ಲಿ ಬೆಳಗುತ್ತದೆ, ಪಾಂಡಿತ್ಯದಿಂದಲ್ಲ. ಆದ್ದರಿಂದ ಈ ಜಗತ್ತೆಂಬ ಗಾಣದಲ್ಲಿ ನಿನ್ನ ಬದುಕನ್ನು ಆಡಿಸಿಕೋ ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

5

ಕಗ್ಗರಸಧಾರೆ ಎರಡು ಕೋಣೆಗಳು 7ಸ01-7ಸ05

ನಮ್ಮ ಈ ಪ್ರಪಂಚದ ಬದುಕನ್ನು ಆತ್ಮಾನುಸಂಧಾನಕ್ಕೆ ಒಂದು ಪ್ರಯೋಗಶಾಲೆಯಂತೆ ಅನುಭವಿಸಿದರೆ, ಕಷ್ಟ- ಸುಖ, ನಮ್ಮವರು-ಪರರು ಹೀಗೆ ತೀವ್ರ ವಿರೋಧವಾದ ವಿಷಯಗಳಲ್ಲೂ ನಮಗೆ ಸಮಭಾವ ಉಂಟಾಗುತ್ತದೆ. ಹಾಗಾಗಲು ಬಾಹ್ಯ ಇಂದ್ರಿಯಗಳಿಂದ ಹೊರಗಿನ ಸೆಳೆತಗಳನ್ನು ದಮನ ಮಾಡಿ, ಒಳಗಿನ ಇಂದ್ರಿಯಗಳಿಂದ ಅಂತರಂಗದ ತುಡಿತಗಳನ್ನು ಶಾಂತಗೊಳಿಸಿದರೆ ಶಮ ದಮಗಳನ್ನು ಸಾಧಿಸಿದಂತಾಗುತ್ತದೆ. ಜಗತ್ತೆಲ್ಲವೂ ಏಕಾತ್ಮಭಾವದಿಂದ ಕೂಡಿದೆ ಎಂದು ಅರಿವಾಗುತ್ತದೆ. ಅಂತಹ ಸ್ಥಿತಿಯಲ್ಲಿ ಮಮತೆ, ಮಮಕಾರಗಳು ನಾಶವಾಗುತ್ತದೆ. ಎಲ್ಲರನ್ನೂ ಎಲ್ಲವನ್ನೂ ಸಮಭಾವದಿಂದ ನೋಡುವ ನಿಸ್ಪೃಹತೆ ನಮ್ಮ ಗುಣವಾದಾಗ, ನಮ್ಮಲ್ಲಿ ಜ್ಞಾನವುಂಟಾಗುತ್ತದೆ.

ಅಂತಹ ಜ್ಞಾನ ಬರುವುದು, ಕೇವಲ ಪುಸ್ತಕಗಳನ್ನು ಓದಿ ಪಾಂಡಿತ್ಯವನ್ನು ಪಡೆದರೆ ಅಲ್ಲ. ಏಕೆಂದರೆ ನಾವು ನಮ್ಮ ಸುತ್ತಮುತ್ತ ಎಷ್ಟೋ ಜನ ಮಹಾನ್ ಮಹಾನ್ ಪಂಡಿತರನ್ನು ನೋಡುತ್ತೇವೆ. ಅವರಿಗೆ ತಿಳಿಯದ ವಿಷಯವೇ

ಇಲ್ಲವೆಂಬಂತೆ ಇರುತ್ತದೆ ಅವರ ಪಾಂಡಿತ್ಯ. ಅವರ ಅಂತರಂಗವನ್ನು ಸೀಳಿ ಒಳಹೊಕ್ಕು ನೋಡಿದರೆ, ನಮಗೆ ಅವರ ಕೊರತೆಗಳು, ನ್ಯೂನತೆಗಳು, ರಾಗ, ದ್ವೇಷಗಳು, ಮಮಕಾರಗಳು, ಪಕ್ಷಪಾತಗಳು, ಕೃಪಣತೆ, ಹೃದಯವಂತಿಕೆಯ ದಾರಿದ್ರ, ಮುಂತಾದ ದೋಷಗಳು ಎದ್ದು ಕಾಣುತ್ತವೆ. ಅಲ್ಲಿ ಪಾಂಡಿತ್ಯವುಂಟೇ ವಿನಃ ಜ್ಞಾನವಿರುವುದಿಲ್ಲ. ಅವರನ್ನು ಕೇವಲ ಪಂಡಿತ ಎಂದು ಕರೆಯಬಹುದು, ಜ್ಞಾನಿ ಎನ್ನಲು ಸಾಧ್ಯವಿಲ್ಲ, ಅಲ್ಲವೇ?

ಮೊದಲು ಮನೋ ನಿಗ್ರಹ, ಮನೋ ನಿಗ್ರಹದಿಂದ ಇಂದ್ರಿಯನಿಗ್ರಹ, ಇಂದ್ರಿಯ ನಿಗ್ರಹದಿಂದ ನಿಸ್ಪೃಹತೆ ನಮ್ಮ ಗುಣವಾದಾಗ ಮಮಕಾರ ನಾಶವಾಗುತ್ತದೆ. ಮಮಕಾರ ನಾಶವಾದರೆ ಸಮಾನತೆ ಉಂಟಾಗುತ್ತದೆ. ಸಮಾನತೆಯಿಂದ ಜಗತ್ತಿನ ಏಕಾತ್ಮ ಭಾವ ನಮ್ಮಲ್ಲಿ ದೃಢವಾಗುತ್ತದೆ. ಅಂತಹ ಸ್ಥಿತಿಯಲ್ಲಿ ನಿರ್ಮೋಹತ್ವ ನಿಶ್ಚಲ ತತ್ವಂ' ಎನ್ನುವ ಹಾಗೆ ಪರತತ್ವದ ಭಾವ ನಿಶ್ಚಲವಾಗಿ ನಮ್ಮಲ್ಲಿ ನಿಲ್ಲುತ್ತದೆ. ಇಷ್ಟೆಲ್ಲಾ, ಸುಮ್ಮನೆ ಮೂಗ ಹಿಡಿದು ಜಪ ಮಾಡುವುದರಿಂದಲೋ, ಗ್ರಂಥಗಳ ಪಠಣದಿಂದಲೋ ಆಗುವುದಿಲ್ಲ. ಅದಕ್ಕೆ ಜಗತ್ತಿನಲ್ಲಿ ಅನುಭವವಾಗಬೇಕು. ಎಣ್ಣೆಯ ಬೀಜಗಳು ಗಾಣದಲ್ಲಿ ಅರೆಯಲ್ಪಟ್ಟು ಅದರ ಸಾರ ಎಣ್ಣೆಯ ರೂಪದಲ್ಲಿ ಹೊರಬರುವಂತೆ ಈ ಜಗತ್ತೆಂಬ ಗಾಣದಲ್ಲಿ ಅನುಭವಗಳ ಕಲ್ಲಿನಿಂದ ನಾವೂ ಅರೆಯಲ್ಪಟ್ಟರೆ, ನಮಗೂ ಜ್ಞಾನ ಉಂಟಾಗುತ್ತದೆ. ಜಗತ್ತೇ ಪ್ರಯೋಗಶಾಲೆ, ಅನುಭವಗಳೇ ಪರಿಕರಗಳು ನಮ್ಮ ಪರಿಶ್ರಮವೇ ಪ್ರಯೋಗಗಳು ಮತ್ತು 'ಜ್ಞಾನ'ವೇ ಫಲಿತಾಂಶ. ಅಂತಹ ಅನುಭವಗಳಿಗೆ ನಮ್ಮನ್ನು ನಾವು ತೆರೆದುಕೊಂಡಾಗ ಜ್ಞಾನ ಪ್ರಾಪ್ತಿ. ಇಲ್ಲದಿದ್ದರೆ ಅಜ್ಞಾನದ ಪ್ರಯಾಣ ನಿರಂತರ. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 7ಸ೦5**

**ಸಂತತದ ಶಿಕ್ಷೆಯಿಂ ದೀರ್ಘದಭ್ಯಾಸದಿಂ- |**

**ದಂತರಂಗದ ಕಡಲು ಶಾಂತಿಗೊಳಲಹುದು ||**

**ಸಂತೃಪ್ತವೃತ್ತಿಯಿಂದೇಕಾಂತಸೇವೆಯಿಂ ।**

**ಸಂತಯಿಸು ಚಿತ್ತವನು - ಮಂಕುತಿಮ್ಮ ||**

ದೀರ್ಘದಭ್ಯಾಸದಿಂದಂತರಂಗದ=ದೀರ್ಘದ+ಅಭ್ಯಾಸದಿಂದ+ಅಂತರಂಗದ,

ಶಾಂತಿಗೊಳಲಹುದು=ಶಾಂತಿಗೊಳಲು+ಅಹುದು.

ಸಂತೃಪ್ತವೃತ್ತಿಯಿಂದೇಕಾಂತಸೇವೆಯಿಂ=ಸಂತೃಪ್ತಿ+ವೃತ್ತಿಯಿಂದ+ಏಕಾಂತ+ಸೇವೆಯಿಂ.

ಸಂತತದ= ನಿರಂತರದ, ನಿರ್ವಿಘ್ನವಾಗಿ, ಸಂತಯಿಸು= ಸಮಾಧಾನಪಡಿಸು, ಓಲೈಸು, ಚಿತ್ತವನು = ಮನಸ್ಸನ್ನು

ನಿರಂತರ ಪ್ರಯತ್ನದ ಶಿಕ್ಷಣದಿಂದ ಮತ್ತು ದೀರ್ಘ ಅಭ್ಯಾಸದಿಂದ ಅಂತರಂಗದ ಕಡಲು ಶಾಂತವಾಗುತ್ತದೆ. ತೃಪ್ತಿ ಮತ್ತು ಸಂತೃಪ್ತಿಯಿಂದ ನಿನ್ನಲ್ಲಿ ನೀನೇ ಸಂತೋಷಪಡುತ್ತಾ ಏಕಾಂತದಲ್ಲಿ ಆತ್ಮಸಂದಾನಮಾಡಿಕೊಳ್ಳುತ್ತಾ ಮನಸ್ಸನ್ನು ಸಂತೈಸಿಕೊಳ್ಳಬೇಕು, ಎಂದು ಒಂದು ಉಪದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಮನೋನಿಗ್ರಹವೆಂಬುದು ಸುಲಭ ಸಾಧ್ಯವಲ್ಲ. ಅದಕ್ಕೆ ನಿರಂತರವಾದ ಮತ್ತು ದೀರ್ಘವಾದ ಅಭ್ಯಾಸಬೇಕು. ನಮಗೆ ಬೇಡದ ಮತ್ತು ನಮ್ಮ ಮನಸ್ಸನ್ನು ಕೆಡಿಸುವ ಕಸದಂತಹ ವಿಚಾರಗಳೇ ಅಧಿಕವಾಗಿ ನಮ್ಮ ಮನಸ್ಸಿನೊಳಕ್ಕೆ ನುಗ್ಗುತ್ತವೆ. ಅದನ್ನು ತಡೆಹಿಡಿದು ಒಳಗೆ ಬರದಂತೆ ಮಾಡುವುದು ಸಾಹಸ. ಹಾಗೂ ಸಂದುಗೊಂದುಗಳಿಂದ ನುಗ್ಗಿ ಒಳಗೆ ಬಂದ ವಿಷಯಗಳನ್ನು ಹೊರತಳ್ಳುವುದು ಹರಸಾಹಸ. ಮೊಟ್ಟಮೊದಲಿಗೆ, ಸಿಕ್ಕದ್ದರಲ್ಲಿ ತೃಪ್ತಿಪಡುವ

ಮನೋಭಾವ ಬೆಳೆಸಿಕೊಳ್ಳಬೇಕು. ಅತಿಯಾಗಿ ಆಸೆಪಡದೆ ಇದ್ದರೆ 'ಆಸೆ' ಗಳಿಂದ ಉಂಟಾಗಬಹುದಾದ ಅನಾಹುತಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು. ಆಗ ಮನಸ್ಸು ಶಾಂತವಾಗಿರುತ್ತದೆ ಅಲೆಯೇರದ ಪ್ರಶಾಂತ ಕಡಲಿನಂತೆ. ಆ ಶಾಂತತೆಯಲ್ಲಿ ನಿಜವಾದ ಆನಂದವಿರುತ್ತದೆ. ಆ ಆನಂದವನ್ನು ನಾವು ಏಕಾಂತದಲ್ಲಿ ಅಂತರಂಗದಲ್ಲಿ ಅನುಭವಿಸಬೇಕು. ಆ ಏಕಾಂತದಲ್ಲಿ ' ನಮಗೆ, ನಾವೇ ಜೊತೆಯಾಗಿರಬೇಕು'.

'ಸಂತೃಪ್ತವೃತ್ತಿ' ಎಂದಿದ್ದಾರೆ ಗುಂಡಪ್ಪನವರು. ಅದಕ್ಕೆ ಭಗವದ್ಗೀತೆಯಲ್ಲಿ (2-45) "ತ್ರೈಗುಣ್ಯ ವಿಷಯಾವೇದಾ ನಿಸ್ತ್ರೈಗುಣ್ಯೋ ಭವಾರ್ಜುನ, ನಿರ್ದ್ವಂದ್ವೋ ನಿತ್ಯಸತ್ವಸ್ಥೋ, ನಿರ್ಯೋಗಕ್ಷೇಮ ಆತ್ಮವಾನ್' ಎಂದು ಹೇಳಿ ತ್ರಿಗುಣಗಳಿಂದ ಕೂಡಿದ ವಿಷಯಗಳಿಗೆ ಅತೀತನಾಗು, ಅವುಗಳು ಸೃಷ್ಟಿಮಾಡುವ ದ್ವಂದ್ವಗಳಿಗೆ ಅತೀತನಾಗು ಮತ್ತು ನಿನ್ನ ಯೋಗಕ್ಷೇಮದ ಬಗ್ಗೆ ಚಿಂತಿಸದೆ ನಿತ್ಯವೂ ಸತ್ಯವೂ ಆದ ಪರತತ್ವದಲ್ಲಿ ಸ್ಥಿರವಾಗಿದ್ದು ನಿನ್ನ ಅಂತಃಕರಣವನ್ನು ಹತೋಟಿಯಲ್ಲಿಡುವವನಾಗು, ಎಂದು ಶ್ರೀ ಕೃಷ್ಣ ಅರ್ಜುನನಿಗೆ ಹೇಳುವಂತೆ ಹೇಳಿ ಸಕಲ ಜಗತ್ತಿಗೂ ಸರ್ವ ಕಾಲಕ್ಕೂ ಅನ್ವಯವಾಗುವಂತಹ ಸಂದೇಶವನ್ನು ನೀಡುತ್ತಾನೆ.





ಮಾನ್ಯ ಗುಂಡಪ್ಪನವರು 'ಸಂತಯಿಸು ಚಿತ್ತವನು' ಎಂದು ಹೇಳುವುದೂ ಇದನ್ನೇ. ಅಂತಹ ಅಂತರಂಗದ ಆನಂದವನ್ನು ಪಡೆಯಲು ನಮ್ಮಲ್ಲಿ ಪ್ರಬಲವಾದ ಇಚ್ಛೆ ಬರಬೇಕು. ಆ ಇಚ್ಛೆಯನ್ನು ಸಾಕಾರಗೊಳಿಸಿಕೊಳ್ಳಲು ದೃಢವಾದ ಪ್ರಯತ್ನ ಮತ್ತು ನಿರಂತರ ಅಭ್ಯಾಸವನ್ನು ಮಾಡಬೇಕು. ತಮೋಗುಣವನ್ನು ತೊರೆದು, ರಜಸ್ಸನ್ನು ಮೆಟ್ಟಿ, ಸತ್ವದಲ್ಲಿ ನಿಂತು ಸಾಧಿಸಿ ಆ ಸತ್ವಕ್ಕೂ ಅತೀತವಾದ ಪರತತ್ವವನ್ನು ಅಂತರಂಗದಲ್ಲಿ ಅನುಸಂಧಾನ ಮಾಡಿಕೊಂಡರೆ, ಆಗ ಮಾನ್ಯ ಗುಂಡಪ್ಪನವರು ಹೇಳುವಂತೆ ನಮ್ಮ ಅಂತರಂಗದ ಕಡಲು ಶಾಂತವಾಗಿ ನಾವೂ ಸಹ ಅಮಿತಾನಂದದಲ್ಲಿ ತೇಲಬಹುದು.

ಎಲ್ಲಕ್ಕೂ ನಮ್ಮ 'ಮಂಗನಂತಹ' ಮನಸ್ಸೇ ಕಾರಣ. ನಾವು ಪ್ರಯತ್ನದಿಂದ ಮನೋನಿಗ್ರಹವನ್ನು ಸಾಧಿಸಿದರೆ, ಇಂದ್ರಿಯ ನಿಗ್ರಹ, ಧ್ಯಾನ, ಆತ್ಮಾನುಸಂಧಾನ ಮುಂತಾದವುಗಳೆಲ್ಲಾ ಸಾಧಿಸಬಹುದು. ಅದನ್ನು ಅಭ್ಯಾಸೇನ ತು ಕೌಂತೇಯ' ಎಂದು ಶ್ರೀ ಕೃಷ್ಣ ಹೇಳಿದ ಹಾಗೆ, ಅಭ್ಯಾಸದಿಂದಲೇ ಸಾಧ್ಯ. ಪ್ರಯತ್ನಿಸಿದರೆ ಲಾಭ ಇಲ್ಲದಿದ್ದರೆ ಇಲ್ಲ, ಅಲ್ಲವೇ?

**ಮುಕ್ತಕ – 7ಸ೦6**

**ಅರಸಡವಿಗೈದಿದೊಡಂ, ಅವನಿತ್ತ ಪಾದುಕೆಗ**

**ಳೊರೆಯದೊಡಮೇನನಂ, ತಾಂ ವರದಿಯೊರೆದು ||**

**ದೊರೆತನದ ಭಾರವನು ಹೊತ್ತು ದೊರೆಯಾಗದಾ |**

**ಭರತನವೊಲಿರು ನೀನು - ಮಂಕುತಿಮ್ಮ ||**

ಅರಸಡವಿಗೈದಿದೊಡಂ=ಅರಸ+ಅಡವಿಗೆ+ಐದೊಡಂ, ಅವನಿತ್ತ=ಅವನು+ಇತ್ತ,
ಪಾದುಕೆಗಳೊರೆಯದೊಡಮೇನನಂ=ಪಾದುಕೆಗಳು+ಒರೆಯದೊಡಂ+ಏನನಂ, ವರದಿಯೊರೆದು=ವರದಿ+ಒರೆದು,
ದೊರೆಯಾಗದಾ=ದೊರೆ+ಆಗದಾ, ಭರತನವೊಲಿರು=ಭರತನ+ಒಲು+ಇರು
ಅರಸ=ರಾಜ, ಅಡವಿಗೆ=ಕಾಡಿಗೆ, ಐದೊಡಂ=ಹೋದರೂ, ಪಾದುಕೆಗಳು=ಚಪ್ಪಲಿಗಳು, +ಒರೆಯದೊಡಂ=ಹೇಳದಿದ್ದರೂ, ಏನನಂ=ಏನನ್ನೂ, ಒಲು=ಅಂತೆ, ಹಾಗೆ

ರಾಜನಾಗಬೇಕಾದ ರಾಮನು, ತಂದೆಯ ಆಜ್ಞೆಯಂತೆ ಕಾಡಿಗೆ ಹೋದಮೇಲೆ, ತಂದೆ ದಶರಥನ ಮರಣಾನಂತರ, ಭರತನು ಅಣ್ಣನನ್ನು ಮತ್ತೆ ರಾಜ್ಯಕ್ಕೆ ಬರಹೇಳಿ, ಓಲೈಸಿ, ವಿಫಲನಾಗಿ, ಕಡೆಗೆ ಅವನ ಪಾದುಕೆಗಳನ್ನು ಬೇಡಿ ತಂದು, ಅವುಗಳನ್ನೇ ಸಿಂಹಾಸನದ ಮೇಲೆ ಇಟ್ಟು, ಆ ಪಾದುಕೆಗಳು ಯಾವ ರೀತಿಯ ಆದೇಶಗಳನ್ನೂ ನೀಡದಿದ್ದರೂ, ದೇಶದ ಎಲ್ಲ ಆಗುಹೋಗುಗಳನ್ನೂ, ಆ ಪಾದುಕೆಗಳೇ 'ರಾಜ'ನೆಂಬಂತೆ ಅವುಗಳಿಗೆ ವರದಿ ಮಾಡುತ್ತಾ, ದೊರೆತನದ ಭಾರವನ್ನು ಹೊತ್ತಿದ್ದರೂ ತಾನು ದೊರೆ ಎನ್ನುವ ಭಾವವಿಲ್ಲದೆ ನಡೆದುಕೊಂಡ 'ಭರತ'ನ ದೃಷ್ಟಾಂತವನ್ನು ನೀಡಿ ನೀನು ಅವನಂತೆ ಈ ಜೀವನದಲ್ಲಿರು ಎಂದು, ನಿರ್ಮೋಹ ಮತ್ತು ನಿರ್ಲಿಪ್ತತೆಯನ್ನು ತಿಳಿಹೇಳುವ ಆದೇಶವನ್ನು ನಮಗೆ ನೀಡಿದ್ದಾರೆ ಮಾನ್ಯ

ನಾವಿರುವ ಈ ಜಗತ್ತನ್ನು ನಾವು ನಮಗಾಗಿ ಸೃಷ್ಟಿಸಿಕೊಂಡಿಲ್ಲ ಅಥವಾ ನಾವು ಉಪಯೋಗಿಸುವ ಒಂದು ಸಣ್ಣ ವಸ್ತುವನ್ನೂ ನಾವು ಸೃಷ್ಟಿಸಿಕೊಳ್ಳಲಾಗುವುದಿಲ್ಲ. ಹಾಗಿದ್ದರೂ ನಾವೇ ಇದನ್ನು ಸೃಷ್ಟಿಸಿದ ಹಾಗೆ ಇದು ನನ್ನದು, ಇದು ನಿನ್ನದು, ' ಎಂದು ಎಲ್ಲದರ ಮೇಲೂ ನಮ್ಮ ಸ್ವಾಮಿತ್ವ ಅಂದರೆ 'ownership' ನ್ನು ಸ್ಥಾಪಿಸಲು ನಿರಂತರ ಪ್ರಯತ್ನ ಮಾಡುತ್ತಲೇ ಇರುತ್ತೇವೆ. ಇದಕ್ಕೆ ಕಾರಣವೇನೆಂದರೆ, ಈ ಜಗತ್ತಿನಲ್ಲಿ ನಾವಿರುವ ಸ್ಥಿತಿ ಹೀಗೇ' ಇರುತ್ತದೆ ಎನ್ನುವ ಭ್ರಮೆಯಲ್ಲಿರುತ್ತೇವೆ. ಬಂದು ಹೋಗುವುದಷ್ಟೇ ನಮ್ಮ ಕೆಲಸ. ಈ ಬಂದು ಹೋಗುವ ಕೆಲಸವನ್ನು ನಾವು ಅನಾದಿಕಾಲದಿಂದಲೂ ಮಾಡುತ್ತಿದ್ದೇವೆ ಎನ್ನುವುದು ನಮಗೆ ಗೊತ್ತಿಲ್ಲ. ಇಂದು ಇರುವ ಸ್ಥಿತಿಯೇ ಎಂದೆಂದಿಗೂ ಇರುತ್ತದೆ, ಎನ್ನುವ ಭ್ರಮೆಯಿಂದಲೇ ನಾವು ಸ್ವಾರ್ಥವನ್ನು ಬೆಳೆಸಿಕೊಂಡು ಎಲ್ಲ ದುಷ್ಕರ್ಮಗಳಿಗೂ ಮುಂದಾಗುತ್ತೇವೆ.

ಈ ಜಗತ್ತು ಆ 'ಪರತತ್ವದಿಂದಾದದ್ದು ಮತ್ತು ಅದಕ್ಕೆ ಸೇರಿದ್ದು, ನಮ್ಮ ಕೆಲಸವೇನಿದ್ದರೂ ಆ ಪರತತ್ವ ಹಾಕಿಕೊಟ್ಟ ಮಾರ್ಗದಲ್ಲಿ ನಡೆದು, ನಮ್ಮೊಳಗಿರುವ ಆ ತತ್ವದ ಪ್ರತಿರೂಪವಾದ ಆತ್ಮದ ಉನ್ನತಿಗೆ ಶ್ರಮಿಸುವುದು. ನಮಗೆ ಯಾರೂ ಹೀಗೆ ಮಾಡು, ಹೀಗೆ ಮಾಡಬೇಡ ಮತ್ತು ನೀ ಮಾಡಿದ್ದನ್ನೆಲ್ಲಾ ನನಗೆ ವರದಿ ಒಪ್ಪಿಸು ಎಂದು ಹೇಳದಿದ್ದರೂ, ನಾವು ಸ್ವಾತಂತ್ರವಿಲ್ಲದವರಾದ್ದರಿಂದ, 'ಪರಾಧೀನರಾದ್ದರಿಂದ ನಮಗೆ ಅಧಿಕಾರವಿರುವುದಿಲ್ಲ. ಕೇವಲ ಜವಾಬ್ದಾರಿಯಿರುತ್ತದೆ ಅದನ್ನು ಶುದ್ಧವಾಗಿ ನಿರ್ವಹಿಸುವುದೇ ಕರ್ತವ್ಯ. ಹಾಗಾಗಿ ಇದಕ್ಕೆ ಅಂಟಿಕೊಳ್ಳದೆ ಪಡೆದುಕೊಂಡಂತೆಯೇ ಹಿಂತಿರುಗಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಆನಂದವಾಗಿ ನಿಯಮಬದ್ಧವಾಗಿ ಅನುಭವಿಸಬಹುದು, ಇದಕ್ಕೆ ಘಾಸಿಮಾಡದೆ ಬಿಟ್ಟು ಹೋಗಬಹುದು.

ಈ ಜಗತ್ತಿನಲ್ಲಿ ಇರುವಾಗ ಸಹಜವಾಗಿ ಇಂದ್ರಿಯ ಪ್ರೇರಿತವಾಗಿ ನಾವು ಈ ಜಗತ್ತಿನ ಮತ್ತು ನಮ್ಮ ಸುತ್ತುಮುತ್ತಲಿನ ವಿಷಯಗಳಿಗೆ ಅಂಟಿಕೊಳ್ಳುವ ಪ್ರವೃತ್ತಿ ನಮ್ಮಲ್ಲಿ ಬರುತ್ತದೆ. ಅದನ್ನು ಅಭ್ಯಾಸದಿಂದ ತೊಡೆದುಕೊಳ್ಳಬೇಕು. ಕಲಿತ, ಬೇಡದ ವಿಷಯಗಳನ್ನು ಬಿಟ್ಟು, ಬೇಕಾದ ವಿಷಯಗಳನ್ನು ಕಲಿಯುವುದೇ ಸಾಹಸ ಮತ್ತು

ಸಾಧನೆ. ವಿಷಯಾಸಕ್ತಿಯಿಲ್ಲದೆ ಬದುಕಿದರೆ ಆ ಸಾಧನೆ ಸುಲಭವಾಗಿ ಆಗುತ್ತದೆ. ಅಂತಹ ಪ್ರಯತ್ನವನ್ನು ಮಾಡಬೇಕು. ಭರತನಂತೆ ಬದುಕಬೇಕು.



## ಮುಕ್ತಕ 7ಸ೦7

**ಒಡೆಯನೆಂದೋ ಬಂದು ಕೇಳ್ವನದಕ್ಕುತ್ತರವ |**

**ಕೊಡಬೇಕು ತಾನೆನುವವೊಲು ಋಜತೆಯಿಂದ ||**

**ಒಡಲ, ಜಾಣಿನ, ಜೀವಶಕ್ತಿಗಳನೆಲ್ಲವನು |**

**ಮುಡುಪುಕೊಟ್ಟನು ಭರತ - ಮಂಕುತಿಮ್ಮ ||**

ಒಡೆಯನೆಂದೋ=ಒಡೆಯನು+ಎಂದೋ, ಕೇಳನದಕ್ಕುತ್ತರವ=ಕೇಳ್ವನು+ಅದಕ್ಕೆ+ಉತ್ತರವ,

ತಾನೆನುವವೊಲು=ತಾನ್+ಎನುವ+ವೋಲು,

ಋಜತೆ=ಪ್ರಾಮಾಣಿಕತೆ, ಒಡಲ=ದೇಹದ, ಜಾಣಿನ=ಬುದ್ಧಿವಂತಿಕೆಯ, ಮುಡುಪುಕೊಟ್ಟನು=ಸಂಪೂರ್ಣ ತೊಡಗಿಸಿಕೊಂಡನು

'ನಾನು ರಾಮನ ರಾಜ್ಯವನ್ನು ಆಳುತ್ತಿದ್ದೇನೆ' ಎಂದು ಪರಿಗಣಿಸಿ, ಅವನ ಪಾದುಕೆಗಳನ್ನು ಸಿಂಹಾಸನದಮೇಲೆ ಇರಿಸಿ, ಎಂದಾದರೂ ಒಂದು ದಿನ ಎನ್ನ ಒಡೆಯ ನಾನು ಮಾಡಿದ ಎಲ್ಲ ಕೆಲಸಗಳಿಗೂ ವಿಶ್ಲೇಷಣೆಯನ್ನು ಕೇಳುತ್ತಾನೆ ಎಂಬಂತೆ ತನ್ನ ದೇಹ, ಬುದ್ಧಿವಂತಿಕೆ ಮತ್ತು ಚೈತನ್ಯವನ್ನೆಲ್ಲ, ನಿರಪೇಕ್ಷೆಯಿಂದ, ಪ್ರಾಮಾಣಿಕತೆಯಿಂದ ರಾಮನ ರಾಜ್ಯವನ್ನಾಳಲು ಮುಡುಪಾಗಿಟ್ಟ ಭರತನಂತೆ, "ನೀನೂ ಸಹ ಬದುಕು' ಎಂದು ಸೂಚಿಸುವಂತೆ ನಮಗೊಂದು ಆದೇಶವನ್ನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವು ಮಾಡಿದ ಯಾವುದೇ ಕೆಲಸಕ್ಕೂ ಯಾರಿಗೂ ಸಮಜಾಯಿಷಿಯನ್ನು ನಾವು ಕೊಡಬೇಕಾಗಿಲ್ಲವಾದರೂ, ಪರಮಾತ್ಮ ಸ್ವರೂಪವಾದ, ನಮ್ಮ ಒಡೆಯನಂತಿರುವ ಅಂತರಾತ್ಮಕ್ಕೆ ಸದಾ ಕಾಲ ಅದು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಲೇ ಇರಬೇಕು. ನಮ್ಮನ್ನು ನಾವೇ ಮೋಸಮಾಡಿಕೊಳ್ಳಲು ಸಾಧ್ಯವೇ ಇಲ್ಲ ಅಲ್ಲವೇ? ಭರತ ಇದು ತನ್ನದಲ್ಲವೆಂದು ಅರಿತು, ತಾನು ಕೇವಲ ರಾಮನ ಸೇವಕನೆಂದು ಬಗೆದು ರಾಜ್ಯಭಾರವನ್ನು ರಾಮನ ಸೇವೆ ಎಂದು ದುಡಿದ. ಹಾಗಾಗಿ ಅವನ ಯಾವುದೇ ಕೆಲಸದ ಕರ್ಮಫಲ ಅವನದಾಗಿರಲಿಲ್ಲ.

ಭಗವದ್ಗೀತೆಯಲ್ಲಿ 'ಕಿಂ ಕರ್ಮ ಕಿಮಕರ್ಮೇತಿ ' (4-16) ಎಂದು ಹೇಳುವಾಗ ಶ್ರೀ ಕೃಷ್ಣ 'ಅಕರ್ಮ' ಎನ್ನುವ ಪದವನ್ನು ಉಪಯೋಗಿಸುತ್ತಾನೆ. ಆಕರ್ಮವೆಂದರೆ ಕರ್ಮ ಮಾಡದೇ ಇರುವುದಲ್ಲ. ಕರ್ಮ ಮಾಡುವಾಗ 'ನಾನು' ಮಾಡುತ್ತಿದ್ದೇನೆ ಎನ್ನುವ ಭಾವ ಮತ್ತು ಅದರ 'ಫಲಾಪೇಕ್ಷೆ ಇಲ್ಲದೆ ಮಾಡಿದರೆ ಅದು ಅಕರ್ಮ. ಅಂತಹ ಕರ್ಮದಿಂದ ಉಂಟಾಗುವ ಯಾವುದೇ ಫಲಕ್ಕೂ ನಾವು ಭಾಜ್ಯರಾಗುವುದಿಲ್ಲ. ಈ ಜಗತ್ತಿನಲ್ಲಿ ನಾವು ಒಂದು ರೂಪವನ್ನು ಹೊತ್ತು ಹುಟ್ಟಿದ್ದೇವೆ ಎಂದರೆ ಆ ರೂಪಕ್ಕನುಗುಣವಾಗಿ ಮತ್ತು ಅದರ ಅವಶ್ಯಕತೆಗನುಗುಣವಾಗಿ ಸಾಯುವವರೆಗೂ 'ಕರ್ಮ'ವನ್ನು ಮಾಡುತ್ತಲೇ ಇರಬೇಕು. ಹಾಗೆ ಮಾಡುವಾಗ 'ನಾನು, ನನ್ನದು, ನನ್ನಿಂದ, ಮತ್ತು ನನಗಾಗಿ' ಎನ್ನುವ ನಾನತ್ವದ ನಾನಾ ಭಾವಗಳನ್ನು ತೊರೆದು ಮಾಡಿದರೆ ಅದು 'ಅಕರ್ಮ'. ಅಂತಹ ಕರ್ಮದಿಂದ ನಾವು ಹೆದರಲೇ ಬೇಕಾಗಿಲ್ಲ. ಅದೊಂದು ಮುಕ್ತಭಾವ. ಅಂತಹ ಭಾವದಿಂದಲೇ 'ಭರತ'ನೂ ಹದಿನಾಲ್ಕು ವರ್ಷ ರಾಮನ ವನವಾಸದ ಕಾಲದಲ್ಲಿ ರಾಜ್ಯಭಾರ ಮಾಡಿದನು.

1ಸಂ

| | |
|---|---|
| ಕಗ್ಗರಸಧಾರೆ | ಭರತೋದಾಹರಣ 7ಸಂ6- |
| 711 | |

ಈ ಜಗತ್ತಿನಲ್ಲಿದ್ದು ಈ ಜಗತ್ತಿನ ಕೆಲಸಗಳಲ್ಲಿ ನಿಮಗ್ನರಾಗಿ ಇದಕ್ಕೆ ಅಂಟಿಕೊಳ್ಳದೆ ಇರುವುದು ಸಾಧ್ಯವೇ? ಎಂದರೆ, ಸಾಧ್ಯವೆಂದು 'ಭರತ' ತೋರಿಸಿಕೊಟ್ಟಿದ್ದಾನೆ. ನಮಗೂ ಸಾಧ್ಯವಾಗುತ್ತದೆ ಪ್ರಯತ್ನಪಟ್ಟರೆ. ಮೊದಲು

ಮನೋನಿಗ್ರಹ, ನಂತರ ಇಂದ್ರಿಯ ನಿಗ್ರಹವನ್ನು ಸಾಧಿಸಿದರೆ, ಅಹಂಕಾರ ನಶಿಸಿ, ಮಮಕಾರ ಕರಗಿ, ನಿರ್ಲಿಪ್ತತೆಯಿಂದ ನಮ್ಮ ಎಲ್ಲ ಕೆಲಸಗಳನ್ನೂ 'ಧರ್ಮ' ವೆಂಬಂತೆ ಮಾಡಿ ಪ್ರಾಪಂಚಿಕ ಬಂಧನದಿಂದ ಮುಕ್ತರಾಗಬಹುದು. ನಮ್ಮ 'ಅಂತರಾತ್ಮದೆದುರು ಧೈರ್ಯವಾಗಿ ನಿಂತು ಅದು ಕೇಳುವ ಪ್ರಶ್ನೆಗಳಿಗೆ ಪ್ರಾಮಾಣಿಕವಾದ ಉತ್ತರಗಳನ್ನು ನೀಡಬಹುದು. ಅದಕ್ಕೆ ಶುದ್ಧ ದೀರ್ಘಕಾಲಿಕ ಮತ್ತು ಪ್ರಾಮಾಣಿಕ ಪ್ರಯತ್ನ ಬೇಕು.

**ಮುಕ್ತಕ – 7ಸ೦8**

**ಒಡರಿಸುವನೆಲ್ಲವನ್, ಅದಾವುದು ತನದಲ್ಲ ।**
**ಬಿಡನೊಂದನಂ ರಾಜ್ಯ ತನದಲ್ಲವೆಂದು ॥**
**ನಡೆವಂ ಸ್ವತಂತ್ರದಲ್ಲಿ ಸಲಿಸುತೆ ವಿಧೇಯತೆಯ ।**
**ಕಡುಯೋಗಿ ಭರತನಲ - ಮಂಕುತಿಮ್ಮ ॥**

ಒಡರಿಸುವನೆಲ್ಲವನ್=ಒಡರಿಸುವನು+ಎಲ್ಲವನ್, ಅದಾವುದು=ಅದು+ಆವುದೂ, ತನದಲ್ಲ=ತನದು+ಅಲ್ಲ,
ಬಿಡನೊಂದನಂ=ಬಿಡನು+ಒಂದನಂ,
ಒಡರಿಸುವನು= ನಡೆಸುವನು, ಸಲಿಸುತೆ= ತೋರುತ್ತಾ, ಕಡುಯೋಗಿ =ಕಟ್ಟುನಿಟ್ಟಾದ ಯೋಗಿ

ಯಾವುದೂ ತನ್ನದಲ್ಲದದ್ದಿರೂ, ಭರತ ತಾನೇ ರಾಜನಂತೆ ರಾಜ್ಯಭಾರ ನಡೆಸುವನು ಮತ್ತು ಈ ರಾಮನಿಗೆ ರಾಜ್ಯ ಸೇರಿದ್ದು, ತನ್ನದಲ್ಲ ಎಂದು ಯಾವ ಕೆಲಸವನ್ನೂ ಬಿಡುವುದಿಲ್ಲ. ತನ್ನ ಪಾಲಿಗೆ ಬಂದ ಕೆಲಸವನ್ನು ಸ್ವತಂತ್ರವಾಗಿ ನಿರ್ಧರಿಸುತ್ತಿದ್ದರೂ, ಅಂತರಂಗದಲ್ಲಿ ರಾಮನಿಗೆ ವಿಧೇಯತೆಯನ್ನು ತೋರುತ್ತಾ ಇದ್ದ ಆ ಭರತ ನಿಜಕ್ಕೂ ಮಹಾನ್ ಯೋಗಿಯೇ ಎಂದು ಹೇಳುತ್ತಾ, ಈ ಜಗತ್ತು ತಮ್ಮದಲ್ಲದಿದ್ದರೂ ಜೀವನವನ್ನು ಯಾವ ರೀತಿ ನಿರ್ವಹಿಸಬೇಕು ಎನ್ನುವುದಕ್ಕೆ ನಮಗೊಂದು ಉದಾಹರಣೆಯನ್ನು ನೀಡಿ ಸೂಚ್ಯವಾಗಿ ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಎಲ್ಲವೂ ಇದ್ದರೂ ಏನೂ ಇಲ್ಲದವನಂತೆಯೂ, ಸಕಲ ಕಾರ್ಯಭಾರವನ್ನು ಮಾಡುತ್ತಿದ್ದರೂ ತಾನು ಮಾಡುತ್ತಿಲ್ಲ, 'ರಾಮ' ಆಜ್ಞೆ ಮಾಡದಿದ್ದರೂ, ತಾನು ರಾಮನ ಆಜ್ಞೆಯಂತೆ ನಡೆಯುತ್ತಿದ್ದೇನೆ' ಎಂಬಂತೆ ಕಟ್ಟುನಿಟ್ಟಾದ

ವ್ರತವನ್ನು ಪಾಲಿಸಿದ ಭರತ ಮಹಾನ್ ಯೋಗಿಯಂತೆ. ಹಾಗೆ ಬದುಕಿದರೆ ಅದು ಜೀವನ ಯೋಗ ಅಥವಾ ಧರ್ಮ, ಈ ಜಗತ್ತಿನಲ್ಲಿ ಯಾವುದೂ ನಮ್ಮದಲ್ಲ. ಹಾಗೆ ನಮ್ಮದಾಗಿದ್ದರೆ, ಅದು ಶಾಶ್ವತವಾಗಿ ನಮ್ಮದಾಗಿರಬೇಕಾಗಿತ್ತು. ಆದರೆ ವಸ್ತು ಸ್ಥಿತಿ ಹಾಗಿಲ್ಲ. ಮನಸ್ಸು ಬುದ್ಧಿ ದೇಹಾತ್ಮ ಸಂಬಂಧದಿಂದ ಮತ್ತು ನಮ್ಮ





ಪೂರ್ವ ಕೃತ ವಾಸನೆಗಳಿಂದಾದ ನಾವೇ ಅಶಾಶ್ವತ, ಹಾಗಿದ್ದಮೇಲೆ ನಮ್ಮದು' ಶಾಶ್ವತವಾಗಲು ಹೇಗೆ ಸಾಧ್ಯ. ಆದರೆ ನಾವು ನಿರ್ಧಿಷ್ಟ ಸಮಯಕ್ಕೆ ಬದುಕಿಗೆ ಬಂದಾಗಿದೆ. ನಾವು ಮಾಡಬೇಕಾದ ಕೆಲವು ಕರ್ಮಗಳಿವೆ. ಅವುಗಳನ್ನು ಮಾಡಬೇಕಾದ್ದು ನಮ್ಮ ಕರ್ತವ್ಯ ಅಷ್ಟೆ. ಇದು ನಮ್ಮದು, ನಾವು ಮಾಡುತ್ತಿದ್ದೇವೆ, ನಮ್ಮಿಂದ ಈ ಕೆಲಸ, ನಾವು ಮಾಡಿದ ಕೆಲಸದ ಫಲಕ್ಕೆ ನಾವು ಅಧಿಕಾರಿಗಳು ಎಂದು ಅಂದುಕೊಳ್ಳುವುದು ಪ್ರಾಕೃತ ಮನದ ಭಾವ. ಆದರೆ ಯೋಗಿಯಾದವನು ಇದ್ದರೂ ಯಾವುದಕ್ಕೂ ಅಂಟಿರುವುದಿಲ್ಲ. ಎಲ್ಲಕ್ಕೂ ಲೌಕಿಕ ಪರಿಭಾಷೆಯಲ್ಲಿ ಅಧಿಕಾರವಿದ್ದರೂ ಯಾವುದನ್ನೂ ಹೊಂದಿರುವುದಿಲ್ಲ.

ಪ್ರಮಾಣಬೇಧವಿದ್ದರೂ, 'ನಮ್ಮದಲ್ಲದೇ ಇದ್ದರೂ ಎಲ್ಲದರ ಮೇಲೂ ನಮಗೆ ಅಧಿಕಾರದ ಆಸೆ. ನಾವು ಮಾಡದ ಕೆಲಸದ ಫಲ ನಮಗೆ ಸಿಗಬೇಕೆಂಬ ದುರಾಸೆ, ಯಾರೋ ಮಾಡಿದ ಕೆಲಸದ ಕೀರ್ತಿ ನಮ್ಮದೆಂದು ಹೇಳಿಕೊಳ್ಳುವ ದುರ್ಭಾವದ ಜನರೇ ತುಂಬಿರುವ ಈ ಜಗತ್ತಿನಲ್ಲಿ, 'ನಮ್ಮಲ್ಲಿರುವುದನ್ನು ನಮ್ಮದಲ್ಲ ಎಂದು ಹೇಳಿಕೊಳ್ಳುವ, ನಾವು ಮಾಡಿದ ಕೆಲಸದ ಕೀರ್ತಿ ಮತ್ತು ಅದರ ಫಲ ನಮ್ಮದಲ್ಲ, ಅದು ಪರಮಾತ್ಮನ ಪ್ರಸಾದ' ಎಂದು ಯಾವುದಕ್ಕೂ ಅಂಟದೆ ಬದುಕಿದರೆ ಅದು ಒಂದು ಸಾಧನೆ. "ಇದೆ ಅಥವಾ ಇದ್ದೇವೆ ಮತ್ತು ಇಲ್ಲ' ದ ಎರಡು ಸ್ಥಿತಿಗಳ ನಡುವಿನ 'ತಾಟಸ್ಯದ ಸ್ಥಿತಿಯಲ್ಲಿ ವಿರಕ್ತಿಯಿಂದ ವೈರಾಗ್ಯದಿಂದ ಜೀವಿಸುವುದೇ 'ಯೋಗ

ಅಂತಹ ಸಾಧನೆಗೆ ಒಂದು ನಿರ್ಲಿಪ್ತಭಾವ ಬೇಕು, ಶುದ್ಧ ವೈರಾಗ್ಯಬೇಕು. ಅವುಗಳು ಬರಬೇಕಾದರೆ ಸಾಧನೆ ಬೇಕು. ಅಂತಹ ಸಾಧನೆ ಪ್ರಬಲವಾದ ಇಚ್ಚೆ ಮತ್ತು ಪ್ರಾಮಾಣಿಕ ಪ್ರಯತ್ನದಿಂದ ಆಗುತ್ತದೆ. ನಮಗೆ ಅಂತಹ ಇಚ್ಚೆ

ಬಂದರೆ ಮತ್ತು ನಾವು ಅಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಲಾದರೆ, ಎಂದೋ ಒಂದು ದಿನ, ಯಾವುದೋ ಒಂದು ಜನ್ಮದಲ್ಲಿ ನಾವೂ ಭರತನಂತೆ ಯೋಗಿಗಳಾಗಬಹುದು.

**ಮುಕ್ತಕ – 7ಸಂ9**

**ದೊರೆತನದ ಜಟಿಲಗಳ, ಕುಟಿಲಗಳ, ಕಠಿನಗಳ |**

**ಭರತನುಳಿಸಿದನೆ, ರಾಮನ ತೀರ್ಪಿಗೆಂದು ||**

**ಅರಿವಿಗಿಹ ಕರ್ತವ್ಯಭಾರವನು ತಾನರಿತು |**

**ಧುರವ ಧರಿಸಿದನವನು – ಮಂಕುತಿಮ್ಮ||**

ಭರತನುಳಿಸಿದನೆ=ಭರತನು+ಉಳಿಸಿದನೆ, ಅರಿವಿಗಿಹ=ಅರಿವಿಗೆ+ಇಹ, ಧರಿಸಿದನವನು=ಧರಿಸಿದ+ಅವನು

ಖಠಿನಗಳ=ಕಷ್ಟವಾದ ಸಮಸ್ಯೆಗಳ, ಧುರವ=ನೊಗ

ರಾಜನಲ್ಲದಿದ್ದರೂ, ರಾಜ್ಯಭಾರದ ಸಕಲ ಸಮಸ್ಯೆಗಳನ್ನೂ, ರಾಮನ ತೀರ್ಪಿಗೆ ಬಿಡದೆ ತನ್ನ ಕರ್ತವ್ಯದ ಭಾರವನ್ನರಿತು ಆಡಳಿತದ ನೊಗವನ್ನು ತಾನೇ ಹೊತ್ತು ನಿರ್ವಸಿದ ಭರತ ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಇದು ಒಂದು ಉದಾಹರಣೆ. ರಾಮಾಯಣದಲ್ಲಿ ಸಿಗುವ ಒಂದು ಉದಾತ್ತ ಉದಾಹರಣೆ, ನಿರ್ಮಮತೆಯಿಂದ ಭಾರವನ್ನು ಹೊತ್ತ ಭರತನ ಉದಾಹರಣೆ. ನಾವು ಈ ಜಗತ್ತಿನಲ್ಲಿ ಹೇಗೆ ಬದುಕಿದರೆ ನಮಗೆ ಸುಖ ಎಂದು ಸೂಚಿಸುವ ಉದಾಹರಣೆ. 'ರಾಮ' ಎನ್ನುವ ಶಬ್ದಕ್ಕೆ ಒಂದು ವ್ಯಾಖ್ಯಾನವಿದೆ, "ರಮಯತೀತಿ ರಾಮಃ' ಎಂದು. ಮನಸ್ಸಿಗೆ ಆನಂದವನ್ನೀಯುವ, ರಮ್ಯವಾಗಿ ಕಾಣುವ, ಮನಸ್ಸನ್ನು ರಮಿಸುವ ಎಂದರ್ಥ. ನಮಗೆ ಈ ಬದುಕಿನಲ್ಲಿ ಸತ್ಯವಾದ ಆನಂದವೀಯುವ ಒಂದೇ ವಸ್ತು ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ ತತ್ವ ಭರತನು ಹೇಗೆ ರಾಮನ

ಸೇವಕನಂತೆ, ರಾಮನ ಆಜ್ಞೆಯೇನಿಲ್ಲದಿದ್ದರೂ ರಾಮನೇ ರಾಜ್ಯವಾಳುತ್ತಿದ್ದಾನೆ ಎಂಬಂತೆ ನಿಸ್ಪೃಹತೆಯಿಂದ, ನಿರ್ಮಮತೆಯಿಂದ, ಶುದ್ಧ ವಿರಕ್ತ ಭಾವದಿಂದ ರಾಜ್ಯವಾಳಿದನೋ ಹಾಗೆಯೇ ನಾವೂ ಬಾಳಿದರೆ ನಮಗೆ ನಿಜವಾದ ಆನಂದ ಸಿಗುತ್ತದೆ ಎನ್ನುವುದೇ ಈ ಮುಕ್ತಕದ ಅಂತರಂಗದ ಭಾವ.

ರಾಮನನ್ನು 'ದಯಮಾಡಿ ಹಿಂತಿರುಗಿ ಬಾ. ನಿನ್ನ ರಾಜ್ಯವನ್ನು ನೀನೇ ಒಪ್ಪಿಸಿಕೋ' ಎಂದು ಭರತ ಬೇಡಿದರೂ 'ಒಲ್ಲೆ' ನೆಂದ ಶ್ರೀ ರಾಮ. ಹಾಗಾಗಿ ಭರತ ಆಳಬೇಕಾಯಿತು. ಅದೇ ರೀತಿ ಈ ಜಗತ್ತಿನಲ್ಲಿ ಎಲ್ಲೆಲ್ಲೂ ಆ ಪರತತ್ವವೇ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ, ಪ್ರತಿಯೊಂದು ಜೀವಿಗೂ ಒಂದೊಂದು ಬಾಳನ್ನು ಇತ್ತಿದ್ದಾನೆ ಪರಮಾತ್ಮ ಒಂದು ಸುಂದರ ವ್ಯವಸ್ಥೆಯನ್ನು ರೂಪಿಸಿ, ಇಲ್ಲಿ ನೀನು ಬಾಳು ಎಂದು ನಮಗೆ ಒಂದು ಬಾಳನ್ನಿತ್ತಿದ್ದಾನೆ. ಇದು ಅವನಿತ್ತ ಜೀವನ, ಅವನಿಗೆ ಸಲ್ಲಬೇಕಾದ ಜೀವನ ಎಂದು ಸದಾಕಾಲ ಮಾನ್ಯ ಗುಂಡಪ್ಪನವರು 'ಕರ್ತವ್ಯಭಾರವನ್ನು ತಾನರಿತು' ಎಂದು ಹೇಳುವಂತೆ ನಾವು ನಮ್ಮ ಕರ್ತವ್ಯ ಭಾರವನ್ನು ಅರಿತು ಬಾಳಿದರೆ ಸುಖ ಇಲ್ಲದಿದ್ದರೆ ಕೇಶ ತಪ್ಪಿದ್ದಲ್ಲ. ಆ ಅರಿವಿಲ್ಲದೆ ನಾವು 'ಇದು ನನ್ನ ಜೀವನ, ನಾ ಹೇಗೆ ಬೇಕೋ ಹಾಗೆ ಜೀವಿಸುವ ಹಕ್ಕು ನನಗಿದೆ' ಎಂದುಕೊಂಡು, ಉನ್ಮತ್ತತೆಯಿಂದ, ಅಹಂಕಾರದಿಂದ ಬಾಳಿದರೆ ಅಂತಹ ಬಾಳಿನಿಂದ ಸಿಗಬಹುದಾದ ಫಲಗಳನ್ನು ನಾವೇ ಅನುಭವಿಸಬೇಕಾಗುತ್ತದೆ. ಅಲ್ಲವೇ?

ಇಡೀ ರಾಜ್ಯವೇ ಅವನ ಅಧೀನದಲ್ಲಿತ್ತು. ಅವನೇ ಸಾರ್ವಭೌಮನಾಗಿದ್ದ. ತನಗೆ ಬೇಕಾದ ಹಾಗೆ ರಾಜ್ಯವಾಳಬಹುದಿತ್ತು. ಆದರೆ ಭರತನ ಮಾರ್ಗವೇ ಬೇರೆಯಾಗಿತ್ತು. ಅವನಿಗೆ ಅರಿವಿತ್ತು. ತಾನೊಬ್ಬ ಕೇವಲ ಪ್ರತಿನಿಧಿ ಎಂದು. ಹಾಗಾಗಿ ಅವನು ಶುದ್ಧವಾಗಿ ರಾಜ್ಯಭಾರಮಾಡಿ ರಾಮನಿಗೆ ಒಪ್ಪಿಸಿಬಿಟ್ಟು, ನಿರಾಳನಾದ. ನಾವೂ ಸಹ ಈ ಜಗತ್ತಿನ ನಮ್ಮ ಜೀವನವನ್ನು ಪರತತ್ವ ರೂಪಿಸಿರುವ ವ್ಯವಸ್ಥೆಯಲ್ಲಿ ಬದುಕಿದರೆ ಸುಖ, ಆ ವ್ಯವಸ್ಥೆಯನ್ನು ಕೆಡಿಸಿ, ನಮ್ಮ ಅಹಂಕಾರ, ರಕ್ತಿ, ಆಸೆ, ಸ್ವಾರ್ಥ ಮುಂತಾದ ದುರ್ಗುಣಗಳಿಂದ ಬದುಕಿದರೆ ನಮ್ಮ 'ರಾಮ'ನಾದ ನಮ್ಮ ಅಂತರಾತ್ಮಕ್ಕೆ ಸೂಕ್ತ ಉತ್ತರಗಳನ್ನು ನೀಡಲು ಸಾಧ್ಯವಾಗುವುದಿಲ್ಲ.

ಇದಕ್ಕೆ ಒಂದು ಸೂಕ್ತ ಉದಾಹರಣೆಯೇ ನಮ್ಮನ್ನು ಇಂದು ಆಳುತ್ತಿರುವ ರಾಜಕಾರಣಿಗಳು. ಅಬ್ಬ!! ಒಂದು ಬಾರಿ ಚುನಾವಣೆಯಲ್ಲಿ ಗೆದ್ದರೆ ಸಾಕು, ಸ್ವತಃ ದೇವರುಗಳೇ ಆಗಿಬಿಡುತ್ತಾರೆ. ಅವರನ್ನು ಅಲ್ಲಿ ಕೂಡಿಸಿದ ಪ್ರಜೆಗಳು ಅವರಿಗೆ ಕಾಲ ಕಸ, ಸದಾಕಾಲ ದುರಾಚಾರಗಳಲ್ಲಿ ನಿರತರಾಗಿ ತಮ್ಮ ಪ್ರಭುಗಳಾದ ಪ್ರಜೆಗಳನ್ನು ಕಡೆಗಣಿಸಿ ಮೆರೆಯುತ್ತಾರೆ. ಹಾಗಾಗಿ ಸಾಮಾಜಿಕ ವ್ಯವಸ್ಥೆ ಕುಲಗೆಟ್ಟಿದೆ. ನಮಗೆ ವಿವೇಕವಿದೆ. ಯಾವುದು ಸರಿ ಯಾವುದು ತಪ್ಪು ಎನ್ನುವ ಪರಿಜ್ಞಾನವಿದೆ. ಹಾಗಾಗಿ ಬಾಹ್ಯ ಸೆಳೆತಗಳಿಗೊಳಗಾಗದೆ, ಅಂತರಂಗದ 'ಪ್ರಭುವಿನ ಆದೇಶವೆಂಬಂತೆ,

ಅದಕ್ಕನುಗುಣವಾಗಿ, ಶುದ್ಧ, ವಿರಕ್ತ ಭಾವದಿಂದ ಬಾಳಿದರೆ ಸುಖ ದುಖಗಳ, ನೋವು ನಲಿವುಗಳ ವೃತ್ತದಿಂದ ಮುಕ್ತರಾಗಿ ನಿರ್ಲಿಪ್ತತೆಯಿಂದ ವಿರಕ್ತಿಯಿಂದ ಆನಂದವನ್ನು ಅನುಭವಿಸುತ್ತಾ ಬಾಳಬಹುದು. ಆಯ್ಕೆ ನಮ್ಮದೇ ಅಲ್ಲವೇ?





**ಮುಕ್ತಕ – 71ಸ೦**

**ಪ್ರತ್ಯಕ್ಷವಿಲ್ಲದಾ ಸ್ವಾಮಿಯಂ ನೆನೆನೆನೆದು |**

**ಸತ್ಯಭಕ್ತಿಯ ಸೇವೆಗೆಯ್ದವಂ ಭರತ |**

**ನಿತ್ಯಜೀವನದಿ ನೀನಾ ನಯವನನುಸರಿಸೋ |**

**ಸ್ವತ್ವದಾಶೆಯ ನೀಗಿ - ಮಂಕುತಿಮ್ಮ ||**

ನಯವನನುಸರಿಸೊ=ನಯವನು+ಅನುಸರಿಸೋ, ಸ್ವತ್ವದಾಶೆಯ=ಸ್ವತ್ವದ+ಆಶೆಯ

ಗೆಯ್ದವಂ= ಮಾಡಿದವನು, ಸ್ವತ್ವದ= ಸ್ವಾರ್ಥದ.

ಪ್ರತ್ಯಕ್ಷವಾಗಿ ತನ್ನ ಹಿಂದೆ ನಿಂತು ಆದೇಶಿಸಿದಿದ್ದರೂ, ರಾಮನನ್ನೇ ರಾಜನೆಂದು ನೆನೆದು ಶ್ರದ್ಧೆಯಿಂದ, ಸತ್ಯವಾದ ಭಕ್ತಿಯಿಂದ ಸೇವೆಯನ್ನು ಮಾಡಿದವನು ಭರತ. ನೀನೂ ಸಹ ನಿನ್ನ ನಿತ್ಯ ಜೀವನದಲ್ಲಿ ಸ್ವಾರ್ಥವನ್ನು ತೊರೆದು, ಭರತನಂತೆ ಜೀವಿಸು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು.

ರಾಮನ ರಾಜ್ಯವಾಳುವ ಸಮಯದಲ್ಲಿ, ರಾಮ ಎದುರಿಗೆ ಇದ್ದಿದ್ದರೆ ಎಷ್ಟು ಭಕ್ತಿ ಮತ್ತು ಶ್ರದ್ಧೆಯಿಂದ ಕರ್ತವ್ಯವನ್ನು ಹೇಗೆ ನಿರ್ವಹಿಸುತ್ತಿದ್ದನೋ, ಅವನ ಅನುಪಸ್ಥಿತಿಯಲ್ಲೂ, ಭರತ ಅಷ್ಟೇ ಆಸ್ಥೆ ಮತ್ತು ನಿಷ್ಠೆಯಿಂದ ತನ್ನ ಕರ್ತವ್ಯವನ್ನು ನಿರ್ವಸಿದ. ಹಾಗೆಯೇ ನಾವೂ ಸಹ ನಮಗೆ ಸಂದ ಕೆಲಸವನ್ನು ಕರ್ತವ್ಯವೆಂದು ಅರಿತು, ಜಗತ್ತಿನ ಬೇರೆ ಯಾರನ್ನೂ ಮೆಚ್ಚಿಸಲಿಕ್ಕಲ್ಲದೆ, ಆತ್ಮವಂಚನೆಯಿಲ್ಲದೆ, ಅಂತರಂಗದಲ್ಲಿರುವ ಆ ನಮ್ಮ ಪರಮಾತ್ಮನನ್ನು ತೃಪ್ತಿಪಡಿಸುವ ರೀತಿಯಲ್ಲಿ ಕರ್ತವ್ಯವನ್ನು ನಿರ್ವಹಿಸಬೇಕು ಎನ್ನುವುದು ಈ ಮುಕ್ತಕದ ಆಶಯ. ನಮಗೆ ಒಂದು ಬದುಕನ್ನು ಕೊಟ್ಟ ಆ ಪರಮಾತ್ಮನ ಕಣ್ ತಪ್ಪಿಸಿ ಯಾವ ಕೆಲಸವನ್ನೂ ಮಾಡಲಾಗದು. ಹಾಗಾಗಿ ನಾ ಮಾಡುವ 'ಕುಕಾರ್ಯ' ಯಾರಿಗೂ ಗೊತ್ತಾಗುವುದಿಲ್ಲ ಅಥವಾ ನಾ ಮಾಡಬೇಕಾದದ್ದನ್ನು ಮಾಡದೆ ಇದ್ದರೂ ಯಾರಿಗೂ ಗೊತ್ತಾಗುವುದಿಲ್ಲ ಎಂಬ ಭ್ರಮೆಯಿಂದ ಹೊರಗೆ ಬಾ ಎನ್ನುವ ಆದೇಶವೂ ಸಹ ಈ ಮುಕ್ತಕದ ಆಶಯವಾಗಿದೆ.

ಕನಕರಿಗೆ ಬಾಲ್ಯದಲ್ಲಿ ಅವರ ಗುರುಗಳು 'ಯಾರೂ ನೋಡದ ಸ್ಥಳದಲ್ಲಿ ಒಂದು ಬಾಳೆ ಹಣ್ಣನ್ನು ತಿಂದು, ಬಾ' ಎಂದು ಹೇಳಿ ಮರುದಿನ 'ಎಲ್ಲಿ ತಿಂದೆ' ಎಂದು ವಿಚಾರಿಸಿದಾಗ 'ತಿನ್ನಲಾಗಲಿಲ್ಲ. ಆ ಪರಮಾತ್ಮ ನೋಡಲಾಗದ ಸ್ಥಳವೇ ನನಗೆ ಸಿಗಲಿಲ್ಲ' ಎಂದರಂತೆ ಆ ಪುಣ್ಯಾತ್ಮ, ಅದು ಜ್ಞಾನ. ಅದನ್ನು ಅನುಸರಿಸಿದಾಗ ನಾವು ಮಾಡಬೇಕಾದ ಕರ್ತವ್ಯವನ್ನು ಬಿಡುವುದಾಗಲೀ ಅಥವಾ ಮಾಡಬೇಕಾದ್ದನ್ನು ಮಾಡದೆ ಇರುವುದಾಗಲೀ ಅಥವಾ ಮಾಡಬೇಕಾದ ಕರ್ತವ್ಯವನ್ನು ಬಿಟ್ಟು ಮಾಡಬಾರದ ಪಾಪವನ್ನು ಮಾಡುವುದಾಗಲೀ ಸಾಧ್ಯವೇ ಇಲ್ಲ ಅಲ್ಲವೇ? ನಮ್ಮ ನಮ್ಮ ಕೆಲಸಗಳನ್ನು ಮಾಡುವಾಗ 'ಇದು ನನಗೆ ಪರಮಾತ್ಮ ಕಲ್ಪಿಸಿದ ಸೇವಾ ಅವಕಾಶ' ಎಂದು ಬಗೆದು ಮಾಡಿದರೆ ಆ ಕೆಲಸಮಾಡುವ ಸಮರ್ಪಕತೆ ಮತ್ತು ಅದರ ಫಲಿತಾಂಶ ಅತ್ಯುತ್ತಮವಾಗಿರುತ್ತದೆ. ಸ್ವಾರ್ಥಕ್ಕೆ ಫಲಾಪೇಕ್ಷೆಯಿಲ್ಲದೆ ನಮ್ಮ ಕರ್ತವ್ಯವನ್ನು ಮಾಡವಂತಹ ಮನೋಭಾವವನ್ನು ನಾವು ಬೆಳೆಸಿಕೊಂಡರೆ ಆಗ ಆ ಕರ್ತವ್ಯವನ್ನು ಸೇವೆ'ಯಂತೆ ಮಾಡಲು ಸಾಧ್ಯ. ಹಾಗಾಗಿ ಮೊದಲು ಸ್ವಾರ್ಥ ಬಿಡಬೇಕು.

ನಮ್ಮ ಊರಿನ ವಿಧಾನಸೌಧದಲ್ಲಿ ಸರ್ಕಾರದ ಕೆಲಸ ದೇವರ ಕೆಲಸ' ಎಂದು ಕೆತ್ತಲ್ಪಟ್ಟಿದೆ. ಆದರೆ ನಿಜವಾಗಿ ಆ ಸರ್ಕಾರವನ್ನು ನಡೆಸುವವರಾಗಲೀ, ಸರಕಾರೀ ಅಧಿಕಾರಿ, ನೌಕರರ ವರ್ಗಗಳಾಗಲೀ ಆ ಮಾತನ್ನು ಪಾಲಿಸುತ್ತಿವೆಯೇ ಎಂದು ನೋಡಿದರೆ ನಮಗೆ 'ಸಂಪೂರ್ಣ' ನಿರಾಶೆಯೇ ಕಟ್ಟಿಟ್ಟ ಬುತ್ತಿ. ನಮ್ಮ ಪೂರ್ವಜರಲ್ಲಿ ಬಹುಪಾಲು ಜನರಲ್ಲಿ ಆ ಭಾವ ಒಂದು ಧರ್ಮವಾಗಿ ನೆಲೆಯೂರಿತ್ತು. ಇಂದಿನ ಸಮಾಜದಲ್ಲಿ ಅಂತಹವರು ಹುಡುಕಿದರೂ ಸಿಗುವುದಿಲ್ಲ. "ಕಾಲ ಕೆಟ್ಟು ಹೋಯ್ತು" ಎಂದು ಉದ್ಗಾರ ತೆಗೆಯುವವರನ್ನು ನಾವು ನೋಡುತ್ತೇವೆ. ಆದರೆ ಕೆಟ್ಟಿರುವುದು ಕಾಲವಲ್ಲ, ಮನುಷ್ಯನ ಬುದ್ಧಿ ಮತ್ತು ಭಾವನೆ. ಒಂದು ಕಾಲಕ್ಕೆ ನಿರ್ಲಿಪ್ತ, ನಿಸ್ವಾರ್ಥ, ವಿರಕ್ತ, ನಿರಪೇಕ್ಷವಾಗಿ ಕರ್ತವ್ಯವನ್ನು ಮಾಡಿ ಅದರಿಂದ ಬಂದ ಫಲವನ್ನು ಪರಮಾತ್ಮನ ಪ್ರಸಾದ ಎಂದು ಸ್ವೀಕರಿಸುತ್ತಿದ್ದರು. ಆದರೆ ಇಂದು ಎಲ್ಲವೂ ತದ್ವಿರುದ್ಧವಾಗಿ ನಡೆಯುತ್ತಿದೆ. ಮನುಷ್ಯನ ಮನೋಭಾವ ಬದಲಾಗದ ಹೊರತು ಸಮಾಜ ಬದಲಾಗಲು ಸಾಧ್ಯವಿಲ್ಲ. ಆ ಬದಲಾವಣೆ ನಮ್ಮಿಂದಲೇ ಮೊದಲಾಗಬೇಕು ಎಂದು ಎಲ್ಲರೂ ಅರಿತಾಗ, ಆಗ 'ಸುರಾಜ್ಯ' ದ ಕಲ್ಪನೆ ಸಾಕಾರವಾದೀತು.

**ಮುಕ್ತಕ - 711**

**ಧರೆಯೆ ಕೋಸಲ, ಪರಬ್ರಹ್ಮನೆ ರಘುವರನು |**
**ಭರತನವೊಲನುಪಾಲನಕ್ರಿಯರು ನಾವು ||**
**ಅರಸನೂಳಿಗ ನಮ್ಮ ಸಂಸಾರದಾಡಳಿತ |**
**ಹರುಷದಿಂ ಸೇವಿಸಿ - ಮಂಕುತಿಮ್ಮ ||**

ಭರತನವೊಲನುಪಾಲನಕ್ರಿಯರು=ಭರತನ+ವೊಲು+ಅನುಪಾಲನಕ್ರಿಯರು, ಅರಸನೂಳಿಗ=
ಅರಸನ+ಊಳಿಗ, ಸಂಸಾರದಾಡಳಿತ=ಸಂಸಾರದ+ಆಡಳಿತ,
ಭರತನವೊಲು=ಭರತನಂತೆ, ಅನುಪಾಲನಕ್ರಿಯರು=ಆಜ್ಞೆಯನ್ನು ಪಾಲಿಸುವ ಕೆಲಸದವರು,
ಹರುಷದಿಂ=ಆನಂದದಿಂದ.

ಈ ಜಗತ್ತೇ ಕೋಸಲ ದೇಶದಂತೆ, ಆ ರಘುವರನೇ ಪರಮಾತ್ಮನೆಂಬಂತೆ ರಾಮನ ಆಜ್ಞೆಯನ್ನು ಪಾಲಿಸುವವನಂತೆ ರಾಜ್ಯವಾಳಿದ ಭರತನಂತೆ ನಾವು ಈ ಸೃಷ್ಟಿಯ ಅರಸನಾದ ಆ ಪರಮಾತ್ಮನ ರಾಜ್ಯವಾದ ಈ

ಜಗತ್ತಿನಲ್ಲಿ ಅವನು ರೂಪಿಸಿರುವ ನಿಯಮಗಳಂತೆ ನಮ್ಮ ಜೀವನವನ್ನು ಹರುಷದಿಂದ ನಡೆಸಬೇಕು ಎಂದು ಬದುಕಿನ ಸುಲಭ ಆದರೂ ಸಂತೋಷದಾಯಕವಾದ ವಿಧಾನವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತೇ ಆ ಪರಮಾತ್ಮನ ರಾಜ್ಯ. ಅದರಲ್ಲಿ ಒಂದು ಅಂಗ ಭೂಮಿ. ಆ ಭೂಮಿಯ ನಿವಾಸಿಗಳು ನಾವು. ಇಲ್ಲಿ ಬದುಕುವುದಕ್ಕೆ ಒಂದು ನಿಯಮವಿದೆ. ಅದಕ್ಕೆ ಆಧಾರವೇ ಆ ಪರತತ್ವ ರೂಪಿಸಿದ ವಿಧಾನ. 'ಈಶಾವಾಸ್ಯಮಿದಂ





ಸರ್ವಂ ಯತ್ಕಿನ್ದಿತಜಗತ್ಯಾಂ ಜಗತ್ ತೇನ ತ್ಯಕ್ತನ ಭುಞ್ಜೀತಾ ಮಾ ಗೃಧಃ ಕಸ್ಯಸ್ವಿದ್ಧನಂ॥ 'ಈ ಜಗತ್ತೆಲ್ಲಾ ಈಶ್ವರನಿಂದ ವ್ಯಾಪಿಸಲ್ಪಟ್ಟಿದೆ. ಪರಮಾತ್ಮನು ಸರ್ವಾಂತರ್ಯಾಮಿ ಮತ್ತು ಅವನ ಅಧಿಕಾರವೇ ಸರ್ವವ್ಯಾಪಕವಾಗಿದೆ. ಅನ್ಯರ ವಸ್ತುವಿಗೆ ಆಸೆಪಡದೆ ತ್ಯಾಗದಿಂದ ಅನುಭವಿಸು, ಎಂದು ಹೇಳುತ್ತದೆ. ಈಶಾವಾಸ್ಯೋಪನಿಷತ್ತು(ಯಜುರ್ವೇದ-ಅ-4ಸಂ-ಮಂತ್ರ) ತ್ಯಾಗಮಾಡಿದಮೇಲೆ ಅನುಭವಿಸುವುದೇನನ್ನು? ಎನ್ನುವ ಪ್ರಶ್ನೆ ಬರುತ್ತದೆ 'ತ್ಯಾಗೇನೈಕೇ ಅಮೃತತ್ವಮಾನರುಃ ತ್ಯಾಗಮಾಡಿದ ಮೇಲೆ ಉಳಿಯುವ ಭಾವವೇ ಅಮೃತ. ಏಕೆಂದರೆ ಕೊಡುವುದರಲ್ಲಿರುವ ಸುಖ ಪಡೆಯುವುದರಲ್ಲಿ ಇಲ್ಲ. ಆ ಸುಖವೇ ಅಮೃತ.

ಹೀಗೆ ಹಲವಾರು ದೃಷ್ಟಾಂತಗಳಿಂದ ನಮಗೆ ಬದುಕನ್ನು ಹೇಗೆ ಬದುಕಬೇಕು ಎನ್ನುವುದನ್ನು ನಮ್ಮ ಋಷಿಮುನಿಗಳು ರೂಪಿಸಿಕೊಟ್ಟಿದ್ದಾರೆ. ಅದೇ 'ಋಜು' ಮಾರ್ಗ, ಅದರಲ್ಲಿ ನಡೆಯುವುದೇ ನಮ್ಮ ಕರ್ತವ್ಯ ಮತ್ತು ಧರ್ಮ, ಆ 'ಪರತತ್ವ ರೂಪಿಸಿದ ಬದುಕಿನ ಮಾರ್ಗವನ್ನು ಅನುಸರಿಸಿ ಹರುಷದಿಂದ ಈ ಜಗತ್ತನ್ನು ಸೇವಿಸಬೇಕು. ಈ

ಪ್ರಪಂಚವೆಲ್ಲ ಪರಮಾತ್ಮನಿಂದ ವ್ಯಾಪಿಸಿದೆ ಎಂದು ನಂಬಿ ಎಲ್ಲೆಡೆಯಲ್ಲೂ ಆ ಪರತತ್ವದ ಕ್ರಿಯೆಯನ್ನು ಕಂಡು ಸ್ವಾರ್ಥವನ್ನು ಬಿಟ್ಟು ಬದುಕಬೇಕು. ಒಂದು ಆಟದ ಪಂದ್ಯವಿದೆ ಎಂದಿಟ್ಟುಕೊಳ್ಳಿ. ನಾವು ಪಂದ್ಯವನ್ನು ವೀಕ್ಷಿಸಹೋದವರು ಯಾವುದಾದರೂ ಒಂದು ಗುಂಪನ್ನು ಬೆಂಬಲಿಸಿ ಆಟವನ್ನು ನೋಡದೆ 'ತಟಸ್ಥ'ರಾಗಿ ಕೇವಲ ಆಟವನ್ನು ವೀಕ್ಷಿಸಿ ಆನಂದಪಟ್ಟರೆ ನಮಗಾಗುವ ಆನಂದದಲ್ಲಿ ಎಷ್ಟೊಂದು ವ್ಯತ್ಯಾಸವಿದೆ ಎಂಬುದನ್ನು ನೋಡಿದಾಗ, ಯಾವುದಕ್ಕೂ ಅಂಟದೆ ಈ ಜಗತ್ತಿನ ಆಟದಲ್ಲಿ ಪಾಲ್ಗೊಂಡರೆ ಎಷ್ಟು ಸುಖ ಎನ್ನುವುದು ಅರ್ಥವಾಗುತ್ತದೆ. ಇದೇ 'ತ್ಯಾಗೇನೈಕೇ ಅಮೃತತ್ವಮಾನಶು:'ದ ತತ್ವ, ನಮ್ಮ ನಂಟನ್ನು ತ್ಯಾಗ ಮಾಡಿದರೆ ಉಳಿಯುವುದೇ ಅಮೃತ ಎನ್ನುವ ತತ್ವ.

ಈ ರೀತಿ ಬದುಕನ್ನು, ಬದುಕಿನ ಯಾವುದೇ ವಿಷಯಕ್ಕೆ ಅಂಟಿಕೊಳ್ಳದೆ, ಕೇವಲ ಪರತತ್ವ ರೂಪಿಸಿದ ವಿಧಾನದಲ್ಲಿ ಬದುಕಿದರೆ ಸುಖ, ಹೌದು!! ಜಗತ್ತಿನ ಇಷ್ಟೊಂದು ಪ್ರಲೋಭನೆಗಳಲ್ಲಿ, ಇಂದ್ರಿಯ ಪ್ರಚೋದಿತವಾದ ನಮ್ಮ ಸ್ವಭಾವದಲ್ಲಿ ಎಲ್ಲವನ್ನೂ ತ್ಯಾಗಮಾಡಿ ಹಾಗೆ ಬದುಕುವುದು ಕಷ್ಟವಲ್ಲವೇ ಎಂದರೆ? ಖಂಡಿತ ಹೌದು. ಅದಕ್ಕೆ ಪ್ರಾಮಾಣಿಕ ಪ್ರಯತ್ನ ಬೇಕು ದೃಢವಾದ ಇಚ್ಛೆ ಬೇಕು. 'ಪಂಡಿತಾಃ ಸಮದರ್ಶಿನಃ' ಎಂದು ಗೀತೆ ಹೇಳುವಂತೆ ಸಕಲರಲ್ಲೂ ಆ ಪರಮಾತ್ಮನನ್ನೇ ಕಾಣುವ ಮನೋಭಾವ ಬೆಳೆಸಿಕೊಂಡರೆ, ನಮ್ಮೊಳಗೆ ಪರತತ್ವದ ಭಾವ ನೆಲೆಯೂರಿ ನಿಂತಾಗ ನಾವೂ ಸಹ ಭರತ ರಾಮನ ರಾಜ್ಯವಾಳಿದಂತೆ ಈ ಜಗತ್ತಿನಲ್ಲಿ ಬದುಕಿ 'ಮುಕ್ತ'ರಾಗಬಹುದು.





**ಮುಕ್ತಕ - 712**

**ನಾಸಿಕದೊಳುಚ್ಛ್ವಾಸ ನಿಶ್ವಾಸ ನಡೆವಂತೆ।**
**ಸೂಸುತ್ತಲಿರಲಿ ನಿನ್ನಿರವು ಮಂಗಳವ**
**ಆಶಿಸದೆ ಸಂಕಲ್ಪಯತ್ನಗಳನಿನಿತುಮಂ।**
**ಸಾಜವಾಗಲಿ ಸಯ್ಪು - ಮಂಕುತಿಮ್ಮ॥**

ನಾಸಿಕದೊಳುಚ್ಛ್ವಾಸ=ನಾಸಿಕದೊಳು+ಉಚ್ಛ್ವಾಸ, ಸೂಸುತ್ತಲಿರಲಿ=ಸೂಸುತ್ತ+ಇರಲಿ, ನಿನ್ನಿರವು=ನಿನ್ನ+ಇರವು,
ಸಂಕಲ್ಪಯತ್ನಗಳನಿನಿತುಮಂ=ಸಂಕಲ್ಪ+ಯತ್ನಗಳನು+ +ಇನಿತುಮುಂ,
ಸಾಜವಾಗಲಿ= ಸಹಜವಾಗಲಿ, ಸಯು= ಸರಿಯಾದ ಕೆಲಸ.

ಉಸಿರಾಡುವುದನ್ನು ನೀನು ಎಷ್ಟು ಸಹಜವಾಗಿ ಮಾಡುತ್ತೀಯೊ ಅಷ್ಟೇ ಸಹಜತೆಯಿಂದ ನಿನ್ನಿಂದ ಮಂಗಳಕರವಾದ ಕೆಲಸಗಳು ನಡೆಯಲಿ ಮತ್ತು ಅಂತಹ ಕೆಲಸಗಳನ್ನು ಮಾಡಲು ವಿಶೇಷವಾದ ಸಂಕಲ್ಪದ ಅಥವಾ ಪ್ರಯತ್ನದ ಅವಶ್ಯಕತೆಯಿಲ್ಲದೆ, ಸಹಜವಾಗಿ ಸೂಕ್ತ ಕೆಲಸ ಆಗಲಿ ಎಂದು ಸಹಜ ಬದುಕಿನ ಸೂತ್ರವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಹಜತೆಯಲ್ಲಿ ಬದುಕುವುದು ಬಹಳ ಕಷ್ಟ. ಏಕೆಂದರೆ ನಮಗೆ ಸಹಜತೆ ಎಂದರೆ ಏನೆಂದು ಗೊತ್ತೇ ಇಲ್ಲ. ಸದಾಕಾಲ ಯಾವುದಾದರೊಂದು ರೀತಿಯ ಭಾವದ ಲೇಪ'ವನ್ನು ಹಚ್ಚಿಕೊಂಡೇ ಆಲೋಚಿಸುವ ನಮಗೆ ಸಹಜತೆಯೆಂದರೆ ಏನು? ಎಂದು ಅರಿವಾಗಲು ಸಾಧ್ಯವೇ ಇಲ್ಲ. ಮಮತೆಯ, ಸ್ವಾರ್ಥದ, ಕರುಣೆಯ, ಸ್ನೇಹದ, ಕೋಪದ, ದ್ವೇಷದ ಅಥವಾ ಇಂತಹ ಹಲವಾರು ರೀತಿಯ ಭಾವನೆಗಳ ಲೇಪವನ್ನು ಬಳಿದುಕೊಂಡು ಆಲೋಚಿಸಿ, ಅಂತಹ ಭಾವಗಳ ಪ್ರಚೋದನೆಯಿಂದ ವರ್ತಿಸುವ ನಾವು, ಅಂತಹ ಕರ್ಮದಿಂದ ಅದಕ್ಕೆ ಅನುರೂಪವಾದ ಫಲವನ್ನೇ ಪಡೆಯುತ್ತೇವೆ ಅಲ್ಲವೇ? ಅಂತಹ ಫಲಗಳು ಸಾರ್ವಜನಿಕವಾಗಿ ಎಲ್ಲರಿಗೂ ಮಂಗಳಕರವಾಗಿರುವುದಿಲ್ಲ

ಯಾವುದು ಹೇಗಿದ್ದರೆ 'ಹಾಗೇ' ಅರ್ಥಮಾಡಿಕೊಂಡು, ಸ್ವೀಕರಿಸಿ, ಒಪ್ಪಿಕೊಂಡು ನಿರ್ವಿಕಾರದಿಂದ, ನಿರ್ಮಮತೆಯಿಂದ ಕೈಗೆತ್ತಿಕೊಂಡ ಕೆಲಸವನ್ನು, ನಾವು ಮಾಡುವ ಕೆಲಸದಿಂದ ನಮಗೆ ಮಾತ್ರ ಒಳಿತಾಗಲೆಂದು ಯೋಚಿಸದೆ, ಸರ್ವಹಿತಕ್ಕಾಗಿ ಮಾಡುವುದೇ ಸಹಜತೆ. 'ಎಲ್ಲರೊಳಗೆ ನಾನೂ ಒಬ್ಬ, ಹಾಗಾಗಿ ಎಲ್ಲರಿಗೂ ಒಳಿತಾದರೆ, ನನಗೂ ಒಳಿತಾಗುವುದಲ್ಲವೇ' ಎನ್ನುವ ಭಾವವಿದ್ದರೆ ನಮ್ಮ ಕೆಲಸಗಳೂ ಸುಸೂತ್ರವಾಗಿ ಆಗುತ್ತವೆ. ಹಾಗಲ್ಲದೆ ಸ್ವಾರ್ಥದಿಂದ ಮಾಡುವ ಕೆಲಸಗಳಿಗೆ ಸಹಜವಾಗಿ ಪ್ರತಿರೋಧವಿದ್ದು, ತಕ್ಷಣಕ್ಕೆ ನಮಗೆ ಹಿತವಾದರೂ ಧೀರ್ಘ ಕಾಲದ ಹಿತವನ್ನು ತರುವುದಿಲ್ಲ.

ಯಾವುದಾದರೂ ಕೆಲಸ ಸಮರ್ಪಕವಾಗಿ ಆಗಬೇಕಾದರೆ ಪೂರ್ವ ಯೋಜನೆ ಇರಬೇಕು. ಒಂದು ಬಾರಿ ಎಲ್ಲ ಕೋನಗಳಲ್ಲಿಯೂ ಯೋಚಿಸಿ ಸಿದ್ಧಪಡಿಸಿದ ಯೋಜನೆ ಸಹಜವಾಗಿ ತನ್ನಷ್ಟಕ್ಕೆ ತಾನೇ ಮುನ್ನಡೆಯುತ್ತದೆ. ಆದರೆ ನಾವು ಆ ಕೆಲಸ "ಹೇಗಾಗುತ್ತದೋ? ಏನಾಗುತ್ತದೋ? ಹಾಗಾಗದಿದ್ದರೆ? ಹಾಗಾಗಿಬಿಟ್ಟರೆ!!" ಎಂಬ ಅನೇಕಾನೇಕ ಅಪ್ರಯೋಜಕ ಆಲೋಚನೆಗಳನ್ನು ಮಾಡುತ್ತಾ ಆ ಕಾರ್ಯದ ಫಲದ ಬಗ್ಗೆ ತೀವ್ರವಾಗಿ ಚಿಂತಿಸಿ ನರಳುತ್ತೇವೆ. ಇದೇ ರೀತಿ ಬೇರೆ ಬೇರೆ ಕೆಲಸಗಳನ್ನು ಮಾಡುವ ಎಲ್ಲರ ಮನಃಸ್ಥಿತಿಯೂ ಇರುವುದರಿಂದಲೇ ಸಮಾಜದ ಮಾನಸಿಕ ಸ್ವಾಸ್ಥ್ಯ ಇಂದು ಹದಗೆಟ್ಟಿರುವುದು. ಹಾಗಾಗಿ ಸಹಜವಾಗಿ ಯೋಚಿಸುವ, ಯೋಜಿಸುವ, ಕ್ರಿಯಾಶೀಲರಾಗುವ ಮತ್ತು ಆ ಕ್ರಿಯೆಯಿಂದ ಬರುವ ಫಲಾಫಲಗಳ ಬಗ್ಗೆ ಚಿಂತೆಯನ್ನು ಬಿಡುವ ಪ್ರವೃತ್ತಿ ನಮಗುಂಟಾದರೆ ನಮ್ಮೊಂದಿಗಾಗುವುದೆಲ್ಲವೂ ಮಂಗಳಕರವಾಗಿಯೇ ಆಗುತ್ತದೆ. ನಮ್ಮ ಬದುಕೂ ಸಹ, ನಮ್ಮ ಬದುಕಿಗೆ ಆಧಾರವಾದ ನಮ್ಮ ಉಸಿರಾಡುವಿಕೆಯಷ್ಟೇ ಸಹಜವಾಗಿದ್ದರೆ ಒಳಿತು ಎಂಬುದೇ ಈ ಮುಕ್ತಕದ ಆಂತರ್ಯ. ಆದರೆ ಸಹಜತೆ ಎನ್ನುವುದು ಅವರವರ ಪರಿಭಾಷೆಗೆ ಮತ್ತು ಊಹೆಗೆ ಬಿಟ್ಟದ್ದಲ್ಲವೇ?

**ಮುಕ್ತಕ 713**

**ಕಾಯಕವ ಚರಿಪುದಾತ್ಮಜುಗುಪ್ಸೆಗೆಡೆಗುಡದೆ |**

**ಆಯತದ ಲೋಕಧರ್ಮಗಳ ಪಾಲಿಪುದು ||**

**ಆಯತಿಗೆ ಬಾಯ್ಬಿಡದೆ ಗತವ ಚಿಂತಿಸದಿಹುದು |**

**ಧ್ಯೈಯವೀ ಸೂತ್ರಗಳು – ಮಂಕುತಿಮ್ಮ ||**

ಚರಿಪುದಾತ್ಮಜುಗುಪ್ಸೆಗೆಡೆಗುಡದೆ=ಚರಿಪುದು+ಆತ್ಮ+ಜುಗುಪ್ಸೆಗೆ+ಎಡೆ+ಗುಡದೆ, ಬಾಯ್ದಿಡದೆ=ಬಾಯಿ+ಬಿಡದೆ,

ಧ್ಯೇಯವೀ= ಧ್ಯೇಯವು+ಈ

ಆಯತ= ವಿಸ್ತಾರ, ಆಯತಿ=ಮುಂದೆ ಆಗಬೇಕಾದ, ಗತವ =ಕಳೆದುಹೋದ ಸಮಯದ,

'ಆತ್ಮ' ನೊಂದುಕೊಳ್ಳದ ರೀತಿಯಲ್ಲಿ ಕಾಯಕವನ್ನು ಮಾಡುವುದು, ನಮ್ಮ ಪೂರ್ವಜರಿಂದ ವಿಸ್ತಾರವಾಗಿ ನಿರ್ಧರಿಸಲ್ಪಟ್ಟ, ಲೋಕಧರ್ಮವನ್ನು ಪಾಲಿಸುವುದು, ನಮ್ಮ ಕಾಯಕದಿಂದ ಮುಂದೆ ಬರುವ ಫಲಕ್ಕೆ ಬಾಯಿಬಿಟ್ಟು ಕಾಯದೆ, ಹಿಂದೆ ನಡೆದ ಘಟನೆಗಳಿಗಾಗಿ ಚಿಂತೆ ಮಾಡದೆ ಇರುವುದೇ ಬದುಕಿನಲ್ಲಿ ನಾವು ಒಂದು ಧೈಯದಂತೆ ಪಾಲಿಸಬೇಕಾದ ಸೂತ್ರಗಳು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ನಮಗೆ ನಾವೇ ಹಿಂಸೆ ಮಾಡಿಕೊಳ್ಳದ ರೀತಿಯಲ್ಲಿ ನಮ್ಮ ಕೆಲಸ ಕಾರ್ಯಗಳಿರಬೇಕು ಅಲ್ಲವೇ? ಇಲ್ಲಿ ' ಹಿಂಸೆ' ಎನ್ನುವುದು 'ತಾತ್ಕಾಲಿಕ' ವಾದ ಅಂದರೆಈಗ ನಾವು ಮಾಡುವ ಕಾರ್ಯದಿಂದ ಆಗಲೇ ಸಿಗುವ ಫಲದಿಂದ ಬರುವ ಹಿಂಸೆಯಷ್ಟೇ ಅಲ್ಲ. ಇಂದು ನಾವು ಮಾಡುವ ಕಾರ್ಯದ ಪರಿಣಾಮವಾಗಿ ನಮಗೆ ಎಂದೂ ಹಿಂಸೆಯಾಗದ ರೀತಿಯಲ್ಲಿ ನಮ್ಮ ಕೆಲಸ ಕಾರ್ಯಗಳಾಗಬೇಕು ಎನ್ನುವುದೇ ಇಲ್ಲಿನ ಆಂತರ್ಯ. ಇವತ್ತು





ಮಾಡಿದ ಒಂದು ಕೆಲಸದಿಂದ ತುಂಬಾ ಸುಖ ಸಂತೋಷವೆಲ್ಲಾ ಆಗಿರಬಹುದು. ಆದರೆ ನಿಯತಿಯ ಪ್ರಕಾರ ಎಂದೋ ಒಂದು ದಿನ ಅದು ನಮಗೆ ಹಿಂಸೆಗೆ ಕಾರಣವಾಗಬಹುದು. ಅಂತಹ ಉದಾಹರಣೆಗಳನ್ನು ನಾವು ಇಂದಿನ ಸಾಮಾಜಿಕ ಜೀವನದಲ್ಲಿ ಬಹಳಷ್ಟು ಕಾಣುತ್ತಿದ್ದೇವಲ್ಲವೇ? ಹಾಗಾಗಿ ನಮ್ಮನ್ನು ಇಂದಾಗಲೀ ಅಥವಾ ಮುಂದೆಂದಾಗಲೀ ಹಿಂಸಿಸುವಂತಹ ಪರಿಣಾಮಗಳನ್ನು ಕೊಡಬಹುದಾದ ಕೆಲಸಗಳನ್ನು ನಾವು ಮಾಡಬಾರದು.

ಸರಿ ಅಂತಹ ಕೆಲಸಗಳನ್ನು ಮಾತ್ರ ಅಥವಾ ಆ ರೀತಿಯಲ್ಲಿಯೇ ನಮ್ಮ ಕೆಲಸಗಳನ್ನು ಮಾಡಬೇಕಾದರೆ ಏನು ಮಾಡಬೇಕು? ಎಂದರೆ, ಅದಕ್ಕೊಂದು ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು. ನಮ್ಮ ಋಷಿಮುನಿಗಳು ತಮ್ಮ ಜ್ಞಾನದಿಂದ ಮತ್ತು ನಮ್ಮ ಪೂರ್ವಜರು ತಮ್ಮ ಜೀವನಾನುಭವದಿಂದ ವಿಸ್ತಾರವಾಗಿ ಪಾಲಿಸಲೇಬೇಕಾದ ಧರ್ಮವನ್ನು ತಿಳಿಸಿದ್ದಾರೆ. ಆ ಧರ್ಮವನ್ನು ಪಾಲಿಸಲು ಇರುವ ಮಾರ್ಗಗಳನ್ನು ಅನುಸರಿಸಿದರೆ, ನಾವು ಎಂದೂ ವ್ಯಸನ ಮತ್ತು ಹಿಂಸೆ ಪಡಬೇಕಾಗುವ ಕೆಲಸಗಳು ನಮ್ಮಿಂದ ಆಗುವುದಿಲ್ಲ. ಇದಕ್ಕೆ ಒಂದು ಸುಲಭವಾದ ಸೂತ್ರವೆಂದರೆ, ನಾವು ಮಾಡಿದ ಅಥವಾ ಮುಂದೆ ಮಾಡುವ ಕೆಲಸಗಳಿಂದ ಬರಬಹುದಾದ ಫಲದ ಬಗ್ಗೆ ಅತಿಯಾದ

ಆಸೆಯನ್ನಿಟ್ಟುಕೊಳ್ಳದೆ ಅಥವಾ ಹಿಂದೆ ಗತಿಸಿಹೋದ ವಿಷಯಗಳ ಕುರಿತು ಅತಿಯಾದ ಚಿಂತೆ ಮಾಡದೆ ಸಹಜವಾಗಿ ಬದುಕಿದರೆ ನಮ್ಮ ಕೆಲಸಗಳೂ ಸಹಜವಾಗಿರುತ್ತದೆ. ಯಾವುದೇ ಅಪೇಕ್ಷೆ ಇಲ್ಲದೆ ಮಾಡುವ ಸಹಜವಾದ ಕೆಲಸಗಳಿಂದ ಬರುವ ಫಲಗಳಿಂದ ನಮಗೆ ಸಂತೋಷ ಅಥವಾ ದುಃಖವಾಗುವುದಿಲ್ಲ. ಹಾಗಾಗಿ ಆತ್ಮಕ್ಕೆ ಹಿಂಸೆಯಾಗುವುದಿಲ್ಲ. ಇವು ಸಮಾಧಾನದ ಮತ್ತು ನೆಮ್ಮದಿಯ ಬದುಕಿಗೆ ಇರುವ ಸುಲಭ ಸೂತ್ರಗಳು.

"ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ನಾವು ಕೇವಲ ಅಂತಹುದೇ ಕೆಲಸಗಳನ್ನು ಮಾಡಲು ಸಾಧ್ಯವೇ? ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡಲು ಸಾಧ್ಯವೇ? ಹಿಂದೆ ನಡೆದ ಘಟನೆಗಳನ್ನು ಸಂಪೂರ್ಣ ಮರೆಯಲು ಸಾಧ್ಯವೇ?" ಎಂದರೆ ಸಾಧ್ಯ ಮತ್ತು ಸಾಧ್ಯವಿಲ್ಲ ಎಂದು ಹೇಳಬಹುದು. ಸಾಧ್ಯ, ಆದರೆ ಅದಕ್ಕೆ ದೃಢ ಮನಸ್ಸಿನಿಂದ ಪ್ರಯತ್ನಪಟ್ಟರೆ ಧೀರ್ಘ ಕಾಲದ ಸಾಧನೆಯಿಂದ, ಆತ್ಮಕ್ಕೆ ಹಿಂಸೆಯಾಗದಂತಹ ಕೆಲಸಗಳನ್ನೇ ಮಾಡುವ ಪ್ರವೃತ್ತಿಯನ್ನು ಸಾಧಿಸಬಹುದು. ಆದರೆ ಇಂದ್ರಿಯಗಳ ಮೇಲೆ ಹಿಡಿತವನ್ನು ಸಾಧಿಸಲಾಗದಿದ್ದರೆ ಅಂತಹ ಪ್ರವೃತ್ತಿಯನ್ನು ಸಾಧಿಸಲು ಆಗುವುದಿಲ್ಲ. ನಮಗೆ ಏನು ಬೇಕು ಎಂದು ನಾವೇ ನಿರ್ಧರಿಸಿದರೆ ಮತ್ತು ಅದನ್ನು ಪಡೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. ಆಯ್ಕೆ ಮತ್ತು ಸಾಧನೆ ನಮ್ಮದೇ ಅಲ್ಲವೇ?





**ಮುಕ್ತಕ - 714**

**ಪರಿಮಿತಿಯನರಿತಾಶೆ, ಪರವಶತೆಯಳಿದ ಸುಖ ।**

**ವಿರತಿಯೊಡನೆರೆದ ಲೋಕೋದ್ಯೋಗಯುಕ್ತಿ ॥**

**ಪರಿಕಿಸುತ ಜೀವಿತವ ಸತ್ಯವನೆ ಪಿಡಿವ ಮತಿ ।**

**ವರಗಳೀ ನಾಲ್ಕೆ ವರ - ಮಂಕುತಿಮ್ಮ ॥**

ಪರಿಮಿತಿಯನರಿತಾಶ=ಪರಿಮಿತಿಯನು+ಅರಿತ+ಆಶೆ, ಪರವಶತೆಯಳಿದ=ಪರವಶತೆ+ಅಳಿದ,

ವಿರತಿಯೊಡನೆರೆದ=ವಿರತಿಯೊಡ+ಎರೆದ, ಲೋಕೋದ್ಯೋಗಯುಕ್ತಿ=ಲೋಕದ+ಉದ್ಯೋಗ+ಯುಕ್ತಿ,

ವರಗಳೀ=ವರಗಳು+ಈ

ಪರವಶತೆ=ಅತೀ ಉತ್ಸಾಹ. ವಿರತಿ=ವಿರಕ್ತಿ, ಯುಕ್ತಿ=ಉಪಾಯ, ಪರಿಕಿಸುತ = ಪರೀಕ್ಷಿಸುತ, ಪಿಡಿವ=ಹಿಡಿವ, ಮತಿ=ಬುದ್ಧಿ, ವರ= ಶ್ರೇಷ್ಠ.

ನಮ್ಮ ಆಸೆಗಳ ಮಿತಿಯನ್ನು ಅರಿಯುವುದು, ಅತೀ ಉತ್ಸಾಹದ ಸುಖಾನುಭವದ ಅಪೇಕ್ಷೆಯಿಲ್ಲದಿರುವುದು, ಲೋಕದಲ್ಲಿ ನಾವು ಮಾಡುವ ಕೆಲಸಕ್ಕೆ ಅತಿಯಾಗಿ ಅಂಟಿಕೊಳ್ಳದೆ ಒಂದು ವಿರಕ್ತ ಭಾವದಿಂದಿರುವುದು ಮತ್ತು ಜೀವನದ ಪ್ರತೀ ಅನುಭವವನ್ನೂ ಪರೀಕ್ಷಿಸುತ ಅದರಲ್ಲಿನ ಸತ್ಯವನ್ನು ಕಂಡುಕೊಂಡು, ಅದರ ಸತ್ವವನ್ನು ಹಿಡಿದುಕೊಳ್ಳುವುದೇ ಆ ಪರಮಾತ್ಮ ನರನಿಗೆ ಕರುಣಿಸಿದ ಶ್ರೇಷ್ಠ ವರಗಳು ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆಸೆ ಪಡುವುದು ಮನುಷ್ಯನ ಸಹಜ ಗುಣ. ಆದರೆ ಆ ಆಸೆಗಳಿಗೆ 'ಮಿತಿ' ಯಿರದಿದ್ದರೆ, ಕಷ್ಟ, ಸಂಕಟ ಮತ್ತು ಹಿಂಸೆಗಳು ಅನಿವಾರ್ಯ. 'ಅತಿ ಆಸೆ ಗತಿಕೇಡು' ಎಂದಿಲ್ಲವೇ ನಮ್ಮ ಹಿರಿಯರು. ನಮ್ಮ ಆಸೆಗಳು ನಮ್ಮನ್ನು ಉದ್ಧರಿಸುವ ಮತ್ತು ನಮ್ಮ ಜೀವೋನ್ನತಿಗೆ ಪೂರಕವಾಗಿರಬೇಕು. ಹಾಗಾಗಿ ಅತಿಯಾದ ಆಸೆ ಒಳ್ಳೆಯದಲ್ಲ. ನಾವು ಆಸೆಯ ಮಿತಿಯನರಿಯಲಾದರೆ ಆ ಅರಿವನ್ನು ಒಂದು ವರವೆಂದೇ ಭಾವಿಸಬೇಕು. ನಾವು ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಮಾಡುವ ಪ್ರಯತ್ನಗಳು ವಿರಕ್ತಿಯಿಂದ ಕೂಡಿರಬೇಕು. ನಾವು ಪಡುವ ಆಸೆ ಫಲಿಸುವುದೋ ಇಲ್ಲವೋ ನಮಗೆ ಅರಿವಿಲ್ಲ ಮತ್ತು ಆ ಆಸೆಯ ಪೂರೈಕೆಗೆ ನಾವು ಮಾಡುತ್ತಿರುವ ಪ್ರಯತ್ನ ಸಮರ್ಪಕವಾಗಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ, ನಾವು ಪಡುವ ಆಸೆಯಿಂದ ಸಿಗುವ ಫಲ ನಮ್ಮನ್ನುದ್ಧರಿಸುವುದೋ ಅಥವಾ ಅಧೋಗತಿಗೆ ತಳ್ಳುವುದೋ ನಮಗೆ ಗೊತ್ತಿಲ್ಲ. ಹಾಗಾಗಿ ನಮ್ಮ ಪ್ರಯತ್ನಕ್ಕೆ ಸಿಗುವ ಫಲದ ಬಗ್ಗೆ ತೀವ್ರ ಆಸೆಯನ್ನಿಟ್ಟುಕೊಂಡು, ಅಕಸ್ಮಾತ್ ಅದು ಫಲಿಸಲಿಲ್ಲವೆಂದರೆ ತೀವ್ರ ಆಘಾತಕ್ಕೊಳಗಾಗಿ, ಮಾನಸಿಕ ಸ್ವಾಸ್ಥ್ಯ ಮತ್ತು ಸಮತೋಲನವನ್ನು ಕಳೆದುಕೊಳ್ಳುವುದಕ್ಕಿಂತ 'ಪ್ರಯತ್ನವನ್ನು ಮಾಡೋಣ, ಬಂದ ಫಲವನ್ನು ಸ್ವೀಕರಿಸೋಣ" ಎನ್ನುವಂತಹ ಒಂದು ವಿರಕ್ತ ಭಾವವಿದ್ದರೆ, ಸುಖ ಅಲ್ಲವೇ?

ನಮ್ಮ ಆಸೆಯ ಮಿತಿಯನ್ನು ಅರಿಯುವುದು ಮತ್ತು ಬದುಕಿನಲ್ಲಿ ಒಂದು ವಿರಕ್ತಭಾವ ಬರಬೇಕಾದರೆ ನಮಗೆ 'ಸತ್ಯದ' ಅರಿವಾಗಬೇಕು. ಆದರೆ ಸತ್ಯವೆಂದರೇನು? ಎಂದರೆ ಒಂದು ವಸ್ತು ವಿಷಯ ಅಥವಾ ವ್ಯಕ್ತಿಯ ನಿಜ

2ಸ೦

ಸ್ವರೂಪವನ್ನು ಅರಿಯುವುದೇ 'ಸತ್ಯದ' ಅರಿವು. ಉದಾ: 'ಒಂದು ವಸ್ತುವು ಕೇವಲ ತಳುಕಿನ ಲೇಪವನ್ನು ಹೊತ್ತಿದೆ, ಅದರಲ್ಲಿ ಸತ್ವವೇನೂ ಇಲ್ಲ, ಅದರ ಮೇಲ್ನೋಟಕ್ಕೆ ಕಾಣುವ ಸೊಗಸು ಅದರ ಆಂತರ್ಯದಲ್ಲಿಲ್ಲ' ಎಂದು ಅರಿತಾಗ ಆ ವಸ್ತುವಿನ ಸತ್ಯದರ್ಶನವಾಗುತ್ತದೆ. ಇದು ವ್ಯಕ್ತಿ ಮತ್ತು ವಿಷಯಗಳಿಗೂ ಅನ್ವಯವಾಗುತ್ತದೆ. ಯಾವುದನ್ನೇ ಆದರೂ ಆಮೂಲಾಗ್ರ ಪರೀಕ್ಷಿಸಿದರೆ ಮಾತ್ರ ಅದರ ಸತ್ಯದ ಮತ್ತು ಸತ್ವದ ಅರಿವಾಗುತ್ತದೆ.

ಬದುಕಿನಲ್ಲಿ ನಮಗೆ ವಿಧ ವಿಧವಾದ ಅನುಭವಗಳಾಗುತ್ತವೆ. ಅವುಗಳನ್ನು ಕೇವಲ ಅನುಭವಗಳೆಂದು ಪರಿಗಣಿಸಿ ಮರೆತರೆ, ಅದು ಮೂರ್ಖತನ, ಆ ಅನುಭವಗಳಿಂದ ಕಲಿಯಬೇಕು, ಅರಿಯಬೇಕು ಮತ್ತು ಸತ್ಯವನ್ನು ತಿಳಿಯಬೇಕು. ಹಾಗೆ ನಾವು ಅರಿತ ಸತ್ಯಗಳು ನಮ್ಮ ಜೀವನವನ್ನು ಉತ್ತಮವಾಗಿಸಿಕೊಳ್ಳಲು ಮಾರ್ಗದರ್ಶಿಗಳಾಗಬೇಕು. ನಮ್ಮ ಕ್ರಿಯೆ, ಆ ಕ್ರಿಯೆಯಿಂದಾದ ಅನುಭವ, ಅನುಭವದಿಂದ ಅರಿತ ಸತ್ಯ ಮತ್ತು ಆ ಸತ್ಯದರಿವಿನಿಂದ ಆತ್ಮೋನ್ನತಿಯಾದರೆ, ಜೀವನ ಸಾರ್ಥಕವಾಗುತ್ತದೆ. ಅಂತಹ ಪ್ರಯತ್ನ ಮತ್ತು ಅದರ ಫಲಗಳು, ಮಾನವರಾದ ನಮಗೆ ಮಾತ್ರ ಸಂದ ಶ್ರೇಷ್ಠ ವರಗಳು. ಅವುಗಳನ್ನು ಉಪಯೋಗಿಸದೆ ಕೇವಲ ಪ್ರಾಣಿಗಳಂತೆ ಬದುಕದೆ ಸಾರ್ಥಕ ಜೀವನವನ್ನು ಮಾಡಬೇಕೆನ್ನುವುದೇ ಈ ಮುಕ್ತಕದ ಆಶಯ.

**ಮುಕ್ತಕ - 715**

**ಕ್ಷಮೆ ದೋಷಿಗಳಲಿ, ಕೆಚ್ಚೆದೆ ವಿಧಿಯ ಬಿರುಬಿನಲಿ ।**

**ಸಮತೆ ನಿರ್ಮತ್ಸರತೆ ಸೋಲ್ಗೆಲುವುಗಳಲಿ ॥**

**ಶಮವ ನೀಂ ಗಳಿಸಲೀ ನಾಲ್ಕು ತಪಗಳೆ ಸಾಕು ।**

**ಭ್ರಮೆಯೊ ಮಿಕ್ಕೆಲ್ಲ ತಪ - ಮಂಕುತಿಮ್ಮ ॥**

ಸೋಲ್ಗೆಲುವುಗಳಲಿ ಸೋಲ್+ಗೆಲುವುಗಳಲ್ಲಿ,

ಬಿರುಬು= ತೀವ್ರತೆಯಿಂದ ಕೂಡಿದ ಹೊಡೆತ, ಸಮತೆ=ಸಮಾನತೆ, ಶಮ=ಅಂತರಂಗದ ಶಾಂತಿ,

ದೋಷವಿರುವರಲ್ಲಿ ಕ್ಷಮೆಯನ್ನು ತೋರುವುದು, ವಿಧಿಯ ಹೊಡೆತಗಳು ಅಧಿಕವಾದಾಗ ಧೈರ್ಯವನ್ನು ಬಿಡದೆ ಇರುವುದು, ಸೋಲು ಗೆಲುವುಗಳಲ್ಲಿ ಸಮಾನ ಮನಸ್ಕರಾಗಿರುವುದು, ಅನ್ಯರಲ್ಲಿ ಮತ್ಸರವ ತೋರದಿರುವುದು ನಮ್ಮ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಮಾಡಬೇಕಾದ ನಾಲ್ಕು ಶ್ರೇಷ್ಠತಮ ತಪಸ್ಸುಗಳು ಮತ್ತು ಮಿಕ್ಕೆಲ್ಲ ಪ್ರಯತ್ನಗಳೂ ಕೇವಲ ನಮ್ಮ ಭ್ರಮೆಯಷ್ಟೇ ಎಂದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗಡ್ಡ ಮೀಸೆಗಳ ಬಿಟ್ಟು, ಕಾವಿ ತೊಟ್ಟು, ದೇಹವನ್ನು ದಂಡಿಸಿ, ಕಾಡಿನಲ್ಲಿ ಮೂಗ ಹಿಡಿದು ಕುಳಿತುಕೊಂಡರೆ ತಪಸ್ಸಾಗುವುದಿಲ್ಲ. ಮನಸ್ಸಿನಲ್ಲಿರುವ ಹೊಲಸನ್ನು ತೊಳೆದುಕೊಂಡು ಮತ್ತು ಮುಂದೆ ಬರಬಹುದಾದ ಕಸವನ್ನು ಬರದಂತೆ ತಡೆಯುವ ಶಕ್ತಿಯನ್ನು ಪಡೆದುಕೊಳ್ಳುವುದೇ ತಪಸ್ಸು. ಅದೇ ನಿಜವಾದ ತಪಸ್ಸು ಮತ್ತು ನಮ್ಮ





ಅಂತರಂಗದ ಬೆಳವಣಿಗೆ, ನಾವು ಒಳಗಿನಿಂದ ಬೆಳೆಯಬೇಕು. ಸತ್ಯವನ್ನರಿತು ಸತ್ವದಿಂದ ಕೂಡಿ ಬೆಳೆಯಬೇಕು. ಗಟ್ಟಿಯಾಗಬೇಕು. ಹಾಗೆ ಬೆಳೆದು ಗಟ್ಟಿಯಾದರೆ, ಪೂರ್ವಾಗ್ರಹವಿಲ್ಲದೆ, ಅನ್ಯರಲ್ಲಿ ದೋಷಗಳನ್ನು ಕಾಣುವ ಪ್ರವೃತ್ತಿ ನಶಿಸುತ್ತದೆ. ಅಂತಹ ಸ್ಥಿತಿಯಲ್ಲಿ 'ಕ್ಷಮೆ'ಯೇ ನಮ್ಮ ಗುಣವಾಗಿ ಬಿಡುತ್ತದೆ. ಅದೇ ರೀತಿ ನಾವು ಬೆಳೆದರೆ ವಿಧಿಯು ತಂದೊಡ್ಡುವ ಎಂತಹುದೇ ವಿಷಮ ಪರಿಸ್ಥಿತಿಯನ್ನೂ ಇದು ನಾವೇ ಪಡೆದುಕೊಂಡು ಬಂದ ನಮ್ಮ ಪೂರ್ವ ಕರ್ಮದ ಫಲವಲ್ಲವೇ?'' ಎಂದು ಆಲೋಚಿಸಿ ಅದನ್ನು ಸಂತೋಷದಿಂದ ಅನುಭವಿಸುವ ದೃಢತೆ ಮತ್ತು ಧೈರ್ಯ ಎರಡೂ ಬರುತ್ತದೆ.

ಇನ್ನು ಬದುಕಿನಲ್ಲಿ ಸೋಲು ಗೆಲುವುಗಳು ಸಹಜ. ಆದರೆ ಬಲಹೀನ ಮನಸ್ಸುಗಳು ಸೋಲಾಗಲೀ ಗೆಲುವಾಗಲೀ ತೀವ್ರ ವಿಚಲಿತವಾಗುತ್ತವೆ. ಅದು ಆ ವ್ಯಕ್ತಿಯನ್ನಷ್ಟೇ ಅಲ್ಲದೆ ಅವನ ಸುತ್ತಲಿನವರನ್ನೂ ವಿಚಲಿತ ಗೊಳಿಸುತ್ತದೆ. ಅಂತಹ ವಿಕಾರಗಳನ್ನು ತಡೆಗಟ್ಟಲು ಒಂದೇ ಮಾರ್ಗ, 'ಮಾನಸಿಕ ದೃಢತೆ'. ಅದೂ ಸಹ ಮೇಲೆ ಹೇಳಿದ 'ತಪೋ' ಮಾರ್ಗದಲ್ಲೇ ಸಿಗುತ್ತದೆ. ಇವೆಲ್ಲ ಒಂದು ವ್ಯಕ್ತಿಯ ಒಳ-ಹೊರಗಿನ ಸಂಬಂಧವಾದರೆ ಕೊನೆಯದು

ಕೇವಲ ಅಂತರಂಗದಲ್ಲೇ ನಡೆಯುವ ಪ್ರಕ್ರಿಯೆ, ನಮ್ಮ ಮನಸ್ಸುಗಳಲ್ಲಿ ಭಾವ ತರಂಗಗಳು ಏಳುತ್ತವೆ. ಜ್ವಾಲಾಮುಖಿಗಳಂತೆ ಬುಗ್ಗೆ ಬುಗ್ಗೆಯಾಗಿ ಏಳುತ್ತವೆ. ಹೇಗೆ ಜ್ವಾಲಾಮುಖಿಗಳಿಂದ ಹೊಮ್ಮುವ ಲಾವಾರಸ ದೀರ್ಘಕಾಲಕ್ಕೆ ಸುತ್ತಲಿನ ಬಹು ಪ್ರದೇಶವನ್ನು ನಾಶ ಮಾಡುತ್ತದೆಯೋ, ನಮ್ಮ ಮನದಲ್ಲೇಳುವ ಚಿತ್ರ ವಿಚಿತ್ರ ಭಾವ ಬುಗ್ಗೆಗಳೂ ಸಹ ನಮ್ಮ ಮನಸ್ಸನ್ನು ತೀವ್ರ ಆಘಾತಕ್ಕೆ ಒಳಗಾಗಿಸುತ್ತದೆ. ಅದರಿಂದ ಪಾರಾಗಬೇಕಾದರೆ ಮನಸ್ಸು ನಿರ್ಮಲವಾಗಿರಬೇಕು, ಶಾಂತವಾಗಬೇಕು. ಹಾಗೆ ಮನಸ್ಸನ್ನು ಶಾಂತಗೊಳಿಸುವ ಪ್ರಕ್ರಿಯೆಯೇ 'ಶಮ'. ಹೊರಗಿನಿಂದ ಬರುವುದನ್ನು ತಡೆಯುವುದು ಅಥವಾ ನಿವಾರಿಸುವುದು 'ದಮ'ವಾದರೆ ಒಳಗಿನ ಶಾಂತತೆಯನ್ನು ಪಡೆಯುವುದು 'ಶಮ'.

'ಶಮ' ಮತ್ತು ' ದಮ' ಗಳನ್ನೂ ಸಾಧಿಸುವುದೇ ಮಾನ್ಯ ಗುಂಡಪ್ಪನವರು ಹೇಳಿರುವ ತಪಸ್ಸು. ಬೇರೆಲ್ಲ ಬರೀ ಭ್ರಮೆ ಎನ್ನುತ್ತಾರೆ. ಇದನ್ನು ಸಾಧಿಸುವ ಬೇರೆ ಬೇರೆ ಮಾರ್ಗಗಳನ್ನು ಹೇಳಿಕೊಡುವ ಡೋಂಗಿಗಳು 'ಬಾಬಾ, ಸ್ವಾಮೀಜಿ, ಗುರೂಜಿ " ಎಂದು ಹೆಸರಿಟ್ಟುಕೊಂಡು ನಮ್ಮನ್ನು ತಪ್ಪಾದ ದಾರಿಯಲಿ ನಡೆಸುವ ಬಹಳ ಜನ ನಮ್ಮ ಸಮಾಜದಲ್ಲಿ ಸಿಗುತ್ತಾರೆ. ಆದರೆ ನಾವು ನಮ್ಮ ಪ್ರಯತ್ನವನ್ನು ನಾವೇ ಪಡಬೇಕು. ಯಜುರ್ವೇದವು (ಯ.ವೇ. 23-15 ) 'ಸ್ವಯಂ ವಾಜಿನ್, ತನ್ನಂ ಕಲ್ಪಯಸ್ವ, ಸ್ವಯಂ ಯಜಸ್ವ, ಸ್ವಯಂ ಜುಷಸ್ವ, ಮಹಿಮಾ ತೇ ಅನೇನ ನ ಸನ್ನಶೇ' ಎಂದು ಹೇಳಿ 'ಹೇ, ಗತಿ, ಬಲ ಅಥವಾ ಶಕ್ತಿಯನ್ನು ಹೊಂದಿರುವವರೇ, ನಿಮ್ಮ ಉದ್ಧಾರದ ಮಾರ್ಗವನ್ನು ನೀವೇ ಕಲ್ಪಿಸಿಕೊಳ್ಳಿ, ಶ್ರೇಷ್ಠತಮ ಕಾರ್ಯಗಳನ್ನು ಮಾಡಿ, ಸಂತೋಷದಿಂದ ಮಾಡಿ, ಅನ್ಯರ ಸಾಧನೆಯಿಂದ ನಿಮ್ಮ ಮಹಿಮೆ ಹೆಚ್ಚುವುದಿಲ್ಲ' ಎಂದು ನಮ್ಮ ಉದ್ಧಾರ'ವನ್ನು ನಾವೇ ಹೇಗೆ ಮಾಡಿಕೊಳ್ಳಬೇಕು ಎಂದು ಆದೇಶಿಸಿದೆ. ಇದನ್ನೇ ಶ್ರೀ ಕೃಷ್ಣ ಗೀತೆಯಲ್ಲಿ 'ಉದ್ಧರೇತ್ ಆತ್ಮನಾತ್ಮಾನಂ' ಎಂದದ್ದು. ಹಾಗಾಗಿ ನಮ್ಮ ತಪಸ್ಸನ್ನು ನಾವೇ ಮಾಡಿ ಆ ತಪಸ್ಸಿನ ಫಲವನ್ನು ಪಡೆದುಕೊಂಡಾಗಲೇ ನಮ್ಮ ಜೀವನ ಸಾರ್ಥಕವಾಗುವುದು. ಅಂತಹ ಸಾರ್ಥಕತೆಯನ್ನು ಪಡೆಯಲು ಪ್ರಯತ್ನಪಡುವುದೇ ಮಾನ್ಯ ಗುಂಡಪ್ಪನವರು ಹೇಳುವ 'ತಪಸ್ಸು'. ಅದನ್ನು ಆಚರಿಸಬೇಕು.

**ಮುಕ್ತಕ - 716**

**ಮೃತನ ಸಂಸಾರಕಥೆ ಶವವಾಹಕರಿಗೇಕೆ |**

**ಸತಿಯು ಗೋಳಿಡಲಿ, ಸಾಲಿಗನು ಬೊಬ್ಬಿಡಲಿ ||**

**ಜಿತಮನದಿ ಚಿತಿಗಟ್ಟೆ ಕೊಂಡೊಯ್ಯುತಿಹರವರು |**

**ಧೃತಿಯ ತಳೆ ನೀನಂತು - ಮಂಕುತಿಮ್ಮ ||**

ಶವವಾಹಕರಿಗೇಕೆ=ಶವ+ವಾಹಕರಿಗೆ+ಏಕೆ, ಗೋಳಿಡಲಿ=ಗೋಳು+ಇಡಲಿ, ಬೊಬ್ಬಿಡಲಿ=ಬೊಬ್ಬೆ+ಇಡಲಿ, ಚಿತಿಗಟ್ಟೆ=ಚಿತಿಗೆ+ಅಟ್ಟೆ, ಕೊಂಡೊಯ್ಯುತಿಹರವರು=ಕೊಂಡು+ಒಯ್ಯುತ+ಇಹರು. ನೀನಂತು=ನೀನು+ಅಂತು. ಶವವಾಹಕ=ಹೆಣಹೊರುವವ, ಸತಿ=ಹೆಂಡತಿ, ಸಾಲಿಗ=ಸಾಲವನು ಕೊಟ್ಟವನು, ಬೊಬ್ಬಿಡಲಿ=ಕಿರುಚಾಡಲಿ, ಜಿತಮನ=ಮನಸ್ಸನ್ನು ಗೆದ್ದವರು, ಚಿತೆ=ಹೆಣಸುಡುವ ಬೆಂಕಿ, ಧೃತಿಯ=ಧೈರ್ಯವ, ತಳೆ=ಧರಿಸು ಅಂತು=ಹಾಗೆ

ಹೆಣಹೊರುವವರಿಗೆ ಸತ್ತವರ ಮನೆಯವರ ಗೋಳಿನ ಬಗ್ಗೆ ಗಮನವೇಕೆ? ಸತ್ತವನ ಹೆಂಡತಿ(ಗಂಡ) ಅಳುತ್ತಿದ್ದರೂ, ಅವನಿ(ಳಿ)ಗೆ ಸಾಲವನ್ನು ಕೊಟ್ಟವರು ಬೊಬ್ಬೆ ಹಾಕುತ್ತಿದ್ದರೂ ಅವಾವುದೂ ನಮಗೆ ಕೇಳಲೇ ಇಲ್ಲ' ಎನ್ನುವಂತೆ ಜಿತ ಮನಸ್ಕರಾಗಿ ಹೆಣವನ್ನು ಚಿತೆಗೇರಿಸುವ ಸಲುವಾಗಿ ತೆಗೆದುಕೊಂಡು ಹೋದಂತೆ, ನೀನೂ ಸಹ ಬದುಕಿನಲ್ಲಿ ಆಗುಹೋಗುಗಳಿಗೆ ತಲೆಕೆಡಿಸಿಕೊಳ್ಳದೆ ನಿರ್ಮಮತೆಯಿಂದ ಬದುಕು ಎಂದು ಬದುಕಿನಲ್ಲಿ ನಾವು ಖಡ್ಡಾಯವಾಗಿ ಅಳವಡಿಸಿಕೊಳ್ಳಲೇ ಬೇಕಾದ ವಿಚಾರವನ್ನು ಅರುಹಿದ್ದಾರೆ.

ಮರಣದ ಮನೆಯಲ್ಲಿ ಅವರ ಮನೆಯವರು, ಬಂಧುಗಳು ಅಗಲಿದವರ ನೆನೆದು ಗೋಳಿಡುತ್ತಿರುತ್ತಾರೆ. ಇನ್ನು ಅವರಿಗೆ ಸಾಲವನ್ನು ಕೊಟ್ಟವರು 'ಅಯ್ಯೋ ಇವ ಸತ್ತನಲ್ಲ, ಇನ್ನು ನಮ್ಮ ಹಣದ ಗತಿಯೇನು' ಎಂದು ಬೊಬ್ಬಿಡುತ್ತಿರುತ್ತಾರೆ. ಎಷ್ಟೋ ಬಾರಿ ಹಣ ಸಂದಾಯವಾಗುವವರೆಗೂ ಹೆಣ ಎತ್ತಲು ಬಿಡುವುದಕ್ಕೂ ತಕರಾರನ್ನೂ ಸಹ ಮಾಡುತ್ತಿರುತ್ತಾರೆ. ಆದರೆ ಇವಾವುದರ ಪರಿವೆಯೂ ಇಲ್ಲದೆ ಶವವನ್ನು ಸಾಗಿಸಲು ಬಂದವರು 'ಚಟ್ಟ ಕಟ್ಟುವುದರಲ್ಲಿ, ಪುರೋಹಿತರನ್ನು ತ್ವರೆ ಮಾಡುವುದರಲ್ಲಿ, ಮತ್ತು ಹೆಣವನ್ನು ಎಷ್ಟು ಬೇಗ ಚಿತೆಗೇರಿಸಿದರೆ ಅಷ್ಟು ಒಳ್ಳೆಯದು' ಎನ್ನುವಂತೆ ಇರುತ್ತಾರೆ. ಅವರಿಗೆ ದುಃಖವಿರುವುದಿಲ್ಲ. ಏಕೆಂದರೆ ಅವರಿಗೆ ಸತ್ತವರೊಂದಿಗೆ ಅಥವಾ ಅವರ ಮನೆಯವರೊಡನೆ ಯಾವ ಭಾವನಾತ್ಮಕವಾದ ಅಥವಾ ಮಮತೆಯ ಸಂಬಂಧವೂ ಇರುವುದಿಲ್ಲ.

ನಮ್ಮೆಲ್ಲಾ ಮಾನಸಿಕ ಚಿಂತೆ ಕಷ್ಟಗಳಿಗೆ ಈ ಮಮತೆಯೇ ಕಾರಣ. ಈ ಜಗತ್ತಿನ ವಿಷಯ, ವ್ಯಕ್ತಿ ಮತ್ತು ವಸ್ತುಗಳೊಡನೆ ನಮಗಿರುವ ನಂಟು, ನಮ್ಮನ್ನು ಸುಖಕ್ಕೋ ದುಃಖಕ್ಕೊ ತಳ್ಳಿ, ಮನಸ್ಸನ್ನು ವಿಹ್ವಲಗೊಳಿಸುತ್ತದೆ. ಅದರಿಂದ ಪಾರಾಗಬೇಕಾದರೆ, ಜಗತ್ತಿನ ವಿಷಯ, ವ್ಯಕ್ತಿ ಮತ್ತು ವಸ್ತುಗಳನ್ನು ನಾವು ಬದಲಾಯಿಸಲು ಸಾಧ್ಯವಿಲ್ಲವಾದ್ದರಿಂದ, ನಮಗಿರುವ ಭಾವುಕತೆಯ ಬಂಧವನ್ನು ಕಡಿದುಕೊಂಡರೆ, ಅವುಗಳ ಮೇಲೆ ನಮಗಿರುವ





'ಮಮತೆ'ಯನ್ನು ತೊರೆದರೆ, ಒಂದು ರೀತಿಯ ಉದಾಸೀನತೆಯನ್ನು ಬೆಳೆಸಿಕೊಂಡರೆ ಅವುಗಳು ನಮ್ಮ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಬೀರಲಾರವು. ನಮ್ಮ ಅಂತರಂಗ ನಿರಮ್ಮಳವಾಗಿರಬಹುದು.

"ಹೆಣ ಹೊರುವವರಿಗೆ ಹಿಂದಾದರೇನು? ಮುಂದಾದರೇನು?' ಎನ್ನುವ ಮಾತನ್ನು ನಾವು ಆಗಾಗ ಕೇಳುತ್ತಿರುತ್ತೇವೆ. ಅಂದರೆ "ಕೆಲಸಮಾಡಬೇಕು, ಆ ಕೆಲಸಕ್ಕೆ ಭಾವನಾತ್ಮಕವಾಗಿ ಅಂಟಿಕೊಳ್ಳಬಾರದು" ಎನ್ನುವ ಮಾತದು. ಬದುಕನ್ನು ಹೆಣಹೊರುವುದಕ್ಕೆ ಹೋಲಿಸಬಾರದಾದರೂ, ನಮ್ಮ ಬದುಕಿನಲ್ಲಿ ನಾವೆಷ್ಟು ಅಂಟದೆ, ನಿರ್ಮಮತೆ' ಯಿಂದ, ಸಂದ ಕೆಲಸವನ್ನು ಮಾಡಿದರೆ ನಮಗೆ ಅಷ್ಟು ಸುಖ, ನೆಮ್ಮದಿ ಮತ್ತು ಅಂತರಂಗಕ್ಕೆ ನಿರಾಳ. ಇದನ್ನರಿತು ವರ್ತಿಸಿದರೆ ಸುಖ ಇಲ್ಲದಿದ್ದರೆ ದುಃಖ,

**ಮುಕ್ತಕ - 717**

**ನಿನ್ನ ಹೆಣವನ್ನು ನೀನೆ ಹೊತ್ತು ಸಾಗಿಸಬೇಕೊ ! |**
**ಅಣ್ಣ ಬಾ ತಮ್ಮ ಬಾ ಎಂದಳುವುದೇಕೋ? ||**
**ನಿನ್ನೊಡಲೇ ಚಿತೆ, ಜಗದ ತಂಟೆಗಳ ಸವುದೆಯುರಿ |**
**ಮಣ್ಣೆ ತರ್ಪಣ ನಿನಗೆ - ಮಂಕುತಿಮ್ಮ ||**

ಎಂದಳುವುದೇಕೋ=ಎಂದು+ ಅಳುವುದೆಕೋ, ನಿನ್ನೊಡಲೇ=ನಿನ್ನ + ಒಡಲೇ, ಸವುದೆಯುರಿ=ಸವುದೆ +ಉರಿ
ಚಿತೆ= ಶವವನ್ನು ಸುಡುವ ಬೆಂಕಿ, ಒಡಲು =ದೇಹ, ಸವುದೆ =ಉರುವಲು

ನಿನ್ನ ಬದುಕಿನ ಬವಣೆಗಳನ್ನು ನೀನೇ ಅನುಭವಿಸಬೇಕು. ಅದನ್ನನುಭವಿಸಲು ಬೇರೆ ಯಾರನ್ನಾದರೂ ' ಅಣ್ಣಾ ಬಾ ಅಥವಾ ತಮ್ಮಾ ಬಾ' ಎಂದು ಕರೆಯುವ ಹಾಗಿಲ್ಲ. ನಿನ್ನ ಅಂತರಂಗವೇ ಚಿತೆ ಮತ್ತು ಆ ಚಿತೆಯುರಿಯಲು ಉರುವಲೇ ಬದುಕಿನ ತಾಪತ್ರಯಗಳು. ಕಡೆಗೆ ನಿನಗೆ ಮಣ್ಣೆ ತರ್ಪಣ ಎಂದು ಬದುಕಿನಲ್ಲಿ ಪ್ರತಿಯೊಬ್ಬರ ಒಂಟಿತನದ, ಏಕಾಕಿತನದ ಅನಿವಾರ್ಯತೆಯನ್ನು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಇಲ್ಲಿ 'ಹೆಣ'ವೆಂದರೆ ನಮ್ಮ ದೇಹ, ಚೈತನ್ಯವಿರುವ ತನಕವೇ ಅದು ನಮ್ಮ ಕಾಯ, ದೇಹ, ಆ ಚೈತನ್ಯ ಹೊರಬಿದ್ದರೆ ಈ ದೇಹ ಹೆಣ. ಆ ಚೈತನ್ಯದ ಉಪಸ್ಥಿತಿಯಲ್ಲಿ ಹೆಣವು ದೇಹವಾಗಿ, ಕಾಯವಾಗಿ ಕಾಣುತ್ತದೆ ಅಷ್ಟೇ. ಈ ದೇಹದ ಸಂಸರ್ಗದಲ್ಲಿ ಮನಸ್ಸು ಬುದ್ದಿ ಎಲ್ಲ ಉಂಟು. ಚೈತನ್ಯದ ಸಂಸರ್ಗದಲ್ಲಿರುವವರೆಗೆ ದೇಹಕ್ಕೆ ನೋವು, ನಲಿವು, ರೋಗ ರುಜಿನ ಮುಂತಾದವುಗಳುಂಟು. ಅಂತಹ ನೋವು ನಲಿವುಗಳನ್ನು ನಾವೊಬ್ಬರೇ ಅನುಭವಿಸಬೇಕು. ಕೆಲಬಾರಿ ನಾವು ಕಷ್ಟದಲ್ಲಿದ್ದಾಗ, 'ಯಾರಾದರೂ ನಮ್ಮ ಕಷ್ಟವನ್ನು ಹಂಚಿಕೊಳ್ಳಲು ಬರಬಾರದೇ' ಎಂದು ಅನಿಸಬಹುದು.
ಆ ಕಷ್ಟಗಳ ಸಹಿಸಲಾಗದೆ ನಮ್ಮ ಮನಸ್ಸು ಗೋಳಾಡಬಹುದು. ಆದರೆ

ಒಬ್ಬರ ಕಷ್ಟವನ್ನು ಮತ್ತೊಬ್ಬರು ಹೊರಲು ಸಾಧ್ಯವೇ ಇಲ್ಲ. ಹೆಣಹೊರುವಾಗ, ನಾಲ್ಕು ಜನ ಹೊರುತ್ತಾರೆ. ಆದರೆ ಆ ನಾಲ್ಕೂ ಜನರಲ್ಲಿ ಯಾರೊಬ್ಬರೂ ಸಂಪೂರ್ಣ ಭಾರವನ್ನು ಹೊತ್ತಿರುವುದಿಲ್ಲ. ಕೇವಲ ಒಂದು ಹೆಗಲ ಒತ್ತಾಸೆಯನ್ನು ಕೊಡುತ್ತಾರೆ. ಹಾಗೆಯೇ ಬದುಕಿನ ಬವಣೆಗಳನ್ನು ನಾವು ಅನುಭವಿಸಬೇಕಾದಾಗ ಅನ್ಯರ ಸಹಾಯಕ್ಕೆ ಒಂದು ಮಿತಿ ಇರುತ್ತದೆ. ಆದರೆ ಸಮಗ್ರ ಭಾರವನ್ನು ಹೊರಬೇಕಾದ ಕರ್ತವ್ಯ ನಮ್ಮದೇ ಅಲ್ಲವೇ ?

ಒಂಟಿಯಾಗಿ ಬರುತ್ತೇವೆ ಮತ್ತು ಒಂಟಿಯಾಗಿ ತೆರಳುತ್ತೇವೆ. ನಡುವೆ ಇಂದ್ರಿಯಗಳ ಸಂಪರ್ಕದಿಂದ ಈ ಜಗತ್ತಿನೊಂದಿಗೆ ನಂಟನ್ನು ಬೆಳೆಸಿಕೊಳ್ಳುತ್ತೇವೆ. ಆ ನಂಟು ನಮ್ಮನ್ನು ಸುಖ ದುಃಖಗಳನ್ನು ಅನುಭವಿಸುವಂತೆ ಮಾಡುತ್ತದೆ. ಅವುಗಳೇ ನಮ್ಮ ಅಂತರಂಗವನ್ನು ಸುಡುವಂತಹ ಕಟ್ಟಿಗೆಗಳು, ಸುಖವಾಗಲೀ ಕಷ್ಟವಾಗಲೀ ನಮ್ಮನ್ನು ಸುಮ್ಮನಿರುವುದಕ್ಕೆ ಬಿಡುವುದಿಲ್ಲ. ಒದ್ದಾಡಿಸುತ್ತದೆ, ಚಿತೆಯಮೇಲೆ ಹೆಣವನ್ನು ಸುಡುವಂತೆ ನಾವು ಬದುಕಿರುವಾಗಲೇ ನಮ್ಮನ್ನು ಸುಡುತ್ತವೆ. ನಮ್ಮ ಪೂರ್ವ ಕರ್ಮಾನುಸಾರ ನಮಗೆ ಬರುವ ಕಷ್ಟ ಸುಖಗಳು ನೀಡುವ ಬಾಧೆಯನ್ನು ನಾವೇ ಅನುಭವಿಸಬೇಕು. ಪರ್ಯಾಯ ಮಾರ್ಗವೇ ಇಲ್ಲ. ಅಕ್ಕಪಕ್ಕದ ಯಾರನ್ನೂ ಕರೆದು ಇದನ್ನು ಸ್ವಲ್ಪ ಹಂಚಿಕೊಳ್ಳಿ' ಎಂದು ಹೇಳಲು ಸಾಧ್ಯವಿಲ್ಲ. ಅವರುಗಳು, ನಾವು ಅದನ್ನು ಅನುಭವಿಸಲು ಸ್ವಲ್ಪ ಸಹಾಯಮಾಡಬಹುದು. ಬಿಟ್ಟರೆ, ಹೊರೆಯನ್ನು ಯಾರೂ ಹಂಚಿಕೊಳ್ಳಲು ಸಾಧ್ಯವೇ ಇಲ್ಲ. ಮಣ್ಣಿಂದ ಪಡೆದುಕೊಂಡ ಕಾಯವನ್ನು ಮಣ್ಣಿಗೆ ಸಮರ್ಪಿಸುವ ಬದುಕಿನಲ್ಲಿ, ನಡುವೆ ನಾವೆಷ್ಟು ಸುಧಾರಿಸುತ್ತೇವೆ ಎನ್ನುವುದೇ ಬಹಳ ಮುಖ್ಯ. ಈ ದೇಹ, ಇಂದ್ರಿಯಗಳು ಮತ್ತು ಮನಸ್ಸು ಬುದ್ಧಿ ದೇಹಗಳ ಸಂಪರ್ಕದಿಂದ 'ಆತ್ಮ' ವನ್ನು ಅನುಭವದ ಮೂಸೆಯಲ್ಲಿ ಹಾಕಿ ಕಾಯಿಸಿ, ಕರಗಿಸಿ, ಕಲ್ಮಲಗಳನ್ನು ನಿವಾರಿಸಿ ಅಪ್ಪಟ 'ಚಿನ್ನ'ದಂತೆ ತಯಾರಾಗಲು ಸಹಾಯಮಾಡುತ್ತವೆ.

ಜಗದ ತಂಟೆಗಳು ತಂದೊಡ್ಡುವ ಉರಿಯೊಳಗೆ ಕಾದು ಸುಟ್ಟು ಬೆಂದು ಶುದ್ಧವಾಗಿ ಆತ್ಮ ಹೊರಹೊಮ್ಮಬೇಕು ಮತ್ತು ದೇಹ ಚಿತೆಯಮೇಲೆ ಮಣ್ಣಿಗೆ ತರ್ಪಣವಾಗಬೇಕು. ಇದಕ್ಕೆ ನಾವು ನಮ್ಮನ್ನು ಸಂಪೂರ್ಣ ಒಡ್ಡಿಕೊಂಡಾಗ ಹಂತಹಂತವಾಗಿ ಆತೋದ್ಧಾರವಾಗುತ್ತದೆ.

**ಮುಕ್ತಕ - 718**

**ತನ್ನ ಶಿಲುಬೆಯ ತಾನೇ ಹೊತ್ತನಲ ಗುರು ಯೇಸು? |**

**ನಿನ್ನ ಕರ್ಮದ ಹೊರೆಯ ಬಿಡದೆ ನೀನೆ ಹೊರು ||**

**ಖಿನ್ನನಾಗದೆ ತುಟಿಯ ಬಿಗಿದು ಶವಭಾರವನು |**

**ಬೆನ್ನಿನಲಿ ಹೊತ್ತು ನಡೆ – ಮಂಕುತಿಮ್ಮ ||**

ಖಿನ್ನ = ನಿರಾಶಾಯುಕ್ತ ಬೇಸರ

'ಯೇಸು' ತನ್ನನ್ನು ಏರಿಸಿದ ಶಿಲುಬೆಯನ್ನು ತಾನೇ ಹೊತ್ತು ನಡೆದಂತೆ ನಿನ್ನ ಕರ್ಮದ ಭಾರವನ್ನು ನೀನೇ ಬಿಡದೆ ಹೊರಬೇಕು. ಬೇಸರಮಾಡಿಕೊಳ್ಳದೆ ನಿರಾಶೆ ಪಡದೆ ಆ ಭಾರವನ್ನು ಹೊತ್ತು ನಡೆಯಬೇಕು ಎಂದು ಕರ್ಮಾನುಭವದ ಮತ್ತು ಅವರವರ ಕರ್ಮವನ್ನು ಅವರವರೇ ಸವೆಸಬೇಕಾದ ಪರಿಯನ್ನು ತಿಳಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವು ಮಾಡುವ ಕೆಲಸಗಳಿಂದ ಉಂಟಾಗುವ ಕರ್ಮ ಸಂಚಯನವನ್ನು ನಾವೇ ಅನುಭವಿಸಬೇಕು. ಆದ್ದರಿಂದ ನಮ್ಮ ಕರ್ಮವನ್ನು ನಾವೇ ಹೊರಬೇಕು, ಅನುಭವಿಸಬೇಕು ಮತ್ತು ತೀರಿಸಬೇಕು, ತನ್ನ ಶಿಷ್ಯರು ಹೊರಲು ಮುಂದಾದರೂ ಬೇಡವೆಂದು ತಾನೇ ತನ್ನ ಶಿಲುಬೆಯನ್ನು ಹೊತ್ತ ಯೇಸು ಕ್ರಿಸ್ತನಂತೆ. ಇಲ್ಲಿ 'ಕರ್ಮ'ವೆಂದರೆ ನಾವು ಮಾಡುವ ಕೆಲಸ. ಆ ಕೆಲಸ ಮಾಡಲು ನಮಗೆ ಪ್ರೇರಕವೇ, ನಮ್ಮಲ್ಲಿರುವ ಇಂದ್ರಿಯ ಪ್ರೇರಿತವಾದ ಸತ್ವರಜಸ್ತಮೋ ಗುಣಗಳು. ಈ ಗುಣಗಳ ಪರಿಮಾಣ (RATIO) ಗಳ ವ್ಯತ್ಯಾಸದಿಂದ ನಮ್ಮ ಕರ್ಮಗಳು ಪ್ರಭಾವಿತವಾಗುತ್ತವೆ. ಆತ್ಮವು ಜನ್ಮಜನ್ಮಾಂತರದ ಕರ್ಮ ಶೇಷವನ್ನು ಹೊತ್ತು ತಂದು ಈ ಜನ್ಮದಲ್ಲಿ ಒಂದಿಷ್ಟು ಆರ್ಜಿಸಿ, ಒಂದಷ್ಟನ್ನು ವ್ಯಯಿಸಿ, ಕೊಂಚ ಉಳಿಸಿಕೊಂಡು, ಅದನ್ನೂ ಅನುಭವಿಸಲು ತನ್ನ ಪ್ರಯಾಣವನ್ನು ಮುಂದುವರೆಸುತ್ತದೆ, ಎನ್ನುತ್ತದೆ ನಮ್ಮ ಸನಾತನ ಸಿದ್ಧಾಂತ. ಇದನ್ನು ನಾವೇ ಅನುಭವಿಸಬೇಕು. ಅನ್ಯರು ಅದರಲ್ಲಿ ಪಾಲುದಾರರಾಗಲು ಸಾಧ್ಯವಿಲ್ಲ.

ಕರ್ಮ ಮಾಡುವುದರಿಂದ ಅದರ ಫಲಕ್ಕೆ ನಾವು ಭಾಜನರಾಗುತ್ತೇವೆ. ಆ ಫಲವನ್ನು ನಾವೇ ಅನುಭವಿಸಬೇಕು. ನಾವು ಉಪ್ಪ ತಿಂದು ಬೇರೆಯವರು ನೀರ ಕುಡಿದರೆ ನಮ್ಮ ಗಂಟಲಲ್ಲಿನ ಕ್ಷಾರ

ಕಡಿಮೆಯಾಗುವುದೇ? ನಾವೇ ನೀರು ಕುಡಿಯಬೇಕಲ್ಲವೇ? ಯಾರದೋ ಕರ್ಮದ ಫಲವನ್ನು ನಾವು ಅನುಭವಿಸುವುದಾಗಲೀ ಅಥವಾ ನಮ್ಮ ಕರ್ಮ ಫಲವನ್ನು ಬೇರೆಯವರು ಅನುಭವಿಸುವುದಾಗಲೀ ಸಾಧ್ಯವಿಲ್ಲದ ಮಾತು. ಆದರೆ ಅದನ್ನು ಹೇಗೆ ಅನುಭವಿಸಬೇಕು? ಎನ್ನುವುದೇ ಪ್ರಶ್ನೆ. ಅದಕ್ಕೆ ಉತ್ತರವಾಗಿ ಮಾನ್ಯ ಗುಂಡಪ್ಪನವರು " ಖಿನ್ನನಾಗದೆ ತುಟಿಯ ಬಿಗಿದು" ಎಂದು ಆದೇಶ ನೀಡಿದ್ದಾರೆ. "WHAT CANNOT BE CURED HAS TO BE ENDURED' ಎನ್ನುವ ಆಂಗ್ಲ ನುಡಿ ಬಹಳ ಸೂಕ್ತವಾಗಿದೆ. ಸದ್ದಿಲ್ಲದೇ ಅನುಭವಿಸಿ ಆ ಫಲವನ್ನು ತೀರಿಸಿಬಿಡಬೇಕು. ಪಾಪ ಪುಣ್ಯಗಳೇ





ಸುಖ ದುಃಖಗಳಾಗಿ ನಮಗೆ ಸಿಗುವ ಕರ್ಮಫಲಗಳು. 'ಒಬ್ಬ ವ್ಯಕ್ತಿ ಬಹಳ ಕಷ್ಟಗಳನ್ನು ಅನುಭವಿಸುವಾಗ ಅವನು ತನ್ನ ಪಾಪಕರ್ಮಗಳ ಫಲವನ್ನು ಅನುಭವಿಸಿ ಕಳೆದುಕೊಳ್ಳುತ್ತಿದ್ದಾನೆಂದೂ ಮತ್ತು ಮತ್ತೊಬ್ಬ ಬಹಳ ಸುಖವನ್ನು ಅನುಭವಿಸುತ್ತಿದ್ದಾನೆಂದರೆ ಅವನು ಸಂಚಿತ ಪುಣ್ಯಫಲಗಳನ್ನು ಸವೆಸುತ್ತಿದ್ದಾನೆಂದೂ ಅರ್ಥ.

ನಮ್ಮ ಕರ್ಮಗಳಿಂದ ನಮಗೆ ಸಂದ ಕರ್ಮಫಲಗಳನ್ನು ಅನುಭವಿಸುವಾಗ ವಿಚಲಿತರಾಗದೆ, ಶಾಂತರಾಗಿ, ಗೋಳಾಡದೇ ಅಥವಾ ಅದನ್ನು ಅನುಭವಿಸುವಾಗ ಉಂಟಾಗುವ ನೋವ ನಿವಾರಿಸಿಕೊಳ್ಳುವುದಕ್ಕಾಗಿ ಅನ್ಯ ಮಾರ್ಗಗಳನ್ನು ಹುಡುಕಿ ಮತ್ತಷ್ಟು ಕರ್ಮಫಲವನ್ನು ಸಂಚಯಿಸದೆ, ಆ ಫಲವನ್ನು ಅನುಭವಿಸುತ್ತಾ ಕರಗಿಸಬೇಕು. ಹಾಗಾದರೆ ಮಾತ್ರ ಆ ಅನುಭವದಿಂದಾಗುವ ನೋವನ್ನು ತಡೆದುಕೊಳ್ಳಬಹುದು. ಅದಕ್ಕೆ ಅಂತರಂಗದಲ್ಲಿ ಬೆಳೆಯಬೇಕು. 'ಗುಣತ್ರಯ'ದ ಪರಿಮಾಣವನ್ನು ಕಡಿಮೆಯಾಗಿಸಿಕೊಳ್ಳುತ್ತಾ, ಕಡೆಗೊಂದು ದಿನ ಗುಣಾತೀತರಾಗಬೇಕು. ನಮ್ಮ ಸಂಚಿತ ಕರ್ಮಗಳನ್ನು ಅನುಭವಿಸಿ ತೀರಿಸಿ, ನಮ್ಮ ಕರ್ಮಫಲದ ಸಂಚಿಯನ್ನು ಬರಿದಾಗಿಸಿಕೊಂಡರೆ ಆಗ ಜೀವನದ ಜಂಜಡದಿಂದ ಮುಕ್ತರಾಗಬಹುದು. ಇಂದಿನ ಬದುಕಿನಲ್ಲಿ ಅದು ಸಾಧ್ಯವೇ?" ಎಂದರೆ, ಅಸಾಧ್ಯವಂತೂ ಅಲ್ಲ,

ಕಷ್ಟಸಾಧ್ಯ ಎಂದು ಮಾತ್ರ ಹೇಳಬಹುದು. ಆದರೆ ಸಂಚಿತ ಕರ್ಮಫಲದ ಅನುಭವದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಮಾತ್ರ ಖಚಿತವಾಗಿ ಹೇಳಬಹುದು.

**ಮುಕ್ತಕ - 719**

**ತಲೆಪಾಗಿನೊಳಕೊಳಕ, ಪಂಚೆನಿರಿಯೊಳ ಹರಕ।**

**ತಿಳಿಸುವೆಯ ರಜಕಗಲ್ಲದೆ ಲೋಗರಿಂಗೆ? ||**

**ಅಳಲುದುಗುಡಗಳ ನಿನ್ನೊಳಗೆ ಬಯ್ತಿಡದೆ ನೀ -।**

**ನಿಳೆಗೆ ಹರಡುವುದೇಕೊ ? – ಮಂಕುತಿಮ್ಮ ||**

ತಲೆಪಾಗಿನೊಳಕೊಳಕ=ತಲೆಪಾಗಿನ+ಒಳ+ಕೊಳಕ, ಪಂಚೆನಿರಿಯೊಳ=ಪಂಚೆನಿರಿಯ+ಒಳ, ರಜಕಗಲ್ಲದೆ=ರಜಕಗೆ+ಅಲ್ಲದೆ, ನಿನ್ನೊಳಗೆ=ನಿನ್ನ+ಒಳಗೆ, ಬಯ್ತಿಡದೆ=ಬಯ್ತು+ಇಡದೆ, ನೀನಿಳೆಗೆ=ನೀನು+ಇಳೆಗೆ, ಹರಡುವುದೇಕೊ =ಹರಡುವುದು+ಏಕೋ, ತಲೆಪಾಗು= ತಲೆಗೆ ಸುತ್ತುವ ಪೇಟ, ರುಮಾಲು. ರಜಕ=ಅಗಸ, ಲೋಗರಿಂಗೆ=ಲೋಕದ ಜನಕ್ಕೆ, ಬಯ್ತಿಡದೆ=ಬಚ್ಚಿಡದೆ, ಇಳೆಗೆ=ಜಗತ್ತಿಗೆ

"ನೋಡು ತಲೆಗೆ ಸುತ್ತುವ ರುಮಾಲಿನಲ್ಲಿ ಇಲ್ಲಿ ಕೊಳೆಯಾಗಿದೆ' ಯೆಂದೋ ಅಥವಾ ಉಡುವ ಪಂಚೆಯ ನೆರಿಗೆಯಲ್ಲಿ ಹರಿದಿದೆ 'ಜೋಪಾನವೆಂದೋ', ಅದನ್ನು ಒಗೆಯುವ ಅಗಸನಿಗೆ ಮಾತ್ರ ನೀನು ಹೇಳುತ್ತೀಯೆ!! ಲೋಕದ ಜನಕ್ಕೆಲ್ಲ ಅಲ್ಲವಲ್ಲ. ಅದೇ ರೀತಿ ಬದುಕಿನ ನಿನ್ನ ಜಂಜಾಟ, ದುಗುಡ, ದುಮ್ಮಾನಗಳನ್ನು ಜಗತ್ತಿಗೆಲ್ಲ ಏಕೆ ಸಾರುತ್ತೀಯೇ? ಎಂದು ಕೇಳುತ್ತಾ ನಮಗೆ ಸಂದ ಕಷ್ಟಗಳನ್ನು ನಾವೇ ಗುಟ್ಟಾಗಿ ಹೇಗೆ ಅನುಭವಿಸಬೇಕು ಎಂದು ಸಾರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಜೀವನದಲ್ಲಿ ಬೇಕಾದಷ್ಟು ಕಷ್ಟ ಕಾರ್ಪಣ್ಯಗಳು ದುಗುಡ ದುಮ್ಮಾನಗಳು ಸಂಕಟಮಯವಾದಂತಹ ಸ್ಥಿತಿಗಳು ಎಷ್ಟೋ ಬಂದು ಹೋಗುತ್ತವೆ. ಇದು ಎಲ್ಲರಿಗೂ ಆಗುವಂತಹ ಅನುಭವವೇ. ಅನುಭವ ಬೇರೆ ಬೇರೆ ರೀತಿಯಾಗಿರಬಹುದು, ಆದರೆ ಅನುಭವವಂತೂ ಆಗಿಯೇ ಆಗಿರುತ್ತದೆ. ನಾವು ಪ್ರತಿಯೊಬ್ಬರ ಮನೆ ಮತ್ತು ಮನಗಳೊಳಗೆ ಇಣುಕಿ ನೋಡಿದರೆ ಅರ್ಥವಾಗುತ್ತದೆ, ನಾವು ನಮ್ಮ ಕಷ್ಟಗಳನ್ನು ನಮ್ಮ ನೋವನ್ನು ನಾವೇ ಅನುಭವಿಸಬೇಕು. ಊರವರಿಗೆಲ್ಲಾ ಹಂಚಿದರೆ ಪ್ರಯೋಜನವಿಲ್ಲ, ಎಂದು.

ನಮಗಿಂದು ಹಸಿವಾಗಿದೆ, ಆದರೆ ಕೈಯಲ್ಲಿ ಕಾಸಿಲ್ಲ. ನಾಳೆ ಬೆಳಗಾದರೆ ನಮಗೆ ಹತ್ತು ರೂ ಸಿಗುತ್ತದೆ. ಆಗ ನಮ್ಮದೇ ಹಣದಲ್ಲಿ ಉಣ್ಣಬಹುದು. ಆದರೆ ಇಂದು ಆದ ಹಸಿವನ್ನು ತಡೆಯಲಾರದೆ, ಯಾರ ಬಳಿಯಲ್ಲಾದರೂ 'ಕಡ' ಮಾಡಿ ಉಂಡರೆ ಆ ಕಡವನ್ನು ನಾಳೆ ಹಿಂತಿರುಗಿಸಿ ಕೊಡಬೇಕಾಗುವುದು. ಆದರೆ ಇಂದಿನ ಹಸಿವನ್ನು ಹೇಗಾದರೂ ತಡೆದುಕೊಂಡುಬಿಟ್ಟರೆ, ನಾಳೆ ನಮ್ಮದೇ ಹಣದಿಂದ ಉಣ್ಣಬಹುದು. ಇದರಿಂದ ಮೂರು ಪ್ರಯೋಜನವಿದೆ. ಒಂದು ನಾವು ಹಸಿವಿನಿಂದ ಇದ್ದೆವು ಎಂದು ಯಾರಿಗೂ ತಿಳಿಯುವುದಿಲ್ಲ, ಎರಡು ನಾವು ಬೇರೆ ಯಾರಿಗೂ ನಮ್ಮ ಕಷ್ಟವನ್ನು ಹಂಚಲಿಲ್ಲ ಮತ್ತು ಮೂರನೆಯದಾಗಿ ನಾವು ನಮ್ಮ ಸ್ವಾಭಿಮಾನವನ್ನು ಕಳೆದುಕೊಳ್ಳಲಿಲ್ಲ. ಇದೇ ಬದುಕುವ ಸರಿಯಾದ ದಾರಿ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮ ಕಷ್ಟಗಳನ್ನು ಪರರಿಗೆ ಹಂಚದೆ ನಾವೇ ಅನುಭವಿಸಬೇಕು. ಹಾಗೆ ಅನುಭವಿಸುವಾಗ, ಸಾಧ್ಯವಾದರೆ ನಮಗೆ ಸಂದ ಕಷ್ಟಗಳ ಕಾರಣವನ್ನು ಅರಿಯಬೇಕು. ಮುಂದೆ ಅಂತಹ ಕಷ್ಟಗಳು ಬಾರದಂತೆ ಜಾಗರೂಕರಾಗಿರಬೇಕು. ಅದು ಅನಿವಾರ್ಯವಾದರೆ ಬಂದ ಕಷ್ಟವನ್ನು ಅನುಭವಿಸುವ ಧೈರ್ಯ ಮತ್ತು ಮಾನಸಿಕ ದೃಢತೆಯನ್ನು ಸಾಧಿಸಬೇಕು. ಕಷ್ಟಗಳು ಬಂದಾಗ ವಿಹ್ವಲರಾಗಿ, ಪರದಾಡುತ್ತ ಪರರಿಂದ ಸಹಾಯವನ್ನು ಅಪೇಕ್ಷಿಸಿ, ಸಿಗದಿದ್ದಾಗ ಅಥವಾ ಸಿಕ್ಕದ್ದು ಸಮರ್ಪಕವಾಗದಿದ್ದಾಗ ಅನ್ಯರನ್ನು ದೂಷಿಸಿ ಮತ್ತಷ್ಟು 'ಕರ್ಮಫಲ' ಸಂಚಯನ ಮಾಡುವುದಕ್ಕಿಂತ ಈಗಿರುವ ಕಷ್ಟವನ್ನು ನಾವೇ ಅನುಭವಿಸಿ ತೀರಿಸುವುದು ಸರಿಯಾದ ಮಾರ್ಗ. ಆದರೆ ಕಷ್ಟವನ್ನು ಅನುಭವಿಸಿದವರಿಗೆ ಮಾತ್ರ ಅದರ ತೀವ್ರತೆ ಅರ್ಥವಾಗುತ್ತದೆ. ದೃಢ ಮನಸ್ಸು ಬೇಕು, ಇಲ್ಲದಿದ್ದರೆ ಅದನ್ನು ಸಾಧಿಸಬೇಕು.

**ಮುಕ್ತಕ - 72ಸಂ**

**ಹೊಸತನವೆ ಬಾಳು; ಹಳಸಿಕೆಯಲ್ಲ ಸಾವು ಬಿಡು |**

**ರಸವು ನವನವತೆಯಿಂದನುದಿನವು ಹೊಮ್ಮಿ ||**

**ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ |**

**ಪಸರುತಿರೆ ಬಾಳ್ ಚೆಲುವು – ಮಂಕುತಿಮ್ಮ ||**

ನವನವತೆಯಿಂದನುದಿನವು=ನವ+ನವತೆಯಿಂದ+ಅನುದಿನವು, ಪಸರುತಿರೆ=ಪಸರುತ +ಇರೆ

ಹಳಸಿಕೆ=ಗತಿಸಿದ, ನವತೆ=ಹೊಸತನ, ಅನುದಿನ=ಪ್ರತಿನಿತ್ಯ, ನುಡಿ=ಮಾತು, ನಡೆ=ಕ್ರಿಯೆ, ನೋಟ=ಭಾವನೆ, ಪಸರುತ=ಹರಡುತ್ತಾ,

ಹೊಸತನವೇ ಬಾಳು, ಗತಿಸಿಹೋದುದ್ದೆಲ್ಲ ಸತ್ತುಹೋಗಿದೆ, ಅದನ್ನು ಬಿಟ್ಟುಬಿಡು. ಮೃದುವಾದ ಮಾತು, ನಮ್ಮ ಸುತ್ತಲಿನವರಿಗೆ ಹಿತವಾಗುವಂತೆ ನಮ್ಮ ನಡೆ ಮತ್ತು ಭಾವಗಳನ್ನು ಪ್ರತಿನಿತ್ಯವೂ ಹೊಸತಾಗಿ ಸೂಸುತ್ತಾ ಅಂತಹ ಸಂತಸದ ಮಾತು ಮತ್ತು ಭಾವಗಳನ್ನು ಹೊರಹೊಮ್ಮಿಸುತ್ತಿದರೆ ಬದುಕು ಸುಂದರವಾಗಿರುತ್ತದೆ ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ನಮ್ಮ ಸುತ್ತುಮುತ್ತಲಿನವರಲ್ಲಿ 'ನಾನು ಸುಖವಾಗಿದ್ದೇನೆ' ಎಂದು ತುಂಬು ಮನಸ್ಸಿನಿಂದ ಹೇಳುವವರನ್ನು ಕಾಣುವುದು ಬಹಳ ವಿರಳ. ಏಕೆಂದರೆ ಎಲ್ಲರಿಗೂ ಏನೋ ಕೊರತೆ, ಏನೋ ಅಸಮಾಧಾನ ಮತ್ತು ಒಂದು ಅತೃಪ್ತಿ ಇಲ್ಲದ ಕೊರತೆಗಳು, ಬೇಡದ ಅಸಮಾಧಾನಗಳು ಮತ್ತು ಅತೃಪ್ತಿಗಳೇ ಮನುಷ್ಯನ ಅನಾವಶ್ಯಕವಾದ "ದುಃಖ' ಕ್ಕೆ ಕಾರಣ. ನಮ್ಮ ಬಾಳು ಖಂಡಿತ ಒಂದು ದಿನ ಅಂತ್ಯವಾಗುತ್ತದೆ. ಹಾಗಿರಬೇಕಾದರೆ ಪ್ರತಿನಿತ್ಯ ಗೋಳಾಡಿಕೊಂಡು ಬದುಕುವ ಪ್ರಯೋಜನವಾದರೂ ಏನು? ಬದುಕಿನಲ್ಲಿ ಸುಖ ಆನಂದ ಬೇಕೆನ್ನುವವರು ಪ್ರತಿನಿತ್ಯದ ಬದುಕಿನಲ್ಲಿ ಒಂದು ಹೊಸತನವನ್ನು ಕಂಡುಕೊಳ್ಳಬೇಕು.

ಅದಕ್ಕೆ ಮಾರ್ಗವನ್ನು ಗುಂಡಪ್ಪನವರು ಸೂಚಿಸಿದ್ದಾರೆ. ಹೊಸತು ಬೇಕಾದರೆ ಹಳತನ್ನು ಮರೆಯಬೇಕು. ಎರಡು ವಸ್ತುಗಳು ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಇರಲು ಸಾಧ್ಯವಿಲ್ಲವಾದ್ದರಿಂದ ಹೊಸತನ್ನು ಬರಮಾಡಿಕೊಂಡರೆ ಹಳತು ತಾನೇ ತಾನಾಗಿ ಬಿಟ್ಟುಹೋಗುತ್ತದೆ. ಹೊಸ ಹೊಸ ವಿಚಾರ, ಹೊಸ ಹೊಸ ಸ್ನೇಹ, ಹೊಸ ಹೊಸ ಕೆಲಸಗಳಲ್ಲಿ ಉತ್ಸಾಹದಿಂದ ನಮ್ಮನ್ನು ನಾವು ತೊಡಗಿಸಿಕೊಂಡಾಗ ಹಳತಿನ ನೆನಪುಗಳು

ದೂರವಾಗುತ್ತವೆ. ಕಳೆದುಹೋದದ್ದು ಕಳೆದುಹೋಗಿದೆ. ಅದನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಯಾವುದನ್ನು ಬದಲಾಯಿಸಲು ಸಾಧ್ಯವಿಲ್ಲವೋ ಅದರ ಬಗ್ಗೆ ಯೋಚಿಸಿ, ಆಲೋಚಿಸಿ ಮತ್ತು ಚಿಂತಿಸಿ ಏನು ಪ್ರಯೋಜನ? ಕೇವಲ ಮಾನಸಿಕ ಕ್ಷೋಭೆಯೊಂದೇ ಫಲ. ಮಾಗುತ್ತಿರುವ ಗಾಯವನ್ನು ಮತ್ತೆ ಕೆರೆದು ಹುಣ್ಣಾಗಿಸುವುದು ವ್ಯರ್ಥ ಪ್ರಯತ್ನವಲ್ಲವೇ?





ಹಾಗಾಗಿ ಬದುಕಿನಲ್ಲಿ ಹೊಸ ಚೈತನ್ಯವನ್ನು ತಂದುಕೊಳ್ಳಬೇಕು, ಉತ್ಸಾಹದಿಂದ ಸಕ್ರಿಯವಾಗಿರಬೇಕು. ಏನನ್ನಾದರೂ ಹೊಸತಾಗಿ ಓದುವ, ಕಲಿಯುವ, ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ನಾವು ಹೊಸತನವನ್ನು ತಂದುಕೊಳ್ಳುವ ಜೊತೆಗೆ ನಮ್ಮ ಮನೋಭಾವದಿಂದ ನಮ್ಮ ಸುತ್ತಲಿನ ಪರಿಸರದಲ್ಲೂ ಒಂದು ನವಚೈತನ್ಯವನ್ನು ತುಂಬಬಹುದು. ಅಂತಹವರೂ ಸಹ ನಮ್ಮ ನಿಮ್ಮ ಮಧ್ಯದಲ್ಲಿ ಸಿಗುತ್ತಾರೆ. ಅವರು ತಾವೂ ಸಂತೋಷದಿಂದ ಉಲ್ಲಾಸದಿಂದ ಇದ್ದು ಅನ್ಯರಿಗೂ ಆ ಸಂತೋಷ ಉಲ್ಲಾಸಗಳನ್ನು ಹಂಚುತ್ತಿರುತ್ತಾರೆ. ಅಂತಹ ಪ್ರಯತ್ನ ಎಲ್ಲರಿಂದಲೂ ನಡೆದರೆ ಎಲ್ಲರ ಬದುಕಿನಲ್ಲೂ ಉತ್ಸಾಹ ಮತ್ತು ಆನಂದದ ಹೊಳೆ ಹರಿಯುವುದರಲ್ಲಿ ಸಂದೇಹವೇ ಇಲ್ಲ. ಒಂದು ಅಲಿಖಿತ ನಿಯಮವೇನೆಂದರೆ 'ನಾವು ಏನನ್ನು ಪಡೆದುಕೊಳ್ಳುತ್ತೇವೋ ಅದನ್ನೇ ನೀಡಬಹುದು ಮತ್ತು ನಾವು ಏನನ್ನು ನೀಡುತ್ತೇವೋ ಅದನ್ನೇ ಪಡೆದುಕೊಳ್ಳಲು ಸಾಧ್ಯ'. ಹಾಗಾಗಿ ನಾವು ಮೊದಲು ನಮ್ಮಲ್ಲಿ ಹೊಸತನವನ್ನು ತುಂಬಿಕೊಂಡು ಅದನ್ನು ಎಲ್ಲರಲ್ಲೂ ಹಂಚಿದರೆ ಆ ಹೊಸತನವನ್ನೇ ಮತ್ತೆ ನಾವು ಪಡೆಯಬಹುದು. ಹೊಸತನದ ವಿನಿಮಯದಿಂದ ಹೊಸತನವೇ ಹರಡುತ್ತದೆ. ಉತ್ಸಾಹವೇ ಜೀವನ ಜಡತೆಯೇ ಮರಣ"

**ಮುಕ್ತಕ – 721**

**ಮೆರೆಯುವುವು ನೂರಾರು ಮೈಮೆಗಳು ಸೃಷ್ಟಿಯಲಿ ।**

**ಧರಣಿಯವು, ಗಗನದವು, ಮನುಜಯತ್ನದವು ॥**

**ಪಿರಿದೆಂಬೆನವುಗಳೊಳು ಧರುಮವರಿತವನೊಲುಮೆ ।**

**ಅರಿವುಳ್ಳೊಲುಮೆ ಪಿರಿದು - ಮಂಕುತಿಮ್ಮ ॥**

ಪಿರಿದೆಂಬೆನವುಗಳೊಳು=ಪಿರಿದು+ಎಂಬ+ಅನುವುಗಳ+ಒಳು,

ಧರುಮವರಿತವನೊಲುಮೆ=ಧರುಮವ+ಅರಿತ+ಅವನ+ಒಲುಮೆ,

ಅರಿವುಳ್ಳೋಲುಮ=ಅರಿವು+ಉಳ್ಳ+ಒಲುಮೆ,

ಅನುವುಗಳ=ಅನುಕೂಲತೆಗಳ, ಮೈಮೆಗಳು = ಮಹಿಮೆಗಳು, ಪಿರಿದು=ಹಿರಿಯದು

ಈ ಜಗತ್ತಿನ ಸೃಷ್ಟಿಯಲ್ಲಿ ನೂರಾರು ಮಹಿಮೆಗಳಿವೆ. ಇವುಗಳಲ್ಲಿ ಭೂಮಿಯದು ಹಲವು, ಗಗನದ್ದು ಹಲವು, ಮನುಷ್ಯ ಪ್ರಯತ್ನದ ಸಾಧನೆಗಳಲ್ಲಿ, ಮಹತ್ತಾದ ಸಾಧನೆ 'ಧರ್ಮವನ್ನು' ಅರಿತವನ ಒಲುಮೆ ಅಥವಾ ಪ್ರೀತಿ. ಅಂತಹ ಧರ್ಮಯುಕ್ತವಾದ ಪ್ರೀತಿಯಲ್ಲಿ 'ಅರಿವು' ಎಂದರೆ ಜ್ಞಾನವೂ ಸೇರಿಕೊಂಡರೆ ಅದು ಅತೀ ಉತ್ತಮವಾದ ಸಾಧನೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಅವುಗಳಲ್ಲಿ ಗಗನದಲ್ಲಿನ ತೇಜಪುಂಜಗಳು, ನಕ್ಷತ್ರಗಳು, ಗ್ರಹಗಳು, ಸೂರ್ಯ ಚಂದ್ರರು, ಮಳೆ, ಗಾಳಿ, ಬೆಳಕು ಇತ್ಯಾದಿ, ಭೂಮಿಯ ಮೇಲಿನ ಕಡಲು, ಗಿರಿ ಪರ್ವತಗಳು, ನದಿ, ಕಾಡುಗಳು, ಜಲಪಾತಗಳು, ಕೋಟಿ ಕೋಟಿ ವಿಧದ ಗಿಡ, ಮರ, ಸಸ್ಯರಾಶಿಗಳು, ಖಗ, ಮೃಗ, ಜಲಚರ ಇತ್ಯಾದಿಗಳು, ಸೃಷ್ಟಿಯಲ್ಲಿರುವ ಪ್ರಾಣಿಗಳಲ್ಲಿ ಮನುಷ್ಯ

ಶ್ರೇಷ್ಠ ಪ್ರಾಣಿ. ಮಿಕ್ಕೆಲ್ಲ ಪ್ರಾಣಿಗಳಿಗಿಂತ ಅವನ ಅವಿಷ್ಕಾರಗಳು ಬಹಳ, ವಿಪುಲ ಮತ್ತು ಶ್ರೇಷ್ಠ ಸಹಸ್ರಾರು ವರ್ಷಗಳ ಮಾನವನ 'ಜ್ಞಾನ ವಿಕಾಸದ ಚರಿತ್ರೆಯನ್ನು ನೋಡಿದರೆ ಅವನ ಆವಿಷ್ಕಾರಗಳ ಮಹಾಪೂರವೇ ನಮಗೆ ಕಾಣುತ್ತದೆ.

ಆವನ ಆವಿಷ್ಕಾರಗಳಲ್ಲಿ ಬಹಳ ಶ್ರೇಷ್ಟವಾದದ್ದು ಅವನ "ಧರ್ಮದಿಂದ ಕೂಡಿದ ಜಗತ್ತಿನ ಮೇಲಿನ ಪ್ರೇಮ. ಮನುಷ್ಯರಿಗೆ ತ್ರಿಗುಣಾತ್ಮಕವಾದ ಮತ್ತು ಇಂದ್ರಿಯ ಪ್ರೇರಿತ ಗುಣಗಳಿರುವಾಗ, ಸ್ವಾಭಾವಿಕವಾಗಿಯೇ ಜಗತ್ತಿನ ವಸ್ತು, ವಿಷಯ ಮತ್ತು ವ್ಯಕ್ತಿಗಳ ಮೇಲಿನ ಒಲವಿರುತ್ತದೆ. ಆದರೆ ಆ ಒಲವಿಗೆ 'ಧರ್ಮ' ದ ಬಲವಿದ್ದರೆ ಮಾತ್ರ ಅದು ಲೋಕಕ್ಕೆ ಪೂರಕವಾಗಿರುತ್ತದೆ. ಆದರೆ ಆ ಧರ್ಮವು ಯಾವುದು ಎಂದು ಹೇಗೆ ಅರಿಯುವುದು? ಪ್ರತಿ ವಸ್ತುವಿಗೂ, ವಿಷಯಕ್ಕೂ ಪ್ರತೀ ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ಧರ್ಮವಿರುತ್ತದೆ. ಹಾಗಾಗಿ ಧರ್ಮದ ಅನ್ವಯವನ್ನು ಅರಿಯುವುದು ಹೇಗೆ? ಎಂಬುದೇ ಪ್ರಶ್ನೆ ಅದನ್ನು ಕಾಲಕ್ರಮೇಣ, ಅನುಭವದಿಂದ, ಸಂಸ್ಕಾರಗಳಿಂದ ಮತ್ತು ಹಿರಿಯರು ತೋರಿದ ಮಾರ್ಗದರ್ಶನದಿಂದ ಅರಿಯಬೇಕು. ಅಂತಹ ಅರಿವು ಧರ್ಮಕ್ಕೆ ಪೂರಕವಾದಾಗ, ಜಗತ್ತಿನಲ್ಲಿ ನಾವು ಒಲವ ತೋರಿ ಮಾಡುವ ನಮ್ಮ ಎಲ್ಲಾ ಕಾರ್ಯ ಕೆಲಸಗಳು ಧರ್ಮಬದ್ಧವಾಗಿಯೂ, ಅರಿವಿನಿಂದ ಕೂಡಿದ್ದಾಗಿದ್ದು ಲೋಕಹಿತವಾಗಿರುತ್ತದೆ.

ಆದರೆ ಇಂದಿನ ಪರಿಸ್ಥಿತಿ ಹಾಗಿದೆಯೇ? ಎಂದು ನೋಡಿದರೆ, ನಮಗೆ ಕಾಣುವುದು ಕೇವಲ ಸ್ವಾರ್ಥಪೂರಿತವಾದ, ಅಸೂಯಾಪೂರಿತವಾದ ಮತ್ತು ಅಜ್ಞಾನಪ್ರೇರಿತವಾದ ಒಲುಮೆಯೇ ಹೊರತು ಅರಿವಿನಿಂದ ಕೂಡಿದ ಮತ್ತು ಧರ್ಮದಿಂದ ಕೂಡಿದ ಒಲುಮೆಯಲ್ಲವೇ ಅಲ್ಲ. ಇಂದ್ರಿಯಗಳಾಸೆಯನ್ನು ಪೂರೈಸಲು ಮತ್ತು ನಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸಲು ನಾವು ಪಡುವ ಆತುರದಲ್ಲಿ ಧರ್ಮವನ್ನೂ ಮತ್ತು ಅದರುಪಯೋಗದ ಅರಿವನ್ನೂ ಮರೆತಿದ್ದೇವೆ. ಮನುಷ್ಯನ ಹೊಸ ಹೊಸ ಅವಿಷ್ಕಾರಗಳು ಅವನನ್ನು ಅಂತರಂಗದ ಔನ್ನತ್ಯಕ್ಕೆ ಕೊಂಡುಹೋಗುವ ಬದಲು ಅಧೋಗತಿಗೆ ತಳ್ಳುತ್ತಿದೆ. ಇದೇ ಇಂದಿನ ಮಾನವ ಬದುಕಿನ ದುರಂತ. ನಾವು, ಇಂತಹ ಸ್ಥಿತಿಯ ಹಿಡಿತದಿಂದ ಹೊರಬರಲು ಮಾಡುವ ಪ್ರತಿಯೊಂದು ಪ್ರಯತ್ನವೂ ನಮ್ಮ ಉದ್ಧಾರಕ್ಕೊದಗುವ ಏಣಿಯ ಮೆಟ್ಟಲುಗಳಾಗುತ್ತವೆ.

**ಮುಕ್ತಕ - 722**

**ಚೆಲುವುನಗುಗಳ ಕಂಡವನ ಕಣ್ಣರಳುವುದು ।**

**ಅಳುವುನೋವುಗಳ ಕಂಡೊದ್ದೆಯಾಗುವುದು ॥**

**ಇಳೆಯ ದನಿಗವನೆದೆಯೊಳೊಪ್ಪು ಮರುದನಿಯಹುದು ।**

**ಶಿಲೆಯಲ್ಲಿ ಯೋಗಿಯೆದೆ -ಮಂಕುತಿಮ್ಮ ॥**

ಕಣ್ಣರಳುವುದು=ಕಣ್ಣು+ಅರಳುವುದು, ಕಂಡೊದ್ದೆಯಾಗುವುದು+ಕಂಡು+ಒದ್ದೆಯಾಗುವುದು, ದನಿಗವನೆದೆಯೊಳೊಪ್ಪು=ದನಿಗೆ+ಅವನ+ಎದೆಯೊಳು+ಒಪ್ಪು, ಮರುದನಿಯಹುದು=ಮರುದನಿ+ಅಹುದು, ಯೋಗಿಯದೆ=ಯೋಗಿಯ+ಎದೆ,

ಸೊಗಸು, ನಗುಗಳ ಕಂಡು ಯೋಗಿಯ ಕಣ್ಣು ಸಂತಸದಿಂದ ಅರಳುವುದು, ಅನ್ಯರ ನೋವು ಮತ್ತು ತತ್ಕಾರಣ ಆಗುವ ದುಃಖವನ್ನು ಕಂಡು ಅವನ ಹೃದಯ ಕಣ್ಣೀರ ಹಾಕುವುದು, ಜಗತ್ತಿನ ದನಿಗೆ ಮಾರ್ದನಿಕೊಡುವ ಹೃದಯ ಯೋಗಿಗೆ ಇದೆ. ಅವನೇನು ಕಲ್ಲು ಹೃದಯದ ಮನುಷ್ಯನಲ್ಲ ಎಂದು ಹೇಳುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಧರ್ಮವನ್ನೇ ಪಾಲಿಸತಕ್ಕ, ಕೇವಲ ನಿಸ್ಪೃಹತೆಯಿಂದ ಬದುಕುವವ, ಸುಖ ದುಃಖಗಳಲ್ಲಿ ಸಮಾನ ಮನೋಭಾವವನ್ನಿಟ್ಟುಕೊಂಡವವನನ್ನು 'ಯೋಗಿ' ಎಂದು ಕರೆಯುತ್ತಾರೆ ವಿದ್ವಜ್ಜನರು. ಆದರೆ ಅವನಿಗೇನು 'ಹೃದಯ'ವಿರುವುದಿಲ್ಲವೇ? ಎಂದರೆ, ಅದಕ್ಕೆ ಉತ್ತರವಾಗಿ, ಖಂಡಿತ ಇರುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಜಗತೃಷ್ಟಿಯ ಸುಂದರವಾದ ವಸ್ತುಗಳನ್ನು ಕಂಡಾಗ ಅವನ ಹೃದಯ ಅರಳುತ್ತದೆ ಮತ್ತು ಅವನು ಅದಕ್ಕೆ ಸ್ಪಂದಿಸುತ್ತಾನೆ. ಆದರೆ ಹಾಗೆ ಸ್ಪಂದಿಸುವಾಗ ಯೋಗಿ ಯಾವುದಕ್ಕೂ ಅಂಟದಿದ್ದರೂ, ಅವನ ಪ್ರತಿಕ್ರಿಯೆ ಪ್ರಾಮಾಣಿಕವಾಗಿರುತ್ತದೆ.

ಹಾಗೆಯೇ "ಪ್ರತಿಯೊಬ್ಬರೂ ಅವರವರ ಕರ್ಮಾನುಸಾರ ಅವರ ಸುಖ ದುಃಖಗಳನ್ನು ಅನುಭವಿಸುತ್ತಾರೆ. ಅನ್ಯರ ಕರ್ಮದಲ್ಲಿ ತಲೆಯಿಡಲು ನನಗೆ ಅಧಿಕಾರವಿಲ್ಲ' ಎಂದು ಹೇಳದೆ ಯೋಗಿಯಾದವನು ಅನ್ಯರ ದುಃಖಕ್ಕೆ

ಸಕಾರಾತ್ಮಕವಾಗಿ ಸ್ಪಂದಿಸುತ್ತಾನೆ. ಪರರ ನೋವಿನ ನಿವಾರಣೆಗಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಲೂ ಸಿದ್ಧನಾಗುತ್ತಾನೆ. ಇಲ್ಲಿಯೂ ಸಹ ಅವನು ಎಲ್ಲಿಯೂ ಅಂಟಿಕೊಳ್ಳುವುದಿಲ್ಲ. ಅದೇ ನಿಜವಾದ ಯೋಗಿಯ ಲಕ್ಷಣ. ಹಾಗೆ ಇಲ್ಲಿ ಎಲ್ಲದರಲ್ಲೂ ಇದ್ದು, ಯಾವುದಕ್ಕೂ ಅಂಟದೆ, ಎಲ್ಲವನ್ನೂ ಅನುಭವಿಸುತ್ತಾ ಯಾವ ಅನುಭವವೂ ಅವನ ಅಂತರಂಗವನ್ನು ಕದಲಿಸದಂತೆ ಅನುಭವಿಸುವವನೇ ಯೋಗಿ, ಅವನ ಹೃದಯ ಖಂಡಿತ ಕಲ್ಲಾಗಿರುವುದಿಲ್ಲ .





ಅಂತಹ ಯೋಗಿಯಾಗಲು ಕಾಷಾಯ ತೊಟ್ಟು, ಗಡ್ಡ ಬಿಟ್ಟು, ಕಾಡ ಸೇರಿ ತಪಸ್ಸನ್ನು ಮಾಡಿ 'ಋಷಿ' ಎಂದು ಎನಿಸಿಕೊಳ್ಳಬೇಕಿಲ್ಲ. ಸಂಸಾರದಲ್ಲಿ ಇದ್ದು, ಎಲ್ಲರ ಸುಖ ದುಃಖಗಳಿಗೆ ಸ್ಪಂದಿಸುತ್ತಾ ಆದರೆ ಯಾವುದರ ಸೆಳೆತಕ್ಕೂ ಬಲಿಯಾಗದೆ, ಎಲ್ಲವನ್ನೂ ಮೀರಿನಿಂತು, ಎಲ್ಲಕ್ಕೂ ಅತೀತನಾಗಿ ಇರುವಂತಾಗುವುದೇ ಸಾಧನೆ. ಅಂತಹ ಸಾಧನೆಯನ್ನು ಯಾರು ಮಾಡಿದರೆ ಅವರು ಸಂಸಾರಾತೀತವಾದ ಒಂದು ಆನಂದವನ್ನು ಪಡೆಯಬಹುದು. ಎಲ್ಲವನ್ನೂ ಅನುಭವಿಸುತ್ತಾ, ಯಾವುದೂ ತಮ್ಮ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳಬಹುದು. ಯಾರು ಎಷ್ಟು ಪ್ರಯತ್ನಪಟ್ಟರೆ ಅವರಿಗೆ ಅಷ್ಟು ಲಾಭ.

**ಮುಕ್ತಕ – 723**

**ಸ್ವಸ್ಥತೆಯ ಕದಲಿಸದ ಜಗದಾಸೆಯೊಂದು ಗುಣ |**
**ಆಸ್ಥೆಯನ್ನು ಕುಂದಿಸದ ತಾಟಸ್ಥ್ಯವೊಂದು ||**
**ನಷ್ಟಲಾಭಂಗಳಲಿ ಲಘುಹಾಸ್ಯನಯವೊಂದು |**
**ಸ್ವಸ್ತಿಗಾವಶ್ಯಕವೊ – ಮಂಕುತಿಮ್ಮ ||**

ಜಗದಾಸ್ಥೆಯೊಂದು=ಜಗದ+ಆಸ್ಥ+ಒಂದು, ತಾತಸ್ಥ್ಯವೊಂದು=ತಾಟಸ್ಥ್ಯ +ಒಂದು, ಲಘುಹಾಸ್ಯನಯವೊಂದು-ಲಘು+ಹಾಸ್ಯ+ನಯವು+ಒಂದು, ಸ್ವಸ್ತಿಗಾವಶ್ಯಕವೊ=ಸ್ವಸ್ಥಿಗೆ+ಅವಶ್ಯಕವೊ
ಸ್ವಸ್ಥತೆ=ಆರೋಗ್ಯ ದೈಹಿಕ ಮತ್ತು ಮಾನಸಿಕ) ಆಸ್ಥೆ=ಹುರುಪು, ತಾಟಸ್ಥ್ಯ=ತಟಸ್ಥ ಭಾವ, ಲಘು=ಹಗುರವಾದ, ಸ್ವಸ್ಥಿಗೆ ಆರೋಗ್ಯಕ್ಕೆ(ದೈಹಿಕ ಮತ್ತು ಮಾನಸಿಕ)

ನಮ್ಮ ಕ್ಷೇಮವನ್ನು ಕದಡದ ಬದುಕಿನಾಸೆಯ ಗುಣ, ಆಸೆ ಅಥವಾ ನಿರಾಸೆ ಎರಡೂ ಅತಿಯಾಗದೆ ಸಮತೋಲನವನ್ನು ಕಾಪಾಡಿಕೊಳ್ಳುವ ಗುಣ, ನೋವು ನಲಿವುಗಳನ್ನು ಒಂದು ನವಿರಾದ ಹಾಸ್ಯ ತೋರುತ್ತಾ ಸಾಕ್ಷಿಯಂತೆ ಕಂಡು ನಸುನಕ್ಕುಬಿಡುವ ಗುಣಗಳು, ನಮ್ಮ ಕ್ಷೇಮಕ್ಕೆ ಅವಶ್ಯಕವೋ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ಆಸ್ಥೆ ಇರಬೇಕು. ಆಸೆ ಎಂದರೆ ಬದುಕುವ ಆಸೆ ಮತ್ತು ಉತ್ಸಾಹ. ಜೀವನೋತ್ಸಾಹ ಎಂದಿಗೂ ಕುಂದಬಾರದು. ಆದರೆ ಆ ಆಸ್ಥೆ ವ್ಯಕ್ತಿಯ ಕ್ಷೇಮವನ್ನು ಕದಡುವಂತಹದ್ದಾಗಬಾರದು. ಆಸೆಗೂ ಆಸೆಗೂ ಬಹಳ ವ್ಯತ್ಯಾಸವಿದೆ. ಆಸ್ಥೆಗೆ ವೈಯಕ್ತಿಕ ಕ್ಷಮತೆಯ ಮಿತಿಯಿರುತ್ತದೆ. ಆದರೆ ಆಸೆಗೆ ಆ ಮಿತಿಯ ಕಟ್ಟುಪಾಡುಗಳಿರುವುದಿಲ್ಲ. ಕಟ್ಟುಪಾಡುಗಳಿಲ್ಲದ ಆಸೆ, ಮಿತಿಗಳನ್ನು ಉಲ್ಲಂಘಿಸಿ, ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಹಾಳುಗೆಡವುತ್ತದೆ. ಇಂದಿನ ಸಮಾಜದಲ್ಲಿ ನಾವು ಅಂತಹ ದೃಷ್ಟಾಂತಗಳನ್ನು ಹೇರಳವಾಗಿ ಕಾಣಬಹುದು. ಮಿತಿಯರಿತ ಆಸೆಯ ಲಾಭವೇನು ಮತ್ತು ಮಿತಿಯಿಲ್ಲದ ಆಸೆಯ ನಷ್ಟವೇನು ಎಂದು ಅರಿಯುವುದೇ ವಿದ್ಯೆ. ಅದನ್ನು ಕಲಿಸದ ವಿದ್ಯಾಭ್ಯಾಸ ಕೇವಲ 'ಅವಿದ್ಯೆ' ಅಷ್ಟೇ. ಆದರೆ ಮಿತಿಯನ್ನು ಅರಿಯುವುದು ಹೇಗೆ? ಅದಕ್ಕೆ ತಾಳ್ಮೆ ಮತ್ತು ಅನುಭವ ಬೇಕು. ಆಸೆಗಳನ್ನು ಈಡೇರಿಸಿಕೊಳ್ಳಲು ಪಡುವ ಆತುರದಲ್ಲಿ ಯುಕ್ತಾಯುಕ್ತತೆಯ ವಿವೇಚನೆ ಲುಪ್ತವಾಗುತ್ತದೆ. ಅದು ವ್ಯಕ್ತಿಯನ್ನು ಅಧೋಗತಿಗೆ ತಳ್ಳುತ್ತದೆ.

ಹಾಗೆಂದು ಆಸೆ ಪಡದಿದ್ದರೆ ಜಗದ್ವ್ಯಾಪಾರ ನಡೆಯುವುದೆಂತು? ಎಂದರೆ, 'ಆಸ್ಥೆಗೆ ಇಂಬುಕೊಡುವಂತಹ ಆಸೆ' ಇರಬೇಕು. ನಿರಾಸೆಯಿಂದ ಕುಂದದಂತಹ ಆಸ್ಥೆಯಿರಬೇಕು. ಅಂದರೆ ಆಸೆ ಈಡೇರಲಿ ಅಥವಾ ನಿರಾಸೆಯಾಗಲಿ ಆಸ್ಥೆ ಕುಂದಬಾರದು. ಅಂತಹ ತಟಸ್ಥ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳುವುದೇ 'ಆಸ್ಥೆಯನು ಕುಂದಿಸದ ತಾಟಸ್ಥವೊಂದು' ಎಂಬ ಈ ಮುಕ್ತಕದ ಸಾಲು. ಹಾಗಾಗಿ ಸೋಲು ಗೆಲುವುಗಳ ತಿಕ್ಕಾಟದಲ್ಲಿ ಜೀವನದ ಉತ್ಸಾಹವನ್ನು ಕಳೆದುಕೊಳ್ಳಬಾರದು, ಎನ್ನುವುದು ತತ್ವ ಎರಡು ಸ್ಥಿತಿಗಳಲ್ಲೂ ಮಾನಸಿಕ ಸಂತುಲನೆಯನ್ನು ಕಾಪಾಡಿಕೊಂಡು, ಪ್ರತಿ ಹೆಜ್ಜೆಯೂ ನಮ್ಮ ಜೀವನೋತ್ಸಾಹದ ಮುನ್ನಡೆಯಲ್ಲಿ ಮತ್ತೊಂದು 'ಹೆಜ್ಜೆ' ಎಂದು ಬಗೆದು, ನಗುನಗುತ್ತಾ, ಸಮಾಧಾನದಿಂದ ಮುಂದುವರೆಯಬೇಕು.

ಪ್ರತಿಯೊಬ್ಬರೂ 'ನಾವು ಹಾಗಿದ್ದೇವೆಯೇ?' ಎಂದು ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ. ನಾವು ಪಡುವ ಆಸೆಗಳು ನಮ್ಮ ಬದುಕಿನ ನಿಜವಾದ ಮತ್ತು ಧೀರ್ಘಕಾಲಿಕ ಸುಖಕ್ಕೆ ಪೂರಕವಾಗಿದೆಯೇ ಎಂದು ಸದಾ "ಸಚೇತ'ರಾಗಿರಬೇಕು. ಕ್ಷುಲ್ಲಕ ಮತ್ತು ತಾತ್ಕಾಲಿಕ ಆಸೆಗಳಿಂದ, ಆಸೆ ನಿರಾಸೆಗಳ ಏರಿಳಿತಗಳ ಹೊಡೆತಕ್ಕೆ ಸಿಲುಕಿದರೂ, ಅವುಗಳನ್ನು ಪ್ರತಿನಿತ್ಯ ನಡೆಯುವ ಮತ್ತೊಂದು ಘಟನೆಯೆಂದು ಪರಿಗಣಿಸಿ ಜೀವನೋತ್ಸಾಹವನ್ನು ಹಿಡಿದಿಟ್ಟುಕೊಂಡು ಮುನ್ನಡೆದರೆ, ಬದುಕು ಸ್ವಾಸ್ಥ್ಯದಿಂದ ಕೂಡಿ 'ಸ್ವಸ್ಥವಾಗುತ್ತದೆ. ನಮಗೆ ಸ್ವಸ್ಥ ಜೀವನ ಬೇಕೆಂದರೆ 'ಸಂತುಲನೆ' ಅವಶ್ಯಕ ಎನ್ನುವುದೇ ಈ ಮುಕ್ತಕದ ಹೂರಣ

ಮುಕ್ತಕ – 724

**ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ।**
**ಹಿತವಿರಲಿ ವಚನದಲಿ, ಋತವ ಬಿಡದಿರಲಿ॥**
**ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ।**
**ಅತಿ ಬೇಡವೆಲ್ಲಿಯುಂ - ಮಂಕುತಿಮ್ಮ॥**

ಕೇಳಿಸದಿರಲಿ= ಕೇಳಿಸದೆ+ಇರಲಿ, ಬಿಡದಿರಲಿ=ಬಿಡದೆ+ಇರಲಿ, ಮನಸಿನುದ್ವೇಗದಲಿ= ಮನಸಿನ+ಉದ್ವೇಗದಲ್ಲಿ, ಬೇಡವೆಲ್ಲಿಯುಂ=ಬೇಡವು+ಎಲ್ಲಿಯುಂ

ಸ್ಮಿತ=ನಗೆ, ವದನ=ಮುಖ, ವಚನ= ಮಾತು, ಋತ= ಅಂತರಂಗದ ಸತ್ಯ

“ನಿನ್ನ ಮೊಗದಲ್ಲಿ ನಗೆಯಿರಲಿ. ಆದರದು ಅನ್ಯರಿಗೆ ಕೇಳಿಸದಿರಲಿ, ನಿನ್ನ ಮಾತಿನಲ್ಲಿ ಹಿತವಿರಲಿ ಆದರೆ ಅದು ಸತ್ಯವಾಗಿರಲಿ. ಸುಖದುಃಖಗಳ ಅನುಭವದಲ್ಲಿ ಒಂದು ಮಿತಿಯಿರಲಿ, ಯಾವುದರಲ್ಲಿಯೂ ಅತಿಯಾಗದಿರಲಿ' ಎಂದು, ನಮ್ಮ ಬದುಕಿನಲ್ಲಿ ನಾವು ನಮ್ಮ ಅ ಹಿತಕ್ಕಾಗಿಯೇ ಪಾಲಿಸಬೇಕಾದ ಕೆಲ ಮೂಲಭೂತ ವಿಚಾರಗಳನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

34

| | |
|---|---|
| ಕಗ್ಗರಸಧಾರೆ. | ಓಲೆಕಾರನು ನೀನು 724 - 728 |

ನಾವು ಕೆಲವರನ್ನು ನೋಡುತ್ತೇವೆ. ಸದಾ ಕಾಲ ಮುಖಗಂಟು ಹಾಕಿಕೊಂಡೇ ಇರುತ್ತಾರೆ, ಅವರಿಗೆ ನಗಲು ಬರುವುದಿಲ್ಲವೇನೋ, ಎನ್ನುವಂತೆ. ಈ ಜಗತ್ತು ಒಂದು ಕನ್ನಡಿಯಂತೆ. ನಾವು ನಕ್ಕರೆ ನಮ್ಮನ್ನು ನೋಡಿ ಜಗವೂ ನಗುತ್ತದೆ, ನಾವು ಸಿಡುಕಿದರೆ ಅದೂ ಸಹ ಸಿಡುಕುತ್ತದೆ. ಆದರೆ ಆ ನಗು ಮೃದುವಾಗಿ, ನಯವಾಗಿ 'ಮಂದಹಾಸ ಅಥವಾ ಮುಕ್ತ ನಗೆ' ಯಾಗಬೇಕೇ ಹೊರತು 'ಅಟ್ಟಹಾಸ' ದ ನಗುವಾಗಬಾರದು. ಹಾಗಾಗಿ ಸಾಧ್ಯವಾದಷ್ಟುಮಟ್ಟಿಗೆ ಒಂದು ಮಂದಹಾಸವನ್ನು ಹೊತ್ತಿರುವುದು ನಮಗೆ ಮತ್ತು ನಮ್ಮೊಡನಾಡಿಗಳಿಗೂ ಒಳ್ಳೆಯದು.

ನಾವಾಡುವ ಮಾತು ಹಿತವಾಗಿರಬೇಕು. "ಸತ್ಯಂ ಭ್ರೂಯಾತ್ ಪ್ರಿಯಂ ಭ್ರೂಯಾತ್ ನ ಭೂಯಾತ್ ಸತ್ಯಮಪ್ರಿಯಂ" ಎಂದಿದ್ದಾರೆ ನಮ್ಮ ಪುರಾತನರು. ಸತ್ಯವನ್ನೇ ನುಡಿಯಬೇಕು ಮತ್ತು ಪ್ರಿಯವಚನವನ್ನೇ ನುಡಿಯಬೇಕು. ಆದರೆ ಸತ್ಯವು ಕೇಳುವವನಿಗೆ ಅಪ್ರಿಯವಾಗುವುದಾದರೆ, ಅದೇ ಸತ್ಯವನ್ನು 'ಪ್ರಿಯ'ವಾಗುವಂತೆ ಹಿತವಾಗಿ ನುಡಿಯಬೇಕು ಎನ್ನುತ್ತದೆ ಈ ವಾಣಿ. ಇದನ್ನೇ ನಮ್ಮ ಶಿವ ಶರಣರು ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ಮಣಿಯಂತಿರಬೇಕು" ಎಂದರು. ಈ ಮುಕ್ತಕದಲ್ಲಿ 'ಋತ' ಎಂದಿದ್ದಾರೆ. ತೈತ್ತರೀಯದಲ್ಲಿ 'ಸತ್ಯಂ ಚ ಸ್ವಾಧ್ಯಾಯ ಪ್ರವಚನೇಚ, ಋತಂ ಚ ಸ್ವಾಧ್ಯಾಯ ಪ್ರವಚನೇಚ ಎಂದಿದ್ದಾರೆ. 'ಋತ'ವೆಂದರೆ ಮನಸ್ಸಿನ ಭಾವನೆ

ಮತ್ತು ಆ ಭಾವನೆ ಬದಲಾಗದೆ ಹಾಗೆಯೇ ವ್ಯಕ್ತವಾದರೆ ಅದು 'ಸತ್ಯ'. 'ಋತ ಮತ್ತು ಸತ್ಯ' ಎರಡರ ಸಮನ್ವಯದ ಸಾಧನೆಯೇ ಪರಿಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ದಾರಿ.

ಪ್ರತಿಯೊಬ್ಬರಿಗೂ ಬದುಕಿನಲ್ಲಿ ಸುಖ ಮತ್ತು ದುಃಖಗಳ ಅನುಭವವಾಗುತ್ತದೆ. ಆದರೆ ಸುಖ ಬಂದಾಗ "ಅತಿಭೋಗ'ದಲ್ಲಿ ಉಬ್ಬುವುದು ಮತ್ತು ದುಃಖವಾದಾಗ 'ಅತಿಸಂತಾಪ'ದಲ್ಲಿ ಕುಗ್ಗುವುದೂ ಮಾಡದೆ ಇರಬೇಕು ಎನ್ನುತ್ತಾರೆ ಗುಂಡಪ್ಪನವರು. ನಮಗೆ ಆದ ಸಂತೋಷದ ಅತಿ ಪ್ರದರ್ಶನ ನಮ್ಮಲ್ಲಿ 'ಅಹಂಕಾರ'ವನ್ನು ಮತ್ತು ಅನ್ಯರಲ್ಲಿ 'ಈರ್ಷೆ'ಯನ್ನೂ ಮತ್ತು ನಮ್ಮ 'ದುಃಖದ ಅತಿ ಪ್ರದರ್ಶನದಿಂದ ನಮ್ಮಲ್ಲಿ ಅನಾವಶ್ಯಕವಾದ ದೈನ್ಯತೆಯನ್ನೂ ಅನ್ಯರಲ್ಲಿ ನಮ್ಮ ಬಗ್ಗೆ ವಿನಾಕಾರಣ ಅಸಹ್ಯ ಮತ್ತು ತಿರಸ್ಕಾರವನ್ನೂ ಉಂಟುಮಾಡುವ ಸಾಧ್ಯತೆ ಇದೆ. ಹಾಗಾಗಿ ಅವೆರಡನ್ನೂ ತ್ಯಜಿಸಬೇಕು. ಒಟ್ಟಾರೆ ಹೇಳುವುದಾದರೆ ಎಂತಹ ಸಂದರ್ಭದಲ್ಲೂ ಅತಿ ಸರ್ವತ್ರ ವರ್ಜಯೇತ್' ಎನ್ನುವಂತೆ, ಯಾವುದೂ ಅತಿಯಾಗದೆ ನಮ್ಮ ನಗೆ, ಮಾತು ಮತ್ತು ಭಾವಗಳೆಲ್ಲವೂ ಒಂದು 'ಮಿತಿ' ಯಲ್ಲಿರಬೇಕು. ಇದ್ದರೆ ಸುಖ ಇಲ್ಲದಿದ್ದರೆ, ದುಃಖ, ಕೋಭೆ. - ಆಯ್ಕೆ ನಮ್ಮದೇ ಅಲ್ಲವೇ?



**ಮುಕ್ತಕ - 725**

**ಕಡಲ್ಗಳೊಂದಾದೊಡಂ, ಪೊಡವಿ ಹಬೆಯಾದೊಡಂ ।**

**ಬಿಡದಿರೊಳನೆಮ್ಮದಿಯ, ಬಿಡು ಗಾಬರಿಕೆಯ ॥**

**ಕಡಲ ನೆರೆ ತಗ್ಗುವುದು, ಪೊಡವಿ ಧೂಳಿಳಿಯುವುದು ।**

**ಗಡುವಿರುವುದೆಲ್ಲಕಂ ಮಂಕುತಿಮ್ಮ ॥**

ಕಡಲ್ಗಳೊಂದಾದೊಡಂ= ಕಡಲ್ಗಳು+ಒಂದು+ಆದೊಡಂ, ಹಬೆಯಾದೊಡಂ=ಹಬೆ+ಆದೊಡಂ,

ಬಿಡದಿರೊಳನೆಮ್ಮದಿಯ=ಬಿಡದೆ+ ಇರು+ಒಳ+ನೆಮ್ಮದಿಯ, ಧೂಳಿಳಿಯುವುದು=ಧೂಳು+ಇಳಿಯುವುದು,

ಗಡುವಿರುವುದೆಲ್ಲಕಂ=ಗಡುವು+ಇರುವುದು+ಎಲ್ಲಕಂ

ಕಡಲು=ಸಮುದ್ರ, ಪೊಡವಿ=ಪೃಥ್ವಿ, ಹಬೆ=ಆವಿ, ಗಡುವು=ನಿಗದಿತ ಸಮಯ

ಕಡಲುಗಳೆಲ್ಲಾ ಅಲೆಯದ್ದು ಉಕ್ಕಿ ಒಂದಾದರೂ, ಧರೆ ಕಾದು ಹಬೆಯಾಗಿ ಧೂಳೆದ್ದರೂ, ನೀನು ನಿನ್ನ ಅಂತರಂಗದ ನೆಮ್ಮದಿಯನ್ನು ಬಿಡಬೇಡ. ಏಕೆಂದರೆ ಉಕ್ಕುವ ಸಮುದ್ರ ಶಾಂತವಾಗುತ್ತದೆ, ಧರೆಯಮೇಲೆ ಎದ್ದ ಧೂಳೆಲ್ಲ ಮತ್ತೆ ಭೂಮಿಗಿಳಿದು, ಶಾಂತವಾಗುತ್ತದೆ. ಗಾಬರಿಯ ಬಿಡು, ಎಲ್ಲಕ್ಕೂ ಒಂದು ಸಮಯವಿರುತ್ತದೆ, ಆ ಸಮಯಕ್ಕಾಗಿ ಶಾಂತವಾಗಿ ನಿರೀಕ್ಷಿಸು ಎನ್ನುವಂತೆ ಬದುಕಿನ ಏರಿಳಿತಗಳನ್ನು ನೋಡುವ ಮತ್ತು ಅನುಭವಿಸುವ ಬಗೆ ಮತ್ತು ಜೀವನದಲ್ಲಿ ತಾಳ್ಮೆಯನ್ನು ವಹಿಸಬೇಕಾದ ಅವಶ್ಯಕತೆಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕೆಲವು ಮಂದಿಯ ಹೊರತು ಬದುಕಿನಲ್ಲಿ ಎಲ್ಲರಿಗೂ ಏರಿಳಿತಗಳು ಬರುತ್ತವೆ. ಒಂದರ ಮೇಲೊಂದರಂತೆ ಕಷ್ಟಗಳ ಸರಮಾಲೆ ನಮ್ಮ ಮೇಲೆ ಬಂದೆರಗುತ್ತದೆ. ಆ ಕಷ್ಟ 'ದೊಡ್ಡದು ಅಥವಾ ಚಿಕ್ಕದು' ಎನ್ನುವುದು ಆ ವ್ಯಕ್ತಿಯ 'ತಡೆದು' ಕೊಳ್ಳುವ ಶಕ್ತಿಯ ಮೇಲೆ ನಿರ್ಭರವಾಗಿರುತ್ತದೆ. ಕೆಲವರು ಸಣ್ಣ ಕಷ್ಟಕ್ಕೂ ಆಕಾಶವೇ ಕಳಚಿ ತಲೆಯಮೇಲೆ ಬಿದ್ದಂತಾಡಿದರೆ, ಕೆಲವರು ಅತಿ ದೊಡ್ಡ ಕಷ್ಟವನ್ನೂ ಲೀಲಾಜಾಲವಾಗಿ ಎದುರಿಸಿ, ಜಯಿಸಿಬಿಡುತ್ತಾರೆ. ಇದನ್ನು ನಾವೆಲ್ಲಾ ನಮ್ಮ ಸುತ್ತುಮುತ್ತಲಿನ ಜನರಲ್ಲಿ ಕಂಡಿದ್ದೇವೆ. ಜೀವನೋತ್ಸಾಹವನ್ನು ಉಳಿಸಿಕೊಂಡವರು ಎಂತಹ ಕಷ್ಟವನ್ನಾದರೂ ಎದುರಿಸಿ ಜಯಿಸಿ ಹೊರಬರುತ್ತಾರೆ. ಆದರೆ ಹಾಗೆ ಜೀವನೋತ್ಸಾಹವನ್ನು ಹಿಡಿಟ್ಟುಕೊಳ್ಳಬೇಕಾದರೆ, ನಾವು ಮಾಡಬೇಕಾದದ್ದು ಏನೆಂಬುದನ್ನೇ ತಿಳಿಸಿದ್ದಾರೆ ಡಿವಿಜಿ.

ಇಲ್ಲಿ ಯಾವುದೂ ಶಾಶ್ವತವಲ್ಲ, ಎಲ್ಲವೂ ಬದಲಾಗುತ್ತದೆ ಎಂದು ದೃಢ ನಂಬಿಕೆ ಬೇಕು. ಬದಲಾಗುವ ಕಾಲಕ್ಕಾಗಿ ಸಹನೆಯಿಂದ ಕಾಯಬೇಕು. ಸಪ್ತಸಾಗರಗಳು ಉಕ್ಕಿ ಒಂದಾಗುವಂತೆ, ಕಷ್ಟಗಳ ಸಮುದ್ರವೇ ನಮ್ಮ ಮೇಲೆ ಬಿದ್ದಾಗಲ್ಲೂ, ಎದ್ದ ಅಲೆ ಖಂಡಿತ ಇಳಿದೇ ಇಳಿಯುತ್ತದೆ ಎಂದು ಅರಿತು ಧೈರ್ಯವಾಗಿ ಮತ್ತು ಧೃಢವಾಗಿ ನಿಂತರೆ, ಕಾಲ ಸಂದಂತೆ ಅಲೆಗಳೆಲ್ಲಾ ಇಳಿದು ಶಾಂತವಾದಾಗ, ನಾವು ಮತ್ತೆ ತಲೆಯೆತ್ತಬಹುದಲ್ಲವೇ? ಹಾಗೆಯೇ ಬಿಸಿಲಿನ ಬೇಗೆಗೆ ಧರೆಯಲ್ಲ ಕಾದು, ಧೂಳೆದ್ದು ಕಣ್ಣು ಕಾಣದ ಸ್ಥಿತಿಯಲ್ಲಿ, ಕಣ್ಣ ಮುಚ್ಚಿ ನಿಂತರೆ ಸ್ವಲ್ಪ ಹೊತ್ತಾದ

ಮೇಲೆ ಆ ಧೂಳೆಲ್ಲ ಧರೆಗೆ ಇಳಿದು ನೆಲಕಚ್ಚಿ ಕುಳಿತಾಗ, ನಾವು ಮತ್ತೆ ಕಣ್ಣರಳಿಸಿ ಬದುಕಿನ ಮುಂದಿನ ಹಾದಿಯನ್ನು ನಿಚ್ಚಳವಾಗಿ ನೋಡಬಹುದಲ್ಲವೇ? ಒಟ್ಟಾರೆ ಕಷ್ಟಗಳನನುಭವಿಸಲು ಮತ್ತು ಕಷ್ಟಕಾಲದಿಂದ ಹೊರಬರಲು, 'ತಾಳ್ಮೆ' ಬೇಕು.

ಕಾಲವೆಂಬುದು ಒಂದು ಅವ್ಯಾಹತ ಪ್ರವಾಹ. ಬಂದದ್ದು ಯಾವುದೂ ಶಾಶ್ವತವಾಗಿ ಇದ್ದುಬಿಡಲು ಸಾಧ್ಯವಿಲ್ಲ. ಕಾಲಪ್ರವಾಹದಲ್ಲಿ ಎಲ್ಲವೂ ಕೊಚ್ಚಿಕೊಂಡು ಹೋಗಿಬಿಡುತ್ತದೆ. ಹಾಗೆಯೇ, ನಮಗೆ ಬರುವ ಕಷ್ಟದ ಮತ್ತು ನೋವಿನ ಸಂದರ್ಭಗಳೂ ಸಹ. ಹಾಗಾಗಿ ನಮ್ಮ ಕಷ್ಟಗಳನ್ನು, ನೋವಿನ ದಿನಗಳನ್ನು ತನ್ನೊಡನೆ ತೆಗೆದುಕೊಂಡು ಹೋಗುವ ಆ 'ಸಮಯ'ಕ್ಕಾಗಿ ನಾವು ಕಾಯಬೇಕು. ಅದನ್ನು ಬಿಟ್ಟು ವಿಹ್ವಲರಾಗಿ, ಪರದಾಡಿ, 'ಅಯ್ಯೋ' ಎಂದು ಗೋಳಾಡಿದರೆ ಏನೂ ಪ್ರಯೋಜನವಿಲ್ಲ. ಪರದಾಡಿ ಗೋಳಾಡಿದ್ದಷ್ಟೇ ಲಾಭ. ಕಾಲ ಬಂದಾಗ ಬರುವ ಪರಿಹಾರ ಖಂಡಿತ ಬರುವುದು. 'ಕಾಲಾಯ ತಸ್ಯೆ ನಮಃ' ಎಂದು ಆ ಕಾಲಕ್ಕೆ ಕಾಯದೆ ಅನ್ಯ ಮಾರ್ಗವಿಲ್ಲ.

**ಮುಕ್ತಕ - 726**

**ನಲಿಸುವೊಲಿಸುವ, ಕೆಣಕಿ ಕಾಡಿಸುವ, ಮುಳಿಯಿಸುವ ।**

**ಕೆಳೆ ನಂಟು ಹಗೆ ಕಲಹ ಕುಹಕದೋಲೆಗಳು ॥**

**ಹಲಬರಿಗೆ ಹಂಚೆ ಬಾರೆಂದು ವಿಧಿ ನೇಮಿಸಿಹ ।**

**ಇಳೆಯಂಚೆಯಾಳು ನೀಂ - ಮಂಕುತಿಮ್ಮ ॥**

ನಲಿಸುವೊಲಿಸುವ=ನಲಿಸುವ+ಒಲಿಸುವ, ಕುಹಕದೋಲೆಗಳು=ಕುಹಕದ+ಓಲೆಗಳು, ಬಾರೆಂದು=ಬಾರ+ಎಂದು, ಇಳೆಯಂಚೆಯಾಳು=ಇಳೆಯ+ಅಂಚೆ+ಆಳು

ಮುಳಿಯಿಸುವ=ಕೋಪಗೊಳ್ಳುವ, ಕೆಳೆ=ಸ್ನೇಹ, ಕಲಹ-ಜಗಳ, ಕುಹಕ=ಕುಚೇಷ್ಟೆಯ, ಹಲಬರಿಗೆ=ಹಲವರಿಗೆ, ಇಳೆಯ=ಈಜಗತ್ತಿನ

ಸಂತೋಷಗೊಳಿಸುವ, ರಮಿಸುವ, ಕೆಣಕಿ ಕಾಡಿಸುವ, ಕೋಪಗೊಳ್ಳುವ, ಸ್ನೇಹ, ಬಂಧುತ್ವ, ದ್ವೇಷ, ಕಿತ್ತಾಟ ಕುಹಕ ಭಾವಗಳನ್ನು ಹೊತ್ತ ಹಲವಾರು ಓಲೆಗಳನ್ನು ಹಲವರಿಗೆ ಹಂಚಿ ಬಾರೆಂದು ವಿಧಿ ಕಳುಹಿಸಿಹ ಅಂಚೆಯ ಆಳು(ಪೋಸ್ಟ ಮ್ಯಾನ್) ನೀನು ಎಂದು ಹೇಳುತ್ತಾ, ನೀ ಸೂಸುವ ಭಾವಗಳೆಲ್ಲಾ ಆ ವಿಧಿಯ ನಿರ್ದೇಶನದಂತೆ

ನಡೆಯುತ್ತದೆ, ನೀನು ಕೇವಲ ನಿಮಿತ್ತ ಮಾತ್ರ ಎನ್ನುವಂತಹ ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಅನ್ಯರೊಡನೆ ಇಟ್ಟುಕೊಳ್ಳುವ ಪ್ರತೀ ಸಂಬಂಧ ಸಂಪರ್ಕಗಳಿಗೆ, ಅವರೊಂದಿಗೆ ವ್ಯಕ್ತಪಡಿಸುವ ಭಾವನೆಗಳಿಗೆ ಒಂದು ಕಾರಣವಿರುತ್ತದೆ ಮತ್ತು ಆ ಕಾರಣ ನಮಗೆ ತಿಳಿಯುವುದೂ ಇಲ್ಲ, ಅರ್ಥವಾಗುವುದೂ





ಇಲ್ಲ. ನಮ್ಮ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರಿಗೂ ನಾವು ಹಲವಾರು ರೀತಿಯ ಭಾವನೆಗಳನ್ನು ಹಂಚುತ್ತಿರುತ್ತೇವೆ ಮತ್ತು ಆ ಭಾವಗಳೇ ನಮ್ಮ ಮತ್ತು ಅನ್ಯರೊಂದಿಗಿನ ಸಂಪರ್ಕ ಸಾಧನ ಮತ್ತು ಸೇತುವೆಯಾಗಿ, ನಮ್ಮ ಮತ್ತು ಅವರ ಸಂಬಂಧದ ಗುಣ ನಿರ್ಣಾಯಕವಾಗುತ್ತದೆ. ನಾವು ಹಂಚುವ ನಾನಾ ರೀತಿಯ ಭಾವಗಳಿಗೆ ನಮ್ಮ ಅಂತರಂಗದಲ್ಲಿನ ಭಾವನೆಯೇ ಕಾರಣ ಮತ್ತು ಆ ಅಂತರಂಗದ ಭಾವಕ್ಕೆ ನಮ್ಮ ಪೂರ್ವಕರ್ಮ ನಿರ್ಮಿತ ಸಂಸ್ಕಾರಗಳೇ ಕಾರಣ. ನಮ್ಮ ಜನ್ಮಜನ್ಮಾಂತರದ ಕರ್ಮಗಳಿಗೆ ನಮ್ಮನ್ನು ಪ್ರೇರೇಪಿಸುವುದೇ, ಜಗನ್ನಾಟಕ ಸೂತ್ರಧಾರಿಯಾದ ವಿಧಾತ '

'ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ। ಅಹಂಕಾರಮೂಢಾತ್ಮಾ ಕರ್ತಾಹಮಿತಿ ಮನ್ಯತೇ॥ (ಭ. ಗೀ- 3-27) ಈ ಶ್ಲೋಕದ ಪ್ರಕಾರ ಎಲ್ಲವೂ ಪ್ರಕೃತಿ ನಿರ್ಮಿತವಾದ ಕ್ರಿಯೆ ಮತ್ತು ಗುಣಗಳು. ಆದರೆ ಮನುಷ್ಯರು ಅಹಂಕಾರದಿಂದ ಮತ್ತು ಅಜ್ಞಾನದಿಂದ 'ನಾನು' ಮಾಡುತ್ತಿದ್ದೇನೆ ಎಂದುಕೊಳ್ಳುತ್ತಾರೆ ಎನ್ನುತ್ತಾನೆ ಶ್ರೀ ಕೃಷ್ಣ. ನಾವು ಅಜ್ಞಾನದಿಂದ ಎಲ್ಲವನ್ನೂ 'ನಾವು ಮಾಡುತ್ತಿದ್ದೇವೆ, ನಾವು ಹಾಗೆ ಮಾಡಿಬಿಡುತ್ತೇವೆ, ಅಥವಾ ಅವರು ನನಗೆ ಹೀಗೆ ಮಾಡಿಬಿಟ್ಟರು ಅಥವಾ ಹಾಗೆ ಮಾಡಿಬಿಟ್ಟರು' ಎಂದು ವ್ಯರ್ಥ ಪ್ರಲಾಪ ಮಾಡುತ್ತಿರುತ್ತೇವೆ ಅಲ್ಲವೇ? ಆದರೆ ನಾವು

ಆಡುವ ಮಾತು ಮತ್ತು ಮಾಡುವ ಕರ್ಮ ಎಲ್ಲವೂ ಪೂರ್ವ ನಿರ್ಧಾರಿತ ವಿಧಿ ನಿಯಮ ಅಥವಾ ವಿಧಿಲಿಖಿತದ ಪ್ರಕಾರ ಆಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಹಾಗಾಗಿ ಅವರು ಹೇಳುವಂತೆ ನಾವು ಕೇವಲ ನಿಮಿತ್ತ ರಾಗಿ ಅಂತಹ ಭಾವನೆಗಳನ್ನು ವಿತರಿಸುವ 'ಅಂಚೆಯ ಅಣ್ಣಂದಿರು' ಮಾತ್ರ. ಅಂಚೆಯನ್ನು ವಿತರಿಸುವವರಿಗೆ ಆ ಪತ್ರಗಳಲ್ಲಿ ಏನಿರುತ್ತದೆ ಎಂದು ಗೊತ್ತಿಲ್ಲದಿದ್ದರೂ, ಅವರು ನಗುನಗುತ್ತಾ ತಮ್ಮ ವಿತರಣೆ ಮಾಡಿದರೆ, ಬಂದಿರುವುದು ಸಂತೋಷದ ಸುದ್ದಿಯಾದರೆ ವಿತರಕನ ನಗು ಆ ಸಂತೋಷವನ್ನು ಹೆಚ್ಚಿಸಬಹುದು ಅಥವಾ ದುಃಖದ ಸಂಗತಿಯಾದರೆ ವಿತರಕನ ನಗು ಆ ದುಃಖವನ್ನು ಕೊಂಚವಾದರೂ ಕಡಿಮೆಯಾಗಿಸಬಹುದು. ವಿಧಿನಿಯಮದನುಸಾರವಾಗಿ ನಾವು ಭಾವಗಳನ್ನು ವಿತರಿಸಿದರೂ ಅದನ್ನು ವಿತರಿಸುವ ರೀತಿಯನ್ನು ನಮ್ಮ ವಿವೇಚನೆಯಿಂದ ಸುಧಾರಿಸಿದರೆ ಒಳ್ಳೆಯದು. ನಮ್ಮ ಆಚರಣೆಯಿಂದ ಈ ಜಗತ್ತಿನಲ್ಲಿ ಕಿಂಚಿತ್ತಾದರೂ ಸುಖ, ಸಂತೋಷ, ನಗು ಮುಂತಾದವುಗಳನ್ನು ಉಂಟುಮಾಡಲಾದರೆ ಅದಕ್ಕಿಂತ ಸಾರ್ಥಕತೆ ಬದುಕಿಗೆ ಮತ್ತೇನು ಬೇಕು ಹೇಳಿ ನೋಡುವಾ ?



**ಮುಕ್ತಕ – 727**

**ಓಲೆಗಾರನಿಗೇಕೆ ಬರೆದ ಸುದ್ದಿಯ ಚಿಂತೆ? ।**

**ಓಲೆಗಳನವರವರಿಗೈದಿಸಿದರೆ ಸಾಕು ॥**

**ಸಾಲಗಳೊ, ಶೂಲಗಳೊ, ನೋವುಗಳೂ ನಗುವುಗಳೊ ।**

**ಕಾಲೋಟವವನೂಟ - ಮಂಕುತಿಮ್ಮ॥**

ಓಲೆಗಾರನಿಗೇಕೆ=ಓಲೆಗಾರನಿಗೆ+ಏಕೆ, ಓಲೆಗಳನವರವರಿಗೈದಿಸಿದರೆ=ಓಲೆಗಳನು+ಅವರವರಿಗೆ+ಐದಿಸಿದರೆ+ಸಾಕು,

ಕಾಲೋಟವವನೂಟ=ಕಾಲ+ಓಟವು+ಅವನ+ಊಟ,

ಓಲೆಗಾರ=ಪತ್ರಗಳನ್ನು ವಿತರಿಸುವವ, ಐದಿಸಿದರೆ=ತಲುಪಿಸಿದರೆ, ಶೂಲ=ಇರಿತ,

ಪತ್ರ ಹಂಚುವವನಿಗೆ ಪತ್ರದೊಳಗಿನ ಸುದ್ದಿಯ ಚಿಂತೆ ಏಕೆ? ಬೇರೆ ಬೇರೆಯವರಿಗೆ ಸೇರಬೇಕಾದ ಪತ್ರಗಳು ಅವರವರಿಗೆ ಸೇರಿಸಿದರೆ ಸಾಕು. ಆ ಪತ್ರಗಳಲ್ಲಿ, ಸಾಲದ ವಿಷಯವೋ, ನೋವಿನ ವಿಚಾರವೋ ಅಥವಾ ಸಂತೋಷದ

ಸಮಾಚಾರವೋ ಏನಾದರಾಗಲಿ ಅದು ಕೇವಲ ಯಾರಿಗೆ ಸೇರಬೇಕೋ ಅವರಿಗೆ ಸೇರಿದರೆ ಸಾಕು. ಅದನ್ನು ತಲುಪಿಸುವವನಿಗೆ, ಆ ಪತ್ರಗಳನ್ನು ತಲುಪಿಸಿ ಕಾಲದೂಡುವುದೇ ಧರ್ಮ ಎಂದು, ಬದುಕಿನಲ್ಲಿ ಒಂದು ನಿರ್ಲಿಪ್ತ ಭಾವವನ್ನು ಬೆಳೆಸಿಕೊಳ್ಳುವ ಬಗೆಯನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಹಂಚುವುದಷ್ಟೇ ಕರ್ಮ. ಹಂಚುವ ಭಾವಗಳೊಂದಿಗೆ ನಮಗೆ ನಂಟು ಇರಬಾರದು. ಅಂಚೆಯನ್ನು ಹಂಚುವ 'ಅಂಚೆಯಣ್ಣ' ಎಂದಾದರೂ ತಾ ಹಂಚುವ ಒಲೆಗಳಲ್ಲಿ ಏನಿದೆ ಎಂದು ನೋಡುವನೆ? ಅಥವಾ ಆ ಒಲೆಗಳಲ್ಲಿನ ವಿಚಾರಗಳು ಅವನ ಮೇಲೆ ಯಾವುದಾದರೂ ಪ್ರಭಾವ ಬೀರುವುದೇ? ಹಾಗೆಯೇ ನಮ್ಮ ಪೂರ್ವ ಕರ್ಮದನುಸಾರ ನಾವು ವಿತರಿಸುವ ಭಾವಗಳನ್ನು ವಿತರಿಸುವುದಷ್ಟೇ ನಮ್ಮ ಕೆಲಸ ಮತ್ತು ಧರ್ಮ. ಅದರಿಂದ ಅದನ್ನು ಪಡೆದವರಿಗೆ, ನೋವೋ, ನಲಿವೋ, ಎದೆ ಶೂಲವೋ, ನಗುವೋ, ಸಂತೋಷವೋ, ಕೋಪವೋ, ಜಿಗುಪ್ಸೆಯೋ, ದ್ವೇಷವೋ ಆಗಬಹುದು. ಹಂಚುವುದಷ್ಟೇ ನಮ್ಮ ಕೆಲಸವಾದ್ದರಿಂದ, ನಾವು ಹಂಚಿದ್ದರಿಂದಾಗುವ ಪರಿಣಾಮಗಳಿಗೆ ನಮ್ಮ ದಾಯಿತ್ವವಿರುವುದಿಲ್ಲವಾದ್ದಾರಿಂದ ನಾವು ಚಿಂತೆ ಮಾಡುವ ಅವಶ್ಯಕತೆಯಿಲ್ಲ.

ಆದರೆ ಹಾಗೆ ವಿತರಿಸುವಾಗ ನಾವು ವಿತರಿಸುವ ಭಾವ ಯಾವ ರೀತಿಯದ್ದು, ಆ ರೀತಿಯ ಭಾವಕ್ಕೆ ನಮ್ಮ ಪೂರ್ವ ಕರ್ಮವೇನಿರಬಹುದು ಮತ್ತು ನಮ್ಮ ಭಾವ ಶುದ್ಧಿಗೆ ಎಂತಹ ಕರ್ಮದ ಅವಶ್ಯಕತೆ ಇದೆ ಮತ್ತು ಅಂತಹ ಶುದ್ಧ ಕರ್ಮಗಳನ್ನು ಮಾಡುವ ವಿಧಾನವೆಂತು ಎಂದು ಹಲವಾರು ರೀತಿಯಲ್ಲಿ ನಮ್ಮನ್ನು ನಾವೇ ಪ್ರಶ್ನಿಸಿಕೊಂಡು, ಆತ್ಮಾವಲೋಕನಮಾಡಿಕೊಳ್ಳುತ್ತಾ ಜೀವಿಸಿದರೆ ಮಾನ್ಯ ಗುಂಡಪ್ಪನವರು "ಕಾಲೋಟವವನೂಟ" ಎಂದು ಹೇಳಿದ ಹಾಗೆ ನಮ್ಮ ಬದುಕಿನ ನಡೆ ಶುದ್ಧವಾಗಬಹುದು. ಕಾಲದೊಟ್ಟಿಗೆ ಓಡುವ ನಮ್ಮ ಜೀವನ, ಕಾಲ





ಕ್ರಮಿಸಿದಂತೆ, ಸುಧಾರಿಸಬೇಕು, ಶುದ್ಧವಾಗಬೇಕು ಮತ್ತು ಸಂಸ್ಕರಣಗೊಳ್ಳಬೇಕು. ಹಾಗೆ ಸಂಸ್ಕರಣಗೊಂಡ ನಡೆಯಿಂದ, ಶುದ್ಧ ಕರ್ಮಿಗಳಾಗಿ, ಸದ್ಭಾವವನ್ನು ಬೆಳೆಸಿಕೊಂಡು ನಾವು ಅಂತಹ ಭಾವಗಳನ್ನೇ ವಿತರಿಸುವಂತಾದರೆ, ನಮ್ಮ ಜೀವನವೂ ಸಾರ್ಥಕವಾಗುತ್ತದೆ.

ಅದಕ್ಕೆ ಬದುಕನ್ನು ಅನುಭವಿಸಬೇಕು, ಆ ಅನುಭವಗಳನ್ನು ನಾವು ಸಾಕ್ಷಿಯಂತೆ ನೋಡುತ್ತಾ, ಅದರೊಳಗಿನ ನ್ಯೂನತೆಗಳನ್ನು 'ತೊಳೆ'ಯುತ್ತಾ ನಮ್ಮ ನಡೆ, ನುಡಿ, ವಿಚಾರ ಮತ್ತು ಆಚಾರಗಳನ್ನು ಸುಧಾರಿಸಿಕೊಳ್ಳುತ್ತಾ ಜೀವನವನ್ನು ಕಳೆದರೆ ನಮ್ಮ ಕರ್ಮಗಳು ಶುದ್ಧವಾಗಿ ಮುಂದೆ ನಾವು ವಿತರಿಸುವ "ಓಲೆಗಳು' ಕೇವಲ ಸಂತೋಷದಿಂದಲೋ, ನಗೆಯಿಂದಲೋ ಕೂಡಿ ಜಗತ್ತಿನ ಒಲುಮೆಗೆ ಮತ್ತು ನಲುಮೆಗೆ ನಾವೂ ಕಾರಣರಾದರೆ, ನಮ್ಮದು ಖಂಡಿತ ಸಾರ್ಥಕ ಬದುಕಾಗುತ್ತದೆ.

**ಮುಕ್ತಕ – 728**

**ನಗು, ಮನದಿ ಲೋಗರ ವಿಕಾರಂಗಳನ್ನು ನೋಡಿ |**

**ಬಿಗಿ ತುಟಿಯ, ದುಡಿವಂದು ನೋವಪಡುವಂದು ||**

**ಮೊಗು, ವಿಶ್ವಜೀವನದ ಜೀವಾಂತರಂಗದಲಿ |**

**ನಗುನಗುತ ಬಾಳ್, ತೆರಳು – ಮಂಕುತಿಮ್ಮ ||**

ದುಡಿವಂದು=ದುಡಿವ+ಅಂದು, ನೋವಪಡುವಂದು=ನೋವಪಡುವ+ ಅಂದು

ಪೊಗು=ನುಗ್ಗು, ಒಳಸೇರು,

ಲೋಕದ ವಿಚಿತ್ರಗಳ ಮತ್ತು ಲೋಕದ ಜನರ ವಿಚಿತ್ರ ನಡವಳಿಕೆಯನ್ನು ಕಂಡು, ಮನದಲ್ಲೇ ನಕ್ಕುಬಿಡು. ನಿನಗೆ ಕಷ್ಟ ಬಂದು ತೀವ್ರ ಹೋರಾಟ ನಡೆಸಬೇಕಾದಾಗ ಮೌನವಾಗಿ ಅನುಭವಿಸು, ಜಗವೆಲ್ಲವನು 'ಏಕಾತ್ಮಭಾವದಲಿ ನೋಡುತ್ತಾ ನಗುನಗುತ್ತಾ ಬಾಳು ಮತ್ತು ನಗುನಗುತ್ತಲೇ ಇಲ್ಲಿಂದ ತೆರಳು ಎಂದು ಸಂತೋಷದಿಂದ ಬದುಕುವ ಮತ್ತು ನಿರ್ಗಮಿಸುವ ಉಪಾಯವನ್ನು ನಮಗೆ ತಿಳಿಸಿದ್ದಾರೆ. ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ಜನರ ಚಿತ್ರ ವಿಚಿತ್ರ ಭಾವಗಳಿಂದ ಕೂಡಿದ ನಡವಳಿಕೆಯನ್ನು ಕಂಡು ಟೀಕೆ, ಕುಹಕ ಮುಂತಾದವುಗಳನ್ನು ಮಾಡದೆ ಅವುಗಳನ್ನು, ಪ್ರಕೃತಿ ಪ್ರಚೋದಿತ, ತ್ರಿಗುಣಗಳ ಆಟವೆಂದು ಬಗೆದು ಮನದಲ್ಲೇ ಒಂದು ನಗೆಯನ್ನು ನಕ್ಕು ಸುಮ್ಮನಿರಬೇಕು. ಲೋಕದ ಡೊಂಕನ್ನು ತಿದ್ದಲು ಸಾಧ್ಯವಿಲ್ಲ. ಅದು ಇರುವುದೇ ಹಾಗೆ, ನಮ್ಮ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳಲು ನಾವೇ ಬದಲಾಗುವುದು ಒಳಿತಲ್ಲವೇ?. ಹೇಗೆ? ಎಂದರೆ, ಬಹಳ ಸುಲಭ. 'ಅವರು ಹೀಗಿರಬೇಕು ಅಥವಾ ಅವರು ಹೀಗಿದ್ದರೆ

ಚೆನ್ನ'ಎನ್ನುವಂತಹ ಭಾವಗಳನ್ನು ನಮ್ಮೊಳಗಿಂದ ಅಳಿಸಿ ಹಾಕಿ 'ಅಪೇಕ್ಷಾರಹಿತ ನಿರ್ಲಿಪ್ತತೆ' ಯನ್ನು ಬೆಳೆಸಿಕೊಂಡರೆ ನಮ್ಮ ಅಂತರಂಗದ 'ಶಾಂತಿ'ಯನ್ನು ಕಾಪಾಡಿಕೊಳ್ಳಬಹುದು

ಸಂತೋಷದಿಂದ ಬದುಕುವ ಮತ್ತೊಂದು ಉಪಾಯವೇನೆಂದರೆ, ಕಷ್ಟಬಂದಾಗ ಮತ್ತು ಆ ಕಷ್ಟಗಳನ್ನು ಅನುಭವಿಸುವಾಗ ಮತ್ತು ಅದರ ನಿವಾರಣೆಗಾಗಿ ದುಡಿಯುವಾಗ, ನಮ್ಮ ಕಷ್ಟವನ್ನು ಜಗತ್ತಿಗೆಲ್ಲಾ ಸಾರದೆ, ಅನ್ಯರಿಗೆ ಹಂಚದೆ, ಅದರ ಭಾರವನ್ನು ಅನ್ಯರಿಗೆ ಹೊರಿಸದೆ, ಮೌನವಾಗಿ ನಮ್ಮ ಕಷ್ಟವನ್ನು ' ಬಿಗಿ ತುಟಿಯ, ದುಡಿವಂದು ನೋವ ಪಡುವಂದು' ಎಂದು ಡಿವಿಜಿ ಯವರು ಹೇಳುವಂತೆ ಅನುಭವಿಸಿದರೆ, ಕಾಲಕ್ರಮೇಣ ಕಷ್ಟಗಳ ನಿವಾರಣೆಯಾಗಿಯೋ ಅಥವಾ ಆ ಕಷ್ಟಗಳನ್ನು ಅನುಭವಿಸುವುದು ನಮಗೆ ಅಭ್ಯಾಸವಾಗಿಯೋ, ನಮ್ಮ ಅಂತರಂಗದಲ್ಲಿ ಶಾಂತಿಯುಂಟಾಗುತ್ತದೆ.

ಮೇಲೆ ಹೇಳಿದ ಭಾವಗಳನ್ನು ಬೆಳೆಸಿಕೊಂಡು ರೂಢಿಸಿಕೊಳ್ಳುವಾಗ, ಜಗತ್ತಿನಲ್ಲಿ ನಡೆವುದೆಲ್ಲವೂ ಸತ್ವರಜಸ್ತಮೋಗುಣಗಳ ಪ್ರಭಾವದಿಂದಾಗುವ ಕ್ರಿಯೆಗಳೆಂಬ ಅರಿವು ಮೂಡಿ, 'ಚೇತನ' ವು ಬೇರೆ ಬೇರೆ ರೂಪಗಳನ್ನು ಹೊತ್ತು, ಆ ರೂಪಗಳಿಗನುಗುಣವಾಗಿ ತೋರುವ ಭಿನ್ನ ಭಿನ್ನ ಭಾವಗಳನ್ನು 'ಸಾಕ್ಷಿ' ಭಾವದಿಂದ ನೋಡಿದಾಗ, ಮಾನ್ಯ ಗುಂಡಪ್ಪನವರು ಹೇಳುವ ' ವಿಶ್ವಜೀವನದ ಜೀವಾಂತರಂಗದ' ಅನುಭವವಾಗುತ್ತದೆ. ಆಗ ದೂರದಲ್ಲಿ 'ಸಾಕ್ಷಿ'ಯಂತೆ ನಿಂತು ಜಗತ್ತನ್ನು ಮತ್ತು ಅದರ ವೈಚಿತ್ರ್ಯಗಳನ್ನು ಕಂಡು 'ಆಹಾ ಜಗನ್ನಾಟಕ ಸೂತ್ರದಾರನ ಲೀಲೆ ಎಂತಹ ಅದ್ಭುತ' ಎಂದು ಸಂತೋಷ ಪಡಬಹುದು. ಅಂತಹ ಸ್ಥಿತಿಯನ್ನು ಪಡೆಯಲು ಈ ಜಗತ್ತಿನ ಮೇಲೆ ನಮಗಿರುವ ವ್ಯಾಮೋಹವನ್ನು ಮತ್ತು ಮಮತೆಯನ್ನು ಬಿಡಬೇಕು, ಬಿಟ್ಟು ಭಿನ್ನವಾಗಿ ನಿಂತು ನೋಡಬೇಕು. ಮೋಹವನ್ನು ಬಿಟ್ಟರೆ ಸಾಧಿಸಬಹುದು. ಕೇವಲ ನಮ್ಮ ಪ್ರಯತ್ನ ಬೇಕಷ್ಟೇ!!!

**ಮುಕ್ತಕ – 729**

**ಎಡರು ತೊಡರೆನಲೇಕೆ ? ಬಿಡಿಸು ಮತಿಗಾದನಿತ ।**

**ದುಡಿ ಕೈಯಿನಾದನಿತು; ಪಡು ಬಂದ ಪಾಡು ||**

**ಬಿಡು ಮಿಕ್ಕುದನು ವಿಧಿಗೆ, ಬಿಡದಿರುಪಶಾಂತಿಯನು |**

**ಬಿಡುಗಡೆಗೆ ದಾರಿಯದು - ಮಂಕುತಿಮ್ಮ ||**

ತೊಡರೆನಲೇಕೆ= ತೊಡರು+ಎನಲು+ಏಕೆ, ಮತಿಗಾದನಿತ=ಮತಿಗೆ+ಆದ+ಅನಿತ, ಕೈಯಿನಾದನಿತು=ಕೈಯಿನ+ಆದ+ಅನಿತ, ಬಿಡದಿರುಪಶಾಂತಿಯನು=ಬಿಡದೆ+ಇರು+ಉಪಶಾಂತಿಯನು, ದಾರಿಯದು=ದಾರಿ+ಅದು

ತೊಡರು=ಅಡ್ಡಿ ಆತಂಕಗಳು, ಬಿಡಿಸು=ಸರಿಪಡಿಸಿಕೋ, ಉಪಶಾಂತಿಯನು=ಅಂತರಂಗದ ಶಾಂತಿ.

"ಅಯ್ಯೋ ಬದುಕಿನಲ್ಲಿ ಕಷ್ಟಗಳು ಬಂದಿವೆಯಲ್ಲಾ' ಎಂದು ನೀ ಏಕೆ ಹೇಳುತ್ತೀಯೆ? ಆ ತೊಡಕುಗಳನ್ನು ನಿನ್ನ ಬುದ್ಧಿಗೆ ತೋಚಿದಷ್ಟನ್ನು, ಕೈಲಾದಷ್ಟನ್ನು ನೀನೇ ಬಿಡಿಸಿಕೋ, ನಿನ್ನ ಸಮಸ್ಯೆಗಳನ್ನು, ನಿನ್ನ ಕೈಲಾದಷ್ಟು, ನೀನೇ





ತೀರಿಸಿಕೋ. ತೀರಿಸಲಾಗದ್ದನ್ನು ಅನುಭವಿಸು. ಮಿಕ್ಕದ್ದನ್ನು ಆ ವಿಧಿಯಾಟಕ್ಕೆ ಬಿಟ್ಟುಬಿಡು. ಆದರೆ ಪ್ರಯತ್ನಪಡುವಾಗ ಅನುಭವಿಸುವಾಗ ಅಂತರಂಗದ ಶಾಂತಿಯನ್ನು ಕಾಪಾಡಿಕೋ, ಅದೇ ಬಿಡುಗಡೆಗೆ ದಾರಿ ಎಂದು ನಿರ್ಲಿಪ್ತ ಬದುಕಿನ ಪ್ರಯತ್ನ ಹೇಗಿರಬೇಕೆಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ ಪ್ರತಿಯೊಬ್ಬರ ಬದುಕಿನಲ್ಲೂ ಕಷ್ಟ, ತೊಂದರೆ, ತೊಡಕು 'ಎನ್ನುವಂತಹ ಸಂದರ್ಭಗಳು ಬರುತ್ತವೆ. ಒಬ್ಬೊಬ್ಬರಿಗೆ ಒಂದೊಂದು ರೀತಿ ಮತ್ತು ಗಾತ್ರದಲ್ಲಿಯಾದರೂ, ಬಂದೇ ಬರುತ್ತದೆ ಅಥವಾ ಇದ್ದೇ ಇರುತ್ತದೆ. ಜಗತ್ತಿನಲ್ಲಿ ಯಾರೂ ಇದರಿಂದ ಮುಕ್ತರಲ್ಲ. ಆದರೆ ಅಂತ ಸ್ಥಿತಿಯಲ್ಲಿ 'ಭವ ಮತ್ತು ಭಾವ' ದ ಬಂಧನದಿಂದ ಮುಕ್ತರಾಗುವ ಬಗೆ ಏನೆಂದರೆ, ನಮಗೆ ಸಂದ ಕಷ್ಟಗಳನ್ನು ನಾವು ನಮ್ಮ ಕೈಲಾದಷ್ಟನ್ನು ಅನುಭವಿಸಬೇಕು. ಅನ್ಯರಿಂದ ಸಹಾಯ ಪಡೆಯುವುದಾಗಲೀ ಅಥವಾ ಅನ್ಯರಿಗೆ ನಮ್ಮ ಹೊರೆಯನ್ನು ಹೊರಿಸುವುದಾಗಲೀ ಮಾಡದೆ ಮೌನವಾಗಿ ನಮ್ಮ ಹೊರೆಯನ್ನು ನಾವೇ ಹೊರಬೇಕು. ನಮ್ಮ ಶಕ್ತಿಗೆ ಮೀರಿದ್ದನ್ನು 'ವಿಧಿಯ ಇಚ್ಚೆಯಂತೆ' ಆದದ್ದಾಗಲಿ ಎಂದು ಬಿಡುವುದೇ ಉತ್ತಮ.

ಹಾಗೆ ಬಂದ ಕಷ್ಟಗಳ ಸಮಯವನ್ನು ತಾಳ್ಮೆಯಿಂದ ತಡೆಯುವ ಮನಸ್ಸಿಲ್ಲದವರು ತಾವೂ ಗೋಳಾಡುತ್ತಾ, ಪರದಾಡುತ್ತಾ ತಮ್ಮೊಡನೆ ನಂಟಿರುವ ಜನರನ್ನೂ ಪರದಾಡಿಸುತ್ತಾ ತಮ್ಮ ಮತ್ತು ಇತರರ ಮಾನಸಿಕ ನೆಮ್ಮದಿಯನ್ನೂ ಹಾಳುಮಾಡುತ್ತಾರೆ. ವಿವೇಕವಂತರು ಹಾಗೆ ಮಾಡಬಾರದು. ನಮ್ಮ ವಿದ್ಯೆ ಮತ್ತು ಸಂಸ್ಕಾರಗಳು ನಮಗೆ ಸಹನೆ, ತಾಳ್ಮೆ, ಸಹಿಷ್ಣುತೆ ಮುಂತಾದ ಗುಣಗಳನ್ನು ಕಲಿಸದಿದ್ದರೆ ಆ ವಿದ್ಯೆ ವ್ಯರ್ಥವಲ್ಲವೆ. ಭಕ್ತ ಶಿರೋಮಣಿ ಕುಲಶೇಖರ ಆಳ್ವಾರರು, ಸ್ವತಃ ತಿರುವನಂತಪುರ ಸಂಸ್ಥಾನದ ರಾಜರಾಗಿದ್ದರೂ 'ಯದ್ ಯದ್ ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಂ, ಏತತ್ ಪ್ರಾರ್ಥ್ಯಂ ಮಮ ಬಹುಮತಂ ಜನ್ಮ ಜನ್ಮಾಂತರೇಪಿ ತ್ವತ್ ಪಾದಾಂಬೋರುಹ ಯುಗಗತಾ ನಿಶ್ಚಲಾ ಭಕ್ತಿರಸ್ತು " ಎನ್ನತ್ತಾರೆ ಮುಕುಂದಮಾಲ ಸ್ತೋತ್ರದಲ್ಲಿ, 'ಹೇ ಪರಮಾತ್ಮ, ನನ್ನ ಪೂರ್ವ ಕರ್ಮಾನುಸಾರ ನಡೆಯಬೇಕಾದುದೆಲ್ಲಾ ನಡೆಯಲಿ, ಹಾಗೆ ನಡೆಯುವುದನ್ನು ನಾನು ಅನುಭವಿಸುವಾಗ ನನ್ನ ಮನಸ್ಸು ಮಾತ್ರ ನಿನ್ನ ಚರಣಾರವಿಂದಗಳಲ್ಲಿರಲಿ' ಎನ್ನುತ್ತಾರೆ, ಬೆಳೆಸಿಕೊಂಡರೆ ಅಂತಹ ಮನೋಭಾವವನ್ನು ನಾವು ಅಂತರಂಗದ ನಮ್ಮ ಶಾಂತಿಯನ್ನು ಕಾಪಾಡಿಕೊಳ್ಳಬಹುದು.

ಅಂತಹ ಮನೋಭಾವವನ್ನು ಬೆಳೆಸಿಕೊಂಡಾಗ, ನಾವು 'ನಮಗೆ ಕಷ್ಟ' ವೆಂಬ ನೋವಿನ ಭಾವದ, ಅನ್ಯರು ಸುಖಿಗಳು'ಎನ್ನುವ ಈರ್ಷೆಯ ಭಾವದ, "ಪರರು ನಮಗೆ ಒದಗುತ್ತಿಲ್ಲ' ಎನ್ನುವ ದೈನ್ಯತೆಯ ಭಾವದ 'ಬಂಧನದಿಂದ' ಮುಕ್ತರಾಗುತ್ತೇವೆ. ಅದನ್ನೇ ಮಾನ್ಯ ಗುಂಡಪ್ಪನವರು 'ಬಿಡುಗಡೆಗೆ ದಾರಿಯದು' ಎಂದರು. 'ಬಿಡುಗಡೆ'ಯೆಂದರೆ ಏನೂ ಇಲ್ಲದ ಸ್ಥಿತಿಯಲ್ಲ, ಅದು ಯಾವುದಕ್ಕೂ ಅಂಟಿಕೊಂಡಿಲ್ಲದ ಸ್ತಿತಿ. ನಾವು ಆ ಸ್ಥಿತಿಯನ್ನು ತಲುಪುವಂತಾದರೆ ಬದುಕು ಸಾರ್ಥಕವಾದಂತೆಯೇ !

| ಕಗ್ಗರಸಧಾರೆ | ಪಕ್ಷಿಮಾರ್ಗ 729 – 733 |
|---|---|

**ಮುಕ್ತಕ – 73ಸಂ**

**ಹಕ್ಕಿ ಮುನ್ನರಿಯುವುದೆ ತನ್ನ ಪಯಣದ ತೆರನ? ।**

**ಇಕ್ಕುವರದಾರದನು ಕರೆದು ತಿರುಪೆಯನು? ॥**

**ರೆಕ್ಕೆ ಹೋದಂತಲೆದು, ಸಿಕ್ಕಿದದನುಣ್ಣುವುದು ।**

**ತಕ್ಕುದಾ ವ್ರತ ನಿನಗೆ - ಮಂಕುತಿಮ್ಮ ॥**

ಮುನ್ನರಿಯುವುದೆ= ಮುನ್ನ+ಅರಿಯುವುದೆ, ಇಕ್ಕುವರದಾರದನು=ಇಕ್ಕುವರು+ಅದು+ಆರು+ಅದನು,

ಪೋದಂತಲೆದು=ಹೋದಂತೆ+ಅಲೆದು, ಸಿಕ್ಕಿದದನುಣ್ಣುವುದು=ಸಿಕ್ಕಿದ+ಅದನು+ಉಣ್ಣುವುದು,

ತಕ್ಕುದಾ=ತಕ್ಕುದು+ಆ

ತೆರನ=ರೀತಿ ಅಥವಾ ಗತಿ, ಇಕ್ಕುವರು=ಕೊಡುವರು, ನೀಡುವರು, ತಿರುಪೆ=ಭಿಕ್ಷೆ ಅಥವಾ ಉಣಿಸು.

ತನ್ನ ರೆಕ್ಕೆಯ ಬಡಿಯುತ್ತಾ ಸಾಗುವ ಹಕ್ಕಿಗೆ ತನ್ನ ಪಯಣ ಹೇಗೆ ಸಾಗುತ್ತದೆ ಎಂದು ಮುಂಚೆಯೇ ಗೊತ್ತಿರುವುದೇ? ಅದಕ್ಕೆ ಯಾರಾದರೂ 'ಬಾ ಬಾ' ಎಂದು ಕರೆದು ಊಟವನ್ನು ನೀಡುತ್ತಾರೆಯೇ? ರೆಕ್ಕೆ ಬಡಿದ ಹಾಗೆ ಅದರ ಗತಿ ಸಾಗುವುದು ಮತ್ತು ಎಲ್ಲಿ ಏನು ಸಿಕ್ಕರೆ ಅದನ್ನು ತಿನ್ನುವುದು. ಈ ರೀತಿ ಬದುಕ ಸಾಗಿಸಬೇಕೆಂಬುದೇ ನಿನ್ನ ವ್ರತವಾಗಿರಬೇಕು' ಎಂದು ಸ್ವಚ್ಚಂದ ಜೀವನದ ಪರಿಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಇಲ್ಲಿ ಹಕ್ಕಿಯ ದೃಷ್ಟಾಂತವನ್ನು ಕೊಟ್ಟು ನಮಗೆ ಸಂತೋಷವಾಗಿ ಬದುಕುವ ಪರಿಯನ್ನು ಅರುಹಿದ್ದಾರೆ. ಮಾರ್ಗ ಕಂಡಂತೆ ಮುನ್ನಡೆಯುತ್ತಾ ಹೋಗುವುದೇ ವ್ರತವಾಗಿರಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು, ಆದರೆ ಬದುಕಿನಲ್ಲಿ ಒಂದು ನಿರ್ಧಿಷ್ಟ ಗುರಿ ಇರಬೇಡವೇ? ಎಂದರೆ, ಇರಬೇಕು ಆದರೆ ಗುರಿಯ ಸಾಧನೆಗೋ ಅಥವಾ ಸಾಧಿಸಿದ ನಂತರ ಸಿಗಬಹುದಾದಂತಹ ಫಲಕ್ಕೆ ನಾವು ಭಾವನಾತ್ಮಕವಾಗಿ ಅಂಟಿಕೊಳ್ಳಬಾರದು. ಏಕೆಂದರೆ ಬಹಳಷ್ಟು ಬಾರಿ ನಾವಂದುಕೊಂಡ ಕೆಲಸ ನಾವಂದುಕೊಂಡ ಸಮಯದಲ್ಲಿ ನಾವಂದುಕೊಂಡ ರೀತಿಯಲ್ಲಿ ಮಾಡಲಾಗುವುದೇ ಇಲ್ಲ. ಹಾಗೆಯೇ ನಮ್ಮ ಇಚ್ಛೆ ಮತ್ತು ವಸ್ತುಸ್ಥಿತಿಯೊಳಗಿನ ಅಂತರಕ್ಕೆ ಕಾರಣವೇನೆಂದು ನಮಗೆ ಅರ್ಥವಾಗುವುದೇ ಇಲ್ಲ. ಹಾಗಾಗಿ ನಮ್ಮ ಕೆಲಸ ಮತ್ತು ಅದರಿಂದ ಸಿಗುವ ಫಲಕ್ಕೆ ನಾವು ಭಾವನಾತ್ಮಕವಾಗಿ ಅಂಟಿಕೊಂಡರೆ, ನಮಗೆ ನಿರಾಸೆಯಾಗುವ, ದುಃಖವಾಗುವ ಸಾಧ್ಯತೆಗಳು ಹೆಚ್ಚು.

ಆಸೆ ಪಡಬೇಕು. ಆದರೆ ಆ ಆಸೆಗೆ ಅಂಟಿಕೊಳ್ಳಬಾರದು. ಹಾಗೆ ಅಂಟಿಕೊಂಡಾಗ, ನಮ್ಮ ಯೋಜನೆಗಳಿಗೂ ಸಿಗುವ ಫಲಕ್ಕೂ ನಡುವೆ ಬಹಳ ಅಂತರವಿರುವುದರಿಂದ ನಿರಾಸೆಯಾಗುವ ಸಾಧ್ಯತೆಗಳು ಹೆಚ್ಚು. ಆಸೆಯಿಂದ ಮುನ್ನಡೆದಾಗ ಅನ್ಯರಿಗೆ ನಮಗಿಂತ ಅಧಿಕವಾಗಿ ಲಭ್ಯವಾದರೆ, ಅವರನ್ನು ಕಂಡು ಈರ್ಷ್ಯೆ, ನಮಗೆ ಅಧಿಕವಾಗಿ ಲಭ್ಯವಾದರೆ ಅಹಂಕಾರದಿಂದ ಮದ, ನಮಗೆ ಸಿಗದಿದ್ದರೆ ಕ್ರೋಧ, ಇಷ್ಟು ಸಿಕ್ಕರೆ ಮತ್ತಷ್ಟರ ಆಸೆ, ಹೀಗೆ ನಾನಾ ವಿಧವಾದ ದುರ್ಭಾವಗಳು ನಮ್ಮೊಳಗೆ ನುಗ್ಗಿ ನಮ್ಮ ಪತನಕ್ಕೆ ನಾಂದಿ ಹಾಡುತ್ತದೆ. ಹಾಗಾಗಿ ಗುರಿಯಿರಬೇಕು,

ಆಸೆಯಿರಬೇಕು, ಫಲದ ಅಪೇಕ್ಷೆಯಿಂದಲೇ ಮುನ್ನಡೆಯಬೇಕು, ಆದರೆ ಆ ಗುರಿ, ಆಸೆ ಅಥವಾ ಫಲಕ್ಕೆ ಭಾವನಾತ್ಮಕವಾಗಿ ಅಂಟಿಕೊಳ್ಳದೇ ಸಾಗಬೇಕು. ಹಾದಿಯಲ್ಲಿ ಸಿಕ್ಕ ಫಲವನ್ನು ' ಪರಮಾತ್ಮನ ಪ್ರಸಾದ ' ವೆಂದು ಪರಿಗಣಿಸಿ ಸಾಗಬೇಕು. ಇದನ್ನೇ ಬಹುಶಃ ಮಾನ್ಯ ಗುಂಡಪ್ಪನವರು" ರೆಕ್ಕೆ ಪೋದಂತಲೆದು, ಸಿಕ್ಕಿದದನುಣ್ಣುವುದು" ಎಂದಿದ್ದಾರೆ ಎಂದು ಅನಿಸುತ್ತದೆ.

ಹಕ್ಕಿ ಕೊಂಬೆಯಿಂದ ಕೊಂಬೆಗೆ ಹಾರುತ್ತಾ ಊರಿಂದ ಊರಿಗೆ ಅಲೆಯುತ್ತಾ ತನ್ನ ಜೀವನವನ್ನು ತಳ್ಳುತ್ತದೆ. ನಾವು ವಸ್ತುವಿನಿಂದ ವಸ್ತುವಿಗೆ, ವಿಷಯದಿಂದ ವಿಷಯಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ನಮ್ಮ ಆಸ್ಥೆ, ಗಮನ ಮತ್ತು ನಿಷ್ಟೆಗಳನ್ನು ಹೇಗೆ ಬದಲಾಯಿಸುತ್ತಾ ಬದುಕುತ್ತೇವೆ. ಹಕ್ಕಿ ಯಾವುದೇ ಕೊಂಬೆಗೆ ಅಥವಾ ಊರಿಗೆ ಅಂಟಿಕೊಳ್ಳದೆ ಇರುತ್ತದೆ. ಅಂತೆಯೇ ನಮ್ಮ ಬದುಕನ್ನೂ ನಾವು ರೂಪಿಸಿಕೊಂಡರೆ, ಹಕ್ಕಿಯಂತೆ ಸ್ವಚ್ಛಂದ ಬದುಕನ್ನು, ಆಶಾರಹಿತವಾಗಿ, ಬಂಧನರಹಿತವಾಗಿ ಆನಂದದಿಂದ ಕಳೆಯಬಹುದು. ನಾವೂ ಜನ್ಮದಿಂದ ಜನ್ಮಕ್ಕೆ ಹಾರುವ ಹಕ್ಕಿಗಳೇ ಅಲ್ಲವೇ?

**ಮುಕ್ತಕ – 731**

**ಏನೊ ಕಣ್ಣನು ಪಿಡಿವುದೇನೋ ದಿಗಿಲಾಗಿಹುದು।**
**ಏನನೋ ನೆನೆದು ಸರ್ರೆಂದು ಹಾರುವುದು॥**
**ಬಾನೊಳಾಡುವ ಹಕ್ಕಿಗಿದುವೆ ನಿತ್ಯಾನುಭವ।**
**ನೀನದನು ಮೀರಿಹೆಯ? - ಮಂಕುತಿಮ್ಮ॥**

ಪಿಡಿವುದೇನೊ=ಪಿಡಿವುದು+ಏನೊ, ದಿಗಿಲಾಗಿಪುದು=ದಿಗಿಲು+ಆಗಿಪುದು, ಬಾನೊಳಾಡುವ=ಬಾನೊಳು+ಆಡುವ, ಹಕ್ಕಿಗಿಡುವೆ=ಹಕ್ಕಿಗೆ+ಇದುವೆ, ನಿತ್ಯಾನುಭವ=ನಿತ್ಯ+ಅನುಭವ, ನೀನದನು=ನೀನು+ಅದನು,
ಮೀರಿಹೆಯ=ಮೀರಿ+ಇಹೆಯ
ಪಿಡಿವುದು=ಹಿಡಿಸುತ್ತದೆ,

ಆಕಾಶದಲ್ಲಿ ಹಾರುವ ಹಕ್ಕಿಗೆ ಯಾವುದೋ ಒಂದು ವಸ್ತು ಇಷ್ಟವಾಗುತ್ತದೆ ಅಥವಾ ಮತ್ಯಾವುದನ್ನೋ ನೋಡಿ ಅದು ಹೆದರುತ್ತದೆ, ಮತ್ತೊಂದು ಕ್ಷಣಕ್ಕೆ ಏನನ್ನೋ ನೆನೆದು ಅದು ಮುಂದು ಹಾರಿಹೋಗುತ್ತದೆ. ಹಕ್ಕಿಗೆ ಇದು ನಿತ್ಯ ಆಗುವ ಅನುಭವ. "ನಿನ್ನ ಬದುಕು ಈ ಪರಿಯನ್ನು ಮೀರಿಹುದೇನು?" ಎಂದು ಪ್ರಶ್ನಾರೂಪದಲ್ಲಿ ನಮಗೆ ನಮ್ಮ ಬದುಕೂ ಸಹ ಹಾರುವ ಹಕ್ಕಿಯ ಬದುಕಿಗಿಂತ ಭಿನ್ನವಲ್ಲ ಎಂದು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ. ನಮ್ಮ ದೈನಂದಿನ ಚಟುವಟಿಕೆಗಳೂ ಹೀಗೆ ಇರುತ್ತವೆ. ಒಂದು ಕಡೆ ಕುಳಿತು "ನಾನು ಏನು ಮಾಡಬೇಕು, ಏಕೆ ಮಾಡಬೇಕು, ಹೇಗೆ ಮಾಡಬೇಕು, ಹಾಗೆ ಮಾಡುವುದರಿಂದ ಪ್ರಯೋಜನವೇನು, ಇದರಿಂದ ಅನ್ಯರಿಗಾಗುವ ತೊಂದರೆಯೇನಾದರೂ ಇದೆಯೇ ಅಥವಾ ಅನ್ಯರಿಗೆ ಪ್ರಯೋಜನವೇನಾದರೂ ಉಂಟೆ, ಇದನ್ನು ಮಾಡದಿದ್ದರೆ





ನಷ್ಟವೇನು, ಪರ್ಯಾಯ ದಾರಿಯೇನಾದರೂ ಉಂಟೆ' ಎಂದು ಯೋಚಿಸಿ ನಮ್ಮ ಪ್ರತೀ ಕೆಲಸವನ್ನು ಮಾಡುತ್ತೇವೆಯೇ? ಇಲ್ಲ. ಹಾಗೆ ಮಾಡಲು ಸಾಧ್ಯವೂ ಇಲ್ಲ. ಅಷ್ಟೇ ಅಲ್ಲ ಹಾಗೇನಾದರೂ ಮಾಡಲು ಹೋದರೆ, ನಾವು ಯಾವ ಕೆಲಸವನ್ನೂ ಮಾಡಲಾಗುವುದೇ ಇಲ್ಲ. ಅದಕ್ಕೆ ಕಾರಣಗಳು ಎಲ್ಲರಿಗೂ ವೇದ್ಯವಲ್ಲವೇ? ಮನಸ್ಸಿಗೆ ಬರುವ ಚಿತ್ರವಿಚಿತ್ರವಾದ ಆಲೋಚನೆಗಳಿಗೆ, ಕ್ಷಣಕ್ಷಣಕ್ಕೂ ಚಂಚಲವಾಗುವ ನಮ್ಮ ಚಿತ್ತ ಮತ್ತು ಆ ಚಿತ್ತದಂತೆ ನಡೆಯುವ ನಮ್ಮ ಕ್ರಿಯೆ, ಇವೆಕ್ಕೆಲ್ಲಾ ಕಾರಣ ಹುಡುಕಲು ಸಾಧ್ಯವೇ?.

ನಾವೂ ಸಹ ಏನಾದರೊಂದು ಕೆಲಸವನ್ನು ಮಾಡುತ್ತಲೇ ಇರುತ್ತೇವೆ. ನಾವು ಮಾಡುವ ಕೆಲಸಕ್ಕೆ ನಮ್ಮ ಮನಸ್ಸನ್ನು ಆ ಕಡೆ ತಿರುಗಿಸುವ ಶಕ್ತಿಯಾವುದು ಎಂದು ನಮಗೆ ಗೊತ್ತಿಲ್ಲ. ಒಟ್ಟಾರೆ ಮಾಡುತ್ತೇವೆ. ಕೆಲಬಾರಿ ನಾವು ಮಾಡುತ್ತಿದ್ದೇವೆ ಎನ್ನುವ ಪ್ರಜ್ಞೆಯಿಂದ ಮತ್ತು ಹಲವಾರು ಬಾರಿ ನಮಗರಿವಿಲ್ಲದಂತೆಯೇ!! ಸದಾ ಜಾಗೃತವಾಗಿರುವ ಇಂದ್ರಿಯಗಳ ಪರಿಧಿಯೊಳಕ್ಕೆ ಬರುವ ಪ್ರತಿಯೊಂದೂ ನಮ್ಮನ್ನು ಕ್ರಿಯೆಗೆ ಪ್ರಚೋದಿಸುತ್ತದೆ. ಶ್ರೀಮದ್ಭಗವದ್ಗೀತೆಯಲ್ಲಿ (3-6) "ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ " ಎಂದು ಹೇಳುತ್ತಾ ಪ್ರಕೃತಿ ಜನ್ಯವಾದ ಗುಣಪ್ರಚೋದಿತವಾದ ಇಂದ್ರಿಯಗಳನ್ನು ಹೊಂದಿರುವ ಜೀವಿಗಳು ಒಂದು ಕ್ಷಣವೂ 'ಕ್ರಿಯೆ'ಯಿಲ್ಲದೆ ಇರಲು ಸಾಧ್ಯವಿಲ್ಲ ಎಂದು ಹೇಳುತ್ತಾನೆ. ಇದು ಸಹಜವಾದ ಸ್ಥಿತಿ. ಸಕಲ ಪ್ರಾಣಿಗಳಂತೆಯೇ ಮನುಷ್ಯನೂ ಸಹ ಬದುಕುತ್ತಾನೆ.

ಸೃಷ್ಟಿಯಲ್ಲಿ ತಾನು ಉತ್ತಮ' ನೆಂದು ತಿಳಿದಿದ್ದಾನೆ ಮೂಢ ಮನುಷ್ಯ ಹೌದು ಮನುಷ್ಯ ಇಡೀ ಸೃಷ್ಟಿಯಲ್ಲಿ ಅತೀ ಉತ್ತಮ ಸೃಷ್ಟಿ, ನಿದ್ರಾಹಾರಮೈಥುನ' ಗಳನ್ನೂ ಮೀರಿ ಯೋಚಿಸುವ ಕ್ಷಮತೆ ಪ್ರಕೃತಿ ಇವನಿಗೆ ನೀಡಿದೆ. ಅದನ್ನವನು ಸಕಲ ಜೀವರಾಶಿಗಳ ಒಳಿತಿಗಾಗಿ ಯೋಚಿಸದೆ ಕೇವಲ ಸ್ವಾರ್ಥಸಾಧನೆಗೆ ಉಪಯೋಗಿಸುವುದೇ ಬಹಳ ಶೋಚನೀಯ ವಿಚಾರ. ಪಾಪ ಆಕಾಶದಲ್ಲಿ ಹಾರಾಡುವ ಆ ಪಕ್ಷಿ ಗಳು ಯಾರಿಗೂ ತೊಂದರೆ ಕೊಡದೆ ತಮ್ಮ ಬದುಕನ್ನು ತಾವು ಬದುಕುತ್ತವೆ. ಆದರೆ ಮನುಷ್ಯರಾದ ನಾವು ಹಾಗಿದ್ದೇವೆಯೇ? ಎಂದು ಯೋಚಿಸಿ ನಮ್ಮ ನ್ಯೂನತೆಗಳನ್ನು ಗುರುತಿಸಿಕೊಂಡು, ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಯತ್ನಿಸಿದರೆ ಆಗ ನಾವು ಉತ್ತಮರಾಗಬಹುದು.





**ಮುಕ್ತಕ – 732**

**ಆವ ಕಡೆ ಹಾರುವುದೊ! ಆವ ಕಡೆ ತಿರುಗುವುದೊ !!**
**ಆವಾಗಳಾವಕಡೆಗೆರುಗುವುದೊ ಹಕ್ಕಿ ! ||**
**ನಾವುಮಂತೆಯೆ ಸೃಷ್ಟಿಕೃತ್ರಿಮದ ಕೈಗೊಂಬೆ |**
**ಜೀವಮಾರ್ಗವನೂಹ್ಯ - ಮಂಕುತಿಮ್ಮ ||**

ಆವಾಗಳಾವಕಡೆಗೆರುಗುವುದೊ=ಆವಾಗಳ+ಆವ+ಕಡೆಗೆ+ಎರಗುವುದೊ, ನಾವುಮಂತೆಯೆ=ನಾವುಂ+ಅಂತೆಯೆ,
ಜೀವಮಾರ್ಗವನೂಹ್ಯ=ಜೀವ+ಮಾರ್ಗವು+ಅನೂಹ್ಯ,
ಅನೂಹ್ಯ= ಊಹಿಸಲು ಅಸಾಧ್ಯ

ಗಗನದಲ್ಲಿ ಹಾರುವ ಹಕ್ಕಿ ಯಾವ ಕಡೆಗೆ ಹಾರುವುದೋ, ಯಾವ ಕಡೆಗೆ ತಿರುಗುವುದೋ ಗೊತ್ತಾಗುವುದಿಲ್ಲ. ಹಾಗೆ ಹಾರುವಾಗ ಯಾವ ಸಮಯಕ್ಕೆ ಗಕ್ಕೆಂದು ಎರಗಿ ಎಲ್ಲಿ ಇಳಿಯುವುದೋ ಎಂಬುದೂ ಸಹ ಗೊತ್ತಾಗುವುದಿಲ್ಲ. ಅಂತೆಯೇ ಮನುಷ್ಯರ ಬದುಕೂ ಸಹ. ನಾವೆಲ್ಲರೂ ಈ ಪ್ರಕೃತಿಯ ಕೈ ಗೊಂಬೆಗಳು. ಆ ವಿಧಿಯಾಡಿಸಿದಂತೆ

ಆಡಬೇಕಾದ ಗೊಂಬೆಗಳು. ನಮಗೆ ನಮ್ಮ ಜೀವನದ ಮಾರ್ಗವು, ಪಯಣದ ಗತಿಯು ಊಹಿಸಲು ಸಾಧ್ಯವಿಲ್ಲ ಎಂದು ಬದುಕಿನ ವಾಸ್ತವಿಕತೆಯನ್ನು ಅರುಹಿದ್ದಾರೆ, ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವೆಲ್ಲಾ ನೋಡಿದ್ದೇವೆ. ಆಕಾಶದಲ್ಲಿ ಹಾರುವ ಹಕ್ಕಿ ಅಥವಾ ಹಕ್ಕಿಗಳ ಸಮೂಹ ಹಾರುತ್ತಾ ಹಾರುತ್ತಾ ಯಾವ "ಅಡ್ಡಿ' ಬರದಿದ್ದರೂ ಸರಕ್ಕೆಂದು ಒಂದು ತಿರುವನ್ನು ಪಡೆಯುತ್ತದೆ ಮತ್ತು ಮತ್ತೊಂದು ದಿಕ್ಕಿಗೆ ಹಾರುತ್ತದೆ. ಹಾರುತ್ತ ಹಾರುತ್ತಾ ಯಾವುದೋ ಒಂದು ಘಳಿಗೆಯಲ್ಲಿ ಸುಯ್ಯೆಂದು ಧರೆಗಿಳಿಯುತ್ತದೆ. ಮತ್ತೆ ಕೆಲ ಕ್ಷಣಗಳಲ್ಲಿ ಹಾರಿ ಮತ್ತೊಂದು ಕಡೆ ಕೂರುತ್ತದೆ ಮತ್ತು ಕೆಲವೇ ಕ್ಷಣಗಳಲ್ಲಿ ಗಗನಕ್ಕೆ ಹಾರುತ್ತದೆ. ಅದು ಏಕೆ ಹಾಗೆ ಮಾಡುತ್ತದೆ ಎಂದಾಗಲೀ, ಅದು ಹಾಗೆ ಮಾಡಲು ಪ್ರೇರೇಪಿಸುವ ಶಕ್ತಿ ಅಥವಾ ಕಾರಣವಾವುದು ಎಂದು ನಮಗೆ ಅರ್ಥವಾಗುವುದೇ ಇಲ್ಲ, ಅಲ್ಲವೇ?

ನಮ್ಮ ಜೀವನವೂ ಅಷ್ಟೇ. ಒಂದು ಬಾರಿ ನಿಂತು ಯೋಚಿಸಿದರೆ ಅಥವಾ ನಮ್ಮ ದೈನಂದಿನ ಕೆಲಸಗಳ ಗತಿಯನ್ನು ನಾವೇ ನೋಡಿಕೊಂಡರೆ ನಮಗರ್ಥವಾಗುತ್ತದೆ. ಒಂದು ಕ್ಷಣವಿದ್ದ ಮನಃಸ್ಥಿತಿ ಮತ್ತೊಂದು ಗಳಿಗೆ ಇರುವುದಿಲ್ಲ. ಕೊಂಬೆಯಿಂದ ಕೊಂಬೆಗೆ ವಿನಾಕಾರಣ ಹಾರುವ ಮಂಗನ ರೀತಿಯಲ್ಲಿ ನಮ್ಮ ಮನಸೂ ಸಹ ವಿಷಯದಿಂದ ವಿಷಯಕ್ಕೆ ಹಾರುತ್ತಾ ಇರುತ್ತದೆ. ಇದರಲ್ಲಿ ನಮ್ಮ ಪ್ರಮೇಯವಿರುವುದಿಲ್ಲ. ಅದು ತಾನೇ ತಾನಾಗಿ ಆಣುತ್ತದೆ.ನಮ್ಮನ್ನು ಮಾನ್ಯ ಗುಂಡಪ್ಪನವರು "ಸೃಷ್ಟಿ ಕೃತ್ರಿಮದ ಕೈಗೊಂಬೆ" ಎಂದಿದ್ದಾರೆ. ಎಂದರೆ, ಸೃಷ್ಟಿಯ ಕೃತ್ರಿಮದ ಕೈಗೊಂಬೆ ಎಂದರ್ಥ.

ಇಲ್ಲಿ ಯಾವ ಬೊಂಬೆಯೂ ಶುದ್ಧ ಅಥವಾ ಶಾಶ್ವತವಲ್ಲ. ಸಂಪೂರ್ಣ ಜ್ಞಾನವನ್ನು ಪಡೆದ

ನಮ್ಮನ್ನು, ಮಾನ್ಯ ಗುಂಡಪ್ಪನವರು "ಸೃಷ್ಟಿಕೃತ್ತಿಮದ ಕೈಗೊಂಬೆ" ಎಂದಿದ್ದಾರೆ. ಎಂದರೆ ಸೃಷ್ಟಿಯ ಕೃತಿಮದ ಕೈಗೊಂಬೆ ಎಂದರ್ಥ. ಇಲ್ಲಿ ಯಾವ ಬೊಂಬೆಗಳೂ ಶುದ್ಧ ಅಥವಾ ಶಾಶ್ವತವಲ್ಲ. ಸಂಪೂರ್ಣ ಜ್ಞಾನವನ್ನು ಪಡೆದ

ನಮ್ಮನ್ನು ಮಾನ್ಯ ಗುಂಡಪ್ಪನವರು "ಸೃಷ್ಟಿ ಕೃತ್ರಿಮದ ಕೈಗೊಂಬೆ" ಎಂದಿದ್ದಾರೆ. ಎಂದರೆ, ಸೃಷ್ಟಿಯ ಕೃತ್ರಿಮದ ಕೈಗೊಂಬೆ ಎಂದರ್ಥ. ಇಲ್ಲಿ ಯಾವ ಬೊಂಬೆಯೂ ಶುದ್ಧ ಅಥವಾ ಶಾಶ್ವತವಲ್ಲ. ಸಂಪೂರ್ಣ ಜ್ಞಾನವನ್ನು ಪಡೆದ ಜೀವಿಗಳೂ ಅಲ್ಲ. ಯಾವುದೋ ಒಂದು ರೀತಿಯ ಕೊರತೆಯನ್ನಿಟ್ಟುಕೊಂಡೇ ಬದುಕುವ ಪ್ರಾಣಿಗಳು. ಆದರೆ ಈ ಗೊಂಬೆಗಳ ಸೂತ್ರ ಆ ವಿಧಿಯ ಕೈಯಲ್ಲಿ, ನಮಗರ್ಥವಾಗುವುದಿಲ್ಲ. ಆದ್ದರಿಂದ ಇದನ್ನು ವಿಧಿಯ ಕೈವಾಡವೆಂದು ತಿಳಿದು ಸುಮ್ಮನಾಗಬೇಕು.

ಬದುಕು ಹೇಗೆ ನಡೆಯಬೇಕು ಎಂದು ಮೊದಲೇ ನಿರ್ಧರಿಸಲು ಸಾಧ್ಯವಿಲ್ಲ. ಏಕೆಂದರೆ ಬದುಕು ಕೇವಲ ನಮ್ಮ ಇಚ್ಛೆ ಅಥವಾ ನಮ್ಮ ಯೋಜನೆಯಂತೆ ನಡೆಯುವುದಿಲ್ಲ, ಅಲ್ಲವೇ? ಅನ್ಯರ ಇಚ್ಛೆ, ನಮ್ಮ ಪ್ರಸ್ತುತ ಮತ್ತು ಪೂರ್ವಕರ್ಮ, ನಮ್ಮ ಮನೋಭಾವ ಮತ್ತು ವಿಧಿಯ ವಿನ್ಯಾಸ, ಎಲ್ಲವೂ ನಮ್ಮ ಗತಿಯನ್ನು ನಿರ್ಧರಿಸುವುದರಿಂದ, ನಾವು 'ಹೀಗೇ ಬದುಕಬೇಕೆಂದಾಗಲೀ ಅಥವಾ ಹೀಗೇ ಬದುಕುತ್ತೇವೆಂದಾಗಲೀ' ಹೇಳಲು ಸಾಧ್ಯವೇ ಇಲ್ಲ. ಬದುಕನ್ನು ಬದುಕಬೇಕು, ಶಾಂತವಾಗಿ ಯಾವುದಕ್ಕೂ ಅಂಟದೆ ನಿರ್ಲಿಪ್ತವಾಗಿ ಅಪೇಕ್ಷಾರಹಿತವಾಗಿ ಬದುಕಿದರೆ ಸುಖವಾಗಿರಬಹುದು. ಸುಖ ಬೇಕೆಂದರೆ 'ವಿಧಿ'ಗೆ ತಲೆಬಾಗಿ ಬದುಕಬೇಕು. ನಾವು ನಮ್ಮ ಬದುಕಿಗೆ ನಮ್ಮ ಯೋಜನೆಗಳನ್ನು ಹಾಕಿಕೊಂಡರೂ ನಮಗರಿವಿಲ್ಲದ ವಿಧಿಯ ವಿನ್ಯಾಸಕ್ಕೆ ತಲೆಬಾಗಲೇ ಬೇಕಾಗಿರುವುದು 'ಪರಮ ಸತ್ಯ'

**ಮುಕ್ತಕ – 733**

**ಮಾವುಸಸಿಯನು ನೆಟ್ಟು ಬೇವುಣಲು ಸಿದ್ಧನಿರು |**
**ಭೂವಿಷಯದಿಂದ ರಸ ಮಾರ್ಪಡುವುದುಂಟು ||**
**ಆ ವಿವರ ನಿನಗೇಕೆ? ತೋಟದೊಡೆಯನಿಗಿರಲಿ |**
**ಸೇವಕನು ನೀನ ? ಮಂಕುತಿಮ್ಮ ||**

ಬೇವುಣಲು=ಬೇವು+ಉಣಲು, ಮಾರ್ಪಡುವುದುಂಟು=ಮಾರ್ಪಡುವುದು+ಉಂಟು,
ತೋಟದೊಡೆಯನಿಗಿರಲಿ=ತೋಟದ+ಒಡೆಯನಿಗೆ+ಇರಲಿ.
ನೀನ= ನೀನಲ್ಲವೇ? ಉಣಲು= ತಿನ್ನಲು

ಮಾವಿನ ಸಸಿಯನ್ನು ನೆಟ್ಟು ಬೇವಿನ ಹಣ್ಣನ್ನು ತಿನ್ನಲು ನೀನು ಸಿದ್ಧನಾಗಿರು. ಭೂಮಿಯಲ್ಲಿನ ರಸಗಳು ಬದಲಾಗುವುದುಂಟು. ಅವು ಹೇಗೆ ಬದಲಾಗುತ್ತವೆ ಎನ್ನುವುದನ್ನು ಯೋಚಿಸಲು, ತರ್ಕಿಸಲು ನೀನು ಅರ್ಹನಲ್ಲ. ಆ ವಿವರಗಳು ನಿನಗೆ ಬೇಡ, ಆ ವಿವರಗಳನ್ನು ತೋಟದ ಒಡೆಯ ತಾ ನೋಡಿಕೊಳ್ಳುವನು. ನೀನು ಈ ತೋಟದಲ್ಲಿ ಕೇವಲ ಒಬ್ಬ ಸೇವಕ ಎಂದು ಬದುಕಿನಲ್ಲಿ ನಮ್ಮೊಡನೆ ನಡೆಯುವ ವಿದ್ಯಮಾನಗಳ ವೈಪರೀತ್ಯವನ್ನು ವಿವರಿಸಿ ನಾವು ಈ ಬದುಕಿನಲ್ಲಿ ಹೇಗಿರಬೇಕು ಎನ್ನುವುದನ್ನು ನಮಗರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

47

ಕಗ್ಗರಸಧಾರೆ ಮಾನಸಿಕ ಸಂತುಲನ 7ಸ01-7ಸ02

ಇಲ್ಲಿ ಮಾವು ಮತ್ತು ಬೇವುಗಳು ದೃಷ್ಟಾಂತಗಳಷ್ಟೇ. ನಮ್ಮ ಜೀವನದಲ್ಲಿ ನಾವು ಎಷ್ಟೊಂದು ಯೋಜನೆಗಳನ್ನು ಹಾಕುತ್ತೇವೆ. ಆದರೆ ಆ ಯೋಜನಗಳೆಲ್ಲಾ ಫಲಿಸುತ್ತವೆಯೇ? ನಾವು ಹಾಕುವ ಯೋಜನೆಗಳು ಮಾವಿನ ಸಸಿಗಳು ಮತ್ತು ನಮ್ಮ ಅಪೇಕ್ಷೆಗೆ ವಿರುದ್ಧವಾದ ಫಲ ಸಿಗುವುದೇ ಬೇವಿನ ಹಣ್ಣುಗಳು. ನಮ್ಮ ಯೋಜನೆಗಳು ಮತ್ತು ಅದಕ್ಕೆ ಪೂರಕವಾದ ಪ್ರಯತ್ನಗಳು ಸಮರ್ಪಕವಾಗಿ ಇದ್ದರೂ, ಹಲವು ಬಾರಿ ನಮಗೆ ಅಪೇಕ್ಷಿಸಿದ ಫಲ ಸಿಗುವುದಿಲ್ಲವಲ್ಲ!!! ಏಕೆ? ಎಂದು ನಾವೆಷ್ಟು ಯೋಚಿಸಿದರೂ, ಹಲಬಾರಿ ನಮಗೆ ಕಾರಣ ಅರ್ಥವಾಗುವುದೇ ಇಲ್ಲ. ಏಕೆಂದರೆ ನಾವೇ ಯೋಜಿಸಿ, ನಾವೇ ರೂಪಿಸಿ ನಮ್ಮ ಪ್ರಯತ್ನದಿಂದಲೇ, ಯಾವ ಅನ್ಯ ಸಹಾಯವೂ ಇಲ್ಲದೆ, ಯಾವುದೇ ಕೆಲಸವನ್ನೂ ನಾವು ಮಾಡಲಾಗುವುದೇ ಇಲ್ಲ. ಅನ್ಯ ಸೆಳೆತ - ಮಿಳಿತ'ಗಳ ಪ್ರಭಾವದಿಂದ ನಾವು ನಿರೀಕ್ಷಿಸಿದ ಫಲಕ್ಕಿಂತ ನಮಗೆ ಸಿಗುವ ಫಲ ಭಿನ್ನವಾಗಿರುತ್ತದೆ.

ಭೂಮಿಯನ್ನು ಉತ್ತು, ಗೊಬ್ಬರ ಹಾಕಿ, ಹಸನಾಗಿಸಿ, ಒಂದು ಬತ್ತದ ಕಾಳನ್ನು ನೆಡಬಹುದು. ಆದರೆ ಆ ಬತ್ತದ ಕಾಳು ತನ್ನೊಳಗಿನ ಜೀವಕಣವನ್ನು, ಉದ್ದೀಪಿಸಿ, ತನಗೆ ಸಿಕ್ಕ ಪರಿಸರದ ಸಹಾಯದಿಂದ ಭೂಮಿಯಲ್ಲಿನ ಸಾರವನ್ನು ಸೆಳೆದುಕೊಂಡು ತನ್ನೊಳಗೆ ತುಂಬಿಕೊಂಡು ತಾನು ಕರಗಿ ಸಸಿಗೆಡೆಮಾಡಿಕೊಡಬೇಕು. ನಾವು ಕೇವಲ ಬತ್ತದ ಕಾಳನ್ನು ಸಿದ್ಧಪಡಿಸಿದ ಭೂಮಿಯೊಳಕ್ಕೆ ಹಾಕಬಹುದು. ಮಿಕ್ಕೆಲ್ಲ ಕೆಲಸಗಳಿಗೂ ಬೇರೆ ಬೇರೆ ಶಕ್ತಿಗಳ ಸಹಾಯ ಬೇಕೇ

ಬೇಕು, ಅಲ್ಲವೇ? ನಾವು ಕೇವಲ ನಿಮಿತ್ತ ಮಾತ್ರರಾಗುತ್ತೇವೆ. ನಾವು ಹಾಗೆಯೇ ಇರಬೇಕು. ನಾನೇ ಎಲ್ಲವನ್ನೂ ಮಾಡಿಬಿಡುತ್ತೇನೆ ಎಂದು ಹೋದರೆ, ತೀವ್ರ ನಿರಾಶೆ ನಮಗೆ ಕಟ್ಟಿಟ್ಟ ಬುತ್ತಿ. ಒಂದು ನಾಟಕದಲ್ಲಿ ನಿರ್ದೇಶಕನ ಆಜ್ಞೆಯಂತೆ, ನಟ ತನ್ನ 'ಪಾತ್ರ ನಿರ್ವಹಿಸಿದರೆ ನಾಟಕ ಚೆನ್ನಾಗಿ ಮೂಡಿಬರುತ್ತದೆ. ಅಲ್ಲದೆ ನಟ ತನ್ನಿಚ್ಛೆಯನ್ನು ಪ್ರಕಟಿಸಿ ನಟಿಸಿದರೆ ನಾಟಕದ 'ರಸ' ಭಂಗವಾಗುತ್ತದೆ. ಈ ಜಗತ್ತಿನ ನಾಟಕದ ಕತೆಯೂ ಅಂತೆಯೇ ಅಲ್ಲವೇ? ನಾವು ನಟರಾಗಿರಬೇಕು, ನಿರ್ದೇಶಕನಿಗೆ ಸೇವಕರಂತಿರಬೇಕು.

ನಮ್ಮ ನಿರಾಶೆಗೆ ಕಾರಣ ಕೇವಲ ನಮ್ಮ ಅಪೇಕ್ಷೆ. ಯಾವುದೋ ಕೆಲಸವನ್ನು ಮಾಡುವಾಗ ಅದರಿಂದ ಬರಬಹುದಾದ ಫಲದ ಮೇಲಿನ ನಮ್ಮ ಆಸೆಯ 'ತೀವ್ರತೆ' ಯೇ ನಮ್ಮ ನಿರಾಸೆಯ 'ತೀವ್ರತೆ' ಯನ್ನು ನಿರ್ಧರಿಸುತ್ತದೆ. ನಾವು ಕೇವಲ ನಿಮಿತ್ತ ಮಾತ್ರರು, ನಾವು ಈ ಜಗತ್ತೆಂಬ ತೋಟದಲ್ಲಿ ಕೇವಲ ಸೇವಕರು, ನಮಗೆ ಕೊಟ್ಟಿರುವ ಕೆಲಸವನ್ನು ಮಾಡುವುದಷ್ಟೇ ನಮ್ಮ ಕರ್ತವ್ಯ, ಕೂಲಿಯಾಳುಗಳಂತೆ ಕೆಲಸ ನಿರ್ವಹಿಸಿ, ಫಲಾಫಲಗಳಿಗೆ ನಾವು ಅಂಟದೆ ಇದ್ದರೆ ನಾವು, 'ಆಸೆ-ನಿರಾಸೆ' ಗಳಿಲ್ಲದ, ಒಂದು ತಟಸ್ಥ ಸ್ಥಿತಿಗೆ ತಲುಪಿದರೆ ನೆಮ್ಮದಿಯಾಗಿದ್ದು ಸದ್ದಿಲ್ಲದೇ ಇಲ್ಲಿಂದ ತೆರಳಬಹುದು. ಎಲ್ಲರಿಗೂ 'ನಾನು ಕೇವಲ ಸೇವಕ, ಇದರ ನಾಯಕ, ನಿರ್ವಾಹಕ ಮತ್ತು ನಿರ್ದೇಶಕ ಬೇರಾರೋ ಇದ್ದಾರೆ, ನಮಗೆ ಸಂದ ಕೆಲಸವನ್ನು ನಾವು ಮಾಡುವುದಷ್ಟೇ ನಮ್ಮ ಕರ್ತವ್ಯ' ಎನ್ನುವ ಭಾವ ಬಂದರೆ ಈ ಜಗತ್ತು ಬದುಕಲು ಒಂದು ಸುಂದರ ತಾಣವಾಗುವುದರಲ್ಲಿ ಸಂದೇಹವೇ ಇಲ್ಲ. ಆದರೆ ಅಂತಹ ಭಾವನೆ ಬರುವುದು ಕೇವಲ ಸಾಧನೆಯಿಂದ. ಅಂತಹ ಸಾಧನೆಯನ್ನು ನಾವು ಮಾಡಲಾದರೆ, ನಮ್ಮ ಜೀವನವೂ ಸಾರ್ಥಕ ಜೀವನವಾಗುತ್ತದೆ.





**ಮುಕ್ತಕ 734**

**ಸೈನಿಕನು ನೀನು, ಸೇನಾಧಿಪತಿಯೆಲ್ಲಿಹನೊ! |**

**ಆಣತಿಯ ಕಳುಹುತಿಹನದನು ನೀನರಿತು |**

**ಜಾಣಿನಧಟಿಂ ಪೋರು; ಸೋಲುಗೆಲುವವನೆಣಿಕೆ |**

**ಕಾಣಿಸದನಾಳೆಯದು - ಮಂಕುತಿಮ್ಮ ||**

ಸೇನಾಧಿಪತಿಯೆಲ್ಲಿಹನೊ=ಸೇನಾಧಿಪತಿ+ಎಲ್ಲಿ+ಇಹನೊ, ಕಳುಹುತಿಹನದನು=ಕಳುಹುತ+ಇಹನು+ಅದನು, ನೀನರಿತು=ನೀನು+ಅರಿತು, ಜಾಣಿನಧಟಿಂ=ಜಾಣಿನ+ಅಧಟಿಂ, ಸೋಲುಗೆಲುವವನೆಣಿಕೆ-ಸೋಲು+ಗೆಲುವು+ಅವನ+ಎಣಿಕೆ, ಕಾಣಿಸದನಾಳೆಯದು=ಕಾಣಿಸದನ +ಆ+ಅದು.

ಆಣತಿ=ಆಜ್ಞೆ, ಜಾಣಿನ=ಜಾಣತನದಿಂದ, ಅಧಟಿಂ=ಪರಾಕ್ರಮದಿಂದ, ಪೌರು=ಹೋರಾಡು, ಕಾಣಿಸದನಾಳ್=ಕಾಣಿಸದವನ ಆಳ್ವಿಕೆ.

ಈ ಜಗತ್ತಿನ ಬದುಕೇ ಒಂದು ರಣರಂಗ, ಅದರಲ್ಲಿ ನೀನೊಬ್ಬ ಯೋಧ, ನಿನಗೆ ಆಜ್ಞೆಗಳನ್ನೀವ ಸೇನಾಧಿಪತಿಯು ಎಲ್ಲಿಹನೋ ನೀನರಿಯೆ. ಅವನಿರುವಲ್ಲಿಂದಲೇ ತನ್ನ ಆಜ್ಞೆಗಳನ್ನು ಹೊರಡಿಸುತ್ತಾನೆ. ಆ ಆಜ್ಞೆಗಳನ್ನು ಅರ್ಥಮಾಡಿಕೊಂಡು, ಜಾಣತನ ಮತ್ತು ಪರಾಕ್ರಮದಿಂದ ಹೋರಾಡುವುದಷ್ಟೇ ನಿನ್ನ ಕರ್ತವ್ಯ. ಹೋರಾಟದಲ್ಲಾಗುವ 'ಜಯಾಪಜಯ'ಗಳ ಲೆಕ್ಕಾಚಾರ ಅವನಿಗೆ ಸೇರಿದ್ದು. ನಮ್ಮ ಕಣ್ಣಿಗೆ ಕಾಣಿಸದ ಅವನ, ಆಳ್ವಿಕೆ ಇದು, ಎಂದು ಹೇಳುತ್ತಾ ಬಂಧನವಿಲ್ಲದೆ, ಅಂಟದೆ ನಮ್ಮ ಕರ್ತವ್ಯ ಪಾಲನೆಯ ಪರಿಯನ್ನು ನಮಗುಪದೇಶಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಿಧಿ ನಿರ್ಮಿತ ಈ ರಣರಂಗದಲ್ಲಿ ಲಕ್ಷಾಂತರ ತಲೆಮಾರುಗಳು, ಜನಾಂಗಗಳು ಬದುಕಿನ ಯುದ್ಧಮಾಡಿ ನೇಪತ್ಯಕ್ಕೆ ಸರಿದಿವೆ. ಅಷ್ಟೇ ಅಲ್ಲ ಬದುಕಿಗೆ ಬಂದ ಪ್ರತೀ ಪ್ರಾಣಿಯೂ ತನಗೆ ಸಂದ ಪಾತ್ರವನ್ನು ನಿರ್ವಹಿಸಲೇ ಬೇಕು. ಕಡೆಗೆ ಗಿಡ ಮರಗಳೂ ಸಹ ತಮ್ಮ ಅಸ್ತಿತ್ವಕ್ಕೆ ಹೋರಾಡಲೇ ಬೇಕು. ಆದರೆ ಆ ಹೋರಾಟ ಹೇಗಿರಬೇಕು ಎಂದರೆ, ನಮಗೊಬ್ಬ ಸೈನ್ಯಾಧಿಕಾರಿ ಇದ್ದಾನೆ, ಆದರೆ ಅವನು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅವನು ಕಳುಹಿಸುವ ಆಜ್ಞೆಗಳನ್ನು ಶಿರಸಾವಹಿಸಿ ನಿರ್ವಹಿಸುದಷ್ಟೇ, ಈ ಯುದ್ಧದಲ್ಲಿ ಸೈನಿಕರಾದ ನಮ್ಮ ಕರ್ತವ್ಯ. ಹಾಗೆ ಹೋರಾಡುವಾಗ, ಅವನ ಆಜ್ಞೆಯನ್ನು ಪರಿಶೀಲಿಸಿ ವಿಶ್ಲೇಷಿಸಿ ಅರಿತುಕೊಂಡು ಚಾಚೂ ತಪ್ಪದೆ, ಜಾಣತನ ಮತ್ತು ಪರಾಕ್ರಮದಿಂದ ಅದನ್ನು ಪಾಲಿಸುವುದಷ್ಟೇ ನಮ್ಮ ಕರ್ತವ್ಯ.

ಆದರೆ ನಾವೇನು ಮಾಡುತ್ತೇವೆ, 'ನಾನು' ಹೋರಾಡುತ್ತಿದ್ದೇನೆ, ಇದು ನನ್ನ ಹೋರಾಟ, ನಾನು ಗೆಲ್ಲಬೇಕು ಅಥವಾ ಇದು ನನ್ನ ಗೆಲುವು ಎನ್ನುವಂತಹ ಹಲವಾರು ದುರ್ಭಾವಗಳನ್ನು ಬೆಳೆಸಿಕೊಂಡಿರುತ್ತೇವೆ. ಇದು ಅಹಂಕಾರ ಜನಿತ. ಹಾಗಲ್ಲದೆ ನಾ ಬದುಕಿನ ಹೋರಾಟದಲ್ಲಿ ಇಡುವ ಪ್ರತೀ ಹೆಜ್ಜೆಯೂ ನನ್ನ ಮೇಲಧಿಕಾರಿಯಿಂದ ಬಂದ ಆಜ್ಞೆಯ ಪ್ರಕಾರ, ಇದರಲ್ಲಿ ನನ್ನ ಪ್ರಮೆಯವೇನೂ ಇಲ್ಲ. ವಿವೇಕವೆಂಬ ಕತ್ತಿಯನ್ನು





ಸದಾಕಾಲ ಆ ಮೇಲಧಿಕಾರಿ ಕಳುಹಿಸುವ ಆಜ್ಞೆಗಳ ಒರೆಗೆ ಉಜ್ಜಿ ಚೂಪುಗೊಳಿಸಿಕೊಂಡು, ಹೋರಾಡಬೇಕು. ಗೆಲ್ಲುತ್ತೇನೆಂದಾಗಲೀ, ಗೆಲ್ಲಲೇಬೇಕೆಂದಾಗಲೀ, ಅಥವಾ ಸೋಳುಗೆಲುವುಗಳೇ ನನ್ನ ಯೋಗ್ಯತೆಯ ಮಾಪಕ(ಅಳತೆಗೋಲು)ಎಂದಾಗಲೀ ವಿಮರ್ಶೆ ಮಾಡದೆ ಕೇವಲ ಹೋರಾಡಬೇಕು. ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಅವನ ಆಜ್ಞೆಗಳು ನಮಗೆ ಬಂದು ಮುಟ್ಟುವತನಕ ಆ ಆಜ್ಞೆಯೇನು, ಎಂದು ಬರುವುದು, ಯಾವ ಸ್ವರೂಪದಲ್ಲಿ ಬರುವುದು ಎಂದು ನಮಗೆ ತಿಳಿಯಲು ಆಗುವುದೇ ಇಲ್ಲ.

ಹಾಗಾಗಿ ಕೇವಲ ಒಂದು ನಿಷ್ಠಾವಂತ ಸೈನಿಕನ ತೆರದಿ ಈ ಬದುಕಿನ ಹೋರಾಟವನ್ನು ನಡೆಸಬೇಕು. 'ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ, ಏನೆಲ್ಲಕೆ ದೇವ ಪ್ರೇರಣೆ(ಸೈನ್ಯಾಧಿಕಾರಿಯ ಆಜ್ಞೆ) ಎಂದು' ಎಂದು ದಾಸವರೇಣ್ಯರಾದ ಪುರಂದರದಾಸರು ಹೇಳಿದಂತೆ, ನಾವು ಬದುಕಿನಲ್ಲಿ ಹೋರಾಡಿದರೆ ಚೆನ್ನ, ಇಲ್ಲದಿದ್ದರೆ ನೋವು ದುಃಖ ನಮ್ಮ ಪಾಲಿಗೆ ಕಟ್ಟಿಟ್ಟ ಬುತ್ತಿ. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 735**

**ನಾಯಕನಿಗಿರಲಿ ರಣವಿಜಯ ಪರಿಭವ ಗಣನೆ |**

**ಆಯವದರಿಂ ಭಟನ ಸತ್ವಶಿಕ್ಷಣಕೆ ।**

**ಸ್ವೀಯ ಸತ್ವವಿಕಾಸ ನಿಜಶಕ್ತಿಯಭ್ಯಾಸ ।**

**ಶ್ರೇಯಸಿಗೆ ಸೋಪಾನ - ಮಂಕುತಿಮ್ಮ ॥**

ನಾಯಕನಿಗಿರಲಿ=ನಾಯಕನಿಗೆ+ಇರಲಿ, ಆಯವದರಿಂ=ಆಯವು+ ಆದರಿಂ, ನಿಜಶಕ್ತಿಯಭ್ಯಾಸ=ನಿಜ+ ಶಕ್ತಿಯ+ಅಭ್ಯಾಸ. ಪರಿಭವ=ಸೋಲು, ಗಣನೆ=ಲೆಕ್ಕಾಚಾರ, ಆಯ=ಸೂಕ್ತತೆ, ಭಟನ=ಸೈನಿಕನ, ಸೇವಕನ, ಸ್ವೀಯ= ಸ್ವಂತದ, ಸೋಪಾನ=ಮೆಟ್ಟಿಲು

ಯುದ್ಧದಲ್ಲಿ ಹೋರಾಡುವ ಸೈನಿಕನಿಗೆ, ರಣರಂಗವು, ಕಲಿಕೆಗೆ ಮತ್ತು ಸತ್ವವರ್ಧನೆಗೆ ಒಂದು ಸೂಕ್ತ ಸ್ಥಳ(ಆಯ). ಆ ರಣದ ಸೋಲು-ಗೆಲುವಿನ ಲೆಕ್ಕಾಚಾರ ಆ ರಣದ ನಾಯಕನಿಗಿರಲಿ ಎಂದು ಹೇಳುತ್ತಾ ಬದುಕಿನ ಹೋರಾಟವನ್ನೂ ಸಹ ಸೋಲು-ಗೆಲುವುಗಳ ಚಿಂತೆಯಿಲ್ಲದೆ ಹೋರಾಡಿ, ನಮ್ಮ ಅನುಭವದಿಂದ ಅಂತಃಸತ್ವವನ್ನು ವರ್ಧಿಸಿಕೊಳ್ಳಬೇಕು, ಅದೇ ವ್ಯಕ್ತಿಯ ಶ್ರೇಯಸ್ಸಿಗೆ ಮೆಟ್ಟಿಲು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕೇ ಒಂದು ಯುದ್ಧ, ರಣರಂಗ, ಹೋರಾಟದ ತಾಣ. ನಮ್ಮ ಹೊರಗಿರುವ 'ಊಹಿತಶತ್ರು' ಗಳು (imaginary enemy) ಮತ್ತು ನಮಗೆ ಗೊತ್ತಿರುವ 'ಅಂತರಂಗ'ದ ಶತ್ರುಗಳೊಂದಿಗೆ ನಿರಂತರ ಹೋರಾಟ. ಹುಟ್ಟಿನಿಂದ ಸಾವಿನವರೆಗೆ ನಡೆಯುವ ಆಕುಂಠಿತ ಹೋರಾಟ. ಒಂದು ಹೊರಗಿನ ಯುದ್ಧ ಮತ್ತೊಂದು ಅಂತರಂಗದ ಹೋರಾಟ. ಈ ಹೋರಾಟದಲ್ಲಿ ಜಯಾಪಜಯಗಳು ನಿಯಾಮಕನ

ಲೆಕ್ಕಾಚಾರದಂತೆ ಇರುತ್ತದೆ. ನಾವು ಕೇವಲ ಅರಿತು, ವಿವೇಕದಿಂದ, ನಿಯಾಮಕನ ಆಜ್ಞೆಗಳನ್ನು ಅರಿತು ಹೋರಾಡಬೇಕು ಅಷ್ಟೇ. ನಿಯಮಗಳಿಗನುಸಾರ ನಮ್ಮ ಹೋರಾಟವಾದರೆ ನಮ್ಮೊಳಗೆ ಸತ್ವ ಬೆಳೆಯುತ್ತದೆ ಮತ್ತು ಆ ಸತ್ವವೇ ನಮ್ಮನ್ನು ಮತ್ತೂ ಚೆನ್ನಾಗಿ ಹೋರುವಂತೆ ಶಕ್ತಿಯನ್ನೂ ನೀಡುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು 'ಶ್ರೇಯಸಿಗೆ ಸೋಪಾನ ' ಎಂದು ಹೇಳಿದ್ದಾರೆ.

ನಮ್ಮ ದೇಹ, ಮನಸ್ಸು, ಬುದ್ಧಿ, ವಿವೇಕ, ವಿದ್ಯೆ, ಸಂಸ್ಕಾರಗಳು, ನಮ್ಮ ಪೂರ್ವಜರ ಜೀವನಶೈಲಿ ಮತ್ತು ಅವರ ಅನುಭವಗಳೇ ನಮ್ಮ ಜೀವನದ ಹೋರಾಟಕ್ಕೆ ಆಯುಧಗಳಾಗಬೇಕು. ಈ ಎಲ್ಲಾ ಆಯುಧಗಳ ಸಮರ್ಪಕ ಪ್ರಯೋಗದಿಂದ ನಮ್ಮ ಬಾಹ್ಯ ಮತ್ತು ಅಂತರಂಗದ ಯುದ್ಧವನ್ನು, ಸಮರ್ಪಕವಾಗಿ ನಿಭಾಯಿಸಬಹುದು. ಅಷ್ಟೇ ಅಲ್ಲ ಬದುಕಿನ ಹೋರಾಟದಲ್ಲಿ ಬರಬಹುದಾದ ಎಲ್ಲಾ 'ಸವಾಲು'ಗಳನ್ನೂ ಧೈರ್ಯವಾಗಿ ಎದುರಿಸಬಹುದಾದಂತಹ ಶಕ್ತಿ ಬೆಳೆದು ಡಿವಿಜಿಯವರು 'ಸ್ವೀಯಸತ್ವವಿಕಾಸ' ಎಂದು ಹೇಳುವಂತೆ ನಮ್ಮಲ್ಲಿ ಸತ್ವ ವೃದ್ಧಿಯಾಗುತ್ತದೆ. ಸತ್ವದಿಂದ ಶಕ್ತಿ, ಶಕ್ತಿಯಿಂದ ಶ್ರೇಯಸ್ಸು.

ಹೊರಗಿನ ವಿಷಯಗಳು ನಮ್ಮನ್ನು ಹೋರಾಟಕ್ಕೆ ಎಳೆಯುತ್ತವೆ ಮತ್ತು ಒಳಗಿನ ವಿಷಯಗಳು ನಮ್ಮನ್ನು ಹೋರಾಟಕ್ಕೆ ತಳ್ಳುತ್ತವೆ. ಹೊರಗಿನ ಮತ್ತು ಅಂತರಂಗದ ಶತ್ರುಗಳೊಡನೆ ಹೋರಾಡಲು, ಸತ್ವದ ಅವಶ್ಯಕತೆ ಇದೆ. ಆ ಸತ್ವದ ಶಕ್ತಿಯಿಂದಲೇ ಇವೆರಡನ್ನೂ ದಮನ ಮಾಡಲು ಸಾಧ್ಯ. ಆ ಸತ್ವ ನಮ್ಮಲ್ಲಿ ಬೆಳೆಯಬೇಕಾದರೆ, ಅನ್ಯಾಲೋಚನೆಯಿಲ್ಲದೆ, ನಮ್ಮ ಸೇನಾಧಿಪತಿಯ ಆಜ್ಞೆಗಳನ್ನು ಮತ್ತು ಅವನು ವಿಧಿಸಿದ ನಿಯಮಗಳನ್ನು ಪಾಲಿಸಿ ನಿರ್ಮೋಹದಿಂದ ಮತ್ತು ನಿರಪೇಕ್ಷೆಯಿಂದ ಹೋರಾಡುತ್ತಾ ಜಯಾಪಜಯಗಳ ಲೆಕ್ಕಾಚಾರವನ್ನು ಅವನಿಗೇ ಬಿಟ್ಟುಬಿಡುವುದೇ ಸೂಕ್ತ. ಹಾಗೆ ನಾವಿರಲಾದರೆ, ಅಂತಹ ಹೋರಾಟವನ್ನು ನಾವು ನಡೆಸಲಾದರೆ ಅದೇ ಸೂಕ್ತ ಮತ್ತು ಸಾರ್ಥಕ ಹೋರಾಟವಾಗುತ್ತದೆ.





**ಮುಕ್ತಕ - 736**

**ಕಾಯಕವ ಚರಿಸುತ್ತ, ಮಾನಸವ ಸಯ್ತಿಡುತ |**

**ಆಯಸಂಬಡಿಸದವೊಲಂತರಾತ್ಮವನು ||**

**ಮಾಯೆಯೊಡನಾಡುತ್ತ, ಬೊಮ್ಮನನು ಭಜಿಸುತ್ತ |**

**ಆಯುವನು ಸಾಗಿಸೆಲೋ - ಮಂಕುತಿಮ್ಮ ||**

ಆಯಸಂಬಡಿಸದವೊಲಂತರಾತ್ಮವನು=ಆಯಸಂ+ಬಡಿಸದ+ಒಲು+ಅಂತರಾತ್ಮವನು,

ಮಾಯೆಯೊಡನಾಡುತ್ತ=ಮಾಯೆಯೊಡನೆ+ಆಡುತ್ತ,

ಕಾಯಕ=ಕರ್ತವ್ಯ, ಸಯ್ತಿಡುತ=ಸಂತೈಸುತ್ತಾ, ಆಯಸಂ=ಆಯಾಸವನ್ನು, ಬೊಮ್ಮನನು=ಪರಮಾತ್ಮನನ್ನು,

ಆಯುವನು=ಆಯಸ್ಸನ್ನು

ಕರ್ತವ್ಯವನ್ನು ಮಾಡುತ್ತಾ ನಮ್ಮದೇ ಮನಸ್ಸನ್ನು ಸಂತೈಸುತ್ತಾ ಆತ್ಮವನ್ನು ಆಯಾಸಗೊಳಿಸದಂತೆ, ಜಗತ್ತಿನ ಮಾಯೆಯೊಡನೆ ಆಟವಾಡುತ್ತಾ, ಪರಮಾತ್ಮನನ್ನು ಭಜಿಸುತ್ತಾ ನಿನ್ನ ಬದುಕನ್ನು ಸಾಗಿಸು ಎಂದು ನಾವು ಜಗತ್ತಿನಲ್ಲಿ ಹೇಗಿರಬೇಕು ಎನ್ನುವುದನ್ನು ಬಹಳ ಸೂಕ್ತವಾಗಿ ಆದೇಶ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಬದುಕು ನಮಗೆ ವಿಧಿಸಿದ ಕರ್ತವ್ಯವನ್ನು ಮಾಡಲೇಬೇಕು. ಅದೇ ಸರಿಯಾದ ದಾರಿ. ಕರ್ತವ್ಯವನ್ನು ಬಿಡುವುದರಿಂದಲೇ ಬದುಕಿನಲ್ಲಿ ಕ್ಲಿಷ್ಟತೆಗಳುಂಟಾಗುತ್ತವೆ, ಆತ್ಮ ಸೊರಗುತ್ತದೆ. ಹಾಗೆ ಕರ್ತವ್ಯವನ್ನು ಮಾಡುವಾಗ ಮಾನಸಿಕ ಸಮತೋಲನವನ್ನು ಸಾಧಿಸಿಕೊಳ್ಳಬೇಕು. ಸ್ಥಿರವಿರದ ಮನಸ್ಸಿನಿಂದ ಕರ್ತವ್ಯಗಳನ್ನು ಸೂಕ್ತವಾಗಿ ನಿರ್ವಹಿಸಲು ಸಾಧ್ಯವಿಲ್ಲ. ಆದರೆ ನಮ್ಮ ಮಾನಸಿಕ ಸಮತೋಲನವನ್ನು ಕದಡುವುದು ನಮ ಇಂದ್ರಿಯಗಳ ಮೂಲಕ ನಮ್ಮ ಒಳ ಹೊಗುವ ವಿಷಯಾಸಕ್ತಿಗಳೇ ಅಲ್ಲವೇ? 'ಇರುವುದು ಇಲ್ಲದಂತೆ' ಯೂ 'ಇಲ್ಲದ್ದು ಇರುವಂತೆ' ಯೂ ಕಾಣುವ ಈ ವಿಷಯಗಳೇ ನಮಗೆ ಉಂಟಾಗುವ ಭ್ರಮೆಗಳು.

ನಾವೆಲ್ಲರೂ ಒಂದಲ್ಲ ಒಂದು ರೀತಿ ಭ್ರಮಾಧೀನರು. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಭ್ರಮೆ . ಅದನ್ನು ಬಿಟ್ಟು ಬದುಕಲು ಸಾಧ್ಯವೇ ಇಲ್ಲವೆನ್ನುವಂತಿದೆ. ಸತ್ಯವಾವುದು ಭ್ರಮೆಯಾವುದು ಎಂದು ಅರಿಯಲಾಗದ ಸ್ಥಿತಿಯಲ್ಲೂ ಮನಸ್ಸಿನ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಒಂದೇ ಮಾರ್ಗವೆಂದರೆ, ಸತ್ಯವೋ, ಭ್ರಮೆಯೋ ಯಾವುದಕ್ಕೂ ಅಂಟದೇ ಇದ್ದರೆ, ಈ ಭ್ರಮಾಘಾತದಿಂದ ನಾವು ಪಾರಾಗಬಹುದು. ನಾವು ಮಾಡುತ್ತಿದ್ದೇವೆ ಅಥವಾ ನಾವು ಆಡುತ್ತಿದ್ದೇವೆ ಎನ್ನುವಂತಲ್ಲದೆ, ಜಗನ್ನಾಟಕ ಸೂತ್ರಧಾರಿಯ ನಿರ್ದೇಶನದಂತೆ ನಡೆದುಕೊಂಡರೆ, ಭ್ರಮೆಯಿಂದ ಮುಕ್ತರಾಗಬಹುದು. ಆದರೆ ಆ ದಿಕ್ಕಿನಲ್ಲಿ ನಾವು ನಮ್ಮದೇ ಆದಂತಹ ' ಸತ್ಯ'ವನ್ನು ಕಂಡುಕೊಳ್ಳಬೇಕು 'ಸತ್ವ' ವನ್ನು ಅಂತರಂಗಕ್ಕೆ

ಇಳಿಸಿಕೊಳ್ಳಬೇಕು. ಅಲ್ಲದೆ ಯಾರೋ ತೋರಿದ ಮಾರ್ಗವನ್ನೋ ಯಾರದೋ ನಂಬಿಕೆಯನ್ನು ನಮ್ಮದೆಂಬಂತೆ ಪಾಲಿಸಿದರೆ, ಒಂದು ಭ್ರಮೆಯಿಂದ ಮತ್ತೊಂದು ಭ್ರಮೆಗೆ ಬಿದ್ದಂತಾಗುತ್ತದೆ.





ಬದುಕಿನೊಂದಿಗೆ ನಂಟು ಇರಬೇಕು ಆದರೆ 'ಅಂಟು' ಇರಬಾರದು. ಅಂಟಿಕೊಳ್ಳದೆ ಇದ್ದರೆ, ಭ್ರಮೆಯನ್ನು ತೊರೆದು, ಸ್ಥಿರ ಮನಸ್ಕರಾಗಿ 'ನಾವು ಮಾಯೆಯ ಕೈಯೊಳಗೆ ಒಂದು ಆಟದ ವಸ್ತು' ವಾಗದೆ, ಸಂಪೂರ್ಣ ಅರಿವಿನಿಂದ ಆ ಮಾಯೆಯನ್ನು ಅರಿತು ಅದರೊಂದಿಗೆ ಆಟವಾಡಿಕೊಳ್ಳಬಹುದು. ಅಂತಹ ಸ್ಥಿತಿಯಲ್ಲಿ 'ಭ್ರಮೆ'ಯಿಂದ ಮುಕ್ತರಾಗಿ ಪರಮಾತ್ಮ ತತ್ವದಲ್ಲಿ ಯುಕ್ತರಾಗಿರಬಹುದು. ಇದು ಸರಿಯಾದ ಮಾರ್ಗ. ಆದರೆ ನಮ್ಮ ಅಂತರಂಗ ಗಟ್ಟಿಯಾಗಿ, ಜಗತ್ತಿನ ಸೆಳೆತಗಳಿಗೆ ಬಲಿಯಾಗದೆ ಇರಬೇಕಾದರೆ ಸಾಧನೆ ಬೇಕು ಆ ಸಾಧನೆಗೆ ಹಲವಾರು ಮಾರ್ಗಗಳಿವೆ. ಯಾವುದಾದರೂ ಒಂದು ಮಾರ್ಗವನ್ನು ನಾವು ಆಯ್ಕೆ ಮಾಡಿಕೊಂಡು ವಿಚಲಿತರಾಗದೆ ಆ ಮಾರ್ಗದಲ್ಲಿ ಸಾಗಿದರೆ ಸಾಕು ಜೀವನ ಸಾರ್ಥಕವಾಗುತ್ತದೆ. 'ಆಯುವನು ಸಾಗಿಸೆಲೋ' ಎಂದು ಡಿವಿಜಿಯವರು ಹೇಳುವ ರೀತಿಯಲ್ಲಿ ನಮ್ಮ ಆಯಸ್ಸನ್ನು ಕಳೆಯಲಾದರೆ ಅದೇ ಒಂದು ಸಾಧನೆಯಲ್ಲವೇ?

**ಮುಕ್ತಕ – 737**

**ಎಂದಿಗಾನುಂ ನಿನ್ನ ಪೂರ್ವಋಣಗಳ ಲೆಕ್ಕ |**
**ನೊಂದಬೇಕೆಂದಿರ್ದೊಡಿಂದೆ ಮೊದಲನಿಡು ||**
**ಅಂದಿಸಿಕೊ ಹೆರರೆನಿಪರನು ಹೃದಯವಿಸ್ತರದೆ |**
**ಹೊಂದು ವಿಶ್ವಾತ್ಮತೆಯ – ಮಂಕುತಿಮ್ಮ ||**

ನೊಂದಬೇಕೆಂದಿರ್ದೊಡಿಂದೆ=ನೊಂದಬೇಕೆಂದು+ಇರ್ದೊಡೆ, ಮೊದಲಡು=ಮೊದಲನ್+ಇಡು, ಹೆರರೆನಿಪರನು=ಹೆರರು+ಎನಿಪರನು, ವಿಶ್ವಾತ್ಮತೆಯ=ವಿಶ್ವ+ಆತ್ಮತೆಯ ಎಂದಿಗಾನುಂ=ಎಂದಿಗಾದರೂ, ನೊಂದ=ಹೊಂದ-ಅನುಭವಿಸ-ಪಡೆ, ಇರ್ದೊಡೆ=ಇದ್ದರೆ, ಅಂದಿಸಿಕೊ=ಎಟುಕಿಸಿಕೋ, ಹೆರರೆನಿಪರನು=ಅನ್ಯರು ಎನ್ನುವವರನ್ನು, ವಿಸ್ತರದೆ=ವಿಸ್ತಾರದಿ

'ಎಂದಿಗಾದರೂ ನಿನ್ನ ಪೂರ್ವ ಕರ್ಮಗಳ ಲೆಕ್ಕಾಚಾರವನ್ನು ನೋಡಿ ಮುಗಿಸಬೇಕೆಂದೆನಿಸಿದರೆ, ಆ ದಿಕ್ಕಿನಲ್ಲಿ ಮೊದಲ ಹೆಜ್ಜೆಯನ್ನು ಇಂದೇ ಇಡು. ಹೃದಯ ವಿಸ್ತಾರದಿಂದ ಅನ್ಯರನ್ನು ಎಟುಕಿಸಿಕೋ, ಜಗದಾತ್ಮತೆಯನ್ನು ಹೊಂದು, ಅನುಭವಿಸು ಎಂದು, ಬದುಕಿನ ಭಾರವನ್ನು ಕಳೆದುಕೊಂಡು, ವೈಶಾಲ್ಯತುಂಬಿದ ಜೀವನದ ಪರಿಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರಿಗೂ ಅವರವರದೇ ಆದಂತಹ ಪೂರ್ವ ಕರ್ಮಗಳು, ಆ ಕರ್ಮಗಳಿಂದ ಸಂಚಯಿಸಿಕೊಂಡ ಋಣಗಳು, ಹಳೆಯ ಋಣಗಳನ್ನೂ ತೀರಿಸುವುದು. ಹೊಸ ಋಣಗಳನ್ನೂ ಸೇರಿಸಿಕೊಳ್ಳುವುದು, ಕೆಲವನ್ನು ಕಳೆದುಕೊಂಡು ಕೆಲವನ್ನು ಉಳಿಸಿಕೊಳ್ಳುವುದು. ಇದೇ ನಮ್ಮ ಜೀವನದ ಪರಿ, ಈ ದಿಶೆಯಲ್ಲಿ ನಾವು ನಮ್ಮೊಂದಿಗೆ ಮಾತ್ರ ಇರುತ್ತೇವೆ. ನಮ್ಮ ಮನೆ, ಮಡದಿ ಅಥವಾ ಗಂಡ, ಮಕ್ಕಳು, ನಮ್ಮ ಆಸ್ತಿ ನಮ್ಮ ಕೆಲಸ ನಮ್ಮ ಏಳಿಗೆ ಹೀಗೆ





ನಮ್ಮೆಲ್ಲ ಕೆಲಸ, ಆಲೋಚನೆ ಮತ್ತು ಯೋಜನೆಗಳು ನಮ್ಮ ಸುತ್ತಲೇ ಸುತ್ತುತ್ತಿರುತ್ತದೆ. ವಿಚಾರ ವೈಶಾಲ್ಯವಿಲ್ಲದೆ ಸಂಕುಚಿತ ಮನೋಭಾವದಿಂದಲೇ ಇರುತ್ತೇವೆ. ಇದು ಸಹಜ ಪ್ರವೃತ್ತಿ. ಈ ನಾನತ್ವದ 'ವೃತ್ತ ದಲ್ಲಿ ಇರುವಾಗ ನಮ್ಮ ಋಣ ಸಂಚಯನ ಮತ್ತು ವ್ಯವಕಲನ ನಡೆಯುತ್ತಲೇ ಇರುತ್ತದೆ.

ಆದರೆ ಎಂದಾದರೊಂದು ದಿನ ನಮಗೆ ಆತ್ಮೋದ್ಧಾರದ ಯೋಚನೆ ಬಂದರೆ, ನಮ್ಮ ಸಂಚಿತ ಋಣಗಳನ್ನು ತೀರಿಸಿಕೊಳ್ಳುವ ಅವಶ್ಯಕತೆಯ ಅನುಭವವಾದರೆ, ನಾವು ಅಂದೇ ಮೊದಲ ಹೆಜ್ಜೆಯನ್ನಿಡಬೇಕು ಎನ್ನುವುದೇ ಮಾನ್ಯ

ಡಿವಿಜಿ ಯವರ ಅಭಿಮತ. ಅದಕ್ಕೆ ಮಾರ್ಗವೇನೆಂದರೆ, ನಾವು 'ನಮ್ಮಿಂದಲೇ ನಿರ್ಮಿತವಾದ 'ನಮ್ಮ ವೃತ್ತ' ದಿಂದ ಹೊರಬಂದು ಅದಕ್ಕೆ ಅಂಟಿಕೊಳ್ಳದೆ ದೂರನಿಂತು ನೋಡಬೇಕು, ಸಾಕ್ಷೀಭಾವದಿಂದ. ಆಗ ನಮಗೆ ನಮ್ಮ ಶಕ್ತಿ ಮತ್ತು ನಮ್ಮ ಕೊರತೆಗಳ ದರ್ಶನವಾಗುತ್ತದೆ. ಶಕ್ತಿಯನ್ನು ವರ್ಧಿಸಿಕೊಂಡು ಕೊರತೆಗಳನ್ನು ನಿಚ್ಚಳವಾಗಿ ತೋರಿದಾಗ, ನಮ್ಮ ಋಣಗಳನ್ನು ಒಂದೊಂದಾಗಿ ನೀಗಿಸಿಕೊಳ್ಳುವ ಮಾರ್ಗಗಳು ತೀರಿಸಿಕೊಳ್ಳಬಹುದು. ಈ ಸ್ಥಿತಿಯನ್ನು ತಲುಪಿದರೆ ನಮ್ಮ ಸಂಕುಚಿತ ಭಾವ ಕರಗಿ ಹೃದಯ ವೈಶಾಲ್ಯವುಂಟಾಗುತ್ತದೆ. ನಾವು ಬೆಳೆದಂತೆ ನಾವು ಕಟ್ಟಿಕೊಂಡ ವೃತ್ತ ಬಹಳ ಸಣ್ಣದಾಗಿ ಕಾಣುತ್ತದೆ. ಆಗ ವೃತ್ತವನ್ನು ಹಿರಿದಾಗಿಸಿಕೊಂಡು ಅದರೊಳಕ್ಕೆ 'ಅನ್ಯ'ರನ್ನೂ ಸೇರಿಸಿಕೊಳ್ಳುವ ಸಾಧ್ಯತೆಯಿರುತ್ತದೆ. 'ಆತ್ಮವತ್ ಸರ್ವ ಭೂತೇಷು' ಎನ್ನುವ ಭಾವ ಬೆಳೆಯುತ್ತದೆ.

ಹೃದಯ ವೈಶಾಲ್ಯದಿಂದ ನಾವು ಜಗತ್ತಿನಲ್ಲಿ ಭಿನ್ನತೆಗಾಗಿ, ಬೇಧಕ್ಕಾಗಿ ಎಳೆದ ಗೆರೆಗಳು ಮಾಯವಾಗುತ್ತವೆ. ಎಲ್ಲೆಲ್ಲೂ ನಮಗೆ ಆ ಪರಮಾತ್ಮ ತತ್ವದ ದರ್ಶನವಾಗುತ್ತದೆ. ' ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ ಎನ್ನುವ ಸರ್ವಜ್ಞ ವಚನದಂತೆ ನಮ್ಮ ಆಲೋಚನೆಗಳು ವಿಶಾಲವಾಗಿ ಮಾನ್ಯ ಗುಂಡಪ್ಪನವರು 'ಹೊಂದು ವಿಶ್ವಾತ್ಮತೆಯ' ಎಂದು ಹೇಳುವಂತೆ ನಮಗೆ ಜಗದಾತ್ಮಾನುಭವವಾಗುತ್ತದೆ. ನಾವು ಕಟ್ಟಿಕೊಂಡ ಬಂಧನಗಳೆಲ್ಲಾ ಕಳಚಿ ನಾವೂ ಮುಕ್ತರಾಗುವ ಸಾಧ್ಯತೆ ಖಂಡಿತ ಇದೆ. ಆದರೆ ಅದು ಸ್ವಾರ್ಥ ಬಿಟ್ಟು ಸಾಧನೆ ಮಾಡಿದರೆ ಮಾತ್ರ ಸಾಧ್ಯ. ನಾವು ಅಂತಹ ಪ್ರಯತ್ನವನ್ನು ಮಾಡಿದರೆ ನಮ್ಮ ಬದುಕೂ ಸಾರ್ಥವಾಯಿತು ಎಂದುಕೊಳ್ಳಬಹುದು.





**ಮುಕ್ತಕ - 738**

**ತನಗೆ ಬಾರದ ಲಾಭ ತನಯಂಗೆ ಬಂದಾಗ |**

**ಜನಕನ್ ಅದು ತನದೆಂದು ಸಂತಸಿದ ತೆರದಿ ||**

**ಜನದೊಳಾರ್ಗಾವ ಸೊಗವಾದೊಡಂ ತನದೆನ್ನು |**

**ತನುಭವಿಪನೋ ಜ್ಞಾನಿ - ಮಂಕುತಿಮ್ಮ ||**

ಜನದೊಳಾರ್ಗಾವ=ಜಗದೊಳು+ಆರ್ಗೆ+ಆವ. ಸೊಗವಾದೊಡಂ=ಸೊಗವು+ಆದೊಡಂ

ತನದೆನ್ನುತನುಭವಿಪನೋ=ತನ್ನದು+ಎನುತ+ಅನುಭವಿಪನೋ,

ತನಯಂಗೆ =ಮಗನಿಗೆ, ಜನಕನ್=ತಂದೆ, ಸಂತಸಿಪ=ಸಂತೋಷಪಡುವ, ತೆರದಿ=ರೀತಿಯಲ್ಲಿ,

ಆರ್ಗೆ=ಯಾರಿಗೆ, ಸೊಗವು=ಸಂತೋಷ, ಆನಂದ, ಅನುಕೂಲ, ಆದೊಡಂ=ಆದರೆ,

ಜೀವನದಲ್ಲಿ ನಾನು ಪಡೆಯಲಾಗದ್ದನ್ನು ನನ್ನ ಮಗ(ಳು)ಪಡೆದರೆ ಸಂತೋಷಿಸುವ ತಂದೆಯಂತೆ, ಜಗತ್ತಿನಲ್ಲಿ, ನಾವು ಬಯಸಿ, ನಮಗೆ ಸಿಗದಿದ್ದದ್ದು ಬೇರೆ ಯಾರಿಗಾದರೂ ದಕ್ಕಿ ಅದು ಅವರ ಸಂತೋಷಕ್ಕೆ ಕಾರಣವಾದರೆ ಆ ಸಂತೋಷವನ್ನು ತನ್ನ ಸಂತೋಷವೆಂದು ಸಂಭ್ರಮಿಸುವವನೆ ಜ್ಞಾನಿ ಎಂದು ಉಲ್ಲೇಖಮಾಡಿದ್ದಾರೆ. ಈ ಮುಕ್ತಕದಲ್ಲಿ.

ತಂದೆ ತಾಯಿಗಳು ತಮ್ಮ ಬದುಕಿನಲ್ಲಿ ಏನನ್ನೋ ಸಾಧಿಸಬೇಕೆಂದೋ, ತಮ್ಮ ಮಕ್ಕಳಿಗೆ ಅನುವಾದ ಬಾಳನ್ನು ಕೊಡಬೇಕೆಂದೋ ಆಶಿಸುತ್ತಾರೆ. ಆದರೆ ಕಾರಣಾಂತರಗಳಿಂದ ಅಂತ ಸಾಧನೆಯನ್ನು ಮಾಡಲಾಗದೆ ಮಕ್ಕಳಿಗೆ ಒಳ್ಳೆಯ ಅನುಕೂಲಗಳನ್ನು ಕೊಡಲಾಗದೇ ಇರಬಹುದು. ಅದೇ ಮಕ್ಕಳು ಬೆಳೆದು ವಿದ್ಯಾವಂತರಾಗಿ, ಯೋಗ್ಯರಾಗಿ ತಮ್ಮ ಕಾರ್ಯಕ್ಷಮತೆಯ ಬಲದಿಂದ ಆ ತಂದೆ ತಾಯಿಗಳು ಬಯಸಿದ 'ಅನುವಾದ ಬಾಳ' ನ್ನು ಬಾಳಿದರೆ, ಆ ತಂದೆತಾಯಿಗಳು ಅದಕ್ಕಿಂತ ಮೀರಿದ ಸಂತೋಷವನ್ನು ಅಪೇಕ್ಷಿಸಲಾಗದು. ತಮ್ಮ ಮಕ್ಕಳು, ತಮ್ಮಷ್ಟೇ ಅಥವಾ ತಮಗಿಂತ ಯೋಗ್ಯರಾದರೆ ಸಂತೋಷಪಡುವುದು, ಸಹಜ ಸಂಸ್ಕಾರ, ಹಾಗೆಯೇ ತಮ್ಮ ಮಕ್ಕಳು ಹಾದಿ ಬಿಟ್ಟು, ಅಯೋಗ್ಯರಾಗಿ ಕಷ್ಟಗಳನ್ನು ಅನುಭವಿಸುವಾಗ, ನೊಂದು ನೂಲಾಗಿ, ಆಜೀವ ಪರ್ಯಂತ ಕೊರಗಿ, ತಮ್ಮ ಕೊನೆಯಗಳಿಗೆಯ ತನಕ, ತಮ್ಮ ಮಕ್ಕಳ ಜೀವನ ಸುಧಾರಿಸಲಿ ಎಂದು ಆಶಿಸುವ ತಂದೆ ತಾಯಿಗಳನ್ನು ನಾವು ಎಲ್ಲೆಡೆ ನೋಡಬಹುದು. ತಮ್ಮ ಮಕ್ಕಳು ತಮಗಿಂತ ಉತ್ತಮರಾದರೆ, ನಮ್ಮ ಜೀವನ ಸಾರ್ಥಕ' ಎಂದು ಬಗೆಯುವವರು ' ಜಾಣ' ತಂದೆ ತಾಯಿಗಳು.

ಹೀಗೆ ಅನ್ಯರ ಏಳಿಗೆಯಲ್ಲಿ ನಮ್ಮ ಏಳಿಗೆಯನ್ನು ಅನ್ಯರ ಸುಖದಲ್ಲಿ ನಮ್ಮ ಸುಖ ಸಂತೋಷಗಳನ್ನು ಅನುಭವಿಸುವುದು 'ಸುಸಂಸ್ಕಾರ', " ಅನ್ಯೇಷಾಂ ಉದಯಂ ದೃಷ್ಟ್ವಾಯೇ ಅಭಿನಂದಂತಿ ಮಾನವಾಃ ತೇ ವೈ ಭಾಗವತಾಃ ಸ್ಮೃತಾಃ " ಎನ್ನುತ್ತದೆ ಭಾಗವತ ಲಕ್ಷಣಗಳನ್ನು ವಿವರಿಸುವ ಒಂದು ಸೂಕ್ತ. 'ಅನ್ಯರ ಏಳಿಗೆಯನ್ನು

ಕಂಡು ಅದು ತನ್ನ ಏಳಿಗೆಯೆಂದು ಬಗೆದು ಸಂತೋಷಪಡುವವನೆ ಭಾಗವತೋತ್ತಮನೆಂದು ಹೇಳಬಹುದು' ಎನ್ನುತ್ತದೆ ಈ ಸೂಕ್ತ. ಆ ರೀತಿಯ ಭಾವ ಬರಬೇಕಾದರೆ ಒಂದು ಉನ್ನತ ಸುಸಂಕೃತ ಮನಕ್ಕೆ ಮಾತ್ರ ಸಾಧ್ಯ ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು " ಜನದೊಳಾರ್ಗಾವ ಸೊಗವಾದೊಡಂ ತನದೆನ್ನುತನುಭವಿಪನೋ ಜ್ಞಾನಿ " ಎಂದು ಹೇಳುತ್ತಾ ನಮ್ಮ ಸುತ್ತಲಿನ ಅಥವಾ ನಮ್ಮ ಸಂಪರ್ಕದಲ್ಲಿರುವ ಜನರಿಗೆ ಯಾವುದೇ ರೀತಿಯ 'ಆನಂದ, ಸಂತೋಷ' ವಾದರೂ ಅದು ತನಗೂ ಆದ ಸಂತೋಷವೆಂದು ಯಾರು ಪರಿಗಣಿಸಿ ಸಂತಸಪಡುತ್ತಾರೋ ಅವರೇ 'ಜ್ಞಾನಿ'ಗಳು ಎನ್ನುತ್ತಾರೆ.

ಅವರುಗಳು ಜ್ಞಾನಿಗಳೇಕೆಂದರೆ, ಅಂತಹ ಮನೋಭಾವವಿರುವವರಿಗೆ, ಮಮಕಾರ, ಸ್ವಾರ್ಥ, ಈರ್ಷ್ಯೆ ಮುಂತಾದ ದುರಾಲೋಚನೆಗಳಿಲ್ಲದೆ ನಿರ್ಮೋಹದಿಂದ ನಿರಪೇಕ್ಷೆಯಿಂದ ಜಗತ್ತನ್ನು ನೋಡುವ ಮನೋಭಾವವಿರುತ್ತದಾದ್ದರಿಂದ ಅವರು ಜ್ಞಾನಿಗಳು. ಸದಾ ಕಾಲ ಅನ್ಯರನ್ನು ನೋಡಿ, ಅವರಲ್ಲಿರುವುದು ತನ್ನಲ್ಲಿಲ್ಲವಲ್ಲ ಎಂದು ಕೊರಗುತ್ತಾ ಬಾಳುವವರ ಜೀವ ನಿತ್ಯ ಗೋಳಿನಿಂದ ಕೂಡಿರುತ್ತದೆ. ನಮಗೆ ಅಂತಹ ಗೋಳು ಬೇಡವಾದಲ್ಲಿ, ನಮ್ಮ ಸುಖ ಸಂತೋಷವನ್ನು ಅನ್ಯರಿಗೂ ಹಂಚುತ್ತಾ, ಅನ್ಯರ ಸುಖ ಸಂತೋಷವನ್ನು ನಮ್ಮದೆಂದು ಭಾವಿಸಿ ಸಂತೋಷಪಡುವ ಮನೋಭಾವ ಬೆಳೆಸಿಕೊಳ್ಳಬೇಕು. ನಮಗಂತಹ ಮನೋಭಾವವಿದೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳುತ್ತಾ ಸಾಧ್ಯವಾದರೆ ಅಂತಹ ಮನೋಭಾವವನ್ನು ಬೆಳೆಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – 739**

**ತನ್ನ ಮನದಾಟಗಳ ತಾನೆ ನೋಡುತ ನಗುವ |**

**ತನ್ನೊಳಗೆ ತಾನಿರ್ವರಾದವೊಲು ಬಾಳ್ವ ||**

**ಚಿನ್ಮಾತ್ರವನ್ನು ಬೇರೆ ಬಗೆದು ಜಾನಿಪ ಚತುರ |**

**ಧನ್ಯತೆಯ ಕಂಡವನು – ಮಂಕುತಿಮ್ಮ ||**

ತನ್ನೊಳಗೆ=ತನ್ನ+ಒಳಗೆ, ತಾನಿರ್ವರಾದವೊಲು=ತಾನು+ಇರ್ವರಾದ+ವೊಲು,

ಚಿನ್ಮಾತ್ರ=ಚೈತನ್ಯವಾದ ಆತ್ಮ, ಜಾನಿಪ+ಧ್ಯಾನಿಪ, ಚತುರ=ಜಾಣ, ಧನ್ಯತೆ=ಸಾರ್ಥಕತೆ.

ತನ್ನ ಮನದೊಳಗೆ ನಡೆಯುವ ಇಂದ್ರಿಯ ಪ್ರಚೋದಿತ ಆಟವನ್ನು ತಾನೇ ನೋಡುತ್ತಾ, "ಮಾಡುವವನು ಬೇರೆ ಮತ್ತು ನೋಡುವವನು ಬೇರೆ" ಎಂಬಂತೆ ತನ್ನ ಕರ್ಮಗಳನ್ನು ತಾನೇ ಸಾಕ್ಷೀ ರೂಪದಲ್ಲಿ ನೋಡಲು ಮತ್ತು 'ತಾನು ಆತ್ಮ' ಎಂಬ ಅರಿವು ಮೂಡಿ ಆ ಅರಿವಿನಲ್ಲಿ ಧ್ಯಾನಸ್ಥನಾಗಬಲ್ಲವನೇ ಚತುರ ಮತ್ತು ಅವನ ಬದುಕೇ ಧನ್ಯ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ನಾವು ಅಂಗಡಿಗೆ ಹೋಗಿ ಬೇಕಾದ ಸಾಮಾನು ಸರಂಜಾಮುಗಳನ್ನೆಲ್ಲಾ ಖರೀದಿಸಿ, ಕೈಚೀಲದಲ್ಲಿ ಹಾಕಿಕೊಂಡಂತೆ, ಈ ಜಗತ್ತಿನ ಅಂಗಡಿಯಲ್ಲಿನ ಹಲವಾರು ಸರುಕುಗಳನ್ನು ಹೊರ ಇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಚರ್ಮಗಳ ಮೂಲಕ ಒಳ ಇಂದ್ರಿಯಗಳಾದ ಮನಸ್ಸು ಬುದ್ಧಿಗಳೆಂಬ ಚೀಲದೊಳಕ್ಕೆ ಹಾಕಿಕೊಳ್ಳುತ್ತೇವೆ ಅಲ್ಲವೇ? ಅಲ್ಲಿ ಒಳ ಪಾಕಶಾಲೆಯಲ್ಲಿ ನಮ್ಮ ಭಾವನೆಗಳ ಅಡುಗೆ ನಡೆಯುತ್ತದೆ. ಈ ಭಾವನೆಗಳ ಪಾಕಕ್ಕೆ ಹಲವಾರು ರುಚಿಗಳು, ಸಿಹಿ, ಕಹಿ, ಹುಳಿ, ಖಾರ, ಉಪ್ಪು ಇನ್ನೂ ಹಲವಾರು ಮಿಶ್ರಿತ ರುಚಿಗಳೂ ಸಹ.

ನಮ್ಮಲ್ಲಿರುವ ಚೇತನ(ಆತ್ಮ)ವೇ ಈ ಎಲ್ಲ ಪ್ರಕ್ರಿಯೆಗೆ ಕಾರಣವಾದರೂ, ಯಾವುದಕ್ಕೂ ಅಂಟದೆ, ಈ ಎಲ್ಲವನ್ನೂ ಒಂದು ಸಾಕ್ಷೀ ಭಾವದಿಂದ ನೋಡಬೇಕು ಎನ್ನುವುದೇ ಆಶಯ. 'ನಾನು' ಎಂದರೆ ಮನಸ್ಸು ಬುದ್ಧಿ ದೇಹಗಳಲ್ಲ, 'ನಾನು' ಎಂದರೆ ಕೇವಲ ಆತ್ಮ ಎನ್ನುವ ಭಾವ ಗಟ್ಟಿಯಾಗಬೇಕು. ಹಾಗಾದರೆ ಇಂದ್ರಿಯಗಳ ಮೂಲಕ, ತ್ರಿಗುಣಗಳಿಂದ ಪ್ರೇರಿತವಾದ ನಮ್ಮೊಳಗಿನ ಎಲ್ಲಾ 'ಕ್ರಿಯೆ ಪ್ರಕ್ರಿಯೆ' ಗಳನ್ನೂ ಆತ್ಮ ಒಂದು ಸಾಕ್ಷೀ ಭಾವದಿಂದ

ನೋಡಲಾಗುವುದು. ಆಗ ನಾನು ಬೇರೆ ಮತ್ತು ನನಗೆ ಪೂರಕವಾಗಿ ನಿಂತ ಇಂದ್ರಿಯಗಳೇ ಬೇರೆ ಎನ್ನುವ ಭಾವ ದೃಢವಾಗುತ್ತದೆ. ಹಾಗಾದರೆ ಮಾತ್ರ ಮಾನ್ಯ ಡಿವಿಜಿಯವರು "ತಾನಿರ್ವರಾದವೊಲು ಬಾಳ್ವ ಎಂದು  ಹೇಳುವಂತೆ, ನಾವು ನಮ್ಮಿಂದಲೇ ದೂರ ನಿಂತು ನಮ್ಮ ಯೋಚನೆಗಳನ್ನು, ಆಲೋಚನೆಗಳನ್ನು ಮತ್ತು ಇಂದ್ರಿಯ ಪ್ರಚೋದಿತ ಕ್ರಿಯೆಗಳನ್ನು ನೋಡಬಹುದು, ವಿಶ್ಲೇಷಿಸಬಹುದು, ತಿದ್ದಿಕೊಳ್ಳಬಹುದು, ಸುಧಾರಿಸಿಕೊಳ್ಳಬಹುದು. ಒಂದು ಇಂದ್ರಿಯಗಳ ಮೂಲಕ ಜಗತ್ತಿನೊಂದಿಗಿನ ಸಂಪರ್ಕದ 'ಲೌಕಿಕ ಬದುಕು ಮತ್ತೊಂದು ಚೇತನ 'ಬೃಹಚೇತನ' ದೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳುವ ಆಧ್ಯಾತ್ಮದ ಜೀವನ. ಈ ಎರಡೂ ಜೀವನವನ್ನು ಒಂದೇ ಬಾರಿಗೆ ನಾವು ಜೀವಿಸಲಾದರೆ ನಾವು ಧನ್ಯತೆಯನ್ನು ಕಂಡವರಂತಾಗುತ್ತೇವೆ.

ಬಂಧನಗಳಿಂದ ಮುಕ್ತವಾದರೆ ಮಾತ್ರ ನಿಜವಾದ ಮುಕ್ತಿ. ನಾವು ನಮ್ಮ ಇಚ್ಛೆಯಿಂದಲೇ ಸಿಕ್ಕಿಕೊಂಡಿರುವ ಬಂಧನಗಳಿಂದ ಹೊರಬರಬೇಕಾದರೆ, ನಾವು ಮೆತ್ತಿಕೊಂಡಿರುವ ಭಾವನೆಗಳ ಬಣ್ಣವನ್ನು ತೊಳೆದುಕೊಂಡು, ಅವುಗಳನ್ನು ತೊರೆದು ಶುದ್ಧರಾಗಿ ಹೊರಹೊಮ್ಮಬೇಕು. ಲೌಕಿಕ ಬದುಕು ಮತ್ತು ಅಧ್ಯಾತ್ಮದ ಸಾಧನೆ ಎರಡೂ ಸಮಾನಾಂತರವಾಗಿ ಹೊರಟು, ಒಂದನ್ನು ಬಿಟ್ಟು ಮತ್ತೊಂದನ್ನು ಮುಂದುವರೆಸಬೇಕು. ಲೌಕಿಕದಲ್ಲೇ ಮುನ್ನಡೆದರೆ ಬಂಧನ, ಅಧ್ಯಾತ್ಮದಲ್ಲಿ ಮುನ್ನಡೆದರೆ ಮುಕ್ತಿ'. ಆಯ್ಕೆ ನಮ್ಮದೇ ಅಲ್ಲವೇ?





**ಮುಕ್ತಕ – 74ಸಂ**

**ಜೀವನವದೊಂದು ಕಲೆ, ಕಲೆಯ ಕಲಿಸುವುದೆಂತು? |**

**ಸಾವಿರದ ನಿಯಮ ಯುಕ್ತಿಗಳನೊರೆದೊಡೆಯುಂ ||**

**ಆವುದೋ ಕುಶಲತೆಯೊಂದಿರದೆ ಜಯವಿರದು |**

**ಆ ವಿವರ ನಿನ್ನೊಳಗೆ - ಮಂಕುತಿಮ್ಮ ||**

ಜೀವನವದೊಂದು=ಜೀವನವು+ಅದೊಂದು, ಕಲಿಸುವುದೆಂತು=ಕಲಿಸುವುದು+ಎಂತು,

ಯುಕ್ತಿಗಳನೊರೆದೊಡೆಯುಂ=ಯುಕ್ತಿಗಳನ್+ಒರೆದೊಡೆಯುಂ,

ಕುಶಲತೆಯೊಂದಿರದೆ=ಕುಶಲತೆ+ಒಂದು+ಇರದೆ, ಜಯವಿರದು=ಜಯವು+ಇರದು, ನಿನ್ನೊಳಗೆ=ನಿನ್ನ+ಒಳಗೆ

ಒರೆದೊಡೆಯುಂ=ಎರೆದೊಡೆ, ಕಲಿಸಿದರೆ, ಕುಶಲತೆ=ಚತುರತೆ, ಕೌಶಲ್ಯ,

ಬದುಕುವುದು ಒಂದು ಕಲೆ. ಆದರೆ ಆ ಕಲೆಯನ್ನು ಕಲಿಸುವುದು ಹೇಗೆ? ಸಾವಿರಾರು ನಿಯಮಗಳು, ಸೂತ್ರಗಳು, ಯುಕ್ತಿಗಳನ್ನು ಪಾಠ ಹೇಳಿ ಕೊಟ್ಟಂತೆ ಕಲಿಸಿದರೂ, ಅಂತರಂಗದ ಕುಶಲತೆ ಇಲ್ಲದಿದ್ದರೆ ಬದುಕಿನಲ್ಲಿ ಜಯವಿರುವುದಿಲ್ಲ. ಆ ಕುಶಲತೆಯ ವಿವರವನ್ನು ನೀನು ನಿನ್ನೊಳಗೇ ಕಂಡುಕೊ ಎಂದು ಬದುಕಿನ ಜಯಕ್ಕೆ ಒಂದು ಮಾರ್ಗ ತೋರಿದ್ದಾರೆ ಈ ಮುಕ್ತಕದಲ್ಲಿ.

ಹುಟ್ಟಿದ ಎಲ್ಲರಿಗೂ ಒಂದು ಬದುಕುಂಟು. ಆದರೆ ಸುಮ್ಮನೆ ಬದುಕುವುದಕ್ಕೂ ಸಾರ್ಥಕತೆಯಿಂದ ಬದುಕುವುದಕ್ಕೂ ವ್ಯತ್ಯಾಸವಿದೆ. ಸಾರ್ಥಕತೆಯಿಂದ ಬದುಕುವುದು ಒಂದು ಕಲೆ, ಅದಕ್ಕೆ ಕುಶಲತೆ ಬೇಕು. ಆದರೆ ಸಾರ್ಥಕತೆ ಎಂದರೆ ಏನು? ಎಂದರೆ, ಸಕಲ ಪ್ರಾಣಿಗಳಿಗೂ 'ಆನಂದ' ವೇ ಬಾಳಿನ ಗುರಿ. ಹಾಗಾಗಿ, ನಾವು ಆನಂದ ಪಡುವುದೋ, ನಾವು ಪಡೆದ ಆನಂದವನ್ನು ಅನ್ಯರಿಗೆ ಹಂಚುವುದೋ, ಅನ್ಯರ ಆನಂದಕ್ಕೆ ಕಾರಣರಾಗುವುದೋ ಅಥವಾ ಅನ್ಯರ ಆನಂದಕ್ಕೆ ಧಕ್ಕೆ' ಯಾಗದಂತೆ ಬದುಕಿದರೆ, ಅಂತಹ ಬದುಕನ್ನು ಸಾರ್ಥಕ ಬದುಕೆನ್ನಬಹುದು. ಹೇಗೆ ಜೀವಿಸಬೇಕು ಎಂದು ನಮಗೆ ನಾನಾ ವಿಧಾನಗಳನ್ನು ಬೋಧಿಸುವ, ಹಾದಿಗಳನ್ನು ತೋರುವ, ವೇದ, ಉಪನಿಷತ್ತು, ಪುರಾಣ, ನೀತಿ ಕಥೆಗಳ ಸಾಹಿತ್ಯ ನಮ್ಮಲ್ಲಿ ಹೇರಳವಾಗಿ ಲಭ್ಯವಿದೆ. ಇವೆಲ್ಲಾ ನಮಗೆ ಹೊರಗಿನಿಂದ ಸಿಗುವ ಪುಸ್ತಕಗಳ ವಿಚಾರಗಳು, ಮನಸ್ಸು ದೇಹ ಬುದ್ಧಿಗೆ ಸಂಬಂಧಪಟ್ಟ ವಿಚಾರಗಳು.

ಹೊರಗಿನಿಂದ ಎಷ್ಟೇ ವಿಚಾರಗಳು ಬಂದರೂ, ಅದರ ಸಾರ ಅಂತರಂಗಕ್ಕೆ 'ಸತ್ವ'ವಾಗಿ ಇಳಿಯದೇ ಇದ್ದರೆ, ಎಷ್ಟು ಓದಿದರೂ, ಎಷ್ಟು ಕೇಳಿದರೂ ಎಲ್ಲವೂ ವ್ಯರ್ಥ. ವಿಚಾರವು ಹರಿದು ಬಂದು ಅದರ ಸಾರ ಸತ್ವವಾಗಿ ನಮ್ಮೊಳಗೆ ಇಳಿಯಬೇಕಾದರೆ ನಮ್ಮೊಳಗೆ ವಿಚಾರಗಳ ಮಂಥನವಾಗಬೇಕು. ಅದರಿಂದ ಹೊರಹೊಮ್ಮುವ 'ಶುದ್ಧಸತ್ವ'ವನ್ನು ನಮ್ಮ ಸ್ವಭಾವವನ್ನಾಗಿಸಿಕೊಳ್ಳಬೇಕು. ಅಂತಹ ಶುದ್ಧ ಸತ್ವ ನಮ್ಮ ಅಂತರಂಗದಲ್ಲಿ ಆತ್ಮದೊಡನೆ

ಅನುಸಂಧಾನಗೊಂಡಾಗ ನಮಗೆ ಬದುಕಿನ ಪರಮ ಗುರಿಯಾದ ಆನಂದವನ್ನು ಸಾಧಿಸುವ, ನಮ್ಮದಾಗಿಸಿಕೊಳ್ಳುವ ಮತ್ತು ಅನ್ಯರಿಗೆ ಹಂಚುವ ಕುಶಲತೆಯನ್ನು ಕಲಿಸಿಕೊಡುತ್ತದೆ. ಅಂತಹ ಕುಶಲತೆ ಸಂಪೂರ್ಣವಾಗಿ ನಮ್ಮ 'ಸ್ವಭಾವ' ವಾಗಿಬಿಟ್ಟರೆ, ನಾವು ಪುರುಷೋತ್ತಮರಾಗಿಬಿಡುತ್ತೇವೆ.

ಅಂತಃಸತ್ವವನ್ನು ಬೆಳೆಸಿಕೊಳ್ಳಲು ಸಾಧನೆ ಬೇಕು. ಆ ಸಾಧನೆ ಹಂತಹಂತವಾಗಿ ಆಗಬೇಕು. ತೈತ್ತರೀಯೋಪನಿಷತ್ತಿನ ಮೃಗುವಲ್ಲಿಯಲ್ಲಿ ಭೃಗುಮಹರ್ಷಿಯ ಮಗ ವಾರುಣಿ "ಆನಂದೋ ಬ್ರಹ್ಮತಿವ್ಯಜಾನಾತ್" ಎಂದು ಅರಿಯುವುದಕ್ಕೆ ಮುನ್ನ, ತಪಸ್ಸಿನ ಮಾರ್ಗದಿಂದ, 'ಅನ್ನ, ಪ್ರಾಣ, ಮನಸ್ಸು ಮತ್ತು ವಿಜ್ಞಾನ' ಗಳನ್ನೆಲ್ಲ ಅನುಸಂಧಾನಮಾಡಿ, ಕಟ್ಟ ಕಡೆಗೆ 'ಆನಂದವೇ ಬ್ರಹ್ಮವೆಂದರಿತೆ ಎನ್ನುತ್ತಾನೆ. ಹಾಗಾಗಿ ಆನಂದದಿಂದ ಬದುಕುವುದು ಎಂದರೆ ಪರಬ್ರಹ್ಮನಲ್ಲಿ ನಿರತನಾಗಿರುವುದು ಎಂದು ಅರ್ಥ. 'ಆನಂದ' ದಿಂದ ಬದುಕುವುದೇ ಜೀವನದ ಕಲೆ. ಅಂತಹ ಕುಶಲತೆಯನ್ನು ನಾವು ಅಂತರಂಗದ ಮಂಥನದಿಂದ ನಮ್ಮದಾಗಿಸಿಕೊಂಡು ಬದುಕಿದರೆ ಅದೇ ಸಾರ್ಥಕ ಬದುಕು.

**ಮುಕ್ತಕ – 741**

**ತಲೆ ಕೊಡವ ತಳೆದಿರಲು, ಕೈ ಕತ್ತಿ ಪಿಡಿದಿರಲು |**

**ಬಳುಕು ಹಗ್ಗದ ಮೇಲೆ ತಾನಡಿಯನಿಡುತ ||**

**ಕೆಲ ಬಲಕೆ ಬೀಳದೆ ಮುನ್ನಡೆವ ಡೊಂಬನುಪಾಯ |**

**ಕಲೆಯೇ ಜೀವನಯೋಗ - ಮಂಕುತಿಮ್ಮ ||**

ತಳೆದಿರಲು= ತಳೆದು+ಇರಲು, ಪಿಡಿದಿರಲು=ಪಿಡಿದು+ಇರಲು, ತಾನಡಿಯನಿಡುತ=ತಾನು+ಅಡಿ+ಇಡುತ,

ಡೊಂಬನುಪಾಯ= ಡೊಂಬನ+ಉಪಾಯ

ತಳೆದು=ಹೊತ್ತು, ಪಿಡಿದು=ಹಿಡಿದು, ಡೊಂಬನ=ದೊಂಬರಾಟದವನ

ತಲೆಯಮೇಲೆ ಕೊಡವನ್ನು ಹೊತ್ತು, ಕೈಯಲ್ಲಿ ಕತ್ತಿಯನ್ನು ಹಿಡಿದು, ಓಲಾಡುವ ಹಗ್ಗದಮೇಲೆ ತಾನು ಅಡಿಯನ್ನು ಇಡುತ್ತಾ, ಎಡಬಲಗಳಿಗೆ ಬಾಗುತ್ತಾ ತೂಗುತ್ತಾ ಕೆಳಗೆ ಬೀಳದೆ, ದೊಂಬರಾಟದವ ತನ್ನ ಆಟವನ್ನು ತೋರುವ ಕಲೆಯಂತೆಯೇ, ಜೀವನದ ಕಲೆಯೂ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವನವೇ ಒಂದು ದೊಂಬರಾಟ, ಪ್ರತಿಯೊಬ್ಬರ ಜೀವನವೂ 'ಕತ್ತಿಯಮೇಲಿನ ಸಾಮು' ಅಲ್ಲವೇ? ದೊಂಬರಾಟದವ ನೋಡುಗರ ಕುತೂಹಲವನ್ನು ಕೆರಳಿಸಲು ತಲೆಯಮೇಲೆ ಒಂದು ಕೊಡವನ್ನು ಹೊತ್ತಿರುತ್ತಾನೆ. ನಾವು ಬದುಕಿನಲ್ಲಿ ನಮ್ಮದೇ ಆಯ್ಕೆಯಿಂದ ಅಥವಾ ಪರಿಸ್ಥಿತಿಗಳ ಒತ್ತಡದಿಂದ ನಮ್ಮ ನಮ್ಮ ಭಾರವನ್ನು ಹೊತ್ತಿರುತ್ತೇವೆ. ಇನ್ನು ಆ ದೊಂಬರಾಟದವ ಕೈಯಲ್ಲಿ ಒಂದು ಕತ್ತಿಯನ್ನೋ ಅಥವಾ ಎರಡೂ





ಬದಿಗೆ ಸಮಾನ ಅಳತೆಯಿರುವ ಒಂದು ಬಿದುರಿನ ಕೋಲನ್ನೋ, ತನ್ನ ನಡಿಗೆಯ ಸಮತೋಲನವನ್ನು ಕಾಯ್ದುಕೊಳ್ಳಲು ಹಿಡಿದಿರುತ್ತಾನೆ. ನಾವೂ ಸಹ ನಮ್ಮ ಜೀವನದ ನಡಿಗೆಯ ಸಮತೋಲನವನ್ನು ಕಾಪಾಡಿಕೊಳ್ಳಲು, ನಾವೇ ಸೃಷ್ಟಿಸಿಕೊಂಡ ಶಿಸ್ತು, ನೀತಿ, ನಿಯಮಗಳೆಂಬ ಆಯುಧಗಳನ್ನು ಹಿಡಿದು ನಡೆಯುತ್ತೇವೆ, ಅಲ್ಲವೇ?

ಪರಿಸ್ಥಿತಿಗನುಗುಣವಾಗಿ ಬದುಕಿನಲ್ಲಿ ನಮ್ಮ ನಡೆಯನ್ನು ಬದಲಾಯಿಸಿಕೊಳ್ಳುವ, ವೇಗವನ್ನು ಹೆಚ್ಚಿಸಿಕೊಳ್ಳುವ ಅಥವಾ ಕಡಿಮೆಯಾಗಿಸುವ, ನಿಲ್ಲಿಸುವ ಅಥವಾ ಮುನ್ನಡೆಯುವ ಕಲೆ ಈ ದೊಂಬರಾಟದವನ ಕಲೆಗಿಂತ ಭಿನ್ನವಾದುದೇನಲ್ಲ . ಆದರೆ ಒಂದು ವ್ಯತ್ಯಾಸವೇನೆಂದರೆ ದೊಂಬರಾಟದವನು ತನ್ನ ಕಲೆಯನ್ನು ಕೇವಲ ತನ್ನ ಹೊಟ್ಟೆಪಾಡಿಗಾಗಿ ಉಪಯೋಗಿಸುತ್ತಾನೆ, ನಾವು ಈ ಕಲೆಯನ್ನು ಬಹುತೇಕ, ನಮ್ಮ ಆಧಿಕ್ಯವನ್ನು ಸ್ಥಾಪಿಸಲು, ಮತ್ತೊಬ್ಬರನ್ನು ಸೋಲಿಸಲು, ನಮ್ಮ ಸ್ವಾರ್ಥವನ್ನು ಸಾಧಿಸಲು, ಅಪಾಯದಿಂದ ನುಣಿಚಿಕೊಳ್ಳಲು, ಮತ್ತೊಬ್ಬರಿಗೆ ಅಪಾಯವನ್ನು ತಂದಿಡಲು, ಅಥವಾ ಅನ್ಯರನ್ನು ಅಪಾಯದಿಂದ ಪಾರುಮಾಡಲು, ನಾವೇ ಅಪಾಯದಿಂದ ತಪ್ಪಿಸಿಕೊಳ್ಳಲು, ಪ್ರೀತಿ, ಪ್ರೇಮ, ಕರುಣೆ, ಅನುಕಂಪ ಮುಂತಾದವುಗಳನ್ನು ವ್ಯಕ್ತಪಡಿಸಲು/ಪಡೆಯಲು, ಹೀಗೆ ಹತ್ತು

ಹಲವಾರು ಕಾರಣಗಳಿಗಾಗಿ ಉಪಯೋಗಿಸುತ್ತೇವೆ. ಈ ರೀತಿಯ ಕಲೆಯಿದ್ದರೆ ಮಾತ್ರ ನಾವು ಸಮರ್ಪಕವಾಗಿ ಬದುಕನ್ನು ದೂಡಲು ಸಾಧ್ಯ. ಹಾಗಾಗಿ ನಾವು ಈ ಯುಕ್ತಿಗಳನ್ನು ಕರಗತ ಮಾಡಿಕೊಳ್ಳಲೇ ಬೇಕು.

ಹೇಗೆ ದೊಂಬರಾಟದವನು ಚಿಕ್ಕಂದಿನಿಂದ, ಬಹಳ ವರ್ಷಗಳ ನಿರಂತರ ಅಭ್ಯಾಸದಿಂದ, ಕೆಳಗೆ ಬಿದ್ದು ಮೈ ಕೈ ಗಾಯಮಾಡಿಕೊಂಡು ಕಲಿಯುತ್ತಾನೋ, ನಾವೂ ಸಹ ಈ ಬದುಕುವ ಕಲೆಯನ್ನು ಸಮರ್ಪಕವಾಗಿ ಕಲಿಯಲು ಅಭ್ಯಾಸಮಾಡಬೇಕು, ಬೀಳಬೇಕು, ಏಳಬೇಕು, ಪೆಟ್ಟು ತಿನ್ನ ಬೇಕು ಮತ್ತೆ ಶುದ್ಧಮನಸ್ಸಿನಿಂದ ಮತ್ತೆ ಪ್ರಯತ್ನ ಮಾಡಬೇಕು, ಆಗ ನಮಗೆ ಅದು ಸಿದ್ಧಿಸುತ್ತದೆ. ಇದಕ್ಕೆ ಅಡ್ಡದಾರಿಗಳಿಲ್ಲ (no short cuts) ಅನ್ಯರನ್ನು ನೋಡಿ, ಅವರ ಅನುಭವಗಳನ್ನು ನೋಡಿ, ನಾವು ಹೇಗಿರಬೇಕು, ಹೇಗಿರಬಾರದು, ನಮ್ಮ ನಡಿಗೆಯ ವೇಗ, ದಿಕ್ಕು ರೀತಿ ಎಲ್ಲಾ ಹೇಗಿರಬೇಕು ಎಂದು ಕಲಿಯಬೇಕು. ಅನ್ಯರಿಂದ ಕಲಿತಿದ್ದನ್ನು ನಮ್ಮ ಪರಿಸ್ಥಿತಿಗಳಲ್ಲಿ ನಮ್ಮದೇ ರೀತಿಯಲ್ಲಿ ಪ್ರಯೋಗಿಸಿ ನಡೆಯಬೇಕು. ಇಷ್ಟೆಲ್ಲಾ ಯಾಕೆ ನಮ್ಮ ಸುತ್ತುಮುತ್ತಲಿನ ಒಂದು ಬಡ ಕುಟುಂಬದ 'ಸದ್ ಗೃಹಿಣಿ', ಎಲ್ಲಾ ರೀತಿಯ ಕೊರತೆಗಳ ನಡುವೆಯೂ ಹೇಗೆ ತನ್ನ ಮನೆಯನ್ನು ನಿಭಾಯಿಸುತ್ತಾಳೆ ಎಂದು ನೋಡಿದರೆ, ನೋಡಿ ಕಲಿತರೆ, ಬದುಕುವ ಕಲೆಯನ್ನು ನಮ್ಮದಾಗಿಸಿಕೊಳ್ಳಬಹುದು.

| |
|---|
| ೬ಸಂ |

| | |
|---|---|
| ಕಗ್ಗರಸಧಾರೆ | ಜೀವನ ಕಲೆ 739 – 743 |

**ಮುಕ್ತಕ - 742**

**ಬಹುವಿದ್ಯೆ ಬಹುತರ್ಕ ಬಹುದೇಮ ಬೇಕಿಲ್ಲ |**

**ವಹಿಸೆ ಜೀವನಭರವನದು ಹಗುರೆನಿಪವೊಲ್ ||**

**ಸಹನೆ ಸಮರಸಭಾವವಂತಃಪರೀಕ್ಷೆಗಳು |**

**ವಿಹಿತವಾತ್ಮದ ಹಿತಕೆ - ಮಂಕುತಿಮ್ಮ ||**

ಜೀವನಭರವನದು=ಜೀವನ+ಭಾರವನ್ನು+ಅದು, ಹಗುರೆನಿಪವೊಲ್=ಹಗುರ+ಎನಿಪ+ವೊಲ್,

ಸಮರಸಭಾವವಂತಃಪರೀಕ್ಷೆಗಳು= ಸಮರಸಭಾವ+ಅಂತಃಪರೀಕ್ಷೆಗಳು, ವಿಹಿತವಾತ್ಮದ=ವಿಹಿತವು+ಆತ್ಮದ ನೇಮ=ವ್ರತನಿಯಮಗಳು, ವಹಿಸೆ=ಹೊರಲು, ಭರವ=ಭಾರವ, ಹಗುರೆನಿಪವೊಲ್=ಹಗುರವೆನಿಸುವಂತೆ, ವಿಹಿತ=ಸೂಕ್ತ

ಬದುಕಿನ ಭಾರ 'ಹಗುರ' ವೆಂಬಂತೆ ಹೊರಲು, ಬಹು ವಿದ್ಯೆಗಳ ಪಾಂಡಿತ್ಯ, ಅತಿಯಾದ ತರ್ಕ ಮತ್ತು ಕಠೋರ ವ್ರತ ನಿಯಮಗಳ ಪಾಲನೆ ಅನಗತ್ಯ. ತಾಳ್ಮೆ, ಸಮಭಾವ ಮತ್ತು ಅಂತರಂಗದಲ್ಲಿ ವಿಚಾರ ಮಂಥನಗಳಾದರೆ ಸಾಕು, ಆತ್ಮಕ್ಕೆ ಹಿತವಾಗುವುದಕ್ಕೆ ಎಂದು ಸರಳವಾಗಿ, ಆನಂದವಾಗಿ ಬದುಕುವ ದಾರಿಯ ಸೂತ್ರವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಬದುಕಿಗೆ ವಿದ್ಯೆ, ತರ್ಕ ಮತ್ತು ನಿಯಮ ಎಲ್ಲವೂ ಬೇಕು. ಆದರೆ ಅದು 'ಬಹು'ವಾಗಬಾರದು. ಏಕೆಂದರೆ ಯಾವುದೇ 'ಬಹು' ವಾದರೆ ಅದರ ಗುಂಗಿನಲ್ಲೇ ಸುತ್ತುತ್ತಾ ಇರುವಾಗ ಸೂಕ್ತ ಬದುಕ ನಡೆಸಲಾಗದು, ಅಲ್ಲವೇ? ಅವುಗಳ ಭಾರವೇ ಅಧಿಕವಾಗಿ, ಹಗುರವೆನಿಸಬಹುದಾದ ಜೀವನವೂ ಭಾರವೆನಿಸತೊಡಗುತ್ತದೆ. ಬದುಕು ಹಗುರಾಗಬೇಕಾದರೆ, ವಿದ್ಯೆ, ತರ್ಕ ಮತ್ತು ನಿಯಮಗಳು 'ಬಹು'ವಾಗಬಾರದು. ಪಾಂಡಿತ್ಯದಿಂದ ಬದುಕುವ ವಿಧಾನದಲ್ಲಿ ಕುಶಲತೆಯನ್ನು ಗ್ರಹಿಸಲಾಗದು. ಅದಕ್ಕೆ ಅಂತರಂಗದ ಅನುಭವ ಬೇಕು. ಓದಿ ಓದಿ ಮರುಳಾದ ಕೂಚಂಭಟ್ಟ ಓದಲಿಲ್ಲ ನಮ್ಮ ರೈತ ಅನ್ನ ಕೊಟ್ಟ' ಎನ್ನುವ ಮಾತನ್ನು ನಾವು ಕೇಳಿದ್ದೇವಲ್ಲವೇ, ಹಾಗೆ ಪಾಂಡಿತ್ಯ ಬದುಕುವ ಕಲೆಯನ್ನು ಕಲಿಸುವುದಿಲ್ಲ. ಅದೇ ರೀತಿ, ಅತಿಯಾದ ತರ್ಕವೂ ಸಹ. ತರ್ಕ 'ಬುದ್ಧಿ'ಯ ಕೆಲಸ, ತರ್ಕ ಬುದ್ದಿಯ ನೆಲೆಗಟ್ಟಲ್ಲೇ ನಿಲ್ಲುತ್ತದೆ, ಜ್ಞಾನದ ಹಂತಕ್ಕೆ ತಲುಪಲು ಸೋಲುತ್ತದೆ. ಇದು ವ್ರತ ನೇಮಗಳಿಗೂ ಅನ್ವಯವಾಗುತ್ತದೆ.

ವಿದ್ಯೆ, ತರ್ಕ ಮತ್ತು ನಿಯಮ ಎಲ್ಲವೂ ಹಿತವಾಗಿ ಇದ್ದು ಅದಕ್ಕೆ ಕಳಶವಿಟ್ಟಂತೆ 'ತಾಳ್ಮೆ' ಇರಬೇಕು. 'ಸಹನೆ ವಜ್ರದ ಕವಚ' ಎಂದು ಮಾನ್ಯ ಗುಂಡಪ್ಪನವರೇ ಹೇಳಿದ್ದಾರೆ. ಸಹನೆಯಿಂದ ಮಾತ್ರ ಬದುಕಿನ ಸುಖ ದುಃಖಗಳನ್ನು ತಡೆದುಕೊಂಡು ಅನುಭವಿಸಲು ಸಾಧ್ಯ. ಸುಖ ಬಂದಾಗ ಉಬ್ಬದೆ ಕಷ್ಟ ಬಂದಾಗ ಕುಗ್ಗದೆ, ಕಷ್ಟ ಸುಖಗಳನ್ನು ಸಮಭಾವದಿಂದ ಅನುಭವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಎಲ್ಲವನ್ನೂ ಸಮನಾಗಿ ಕಾಣುವ ಸಮರಸ ಭಾವವಿದ್ದರೆ ಎಂತಹ ಸನ್ನಿವೇಶದಲ್ಲೂ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವ

ಸಾಧ್ಯತೆ ಇದೆ. ಮಾನಸಿಕ ಸಮತೋಲನವಿದ್ದರೆ, ಅಂತಃಪರೀಕ್ಷೆ ಸಾಧ್ಯ. ಕಂಡ, ಕೇಳಿದ ಅನುಭವಕ್ಕೆ ಬಂದ, ವಿಷಯಗಳ ಮಂಥನ ಅಂತರಂಗದಲ್ಲಾದರೆ ಮಾತ್ರ ಸತ್ಯ ದರ್ಶನವಾಗಿ, ಸತ್ವವನ್ನು ತುಂಬಿಕೊಂಡು ಆತ್ಮ 'ಆನಂದ' ದ ಸ್ಥಿತಿಯನ್ನು ತಲುಪಲು ಸಾಧ್ಯ. ಆನಂದವೇ ಆತ್ಮದ ಗುಣ ಮತ್ತು ಸ್ವಭಾವ. ಅದೇ ಪ್ರತೀ ಪ್ರಾಣಿಯ ಬದುಕಿನ ಪರಮೋಚ್ಚ ಗುರಿ.

ನಮ್ಮ ಮನಸ್ಸು, ಬುದ್ಧಿ, ದೇಹಗಳು, ಮೇಲೆ ಉಲ್ಲೇಖಿಸಿದ ವಿದ್ಯೆ, ತರ್ಕ ಮತ್ತು ನಿಯಮಗಳ ಸಹಾಯದಿಂದ, ಭಾವ ಸಾಮರಸ್ಯವನ್ನು ಪಡೆದುಕೊಂಡು 'ಆತ್ಮ'ಕ್ಕೆ ಆನಂದದ ನೆಲೆಗಟ್ಟನ್ನು ತಲುಪಲು ಒದಗಬೇಕು. ಹಾಗಾದರೆ "ವಿಹಿತವಾತ್ಮದ ಹಿತಕೆ" ಎಂದು ಈ ಮುಕ್ತಕದಲ್ಲಿ ಡಿವಿಜಿಯವರು ಉಲ್ಲೇಖಿಸಿದಂತೆ ಆತ್ಮ ತನ್ನ ಸ್ವಭಾವವನ್ನು, ಸ್ವಗುಣವನ್ನು ಪಡೆದುಕೊಳ್ಳುತ್ತದೆ. ಅದೇ ಸಾರ್ಥಕ ಬದುಕನ್ನು ಮತ್ತು ಬದುಕುವ ಕುಶಲತೆಯನ್ನು ಪಡೆಯುವ ಮಾರ್ಗ. ಪ್ರತಿಯೊಬ್ಬರೂ ಅಂಥಹ ಸ್ಥಿತಿ ತಲುಪಲು ಪ್ರಯತ್ನಿಸಿದರೆ ಬದುಕುವ ಕಲೆ ಸಿದ್ಧಿಸಿದಂತೆ ಅಲ್ಲವೇ?

ಮುಕ್ತಕ - 743

ಎಲ್ಲ ನಾಶನವೆಲ್ಲಕಾಲವಶವಾದೊಡಂ ।

ಕ್ಷುಲ್ಲಕನು ನರನಾದೊಡಂ ಕಾಲನಿದಿರೊಳ್ ॥

ಉಲ್ಲಾಸವೇ ಧರ್ಮ ; ಕೊಲ್ಲಿಪನೆ ಬೆಳೆಯಿಪನು ।

ಹುಲ್ಲೊಣಗಿ ಬೆಳೆವುದಲ?- ಮಂಕುತಿಮ್ಮ ॥

ನಾಶನವೆಲ್ಲಕಾಲವಶವಾದೊಡಂ=ನಾಶನವು+ಎಲ್ಲ+ಕಾಲವಶವು+ಆದೊಡಂ,

ನರನಾದೊಡಂ=ನರನು+ಆದೊಡಂ, ಕಾಲನಿದಿರೊಳ್ =ಕಾಲನ+ಇದಿರೊಳ್, ಹುಲ್ಲೊಣಗಿ=ಹುಲ್ಲು+ಒಣಗಿ,

ಬೆಳೆವುದಲ=ಬೆಳೆವುದು+ಅಲ

ಕ್ಷುಲ್ಲಕನು=ಅಲ್ಪ, ಕಿಂಚಿನ್ಮಾತ್ರನು, ಉಲ್ಲಾಸವೇ=ಆನಂದವೇ, ಕೊಲ್ಲಿಪನು=ಅಂತಕನು,

ಬೆಳೆಯಿಪನು=ಬೆಳೆಸುವನು,

ಭೂಮಿಯ ಮೇಲಿನ ಹುಲ್ಲು, ಪ್ರಕೃತಿಯ ಕಾರಣದಿಂದ ಚಿಗುರಿ, ಪ್ರಕೃತಿಯ ಕಾರಣದಿಂದಲೇ ಒಣಗಿ ನಾಶವಾದರೂ ಮತ್ತೆ ಪ್ರಕೃತಿಯ ಕಾರಣದಿಂದಲೇ ಚಿಗುರುವಂತೆ ಜಗತ್ತಿನ ಎಲ್ಲವೂ ಕಾಲ ವಶವಾಗಿ ನಾಶವಾಗುತ್ತದೆಯೆಂದಾದರೆ, ನಾಶಮಾಡುವವನು ಮತ್ತು ಸೃಷ್ಟಿಕರ್ತನೂ ಒಬ್ಬನೇ ಎಂದಾದರೆ, ಪ್ರಕೃತಿ ಮತ್ತು ಕಾಲನೆದುರು ಬಹಳ ಬಲಹೀನರಾಗಿ, ಅಲ್ಪರಾಗಿ ಕಾಣುವ ಮನುಷ್ಯರು, ಬದುಕುವಾಗ 'ಆನಂದ' ದಿಂದ ಇರುವುದೇ ಧರ್ಮ.ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೇ, ಯಸ್ಮಿನ ಪಳಯಂ ಯಾಂತಿ ಪುನರೇವ ಯುಗಕ್ಷಯೇ' ಎನ್ನುತ್ತಾರೆ ಭೀಷ್ಮ ಪಿತಾಮಹ, ಧರ್ಮರಾಯನ ಪ್ರಶ್ನೆಗಳಿಗುತ್ತರಿಸುತ್ತಾ, ಮಹಾಭಾರತದಲ್ಲಿ.





ಅಂದರೆ ಜಗತ್ತಿನ ಎಲ್ಲವೂ ಕಾಲಾನುಕಾಲಕ್ಕೆ ನಾಶವಾಗುತ್ತದೆ ಮತ್ತು ಮತ್ತೆ ಹೊಸ ರೂಪವನ್ನು ತಾಳಿ ಸೃಷ್ಟಿಯಾಗುತ್ತದೆ ಎಂದರ್ಥ. ಹಳತು ನಾಶವಾಗಿ, ಹೊಸತು ಮೊಳೆಯುವ ಕ್ರಿಯೆ, ಈ ಜಗತ್ತು ಸೃಷ್ಟಿಯಾದಂದಿನಿಂದಲೇ ನಡೆಯುತ್ತಿದೆ. ಅದನ್ನು ನಡೆಸುವುದು ಆ ಪರಮ ಚೈತನ್ಯ, ಅದನ್ನೇ "ಕೊಲ್ಲಿಪನೆ ಬೆಳೆಯಿಸನು" ಎಂದು ಹೇಳಿ ಸೃಷ್ಟಿಸಿದವನೇ ಕಾಲಕ್ರಮದಿಂದ ನಾಶಪಡಿಸಿ ಮತ್ತೆ ಸೃಷ್ಟಿಸುತ್ತಾನೆ ಎಂದಿದ್ದಾರೆ ಗುಂಡಪ್ಪನವರು.

ಸೃಷ್ಟಿಯಾದದ್ದೆಲ್ಲವೂ ನಾಶವಾಗಲೇ ಬೇಕು. ಒಂದೊಂದಕ್ಕೆ ಒಂದೊಂದು ಕಾಲಮಿತಿ. 'ಸೊಳ್ಳೆಗೆ ಮೂರು ದಿನ, ಆಮೆಗೆ ಮುನ್ನೂರೈವತ್ತು ವರ್ಷ' ಅಂತ್ಯವಂತೂ ಖಂಡಿತ. ಅನ್ಯ ಪರ್ಯಾಯವೇ ಇಲ್ಲ. ಮನುಷ್ಯರಾದ ನಾವೂ ಇದಕ್ಕೆ

ಹೊರತಲ್ಲ. ಇದು ಎಲ್ಲರೂ ಅರಿತಿರುವ ಆದರೂ ಎಲ್ಲರ 'ವಿಸ್ಮೃತಿ' ಯಲ್ಲಿರುವ ಪರಮ ಸತ್ಯ. `ಜಾತಸ್ಯ ಮರಣಂ ಧ್ರುವಂ, ಧ್ರುವಂ ಜನ್ಮಂ ಮೃತಸ್ಯ ಚ, ತಸ್ಮಾತ್ ಪರಿಹಾರಾರ್ಥ್ಯೆಹಿ ನತ್ವಂ ಶೋಚಿತುಮರ್ಹಸಿ' ಎನ್ನುತ್ತಾನೆ ಭಗವಾನ್ ಶ್ರೀ ಕೃಷ್ಣ ಗೀತೆಯಲ್ಲಿ. ಅನಿವಾರ್ಯವಾದ ಜನನ ಮರಣಗಳ ಕುರಿತು 'ಗೋಳುವಂತಿಲ್ಲ. ಆದುದರಿಂದ ಮಾನ್ಯ ಡಿವಿಜಿಯವರು 'ಉಲ್ಲಾಸವೇ ಧರ್ಮ' ಎಂದು ಹೇಳುವಂತೆ ನಾವು ಆನಂದದಿಂದ ಇರುವುದೇ ನಮ್ಮ ಧರ್ಮವಾಗಬೇಕು.

ಸಕಲ ಜೀವರಾಶಿಗಳಿಗೂ ಆನಂದದಿಂದಿರಬೇಕೆಂದೇ ಆಸೆ. ಆದರೆ ನಿಜವಾದ ಅನಂದವೇನೆಂದು ಅರಿತು ಆನಂದಪಟ್ಟರೆ, ಅದು ಆತ್ಮೋನ್ನತಿಗೆ ಕಾರಣವಾಗುತ್ತದೆ. ಆದರೆ ಅದನ್ನು ಅರಿಯುವ ಬಗೆ ಹೇಗೆ? ಇದೊಂದು ಬೃಹತ್ ಪ್ರಶ್ನೆ. ಒಬ್ಬೊಬ್ಬರಿಗೆ ಒಂದೊಂದು 'ವಸ್ತು, ವಿಷಯ, ವ್ಯಕ್ತಿ ಆನಂದಕ್ಕೆ ಕಾರಣವಾಗಬಹುದು. ಯಾರಿಗೆ ಯಾವ ಆನಂದ ಬೇಕೋ ಅದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಉಂಟು. ನಿಜವಾದ ಆನಂದವನ್ನು ಅರಿತು ಇದ್ದಷ್ಟು ದಿವಸ ತಾನು ಅನಂದಪಡುತ್ತಾ, ತಾ ಪಟ್ಟ ಆನಂದವನ್ನು ಅನ್ಯರಿಗೂ ಹಂಚುತ್ತಾ, ಅನ್ಯರು ಪಡುವ ಆನಂದವನ್ನು ತನ್ನ ಆನಂದವೆಂದು ಬಗೆದು ಸಂತೋಷದಿಂದಿದ್ದರೆ ಈ ಮುಕ್ತಕದ ಆಶಯವನ್ನು ನೆರವೇರಿಸಿದಂತಾಗುತ್ತದೆ.





**ಮುಕ್ತಕ 744**

**ಅಣಗಿದ್ದು ಬೇಸಗೆಯೊಳ್. ಎದ್ದು ಮಳೆ ಕರೆದಂದು ।**

**ಗುಣಿಯೆನದೆ ತಿಟ್ಟೆನದೆ ಸಿಕ್ಕಿದೆಡೆ ಬೆಳದು ॥**

**ಉಣಿಸನೀವನು ದನಕೆ, ತಣಿವನೀವನು ಜಗಕೆ ।**

**ಗುಣಶಾಲಿ ತೃಣಸಾಧು - ಮಂಕುತಿಮ್ಮ ॥**

ಅಣಗಿದ್ದು=ಅಣಗಿ+ಇದ್ದು, ಕರೆದಂದು=ಕರೆದ+ಅಂದು, ಗುಣಿಯೆನದೆ=ಗುಣಿ+ಎನದೆ, ತಿಟ್ಟೆನದೆ=ತಿಟ್ಟು+ಎನದೆ, ಸಿಕ್ಕಿದೆಡೆ=ಸಿಕ್ಕಿದ+ಎಡೆ, ಉಣಿಸನೀವನು=ಉಣಿಸನು+ಈವನು, ತಣಿವನೀವನು=ತಣಿವನು+ಈವನು

ಗುಣಿ=ಹಳ್ಳ, ತಿಟ್ಟು=ಗುಡ್ಡ, ಉಣಿಸನು=ಆಹಾರವನ್ನು, ತಣಿವನು=ತಂಪನು, ಆಹ್ಲಾದವನು. ತೃಣ=ಹುಲ್ಲು

ಬೇಸಿಗೆಯಲ್ಲಿ ಒಣಗಿ ಮತ್ತೆ ಮಳೆ ಬಂದಾಗ ಚಿಗುರಿ, ಹಳ್ಳವೆನ್ನದೆ ಗುಡ್ಡವೆನ್ನದೆ ಎಲ್ಲಕಡೆ ಹರಡಿಕೊಂಡು, ದನಗಳಿಗೆ ಆಹಾರವಾಗಿ ಜಗತ್ತಿಗೆ ತಂಪನ್ನೀಯುವ ಗುಣವನ್ನು ಹೊಂದಿರುವ 'ತೃಣ', ಎಂದರೆ ಹುಲ್ಲು ಬಹಳ ಸಾಧು ಎಂದು ಹೇಳುತ್ತಾ, ಸದ್ದಿಲ್ಲದೇ ಜಗತ್ತಿನಲ್ಲಿ ಉಪಯುಕ್ತ ಜೀವನವನ್ನು ಮತ್ತು ಅನ್ಯರಿಗೆ ಸಂತಸವನ್ನು ಕೊಡುವ ಬಗೆಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

'ತೃಣ ಸಾಧು' ಎಂದಿದ್ದಾರೆ ಮಾನ್ಯ ಗುಂಡಪ್ಪನವರು, ಸಾಧು ಎಂದರೆ 'ಸತ್' ನಿಂದ ಕೂಡಿದ ಎಂದು ಅರ್ಥ. ಆ 'ಸತ್' ಯಾವಾಗಲೂ 'ನಿತ್ಯವಾಗಿರುತ್ತದಾದ್ದರಿಂದ ಅದು ಸಾಧು. ಹುಲ್ಲು ಒಣಗಿದಂತೆ ಕಂಡರೂ ಒಂದು ಹದ ಮಳೆ ಬಿದ್ದೊಡನೆಯೇ 'ತಾನು ನಿತ್ಯ' ವೆನ್ನುವಂತೆ ಮತ್ತೆ ಚಿಗುರಿ ದನಗಳಿಗೆ ಅಹಾರವಾಗುವುದಲ್ಲದೆ, ನಮ್ಮ ಹೃನ್ಮನಗಳನ್ನು ತಣಿಸುತ್ತದೆ, ತಂಪನ್ನೀಯುತ್ತದೆ ಅಲ್ಲವೇ? ಹಾಗಾಗಿ ಜಗತ್ತಿಗೆ ಉಪಕಾರಿಯಾಗಬೇಕಾದರೆ ಅಥವಾ ಹತ್ತಾರು ಜನರಿಗೆ ಸಂತಸವನ್ನೀಯಬೇಕಾದರೆ ಮಹಾನ್ ವ್ಯಕ್ತಿಗಳೇ ಆಗಬೇಕಿಲ್ಲ. ನಾವು ಸಣ್ಣವರಾದರೂ ಶುದ್ಧ ಮತ್ತು ಧೃಢ ಮನಸ್ಕಾರಾದರೆ ನಾವು ಮಾಡುವ ಕೆಲಸದಿಂದಲೇ ಜಗತ್ತಿಗೆ ಸಂತಸವನ್ನು ಕೊಡಬಹುದು ಎಂದು ಈ ಹುಲ್ಲಿನ ದೃಷ್ಟಾಂತವನ್ನು ಕೊಟ್ಟಿದ್ದಾರೆ ನಮಗೆ ಮಾನ್ಯ ಡಿವಿಜಿಯವರು.

ಹುಲ್ಲು ಒಣಗಿದಂತೆ ಕಂಡರೂ ಅದರ ಬೇರುಗಳಲ್ಲಿ ಚಿಗುರುವ ಸತ್ವವನ್ನು ಉಳಿಸಿಕೊಂಡದ್ದರಿಂದಲೇ, ಅದು ಮತ್ತೆ ಚಿಗುರಲಾಯಿತು. ಹಾಗೆಯೇ, ನಾವೂ ಸಹ ನಮ್ಮ ಅಂತರಂಗದಲ್ಲಿ ಸತ್ವವನ್ನು ಉಳಿಸಿಕೊಂಡಿದ್ದರೆ, ಅವಕಾಶಸಿಕ್ಕಾಗ ಆ ಸತ್ವವನ್ನು ಬೆಳೆಸಿಕೊಂಡು ಜಗತ್ತಿನಲ್ಲಿ ಅನ್ಯರಿಗೆ ಉಪಕಾರಿಗಳಾಗಬಹುದು ಮತ್ತು ಅನ್ಯರ ಆನಂದಕ್ಕೆ ಕಾರಣರಾಗಬಹುದು. ಸತ್ಯವನ್ನು ಕಾಣಬೇಕು, ಸತ್ವಗ್ರಾಹಿಗಳಾಗಬೇಕು ಮತ್ತು ಅಂತರಂಗದಲ್ಲಿ ಆ ಸತ್ವವನ್ನು ಉಳಿಸಿಕೊಳ್ಳಬೇಕು. ಹಾಗಾದರೆ, ನಾವೆಷ್ಟೇ ಸಣ್ಣವರಾದರೂ, ಜಗತ್ತಿಗೆ ಮತ್ತು ಜಗತ್ತಿನ ಅನ್ಯರಿಗೆ ಪ್ರಯೋಜಕರಾಗಬಹುದು.

“ಅಯ್ಯೋ, ನಮ್ಮ ಹತ್ತಿರ ಏನಿದೆ? ನಮ್ಮ ಕೈಲೇನಾಗುತ್ತದೆ? ಮಹಾ ಮಹಾ ವ್ಯಕ್ತಿಗಳ ಕೈಲೇ ಆಗೋಲ್ಲ ಇನ್ನು ನಾನ್ಯಾವ ಮಹಾ' ಎಂದು ಹಲುಬವ, ಗೋಳಾಡುವ ಬಹಳಷ್ಟು ಜನರನ್ನು ನೋಡುತ್ತೇವೆ ಅಲ್ಲವೇ? ಹಾಗನ್ನುವವರಿಂದ ಯಾವ ಸಾಧನೆಯೂ ಆಗುವುದಿಲ್ಲ. ಜೇನ ನೊಣ ಕಟ್ಟುವ ಜೇನುಗೂಡನ್ನು ನೋಡಿದರೆ ಒಂದು ಸಣ್ಣ ಕೀಟ ಎಂತಹ ಅದ್ಭುತ ಕೆಲಸವನ್ನು ಮಾಡಬಹುದು ಎಂದು ಅರ್ಥವಾಗುತ್ತದೆ. ಯಾರ ಕೈಲೂ ಮಾಡಲಾಗದ ಮಧು ಸಂಗ್ರಹಣ ಕಾರ್ಯವನ್ನು ಅಷ್ಟು ಸಮರ್ಪಕವಾಗಿ ಮಾಡುವ ಆ ಜೇನ ನೊಣವನ್ನು ಕಂಡಾಗ, ನಮಗೆ ಬದುಕಿನಲ್ಲಿ ಉತ್ಸಾಹ ಮೂಡಬೇಕು. ನಾವು ನಮ್ಮೊಳಗೇ ಸತ್ವವನ್ನು ಬೆಳಸಿಕೊಂಡು ಆ ಸತ್ವದ ಬಲದಿಂದಲೇ ಅನ್ಯರಿಗುಪಕರಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ, ನಮ್ಮದೂ ಆ 'ತೃಣ'ದಂತೆ ಅಥವಾ 'ಜೇನ ನೊಣ' ದಂತೆ ಸಾರ್ಥಕ ಬದುಕಾಗುತ್ತದೆ.

**'ಮುಕ್ತಕ – 745**

**ಪರಹಿತದ ಮಾತಿರಲಿ, ಪರರಿನೇ ಜೀವಿಪನು ।**

**ನರಜಂತು; ಪಶು ಪಕ್ಷಿ ಕೀಟ ಮೀನ್ಗಳವೋಲ್ ॥**

**ಪರರಿನೆಳಸದದೇನನುಂ ಪರರಿಗುಪಕರಿಪ ।**

**ತರುಜನ್ಮವಲ ಪುಣ್ಯ! - ಮಂಕುತಿಮ್ಮ ॥**

ಮಾತಿರಲಿ=ಮಾತು+ಇರಲಿ, ಮೀನ್ಗಳವೋಲ್=ಮೀನ್ಗಳ +ಓಲ್,

ಪರರಿನೆಳಸದದೇನನುಂ=ಪರರಿನ್+ಎಳಸದು+ಅದು+ಏನನುಂ, ಪರರಿಗುಪಕರಿಪ=ಪರರಿಗೆ+ಉಪಕರಿಪ,

ತರುಜನ್ಮವಲ=ತರುಜನ್ಮವು+ಅಲ

ಪರರಿನ್=ಪರರಿಂದ, ಎಳಸದೆ=ಬಯಸದೆ,ಅಪೇಕ್ಷಿಸದೆ, ತರುಜನ್ಮವು=ಗಿಡಮರಗಳ ಜನ್ಮವು

ಪರರಿಗೆ ಉಪಕಾರ ಮಾಡುವ ಮಾತು ಒತ್ತಟ್ಟಿಗೆ ಇರಲಿ, ಮನುಷ್ಯ ಸದಾಕಾಲ, ಪಶು ಪಕ್ಷಿ ಕೀಟ ಮೀನುಗಳಂತೆ ಪರರಮೇಲೆ ಅಧಾರಪಡುತ್ತಲೇ ಜೀವಿಸುತ್ತಾನೆ. ಪರರಿಂದ ಏನನ್ನೂ ಬಯಸದೆ ಅನ್ಯರಿಗುಪಕರಿಸುವ ಮರದ ಜನ್ಮ ಶ್ರೇಷ್ಠ ಎಂದು ನಿರಾಧಾರವಾದ ಬದುಕಿನ ಪರಿಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಗಿಡಮರಗಳನ್ನು ಹೊರತು ಮನುಷ್ಯನನ್ನೂ ಸೇರಿಸಿ, ಈ ಜಗತ್ತಿನ ಪ್ರತಿಯೊಂದು ಪ್ರಾಣಿಯೂ ತನ್ನ ಬದುಕಿಗೆ ಅನ್ಯಾಧಾರಿತವೇ!!! ಚಿಕ್ಕ ಪ್ರಾಣಿ ದೊಡ್ಡಪ್ರಾಣಿಗೆ ಆಹಾರ. ಚಿಕ್ಕ ಪ್ರಾಣಿಯ ಮೇಲೆ ದೊಡ್ಡಪ್ರಾಣಿಯ ದೌರ್ಜನ್ಯ ಇದು ನಮಗೆ ಎಲ್ಲೆಲ್ಲೂ ಕಾಣುತ್ತದೆ. ತನ್ನ ರಕ್ಷಣೆಯನ್ನು ಮಾಡಿಕೊಳ್ಳುವುದು, ತನ್ನ ಆಹಾರವನ್ನು ತಾನೇ ಹುಡುಕಿಕೊಳ್ಳುವುದು, ಮತ್ತು ತನ್ನ ಸಂತತಿಯನ್ನು ಬೆಳೆಸುವುದಕ್ಕಾಗಿ, ಪಶು ಪಕ್ಷಿ ಕೀಟ ಮೀನ್ಗಳು ಅನ್ಯ ಪ್ರಾಣಿಗಳ ಮೇಲೆ ಆಧಾರಪಡುತ್ತವೆ. ಏಕೆಂದರೆ ಅವುಗಳ ಎಲ್ಲ ಚಟುವಟಿಕೆಗಳು ಕೇವಲ ಈ ಮೂರು ಅವಶ್ಯಕತೆಗಳಿಗೆ ಸೀಮಿತವಾಗಿರುತ್ತದೆ. ಪ್ರಕೃತಿಯಲ್ಲಿ, ಪರಮಾತ್ಮ ಸೃಷ್ಟಿಯಲ್ಲಿ ಇದು ಸಹಜವಾಗೇ ಇದೆ. ಆದರೆ ಇದೇ





ಪ್ರಕೃತಿಯಲ್ಲಿರುವ 'ಸ್ವಶಕ್ತಿಯಿಂದಲೇ ಮೊಳೆತು, ಸ್ವಶಕ್ತಿಯಿಂದಲೇ ಬೆಳೆದು, ಸ್ವಶಕ್ತಿಯಿಂದಲೇ ತನ್ನ ಜೀವನವನ್ನು ನಡೆಸುತ್ತಾ, ಸದಾಕಾಲ ಅನ್ಯರಿಗಾಗಿಯೇ ಬದುಕುವ ಗಿಡಮರಗಳನ್ನು ನೋಡಿದರೆ, ಎಂಥಹ ಸಹೃದಯನಿಗೂ ' ಆಹಾ!! ಎಂತಹ ಸಾರ್ಥಕ ಬದುಕು ಎಂದು ಎನಿಸದೇ ಇರುವುದಿಲ್ಲ.

ಮಾನ್ಯ ಗುಂಡಪ್ಪನವರು, "ವನಸುಮ" ಎನ್ನುವ ಒಂದು ಕವನದಲ್ಲಿ ಉಪಕಾರಿ ನಾನು ಎನ್ನುಪಕೃತಿಯು ಜಗಕೆಂಬ ವಿಪರೀತ ಮತಿಯನುಳಿದು ವಿಪುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ" ಎನ್ನುತ್ತಾರೆ. ಪಾದಪ ಎಂದರೆ ಮರ. ಒಂದು ಬೀಜ ಭೂಮಿಯೊಳಗೆ ಬಿದ್ದು ತನ್ನನ್ನು ತಾನಿಲ್ಲದಂತಾಗಿಸಿಕೊಂಡು ಮೊಳೆತು ಸಸಿ, ಗಿಡ, ಮರವಾಗಿ, ನೆರಳು, ಹೂ, ಸುಗಂಧ, ಹಣ್ಣು, ತಂಪು, ಉರವಲು, ಆಶ್ರಯ ಮುಂತಾದವುಗಳನ್ನು ನೀಡುತ್ತಲೇ ಇರುತ್ತದೆ. 'ಉಪಕಾರಿ ನಾನು ಎನ್ನುಪಕೃತಿಯು ಜಗಕೆಂಬ" ಎನ್ನುವಂತೆ ತಾನೆಂದೂ 'ತಾನು ಉಪಕಾರ ಮಾಡುತ್ತಿದ್ದೇನೆ' ಎಂದು ಹೇಳಿಕೊಳ್ಳುವುದೇ ಇಲ್ಲ ಅಲ್ಲವೇ? ಆದರೆ ಮನುಷ್ಯರು, ತಮ್ಮ ಪ್ರತಿಯೊಂದು ಸಣ್ಣ ಅವಶ್ಯಕತೆಗೂ ಅನ್ಯರಮೇಲೆ ಅಧಾರಪಡುತ್ತಲೇ, ಸದಾಕಾಲ ಬದುಕುವ "ಪರಪುಟ್ಟ" ಜೀವಿಗಳು. ಇದರ ಮೇಲೆ 'ಈ ಜಗತ್ತೆಲ್ಲವೂ ನನಗಾಗಿ ಸೃಷ್ಟಿಸಲ್ಪಟ್ಟಿದೆ ಎಂದು ಬೀಗುವ ದುರಭಿಮಾನಿಯೂ ಸಹ. ಸದಾ ಕಾಲ ಅನ್ಯಾಧಾರಿತ

ಬದುಕನ್ನೂ ನಡೆಸುತ್ತಿದ್ದರೂ 'ತಾನೇ ಮಹಾನ್' ಎಂದು ಬೀಗುವ ದುರಹಂಕಾರ ಬೇರೆ. ಹಾಗಾಗಿ "ಪರರಿಗುಪಕರಿಪ ತರುಜನ್ಮವಲ ಪುಣ್ಯ" ಎಂದು ಹೇಳುತ್ತಾ ಅನ್ಯರಿಗೆ ಉಪಕರಿಸುವ 'ಮರದ' ಜನ್ಮ ಮತ್ತು ಜೀವನ ಪುಣ್ಯದಿಂದ ಕೂಡಿದ್ದು ಎನ್ನುತ್ತಾರೆ.

'ಹುಲಿ ಹುಲ್ಲ ಮೇಯಲಾಗುವುದೇ? ಮೀನು ಕೇವಲ ನೀರ್ಕುಡಿದು ಬದುಕಲಾಗುವುದೇ?" ಎಂದು ಕೇಳಿದರೆ ಸಾಧ್ಯವಿಲ್ಲ ಎಂದಷ್ಟೇ ಹೇಳಬಹುದು. ಸೃಷ್ಟಿಯಲ್ಲಿ ಒಂದೊಂದಕ್ಕೆ ಒಂದೊಂದು ರೀತಿಯ ಬದುಕು ನಿಗದಿತ. ಮನುಷ್ಯನಿಗೂ ಸಹ. ಆದರೆ ಮನುಷ್ಯ ಅದನ್ನೆಲ್ಲ ಬಿಟ್ಟ ತನ್ನ ಅತಿ ವಿವೇಕದಿಂದ ಸ್ವಾರ್ಥ ಸಾಧನೆಗೆ ಜಗತ್ತೆಲ್ಲವೂ ತನಗಾಗಿ ಸೃಷ್ಟಿಸಲ್ಪಟ್ಟಿದೆ ಎಂದು ದುರ್ಮಾರ್ಗದಿಂದ ಎಲ್ಲವನ್ನೂ ನಾಶಮಾಡುತ್ತಿದ್ದಾನೆ. ಅನ್ಯ ಪ್ರಾಣಿಗಳಿಗಿಂತ ಅಧಿಕವಾದ ಮತ್ತು ಉತ್ತಮವಾದ ವಿವೇಕವನ್ನು ಪಡೆದಿದ್ದರೂ ಮನುಷ್ಯ ಅದನ್ನು ದುರುಪಯೋಗಪಡಿಸುತ್ತಾ ಜಗತ್ತಿನಲ್ಲಿ ಬದುಕನ್ನು ಬುರ್ಭರವಾಗಿಸಿಬಿಟ್ಟಿದ್ದಾನೆ. ಹೂವಿಗೆ ಯಾವ ಹಾನಿಯನ್ನೂ ಮಾಡದೆ ಕಿಂಚಿತ್ ಮಧುವನ್ನು ಅಲ್ಲಿಂದ ಪಡೆಯುವ ದುಂಬಿಯಂತೆ ಮನುಷ್ಯನೂ ಸಹ, ಪರರ ಮೇಲೆ ಆಧಾರಪಡುವುದು ಅನಿವಾರ್ಯವಾದಾಗ, ಯಾವುದಕ್ಕೂ ಹಾನಿಮಾಡದೆ ಬದುಕಿದರೆ ಅದು ಸಾರ್ಥಕ ಬದುಕಾಗುತ್ತದೆ.





**ಮುಕ್ತಕ - 746**

**ನೆರಳನಿನಿತನು ಕೊಡುವ, ದಣಿವನಿನಿತನು ಕಳೆವ |**

**ತಿರೆಯ ಪಯಣದ ಹೊರೆಯನಿನಿತು ಸುಳುವೆನಿಪಾ ||**

**ತರುವಾಗಿ ಮನೆಯೊಳಗೋ ಹೊರಗೊ ನೀಂ ಬೆಳೆಯುತಿರೆ |**

**ಪರಧರ್ಮವದೆಲವೊ – ಮಂಕುತಿಮ್ಮ ||**

ನೆರಳನಿನಿತನು=ನೆರಳನು+ಇನಿತನು, ದಣಿವನಿನಿತನು=ದಣಿವನು+ಇನಿತನು,

ಹೊರೆಯನಿನಿತು+ಹೊರಯನು+ಇನಿತು, ಸುಳುವೆನಿಪಾ=ಸುಳುವು+ಎನಿಪಾ,ಪರಧರ್ಮವದೆಲವೊ

ಪರಧರ್ಮವು+ಅದೇ+ಎಲವೋ

ದಣಿವು=ಆಯಾಸ, ತಿರೆಯ=ಭೂಮಿಯ, ಸುಳುವು=ಸುಲಭ, ಹಗುರ, ತರು=ಮರ, ಪರಧರ್ಮ=ಪರಮಧರ್ಮ.

ಕೊಂಚ ನೆರಳನ್ನು ಕೊಡುವ, ಅದರಡಿ ಕುಳಿತಾಗ ದಣಿವಾರುವ, ಸುತ್ತಾಟದ ಆಯಾಸದ ಭಾರ ಸ್ವಲ್ಪ ಹಗುರಾಗಿಸುವಂತಹ ಒಂದು 'ಮರ' ವನ್ನು, ನೀನು ಮನೆಯ ಒಳಗೋ ಅಥವಾ ಹೊರಗೋ ಬೆಳೆಸಿದರೆ ಅದೇ ಪರಮ ಧರ್ಮವು ಎಂದು ನಿಸ್ವಾರ್ಥದಿಂದ ಪರರಿಗೊದಗುವ ಮರ ಮತ್ತು ಅದನ್ನು ಬೆಳೆಸುವ ಪುರುಷಾರ್ಥವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನೆರಳು, ಆಶ್ರಯ, ಹೂ ಹಣ್ಣು ಸುಗಂಧ ಎಲ್ಲವನ್ನೂ ಇತ್ತು ದಾರಿಹೋಕರಿಗೆ ದಣಿವಾರಿಸಿಕೊಳ್ಳಲು ಛತ್ರಿಯಂತೆ ಹರಡಿರುವ ರೆಂಬೆ ಕೊಂಬೆಗಳಿಂದ ಕೂಡಿ, ಯಾರಿಂದಲೂ ಏನನ್ನೂ ಬಯಸದೆ ಸದಾ ನೀಡುತ್ತಾ ಇರುವ ಒಂದು ಮರವನ್ನು ಮನೆಯೊಳಗೋ ಅಥವಾ ಮನೆಯ ಹೊರಗೋ ಬೆಳೆಸಿದರೆ ಅದೇ ಪರಮಾರ್ಥವಾಗುತ್ತದೆ, ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು 'ಉಪಕಾರಿ ನಾನು ಎನ್ನುಪಕೃತಿಯು ಜಗಕೆಂಬ ವಿಪರೀತ ಮತಿಯುಳಿದು, ವಿಪುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ' ಎಂದಿದ್ದಾರೆ. ಇದ್ದಾಗಲೂ ಅವಸಾನವಾದಾಗಲೂ ಅನ್ಯರಿಗುಪಕರಿಸುವ ಗುಣವಿರುವ 'ಮರ'ವನ್ನು ಬೆಳೆಸಿದರೆ ನಾವೂ ಸಹ ಅನ್ಯರಿಗುಪಕರಿಸಿದಂತೆಯೇ ಅಲ್ಲವೇ?

ಇಂದಿಗೂ ನಮ್ಮ ನಿಮ್ಮ ಮಧ್ಯದಲ್ಲಿ ಇರುವ ಅಂತಹ ಪುರುಷಾರ್ಥವನ್ನು ಸಾಧಿಸಿದ ಓರ್ವ ಮಹಿಳೆ 'ಸಾಲುಮರದ ತಿಮ್ಮಕ್ಕನ' ಹೆಸರನ್ನು ಕೇಳದವರಾರು. ತನಗೆ ಮಕ್ಕಳಿಲ್ಲದಿದ್ದರೂ ತನ್ನ ಪತಿಯೊಡಗೂಡಿ ಹನ್ನೆರಡು ಸಾವಿರ ಅಡಿಗಳಂತರದಲ್ಲಿ ಮೂರು ನೂರು ಆಲದ ಮರಗಳನ್ನು ತನ್ನ ಮಕ್ಕಳಂತೆ ಪೋಷಿಸಿ, ಬೆಳೆಸಿ, ಬೃಹತ್ತಾಗಿಸಿ, ಅವುಗಳನ್ನು ಕಂಡು ತನ್ಮಯತೆಯನ್ನು ಮತ್ತು ಆತ್ಮಾನಂದಾವನ್ನೂ ಅನುಭವಿಸುವ ಆ ಮಹಾತಾಯಿ ಪರಮಾರ್ಥವನ್ನು ಸಾಧಿಸಿದಂತೆಯೇ ಅಲ್ಲವೇ? ಇಂದು ಆ ಪಥದಲ್ಲಿ ನಡೆದಾಡುವ ಪ್ರತಿಯೊಬ್ಬರಿಗೂ ತಿಮ್ಮಕ್ಕನ ಶ್ರಮದ ಫಲ ಅನುಭವಿಸಲಿಕ್ಕೆ ಸಿಗುತ್ತದೆಯೆಂದರೆ ತಿಮ್ಮಕ್ಕನ ನಿಸ್ವಾರ್ಥ ಸೇವೆ ಶ್ಲಾಘನೀಯವಲ್ಲವೇ? ಇದೇ ಪರಧರ್ಮ ಸಾಧನೆ.

ನಾವು ಎಷ್ಟು ದಿವಸ ಬದುಕಿದೆವು, ಏನೆಲ್ಲಾ ಗಳಿಸಿದೆವು, ಎಷ್ಟು ಅನುಭವಿಸಿದೆವು ಎನ್ನುವುದು ಮುಖ್ಯವಲ್ಲ. ಅದು ಕೇವಲ ಲೌಕಿಕ ಸಾಧನೆ. "ಹೊರೆಯನಿನಿತು ಸುಳುವೆನಿಪಾ ತರುವಾಗಿ ಮನೆಯೊಳಗೊ ಹೊರಗೊ ನೀಂ ಬೆಳೆಯುತಿರೆ" ಎಂದು ಹೇಳುತ್ತಾ ಅನ್ಯರ ಕಷ್ಟಗಳನ್ನು ನೀಗಿಸುವ, ಅನ್ಯರುತ್ಥಾನಕ್ಕಾಗಿ ಕೆಲಸ ಮಾಡಲು ಅಂತರಂಗದಲ್ಲಿ ಭಾವಸಾಧನೆಯನ್ನು ಮಾಡಿ ಬಹಿರಂಗದಲ್ಲಿ ಕಾರ್ಯೋನ್ಮುಖರಾಗುವುದೇ ಪರಧರ್ಮ ಸಾಧನೆ. ಪರಮ ಪೂಜ್ಯ ಶಂಕರ ಭಗವತ್ಪಾದರ, ಭಗವದ್ರಾಮಾನುಜಾಚಾರ್ಯರ ಮತ್ತು ಸ್ವಾಮೀ ವಿವೇಕಾನಂದರ ಜೀವನವೇ ನಮಗೆ ಆದರ್ಶವಾಗಿ, ನಾವೂ ಸಹ 'ಬಂದೆವು, ಇದ್ದೆವು, ಹೋದೆವು' ಎಂತಾಗದೆ ಲೌಕಿಕ ಜೀವನವನ್ನು ನಡೆಸುತ್ತಾ, 'ಕಿಂಚಿತ್ ಪರೋಪಕಾರ' ವನ್ನು ನಿಸ್ವಾರ್ಥ ಮತ್ತು ನಿರ್ಮೋಹಕವಾಗಿ ಪಾಲಿಸಿದರೆ ನಮ್ಮದೂ ಸಾರ್ಥಕ ಬದುಕಾಗಬಹುದು.

**ಮುಕ್ತಕ – 747**

**ಅವರೆಷ್ಟು ಧನವಂತರ್, ಇವರೆಷ್ಟು ಬಲವಂತ |**
**ಅವರೆಷ್ಟು ಯಶವಂತರ್ ಎನುವ ಕರುಬಿನಲಿ ||**
**ಭವಿಕ ನಿನಗೆಷ್ಟಿಹುದೊ ಮರೆತು ನೀಂ ಕೊರಗುವುದು |**
**ಶಿವನಿಗೆ ಕೃತಜ್ಞತೆಯೆ? - ಮಂಕುತಿಮ್ಮ||**

ನಿನಗೆಷ್ಟಿಹುದೊ=ನಿನಗೆ+ಎಷ್ಟು+ಇಹುದೊ,
ಕರುಬಿ=ಕೊರಗಿ, ಭವಿಕ = ಭವದಲ್ಲಿರುವುದು..

ಅವರಿಗೆಷ್ಟು ಧನವಿದೆ, ಇವರಿಗೆಷ್ಟು ಬಲವಿದೆ ಮತ್ತು ಅವರೆಷ್ಟು ಯಶಸ್ವೀ ಜನ ಎಂದು ಅನ್ಯರ ಕಂಡು ಕೊರಗುವುದರಲ್ಲಿ. ನಿನ್ನ ಬಳಿ ಏನಿಹುದು ಎಂದು ನೀನು ಮರೆತು ಹೋದರೆ, ಅದು ಆ ಪರಮಾತ್ಮನಿಗೆ ಕೃತಜ್ಞತೆ ತೋರಿದಂತೆ ಆಗುತ್ತದೆಯೇ? ಎಂದು ಒಂದು ತಾತ್ವಿಕ ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು.
'ಆಸೆಯೇ ದುಃಖಕ್ಕೆ ಮೂಲ' ಎಂದ ಭಗವಾನ್ ಬುದ್ಧ. ಅದು ಸತ್ಯ. ಆದರೆ ಆ ಅಸೆಯೆಂಬುದೇ ಇಲ್ಲದಿದ್ದರೆ ಈ ಜಗದ್ವ್ಯಾಪಾರ ನಡೆಯುವುದೆಂತು? ಆದರೆ ಆ ಆಸೆಗೆ ಒಂದು ಮಿತಿಯಿರಬೇಕು. ಆ ಮಿತಿಯ ಗೆರೆಯನ್ನು ನಾವು ಎಲ್ಲಿಗೆ ಎಳೆದುಕೊಳ್ಳಬೇಕು ಎನ್ನುವುದೇ ನಮಗೆ ಅರಿವಿರುವುದಿಲ್ಲ. ಹಾಗಾಗಿ ನಮಗಿಂತ ಹಣವಂತರನ್ನು, ಬಲವಂತರನ್ನು

ಮತ್ತು ಯಶೋವಂತರನ್ನು ಕಂಡರೆ, 'ನಮಗೆ ಸಿಗದಿದ್ದದ್ದು ಅವರಿಗೆ ಸಿಕ್ಕಿತಲ್ಲಾ' ಎಂದು ಕರುಬುವುದು, ಪ್ರಮಾಣ ವ್ಯತ್ಯಾಸವಿದ್ದರೂ, ಸಾಮಾನ್ಯ ಎಲ್ಲರಲ್ಲೂ ಕಾಣುತ್ತೇವೆ. ಇದು ಅತೃಪ್ತ ಮನಸ್ಸಿನ ಭಾವ. ಪ್ರತಿಯೊಬ್ಬರಿಗೂ, ಅವರವರ ಜೀವಿತಕಾಲದಲ್ಲಿ ಕಾಲಕಾಲಕ್ಕೆ ಯಾರ್ಯಾರಿಗೆ ಏನೇನು ಲಭಿಸಬೇಕೋ ಅದನ್ನು ಪಡೆದು ಅನುಭವಿಸುತ್ತಾ ಇರುತ್ತಾರೆ. "ನಮಗೆ ಸಿಕ್ಕದ್ದು ಕಡಿಮೆ, ನಮಗೆ ಬೇರೇನೋ ಸಿಗಬೇಕಿತ್ತು ಅಥವಾ ನಾವು





ಬೇರೇನೋ ಆಗಬೇಕಿತ್ತು, ಹಾಗಾಗಿದ್ದಾರೆ ನಾವು ಹೀಗೆ ಇರುತ್ತಿರಲಿಲ್ಲ' ಎಂದು ಹಲುಬುವುದು, ಕೇವಲ ಅಜ್ಞಾನ ಜನಿತವಾದ ಪ್ರಾಕೃತ ಭಾವ. ಅದರಿಂದ ಹೊರಬಂದರೆ 'ತೃಪ್ತಿ' ಯನ್ನು ಪಡೆಯಬಹುದು.

ಆದರೆ ಸದಾಕಾಲ ಪ್ರಕೃತಿಯಿಂದ ಪ್ರಭಾವಿತವಾದ, ಇಂದ್ರಿಯಗಳ ವಶವಾದ ಮನಸ್ಸು ಬುದ್ಧಿ ದೇಹಗಳು ಬೇರೇನನ್ನು ಯೋಚಿಸಲು ಸಾಧ್ಯ!! ಇಂದ್ರಿಯಗಳ ಹಿಡಿತದಿಂದ ಹೊರಬಂದರೆ 'ತೃಪ್ತಿ' ಯನ್ನು ಪಡೆಯಬಹುದು. ಯಾರೂ ಅರಿಯಲಾಗದ ನಮ್ಮ ಪೂರ್ವಕರ್ಮಾನುಸಾರ, ವಿಧಿ ನಿರ್ಮಿಸಿದ ವಿನ್ಯಾಸದಂತೆ ನಮಗೆ ಏನು ಮತ್ತು ಯಾವಾಗ ಸಿಗಬೇಕೋ ಅದೇ ಮತ್ತು ಅಷ್ಟೇ ಸಿಗುತ್ತದೆ. ಕೊಂಚ ಹಿಂದೆಯೂ ಅಲ್ಲ, ಕೊಂಚ ಮುಂದೆಯೂ ಅಲ್ಲ ಮತ್ತು ಕೊಂಚ ಹೆಚ್ಚ ಅಲ್ಲ, ಕೊಂಚ ಕಡಿಮೆಯೂ ಅಲ್ಲ. ನಾವು ಬಯಸಿದ್ದಲ್ಲ. ಆದರೆ ಏಕೆ ಹೀಗೆ? ಎಂದು ಯೋಚಿಸಿದರೆ ನಮಗೆ ಉತ್ತರ ಸಿಗುವುದಿಲ್ಲ. ತಲೆ ಕೆಡುತ್ತದೆ ನೆಮ್ಮದಿ ಹಾಳಾಗುತ್ತದೆ.

ಹಾಗಾಗಿ ನಮ್ಮ ಪೂರ್ವಜರು 'ನಮಗೆ ಸಿಗುವುದೆಲ್ಲ ಆ ಪರಮಾತ್ಮನ ಪ್ರಸಾದವೆಂದು ತಿಳಿಯಬೇಕು ಎಂದರು. ಹಾಗೆ ತಿಳಿಯುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಅಲ್ಲವೇ? ನಮಗೆ ಸಿಕ್ಕದ್ದರಿಂದ ನಾವು ಸಂತೋಷಪಡುವ ಮನೋಭಾವ ಬೆಳೆಸಿಕೊಂಡರೆ ಅನ್ಯರ ನೋಡಿ ಹಲುಬುವ ಮತ್ತು ಕರುಬುವ ಕರ್ಮದಿಂದ ಹೊರಬರಬಹುದು. ಅದನ್ನು ಬಿಟ್ಟು ಹಲುಬಿದರೆ, ನಮಗೆ ಸಿಕ್ಕದ್ದನ್ನು ಮತ್ತು ನಮಗದನ್ನು ಕೊಟ್ಟ ಆ ಪರಮಾತ್ಮನನ್ನು ಧಿಕ್ಕರಿಸಿದಂತೆಯೇ ಅಲ್ಲವೇ? ಇದನ್ನೇ ಗುಂಡಪ್ಪನವರು "ನೀಂ ಕೊರಗುವುದು ಶಿವನಿಗೆ ಕೃತಜ್ಞತೆಯೆ?' ಎಂದು

ಕೇಳಿದ್ದಾರೆ. ವಿಧಿ ಅಥವಾ ಶಿವ ಅಥವಾ ಪರಮಾತ್ಮ ಎಂದು ನಾವು ನಂಬದೆ ಇದ್ದರೂ ಕಡೆಯಪಕ್ಷ ನಮಗೆ ಸಿಕ್ಕದ್ದರಿಂದ ತೃಪ್ತಿಪಟ್ಟು ಅನ್ಯರ ಕಂಡು ಕೊರಗದೆ ಇದ್ದರೆ, ಸಾಕು ನಮ್ಮೊಳಗಿನ 'ಶಿವ'ನಿಗೆ ಕೃತಜ್ಞತೆ ತೋರಿದಂತೆಯೇ ಅಲ್ಲವೇ?

**ಮುಕ್ತಕ – 748**

**ಅನ್ನವುಣುವಂದು ಕೇಳ್ ; ಅದನು ಬೇಯಿಸಿದ ನೀರ್ ।**
**ನಿನ್ನ ದುಡಿತದ ಬೆಮರೊ, ಪೆರರ ಕಣ್ಣೀರೋ? ॥**
**ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ ।**
**ಜೀರ್ಣಿಸದ ಋಣಶೇಷ – ಮಂಕುತಿಮ್ಮ ॥**

ಅನ್ನವುಣುವಂದು=ಅನ್ನವ+ಉಣುವ+ಅಂದು, ತಿನಲಿತ್ತನಿತ=ತಿನಲು+ಇತ್ತ+ಅನಿತ, ಮಿಕ್ಕೂಟ=ಮಿಕ್ಕ + ಊಟ
ಬೆಮರೊ=ಬೆವರೊ, ಪೆರರ=ಅನ್ಯರ, ಅನಿತ=ಅಷ್ಟ (ಅಷ್ಟನ್ನು)

ನೀನು ತಿನ್ನುವ ಅನ್ನವನ್ನು ಬೇಯಿಸಿದ ನೀರು ನಿನ್ನ ದುಡಿಮೆಯಿಂದ ಪಡೆದದ್ದೋ ಅಥವಾ ಪರರನ್ನು ಪೀಡಿಸಿ ಪಡೆದದ್ದೋ ಎಂದು ನೀನು ಊಟಮಾಡುವಾಗ, ನಿನ್ನನ್ನೇ ನೀನು ಕೇಳಿಕೋ. ಜಗತ್ತಿಗೆ ನೀನು ಎಷ್ಟು ಕೊಟ್ಟಿರುತ್ತೀಯೋ ಅಷ್ಟನ್ನು ಮಾತ್ರ ಪಡೆದು ನೀನು ಉಣ್ಣು. ಅದಕ್ಕಿಂತ ಅಧಿಕವಾಗಿ ಪಡೆದು ಉಂಡರೆ ಅದು

ನಿನ್ನೊಳಗೆ ಜೀರ್ಣವಾಗದೇ, ಅನ್ಯರಿಗೆ ಹಿಂತಿರುಗಿಸಲೇಬೇಕಾದ ಋಣವಾಗಿ ಉಳಿದುಬಿಡುತ್ತದೆ ಎಂದು, ಜಗತ್ತಿನಲ್ಲಿ ನಾವು ಅನುಭವಿಸುವುದೆಲ್ಲವನ್ನೂ ನಮ್ಮದೇ ಕಷ್ಟಾರ್ಜಿತವಾಗಿರಬೇಕೆಂದೂ ಅನ್ಯರಿಂದ ಪಡೆದದ್ದು ನಮಗೆ ದಕ್ಕುವುದಿಲ್ಲವೆಂದೂ ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸ್ವಾವಲಂಬನೆಗೆ ಇದಕ್ಕಿಂತ ಹೆಚ್ಚು ಸೂಕ್ತವಾದ ನುಡಿಗಳಿರಲು ಸಾಧ್ಯವಿಲ್ಲ. ಬದುಕಿನಲ್ಲಿ ನಾವು ದುಡಿಯುತ್ತಿರುತ್ತೇವೆ ಮತ್ತು ಉಣುತ್ತಲೂ ಇರುತ್ತೇವೆ. ದುಡಿಮೆ ಮತ್ತು ಗಳಿಕೆಗಳ ನಡುವಿನ ಲೆಕ್ಕವನ್ನೆಂದೂ ಮಾಡುವುದಿಲ್ಲ. ನಮ್ಮ ದುಡಿಮೆ, ನಮ್ಮಿಂದ ನೀಡಬಹುದಾದಂತಹ ಕೊಡುಗೆ, ನಮ್ಮ ದುಡಿಮೆಗೆ ಸಮನಾದ ಗಳಿಕೆಯಾಗಬೇಕು. ಅದಕ್ಕಿಂತ ಹೆಚ್ಚಾದರೆ ನಾವು ಏನನ್ನೂ ಕೊಡದೆ 'ಪಡೆದ ಲೆಕ್ಕಕ್ಕೆ ಸೇರುತ್ತದೆ. ಹಾಗೆ ಪಡೆದದ್ದನ್ನು ಮತ್ತೆ ಹಿಂತಿರುಗಿಸಿ ಕೊಡಲೇಬೇಕಾದ ಋಣವಾಗಿ ನಿಂತುಬಿಡುತ್ತದೆ. ಈ ಋಣ ಜನ್ಮ ಜನ್ಮದಿಂದ ಹೊತ್ತುಹೋಗುವ ಕರ್ಮ ಶೇಷದೊಂದಿಗೆ ಸೇರಿಕೊಂಡುಬಿಡುತ್ತದೆ. ಆ ಋಣವನ್ನು ತೀರಿಸಲಿಕ್ಕೆ ನಮ್ಮ ಜನ್ಮಜನ್ಮಾಂತರದ ದುಡಿಮೆ. ನಮಗೆ ಈ ಜನ್ಮದಲ್ಲಿ ಪಡೆದ ವಸ್ತು ಮತ್ತು ಉಪಕಾರಗಳ ನೆನಪೇ ಇರುವುದಿಲ್ಲ ಇನ್ನು ಜನ್ಮಾಂತರದ ಕರ್ಮಶೇಷದ ಪರಿಚಯ ಇರಲು ಸಾಧ್ಯವೇ?

ಆದುದರಿಂದ ಈ ಋಣ ಶೇಷಗಳ ವೃತ್ತದಿಂದ ಹೊರಬರುವ ಉಪಾಯವನ್ನು ನಮಗೆ ಮಾನ್ಯ ಗುಂಡಪ್ಪನವರು ಸೂಚಿಸಿದ್ದಾರೆ. ಅದೇನೆಂದರೆ, ನಾವು ಅನುಭವಿಸುವುದು ಕೇವಲ ನಮ್ಮ ದುಡಿಮೆಯ ಫಲವಾಗಿರಬೇಕು. ಅನ್ಯರ ಕೃಪೆಗೆ ಅಥವಾ ಅನ್ಯರ ಶ್ರಮದ ಫಲವನ್ನು ನಾವು ಅನುಭವಿಸುವಂತಾಗಬಾರದು. ಹಾಗೆ ಅನುಭವಿಸಿದರೆ ಡಿವಿಜಿಯವರು ಹೇಳುವಂತೆ "ಮಿಕ್ಕೂಟ ಜೀರ್ಣಿಸದ ಋಣಶೇಷ" ವಾಗುತ್ತದೆ. ಹಾಗೆ ಪಡೆದ ಮತ್ತು ನಾವು ಜೀರ್ಣಿಸಿಕೊಳ್ಳಲಾಗದ ಋಣವನ್ನು ಎಂದಾದರೂ ಒಂದು ದಿನ ತೀರಿಸಲೇ ಬೇಕಾಗುತ್ತದೆ.

ಎಚೆದರೆ ಅನ್ಯರಿಂದ ನಮ್ಮ ಶ್ರಮದ ಫಲವನ್ನಲ್ಲದೆ ಬೇರೆ ಏನನ್ನೂ ಆಶಿಸಬಾರದು. ಆದು ತಟಸ್ಥ ಸ್ಥಿತಿ. ಅಲ್ಲಿಂದ ಒಂದು ಹೆಜ್ಜೆ ಮುಂದೆ ಹೋಗಿ ನಾವು ನಮ್ಮ ಶ್ರಮವನ್ನು ಹೆಚ್ಚಿಸಿಕೊಳ್ಳುತ್ತಾ, ನಮ್ಮ ಅವಶ್ಯಕತೆಗಳನ್ನು ತೀರಿಸಿಕೊಳ್ಳುತ್ತಾ, 'ಪರರಿಗೂ ಉಪಕಾರ ಮಾಡುವಂತಾದರೆ ಆಗ ಋಣವನ್ನು ಒಳಗೊಂಡ ಕರ್ಮಶೇಷವನ್ನು ಕಳೆದುಕೊಂಡು 'ಪುಣ್ಯ ಶೇಷ' ವನ್ನು ಹೊತ್ತುಕೊಂಡು ಮುಂದೆ ಹೋಗಬಹುದು. ಅಂತಹ ಬದುಕನ್ನು ನಾವು ಬದುಕಿದರೆ

ನಮ್ಮ ಜೀವನ ಸಾರ್ಥಕವಾಗುತ್ತದೆ. ಮಾನ್ಯ ಗುಂಡಪ್ಪನವರು ಅಂತಹ ಜೀವನದ ವಿಧಾನವನ್ನು ಬಹಳ ಕಟ್ಟುನಿಟ್ಟಾಗಿ ಅನುಸರಿಸಿ, ನಮಗೆ ಉತ್ತಮ ಬದುಕಿನ ಮಾರ್ಗವನ್ನು ತೋರಿದ್ದಾರೆ ಈ ಮುಕ್ತಕದಲ್ಲಿ.

| 7ಸಂ. |
| --- |

| ಕಗ್ಗರಸಧಾರೆ . | ಬಂಡವಾಳ ಬಡ್ಡಿ 749 – 753 |
| --- | --- |

**ಮುಕ್ತಕ – 749**

**ಪರಮಲಾಭವ ಗಳಿಸೆ ಜೀವಿತವ್ಯಾಪಾರ- |**

**ಕಿರಬೇಕು ಮೂಲಧನವದು ತತ್ವದೃಷ್ಟಿ ||**

**ಚಿರಲಾಭ ಜಗದಾತ್ಮಲೀಲಾವಿಹಾರಸುಖ |**

**ಧರೆಯ ಸುಖ ಮೇಲೆ ಬಡ್ಡಿ - ಮಂಕುತಿಮ್ಮ ||**

ಜೀವಿತವ್ಯಾಪಾರಕಿರಬೇಕು= ಜೀವಿತ+ವ್ಯಾಪಾರಕೆ+ಇರಬೇಕು, ಮೂಲಧನವದು=ಮೂಲಧನವು+ಅದು,

ಬದುಕಿನ ವ್ಯಾಪಾರದಲ್ಲಿ ಅತ್ಯುತ್ತಮ ಲಾಭವನ್ನು ಗಳಿಸಲು 'ತತ್ವದೃಷ್ಟಿಯೇ ನಮ್ಮ 'ಮೂಲಧನ' ವಾಗಬೇಕು. ಪರಮಾತ್ಮಾನುಭವವೇ ಶಾಶ್ವತ ಲಾಭ. ಧರೆಯಮೇಲಿನ ಸುಖವು ಕೇವಲ ಮೇಲಿನ ಬಡ್ಡಿ ಎಂದು, 'ಪರಮಸುಖ'ವಾವುದು ಎನ್ನುವುದನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಬದುಕಿನಲ್ಲಿ ಆತ್ಮೋದ್ಧಾರ, ಮುಕ್ತಿಗಳೇ ಶಾಶ್ವತ ಗುರಿಗಳು. ಅದೇ ಜೀವಿತ ವ್ಯಾಪಾರದ ಪರಮ ಲಾಭ. ಆದರೆ ಈ ವ್ಯಾಪಾರಕ್ಕೆ ಒಂದು ಮೂಲಧನವಿದೆ. ಅದೇ ತತ್ವದೃಷ್ಟಿ. ಪ್ರತೀ ವಸ್ತು ವ್ಯಕ್ತಿ ಮತ್ತು ವಿಷಯದ ಸತ್ಯದರ್ಶನವಾಗಿ ಆ ಸತ್ಯದ ವಿಚಾರ ಮನದಲ್ಲಿ ಮಂಥನವಾಗಿ ಅನ್ಯ ವಿಷಯಗಳನ್ನು ಸರಿಸಿ ಆ ಸತ್ಯದೊಳಗಿನ ಸತ್ವವನ್ನು ಅಂತರಂಗಕ್ಕೆ ಇಳಿಸಿಕೊಂಡು ಆ ತತ್ವ ನಮ್ಮ ಸ್ವಭಾವವಾಗುವುದೇ ಈ ಜಗತ್ತಿನ ಜೀವನದ ಪರಮ ಲಾಭ. ಆದರೆ ಆ ಸತ್ಯದ

ದರ್ಶನವಾಗುವುದು ಹೇಗೆ ? ಪ್ರತಿಯೊಂದು ವಿಷಯ, ವ್ಯಕ್ತಿ ಮತ್ತು ವಿಷಯದಲ್ಲೂ ಸತ್ಯವಡಗಿರುತ್ತದೆ. ಆದರೆ ಅದು 'ಮಿಥ್ಯ'ಯಿಂದ ಆವರಿಸಿ ಮುಚ್ಚಲ್ಪಟ್ಟಿರುತ್ತದೆ ಮತ್ತು ಕೆಲಬಾರಿ ಆ ವಸ್ತು, ವಿಷಯ ಅಥವಾ ವ್ಯಕ್ತಿಗಳೇ ತಮ್ಮ 'ನಿಜವಲ್ಲ'ದ ರೂಪವನ್ನು ತೋರುತ್ತಿರುತ್ತವೆ. ಮಿಥ್ಯೆಯನ್ನೇ ಸತ್ಯವೆಂದು ತಿಳಿದಿರುವ ತನಕ ಸತ್ಯದ ದರ್ಶನವಾಗುವುದಿಲ್ಲ. ಸತ್ಯ ಮತ್ತು ಮಿಥೆಯ ನಡುವಿನ ಬೇಧವನ್ನರಿತು ಆವರಿಸಿರುವ 'ಮಿಥ್ಯ'ಯನ್ನು ತೊಲಗಿಸಿದಾಗ ಸತ್ಯ ಗೋಚರವಾಗುತ್ತದೆ.

"ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೇ' ಎನ್ನುವಂತೆ ಈ ಜಗತ್ತಿನಲ್ಲಿರುವ ಅಣುವಣುವೂ ಒಂದೇ ಮೂಲದಿಂದ ಬಂದು ಆ ಪರಮ ಶಕ್ತಿಯೇ, ಆ ಪರಮ ಚೇತನವೇ ಎಲ್ಲ ರೂಪಗಳನ್ನೂ ಧರಿಸಿ, ಜಗದಾತ್ಮವೆಂದೆನಿಸಿ, ತನ್ನ ಲೀಲಾವಿಹಾರ ಸುಖವನ್ನು ಅನುಭವಿಸುತ್ತಿದೆ ಎನ್ನುತ್ತದೆ, ನಮ್ಮ ಸನಾತನದ ವಿಚಾರ. ಆ ಲೀಲಾವಿಹಾರ ನಿರಂತರವಾಗಿ ನಡೆಯುತ್ತಿರುವುದರಿಂದ ಅದು ನಿತ್ಯವಾಗಿರುವುದರಿಂದ, ಅದು 'ಸತ್ಯ'. ಈ ಸತ್ಯವನ್ನು ಅರಿತು, ಆ ಭಾವವನ್ನೇ ನಮ್ಮ ಮನಸ್ಸುಗಳಲ್ಲೂ ಧಾರಣೆಮಾಡಿ ನಮ್ಮ ಸ್ವಭಾವದಲ್ಲಿ ಅದನ್ನು ಸ್ಥಿರಗೊಳಿಸಿಕೊಂಡಾಗ ನಾವು ಸತ್ಯವನ್ನು ಅರಿತುಕೊಂಡಂತಾಗುತ್ತದೆ. ಹಾಗೆ ಅರಿತುಕೊಳ್ಳುವುದೇ ನಿಜವಾದ ಜ್ಞಾನ ಮತ್ತು ಆ ಅರಿವನ್ನು ಅಂತರಂಗದಲ್ಲಿ ಅನುಸಂಧಾನಮಾಡಿಕೊಳ್ಳುವುದೇ ನಿಜವಾದ ಆನಂದದ ಮಾರ್ಗ.





ಆದರೆ ಈ ಜಗತ್ತಿನಲ್ಲಿ ಆ ಪರಮ ಚೇತನವು ಧರಿಸಿದ ರೂಪಗಳು, ಎಂದರೆ ನಾವುಗಳು ಪ್ರಕೃತಿ ಪ್ರೇರಿತವಾದ ಇಂದ್ರಿಯಗಳ ಸಹಾಯ ಮತ್ತು ಪ್ರಚೋದನೆಯಿಂದ ನಡೆಸುವ 'ನಿದ್ರಾಹಾರ ಮೈತುನಾದಿಗಳು, ಸ್ನೇಹ, ಪ್ರೇಮ, ಸಂಬಂಧಾದಿಗಳು, ರಾಗದ್ವೇಷಾದಿಗಳು, ಮೋಹ ಮಮಕಾರ'ಗಳ ಮೂಲಕ ಅನುಭವಿಸುವ ಕಷ್ಟ ಸುಖಗಳು, ಮಾನ್ಯ ಗುಂಡಪ್ಪನವರು ಹೇಳುವಂತೆ 'ಜೀವಿತವ್ಯಾಪಾರದ ಮೇಲ್ ಬಡ್ಡಿಗಳು. ಈ ಮೇಲ್ ಬಡ್ಡಿಯನ್ನು ತಿಂದು, ಅನುಭವಿಸಿ, ಅರಗಿಸಿ, ಕರಗಿಸಿ, ಇಲ್ಲವಾಗಿಸಿದಾಗ, ಮೂಲದನವಾದ ತತ್ವದ ಮತ್ತು ಸತ್ವದ ದರ್ಶನವಾದರೆ ಜೀವಿತದ 'ಪರಮ ದರ್ಶನ'ವಾದಂತೆಯೇ ಅಲ್ಲವೇ? ಒಂದನ್ನು ಬಿಟ್ಟರೆ ಮತ್ತೊಂದು ಲಭಿಸುವಂತೆ ಜಗತ್ತಿನ ಅಂಟನ್ನು ಬಿಟ್ಟರೆ 'ಜಗದಾತ್ಮ' ದರ್ಶನವಾಗಿ ನಮ್ಮ ಜೀವನ ಕೃತಾರ್ಥವಾಗುತ್ತದೆ.

**ಮುಕ್ತಕ – 75ಸಂ**

**ಮುಳುಗದಿರು; ಜೀವನದ ತೆರೆಯ ಮೇಲೀಜುತಿರು |**

**ಒಳಿತನಾಗಿಸು, ಕೊಡುತ ಕೊಳುತ ಸಂತಸವ ||**

**ಕಳವಳಂಬಡದೆ ನಡೆ ಕಡೆಯ ಕರೆ ಬಂದಂದು |**

**ಮಿಳಿತನಿರು ವಿಶ್ವದಲ್ಲಿ – ಮಂಕುತಿಮ್ಮ ||**

ಮುಳುಗದಿರು=ಮುಳುಗದೆ+ಇರು, ಮೇಲೀಜುತಿರು=ಮೇಲೆ+ಈಜುತ+ಇರು, ಒಳಿತನಾಗಿಸು=ಒಳಿತನು+ಆಗಿಸು, ಕಳವಳಂಬಡದೆ=ಕಳವಳಂ+ಪಡದೆ, ಮಿಳಿತನಿರು=ಮಿಳಿತನು+ಇರು

ತೆರೆ=ಅಲೆ, ಮಿಳಿತನು=ಸೇರಿದವನಂತೆ

ಬದುಕಿನಲ್ಲಿ ಮುಳುಗಿಬಿಡಬೇಡ. ನದಿಯ 'ತೆರೆ'ಯ ಮೇಲೆಯೇ ಈಜುತ್ತಿರುವಂತೆ ಜೀವನದಲ್ಲಿ ಅಂಟೀ ಅಂಟದಹಾಗೆ ಇರು. ಜಗತ್ತಿನಲ್ಲಿ ಅನ್ಯರಿಗೆ ಕೊಡುತ್ತಾ ಮತ್ತು ಅನ್ಯರಿಂದ ಪಡೆದುಕೊಳ್ಳುತ್ತಾ, ಸದಾಕಾಲ ಒಳಿತನ್ನೇ ಮಾಡುತ್ತಿರು. ಕಡೆಗೆ ಅಂತಕನ ಕರೆಬಂದಾಗ ಕಳವಳಪಡದೆ, ಗೊಣಗಾಡದೆ ಎಲ್ಲವನ್ನೂ ಬಿಟ್ಟು ಹೊರಡು. ಈ ಜಗತ್ತಿನಲ್ಲಿ ಸೇರಿದಂತೆ ಇರು ಎಂದು ನಿರ್ಲಿಪ್ತತೆಯಿಂದ ಬದುಕಿದರೂ ಜಗತ್ತಿಗೆ ಉಪಯುಕ್ತನಾಗಿ ಬದುಕುವ ದಾರಿಯನ್ನು ತೋರಿದ್ದಾರೆ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವು ಸಂಪರ್ಕ ಬೆಳೆಸಿಕೊಂಡ ಪ್ರತೀ ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗೆ, ಎಷ್ಟು ಆಳವಾದ ಸಂಬಂಧವನ್ನು ಕಟ್ಟಿಕೊಳ್ಳುತ್ತೇವೆ ಎಂದರೆ, ಅದರಿಂದ ಹೊರಬರಬೇಕಾದ ಸಂದರ್ಭ ಬಂದಾಗ ನಮಗೆ ಅತೀವ ನೋವುಂಟಾಗುತ್ತದೆ. ಆ ನೋವಿನಿಂದ ಪಾರಾಗುವ ಒಂದೇ ಮಾರ್ಗವೆಂದರೆ, ಗುಂಡಪ್ಪನವರು ಸೂಚಿಸಿದಂತೆ, ಬದುಕಿನ ಜಂಜಾಟದಲ್ಲಿ ಮುಳುಗಬಾರದು, ಅಲೆಯ ಮೇಲಿನ ಈಜಿನಂತೆ ಬದುಕ ಸಾಗಿಸಬೇಕು. ಆಗ ನೋವಾಗುವುದಿಲ್ಲ, ಕೇವಲ ತಟಸ್ಥಭಾವವಿರುತ್ತದೆ. ಹಾಗೆಂದು ಯಾರೊಂದಿಗೂ ಸಂಪರ್ಕವನ್ನೇ ಇಟ್ಟುಕೊಳ್ಳದೆ ಬದುಕುತ್ತೇನೆ ಎನ್ನುವಂತೆಯೂ ಇಲ್ಲ. ಸಮಾಜದಲ್ಲಿ ಬದುಕಬೇಕು. ಎಲ್ಲರೊಂದಿಗೆ ಇದ್ದು ಎಲ್ಲರಿಂದ

ಪಡೆದುಕೊಳ್ಳುತ್ತಾ, ಎಲ್ಲರೊಂದಿಗೆ ಹಂಚಿಕೊಳ್ಳುತ್ತಾ ಬದುಕಬೇಕು. ಸಂಬಂಧಗಳನ್ನು ಕಟ್ಟಿಕೊಳ್ಳಬೇಕು ಆದರೆ ಅವುಗಳಿಗೆ ಅಂಟಿಕೊಳ್ಳಬಾರದು. ಅಂಟಿಕೊಳ್ಳದ ಸ್ಥಿತಿಯಲ್ಲಿ ಸ್ವಾರ್ಥವಿರುವುದಿಲ್ಲ. ಸ್ವಾರ್ಥವಿಲ್ಲದ ಜೀವನದಿಂದ ಗುಂಡಪ್ಪನವರು ಒಳಿತನಾಗಿಸು' ಎಂದು ಹೇಳಿದಂತೆ ಎಲ್ಲರಿಗೂ ಒಳಿತನ್ನೇ ಮಾಡುವ ಮನೋಭಾವ ಬೆಳೆಯುತ್ತದೆ.

ಇನ್ನು 'ಈ ಬದುಕು ಅಶಾಶ್ವತ" ಎಂಬ ಸತ್ಯವನ್ನು ಮನದಟ್ಟು ಮಾಡಿಕೊಳ್ಳಬೇಕು. ಆ ಸತ್ಯದ ಅರಿವು ಮನಸ್ಸಿನಲ್ಲಿ ಸದಾಕಾಲ 'ಜಾಗೃತ'ವಾಗಿರಬೇಕು. ಹಾಗಿದ್ದರೆ ಈ ಜಗತ್ತಿನ ಬದುಕಿಗೆ ಅಂಟಿಕೊಳ್ಳುವ ಸಾಧ್ಯತೆಗಳು ಕಡಿಮೆ. ಎಲ್ಲವನ್ನೂ ತೊರೆದು ಹೋಗಲೇಬೇಕು ಎಂಬ ಅರಿವಿದ್ದರೆ ಕಡೆಯ ಕರೆ ಬಂದಾಗ ಕಳವಳ ಮತ್ತು ಭಯವಿಲ್ಲದೆ ಹೊರಡಬಹುದು. 'ನನ್ನ ಮನೆ, ಮಡದಿ, ಆಸ್ತಿ, ಬಂಧುಗಳು' ಎಂದು ಅಂಟಿ ಕೊಂಡಿದ್ದರೆ ಅವುಗಳನ್ನು ಬಿಟ್ಟುಹೋಗುವಾಗ ಖಂಡಿತ ನೋವಾಗುತ್ತದೆ. ಆ ನೋವಿನಿಂದ ಪಾರಾಗಬೇಕಾದರೆ ಅಂಟಿಕೊಂಡಿರಬಾರದು ಶ್ರೀಕೃಷ್ಣ 'ಪದ್ಮಪತ್ರಮಿವಾಂಬಸಿ' ಎನ್ನುತ್ತಾನೆ. 'ತಾವರೆ ಎಲೆಯ ಮೇಲಿನ ನೀರ ಹನಿಯಂತೆ ಬದುಕು' ಎನ್ನುತ್ತಾನೆ.

ಮಾನ್ಯಗುಂಡಪ್ಪನವರು 'ಮಿಳಿತನಿರು ವಿಶ್ವದಲ್ಲಿ' ಎಂದು ಹೇಳುವಂತೆ, ಇರಬೇಕು, ಒಂದಾಗಿರಬೇಕು, ಎಲ್ಲವನ್ನೂ ಅನುಭವಿಸಬೇಕು, ಎಲ್ಲದರೊಳಗಿರುವಂತೆ ಇರಬೇಕು, ಆದರೆ ಯಾವುದರಲ್ಲೂ ಇರಬಾರದು ಮತ್ತು ಯಾವುದಕ್ಕೂ ಅಂಟಿಕೊಳ್ಳಬಾರದು. ಹಾಗೆ ಇದ್ದರೆ ಬದುಕಿನಲ್ಲಿ ಇರುವುದು, ಬದುಕನ್ನು ಅನುಭವಿಸುವುದು ಮತ್ತು ಬದುಕಿನ ಆನಂದವನ್ನು ಪಡೆಯುವುದು ಸುಲಭ. ಹಾಗಿಲ್ಲದಿದ್ದರೆ ಬದುಕುವುದೇ ಕಷ್ಟ, ನೋವು, ಹೆದರಿಕೆ, ಕಳವಳ, ಆತಂಕ, ಅತೃಪ್ತಿ ಮುಂತಾದವುಗಳು ನಮ್ಮನ್ನು ಸದಾಕಾಲ ಕಾಡುತ್ತಾ ಹೆದರಿಸುತ್ತಾ ಜೀವನವನ್ನು ದುರ್ಭರವಾಗಿಸುತ್ತದೆ. ನಮಗೆ ಯಾವುದು ಬೇಕೋ ಅದನ್ನು ಆಯ್ದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ನಮಗಿದೆಯಲ್ಲವೇ?

**ಮುಕ್ತಕ-751**

**ಲೋಕವೆಲ್ಲವು ಚಿತ್ರವಿಂದ್ರಜಾಲದ ಕೃತ್ಯ ।**

**ಸಾಕೆನಗೆ ಬೇಕೆನದೆ ನೋಡು ನೀನದನು ॥**

**ತಾಕಿಸದಿರಂತರಾತ್ಮಂಗಾವಿಚಿತ್ರವನು ।**

**ಹಾಕು ವೇಷವ ನೀನು – ಮಂಕುತಿಮ್ಮ ॥**

ಚಿತ್ರವಿಂದ್ರಜಾಲದ-ಚಿತ್ರವು +ಇಂದ್ರಜಾಲದ, ಸಾಕೆನದೆ=ಸಾಕು+ಎನದೆ, ಬೇಕೆನದೆ=ಬೇಕು+ಎನದೆ, ನೀನದನು=ನೀನು+ಅದನು, ತಾಕಿಸದಿರಂತರಾತ್ಮಂಗಾವಿಚಿತ್ರವನು ತಾಕಿಸದೆ+ಇರು+ಅಂತರಾತ್ಮಂಗೆ+ಆ+ವಿಚಿತ್ರವನು, ಇಂದ್ರಜಾಲ=ಮಾಯೆಯ ಜಾಲ, (magic) ಕೃತ್ಯ=ಕಾರ್ಯ

ಇಡೀ ಜಗತ್ತು ಒಂದು ವಿಚಿತ್ರ ಇಂದ್ರಜಾಲದ ಕಾರ್ಯದಂತೆ, ಮಾಯೆಯಿಂದ ಕೂಡಿ ಇದೆ. ಇದು ಸಾಕು ಅಥವಾ ಇದು ಬೇಕು ಎನದೆ ಕೇವಲ ಸಾಕ್ಷಿಯಂತೆ ಇದನ್ನು ನೋಡು. ಇದರ ವಿಚಿತ್ರಗಳನ್ನು ನಿನ್ನ ಅಂತರಾತ್ಮಕ್ಕೆ ಅಂಟಿಸಿಕೊಳ್ಳಬೇಡ. ನಾಟಕದ ಪಾತ್ರದಾರಿಯಂತೆ ನಿನ್ನ ಜೀವನವನ್ನು ನಡೆಸು ಎಂದು, ನಾವು ಬದುಕಿನಲ್ಲಿ ಧರಿಸಿರುವ ಪಾತ್ರವನ್ನು ಹೇಗೆ ನಿಭಾಯಿಸಬೇಕು ಎಂದು ಸೂಚ್ಯವಾಗಿ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಇಂದ್ರಜಾಲವೆಂದರೆ, ಮಾಯೆ, ಅರ್ಥವಾಗದ್ದು. ಸೃಷ್ಟಿಯಲ್ಲಿನ ಬಹಳಷ್ಟು ವಿಷಯಗಳು ನಮಗೆ ಅರ್ಥವಾಗುವುದೇ ಇಲ್ಲ. ಮನಸ್ಸಿನೊಳಕ್ಕೆ ನುಗ್ಗುವ ಹಲವಾರು ವಿಚಾರಗಳು ಏಕೆ ಬಂದವೆಂದೇ ನಮಗೆ ಅರ್ಥವಾಗುವುದಿಲ್ಲ. ಶತಕೋಟಿಯಲ್ಲಿ ಒಂದರ ನೂರನೇ ಒಂದಂಶವನ್ನೂ ಸಹ ನಾವು ಅರ್ಥಮಾಡಿಕೊಳ್ಳಲಾಗುವುದಿಲ್ಲ. ಹಾಗಾಗಿ ಇಂದು ಇಂದ್ರಜಾಲ ಅಥವಾ ಮಹೇಂದ್ರಜಾಲ. ಇಲ್ಲಿ ಬಹಳ ಚಿತ್ರವಿಚಿತ್ರಗಳಿವೆ. ಹಳೆಯ ವಿಚಿತ್ರಗಳು ಮಾಯವಾಗಿ ಹೊಸ ಹೊಸ ಚಿತ್ರಗಳು ಮೂಡುತ್ತಿರುತ್ತವೆ. ಗಾಜಿನ ತ್ರಿಕೋಣಾಕಾರದ(kaleidoscope)ಒಂದು ಆಟಿಗೆ, ಒಡೆದ ಬಣ್ಣಬಣ್ಣದ ಗಾಜಿನ ಬಳೆಯ ಚೂರುಗಳನ್ನು ಅದರೊಳಕ್ಕೆ

ಹಾಕಿ ತಿರುವುತ್ತಾ ಹೋದರೆ ಚಿತ್ರವಿಚಿತ್ರವಾದ ವಿನ್ಯಾಸಗಳು ಕಾಣುತ್ತವೆ. ಒಂದು ಬಾರಿ ಮೂಡಿದ ಚಿತ್ರ ಮತ್ತೊಂದು ಬಾರಿ ಮೂಡುವುದೇ ಇಲ್ಲ. ನಮ್ಮ ಜೀವನವೂ ಅಂತೆಯೇ ಅಲ್ಲವೇ?

ಹಾಗಾಗಿ ಜೀವನವನ್ನು " ಇದು ಹೀಗಿದ್ದಿದ್ದರೆ ಚೆನ್ನ ಅಥವಾ ಹಾಗಿರಬಾರದೇ? " ಎನ್ನದೆ ಅದು ಹೇಗಿದೆಯೋ ಹಾಗೆಯೇ ಅನುಭವಿಸಬೇಕು. ಹಾಗಲ್ಲದೆ ನಮ್ಮ ಅಭಿಮತವನ್ನು ಅಪೇಕ್ಷಿಸಿದರೆ ಅದು ಆ ಜಗತ್ಕಾರಕನ ವಿನ್ಯಾಸವನ್ನು ಹೇಳನ ಮಾಡಿದಂತೆಯಾಗುತ್ತದೆ. ಹಾಗಾಗಿ ಇದು ಸರಿ, ಇದು ಸರಿಯಿಲ್ಲ, ಇದು ಹೀಗಿರಬೇಕಿತ್ತು, ಅದು ಹಾಗಿರಬಾರದಿತ್ತು ಎಂದು ಹೇಳುವ ಅಧಿಕಾರ ನಮಗೆ ಇಲ್ಲ. ಅದನ್ನು ಕೇವಲ ನೋಡಬೇಕು ಅದು





ಹೇಗಿದೆಯೋ ಹಾಗೆಯೇ ಅನುಭವಿಸಿ ಸಂತಸಿಸಬೇಕು. ಜಗತ್ತಿನ ವಿಚಿತ್ರಗಳಿಗೆ ಒಂದು ಗುಣವಿದೆ ಅದನ್ನು, ನಮ್ಮದಾಗಿಸಿಕೊಳ್ಳಬಾರದು ಎಂದು ಹೇಳುವುದೇ 'ತಾಕಿಸದಿರಂತರಾತ್ಮಂಗಾವಿಚಿತ್ರವನು" ಎಂದು ಹೇಳುವ ಗುಂಡಪ್ಪನವರ ಹಿತವಾದ.

ಹಾಗೆ ಇಲ್ಲಿನ ಜೀವನದ ವಿಚಿತ್ರಗಳನ್ನು ದೂರಿದಿಂದ ನೋಡಿ, ಅವುಗಳನ್ನು ನಮ್ಮ ಗುಣಗಳಾಗಿಸದೆ, ನಮ್ಮಾತ್ಮಕ್ಕೆ ಆ ಗುಣಗಳ ಲೇಪನವನ್ನು ಅಂಟಿಸಿಕೊಳ್ಳದೆ ಹಾಗೆಯೇ ಶುದ್ಧಾತ್ಮರಾಗಿ ಇಲ್ಲಿಂದ ತೆರಳಬೇಕು. ಆದರೆ ನಾವು ಇಲ್ಲಿರುವಾಗ ಇಲ್ಲಿನ ಬದುಕಿಗೆ ಸರಿಯಾದ ಪಾತ್ರವನ್ನು ನಟಿಸಲೇ ಬೇಕು. ಹಾಗೆ ನಟಿಸುವಾಗ, ನಾನು ಇದಲ್ಲ, ನಾನು ಕೇವಲ ನಟ, ಈ ಪಾತ್ರಕ್ಕೆ ಬೇಕಾದ ವೇಷ ಭೂಷಣ ಮತ್ತು ಬಣ್ಣಗಳನ್ನು ಕಳಚಲೇ ಬೇಕು ಎಂದು ಅರಿತು ಆ ಪಾತ್ರವನ್ನು ಕೇವಲ ನಾಟಕದ ಒಂದು ಪಾತ್ರದಂತೆ ನಟಿಸಿ ಆನಂದಿಸಿ ನೇಪತ್ಯಕ್ಕೆ ತೆರಳಬೇಕು. ಹಾಗಾದರೆ ಆತ್ಮ ತನ್ನ ಮೂಲ ಸ್ವರೂಪವನ್ನು ಮತ್ತು ತನ್ನ ಶುದ್ಧತೆಯನ್ನು ಕಾಪಾಡಿಕೊಳ್ಳಬಹುದು. ಅಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಲೇಬೇಕಲ್ಲವೇ?

**ಮುಕ್ತಕ – 752**

**ಭೋಜನದಿ ಪರಮಭೋಜನ ಪರಬ್ರಹ್ಮರಸ |**

**ಯಾಚಿಸಲೇನಿರ್ಪುದದನುಂಡ ಬಳಿಕ ? ||**

**ತ್ಯಾಜಕ ತ್ಯಾಗ ಸಂತ್ಯಾಜ್ಯ ಬೇಧಗಳಿರದೆ |**

**ರಾಜ ನೀಂ ಜಗಕೆಲ್ಲ – ಮಂಕುತಿಮ್ಮ ||**

ಯಾಚಿಸಲೇನಿರ್ಪುದದನುಂಡ=ಯಾಚಿಸಲು+ಏನು+ಇರ್ಪುದು+ಅದನು+ಉಂಡ,

ಬೇಧಗಳಿರದೆ=ಬೇಧಗಳು+ಇರದೆ

ಯಾಚಿಸು=ಬೇಡು, ಇರ್ಪುದು=ಇರುವುದು, ತ್ಯಾಜಕ=ಬಿಡಬಹುದಾದದ್ದು, ತ್ಯಾಗ=ಬಿಡುವುದು, ತ್ಯಾಜ್ಯ=ಬಿಟ್ಟದ್ದು.

ಭೋಜನಗಳಲ್ಲಿ ಅತ್ಯುತ್ತಮವಾದ ಭೋಜನ ಆ 'ಪರಬ್ರಹ್ಮರಸಾಸ್ವಾದನೆ'. ಅದನ್ನು ಉಂಡ ಬಳಿಕ ಬೇರೇನೂ ಬೇಡಲಾಗುವುದಿಲ್ಲ. ಅದು ಸಂಪೂರ್ಣ ತೃಪ್ತಿಯನ್ನು ನೀಡುವಂತಹ ಊಟ. ಆ ಊಟವನ್ನುಣ್ಣುವಾಗ ಇದು ಬೇಕು, ಇದನ್ನು ಬಿಡಬಹುದು ಮತ್ತು ಇದು ಬೇಡ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಹಾಗೆ ಬೇಧವು ಅಳಿದ ಬಳಿಕ, ಎಲ್ಲ ಬೇಧಗಳನ್ನೂ ಮೆಟ್ಟಿ ನಿಂತ ಬಳಿಕ, ನೀನು ಜಗವನ್ನು ಗೆದ್ದ ರಾಜನ ಭಾವ ಸಿಗುತ್ತದೆ ಎಂದು ಪರಿಪೂರ್ಣ ಬದುಕಿನ ಸಾರ್ಥಕತೆಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಉಪನಿಷತ್ತು 'ರಸೋ ವೈಸಃ' ಎನ್ನುತ್ತದೆ. ಎಂದರೆ ಆ ಪರಮಾತ್ಮಾನುಭವವೂ ಒಂದು 'ರಸ'ವೇ ಎಂದು. ಇದನ್ನೇ ಕುಲಶೇಕರ ಆಳ್ವಾರರು 'ಕೃಷ್ಣಾ ರಸಾಯನಂ ಪಿಬ' ಎನ್ನುತ್ತಾರೆ. ಪುರಂದರರು 'ರಾಮನಾಮ ಪಾಯಸಕೆ ಕೃಷ್ಣನಾಮ ಸಕ್ಕರೆ' ಎನ್ನುತ್ತಾರೆ. ಹೀಗೆ ಎಲ್ಲ ತತ್ವಜ್ಞಾನಿಗಳೂ ಪರಮಾತ್ಮಾನುಭವವನ್ನು ಒಂದು

ಊಟಕ್ಕೆ ಹೋಲಿಸಿದ್ದಾರೆ. ನಾವು ಸಾಮಾನ್ಯವಾಗಿ ಊಟಮಾಡುವಾಗ, ನನಗಿದು ಇಷ್ಟ. ನನಗಿದು ಬೇಡ ನನಗಿದು ಹಿಡಿಸದು ಎನ್ನುವಂತಹ ಬೇಧಗಳನ್ನು ಕಾಣುತ್ತಿರುತ್ತೇವೆ. ಆದರೆ ಈ ಪರಮಾತ್ಮಾನುಭವವೆಂಬುದು ಎಂತಹ 'ಊಟ' ವೆಂದರೆ, ಇದು ಪರಿಪೂರ್ಣವಾಗಿ ಒಂದಿಷ್ಟೂ ಬಿಡುವಂತಹದ್ದೇ ಅಲ್ಲ. ಇಲ್ಲಿ ತ್ಯಾಜ್ಯವೆಂಬುದೇ ಇಲ್ಲ. ಸಕಲವೂ ಷಡ್ರಸೋಪೇತ ಮತ್ತು ಅತ್ಯಾನಂದಕರವೇ.

ಜಗತ್ತಿನಲ್ಲಿ ಬೇಧವನ್ನು ಕಾಣುವುದು ನಮ್ಮ ಮನಸ್ಸು ಮತ್ತು ಬುದ್ಧಿಗಳು. ಈ ಮನಸ್ಸು ಬುದ್ಧಿಗಳು ಜಗತ್ತನ್ನು ಬಿಟ್ಟು ಜಗತ್ಕಾರಕನನ್ನೇ ತಮ್ಮ ವಿಚಾರಕ್ಕೆ ಆಹಾರವಾಗಿ ತೆಗೆದುಕೊಂಡಾಗ ಪರಿಪೂರ್ಣನಾದ ಪರಮಾತ್ಮಾನುಭಾವವಾಗಿ 'ತೃಪ್ತ' ಭಾವ ಬಂದಾಗ, ಕೊರತೆಗಳು, ಬೇಧಗಳು, ನಶಿಸಿಹೋಗಿ ಜಗತ್ತನ್ನೇ ಗೆದ್ದ ಭಾವ ಬರುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು ' ರಾಜ ನೀಂ ಜಗಕೆಲ್ಲ ' ಎಂದಿದ್ದಾರೆ. ಆದರೆ ಪ್ರಕೃತಿ ನಿರ್ಮಿತ ದೇಹದೊಳಗೆ ನಾವಿದ್ದು ಇಂದ್ರಿಯಗಳಿಂದ ಪ್ರಚೋದಿಸಲ್ಪಡುತ್ತಿರುವ ಮನಸ್ಸು ಬುದ್ದಿಗಳನ್ನಿಟ್ಟುಕೊಂಡು, ಜಗದ್ವಿಷಯಗಳೇ ನಮ್ಮ ವಿಚಾರ ಮತ್ತು ಆಲೋಚನೆಗಳಿಗೆ ಆಹಾರವಾಗಿರುವಾಗ ಆ 'ಪರಬ್ರಹ್ಮರಸವನ್ನು ಸೇವಿಸುವುದು ಹೇಗೆ?, ಬಹಳ ದೊಡ್ಡ ಸಮಸ್ಯೆಯೇ. ಅದನ್ನು ಸಾಧಿಸಬೇಕಾದರೆ ಇದನ್ನು ಬಿಡಬೇಕು. ನಾನು ಈ ದೇಹವಲ್ಲ, ಮನಸ್ಸಲ್ಲ ಮತ್ತು ಈ ಬುದ್ಧಿಯೂ ಅಲ್ಲ, ನಾನು ಕೇವಲ 'ಆನಂದ ಸ್ವರೂಪ' ಎಂದು ದೃಢವಾಗಿ ನಂಬಬೇಕು, ಆ ನಂಬಿಕೆಯನ್ನು ಅನುಸಂಧಾನಮಾಡಿ ಈ ಜಗತ್ತಿನಲ್ಲಿ ಇದ್ದರೂ ಸದಾಕಾಲ ಪರಬ್ರಹ್ಮನಲ್ಲಿ ನಿರತನಾಗಿ, ಆ ಪರಬ್ರಹ್ಮವಸ್ತುವೇ ನಮ್ಮ ವಿಚಾರಗಳಿಗೆ ಆಹಾರವಾಗಬೇಕು.

ಹಾಗಾದಾಗ ಈ ಜಗತ್ತನ್ನು ಸೃಷ್ಟಿಸಿದಾತ 'ಪರಿಪೂರ್ಣನಾದುದ್ದರಿಂದ, ಜಗತ್ತೂ ಪರಿಪೂರ್ಣವೆಂಬ ಅರಿವು ಮೂಡಿ, ವಸ್ತು ವಿಷಯ ಮತ್ತು ವ್ಯಕ್ತಿಗಳಲ್ಲಿ ಬೇಧವನ್ನು ಕಾಣದೆ, ಪರಬ್ರಹ್ಮವಸ್ತುವಿನಿಂದಾದ ಎಲ್ಲವೂ ಪರಮಬ್ರಹ್ಮವೇ ಆಗಿದೆ ಎಂಬ ಜ್ಞಾನವುಂಟಾದಾಗ, ಜಗತ್ತಿನ 'ಏಕಾತ್ಮ' ಭಾವವನ್ನು ಮನಗಂಡು ಮೊದಮೊದಲು ಬೇಧಗಳೆಲ್ಲ ಸಣ್ಣದಾಗಿ ಗೌಣವಾಗಿ ಕಂಡರೂ ನಾವು ಮೇಲೇರುತ್ತಾ ಹೋದಂತೆ ಬೇಧಗಳು ಸಶಿಸಿಹೋಗಿ ನಾವು ಅವುಗಳನ್ನು ಕಾಣದೆ ಹೋದಾಗ ಆ ಬೇಧಗಳನ್ನೆಲ್ಲ ಗೆದ್ದಂತಾಗಿ ಈ ಜಗತ್ತನ್ನೇ ಗೆದ್ದ ಭಾವ ಮೂಡುತ್ತದೆ. ಇದೇ ಪರಮಾತ್ಮಾನಂದವನ್ನು ಪಡೆದ ಸ್ಥಿತಿ. ಆ ಸ್ಥಿತಿಯಲ್ಲಿ ಆನಂದವೇ ಆನಂದ, ಸಕಲ ಪ್ರಾಣಿಗಳೂ ಆಸೆ ಪಡುವ ಮತ್ತು ಪಡೆಯಲಿಚ್ಚಿಸುವ 'ಆನಂದ',

ಸರಿಯಾದ ಮಾರ್ಗದಲ್ಲಿ ನಡೆದು ಅನುಸಂಧಾನಮಾಡಿದರೆ ಈ ಸ್ಥಿತಿ ಯಾರು ಬೇಕಾದರೂ ತಲುಪಬಹುದು. ನಾವೂ ಪ್ರಯತ್ನಪಡೋಣವೇ?





**ಮುಕ್ತಕ – 753**

**ಬ್ರಹ್ಮಾನುಸಂಧಾನ ಲೋಕಸಂಧಾನದಲಿ |**

**ಬ್ರಹ್ಮದರ್ಶನವೆಲ್ಲ ಜೀವರೂಪದಲಿ ||**

**ಬ್ರಹ್ಮಾನುಭವ ದೇಹಕರಣಾನುಭವಗಳಲಿ |**

**ಮರ್ಮವಿದು ಮುಕ್ತಿಗೆಳೊ - ಮಂಕುತಿಮ್ಮ ||**

ದೇಹಕರಣಾನುಭವಗಳಲಿ=ದೇಹ+ಕರಣ+ಅನುಭವಗಳಲಿ, ಮರ್ಮವಿದು=ಮರ್ಮವು+ಇದು,

ಮುಕ್ತಿಗೆಲೊ=ಮುಕ್ತಿಗೆ+ಎಲೊ

ಕರಣ= ಸಾಧನ, ಉಪಕರಣ, ಮರ್ಮ=ಗುಟ್ಟು,

ಆ ಪರಮಾತ್ಮ ಸುಮ್ಮನೊಬ್ಬಂಟಿಯೆಂತಿಹುದು? ಬೇಸರವಹುದು ಹೊಮ್ಮುವೆನು ಕೋಟಿರೂಪದಲಿ ನಾನೆಂದು (ಮುಕ್ತಕ-74)' ಎಂದು ಈ ಜಗತ್ತಿನಲ್ಲಿ ಹಲವಾರು ರೂಪಗಳಲ್ಲಿ ಪ್ರಕಟವಾದನೆಂದು ಹೇಳುತ್ತಾ, ಈ ಲೋಕದಲ್ಲಿರುವುದೆಲ್ಲಾ ಬೇರೆಬೇರೆ ರೂಪಗಳನ್ನು ಧಾರಣೆ ಮಾಡಿದ ಆ 'ಪರಬ್ರಹ್ಮ' ನೇ ಎನ್ನುತ್ತಾರೆ ಗುಂಡಪ್ಪನವರು. ಹಾಗಾಗಿ ಲೋಕವನ್ನು ಸರಿಯಾಗಿ ಅನುಸಂಧಾನಮಾಡಿದರೆ ಆ ಪರಬ್ರಹ್ಮನನ್ನು ಅನುಸಂಧಾನ ಮಾಡಿದಂತೆಯೇ, ಆ ಪರಬ್ರಹ್ಮಾನುಭಾವವನ್ನು ದೇಹವೆಂಬ ಸಾಧನದಿಂದಲೇ ಸಾಧಿಸಬೇಕು. ಇದೇ 'ಮುಕ್ತಿಸಾಧನೆ'ಯ ಮರ್ಮ ಎಂದು ಒಂದು ಗಹನವಾದ ತತ್ವವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು

ಒಂದು ಬೃಹತ್ ಚೇತನ, ತಾನೇ ಅಣು ಚೇತನವಾಗಿ, ತನ್ನಿಂದಲೇ ಜಡವನ್ನೂ ಸೃಷ್ಟಿಸಿಕೊಂಡು, ಆ ಜಡದೊಳಕ್ಕೆ ಸೇರಿಕೊಂಡು ನಾನಾ ರೂಪಗಳನ್ನು ಧಾರಣೆಮಾಡಿ ಈ ಲೋಕವನ್ನು ಸೃಷ್ಟಿಸಿದೆ. ಹಾಗಾಗಿ ಎಲ್ಲ

ರೂಪಗಳನ್ನೂ ಧಾರಣೆ ಮಾಡಿರುವುದು ಆ ಪರಬ್ರಹ್ಮವಸ್ತುವು ಎನ್ನುವುದು ಸಿದ್ಧವಾದಂತೆಯೇ ಅಲ್ಲವೇ? ನಾವು ನೋಡುವುದು ಬಾಹ್ಯ ರೂಪ. ರೂಪಗಳು ಬೇರೆಬೇರೆಯಾದ್ದರಿಂದ ನಮಗೆ ಅವುಗಳಲ್ಲಿ ಬೇಧ ಕಾಣಿಸುತ್ತದೆ. ರೂಪಗಳನ್ನು ಬಿಟ್ಟು, ಹಲರೂಪಗಳನ್ನು ಧಾರಣೆಮಾಡಿದ ಏಕರೂಪದ ಚೈತನ್ಯವನ್ನೇ ನೋಡಲಾದರೆ ನಮಗೆ ಪರಬ್ರಹ್ಮವಸ್ತು ನಡೆಸುವ ಲೀಲಾವಿಹಾರ ಕಾಣಿಸುತ್ತದೆ.

ಕಾಮನ ಬಿಲ್ಲು ಏಳು ಬಣ್ಣಗಳಿಂದ ಕೂಡಿದ್ದರೂ ಆ ಬಣ್ಣಗಳಿಗೆ ಮೂಲವೇ ಬಿಳಿಯ ಬಣ್ಣ, ಬಿಳಿಯ ಬಣ್ಣ ಜ್ಞಾನದ ಪ್ರತೀಕ, ಜ್ಞಾನ ಪರಮಾತ್ಮನ ಪ್ರತಿಬಿಂಬ, ಕಾಮನಬಿಲ್ಲಿನ ಎಲ್ಲ ಬಣ್ಣಗಳೂ ತನ್ನ ಅಂದದಲ್ಲಿ ಮೆರೆದರೂ ಬಿಳಿಯ ಬಣ್ಣವೇ ಕೊನೆಗೆ ಉಳಿಯುವಂತೆ ನಾವು ಈ ಜಗತ್ತಿನಲ್ಲಿ ಎಂತೆಂಥಹ ವೇಷಗಳನ್ನು ಕಟ್ಟಿದರೂ, 'ಆಸೆ'ಯಿಂದ ಎಂತೆಂತಹ ಬಣ್ಣಗಳನ್ನು ಬಳಿದುಕೊಂಡರೂ, ಅವೆಲ್ಲ ಜಗತ್ತಿನಲ್ಲಿ ನಾವಾಡುವ ನಾಟಕಕ್ಕೆ, ಈ ಬಣ್ಣಗಳನ್ನೆಲ್ಲಾ ಕಳಚಿದಾಗ ಜ್ಞಾನ ಸ್ವರೂಪವಾದ ಬಿಳಿಯಬಣ್ಣವು ಉಳಿಯುವಂತೆ ನಮ್ಮ ಮನದಲ್ಲಿ ಜ್ಞಾನಾನಂದ ಸ್ವರೂಪವಾದ ಆ ಪರಮಾತ್ಮನೇ ಉಳಿಯಬೇಕು. ಎಲ್ಲಾ ಬಣ್ಣಗಳಲ್ಲೂ ಬಿಳಿಯ ಬಣ್ಣ ಅಡಗಿರುವಂತೆ ಲೋಕದಲ್ಲಿ





ಎಲ್ಲ ರೂಪಗಳಲ್ಲೂ ಆ ಪರಮಾತ್ಮನನ್ನೇ ನಾವು ಕಾಣಲಾದರೆ ಆಗ ಲೋಕವನ್ನು ಅನುಸಂಧಾನ ಮಾಡಿದರೂ ನಮಗೆ ಪರಬ್ರಹ್ಮಾನುಭವ ಆಗುತ್ತದೆ.

ಆತ್ಮಕ್ಕೆ ತನ್ನ ಕರ್ಮ ಶೇಷವನ್ನು ಅಳಿಸಲು ದೇಹವು ಸಾಧನ, ಉಪಕರಣ. ಈ ಉಪಕರಣವಿಲ್ಲದೆ ಆತ್ಮಕ್ಕೆ ಅನ್ಯ ಮಾರ್ಗವೇ ಇಲ್ಲ. ಆದರೆ ಉಪಕರಣವೇ ಪರಮಾರ್ಥವಲ್ಲ. ಈ ದೇಹದಲ್ಲಿದ್ದು, ಈ ದೇಹದ ಮೂಲಕವೇ, 'ಈ ದೇಹ ನಶ್ವರ, ಈ ದೇಹವನ್ನು ಧಾರಣೆಮಾಡಿರುವ ಪರಬ್ರಹ್ಮಾನುಭವವೇ ಪರಮಾರ್ಥ' ಎಂದು ಅರಿತು ಬೇರೆಬೇರೆ

ರೂಪಗಳನ್ನು ಧರಿಸಿರುವ ಚೈತನ್ಯವು ಒಂದೇ ಎಂದು ಲೋಕಾತ್ಮಭಾವವನ್ನು ತಳೆಯುವುದೇ ಮುಕ್ತಿಗೆ ಮಾರ್ಗ ಎನ್ನುವುದೇ ಈ ಮುಕ್ತಕದ ಹೂರಣ

**ಮುಕ್ತಕ – 754**

**ಒಮ್ಮೆ ಹೂದೋಟದಲಿ, ಒಮ್ಮೆ ಕೆಳಕೂಟದಲಿ |**
**ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ ||**
**ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ |**
**ಬ್ರಹ್ಮಾನುಭವಿಯಾಗೊ - ಮಂಕುತಿಮ್ಮ ||**

ಬ್ರಹ್ಮಾನುಭವಿಯಾಗೊ=ಬ್ರಹ್ಮ+ಅನುಭವಿ+ಆಗೊ
ಕೆಳಕೂಟ=ಗೆಳೆಯರೊಂದಿಗೆ

ಒಮ್ಮೆ ಹೂದೋಟದಲಿ ಸುತ್ತಾಡುವಾಗ, ಒಮ್ಮೆ ಗೆಳೆಯರೊಂದಿಗೆ ಸಮಯ ಕಳೆಯುವಾಗ, ಒಂದು ಸಂಗೀತ ಸಭೆಯಲ್ಲಿ ನಾದಗಳನಾಲಿಸುವಾಗ, ಸಂಸಾರದ ಸುಳಿಯಲ್ಲಿ ಸುತ್ತುವಾಗ ಅಥವಾ ಮೌನವಾಗಿರುವಾಗ ನೀನು 'ಪರ ಬ್ರಹ್ಮ' ವಸ್ತುವಿನ ಅನುಭವನ್ನು ಪಡೆಯುತ್ತಾ ಇರು ಎಂದು ಒಂದು ಸೂಕ್ಷ್ಮ ವಿಚಾರವನ್ನು ನಮಗೆ ಅರುಹಿದ್ದಾರೆ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತು ಮೂರು ಗುಣಗಳಿಂದ ಆಗಿದೆ. ಸತ್ವ, ರಜ ಮತ್ತು ತಮೋ ಗುಣಗಳು. ಈ ಮೂರೂ ಗುಣಗಳು ನಮ್ಮಲ್ಲಿ ಬೇರೆಬೇರೆ ಪ್ರಮಾಣದಲ್ಲಿ ಇರುತ್ತವೆ. ಈ ಮೂರೂ ಗುಣಗಳು ತಮ್ಮ ಪ್ರಭಾವವನ್ನು ದಶೇಂದ್ರಿಯಗಳ ಮೂಲಕ ನಮ್ಮ ಮೇಲೆ ಬೀರಿ ನಮ್ಮನ್ನು ಕ್ರಿಯಾಶೀಲರನ್ನಾಗಿಸುತ್ತಾ ಇರುತ್ತದೆ. ಈ ಮೂರು ಗುಣಗಳಲ್ಲಿ ಯಾವ ಗುಣ ಪ್ರಧಾನವಾಗಿರುತ್ತದೆಯೋ ನಮ್ಮ ಕ್ರಿಯೆಯೂ ಆ ಗುಣಕ್ಕನುಗುಣವಾಗಿರುತ್ತದೆ. ಉದಾ: ಸಾತ್ವಿಕ ಗುಣ ಅಧಿಕವಾಗಿದ್ದರೆ ನಮ್ಮ ಕ್ರಿಯೆಯೂ ಸಾತ್ವಿಕವಾಗಿರುತ್ತದೆ. ಸದಾಕಾಲ ನಾವು ಈ ತ್ರಿಗುಣಗಳ ಪ್ರಭಾವದ ಪರಿಧಿಯೊಳಗೆ ಸುತ್ತುತ್ತಿರುವಾಗ, 'ಪರಬ್ರಹ್ಮಾನುಭವ' ವನ್ನು ಹೇಗೆ ಪಡೆಯುವುದು? ಇದು ಕಠಿಣವಲ್ಲವೇ? ಆದರೆ ಮಾನ್ಯ ಗುಂಡಪ್ಪನವರು ನಮಗೆ ದಾರಿ ತೋರಿದ್ದಾರೆ.

ನಾವು ತನ್ಮಯತೆಯನ್ನು ಪಡೆದಾಗ ಈ ತ್ರಿಗುಣಗಳ ಪ್ರಭಾವದಿಂದ ಸ್ವಲ್ಪ ಹೊತ್ತಿಗಾದರೂ ದೂರವಾಗಬಹುದು. ಆ ಸಮಯದಲ್ಲಿ ಬ್ರಹ್ಮಾನಂದವನ್ನು ಅನುಭವಿಸಬೇಕು ಎನ್ನುತ್ತಾರೆ, ಗುಂಡಪ್ಪನವರು, ಹೂದೋಟದಲ್ಲಿ ನಾವು ಸುತ್ತುವಾಗ ಆ ತೋಟದ ಸುಗಂಧಭರಿತ ಮಂದ ಮಾರುತವನ್ನು ಆಸ್ವಾಧಿಸುವಾಗ, ಗೆಳೆಯರೊಡನೆ ಸೇರಿ ಸ್ನೇಹದ ವಿನಿಮಯವೋ ಅಥವಾ ಹಳೆಯ ನೆನಪುಗಳನ್ನು ಮಾಡಿಕೊಂಡು ಕಾಲಕಳೆಯುವಾಗಲೋ, ಶಾಸ್ತ್ರವನ್ನು ಕೂಲಂಕುಶವಾಗಿ ಅಭ್ಯಾಸಮಾಡುವಾಗಲೋ, ಸಂಸಾರದ ಜಂಜಡದಲ್ಲಿ ಮುಳುಗಿ ಸಮಸ್ಯೆಗಳನ್ನು ಪರಿಹರಿಸಲು ತೀವ್ರತಮ ಪ್ರಯತ್ನ ಮಾಡುವಾಗಲೋ ಅಥವಾ ಮೌನವಾಗಿರುವಾಗ ನಮಗೆ ತನ್ಮಯತೆ ಉಂಟಾಗುತ್ತದೆ. ಆ ತನ್ಮಯತೆಯ ಸಮಯದಲ್ಲಿ, ನಮ್ಮ ಮೇಲೆ ಈ ತ್ರಿಗುಣಗಳ ಪ್ರಭಾವ ಕಡಿಯಾಗುತ್ತದೆಯಾದ್ದರಿಂದ ಪರಬ್ರಹ್ಮವಸ್ತುವಿನೆಡೆಗೆ ಮನಸ್ಸನ್ನು ಹೊರಳಿಸುವುದು ಸುಲಭ.

ಅಂತಹ ಸಮಯದಲ್ಲಿ ನೀನು ಬ್ರಹ್ಮಾನುಸಂಧಾನ ಮಾಡಿ ಕೊಂಚಕಾಲವಾದರೂ ಮನಸ್ಸನ್ನು ಪರಬ್ರಹ್ಮನಲ್ಲಿ ನಿಲ್ಲಿಸಿಕೊ' ಎಂದು ಒಂದು ಆದೇಶವನ್ನು ನೀಡಿದ್ದಾರೆ ಗುಂಡಪ್ಪನವರು. ಆದರೆ ಮೇಲೆ ಹೇಳಿದ ಎಲ್ಲ ಸಮಯದಲ್ಲೂ ನಾವು ಆಳವಾಗಿ ಅನುಭವಿಸಿದರೆ ಮಾತ್ರ ನಮಗೆ ತನ್ಮಯತೆ ಸಿಗುವುದು. ಮೌನವಾಗಿರುವುದು ಎಂದರೆ ಕೇವಲ ಮಾತಿಲ್ಲದೆ ಕೂರುವುದಲ್ಲ. ಮೌನವೆಂದರೆ 'ಅಂತರಂಗ'ದಲ್ಲೂ ಶಾಂತಿಯನ್ನು ಪಡೆಯುವುದು ಎಂದರ್ಥ. ಇವುಗಳನ್ನು ಹೇಳಿಕೊಡಲು ಬರುವುದಿಲ್ಲ. ಇವೆಲ್ಲ ಕೇವಲ ಅನುಭವದಿಂದ ಪಡೆಯಬಹುದು. ಯಾರು ಎಷ್ಟು ಪ್ರಯತ್ನಪಟ್ಟರೆ ಅವರಿಗಷ್ಟು ಲಭ್ಯವಾಗುತ್ತದೆ. ಪ್ರಯತ್ನ ಪಡಬೇಕಷ್ಟೆ.

**ಮುಕ್ತಕ – 755**

**ಮತಿಗರ್ಥವಾದೊಡೇಂ? ಸ್ಮೃತಿಯೊಳದು ನೆಲೆಸಿರಲಿ |**

**ಸತತ ಸಂಧಾನದಲ್ಲಿ ಪರಮಾರ್ಥವಿರಲಿ ||**

**ಶತಲಕ್ಷಧನದ ಲೆಕ್ಕವ ಬಾಯಿ ನುಡಿದೊಡೇಂ? |**

**ಕೃತಿಯೆಷ್ಟು ವೆಚ್ಚಕ್ಕೆ – ಮಂಕುತಿಮ್ಮ ||**

ಮತಿಗರ್ಥವಾದೊಡೇಂ=ಮತಿಗೆ+ಅರ್ಥ+ಆದೊಡೆ+ಏಂ, ಸ್ಮೃತಿಯೊಳದು=ಸ್ಮೃತಿಯೊಳು+ಅದು, ನೆಲೆಸಿರಲಿ=ನೆಲೆಸಿ+ಇರಲಿ, ಪರಮಾರ್ಥವಿರಲಿ=ಪರಮಾರ್ಥವು+ಇರಲಿ,ನುಡಿದೊಡೇಂ=ನುಡಿದೊಡೆ+ಏಂ ಭೃತಿಯೆಷ್ಟು=ಕೃತಿಯು+ಎಷ್ಟು,

ಮತಿ=ಬುದ್ಧಿ, ಸ್ಮೃತಿ=ನೆನಪು, ಶೃತಿ=ಭತ್ಯ, ಸಂಬಳ, ಕೂಲಿ

ಪರಮಾತ್ಮನ ವಿಚಾರ ಬುದ್ಧಿಗೆ ಅರ್ಥವಾದರೇನು? ಅದು ನೆನಪಿನಲ್ಲಿ ಉಳಿಯಬೇಕು. ಹಾಗೆ ಉಳಿದದ್ದು ಅಂತರಂಗದಲ್ಲಿ ಅನುಸಂಧಾನಗೊಳ್ಳಬೇಕು. ಬಾಯಿಯಲ್ಲಿ ಕೋಟಿ ಕೋಟಿ ಧನದ ಲೆಕ್ಕಾಚಾರ ಮಾಡಿದರೂ, ನಮ್ಮ ವೆಚ್ಚಕ್ಕೆ ನಮ್ಮ ಕಿಸೆಯಲ್ಲಿ ಉಳಿಯುವುದೆಷ್ಟು ಎನ್ನುವುದನ್ನು ನೋಡಬೇಕು ಎಂದು ಹೇಳಿ, ಪರಬ್ರಹ್ಮವಸ್ತುವು ನಮ್ಮ ಮನದಲ್ಲಿ ಗಟ್ಟಿಯಾಗಿ ಉಳಿಯಬೇಕೆನ್ನುವ ವಿಚಾರವನ್ನು ಮಂಡಿಸಿದ್ದಾರೆ ಈ ಮುಕ್ತಕದಲ್ಲಿ,





ಪರಮಾತ್ಮನ ವಿಷಯ ಮತ್ತು ತತ್ವವನ್ನು ತಿಳಿಯುವ ನಿಟ್ಟಿನಲ್ಲಿ ನಾವು ಬೇಕಾದಷ್ಟು ಪುಸ್ತಕಗಳನ್ನು ಓದಬಹುದು, ಪ್ರವಚನಗಳನ್ನು ಕೇಳಬಹುದು. ವ್ರತ, ನೇಮ, ನಿಷ್ಠೆ, ಜಪ, ತಪ, ಧ್ಯಾನಗಳನ್ನು ಮಾಡಬಹುದು, ನಾವು ವಿಚಾರಗಳನ್ನು ತಿಳಿದುಕೊಳ್ಳಬಹುದು ಮತ್ತು ತತ್ವವನ್ನು ಅರಿಯಬಹುದು. ಅರಿತರೆ ಸಾಲದು ಅದು ನಮ್ಮ ಅಂತರಂಗಕ್ಕೆ ಇಳಿಯಬೇಕು. ಹಾಗೆ ಇಳಿದದ್ದು ಅಲ್ಲೇ ಉಳಿಯಬೇಕು. ನಂಬಿಕೆ ದೃಢವಾಗಬೇಕು. ಉಳಿದದ್ದು ಒಳಗೆ ಬೆಳದು ಅದನ್ನು ನಾವು ನಮ್ಮದಾಗಿಸಿಕೊಳ್ಳಬೇಕು. ಆ ತತ್ವವೇ ನಮ್ಮ ಸ್ವಾಭಾವವಾಗಬೇಕು. ಆಗ ಅದು ಸಾಧನೆಯಾಗುತ್ತದೆ. ಆದರೆ ನಾವು ಓದಿ, ಕೇಳಿ, ಆಚರಿಸಿದ ಬಹಳಷ್ಟರಲ್ಲಿ ಎಷ್ಟು ನಮ್ಮ ಸ್ವಭಾವವಾಗಿದೆ ಎಂದು ನೋಡಿದರೆ 'ಅಣು'ವಷ್ಟೂ ಇರುವುದಿಲ್ಲ . ನಾವು ಅಧಿಕವಾಗಿ ಸಾಧನೆ ಮಾಡಿದರೆ ನಮ್ಮ ಸ್ವಭಾವವೂ ಸನ್ಮಾರ್ಗದಲ್ಲಿ ವಿಫುಲವಾಗಿ ಬೆಳೆಯುತ್ತದೆ.

ಕೋಟಿ ಕೋಟಿ ಹಣದ ಲೆಕ್ಕಾಚಾರವನ್ನು ಸದಾ ಬಾಯಲ್ಲಿ ಮಾಡಿತ್ತಿದ್ದರೆ, ನಮ್ಮ ಜೇಬಿಗೆ ಏನಾದರೂ ಇಳಿಯುತ್ತದೆಯೇ? ಉದಾ, ಬ್ಯಾಂಕಿನಲ್ಲಿ 'ಖಜಾಂಚಿ' (Cashier) ಬೆಳಗಿನಿಂದ ಸಂಜೆಯವರೆಗೆ ಕೋಟಿ ಕೋಟಿ ಹಣವನ್ನು ಕೊಟ್ಟು-ತೆಗೆದು, ಮಾಡಬಹುದು ಆದರೆ ಅದಾವುದೂ ಅವನ ಜೇಬಿಗೆ ಇಳಿಯುವುದಿಲ್ಲ ಅಲ್ಲವೇ? ಅವನ ಜೇಬಿಗೆ ಇಳಿಯುವುದೇನಾದರೂ ಇದ್ದರೆ, ಅದು ಕೇವಲ ಅವನ ಸಂಬಳ. ಅವನು ವೃತ್ತಿಯಲ್ಲಿ ಬೆಳೆದಂತೆಲ್ಲಾ ಅವನ ಸಂಬಳವೂ ಹೆಚ್ಚಾಗುತ್ತದೆ ಅಲ್ಲವೇ? ಹಾಗೆಯೇ ನಾವೂ ಅಂತರಂಗದಿಂದ ಬೆಳೆದರೆ ನಮ್ಮ ಒಳಗೆ ಉಳಿಯುವ 'ಭತ್ಯ'ವೂ ಅಧಿಕವಾಗಿ, ಅದು ನಮ್ಮ ಸ್ವಭಾವಾಗಿ ಆ ಪರಮಾತ್ಮ ವಸ್ತುವನ್ನು, ಸರಿಯಾಗಿ ಅರ್ಥಮಾಡಿಕೊಂಡು, ಒಳಗೆ ಅನುಸಂಧಾನಮಾಡಿಕೊಳ್ಳುವ ಸಾಧ್ಯತೆಗಳು ಇರುತ್ತವೆ.

ತತ್ವ ಒಳಗೆ ಇಳಿದು, ನಾವು ಬೆಳೆದರೆ ಆ ತತ್ವವೂ ಅಂತರಂಗದಲ್ಲೇ ಮತ್ತಷ್ಟು ಬೆಳೆಯುತ್ತದೆ ಮತ್ತು ನಮ್ಮ ಬೆಳವಣಿಗೆಗೆ ಪೂರಕವಾಗಿರುತ್ತದೆ. ಆದರೆ ಇದು ಹೀಗಾಗಬೇಕಾದರೆ, ಒಂದೇ ದಿನ ನಮ್ಮಲ್ಲಿ ಅರಿವು ಮೂಡಿ ಬದಲಾವಣೆ ಬಂದುಬಿಡುವುದಿಲ್ಲ. ನಿರಂತರ ಪ್ರಯತ್ನವನ್ನು ಮಾಡುತ್ತಾ "ಎಂದಾದರೂ ಒಂದು ದಿನ ನಮ್ಮಲ್ಲೂ ಬದಲಾವಣೆ ಬರಬಹುದು" ಎಂದು ಅನುಸಂಧಾನದ ಹಾದಿಯಲ್ಲೇ ಇರಬೇಕು. ಹಾಗೆ ಇದ್ದರೆ ಎಂದೋ ಒಂದು ದಿನ ನಾವೂ ಬೆಳೆಯಬಹುದು, ಜ್ಞಾನಿಗಳಾಗಬಹುದು. ಪ್ರಯತ್ನ ಮಾತ್ರ ನಿರಂತರವಾಗಿರಬೇಕು.

| |
|---|
| ಔಂ |

| | |
|---|---|
| ಕಗ್ಗರಸಧಾರೆ | ಸಾರ್ವಭೌಮಗುಣ 754 – 758 |

**ಮುಕ್ತಕ - 756**

**ಸಾರ್ವಭೌಮತೆ ನಾಲ್ಕು ಗುಣಕೆ ಗುಣರಾಜ್ಯದಲಿ ।**

**ಧೈರ್ಯ ಮೊದಲಿನದೆರಡನೆಯದು ಮತಿಯೋಜೆ ॥**

**ಸರ್ವದಯ ಮೂರನೆಯದದುವೆ ನೀತಿಯ ಮೂಲ ।**

**ನಿರ್ಮಮತ್ವವೆ ಮುಕುಟ - ಮಂಕುತಿಮ್ಮ ॥**

ಮೊದಲಿನದೆರಡನೆಯದು=ಮೊದಲಿನದು+ಎರಡನೆಯದು ಮತಿಯೋಜೆ =ಮತಿಯ+ಓಜೆ,

ಮೂರನೆಯದದುವೆ=ಮೂರನೆಯದು+ಅದುವೆ.

ಓಜೆ=ಶಕ್ತಿ

ಗುಣಗಳಲ್ಲಿ ನಾಲ್ಕು ಗುಣಗಳು ಅತ್ಯುತ್ತಮ ಗುಣಗಳು. ಮೊದಲನೆಯದು ಧೈರ್ಯ, ಎರಡನೆಯದು ಬುದ್ಧಿಯ ಶಕ್ತಿ, ನೀತಿಯ ಮೂಲವಾದ ಸರ್ವರಲ್ಲೂ ದಯಾಗುಣ ಮೂರನೆಯದು ಮತ್ತು ಮಿಕ್ಕೆಲ್ಲಕ್ಕೂ ಕಿರೀಟಪ್ರಾಯವಾಗಿರುವುದು, ನಿರ್ಮಮತೆ ನಾಲ್ಕನೆಯ ಗುಣ ಎಂದು ಆತ್ಮೋದ್ಧಾರಕ್ಕೆ ಮನುಷ್ಯನಲ್ಲಿ ಇರಬೇಕಾದ ಗುಣಲಕ್ಷಣಗಳನ್ನು ನಮಗೆ ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು.

'ಪರಬ್ರಹ್ಮ 'ವಸ್ತುವಿನ ಅನ್ವೇಷಣೆಯಲ್ಲಿ ಮುಖ್ಯವಾಗಿ ಬೇಕಾದದ್ದು ನಮಗೆ ಧೈರ್ಯ. ಈ ಜಗತ್ತಿನ ಮನೋರಂಜಕ ಸೆಳೆತಗಳಿಗೆ ಬಲಿಯಾಗದೆ, ಇವುಗಳನ್ನೆಲ್ಲ ಮೆಟ್ಟಿ ನಿಂತು ಮುನ್ನುಗ್ಗಬೇಕಾದರೆ ಬಹಳ ಧೈರ್ಯ ಬೇಕು. ನಾವು ಸದಾಕಾಲ ನಮ್ಮ ಯಾವುದನ್ನೋ ಕಳೆದುಕೊಳ್ಳುವ ಭಯದಿಂದ ಪರದಾಡುತ್ತಿರುವಾಗ, ಅಂಥಹ ಭಯವನ್ನು ನೀಗಿಸಿಕೊಂಡು ಮುನ್ನುಗ್ಗಬೇಕಾದರೆ ಧೈರ್ಯ ಬೇಕು.

ಜೀವನದಲ್ಲಿ ನಮ್ಮ ಮುಂದೆ ಬಹಳಷ್ಟು ವಸ್ತುಗಳು, ವಿಷಯಗಳು ಮತ್ತು ವ್ಯಕ್ತಿಗಳು ಕಾಣಸಿಗುತ್ತಾರೆ. ಮನಸ್ಸು ಅವುಗಳ ಕಡೆ ಸೆಳೆಯಲ್ಪಡುತ್ತದೆ. ಆದರೆ ನಮ್ಮ ಮೂಲ ಗಮ್ಯವನ್ನು ಸೇರುವ ನಮ್ಮ ಪ್ರಯತ್ನಕ್ಕೆ ಅಡ್ಡಿಯಾಗಿ, ಮಾರಕವಾಗಿರುವುದನ್ನು ವಿವೇಚನೆಯಿಂದ ಬಿಟ್ಟು ಪೂರಕವಾದದ್ದನ್ನು ಹಿಡಿದುಕೊಂಡಾಗ ಮಾತ್ರ ನಮ್ಮ ಆಧ್ಯಾತ್ಮಿಕ ಏಳಿಗೆ ಸಾಧ್ಯ. ಹಾಗಾಗಿ ವಿವೇಚನೆಯ ತವರಾದ 'ಬುದ್ಧಿಯ ಶಕ್ತಿ ನಮಗೆ ಬಹಳ ಮುಖ್ಯವಾಗಿ
ಬೇಕಾದ ಎರಡನೆಯ ಗುಣ.

'ತನ್ನಂತೆ ಪರರ ಬಗೆದೊಡೆ' ಎನ್ನುತ್ತಾನೆ ಸರ್ವಜ್ಞ ಕವಿ. ಎಂದರೆ ಈ ಜಗತ್ತಿನಲ್ಲಿರುವುದೆಲ್ಲವೂ ಬ್ರಹ್ಮಭೂತವಾಗಿದೆ, ನಾನು ನೋಡಬೇಕಾದುದೆಲ್ಲವೂ ಪರಬ್ರಹ್ಮವೇ. ಆದ್ದರಿಂದ ಸಕಲ ಪ್ರಾಣಿಗಳೆಲ್ಲರಲ್ಲೂ ದಯೆ ಕರುಣೆ ಪ್ರೀತಿಯನ್ನು ಬೆಳೆಸಿಕೊಳ್ಳುವುದು, ಅಗತ್ಯವಾಗಿ 'ಆತ್ಮವತ್ ಸರ್ವ ಭೂತೇಷು ' ಎನ್ನುವ ಭಾವ ಬೆಳೆಸಿಕೊಳ್ಳಲು ಉಪಯುಕ್ತವಾಗುತ್ತದೆ. ಈ ಗುಣವೇ ನಮ್ಮ ಸಂಸ್ಕೃತಿಯಲ್ಲಿ ಹೇಳಲ್ಪಟ್ಟಿರುವ ಸಕಲ ನೀತಿ ಶಾಸ್ತ್ರಗಳಿಗೂ ಆಧಾರ, ಜಗತ್ತನ್ನು ನೋಡುವ ನಮ್ಮ ದೃಷ್ಟಿಯಲ್ಲಿ ಭೇಧವನ್ನು ನೀಗಿಸಿಕೊಂಡು ಎಲ್ಲರಲ್ಲೂ ಪರಬ್ರಹ್ಮವನ್ನೇ ಕಾಣಲು ಬೇಕಾದುದೇ 'ಸರ್ವ ದಯಾ' ಎಂಬ ಮೂರನೆಯ ಗುಣ.

ಇನ್ನು ಕಡೆಯದಾಗಿ, ಮೇಲೆ ಹೇಳಿದ ಮೂರೂ ಗುಣಗಳಿಗೆ ಕಿರೀಟಪ್ರಾಯವಾದ ನಿರ್ಮಮತೆ' ಎನ್ನುವುದೇ ನಾಲ್ಕನೆಯ ಗುಣ. 'ತನ್ನದು' ಎನ್ನುವ ಸಂಕುಚಿತ ಭಾವದಿಂದ ಹೊರಬರುವ ಧೈರ್ಯ ಮತ್ತು ಬುದ್ಧಿ ನಮಗೆ ಇದ್ದಾಗ ಸಕಲ ಜೀವರಾಶಿಗಳಲ್ಲೂ ಆ ಪರಮಬ್ರಹ್ಮನನ್ನೇ ಕಾಣುವ ಧೈರ್ಯ ಮತ್ತು ಬುದ್ಧಿಯಿಂದ "ಎಲ್ಲರೊಳಗೊಂದಾಗು' ವ ವಿಶಾಲ ಮನೋಭಾವ ಬಂದಾಗ ನಮ್ಮಲ್ಲಿ 'ನಾನು ಮತ್ತು ಅನ್ಯರು' ಎನ್ನುವ ಭಾವ ನಶಿಸಿ, ಯಾವುದರ ಮೇಲೂ ಮೋಹ, ಮಮತೆ, ಮಮಕಾರದ ಬಂಧನವಿಲ್ಲದೆ ಶುದ್ಧರಾಗಿ ನಮ್ಮ ಅಂತರಂಗದ ಪ್ರಯಾಣ ಉತ್ತರೋತ್ತರವಾಗಿ ನಡೆಯುವುದರಲ್ಲಿ ಸಂದೇಹವೇ ಇಲ್ಲ.

ಆದರೆ ಹೇಳುವುದು, ಪರರಿಗೆ ಭೋಧಿಸುವುದು, ಪುಟಗಟ್ಟಲೆ ಬರೆಯುವುದು ಬಹಳ ಸುಲಭ, ನಮ್ಮ ನಮ್ಮ ಜೀವನದಲ್ಲಿ ಈ ಗುಣಗಳನ್ನು ಅಳವಡಿಸಿಕೊಂಡು ಅದರಂತೆ ನಡೆಯುವುದು ಬಹಳ ಕಷ್ಟ ತ್ರಿಗುಣಗಳ ಸೆಳೆತದಿಂದ ಹೊರಬಂದರೆ ಸಾಧ್ಯ. ನಿರಂತರ ಪ್ರಯತ್ನದಿಂದ ಸಾಧಿಸಬಹುದು. ಪ್ರಯತ್ನ ಪಡಬೇಕು ಅಷ್ಟೇ.

**ಮುಕ್ತಕ - 757**

**ವ್ಯಾಮೋಹವಿಲ್ಲದ ಪ್ರೇಮ ನಿರ್ಭರವಿರಲಿ |**
**ಭೀಮಸಾಹಸವಿರಲಿ ಹಗೆತನವನುಳಿದು ||**
**ನೇಮನಿಷ್ಠೆಗಳಿರಲಿ ಡಂಬಕಠಿಣತೆ ಬಿಟ್ಟು |**
**ಸೌಮ್ಯವೆಲ್ಲೆಡೆಯಿರಲಿ - ಮಂಕುತಿಮ್ಮ ||**

ವ್ಯಾಮೋಹವಿಲ್ಲದ=ವ್ಯಾಮೋಹವು+ಇಲ್ಲದ, ನಿರ್ಭರವಿರಲಿ=ನಿರ್ಭರವು+ಇರಲಿ,
ಹಗೆತನವನುಳಿದು=ಹಗೆತನವನು+ಉಳಿದು, ನೇಮನಿಷ್ಠೆಗಳಿರಲಿ=ನೇಮ+ನಿಷ್ಠೆಗಳು+ಇರಲಿ,
ಸೌಮ್ಯವೆಲ್ಲೆಡೆಯಿರಲಿ=ಸೌಮ್ಯವು+ಎಲ್ಲೆಡೆ +ಇರಲಿ,
ನಿರ್ಭರವು=ಭರಿಸುವುದು,

ಜಗತ್ತಿನಲ್ಲಿ ನಾವು ಅನ್ಯರಿಗೆ ತೋರುವ ಪ್ರೇಮಕ್ಕೆ ವ್ಯಾಮೋಹದ ಲೇಪನವಿರಬಾರದು, ಸಾಹಸದಿಂದ ಕೆಲಸಮಾಡಬೇಕೇ ಹೊರತು ಅದಕ್ಕೆ ದ್ವೇಷದ ಲೇಪನವಿರಬಾರದು, ನಮ್ಮ ಆಚಾರ ವಿಚಾರಗಳಲ್ಲಿ ನಿಯಮ ನಿಷ್ಠೆ ಇರಬೇಕು, ಆದರೆ ಅದಕ್ಕೆ ಡಂಬಾಚಾರದ, ಅತಿಯಾದ ಪ್ರದರ್ಶನದ ಆಸೆಯ ಲೇಪನವಿರಬಾರದು, ಎಂದು ಹೇಳುತ್ತಾ ನಮ್ಮ ಎಲ್ಲ ನಡವಳಿಕೆಯಲ್ಲೂ ಸೌಮ್ಯತೆಯಿರಬೇಕು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಪ್ರೇಮಕ್ಕೆ ವ್ಯಾಮೋಹದ ಬಣ್ಣವನ್ನು ಹಚ್ಚಿಕೊಂಡರೆ ಕರ್ತವ್ಯ ಲೋಪವಾಗುತ್ತದೆ. ಗಂಡ ಹೆಂಡಿರ ನಡುವಿನ ಪ್ರೇಮ, ತಂದೆತಾಯಿಗಳಿಗೆ ಮಕ್ಕಳ ಮೇಲಿನ ಪ್ರೇಮ, ನೆರೆಹೊರೆಯವರ, ಸ್ನೇಹಿತರ ಮೇಲಿನ ಪ್ರೇಮ ಪ್ರೇಮಾಗಿರಬೇಕೇ ಹೊರತು ವ್ಯಾಮೋಹವಾಗಬಾರದು. ತಂದೆತಾಯಿಗಳಿಗೆ ಮಕ್ಕಳ ಮೇಲೆ ಪ್ರೇಮಕ್ಕಿಂತ





ವ್ಯಾಮೋಹವೇ ಹೆಚ್ಚಾದರೆ ಮಕ್ಕಳು ಮಾಡುವ ತಪ್ಪುಗಳನ್ನು ಗೌಣವಾಗಿ ನೋಡುವ ಅಥವಾ ಸಮರ್ಥಿಸುವಂತೆ ಆಗಿ ಆ ಮಕ್ಕಳ ಸರ್ವನಾಶಕ್ಕೆ ಕಾರಣರಾಗುವುದನ್ನು ನಾವು ನಮ್ಮ ಪರಿಚಯದವರ ವೃತ್ತದಲ್ಲಿ ಕಾಣುತ್ತೇವಲ್ಲವೇ? ಹಾಗಾಗಿ ಪ್ರೇಮ, ಪ್ರೇಮವಾಗಿರಬೇಕೇ ಹೊರತು ಮೋಹವಲ್ಲ.

ಇನ್ನು ನಮ್ಮ ಕೆಲಸಗಳನ್ನು ಮಾಡುವಾಗ ಧೈರ್ಯದಿಂದ ಮಾಡಬೇಕು ಎನ್ನುವುದು ಒಪ್ಪುವಂತಹ ಮಾತು. ಧೈರ್ಯದಿಂದ ಕೆಲಸವನ್ನು ಸಾಧಿಸುವ ಹಾದಿಯಲ್ಲಿ ನಮಗೆ ಪ್ರತಿಸ್ಪರ್ಧಿಗಳು ಇರಬಹುದು. ನಾವು ನಮ್ಮ ಧ್ಯೆಯ ಸಾಧನೆಗೆ ಧೈರ್ಯವನ್ನು ಸಾಹಸವನ್ನು ತೋರಬೇಕೇ ಹೊರತು ಅನ್ಯರನ್ನು ದ್ವೇಷಿಸುವ ಗುಣವಿರಬಾರದು. ಹಾಗೆ ದ್ವೇಷವನ್ನು ಮನದೊಳಗೆ ತಂದುಕೊಂಡರೆ ಅದು ನಮ್ಮನ್ನು ಸುಡುತ್ತಾ ನಮ್ಮ ಕಾರ್ಯ ಕ್ಷಮತೆಯನ್ನು ಕುಂದಿಸುತ್ತದೆ. ಯಾವುದೇ ಧ್ಯೆಯವನ್ನು ಸಾಧಿಸಬೇಕೆನ್ನುವವನಿಗೆ ಸಾಹಸವಿರಬೇಕೇ ಹೊರತು ದ್ವೇಷವಿರಬಾರದು ಎನ್ನುವುದೇ ಸೂಕ್ತ.

ನಮ್ಮ ಸಮಾಜದಲ್ಲಿ ನೀತಿಯ ಉಗಮ ಸ್ಥಾನವಾದ ನಿಯಮ ನಿಷ್ಠೆಗಳು, ಜಪ, ತಪ, ಧ್ಯಾನ, ಸಾಧನೆಗಳು ವ್ಯಕ್ತಿಯ ವಿಕಾಸಕ್ಕೆ ಪೂರಕವಾಗಿರಬೇಕು. ಆದರೆ ಇವುಗಳ ಆಚರಣೆಯಲ್ಲಿ ಕಾಠಿಣ್ಯವಿರಬಾರದು. ತನ್ನನ್ನು ತಾನು ಹಿಂಸೆಗೊಳಪಡಿಸಿಕೊಂಡು, ಸುತ್ತಲಿನವರನ್ನೂ ಕಷ್ಟಪಡಿಸುತ್ತಾ 'ಮಡಿ ಮಡಿ' ಎಂದು ಹಾರುತ್ತಾ, ತಾನು ಮಾಡುವುದು ಬಹಳ ಉತ್ತಮವಾದ ಕೆಲಸ ಎನ್ನುವ ಡಂಬಾಚಾರದ ಸೋಗಿಲ್ಲದೆ ಸಾಧನೆಯಾಗಬೇಕು. “ಉದರವೈರಾಗ್ಯ'ಎನ್ನುವ ಪದದಲ್ಲಿ ಪುರಂದರದಾಸರು ಈ ಡಾಂಬಿಕತನವನ್ನು ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಸತ್ಯದ ಶೋಧನೆಗೆ ಡಾಂಬಿಕತೆಯಿಲ್ಲದ ಸಾಧನೆಯಾಗಬೇಕು.

ಹೀಗೆ, ಪ್ರೇಮದಲ್ಲಿ ವ್ಯಾಮೋಹದ, ಸಾಹಸದಲ್ಲಿ ದ್ವೇಷದ, ನೇಮ ನಿಷ್ಠೆಗಳಲ್ಲಿ ಕಠಿಣತೆಯ ಬಣ್ಣ ಬಳಿದುಕೊಳ್ಳದೆ, ನಾವು ಸೌಮ್ಯವಾಗಿ ಶುದ್ಧವಾಗಿ ಇದ್ದರೆ ಪ್ರತೀ ವಿಷಯದಲ್ಲೂ ನಮಗೆ ಸಂತೋಷ ಸಿಗುತ್ತದೆ ಮತ್ತು ಆ ಸಂತೋಷವೇ ನಮ್ಮನ್ನು ಆನಂದ ಮತ್ತು ಬ್ರಹ್ಮಾನಂದದವರೆಗೂ, ಕೊಂಡುಹೋಗುತ್ತದೆ. ಇದು ಕೇವಲ ಸಾಧನೆಯಿಂದ ಬರುವ ಮತ್ತು ಅನುಭವದಿಂದ ಸಿಗುತ್ತದೆ.

**ಮುಕ್ತಕ – 758**

**ಔದಾರ್ಯ ತಾಯಿ ನೀತಿಗೆ, ಧೈರ್ಯವೇ ತಂದೆ |**

**ಸ್ವಾಧಿಪತ್ಯದೆ ನೀನು ಬಾಳನಾಳುವೊಡೆ ||**

**ಹೋದುದನು ನೆನೆಯದಿರು, ಬರುವುದಕ್ಕೆ ಸಿದ್ಧನಿರು |**

**ಅದನಿತು ಸಂತೋಷ ? ಮಂಕುತಿಮ್ಮ ||**





ಸ್ವಾಧಿಪತ್ಯದೆ=ಸ್ವ+ಆಧಿಪತ್ಯದೆ, ಬಾಳನಾಳುವೊಡೆ=ಬಾಳನು+ಆಳುವೊಡೆ, ಅದನಿತು=ಆದ+ಅನಿತು,

ಆಳುವೊಡೆ=ಆಳುವಂತಾದರೆ,

ನಿನ್ನ ಬಾಳನ್ನು ನಿನ್ನಿಷ್ಟದಂತೆ ನೀನೇ ನಡೆಸಲಾದರೆ ನೀತಿಗೆ ಔದಾರ್ಯವೇ ತಾಯಿ, ಧೈರ್ಯವೇ ತಂದೆ. ಗತಿಸಿಹೋದದ್ದನ್ನು ನೆನೆಯದೆ ಮುಂಬರುವುದಕ್ಕೆ ಸದಾ ಸಿದ್ಧನಿರು ಎಂದು ಹೇಳುತ್ತಾ ಬಾಳಿನ ಕೆಲವು ಸೂತ್ರಗಳನ್ನು ನಮಗೆ ಅರುಹಿದ್ದಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು

ನಮ್ಮಲ್ಲಿರಬೇಕಾದ ನಾಲ್ಕು ಅತ್ಯುತ್ತಮ ಗುಣಗಳನ್ನು ಹೇಳಿ, ನಿರ್ಮಮತ್ವವೆ, ಮುಕುಟ ಎಂದಿದ್ದಾರೆ ಮುಕ್ತಕ 756 ರಲ್ಲಿ, ಲೋಕದಲ್ಲಿ ನಾವು ನಡೆಸುವ ಎಲ್ಲಾ ಕೆಲಸ ಕಾರ್ಯಗಳನ್ನು ಮೋಹವಿಲ್ಲದೆ ನಡೆಸ ಬೇಕೆನ್ನುವುದೇ ಅಲ್ಲಿನ ಆಶಯ. ಆದರೆ ಕಾರ್ಯವನ್ನು ಮಾಡದೆ ಇರುವಂತಿಲ್ಲ. ಹಾಗೆ ಮಾಡುವಾಗ ಧೈರ್ಯ ನಮಗೆ ಬೇಕು, ಆದರೆ ಅದು ದ್ವೇಷ ರಹಿತವಾಗಿರಬೇಕು. ಅಂದರೆ ಎಲ್ಲರಲ್ಲೂ ಪ್ರೀತಿ ಮತ್ತು ದಯೆಯಿಂದ ಕೂಡಿ, ಆದರೂ ಯಾರೊಂದಿಗೂ ಅತಿಯಾದ ವ್ಯಾಮೋಹವಿಲ್ಲದೇ ಇರಬೇಕು. ಅಂತಹ ಜೀವನವನ್ನು ನಾವು ನಡೆಸಬೇಕಾದರೆ ನಮಗೆ ಸಮಾಜದಲ್ಲಿ ಸಾಕಷ್ಟು ವಿರೋಧ, ಅಡ್ಡಿ ಆತಂಕಗಳು ಎದುರಾಗಬಹುದು. ಅವುಗಳನ್ನೆಲ್ಲಾ ಎದುರಿಸುತ್ತೇನೆ, ಎದುರಿಸಿ ನಿವಾರಿಸಿಕೊಂಡು ನಾನು ಮುನ್ನುಗ್ಗುತ್ತೇನೆ, ಎನ್ನುವ ಧೈರ್ಯ ನಮಗೆ ಇರಬೇಕು.

ಹಾಗೆ ನಾವು ಮುನ್ನುಗ್ಗಬೇಕಾದರೆ ನಾವು ಮಾಡುವ ಕೆಲಸದ ವಿಧಾನವನ್ನು ನಾವೇ ರೂಪಿಸಿಕೊಳ್ಳುವಂತೆ ಇರಬೇಕು. ಪರರ ಸಲಹೆಯನ್ನು ನಾನು ಕೇಳುವುದಿಲ್ಲ ಎನ್ನುವ ಉದ್ಧಟತನವಿಲ್ಲದೆ, 'ಸಬ್ ಕಿ ಸುನೋ ಅಪ್ಪಿ ಕರೋ' ಎನ್ನುವಂತೆ ಪರರ ಸಲಹೆಗಳನ್ನೂ ಕೇಳಿದರೂ, ನಮ್ಮ ನಿರ್ಧಾರಗಳನ್ನು ನಾವೇ ತೆಗೆದುಕೊಳ್ಳುವಂತಿರಬೇಕು. ನಮ್ಮ ನಿರ್ಧಾರವನ್ನು ನಾವೇ ತೆಗೆದುಕೊಂಡು ನಮ್ಮದೇ ರೀತಿಯಲ್ಲಿ ನಾವು, ಮೋಹ ದ್ವೇಷಗಳಂತಹ ಭಾವಗಳ ಬಿಟ್ಟು ನೇರವಾಗಿ ಕೆಲಸಕಾರ್ಯಗಳನ್ನು ಮಾಡಿದರೆ ಆಗ ನಾವು ಮಾಡಿದ ಕೆಲಸದಿಂದ ಬರುವ ಫಲಕ್ಕೆ ನಾವೇ ಬಾಧ್ಯರು ಮತ್ತು ಭಾಜನರಾಗುತ್ತೇವೆ. ಲಾಭವಾಗಲಿ ನಷ್ಟವಾಗಲಿ ಎಲ್ಲಕ್ಕೂ ನಾವೇ ಹೊಣೆ ಆಗುತ್ತೇವೆ.

ಅಚಿತಹ ಸ್ಥಿತಿಯಲ್ಲಿ ಸುಖ ಬಂದರೆ ಔದಾರ್ಯದಿಂದ ಎಲ್ಲರಲ್ಲೂ ಹಂಚಿಕೊಂಡು ಅನ್ಯರಿಗೂ ಸಂತಸವನ್ನು ನೀಡಬಹುದು. ಆದರೆ ನಷ್ಟವಾಗಿ ಕಷ್ಟಬಂದರೆ, ನನ್ನಿಂದ ಅನ್ಯರಿಗೆ ತೊಂದರೆಯಾಗಬಾರದು ಎನ್ನುವ ಔದಾರ್ಯವನ್ನು ತೋರಿ ಎಲ್ಲ ಕಷ್ಟವನ್ನೂ ತಾನೇ ಸಹಿಸಿ, ಅನುಭವಿಸಿ ಗತಿಸಿ ಹೋದದ್ದನ್ನು ನೆನೆಯದೆ, ಮುಂದೆ ಬರುವ ಎಲ್ಲಕ್ಕೂ ನಾ ಸಿದ್ಧ, ಎನ್ನುವ ಮನೋಧಾರ್ಡವನ್ನು ಬೆಳೆಸಿಕೊಂಡು ಎಷ್ಟು ಸುಖ ಸಿಕ್ಕರೆ ಅಷ್ಟೇ ಸಾಕು ಎನ್ನುವ ತೃಪ್ತಿ ಇರಬೇಕು. ಆ ರೀತಿ ಬದುಕುವುದು ಆದರ್ಶ ಜೀವನ. ಅಂತಹ ಬದುಕನ್ನು ಬದುಕಲು ನಮ್ಮನ್ನು ಸೆಳೆಯುವ ಹಲವಾರು ರೀತಿಯ ಬದುಕಿನ ಸೆಳೆತಗಳು ಬಿಡುವುದಿಲ್ಲ. ಆ ಸೆಳೆತಗಳ ಬಲೆಗೆ ಸಿಲುಕಬಾರದು, ಸಿಕ್ಕರೂ ಅವುಗಳಿಂದ ಬಿಡಿಸಿಕೊಂಡು ಬರಲು ಬಹಳ ಧೈರ್ಯ ಬೇಕು. ಆ ಧೈರ್ಯ ನಮ್ಮಲ್ಲಿ ಇದ್ದರೆ ಆದರ್ಶ ಜೀವನ" ವನ್ನು ನಮ್ಮದಾಗಿಸಿಕೊಳ್ಳಬಹುದು.

**ಮುಕ್ತಕ - 759**

**ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು |**

**ಗುರುತಿಸೊಳಿತಿರುವುದನು ಕೇಡುಗಳ ನಡುವೆ ||**

**ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು |**

**ಹರುಷಕದೆ ದಾರಿಯೆಲೊ - ಮಂಕುತಿಮ್ಮ ||**

ಬರದಿಹುದರೆಣಿನಿಕೆಯಲಿ=ಬರದೆ+ಇಹುದರ+ಎಣಿಕೆಯಲಿ, ಬಂದಿಹುದ=ಬಂದು+ಇಹುದ,

ಮರೆಯದಿರು=ಮರೆಯದೆ+ಇರು, ಗುರುತಿಸೊಳಿತಿರುವುದನು=ಗುರುತಿಸು+ಒಳಿತು+ಇರುವುದನು,

ಬಾರೆನೆಂಬುದನು=ಬಾರೆನು+ಎಂಬುದನು,

ಹರುಷಕದ=ಹರುಷಕೆ+ಅದೆ, ದಾರಿಯೆಲೊ-ದಾರಿಯು+ಎಲೊ,

ಎಣಿಕೆಯಲಿ=ಲೆಕ್ಕಾಚಾರದಲಿ, ಬಾರೆನು=ಬರುವುದಿಲ್ಲ.

ಕೈಗೆ ಸಿಗದೇ ಇರುವುದರ ಲೆಕ್ಕಾಚಾರದಲ್ಲಿ ಕೈಲಿರುವುದನ್ನು ಮರೆಯದೆ ಇರು. ನಮಗೆ ಕಾಣುವ ಬಹಳಷ್ಟು ಕೇಡುಗಳ ಮದ್ಯೆ ಒಳ್ಳೆಯದನ್ನು ಗುರುತಿಸು. ಕೈಗೆ ಸಿಗುವುದಿಲ್ಲ, ಎಟುಕುವುದಿಲ್ಲ ಎನ್ನುವುದನ್ನು ಬಿಟ್ಟು ಕೈಯಲ್ಲೇ ಇರುವ ಭಾಗ್ಯವನ್ನು ತೃಪ್ತಿಯಿಂದ ಅನುಭವಿಸು. ಆನಂದಕ್ಕೆ, ಸಂತೋಷಕ್ಕೆ ಇದೇ ದಾರಿ ಎಂದು, ನಿಜವಾದ ಹರುಷಕ್ಕೆ ದಾರಿಯನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಜಗತ್ತಿನ ಪ್ರತೀ ಪ್ರಾಣಿಯೂ ಸಂತೋಷ ಅಥವಾ ಆನಂದದ ಹಿಂದೆಯೇ ಓಡುತ್ತದೆ. ಮನುಷ್ಯನೂ ಸಹ ಅಂತಹ ಓಟದಲ್ಲಿ ಅನಾದಿಕಾಲದಿಂದಲೂ ನಿರತನಾಗಿದ್ದಾನೆ . ಕಾಲಕಾಲಕ್ಕೆ ಇವನಿಗೆ ಸಂತೋಷವನ್ನು ಕೊಡುವ ವಸ್ತು ಮತ್ತು ವಿಷಯಗಳು ಬದಲಾಗಿವೆಯೇ ಹೊರತು ಇವನ ಓಟ ಮಾತ್ರ ನಿಂತೇ ಇಲ್ಲ. ಎಲ್ಲಿಯ ತನಕ ಮನುಷ್ಯ 'ನನಗೆ ಇಷ್ಟು ಸಾಕು' ಎಂದು ಒಂದು ತೃಪ್ತ ಭಾವದಿಂದ ಒಂದೆಡೆ ನಿಲ್ಲುವುದಿಲ್ಲವೋ ಅಲ್ಲಿಯ ತನಕ ಇವನ ಓಟ ಸಾಗುತ್ತಲೇ

ಇರುತ್ತದೆ ಮತ್ತು ಇವನು ಬಯಸುವ ಸುಖ ಇವನಿಗೆ ಸಿಗುವುದೇ ಇಲ್ಲ. ಏಕೆಂದರೆ ಇವನ ಬಯಕೆಗಳ, ಆಸೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಷ್ಟಾದರೆ ಮತ್ತಷ್ಟರಾಸೆ, ಅಷ್ಟಾದರೆ ಇನ್ನಷ್ಟರಾಸೆ ಎನ್ನುವಂತೆ.

"ಕೈಯಲ್ಲಿರುವ ಒಂದು ಹಕ್ಕಿ ಗಿಡದಲ್ಲಿರುವ ಎರಡಕ್ಕಿಂತ ಉತ್ತಮ"( a bird in the hand is worth two in the bush) ಎನ್ನುವ ಒಂದು ಆಂಗ್ಲ ಗಾದೆ ಇದೆ. ಕೈಲಿರುವುದು ನಾವು ನಮ್ಮ ಸ್ವತ ಕಷ್ಟದಿಂದ ಪಡೆದದ್ದು. ಅದನ್ನು ಜತನವಾಗಿಟ್ಟುಕೊಂಡು ಅದನ್ನೇ ಅನುಭವಿಸಬೇಕು. ತೃಪ್ತಿಪಡಬೇಕು. ಅದನ್ನು ಬಿಟ್ಟು ಇರುವುದನ್ನೂ ಅನುಭವಿಸಿ ಸಂತೋಷಪಡದೆ, ಕೈಗೆ ಎಟುಕದೇ ಇರುವುದನ್ನು ಅರಸಿ ಓಡುವುದು ಸರಿಯಲ್ಲ. ಇಲ್ಲಿಯೂ ಇರದ, ಅಲ್ಲಿಯೂ ಸಲ್ಲದ ಒಂದು 'ಎಡಬಿಡಂಗಿ' ಸ್ಥಿತಿ ಇದು. ನನಗೆ ಉತ್ತಮವಾದದ್ದು ಸಿಕ್ಕಿಲ್ಲ, ಅಲ್ಲಿಯ ತನಕ ಅರಸುತ್ತೇನೆ, ಹುಡುಕುತ್ತೇನೆ ಎನ್ನುವುದಕ್ಕಿಂತ ಕಂಡ ಕೆಡುಕುಗಳ ನಡುವೆ ಒಂದಿಷ್ಟಾದಲೂ ಒಳ್ಳೆಯದನ್ನು ಕಂಡು, ಆರಿಸಿ, ಹೆಕ್ಕಿ,





ಅನುಭವಿಸಿ ತೃಪ್ತಿಪಡುವುದೇ ಉತ್ತಮವೆಂದು ಹೇಳಿ, ಹರುಷಕ್ಕಿದೆ ದಾರಿ, ಎಂದು ಕರಾರುವಾಕ್ಕಾಗಿ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು.

ಆದರೆ ಇಲ್ಲಿ ಒಂದು ಸಮಸ್ಯೆ ಇದೆ. ಮೊದಲನೆಯದಾಗಿ, ನಮಗೆ ನಿಜವಾದ ಸಂತೋಷವೇನೆಂದು ಗೊತ್ತಿಲ್ಲ. ಎರಡನೆಯದಾಗಿ ನಮಗೆ ಯಾವುದು ಸಂತೋಷ ನೀಡುವ ವಸ್ತು, ವ್ಯಕ್ತಿ ಅಥವಾ ವಿಷಯ ಎಂದೂ ಗೊತ್ತಿಲ್ಲ. ತೃಪ್ತಿ ಎಂದರೆ ಏನು ಮತ್ತು ಹೇಗಿರುತ್ತದೆ ಎನ್ನುವುದು ನಮಗೆ ಅರಿವಿಲ್ಲ. ಹೀಗಿರುವಾಗ ಸಂತೋಷ ಪಡುವುದೆಂತು. ಹಾಗಾಗಿ ಭಗವದ್ಕೃಪೆಯಿಂದ ಮತ್ತು ನಮ್ಮ ಪ್ರಯತ್ನದಿಂದ ನಮಗೆ ಸಿಕ್ಕದ್ದರಲ್ಲಿ ತೃಪ್ತಿಯಿಂದ ಸಂತೋಷಪಡುವುದು ಮತ್ತು ಅಂದಿಗಂದಿಗೆ ಸಂದ ಕೆಲಸವನ್ನು ಅತಿಫಲಾಪೇಕ್ಷೆಯಿಲ್ಲದೆ, ನಿಸ್ಪೃಹತೆಯಿಂದ ಮಾಡುವುದು ಮತ್ತದರಿಂದ ಬಂದ ಸುಖವನ್ನು ತೃಪ್ತಿಯಿಂದ ಅನುಭವಿಸುವುದೇ ನಿಜವಾದ ಹರುಷಕ್ಕೆ ದಾರಿ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 76ಸಂ**

**ಮುನ್ನಾದ ಜನುಮಗಳ ನೆನಸಿಸಿಂ ನಿನಗೇನು ? ।**

**ಇನ್ನಿಮಿಹುದು ನೀಡು ಮನವನ್, ಎನ್ನುವವೋಲ್ ॥**

**ಬೆನ್ನ ಪಿಂತಿನದು ಕಾಣಿಸದಂತೆ ಪರಮೇಷ್ಠಿ ।**

**ಕಣ್ಣನಿಟ್ಟನು ಮುಖದಿ - ಮಂಕುತಿಮ್ಮ ॥**

ಇನ್ನಿಮಿಹುದಕೆ=ಇನ್ನುಂ+ಇಹುದಕೆ, ಎನ್ನುವವೋಲ್=ಎನ್ನುವ+ವೋಲ್, ಕಣ್ಣನಿಟ್ಟನು=ಕಣ್ಣನು+ಇಟ್ಟನು, ಮುನ್ನಾದ=ಹಿಂದಿನ, ಇನ್ನಿಮಿಹುದಕೆ=ಇಂದು ಇರುವುದಕ್ಕೆ, ಎನ್ನುವವೋಲ್=ಎನ್ನುವಂತೆ, ಪಿಂತಿನದು=ಹಿಂದಿನದು, ಪರಮೇಷ್ಠಿ=ಸೃಷ್ಟಿಕರ್ತ.

ಹಿಂದಿನ ಜನ್ಮಗಳ ನೆನಪಿನಿಂದ ನಿನಗೇನಾಗಬೇಕಾಗಿದೆ. ಇಂದಿನ ಜನ್ಮಕ್ಕೆ ನೀನು ಮಹತ್ವವನ್ನು ನೀಡು ಎನ್ನುವಂತೆ ಬೆನ್ನ ಹಿಂದಿನದು ಕಾಣಿಸದಂತೆ ಮತ್ತು ಮುಂದೆ ಮಾತ್ರ ನೋಡುವಂತೆ ಮುಖದಲ್ಲಿ ಕಣ್ಣನ್ನು ಇಟ್ಟಿಹನು ನಮಗೆ ಆ ಸೃಷ್ಟಿಕರ್ತ, ಎಂದು ಹೇಳುತ್ತಾ, ಬದುಕಿನಲ್ಲಿ ಕಳೆದುಹೋದದ್ದನ್ನು ಬಿಟ್ಟು, ಮುನ್ನೋಟವಿಟ್ಟುಕೊಳ್ಳಬೇಕೆಂದು ಸೂಚಿಸಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ಸಂತೋಷವಾಗಿರಬೇಕೆನ್ನುವುದೇ ಎಲ್ಲರ ಆಸೆ ಅಥವಾ ಬಯಕೆ. ಆದರೆ ಬಹಳಷ್ಟು ಬಾರಿ ನಾವು ನಮ್ಮ ಗತದಲ್ಲಿ ನಾವು ಅನುಭವಿಸಿದ ಎಲ್ಲವನ್ನೂ ನೆನೆಯುತ್ತಾ, ಇಂದು ಅನುಭವಿಸಬಹುದಾದ ಸುಖವನ್ನೂ ಹಾಳುಮಾಡಿಕೊಳ್ಳುತ್ತೇವೆ. "ಗಮ್ಮನ ಶೋಚಿತವ್ಯಂ"ಎಂದು ಹೇಳಿ ನಮ್ಮ ಪೂರ್ವಜರು ಗತಿಸಿಹೋದ ವಿಷಯಗಳ ನೆನೆದು ಶೋಕಿಸಬಾರದು ಎಂದು ಸೂಚಿಸಿದ್ದಾರೆ. ಆದರೆ ನಮ್ಮ ಸ್ವಭಾವದಿಂದ ಆ ನೆನಪುಗಳು

ಮಾಸುವುದೇ ಇಲ್ಲ. ಅಕಸ್ಮಾತ್ ಅವು ಮಾಸಿಹೋಗಲು ತಯಾರಾಗಿದ್ದರೂ ನಾವು 'ತರಚು ಗಾಯವ ಕೆರೆದು ಹುಣ್ಣಾಗಿಹುದು ಕಪಿ'(ಮು-644) ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ, ಮತ್ತೆ ಮತ್ತೆ ಅವುಗಳನ್ನು ಜ್ಞಾಪಿಸಿಕೊಂಡು ನಮ್ಮ ಇಂದಿನ ಸುಖಕ್ಕೆ ಅಡ್ಡಿಮಾಡಿಕೊಳ್ಳುತ್ತೇವೆ.

ಆ ಪರಮಾತ್ಮ ಅಥವಾ ಸೃಷ್ಠಿಕರ್ತನೆಷ್ಟು ಅದ್ಭುತ ವಿನ್ಯಾಸಗಾರನೆಂದರೆ, ನಮ್ಮ ಈ ದೇಹವನ್ನು ರಚಿಸುವಾಗ, ಬೆನ್ನ ಹಿಂದಿನದು ಕಾಣದೆ ಮುಂದಿನದು ಮಾತ್ರ ಕಾಣಲೆಂದು 'ಕಣ್ಣುಗಳನ್ನು' ಬೆನ್ನಲ್ಲಿ ಇಡದೆ ಮುಂದೆ ಮುಖದಲ್ಲಿ ಇಟ್ಟಿದ್ದಾನೆ. ಇದು ಸೃಷ್ಟಿಯ ಒಂದು ಅರ್ಥಪೂರ್ಣ ಸೋಜಿಗವಲ್ಲವೆ. ನಮ್ಮನ್ನು ಈ ಜಗತ್ತಿನಲ್ಲಿ ಒಂದು ಮುನ್ನೋಟವಿಟ್ಟುಕೊಂಡೇ ಬದುಕಲೆಂದು ಸೂಚಿಸಿ ಸೃಷ್ಟಿಸಲಾಗಿದೆ. ನಮ್ಮ ಹಿಂದಿನ ಜನ್ಮಗಳ ವೃತ್ತಾಂತ ನಮಗೆ ಗೊತ್ತಿಲ್ಲ. ಹಾಗೆಯೇ ನಮ್ಮ ಪ್ರಸ್ತುತ ಜನ್ಮದ ಗತಿಸಿಹೋದ ಕಾಲದಲ್ಲಿ ನಡೆದ ಘಟನೆಗಳನ್ನು ಮತ್ತು ಅದರ ಪರಿಣಾಮವನ್ನು ಬದಲಾಯಿಸಲೂ ಸಾಧ್ಯವಿಲ್ಲ, ಅಲ್ಲವೇ? ಇದು ಎಲ್ಲರಿಗೂ ಗೊತ್ತಿರುವ ವಿಷಯ. 'ಮಿಂಚಿ ಹೋದದ್ದಕ್ಕೆ ಚಿಂತಿಸಿ ಫಲವಿಲ್ಲ' ಎಂದು ನಮ್ಮ ಪೂರ್ವೀಕರು ನಮಗೆ ಹೇಳಿದ್ದರೂ, ನಮ್ಮ ಕೋತಿ ಬುದ್ಧಿ ತರಚು ಗಾಯವ ಕೆರೆಯುತ್ತಲೇ ಇರುತ್ತದೆ'. ಮತ್ತೆ ಮತ್ತೆ ವ್ರಣವಾಗಿಸಿ ನೋವನ್ನು ಅನುಭವಿಸುತ್ತಲೇ ಇರುತ್ತದೆ.

ಸುಖವಾಗಿರಬೇಕೆಂದರೆ, ಹಿಂದಿನ ನೆನಪುಗಳು ನಮ್ಮ ಇಂದಿನ ಜೀವನದ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳಬೇಕು. ಆ ರೀತಿ ಮನಸ್ಸನ್ನು ತಿದ್ದಿಕೊಳ್ಳಬೇಕು. ಇದಕ್ಕೆ ಒಂದು ಮಾರ್ಗವಿದೆ, ಸಾಮಾನ್ಯವಾಗಿ ನಾವು ಜ್ಞಾಪಕವಿಟ್ಟುಕೊಳ್ಳುವ, ಅನ್ಯರು ನಮಗೆ ಮಾಡಿದ ಅಪಕಾರಗಳು ಮತ್ತು ಅನ್ಯರಿಗೆ ನಾವು ಮಾಡಿದ ಉಪಕಾರಗಳ' ನ್ನು ಮನಸ್ಸಿನಿಂದ ಅಳಿಸಿಹಾಕಿಬಿಟ್ಟರೆ, ಬಹುಶಃ ನಮ್ಮ ನೆನಪುಗಳು ಮಾಸಿ ನಮ್ಮ ಇಂದಿನ ಬದುಕು ಸುಖಕರವಾಗಬಹುದು. ನಾವು ಹಿಂದೆ ಮಾಡಿದ ತಪ್ಪುಗಳನ್ನು ಜ್ಞಾಪಕಕ್ಕೆ ತಂದುಕೊಟ್ಟು ಇಂದು ಮತ್ತು ಮುಂದೆಯೂ ಅಂತಹ ತಪ್ಪುಗಳನ್ನು ಮಾಡದಂತೆ ತಡೆಯಲು ಮಾತ್ರ ನಮಗೆ ನಮ್ಮ ಗತ' ದ ನೆನಪು ಇರಬೇಕು. ಹಾಗೆ ಅನಾವಶ್ಯಕವಾದ ಗತವನ್ನು ಮರೆತು, ಇಂದಿನ ಜೀವನವನ್ನು ಸಂತೋಷದಿಂದ ಬದುಕಲಾದರೆ, ನಾವು ಪುಣ್ಯವಂತರೆಂದೇ ಅಂದುಕೊಳ್ಳಬೇಕು, ಅಲ್ಲವೇ?, ಪ್ರಯತ್ನಪೂರ್ವಕವಾಗಿ 'ಬೇಡದ, ಆದರೂ ಕಾಡುವ ನೆನಪುಗಳಿಂದ ಮುಕ್ತಿ ಪಡೆಯಬಹುದು.

**ಮುಕ್ತಕ 761**

**ಲೋಚನದ ಸಂಚಾರ ಮುಖದ ಮುಂದಕಪಾರ |**

**ಗೋಚರಿಪುದೇನದಕೆ ತಲೆಯ ಹಿಂದಣದು ||**

**ಪ್ರಾಚೀನ ಹೊರತು ಸ್ವತಂತ್ರ ನೀಂ, ಸಾಂತವದು |**

**ಚಾಚು ಮುಂದಕೆ ಮನವ- ಮಂಕುತಿಮ್ಮ ||**

ಮುಂದಕಪಾರ=ಮುಂದಕೆ+ಅಪಾರ, ಗೋಚರಿಪುದೇನದಕೆ-ಗೋಚರಿಪುದೇನು+ಅದಕೆ, ಸಾಂತವದು=ಸಾಂತವು+ಅದು ಲೋಚನ=ಕಣ್ಣು, ಹಿಂದಣದು ಹಿಂದಿನದು, ಪ್ರಾಚೀನ-ಗತಿಸಿಹೋದ ಕಾಲದ್ದು, ಸಾಂತವು=ಅಂತ್ಯದಿಂದ ಕೂಡಿದ್ದು,

ಕಣ್ಣುಗಳ ನೋಟದ ವ್ಯಾಪ್ತಿ ಮುಖದ ಮುಂದಕ್ಕೆ ಬಹಳ ಅಪಾರವಾದದ್ದು. ಆದರೆ ಅದಕ್ಕೆ ತಲೆಯ ಹಿಂದಿನದು ಕಾಣುವುದೇನು? ಇಲ್ಲ . ಹಾಗೆಯೇ ಗತಿಸಿಹೋದ ಪ್ರಾಚೀನ ವಿಷಯಗಳೆಲ್ಲವು ಮುಗಿದುಹೋದ ವಿಷಯಗಳು. ಅವುಗಳನ್ನು ತೊರೆದರೆ ನೀನು ಸ್ವತಂತ್ರನಾಗುತ್ತೀಯೆ. ಹಾಗಾಗಿ ನಿನ್ನ ಮನವನ್ನು ಮುಂದಕ್ಕೆ ತೆಗೆದುಕೊಂಡು ಹೋಗು ಎಂದು ಆದೇಶಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತೀ ಪ್ರಾಣಿಗೂ ಒಂದು ಕತ್ತು ಮತ್ತು ಆ ಕತ್ತಿನ ಮುಂಬಾಗದ ಮೇಲ್ಭಾಗದಲ್ಲಿ ಒಂದು ಜೊತೆ ಕಣ್ಣುಗಳು, ಅವುಗಳ ನೋಟದ ವ್ಯಾಪ್ತಿ ಮುಂದಕ್ಕೆ ಕತ್ತನ್ನು ಎರಡೂ ಬದಿಯಲ್ಲಿ ಕೇವಲ 45 ಡಿಗ್ರಿ ಕೋನದಲ್ಲಿ ತಿರುಗಿಸಿ ನೋಡಬಹುದಷ್ಟೇ(ಕೆಲವು ಪ್ರಾಣಿಗಳ ಹೊರತು). ತಲೆಯ ಹಿಂದಿನದು ಕಾಣುವುದೇ ಇಲ್ಲ. ಮುಂದಿನ ನೋಟದ ವ್ಯಾಪ್ತಿ ಅನಾಯಾಸವಾಗಿ ಬೆಳೆಯುತ್ತಾ ಹೋಗುತ್ತದೆ. ಆದರೆ ಹಿಂದಿನದು ಆಯಾಸಪಟ್ಟರೂ ಕಾಣಲಾಗುವುದಿಲ್ಲ. ಇದು ನಮ್ಮ ಭೌತಿಕ ಕಣ್ಣುಗಳ ಮಿತಿ. ಪ್ರಕೃತಿಯಿಂದ ನಿಯತವಾದ ಇದನ್ನು ನಮ್ಮ ಮನಸ್ಸಿನ ಯೋಚನೆ ಮತ್ತು ಆಲೋಚನೆಗಳಿಗೆ ಅನ್ವಯಿಸಿದರೆ ಆಗ ಗತವನ್ನು ನೆನೆದು ಪರಿತಪಿಸುವ ಮನಸ್ಸು ನಮ್ಮದಾಗಿರುವುದಿಲ್ಲ.

ಆದರೆ ನಮ್ಮ ಮನಸ್ಸಿನ ಕಣ್ಣುಗಳಿಗೆ ಯಾವ ರೀತಿಯ ಮಿತಿಯೂ ಇಲ್ಲ. 36ಸಂ ಡಿಗ್ರೀ ಸುತ್ತುತ್ತವೆ. ಹಿಂದಿನದನ್ನು ನೆನೆಯುತ್ತದೆ ಮತ್ತು ಮುಂದಿನದನ್ನು ಯೋಜಿಸುತ್ತಾ (planning) ಇರುತ್ತದೆ. ಅನಿಯಂತ್ರಿತವಾಗಿ ಹುಚ್ಚು ಕುದುರೆಯಂತೆ ಅದರ ಓಟ. ಇದನ್ನು ನಿಯಂತ್ರಿಸಲು ನಮ್ಮ ಎಲ್ಲ ವಿದ್ಯಾಭ್ಯಾಸ, ನಿಯಮ, ನಿಷ್ಠೆ, ಅನುಷ್ಠಾನಗಳು, ವೇದ, ಶಾಸ್ತ್ರ, ಪುರಾಣ ಭಗವದ್ಗೀತಾದಿಗಳು ದೃಷ್ಟಾಂತದ ಮೂಲಕ ವಿವರಿಸಿ ಹೇಳಿವೆ. ನಮ್ಮ ಹರಿದಾಸರು 'ಹರಿದಾಡುವಂತಾ ಮಾನವ ನಿಲಿಸುವುದು ಬಲು ಕಷ್ಟ' ಎಂದು ಘೋಷಿಸಿದ್ದಾರೆ. ಸದಾಕಾಲ ಯಾವುದೋ ಗತಿಸಿಹೋದ ವಿಚಾರಗಳು ನಮ್ಮನ್ನು ಜಗ್ಗಿ ಜಗ್ಗಿ ಮುನ್ನಡೆಯಲು ಬಿಡದೆ ಇದ್ದರೆ ನಮಗೆ 'ಸ್ವಾತಂತ್ರ ವೆಲ್ಲಿರುವುದು ಹೇಳಿ. ಮಾನ್ಯ ಗುಂಡಪ್ಪನವರೂ ಸಹ "ಪ್ರಾಚೀನ ಹೊರತು ಸ್ವತಂತ್ರ ನೀಂ' ಎಂದು ಹೇಳುತ್ತಾ ಗತಿಸಿಹೋದ ವಿಷಯಗಳ ಸೆಳೆತ ಅಥವಾ ಸುಳಿಯಿಂದ ನೀನು ಹೊರಬಂದರೆ ಮಾತ್ರ ನೀನು "ಸ್ವತಂತ್ರನು" ಎಂದು ಹೇಳಿದ್ದಾರೆ.





ಹಾಗಾಗಿ ಸಾಂತವಾದ, ಎಂದರೆ ಅಂತ್ಯಗೊಂಡ ವಿಚಾರಗಳನ್ನು ಮತ್ತೆ ಮತ್ತೆ ಕೆದಕಿ ಕೆದಕಿ ಆಜೀವನಪರ್ಯಂತ ನೋವನನುಭವಿಸುವುದಕ್ಕಿಂತ, ಮನಸ್ಸಿನಿಂದ ಅವುಗಳನ್ನು ಅಳಿಸಿ ಹಾಕಿ 'ಮುಂದಕ್ಕೆ ನೋಡುವುದು ಮತ್ತು ಓಡುವುದು' ಮಾಡಿದರೆ ಗತದ ಕೊಂಡಿಗಳನ್ನು ಕಳಚಿಕೊಂಡು ಸ್ವತಂತ್ರನಾಗಿ, ಬಿಲ್ಲಿನಿಂದ ಬಿಟ್ಟ ಬಾಣದಂತೆ ತನ್ನ ಗುರಿಯನ್ನು ಮುಟ್ಟಲು ಸಾಗಬಹುದು. ಹಾಗಲ್ಲದೆ ಗತಕ್ಕೆ ಅಂಟಿಕೊಂಡಿದ್ದರೆ, ಗೂಟಕ್ಕೆ ಕಟ್ಟಿದ ದನದಂತೆ ಅಲ್ಲೇ ಸುತ್ತುತ್ತಾ ಇರಬಹುದು. 'ಬಂಧನವೋ ಬಿಡುಗಡೆಯೋ' ಎರಡರಲ್ಲಿ ಆಯ್ಕೆಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ನಮಗಿದೆ. ಯಾರು ಯಾವುದನ್ನು ಆಯ್ದುಕೊಂಡರೆ ಅವರ ಜೀವನ ಹಾಗಿರುತ್ತದೆ. ಮುಂದೆ ಮುಖದಲ್ಲಿ ಕಣ್ಣನ್ನಿಟ್ಟ ಆ ಪರಮಾತ್ಮನ ಸೃಷ್ಟಿಯ ಉದ್ದೇಶ್ಯವನ್ನು ಅರ್ಥಮಾಡಿಕೊಂಡು, ಮುನ್ನಡೆಯುವುದು ನಮ್ಮ ಕೈಯಲ್ಲೇ ಇದೆ ಅಲ್ಲವೇ?

**ಮುಕ್ತಕ – 762**

**ಧಾರುಣಿಯ ನಡಿಗೆಯಲಿ ಮೇರುವಿನ ಗುರಿಯಿರಲಿ |**

**ಮೇರುವನು ಮರೆತಂದೆ ನಾರಕಕೆ ದಾರಿ ||**

**ದೂರವಾದೊಡದೇನು? ಕಾಲು ಕುಂಟಿರಲೇನು |**

**ಊರ ನೆನಪೇ ಬಲವೋ - ಮಂಕುತಿಮ್ಮ ||**

ಗುರಿಯಿರಲಿ=ಗುರಿ+ಇರಲಿ, ಮರೆತಂದೆ=ಮರೆತ+ಅಂದೆ, ದೂರವಾದೊಡದೇನು=ದೂರವು+ಆದೊಡೆ+ಏನು,

ಕುಂಟಿರಲೇನು=ಕುಂಟು+ಇರಲು+ಏನು

ಧಾರುಣಿ=ಭೂಮಿ, ಮೇರು=(ಪರ್ವತ) ಉನ್ನತ, ನಾರಕ=ನರಕ(ಜಗತ್ತಿನ ಕಷ್ಟಭರಿತವಾದ ಜೀವನ )

ಭೂಮಿಯ ಮೇಲೆ ನಾವು ಹುಟ್ಟಿ ಬದುಕುವಾಗ, ಗುರಿ ಉನ್ನತವಾಗಿರಲಿ, ಉನ್ನತವಾದ ಗುರಿಯನ್ನು ಮರೆತರೆ ಅದೇ ನರಕಕ್ಕೆ ದಾರಿ. ಉನ್ನತವಾದ 'ಗುರಿ' ದೂರವಾಗಿದ್ದರೇನು ಅಥವಾ ಅದನ್ನು ತಲುಪಲು ನಮ್ಮ ಕಾಲು ಕುಂಟಾಗಿದ್ದರೇನು, ನಮ್ಮ ಊರಿನ ನೆನಪೇ ನಮಗೆ ಅಲ್ಲಿಗೆ ತಲುಪಲು ಬಲವನ್ನು ಕೊಡುತ್ತದೆ ಎಂದು ಹೇಳುತ್ತಾ ಪಾರಮಾರ್ತ್ಯದ ಗುರಿಯಿರಬೇಕು ಎಂದು ಪರೋಕ್ಷವಾಗಿ ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ .

ನಾವು ಈ ಜಗತ್ತಿನಲ್ಲಿ ಹುಟ್ಟಿದ್ದೇವೆ ಎಂದಾದಮೇಲೆ, ಅನಿವಾರ್ಯವಾಗಿ ಬದುಕಲೇ ಬೇಕು. ಅದು 'ಧಾರುಣಿಯ ನಡಿಗೆ', ಹಾಗೆ ಬದುಕುವಾಗ ನಮಗೆ ನಮ್ಮ ಸ್ವಂತ ಊರ ನೆನಪು ಬೇಕು. ಆ ನೆನಪಿನ ಮತ್ತು ಅಲ್ಲಿಗೆ ಸೇರುವ ಆಸೆಯಿಂದ, ಅಲ್ಲಿಗೆ ಸೇರಲೇಬೇಕೆಂಬ ಗುರಿಯಿಂದ ನಮ್ಮ ನಡಿಗೆ ನಮ್ಮನ್ನು ಉತ್ತಮದೆಡೆಗೆ ಕೊಂಡು ಹೋಗುವಂತಿರಬೇಕು. ಮೇರುವೆಂದರೆ ಅತ್ಯುನ್ನತ ಶಿಖರ. ಆದರೆ ನಾವು ಇಲ್ಲಿ ಭೂಮಿಯ ಮೇಲೆ ನಿಂತು

ನೋಡಿದರೆ ಅದು ಬಹಳ ದೂರದಲ್ಲಿದ್ದಹಾಗೆ, ಅದನ್ನು ಹತ್ತುವುದು ಮತ್ತು ಅದರ ಶಿಖರ ತಲುಪುವುದು ಬಹಳ ಕಷ್ಟವೆನಿಸುತ್ತದೆ. ಆದರೆ ಅದನ್ನು ತಲುಪುವ ಆಸೆ ಬಲವಾಗಿದ್ದರೆ ದೂರವೆನಿಸಿದರೂ ಕಷ್ಟವೆನಿಸಿದರೂ, ಆ ಆಸೆಯೇ ನಮ್ಮನ್ನು ಅಲ್ಲಿಗೆ ಕೊಂಡು ಹೋಗುತ್ತದೆ.

'ಮೇರುವನು ಮರೆತಂದೆ ನಾರಕಕೆ ದಾರಿ' ಎಂದಿದ್ದಾರೆ ಗುಂಡಪ್ಪನವರು. ನಮ್ಮೆಲ್ಲರ ಮೂಲವೇ ಪರತತ್ವ ಮತ್ತು ಆ ಪರತತ್ವವನ್ನು ಸೇರುವುದೇ ಗುಂಡಪ್ಪನವರು ಹೇಳುವ 'ಮೇರುವಿನ ಗುರಿ'. ಆ ಗುರಿಯನ್ನು ಮರೆತು ನಾವು ಈ ಜಗತ್ತಿನ ಜೀವನದ ಜಂಜಾಟದಲ್ಲಿ ಸಿಲುಕಿ ಇದರ ಸೆಳೆತಗಳನ್ನೇ ಸುಂದರವೆಂದು ಭಾವಿಸುತ್ತಾ ಕಷ್ಟಗಳ, ಚಿಂತೆಗಳ, ಹಿಂಸೆಗಳ ವೃತ್ತದಲ್ಲೇ ತಿರುತಿರುಗುತ್ತಾ ಬದುಕುವುದು, ನರಕವೇ ಅಲ್ಲವೇ?. ಆದರೆ ಇದನ್ನು ಬಿಟ್ಟು ಬೇರೆಲ್ಲಿಗೆ ಹೋಗುವುದು ಎನ್ನುವ ದ್ವಂದ್ವವೂ ಮನದಲ್ಲಿ ಉಂಟಾಗುತ್ತದೆ. ಆಗ ಬರಬೇಕು ನಮಗೆ ನಮ್ಮ 'ಊರ' ನೆನಪು ಮತ್ತು ಇಲ್ಲಿಯದನ್ನು ತೊರೆದು ಅಲ್ಲಿಗೆ ಹೋಗುವ ಆಸೆ. ಆದರೆ ಅದು ಬಹಳ 'ದೂರ' ವೆಂದೆನಿಸುತ್ತದೆ ಮತ್ತು ಅಲ್ಲಿಗೆ ಹೋಗಲು ನಮಗೆ ಸಾಕಷ್ಟು ಬಲವಿಲ್ಲವೆಂದೆನಿಸುತ್ತದೆ. ಸ್ವಲ್ಪಸ್ವಲ್ಪವಾಗಿ ಕ್ರಮಿಸುತ್ತಾ ಹೋದಂತೆ ಯಾವುದೇ ದೂರವೂ ಹತ್ತಿರವಾಗುವಂತೆ ಇಚ್ಛೆ ಬಲವಾಗಿದ್ದರೆ ಎಂತಹ ಕಷ್ಟತರವಾದ ಕೆಲಸವನ್ನೂ ಮಾಡಲು ಬಲ ಬರುವಂತೆ, ಆ ಮೇರುವನ್ನು ತಲುಪಲು ನಮಗೆ ನಮ್ಮ ಪೂರ್ವಜರು ಹಲವಾರು ಮಾರ್ಗಗಳನ್ನು ತೋರಿದ್ದಾರೆ. ಇಲ್ಲಿಂದ ಬಿಡಿಸಿಕೊಂಡು ಅಲ್ಲಿಗೆ ಹೋಗುವ ಪ್ರಬಲ ಇಚ್ಛೆ ಇದ್ದರೆ ಆ ಇಚ್ಛೆಯೇ ನಮ್ಮನ್ನು ಅಲ್ಲಿಗೆ ಸೇರಿಸುತ್ತದೆ. .

ಅಲ್ಲಿದೆ ನಮ್ಮ ಮನೆ ನಾನೇಕೆ ಬಂದೆ ಸುಮ್ಮನೇ' ಎನ್ನುತ್ತಾರೆ ಪುರಂದರದಾಸರು. ಮಾಯಾಜಾಲದಿಂದ ಕೂಡಿದ ಈ ಜಗತ್ತು ನಾ 'ಸೇರಿದ ಮನೆ. ಆದರೆ ನನ್ನ ತವರು' ಬೇರೆ ಇದೆ. ಇಲ್ಲಿ ನನ್ನ ಬದುಕಿಗೆ ಏನೇನನ್ನೋ ಅಂಟಿಸಿಕೊಂಡುಬಿಟ್ಟಿದ್ದೇನೆ, ಇದನ್ನೆಲ್ಲಾ ತೊಳೆದುಕೊಂಡು ಅಲ್ಲಿಗೆ ಹೋಗಬೇಕು ಎನ್ನುವ ಭಾವವನ್ನು ಒಬ್ಬ ಕವಿ ವ್ಯಕ್ತಪಡಿಸುತ್ತಾನೆ. ಅಂತಹ ಇಚ್ಛೆ ಇರಬೇಕೆನ್ನುವುದೇ ಮಾನ್ಯ ಗುಂಡಪ್ಪನವರ ಆಶಯ. ನಮ್ಮ ಇಚ್ಛೆ ಬಲವಾಗಿದ್ದರೆ ಮತ್ತು ನಾವು ದೃಢ ಪ್ರಯತ್ನಪಟ್ಟರೆ ಅದು ದೂರವಾದರೂ ನಮ್ಮ ಕಾಲು ಕುಂಟಾದರೂ, ಒಂದಲ್ಲ ಒಂದು ದಿನ ಅಲ್ಲಿಗೆ ಸೇರಬಹುದು. ಆದರೆ ಇದು ಜನ್ಮಜನ್ಮಾಂತರದಲ್ಲಿ ಆಗುವ ಪ್ರಕ್ರಿಯೆ. ಆ ದಿಕ್ಕಿನಲ್ಲಿ ಪ್ರಯತ್ನವಿದ್ದರೆ ಸಾಕು. ಎಂದೋ ಒಂದು ದಿನ ಅಲ್ಲಿಗೆ ತಲುಪಬಹುದು.

**ಮುಕ್ತಕ - 763**

**ಮೇರುಪರ್ವತಕಿಹವು ನೂರೆಂಟು ಶಿಖರಗಳು**

**ದಾರಿ ನೂರಿರಬಹುದು, ನಿಲುವ ಕಡೆ ನೂರು ||**

**ಸಾರು ನೀಂ ಯಾತ್ರಿಕರಿಗೆಲ್ಲ ಕೆಳೆಯಾಗಿರುತೆ |**

**ಮೇರುಸಂಸ್ಕೃತಿಯೆ ಬಲ-ಮಂಕುತಿಮ್ಮ ||**

ಮೇರುಪರ್ವತಕಿಹವು=ಮೇರು+ಪರ್ವತಕೆ+ಇಹವು, ನೂರಿರಬಹುದು+ನೂರು+ಇರಬಹುದು,

ಕೆಳೆಯಾಗಿರುತೆ=ಕೆಳೆ+ಆಗಿ+ಇರುತೆ,

ನಿಲುವ =ನಿಲ್ಲುವ, ಕೆಳೆ=ಸ್ನೇಹ, ಇರುತ್ತೆ=ಇರುತ್ತಾ

ಮೇರುಪರ್ವತಕ್ಕೆ ನೂರೆಂಟು ಶಿಖರಗಳು ಉಂಟು. ಅದನ್ನು ತಲುಪಲು ನೂರಾರು ದಾರಿಗಳಿರಬಹುದು. ದಾರಿಗುಂಟ ನೂರಾರು ತಂಗುದಾಣಗಳಿರಬಹುದು. ಅದನ್ನು ತಲುಪಲು ನಿನ್ನ ಪ್ರಯಾಣದಲ್ಲಿ ಸಹ ಯಾತ್ರಿಕರೊಡನೆ ಗೆಳೆತನವನ್ನು ಬೆಳೆಸಿಕೊಂಡು ಪ್ರಯಾಣಮಾಡು, ಆದರೆ ಮುಂದಕ್ಕೆ ಸಾಗಲು ಮೇರುವನ್ನು ತಲುಪುವ ಗುರಿಯೇ ನಿನಗೆ ಬಲಕೊಡುತ್ತದೆ ಎಂದು ಔನ್ನತ್ಯದ ನಮ್ಮ ಪ್ರಯಾಣ ಹೇಗಿರಬೇಕು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಮೇರುವೆಂದರೆ ಕೇವಲ ಒಂದು ಬೆಟ್ಟವಲ್ಲ, ಅದು ನಾವು ತಲುಪಲು ಪ್ರಯತ್ನಿಸಬೇಕಾದ ಒಂದು ಅಂತರಂಗದ ಸ್ಥಿತಿ. ಅಂತರಂಗದಲ್ಲಿ ಉನ್ನತ ಸ್ಥಿತಿಯನ್ನು ತಲುಪಲು ಹಂತ ಹಂತವಾಗಿ ನಾವು ಮೇಲೇರಬೇಕಾದಾಗ ಒಂದೊಂದು ಹಂತವೂ ಒಂದೊಂದು ಶಿಖರ. ಆ ಹಂತಗಳನ್ನು ತಲುಪಲು ನಮಗೆ ನೂರಾರು ದಾರಿಗಳಿರುತ್ತದೆ. ಯಾವ ದಾರಿಯನ್ನು ನಾವು ಅನುಸರಿಸಿದರೂ ತಲುಪಬೇಕಾದ ಗುರಿಯೊಂದೇ ಆಗಿರಬೇಕು. ಜಗತ್ತಿನ ಪ್ರತೀ ಮನುಷ್ಯನೂ ಈ ಪ್ರಯಾಣದಲ್ಲಿ ಯಾವುದೋ ಒಂದು ಹಂತದಲ್ಲಿರುತ್ತಾರೆ. ಕೆಲವರು ಬಹಳ ದೂರ ಬಂದಿರುತ್ತಾರೆ ಮತ್ತೆ ಕೆಲವರು ಪ್ರಾರಂಭದ

ಹಂತದಲ್ಲಿರುತ್ತಾರೆ. ಆದರೆ ಯಾರು ಎಷ್ಟು ಮುಂದೆ ಹೋಗಿದ್ದಾರೆ ಎಂದು ಹೇಳುವುದು ಸುಲಭವಲ್ಲ. ಏಕೆಂದರೆ ಇದು ಪ್ರತಿಯೊಬ್ಬರ ಅಂತರಂಗದ ಗುಟ್ಟು.

ತನ್ನ ಮೂಲವಾದ ಕಡಲನ್ನು ತೊರೆದು ಅಕಾಶಕ್ಕೇರಿ ಮಳೆಯಾಗಿ ಧರೆಗಿಳಿದು ಮತ್ತೆ ತನ್ನ ಮೂಲವನ್ನು ಸೇರುವ ಆಸೆಯಲ್ಲಿ ಓಡುವ ನದಿಯು, ತನ್ನ ಮಾರ್ಗವನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ. ಹಾಗೆ ನಾವೂ ಔನ್ನತ್ಯಕ್ಕೆ ಸೇರುವ ನಮ್ಮ ಮಾರ್ಗವನ್ನು ನಾವೇ ಕಂಡುಕೊಳ್ಳಬೇಕು. ಆ ನದಿ ತನ್ನ ಹರಿವಿನ ಪಾತ್ರದ ಇಕ್ಕೆಲಗಳಲ್ಲಿರುವ ಎಲ್ಲರಿಗೂ ಶಾಂತಿ ಮತ್ತು ಸಾಂತ್ವನ ನೀಡುತ್ತಾ ಎಲ್ಲರ ಬದುಕಿಗೂ ಆಸರೆಯಾಗಿರುತ್ತಾ ತನ್ನ ಪ್ರಯಾಣವನ್ನು ಮುಂದುವರೆಸುತ್ತದೆಯಲ್ಲವೇ? ಹಾಗೆಯೇ ಔನ್ನತ್ಯ ಕ್ಕೇರಬೇಕೆನ್ನುವವನು ತನ್ನ ಸುತ್ತಲಿರುವ ಸಮಾಜದೊಂದಿಗೆ ಸ್ನೇಹದಿಂದ ಪ್ರೀತಿಯಿಂದ ಇದ್ದರೆ ಅವನ ಪ್ರಯಾಣ ಸುಗಮವಾಗುತ್ತದೆ. ನಮ್ಮ ಔನ್ನತ್ಯದ ಪ್ರಯಾಣಕ್ಕೆ ಸತ್ವದ ಮತ್ತು ಸತ್ಯದ ಬಲ ಬೇಕು. ಆ ಬಲ ನಮಗೆ ಯಾರಿಂದ ಮತ್ತು ಹೇಗೆ ಸಿಗುತ್ತದೆ ಎಂದು ಗೊತ್ತಿರುವುದಿಲ್ಲ,





ಎಲ್ಲಿಂದ ಬೇಕಾದರೂ ಬರಬಹುದು. ಹಾಗಾಗಿ ಅಂತರಂಗದಲ್ಲಿ ಮೇರು ಎಂದರೆ ಉನ್ನತಿಯ ಗುರಿ, ದೃಷ್ಟಿ ಎಲ್ಲ ಇದ್ದರೂ ಹೊರಗೆ ಸಮಾಜ ಮುಖಿಯಾಗಿ ಎಲ್ಲರೊಡನೆ ಪ್ರೀತಿಯಿಂದ, ಸ್ನೇಹದಿಂದ ಇರಬೇಕು.

ಈ ಜಗತ್ತನ್ನು ತೊರೆದು ನಮಗೆ ಬೇರೆ ದಾರಿಯಿಲ್ಲ. ಇಲ್ಲಿನ ಎಲ್ಲದರೊಳಗಿದ್ದು, ಎಲ್ಲದರಿಂದ ಕಲಿತು ಸತ್ವವನ್ನು ಹೀರಿ, ಅಂಟನ್ನು ತೆಗೆದು, ಅಂತರಂಗದಲ್ಲಿ ನಂಟಿನ ಗಂಟನ್ನು ಬಿಡಿಸಿಕೊಂಡು ಮುಂದಕ್ಕೆ ಸಾಗಬೇಕು. ಪ್ರಯಾಣದ ಮಾರ್ಗವನ್ನು ಸವೆಸಬೇಕು, 'ಗುರಿ'ಮುಟ್ಟುವ ಆಸೆಯೇ ನಮ್ಮ ಪ್ರಯಾಣಕ್ಕೆ ಬಲ' ನೀಡುವಂತಿರಬೇಕು. ಇದು ಅವರವರ ಅನುಭವಕ್ಕೆ ಬರುವ ವಿಷಯ. ಮಾರ್ಗಗಳೆಷ್ಟಿದ್ದರೂ ನಡಿಗೆ ನಮ್ಮದೇ ತಾನೇ. ಶುದ್ಧ ಮತ್ತು ದೃಢ ಪ್ರಯತ್ನ ನಮ್ಮದಾದಲ್ಲಿ ನಾವು ಗುರಿಮುಟ್ಟುವುದು ನಿಸ್ಸಂದೇಹ.

**ಮುಕ್ತಕ – 764**

**ಧನ್ಯ ಹೊಲೆಯರ ನಂದ; ಹಿಡಿದುದವನನು ಕನಸು |**

**ಸ್ವರ್ಣಸಭೆಯ ಶೈವತಾಂಡವದ ಕನಸು ||**

**ಅನ್ಯಚಿಂತೆಗಳನದು ಬಿಡಿಸುತವನಾತ್ಮವನು |**

**ಚಿನ್ಮಯಕೆ ಸೇರಿಸಿತು - ಮಂಕುತಿಮ್ಮ ||**

ಹಿಡಿದುದವನನು= ಹಿಡಿದುದು+ಅವನನು, ಅನ್ಯಚಿಂತೆಗಳನದು-ಅನ್ಯ+ಚಿಂತೆಗಳನು+ ಅದು,

ಬಿಡಿಸುತವನಾತ್ಮವನು=ಬಿಡಿಸುತ+ಅವನ+ಆತ್ಮವನು

ಅವನಿಗೆ ಸ್ವರ್ಣಸಭೆಯಲ್ಲಿ ಶಿವತಾಂಡವವನ್ನು ನೋಡುವ ಕನಸು. ಅನ್ಯ ಚಿಂತೆಗಳನ್ನು ಬಿಟ್ಟು ಕೇವಲ ಅದನ್ನೇ ಚಿಂತಿಸುತ್ತಿದ್ದನಾದ್ದರಿಂದ ಆ ದರುಶನದಿಂದಲೇ ಅವನ ಆತ್ಮಕ್ಕೆ ಮುಕ್ತಿ ಸಿಕ್ಕಿತು, ಅಂತಹ 'ಹೊಲೆಯರ ನಂದ ಧನ್ಯ ಎಂದು ಏಕಾಗ್ರತೆಯಿಂದ ಪರತತ್ವವನ್ನು ಹೇಗೆ ಸಾಧಿಸಬಹುದು ಎಂದು ಒಂದು ಕತೆಯನ್ನು ಉದಾಹರಿಸಿ ತಿಳಿಸಲೆತ್ನಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಂಜಾವೂರಿನಲ್ಲಿ 'ನಂದ' ನೆಂಬುವವನಿದ್ದ. ಅವನು ವೃತ್ತಿಯಿಂದ ಹೊಲೆಯ ಆದರೆ ಪ್ರವೃತ್ತಿಯಿಂದ ಭಕ್ತ. ಅವನಿಗೆ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಕೈಲಾಸದ ರಜತಗಿರಿಯಂತಹ ಬೃಹಧೀಶ್ವರ ದೇವಸ್ಥಾದಲ್ಲಿ ಶಿವನ ತಾಂಡವ ನೃತ್ಯವನ್ನು ನೋಡುವ ಕನಸು ಸದಾ ಕಾಲ. ಆದರೆ ಹೀನ ಕುಲ ಸಂಜಾತನೆಂದು ಅವನನ್ನು ಮಂದಿರದೊಳಕ್ಕೆ ಬಿಡಲೊಲ್ಲರು, ನಮ್ಮ ಕನ್ನಡದ ಕನಕದಾಸರಂತೆ. ಅವನ ಚಿಂತೆಯನ್ನು ನೋಡಲಾಗದೆ ಒಬ್ಬ ಅರ್ಚಕನ ಬೆನ್ನ ಮೇಲೆ ಅವನನ್ನು ತನ್ನಲ್ಲಿಗೆ ಕರೆಯಿಸಿಕೊಂಡು ಅವನಿಗೆ ಮುಕ್ತಿಯನ್ನಿತ್ತನು, ಶಿವ ಎನ್ನುವುದು ಕಥೆ. ಒಂದೇ ಚಿತ್ತದಿಂದ ಧ್ಯಾನಿಸು ಎನ್ನುವಂತೆ 'ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೆ' ಎನ್ನುತ್ತಾನೆ ಶ್ರೀ ಕೃಷ್ಣ. ಅನ್ಯ ಚಿಂತೆಗಳ ತೊರೆದು ಆ ಮೇರು ತತ್ವವನ್ನು ಪಡೆಯಲು ದೃಢವಾಗಿ ಇಚ್ಚಿಸಿದರೆ ಅದನ್ನು ಖಂಡಿತ ಪಡೆಯಬಹುದು.

ಒಂದು ಬೀಜಕ್ಕೆ ಮೊಳೆತು ಸಸಿಯಾಗಿ ಗಿಡವಾಗಿ ಮರವಾಗಿ ಹೆಮ್ಮರವಾಗುವ ಆಸೆ ಇರಬೇಕು. ತಾನಿರುವ ಭೂಮಿ ಬೆಚ್ಚಗೆ ಹಿತವಾಗಿದೆ ಎಂದು ಇದ್ದು ಬಿಟ್ಟರೆ ಅದರ ಜೀವನ ವ್ಯರ್ಥವಾಗುತ್ತದೆ. ಭೂಮಿಯಲ್ಲಿರಬೇಕು, ಅದರ ಸಾರವನ್ನು ಹೀರಬೇಕು, ಬೆಳೆಯಬೇಕೆಂಬ ಆಸೆಯಿಂದ ಮೊಳೆಯಬೇಕು, ತನ್ನನ್ನು ಇಲ್ಲವಾಗಿಸಿಕೊಳ್ಳಬೇಕು, ಈ ಜಗತ್ತಿನಲ್ಲಿ ತನ್ನ ಬೆಳವಣಿಗೆಗೆ ಲಭ್ಯವಿರುವ ಎಲ್ಲಾ ಅಂಶಗಳನ್ನೂ ತನ್ನ ಶಕ್ತಿಯಿಂದಲೇ ಹೀರಿ ಬೆಳೆದು ಮರವಾಗಿ ಹೆಮ್ಮರವಾಗಬೇಕು. ಆಗ ಅದು ಲೋಕೋಪಯೋಗಿಯಾಗಿ ಜೀವಿಸುತ್ತದೆ. ಒಂದು ಸಣ್ಣ ಬೀಜ ಲೋಕೋಪಯೋಗಿಯಾಗಲು ಎಷ್ಟೆಲ್ಲಾ ಶ್ರಮ ಪಡಬೇಕು ಅಲ್ಲವೇ?

ಹಾಗೆಯೇ ನಾವು ಉತ್ತಮತೆಯಲ್ಲಿ ಬೆಳೆಯಬೇಕಾದರೆ, ಬಯಸಿದ್ದನ್ನು ಪಡೆಯಬೇಕಾದರೆ ಏಕಾಗ್ರಚಿತ್ತರಾಗಿರಬೇಕು. ಬೀಜದಂತೆ, ನಮ್ಮ ಸುತ್ತುಮುತ್ತಲವರಿಂದ, ಕಲಿತು ಸಾರವನ್ನು ಗ್ರಹಣ ಮಾಡಿ ಎತ್ತರಕ್ಕೆ ಬೆಳೆಯಬೇಕು, ಬೀಜ ತನ್ನನ್ನು ಹೇಗೆ ಇಲ್ಲವಾಗಿಸುತ್ತದೆಯೋ ಹಾಗೆಯೇ ನಾವು ಪಡೆದುಕೊಂಡ ಬಂದ ಅವಗುಣಗಳನ್ನು ತೊರೆದು ಕೇವಲ 'ಗುಣ ಗ್ರಹಣ' ಮಾಡಿದರೆ ಮುಂದಕ್ಕೆ ಹೋಗಬಹುದು, ಬಯಸಿದ್ದನ್ನು ಸೇರಬಹುದು ಮೇರು ಶಿಖರವನ್ನೂ ಹತ್ತಬಹುದು ರಜತಗಿರಿಯಲ್ಲಿ ಶಿವತಾಂಡವವನ್ನೂ ನೋಡಬಹುದು.

**ಮುಕ್ತಕ – 765**

**ತನ್ನ ರುಚಿ ರಾಮರುಚಿ; ತನ್ನ ಸಂತುಷ್ಟಿ ಪರಿ - ।**
**ಪೂರ್ಣವಪ್ಪುದು ರಾಮಸಂತುಷ್ಟಿಯಿಂದ ॥**
**ಎನ್ನುವಾ ಸಾಜದಾ ದೈವಾತ್ಮಭಾವದಲಿ ।**
**ಧನ್ಯಳಾದಳು ಶಬರಿ - ಮಂಕುತಿಮ್ಮ ॥**

ಪೂರ್ಣವಪ್ಪುದು=ಪೂರ್ಣವು+ಅಪ್ಪುದು

ಸಂತುಷ್ಟಿ=ತೃಪ್ತಿ, ಅಪ್ಪುದು=ಆಗುತ್ತದೆ, ಸಾಜದಾ= ಸಹಜದ

ತನಗೆ ರುಚಿಯಾಗಿ ಕಂಡದ್ದು ರಾಮನಿಗೂ ರುಚಿಯಾಗುವುದು. ರಾಮನಿಗೆ ರುಚಿಯಾಗಿ ಕಂಡು ರಾಮ ತೃಪ್ತಿಪಟ್ಟರೆ ಅವನ ತೃಪ್ತಿಯೇ ನನ್ನ ತೃಪ್ತಿ, ಎನ್ನುವ ದೈವಾತ್ಮಭಾವವನ್ನು ಅನುಭವಿಸಿ ಶಬರಿ ಧನ್ಯಳಾದಳು ಎಂದು ಶಬರಿಯ ವೃತ್ತಾಂತವನ್ನು ಅರುಹುತ್ತಾ ದೈವ ತೃಪ್ತಿಯಲ್ಲೇ ಮಾನವ ತೃಪ್ತಿ ಕಾಣಬೇಕು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮತಂಗ ಮುನಿಗಳ ಆಶ್ರಮದಲ್ಲಿ ರಾಮನ ವಿಚಾರವನ್ನೆಲ್ಲಾ ಕೇಳಿ ತಿಳಿದ, ವ್ಯಾಧಕುಲದಲ್ಲಿ ಜನಿಸಿದ ಶಬರಿ ಎಂಬ ವೃದ್ಧೆಯು, ರಾಮನ ದರುಶನದಿಂದ ಸಿಗಬಹುದಾದ ತನ್ನ ಮುಕ್ತಿಗಾಗಿ ತಪಸ್ಸನ್ನು ಮಾಡುತ್ತಾ ಆ ಆಶ್ರಮದಲ್ಲೇ





ಇರುತ್ತಾಳೆ. ಕಬಂದಬಾಹುಚ್ಛೇದನಾನಂತರ ಸುಗ್ರೀವನನ್ನು ಅರಸುತ್ತಾ ಕಾಡು ಮೇಡುಗಳಲ್ಲಿ ಅಲೆಯುತ್ತಿದ್ದ ರಾಮ ಲಕ್ಷ್ಮಣರು ಆ ಮತಂಗಾಶ್ರಮದ ಬಳಿ ಬಂದಾಗ ತಪಸ್ವಿನಿಯಾದ ಶಬರಿಯನ್ನು ಕಾಣುತ್ತಾರೆ. ನಂತರ ಅವಳ ಪೂಜೆಯನ್ನು ಸ್ವೀಕರಿಸಿ ಅವಳು ಇತ್ತ ಹಣ್ಣುಗಳನ್ನು ಸ್ವೀಕರಿಸುತ್ತಾರೆ. ಅವಳಿಗೆ ಅನನ್ಯವಾದ ಭಕ್ತಿಯೆಷ್ಟಿತ್ತೆಂದರೆ, ಆ ಹಣ್ಣುಗಳನ್ನು ಒಂದೊಂದಾಗಿ ತಾನು ಕಚ್ಚಿ ತನಗೆ ರುಚಿಯಾಗಿ ಕಂಡರೆ ಅದನ್ನು ರಾಮ ಲಕ್ಷ್ಮಣರಿಗೆ ನೀಡುತ್ತಿದ್ದಳು. ಆ ಹಣ್ಣನ್ನು ತಿಂದು ರಾಮ ಸಂತುಷ್ಟನಾದರೆ ಅವಳಿಗೆ ತೃಪ್ತಿ. ಅಂತಹ ಶಬರಿ ರಾಮ ದರುಶನವಾದಮೇಲೆ ಜಗತ್ತಿನಲ್ಲಿ ಮತ್ತೇನನ್ನೂ ಬಯಸದೆ ದೇಹತ್ಯಾಗಮಾಡಿ ಪರಮ ಪದವನ್ನು ಸೇರುತ್ತಾಳೆ.

ಇಲ್ಲಿ ನಾವು ನೋಡಬೇಕಾದುದೇನೆಂದರೆ, ಶಬರಿಯ ಅನನ್ಯ ಭಕ್ತಿ. ರಾಮನಿಂದ ತನಗೆ ಮುಕ್ತಿಯೆಂಬ ದೃಢ ನಂಬಿಕೆ. ಆ ನಂಬಿಕೆಯೇ ರಾಮನನ್ನು ಅವಳಲ್ಲಿಗೆ ಬರುವಂತೆ ಮಾಡಿತು. ಆ ಭಕ್ತಿಯೇ ಅವಳಿಗೆ ರಾಮನನ್ನು ಸೇವಿಸುವ ಮತ್ತು ಅವನ ದರುಶನಾನಂತರ ಸ್ವ-ಚ್ಛೆಯಿಂದ ತನ್ನ ದೇಹತ್ಯಾಗಮಾಡುವ ಧೈರ್ಯ ಮತ್ತು ಸಾಧ್ಯತೆಯನ್ನು ನೀಡಿತು. ನಮ್ಮ ಮನಸ್ಸಿನಲ್ಲಿ ಅನನ್ಯವಾದ ಮತ್ತು ದೃಢ ಭಕ್ತಿಯಿಂದ ಮಾತ್ರ ಔನ್ನತ್ಯವನ್ನು ಪಡೆಯಲು ಸಾಧ್ಯ. ಈ ರೀತಿಯ ಅನನ್ಯವಾದ ಭಕ್ತಿಯನ್ನು ನಮ್ಮ ದಾಸವರೇಣ್ಯರುಗಳಲ್ಲಿ, ತಮಿಳುನಾಡಿನ ಆಳ್ವಾರ್-ಆಯನಾ ಪರಂಪರೆಯಲ್ಲಿ,

ಮಹಾರಾಷ್ಟ್ರದ ಭಕ್ತಿ ಪಂಥದ ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಂ, ಚೊಕಮೇಳರಲ್ಲಿ, ಮೀರಾ, ಕಬೀರ ಮುಂತಾದ ಭಕ್ತ ಶಿರೋಮಣಿಗಳಲ್ಲಿ ಕಾಣಬಹುದು.

ನಮ್ಮ ಸಾಮಾನ್ಯ ಬದುಕಿನಲ್ಲೂ ಸಹ ನಾವು ಯಾವುದನ್ನಾದರೂ ದೃಢ ಮನಸ್ಸಿನಿಂದ ಪಡೆಯಬೇಕೆಂದುಕೊಂಡರೆ ಅದನ್ನು ಪಡೆಯುವ ಶಕ್ತಿಯನ್ನು ಆ ನಮ್ಮ ಆಸೆಯೇ ತುಂಬುವಂತೆ, ಪರತತ್ವವನ್ನು ಅರಿಯುವ ಮತ್ತು ಕಾಣುವ ಉತ್ಕಟ ಅಪೇಕ್ಷೆ ನಮಗೆ ಬಂದರೆ ಕ್ಷಣಮಾತ್ರದಲ್ಲಿ ಅದು ನಮಗೆ ಲಭ್ಯವಾಗುತ್ತದೆ. ಆದರೆ ಅದು ಎಷ್ಟು ಬೇಗ, ಯಾವ ಪ್ರಮಾಣದಲ್ಲಿ, ಎಷ್ಟು ನಿಚ್ಚಳವಾಗಿ ನಮಗೆ ಗೋಚರಿಸುತ್ತದೆ ಎನ್ನುವುದು ನಮ್ಮ ಬಯಕೆಯ ತೀವ್ರತೆಯಮೇಲೆ ಆಧಾರಪಟ್ಟಿರುತ್ತದೆ. ಇದಕ್ಕೆ ಎಲ್ಲರೂ ಪ್ರಯತ್ನಿಸಬಹುದು. ಯಾರ ಪ್ರಯತ್ನ ಎಷ್ಟು ತೀವ್ರವಾಗಿದ್ದರೆ ಅವರಿಗೆ ಪರತತ್ವದ ಉತ್ತುಂಗ ಶಿಖರ ಅಷ್ಟು ಶೀಘ್ರವಾಗಿ ಲಭ್ಯವಾಗುತ್ತದೆ.





**ಮುಕ್ತತ - 766**

**ಘನತತ್ವವೊಂದಕ್ಕೆ ದಿನರಾತ್ರಿ ಮನಸೋತು ।**

**ನೆನೆಯದಿನ್ನೊಂದನೆಲ್ಲವ ನೀಡುತದರಾ ॥**

**ಅನುಸಂಧಿಯಲ್ಲಿ ಜೀವಭಾರವನು ಮರೆಯುವುದು ।**

**ಹನುಮಂತನುಪದೇಶ – ಮಂಕುತಿಮ್ಮ ॥**

ನೆನೆಯದಿನ್ನೊಂದನೆಲ್ಲವ=ನೆನೆಯದೆ+ಇನ್ನೊಂದನು+ಎಲ್ಲವ, ನೀಡುತದರಾ=ನೀಡುತ+ಅದರಾ,

ಹನುಮಂತನುಪದೇಶ=ಹನುಮಂತನ+ಉಪದೇಶ

ಘನತತ್ವ=ಮಹತ್ತರವಾದ ತತ್ವ

ಮಹತ್ತರವಾದ ತತ್ವಕ್ಕೆ ದಿನರಾತ್ರಿ ಮನಸ್ಸನ್ನು ತೊಡಗಿಸಿಕೊಂಡು, ಬೇರಾವುದನ್ನೂ ನೆನೆಯದಂತೆ ಆ ಘನ ತತ್ವದಲ್ಲಿ ಲೀನವಾಗಿ ತನ್ನ ಜೀವ ಭಾರವನು ಮರೆಯುವಂತಹ ಒಂದು ಆದರ್ಶದ ನಿದರ್ಶನವನ್ನು ತೋರುವುದೇ ಮಹಾತ್ಮ ಹನುಮಂತನ ಜೀವನವೆಂದು ಹೇಳುತ್ತಾ, ಏಕಾಗ್ರತೆಯಿಂದ ಆತ್ಮಾನುಸಂಧಾನ ಮಾಡಿಕೊಂಡಾಗ ಲಭ್ಯವಾಗುವ ಮೇರು ಸ್ಥಿತಿಯನ್ನು ನಮಗೆ ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೀತಾನ್ವೇಷಣೆಯಲ್ಲಿ ತೊಡಗಿದ್ದ ರಾಮನಿಗೆ ಸುಗ್ರೀವನ ಪರಿಚಯ, ಅಲ್ಲಿ ಹನುಮಂತನ ಭೇಟಿ, ಹನುಮಂತನಿಗೆ 'ಎಷ್ಟೋ ದಿನಗಳಿಂದ ಕಾಣಲು ಕಾಯುತ್ತಿದ್ದಂತಹ ಅದ್ಭುತ ಪ್ರಭೆ' ಯನ್ನು ಕಂಡಷ್ಟೇ ಸುಖದ ಅನುಭವ. ಆ ಪ್ರಭೆಯ ಬೆಳಕಲ್ಲಿ ಅಂತರಂಗದ ಕತ್ತಲೆಲ್ಲಾ ದೂರವಾಗಿ ಪರತತ್ವದ ದರ್ಶನವಾಗಿ ಬದುಕಿನ ಭಾರಗಳೆಲ್ಲಾ ಹಗುರಾದಂತೆ ಅನುಭವ. ಆ ಅನುಭವದಿಂದ ಅವನು ಆ ಪರತತ್ವಕ್ಕೆ ಸಂಪೂರ್ಣ ಸಮರ್ಪಿತ. ನಂತರ ನಡೆದ ಸಮುದ್ರ ಲಂಗನ, ಸೀತಾ ದರ್ಶನ, ಲಂಕಾದಹನ ಎಲ್ಲವೂ ಅವನಿಂದ ಸಂಪೂರ್ಣ ಸಮರ್ಪಣಾ ಭಾವದಿಂದ ನಡೆದ ಕೈಂಕರ್ಯಗಳು. 'ರಾಮ ನಾಮವೊಂದನ್ನು ಬಿಟ್ಟು ಬೇರೇನೂ ಅರಿಯೆನು' ಎನ್ನುವ ಸ್ಥಿತಿಗೆ ಹನುಮಂತ ತಲುಪಿದ್ದು ಅ ಸಮರ್ಪಣಾ ಭಾವದಿಂದಲೇ. ಅವನ ಜೀವನ ಮತ್ತು ಸಾಧನೆ ನಮಗೆ ಅದನ್ನೇ ಉಪದೇಶಿಸುತ್ತದೆ ಎನ್ನುವಂತೆ ಮಾನ್ಯ ಗುಂಡಪ್ಪನವರು ಇದನ್ನು 'ಹನುಮಂತನುಪದೇಶ' ಎಂದರು.

ಒಚಿದು ಉತ್ಕೃಷ್ಟ ಅಪೇಕ್ಷೆಯಿದ್ದರೆ, ಅಪೇಕ್ಷಿತ ವಸ್ತು ಅಥವಾ ವಿಷಯ ಅಥವಾ ವ್ಯಕ್ತಿ ನಮಗೆ ಲಭ್ಯವಾಗು(ತ್ತದೆ)ತ್ತಾರೆ ಎನ್ನುವುದಕ್ಕೆ ಹನುಮಂತನೇ ಸಾಕ್ಷಿ. ಅಂತಹ ಮೇರುಸಮಾನ ಸ್ಥಿತಿಗೆ ನಾವೂ ಆಸೆ ಪಟ್ಟು ಅದನ್ನು ಅಂತರಂಗದಲ್ಲಿ ಅನುಸಂಧಾನ ಮಾಡಿಕೊಂಡು ಅದನ್ನೇ ತನುಮನಗಳಲ್ಲಿ ತುಂಬಿಕೊಂಡು ಅದಕ್ಕಾಗಿಯೇ ಜೀವಿಸಿದರೆ, ಬದುಕು ಹಗುರವಾಗುತ್ತದೆ. ಏಕೆಂದರೆ ಬದುಕಿನಲ್ಲಿ 'ನಮ್ಮಷ್ಟಕ್ಕೆ ನಾವು, ನಮಗೋಸ್ಕರವೇ ಬದುಕಿದಾಗ' ನಮ್ಮ ಆಸೆಗಳು ನಮಗಷ್ಟೇ ಸೀಮಿತವಾಗಿರುತ್ತವೆ. ಅವುಗಳನ್ನು

ಪೂರೈಸಿಕೊಳ್ಳಲಾಗದಾಗ, ಕೊರತೆ, ನೋವು, ಹಿಂಸೆ, ದುಃಖ ಮುಂತಾದವುಗಳನ್ನು ಅನುಭವಿಸಬೇಕಾಗುತ್ತದೆ. ಪರತತ್ವವನ್ನು ಅನುಸಂಧಾನಮಾಡಿ ಪರಹಿತಕ್ಕಾಗಿಯೇ ಬದುಕುವ ಜೀವನದಲ್ಲಿ 'ನಮ್ಮ ಆಸೆ ಅವಶ್ಯಕತೆ'ಗಳೇ ಇಲ್ಲದಂತಾಗ ಕೊರತೆ, ನೋವು ಹಿಂಸೆ ದುಃಖಗಳು ಇರುವುದಿಲ್ಲ ಅಲ್ಲವೇ ? ಅಂತಹ ಸ್ಥಿತಿಯಲ್ಲಿ ಕೇವಲ ಆನಂದದ ಅನುಭೂತಿಯಾಗುತ್ತದೆ.

ಹನುಮಂತನೂ ಸಹ ರಾಮನಲ್ಲಿ ತನ್ನ ಗಮ್ಯ, ಗುರಿಯನ್ನು ಕಂಡು ರಾಮನ ಸೇವೆಯೇ ಪರಮಾರ್ಥವೆಂದು ಅರಿತು ಸದಾಕಾಲ 'ರಾಮ ಧ್ಯಾನ-ರಾಮ ಕೈಂಕರ್ಯ' ವನ್ನೇ ಮಾಡುತ್ತಾ ಮುಕ್ತನಾಗಿ ಧನ್ಯನಾಗುತ್ತಾನೆ. ಅವನಿಗೆ ಎಲ್ಲವೂ ರಾಮನೇ. ರಾಮ ಎಂದರೆ 'ರಮಯತೀತಿ ರಾಮಃ' ಎಂದಿದ್ದಾರೆ. ಮನಸ್ಸಿಗೆ ಆಹ್ಲಾದವನ್ನೀಯುವ, ಆತ್ಮಾನಂದವನ್ನೀಯುವ ಅನುಭೂತಿಯೇ 'ರಾಮ'. ಕೇವಲ ದಶರಥ ಪತ್ರ, ಸೀತಾಪತಿ ರಾಮ'ನೇ ರಾಮನಲ್ಲ. ಅಂತಹ 'ರಮಣೀಯ' ವಾದ ಅನುಭವವನ್ನು ನಾವೂ ಸಹ ಅಪೇಕ್ಷೆ ಪಡಬೇಕು. ನಮ್ಮ ಅಪೇಕ್ಷೆ ತೀವ್ರವಾದಾಗ ಅದು ನಮಗೆ ಲಭ್ಯವಾಗಿ, ನಮಗೂ ಆತ್ಮಾನಂದವುಂಟಾಗಿ ಬದುಕು ಹಗುರಾಗುತ್ತದೆ. ಬದುಕಿನ ಜಂಜಾಟದಲ್ಲಿ ಬಿದ್ದು, ಇದನ್ನು ಬಿಟ್ಟು ಬೇರೆಲ್ಲಿ ಹೋಗುವುದು ಅಥವಾ ಹೇಗೆ ಹೋಗುವುದು ಎನ್ನುವ ಪ್ರಶ್ನೆ ಹಲವರನ್ನು ಕಾಡಬಹುದು. ಇದನ್ನು ಬಿಡುವ ಅಥವಾ ಬೇರೆಲ್ಲೂ ಓಡಿಹೋಗಬೇಕಾದ ಅವಶ್ಯಕತೆಯೇ ಇಲ್ಲ. ಇಲ್ಲಿದ್ದು ಇದರಿಂದಲೇ ಅದನ್ನು ಪಡೆಯಬೇಕು ಅದೇ ನಿಜವಾದ ಸಾಧನೆ. ಪ್ರಯತ್ನ ಪಟ್ಟರೆ ಸಾಧಿಸಬಹುದು.

**ಮುಕ್ತಕ – 767**

**ಕ್ಷಣದಿಂದನುಕ್ಷಣಕೆ, ದಿನದಿಂದ ಮರುದಿನಕೆ |**

**ಅನಿತನಿತರೊಳೆ ಬದುಕತಾಯುವನು ಕಳೆವಾ ||**

**ಮನದ ಲಘುಸಂಚಾರವೊಂದು ಯೋಗದುಪಾಯ |**

**ಶುನಕೋಪದೇಶ - ಮಂಕುತಿಮ್ಮ ||**

ಕ್ಷಣದಿಂದನುಕ್ಷಣಕೆ-ಕ್ಷಣದಿಂದ+ಅನುಕ್ಷಣಕೆ, ಅನಿತನಿತರೊಳೆ=ಅನಿತು+ಅನಿತರ+ಒಳೆ,

ಬದುಕತಾಯುವನು=ಬದುಕುತ+ಆಯುವನು,

ಯೋಗದುಪಾಯ=ಯೋಗದ+ಉಪಾಯ,ಶುನಕೋಪದೇಶ=ಶುನಕ+ಉಪದೇಶ.

ಅನಿತನಿತು +ಅಷ್ಟಷ್ಟು ಆಯುವನು=ಆಯಸ್ಸನ್ನು, ಲಘುಸಂಚಾರ=ಸಣ್ಣ ಸಂಚಾರ (ಅದೂರಾಲೋಚನೆ) (ಹತ್ತಿರದ ಯೋಚನೆ) ಶುನಕೋಪದೇಶ=ನಾಯಿಯ ಉಪದೇಶ.

'ಹೊಲೆಯನಂದ, ಶಬರಿ ಮತ್ತು ಹನುಮಂತ' ರನ್ನು ಮತ್ತು ಅವರ ಭಕ್ತಿ ಮತ್ತು ಶ್ರದ್ಧೆಯನ್ನು ಈ ಹಿಂದಿನ ಮೂರು ಮುಕ್ತಕಗಳಲ್ಲಿ ಉಲ್ಲೇಖಮಾಡಿ, ಈ ಮುಕ್ತಕದಲ್ಲಿ ಒಂದು ನಾಯಿಯ ಜೀವನವನ್ನು ತೋರಿ 'ನೋಡಿ ಇದರಿಂದಲೂ ಬದುಕಿನ ಮಹತ್ತತ್ವವನ್ನು ಕಲಿಯಬಹುದು' ಎಂದು ನಮಗೆ ತೋರಿದ್ದಾರೆ ಮಾನ್ಯ ಗುಂಡಪ್ಪನವರು.





ಇಲ್ಲಿ ಉಲ್ಲೇಖವಾಗಿರುವುದು ಕೇವಲ 'ಬೀದಿನಾಯಿ', ಪಾಪ ಅದಕ್ಕೆ ಹಿಂದಿನ ಕಾಲದಂತೆ ಯಾರೂ ನಿಗದಿತ ಸಮಯಕ್ಕೆ ಕರೆದು ಊಟ ಹಾಕುವುದಿಲ್ಲ. ಯಾವ ಸಮಯಕ್ಕೆ ಎಲ್ಲಿ ಎಷ್ಟು ಸಿಕ್ಕರೆ, ಅಷ್ಟನ್ನು ತಿಂದು ತೃಪ್ತಿಪಡಬೇಕು. ಇಂದು ಸಿಕ್ಕದ್ದನ್ನು ನಾಳೆಗಾಗಿ ಶೇಖರಿಸಿ ಇಡಲಾಗುವುದೂ ಇಲ್ಲ ಮತ್ತು ಅದಕ್ಕೆ ನಾಳೆಯ ಚಿಂತೆಯೂ ಇರುವುದಿಲ್ಲ. ಕೆಲ ಪ್ರಾಣಿಗಳು, ಪಕ್ಷಿಗಳು ಮತ್ತು ಕೀಟಗಳು ಮುಂದಿನ ದಿನಗಳಿಗೆ ಶೇಖರಿಸಿ ಇಡುವುದುಂಟು. ಆದರೆ ಶೇಖರಿಸಿ ಇಡುವುದರಲ್ಲಿ ಮನುಷ್ಯ ಮಾತ್ರ ಅಗ್ರಗಣ್ಯ. ಇಂದಿಗಷ್ಟೇ ಅಲ್ಲ ತನ್ನ ಜೀವನಕ್ಕೂ ಮಿಗಿಲಾಗಿ ತನ್ನ ಹತ್ತು ತಲೆಮಾರು ತಿಂದುಂಡು ತೇಗುವಷ್ಟನ್ನು ಶೇಖರಿಸಿಡುವ ದೂರದ ಆಸೆ ಮತ್ತು ದುರಾಸೆ, ಮಾನವನಿಗೆ. ಇವನಿಗೆ 'ಲಘು ಸಂಚಾರವಿಲ್ಲವೇ ಇಲ್ಲ. ಮುಂದಿನ ಕ್ಷಣ ಏನಾಗುತ್ತದೆಂದು ಗೊತ್ತಿಲ್ಲದಿದ್ದರೂ ದೂ(ದು)ರಾಲೋಚನೆಗೇನೂ ಕೊರತೆ ಇಲ್ಲ.

ಇವನ ಈ ದೂ(ದು)ರಾಲೋಚನೆಯೇ ಇವನನನ್ನು ನಾನಾ ಸಂಕಷ್ಟಗಳಿಗೆ ಗುರಿಯಾಗಿಸಿ ಪಡಬಾರದ ಪಾಡನ್ನು ಪಡಿಸುತ್ತದೆ. ಅಂತಹ ಕಷ್ಟಗಳಿಂದ ಪಾರಾಗಿರಬೇಕಾದರೆ 'ಅನಿತನಿತರೊಳೆ ಬದುಕತಾಯುವನು ಕಳೆವಾ

ಮನದ ಲಘುಸಂಚಾರವೊಂದು' ಎನ್ನುವಂತೆ, ಅಂದಿಗೆ ಎಷ್ಟು ಸಿಕ್ಕರೆ ಅಷ್ಟನ್ನು ಸಂತೋಷದಿಂದ ತೃಪ್ತಿಯಿಂದ ಅನುಭವಿಸುವ, ಹತ್ತಾರು ವರ್ಷಗಳಿಗೆ ಕೂಡಿಡುವ ದೂರಾಲೋಚನೆಯಿಂದ ಮುಕ್ತವಾಗಿರುವ ಮನಸ್ಸಿರಲಿ ನಿನಗೆ ಎಂದು ಹಿತೋಪದೇಶವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು. ಕೂಡಿಟ್ಟರೆ ಏನಾಗುತ್ತದೆಂದು ಸರ್ವಜ್ಞ ಕವಿ 'ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ, ಕಳ್ಳಂಗೆ, ನೃಪಂಗೆ - ಸರ್ವಜ್ಞ" ಎಂದು ಹೇಳುತ್ತಾನೆ. ಗೀತಾಚಾರ್ಯ ಶ್ರೀ ಕೃಷ್ಣ, ಭಗವದ್ಗೀತೆಯಲ್ಲಿ ( 4-22) 'ಯದೃಚ್ಚಾಲಾಭ ಸಂತುಷ್ಟೋ' ಎಂದು ಹೇಳಿ, ಯಾವುದನ್ನೂ ಬಯಸದೆ ಸಿಕ್ಕದ್ದರಲ್ಲಿ ತೃಪ್ತಿಯನ್ನು ಹೊಂದುವವನು ನನಗೆ ಪ್ರೀತಿಪಾತ್ರನು ಎಂದು ಹೇಳುತ್ತಾನೆ. ಭಾಗವತದಲ್ಲಿ ಬರುವ 'ರಂತಿದೇವ'ನೆಂಬ ರಾಜನ ವೃತ್ತಾಂತವೂ ಇದನ್ನೇ ಪುಷ್ಟಿಕರಿಸುತ್ತದೆ.

ಹಾಗಾಗಿ ಈ ನಾಯಿಯ ಬದುಕಿನಿಂದ ನಮಗೆ ಸಿಗುವ ಉಪದೇಶವೇನೆಂದರೆ, ಮಾನವರಾಗಿ ನಮಗೆ ದೂರದರ್ಶಿತ್ವವಿರಬೇಕಾದರೂ ಮನಸ್ಸಿನಲ್ಲಿ ಲಘುಸಂಚಾರವಿರಲಿ. ಬದುಕಿನ ಅವಶ್ಯಕತೆಗಳಿಗೆ ಬಹಳವಾಗಿ ಚಿಂತಿತರಾಗದೆ ಅಂದಿಗಂದಿಗೆ ತೃಪ್ತಿಯಿಂದ ಬದುಕಿದರೆ ಸುಖ. ಅಂತಹ ಸ್ಥಿತಿಯಲ್ಲಿ ಪರತತ್ವದ ಬಗ್ಗೆ ಆಲೋಚಿಸಲು ಮನೋಬಲ ಮತ್ತು ಮಾನಸಿಕ ಸಿದ್ಧತೆ ಇರುತ್ತದೆ. ದೂರದರ್ಶಿತ್ವ ಪರತತ್ವದ ಮೇಲಿರಬೇಕಾಗಲೀ 'ಪರಮಾನ್ನ' ದ ಮೇಲಲ್ಲ. ಸಿಕ್ಕದರಲ್ಲಿ ತೃಪ್ತಿಪಟ್ಟು, ಸಿಗದಿದ್ದದ್ದಕ್ಕೆ ಚಿಂತೆಯಿಲ್ಲದೆ ಇರುವುದೇ ಒಂದು ಯೋಗ, ಮನಸ್ಸಿನಲ್ಲಿ ಆಸೆಯನ್ನು ತೊರೆದು ತೃಪ್ತಿಯನ್ನು ತಂದುಕೊಳ್ಳುವುದೇ ಒಂದು 'ಯೋಗ' ಸಾಧನೆ. ಅಂತಹ ಯೋಗದ ಪಾಠವನ್ನು ನಾವು ಅನುಸಂಧಾನಮಾಡಿದರೆ ಪ್ರಪಂಚದ ವಿಷಯಗಳನ್ನು ಬಿಟ್ಟು ಪರತತ್ವವನ್ನು ಚಿಂತಿಸುವ ಮತ್ತು ಅದನ್ನು ಪಡೆಯುವ ಹಾದಿಯಲ್ಲಿ ನಡೆಯಬಹುದು.

**ಮುಕ್ತಕ – 768**

**ಗತಿಯೇನು ಎನಗೆನುತ ಕೇಳ್ವರೆ ಎಲ್ಲರುಂ।**

**ಹಿತವೆಂತು ಜಗಕೆಂದು ಕೇಳುವವರಾರು? ||**

**ಮತಿಯ ವಿಶ್ವದಿ ಬೆರೆಸಿ ಜೀವಿತವ ವಿಸ್ತರಿಸೆ |**

**ಪಥ ಮುಕ್ತಿಗಾಗಳೇ – ಮಂಕುತಿಮ್ಮ**

ಎನಗೆನುತ =ಎನಗೆ +ಎನುತ, ಹಿತವೆಂತು=ಹಿತವು+ಎಂತು,

ಜಗಕೆಂದು=ಜಗಕೆ+ಎಂದು,ಕೇಳುವವರಾರು=ಕೇಳುವವರು+ಯಾರು,

ಕೇಳ್ವರೆ=ಕೇಳುವವರೇ, ಮತಿಯ=ಬುದ್ಧಿಯನ್ನು, ವಿಸ್ತರಿಸೆ=ಹಿರಿದಾಗಿಸುವುದು, ಪಥ = ಹಾದಿ, ದಾರಿ

ಮುಂದಕ್ಕೆ ನನ್ನ ಗತಿಯೇನು? ಎಂದು ಕೇಳುವವರೇ ಹೆಚ್ಚು ಜನರಿದ್ದಾರೆ. ಜಗದ ಹಿತದ ಚಿಂತನೆ ಮಾಡುವವರಾರೂ ಇಲ್ಲ. ಮನದ ಆಲೋಚನೆಯನ್ನು ವಿಸ್ತಾರಗೊಳಿಸಿ ಸ್ವಾರ್ಥವನ್ನು ಬಿಟ್ಟು ಜಗಚಿಂತನೆಯಲ್ಲಿ ಸರ್ವರ ಹಿತ, ಒಳಿತಿಗಾಗಿ ತೊಡಗಿಸಿಕೊಂಡರೆ, ಅದೇ ಜೀವನದಲ್ಲಿ 'ಮುಕ್ತಿಗೆ ದಾರಿ ಎಂದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮುಂದಿನ ಚಿಂತೆಯನ್ನು ಅತಿಯಾಗಿ ಮಾಡಿ, ತಮಗೆಷ್ಟು ಬೇಕು ಎಂದು ನಿರ್ಧರಿಸಲಾಗದೆ, ಪ್ರತಿ ನಿತ್ಯ ಇಷ್ಟರ, ಮತ್ತಷ್ಟರ ಆಸೆ ಪಡುತ್ತಾ ಸದಾಕಾಲ ಸ್ವಾರ್ಥ ಚಿಂತನೆಯಲ್ಲಿರುವವರೇ ಎಲ್ಲರೂ. ಹಿಂದೆ ಒಂದು ಕಾಲಕ್ಕೆ ಪರಹಿತ, ಲೋಕ ಹಿತವನ್ನು ಚಿಂತಿಸುವ ಜನರಿದ್ದರು. ನಮ್ಮ ಋಷಿಮುನಿಗಳು, ಸಾಧು ಸಂತರು, ಹಲವಾರು ಧರ್ಮಪರಿಪಾಲಕ ರಾಜರುಗಳು, ಸಾಮಾನ್ಯ ಗೃಹಸ್ತರೂ ಸಹ ಅಂತಹ ಗುಂಪಿಗೆ ಸೇರಿದವರಾಗಿದ್ದರು. ಇಂದು ಬೆಳಗಿನ ಹೊತ್ತು 'ದುರ್ಬೀನು' ಹಾಕಿಕೊಂಡು ಹುಡುಕಿದರೂ ಒಬ್ಬರೂ ಅಂತಹವರು ಸಿಗುವುದಿಲ್ಲ. ನಾವು ಏನೇ ಮಾಡಿದರೂ ಅದರ ಪ್ರಯೋಜನ ಕೇವಲ 'ನಮಗೆ' ಆಗಬೇಕು. ಮೈದಾಸನಂತೆ ನಮ್ಮ ಆಸೆಗೆ ಮಿತಿಯೇ ಇಲ್ಲ. ಜಗತ್ತಿನಲ್ಲಿ ಯಾರೂ

ಶಾಶ್ವತವಲ್ಲ. ನಾವು ಏನೇ ಗಳಿಸಿದ್ದರೂ ಎಷ್ಟೇ ಗಳಿಸಿದ್ದರೂ ಎಲ್ಲವನ್ನೂ ಇಲ್ಲೇ ಬಿಟ್ಟು ಹೋಗಬೇಕು ಎಂದು ಎಲ್ಲರೂ ತಿಳಿದಿದ್ದರೂ ಮತ್ತಷ್ಟನ್ನು ಗಳಿಸಿ ಗಳಿಸಿ ಶೇಕರಿಸಿಡುವ ದುರ್ಭಾವ ಕೇವಲ ಸ್ವಾರ್ಥದಿಂದ ಹುಟ್ಟಿಕೊಂಡದ್ದು.

ಸ್ವಾರ್ಥವಿಲ್ಲದೆ ಬದುಕುವುದು ಹೇಗೆ? ಎಂದು ಎಲ್ಲರೂ ಪ್ರಶ್ನಿಸುತ್ತಾರೆ. ಆದರೆ ಮನುಷ್ಯನಿಗೆ ಎಷ್ಟು ಶಕ್ತಿಯಿದೆ ಎಂದರೆ, ತನ್ನ ಹಿತವನ್ನು ತಾನು ನೋಡಿಕೊಂಡ ಮೇಲೂ ಲೋಕಹಿತವನ್ನು ನೋಡಲು ಬಹಳಷ್ಟು ಶಕ್ತಿಯಿರುತ್ತದೆ. ಪ್ರಮಾಣದ ವ್ಯತ್ಯಾಸವಿರಬಹುದು. ಆ ಶಕ್ತಿಯಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಲೋಕಹಿತಕ್ಕಾಗಿ ವ್ಯಯಿಸಿದರೆ ಇಲ್ಲಿರುವ ಯಾರಿಗೂ ಕಷ್ಟ, ನೋವು, ಹಿಂಸೆ ಇರುತ್ತಿರಲಿಲ್ಲ. ಆದರೆ ನಮ್ಮ ಎಲ್ಲಾ ಶಕ್ತಿಯೂ ಸ್ವಾರ್ಥಕ್ಕಾಗಿಯೇ ವ್ಯಯವಾಗುತ್ತಿದ್ದರೆ ಇನ್ನು ಲೋಕಹಿತದ ಚಿಂತೆಗೆಲ್ಲಿ ನಮಗೆ ಸಮಯ. ಎಲ್ಲರಿಂದ ಎಲ್ಲರಿಗಾಗಿ





ಚುನಾಯಿಸಲ್ಪಟ್ಟ ಸರ್ಕಾರನ್ನು ನಡೆಸುವವರನ್ನು ನೋಡಿ, ಅವರ ಸ್ವಾರ್ಥದ ದಾಹಕ್ಕಾಗಿ ಅವರು ಸ್ವಾಹಾಮಾಡುವಾಗ ಕೆಳಗೆ ಚೆಲ್ಲುವ ಹಲವಾರು ಹನಿಗಳಿಂದ ಏನಾದರೂ ಜನಹಿತದ ಸರ್ವಹಿತದ ಕೆಲಸಗಳಾದರೆ, ಅದೇ ಇಂದು ನಾವು ಕಾಣುವ ಅಭಿವೃದ್ಧಿ.

ತನ್ನ ಅವಶ್ಯಕತೆಗಳನ್ನು ಸ್ವಾಭಾವಿಕವಾಗಿ ಪೂರೈಸಿಕೊಳ್ಳುತ್ತಾ ಸ್ವಾರ್ಥವನ್ನು ತೊರೆದ ಅನುಭವ ಬಹಳ ಸುಂದರವಾಗಿರುತ್ತದೆ. ಅದನ್ನು ಆ ಸ್ಥಿತಿಗೆ ತಲುಪಿಯೇ ಅನುಭವಿಸಬೇಕು 'ನನಗೆ ಈ ಜಗತ್ತಿನಿಂದ ಇನ್ನೇನೂ ಬೇಡ. ಇನ್ನು ನನ್ನ ಶಕ್ತಿಯನ್ನು ಲೋಕಹಿತಕ್ಕಾಗಿ ಉಪಯೋಗಿಸುತ್ತೇನೆ' ಎನ್ನುವ ಭಾವ ಬಂದಾಗ ನಾವು 'ನಾನತ್ವದ, ಮಮಕಾರದ' ವೃತ್ತವನ್ನು ತೊರೆದು ವಿಶಾಲವಾದ ಲೋಕವೃತ್ತಕ್ಕೆ ಕಾಲಿಡುತ್ತೇವೆ. ಮಾನ್ಯ ಗುಂಡಪ್ಪನವರು 'ಮತಿಯ ವಿಶ್ವದಿ ಬೆರೆಸಿ ಜೀವಿತವ ವಿಸ್ತರಿಸಿ' ಎಂದು ಹೇಳುವಂತೆ ನಮಗೆ ವಿಶಾಲ ಮನೋಭಾವ ಬಂದಾಗ ಸ್ವಾರ್ಥದ ಬಂಧನಗಳೆಲ್ಲ ಕಳಚಿ ನಾವು ಮುಕ್ತರಾಗುತ್ತೇವೆ. ಇದೇ ಮುಕ್ತಿಯ ದಾರಿ. ಎಷ್ಟಿದ್ದರೆ ಅಷ್ಟರಲ್ಲಿ, ಎಷ್ಟು ಸಿಕ್ಕರೆ ಅಷ್ಟರಲ್ಲಿ ತೃಪ್ತಿಯ ಜೀವನವನ್ನು ನಡೆಸಿದರೆ, ಸ್ವಾರ್ಥವನ್ನು ಬಿಡಬಹುದು ಸ್ವಾರ್ಥವನ್ನು ಬಿಟ್ಟರೆ ಅದರ ಸೆಳೆತಗಳಿಂದ

ಹೊರಬಂದು ವಿಶಾಲ ಜಗತ್ತಿನಲ್ಲಿ ನಾವೂ ಒಂದಾಗಿ ಬಂದನಗಳಿಂದ ಮುಕ್ತರಾಗಬಹುದು. ಪ್ರಯತ್ನಪಟ್ಟರೆ ಇದು ಎಲ್ಲರಿಗೂ ಸಾಧ್ಯ.

**ಮುಕ್ತಕ – 769**

**ಒಂದುದಿನದೌತಣಕೆ, ಉಪವಾಸಕಿನ್ನೊಂದು ।**

**ಸಂದಣಿಯ ದಿನವೊಂದು, ಬಿಡುವು ದಿನವೊಂದು ॥**

**ಹೊಂದಿರ್ದೊಡುಭಯಮುಂ ಜೀವಕದು ಚಲನ ।**

**ಒಂದು ಕಾಲ್ನಡೆ ಸುಖವೆ? - ಮಂಕುತಿಮ್ಮ ॥**

ಒಂದುದಿನವೌತಣಕೆ=ಒಂದು+ದಿನವು+ಔತಣಕೆ, ಉಪವಾಸಕಿನ್ನೊಂದು ಉಪವಾಸಕೆ+ಇನ್ನೊಂದು, ಹೊಂದಿರ್ದೊಡುಭಯಮುಂ=ಹೊಂದಿ+ಇರ್ದೊಡು+ಉಭಯಮುಂ, ಕಾಲ್ನಡೆ=ಕಾಲ+ನಡೆ

ಒಂದೇ ಕಾಲಿನ ನಡಿಗೆ ಹೇಗೆ ಸುಖವಲ್ಲವೋ, ಹಾಗೆಯೇ ಒಂದು ದಿನ ಔತಣಕ್ಕೆ ಹೋಗುವುದು ಮತ್ತೊಂದು ದಿನ ಉಪವಾಸದ ವ್ರತವನ್ನನುಸರಿಸುವುದು, ಒಂದು ದಿನ ಸಮಾರಂಭದಲ್ಲಿ ಪಾಲ್ಗೊಳ್ಳುವುದು ಮತ್ತೊಂದು ದಿನ ಪೂರ್ಣ ಬಿಡುವನ್ನು ಅನುಭವಿಸುವುದು, ಹೀಗೆ ಎರಡೂ ರೀತಿಯ ಅನುಭವಗಳಿದ್ದರೆ ಬದುಕಿನಲ್ಲಿ ಚೈತನ್ಯವಿರುತ್ತದೆ ಎಂದು, ಬದುಕಿನಲ್ಲಿ ಸ್ವಾರಸ್ಯವನ್ನು ಅನುಭವಿಸುವ ಬಗೆಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಏಕತಾನತೆಯಿಂದ ಬೇಸರವಾಗುತ್ತದೆ. ಜೀವನದ ರುಚಿ ಸವಿಯಬೇಕಾದರೆ ವೈವಿಧ್ಯತೆಯಿರಬೇಕು. ಹೊಟ್ಟೆ ತುಂಬಿಯೇ ಇದ್ದರೆ ತೃಪ್ತಿಯ ಅನುಭವವಾಗುವುದಿಲ್ಲ. ಹಸಿವಿನ ಸಂಕಟದ ಅನುಭವವಾಗಿದ್ದರೆ ಊಟದ ರುಚಿ ರುಚಿಸುತ್ತದೆ, ಹೊಟ್ಟೆ ತುಂಬುವುದು ಎಂದರೆ ಏನೆಂದು ಅರಿವಾಗುತ್ತದೆ. ಕೇವಲ ಸುಖವನ್ನೇ ಅನುಭವಿಸುತ್ತಿದ್ದರೆ, ಸುಖದ ಅನುಭವವಾಗುವುದೇ ಇಲ್ಲ. ಕಷ್ಟವನ್ನು ಅನುಭವಿಸಿದರೆ ಆಗ ಸುಖದ ಅನುಭವ ಹಿತವನ್ನು ತರುತ್ತದೆ. ಹಾಗಾಗಿ ಹಸಿವು-ಭೂರಿಭೋಜನ, ಸುಖ-ಕಷ್ಟ, ಪ್ರೇಮ-ವಿರಹ, ಸೇರುವುದು-ದೂರಾಗುವುದು, ಸರಸ-ವಿರಸ, ಹೀಗೆ ಒಂದಕ್ಕೊಂದು ವಿರುದ್ಧವಾದ ಅನುಭವಗಳನ್ನು ಅನುಭವಿಸಬೇಕು. ಹಾಗಾದಾಗ ಮಾತ್ರ ಜೀವನದ ನಿಜ ಅನುಭವವಾಗುತ್ತದೆ.

'ಸಂದಣಿಯ ದಿನವೊಂದು, ಬಿಡುವು ದಿನವೊಂದು' ಎಂದಿದ್ದಾರೆ ಮಾನ್ಯ ಗುಂಡಪ್ಪನವರು, ವಾರದ ಆರು ದಿನ ದುಡಿದು ಒಂದು ದಿನ ವಿಶ್ರಾಂತಿ ಪಡೆದರೆ ಆಗುವ ಅನುಭವಕ್ಕೂ ಸದಾ ಆರಾಮವಾಗಿರುವವರ ಅನುಭವಕ್ಕೂ ಬಹಳ ವ್ಯತ್ಯಾಸವಿದೆ, ಅಲ್ಲವೇ? ಒಂದನ್ನು ಚೆನ್ನಾಗಿ ಅನುಭವಿಸಿದರೆ ತಾನೇ ಮತ್ತೊಂದು ಏನೆಂದು ಅರ್ಥವಾಗುವುದು. ಹಾಗಾಗಿ 'ಉಭಯವಿರ್ದೊಡಂ'ಎನ್ನುವಂತೆ ಎರಡೂ ಇದ್ದರೆ ಬದುಕು ರುಚಿಕರವಾಗಿ, ಸ್ವಾರಸ್ಯಕರವಾಗಿರುತ್ತದೆ. ಹಳ್ಳ-ದಿಣ್ಣೆ, ಕಾಡು-ಮೈದಾನ, ಒಳ್ಳೆಯ-ಕೆಟ್ಟ, ಸುಖ-ದುಃಖ, ನೋವು-ನಲಿವು ಹೀಗೆ ಸೃಷ್ಟಿಯಲಿ ಎಷ್ಟು ವೈವಿಧ್ಯತೆ ಇದೆಯೋ ಹಾಗೆಯೇ ಮನುಷ್ಯನ ಬದುಕಿನಲ್ಲೂ ಇದೆ. ಹೀಗೆ ದ್ವಂದ್ವಗಳಿರುವುದರಿಂದಲೇ ಪ್ರಕೃತಿ ಸುಂದರವಾಗಿರುವಂತೆ, ಜೀವನದಲ್ಲಿ ದ್ವಂದ್ವಗಳ ಅನುಭವವಾದರೆ ನಮ್ಮ ಜೀವನವೂ ಚೈತನ್ಯಪೂರಕವಾಗಿರುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

ಹಾಗೆಂದು ಬೇಕೆಂದು 'ಉಭಯ'ದ ಅನುಭವವನ್ನು ಹುಡುಕುತ್ತಾ ಹೋಗುವ ಅವಶ್ಯಕತೆ ಇಲ್ಲ. ಬಂದದ್ದನ್ನು ಅನುಭವಿಸಬೇಕು, ಅನಂದದಿಂದ ಅನುಭವಿಸಬೇಕು, ಅನುಭವಿಸಿ ಅನುಭವದ ಸಾರವನ್ನು ಒಳಗಿಳಿಸಿಕೊಂಡರೆ, ಆಗ ಜೀವನ ಸ್ವಾರಸ್ಯಕರವಾಗಿರುತ್ತದೆ.

**ಮುಕ್ತಕ 77ಸಂ**

**ನೇತ್ರಯುಗಳಂ ಪಿಡಿಗುಮೊಂದು ಲಕ್ಷ್ಯವ ಕೂಡಿ ।**

**ಹಸ್ತಯುಗ ಸಾಧಿಪುದು ಮನದರ್ಥವೊಂದನ್ ॥**

**ದ್ವೈತದಿಂದದ್ವೈತವದ್ವೈತದೊಳ್ ದ್ವೈತ ।**

**ಚೈತನ್ಯಲೀಲೆಯಿದು - ಮಂಕುತಿಮ್ಮ**

ಪಿಡಿಗುಮೊಂದು=ಪಿಡಿಗುಂ+ಒಂದು, ಮನದರ್ಥವೊಂದನ್=ಮನದ+ಅರ್ಥವ+ಒಂದನ್,

ದ್ವೈತದಿಂದದ್ವೈತವಿತದೊಳ್=ತದಿಂದ+ಅದ್ವೈತ+ಅದ್ವೈತದ+ಒಳ್,

ನೇತ್ರಯುಗಳಂ=ಎರಡು ಕಣ್ಣಳು, ಪಿಡಿಗುಂ=ಹಿಡಿತಕ್ಕೆ, ಹಸ್ತಯುಗ = ಕೈಗಳೆರಡು, ದ್ವೈತ=ಎರಡು,

ಅದ್ವೈತ=ಎರಡಲ್ಲ, ಒಂದು. ಚೈತನ್ಯ ಲೀಲೆ= ಪರಮ ಚೇತನದ ಲೀಲೆ.

'ಎರಡು' ಕಣ್ಣಳ ದೃಷ್ಟಿಯ ಹಿಡಿತಕ್ಕೆ ಸಿಕ್ಕುವುದು 'ಒಂದು' ಲಕ್ಷ್ಯ . ಆ 'ಒಂದು' ಲಕ್ಷವನ್ನಿಟ್ಟುಕೊಂಡು ಸಾಧಿಸುವುದಕ್ಕೆ 'ಎರಡು' ಕೈಗಳ ಪ್ರಯತ್ನ, ಆ ಎರಡು ಕೈಗಳ ಪ್ರಯತ್ನ ಸಾಧಿಸುವುದು ಮನದ 'ಒಂದು' ಅರ್ಥವನ್ನು, ಹೀಗೆ ದ್ವೈತದಿಂದ ಅದ್ವೈತ ಮತ್ತು ಅದ್ವೈತಕ್ಕಾಗಿ ದ್ವೈತದ ಪರಸ್ಪರ ಬಾಂಧವ್ಯವು ಪರಮಾತ್ಮನ ಲೀಲಾವಿನೋದವಷ್ಟೇ ಎಂದು, ಈ ಜಗತ್ತಿನಲಿ, ಒಂದು ಹಲವಕ್ಕೆ ಮತ್ತು ಹಲವು ಒಂದಕ್ಕೆ ಪೂರಕವಾಗಿದೆ ಎನ್ನುವ ತತ್ವವನ್ನು ಉಲ್ಲೇಖಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದಾಗಿದ್ದ ಆ ಪರಮ ಚೇತನ, ಅಣುಚೇತನ ಮತ್ತು ಜಡವಾಗಿ ಎರಡು ರೂಪದಲ್ಲಿ ಪ್ರಕಟಗೊಂಡಿದ್ದರಿಂದಲೇ ಈ ಜಗತ್ತಾಗಿದೆ. ಒಂದೇ ಮೂಲದಿಂದ ಬಂದು ಎರಡಾದ ಈ ಅಣುಚೇತನ ಮತ್ತು ಜಡ ಒಂದಾಗಿ ಒಂದೇ ರೂಪದ ಅಸ್ಥಿತ್ವಕ್ಕೆ ಕಾರಣವಾಗಿದೆ. ಹೀಗೆ ಇಡೀ ಜಗತ್ತೇ ಒಂದು-ಎರಡ ಸಮ್ಮಿಲನ ಮತ್ತು ಪೂರಕವಾದ ಅಸ್ತಿತ್ವದಿಂದ ಕೂಡಿದ, ಪರತತ್ವದ ಲೀಲಾವಿನೋದವಲ್ಲದೆ ಮತ್ತೇನು? ಅದಕ್ಕೆ ಒಂದು ಉದಾಹರಣೆಯನ್ನು ಮಾನ್ಯ ಗುಂಡಪ್ಪನವರು

ಕೊಟ್ಟಿದ್ದಾರೆ. ನಮಗೆ ಎರಡು ಕಣ್ಣುಗಳು. ಆದರೆ 'ಎರಡೂ' ಕಣ್ಣುಗಳ(ದ್ವೈತದ) ನೋಟದ ಹಿಡಿತಕ್ಕೆ ಸಿಕ್ಕುವುದು ಕೇವಲ 'ಒಂದೇ'(ಅದ್ವೈತ) ಲಕ್ಷ್ಯ , ಇಲ್ಲಿ ದ್ವೈತಾದ್ವೈತದ ಪರಸ್ಪರತೆಯನ್ನು ನೋಡಬಹುದು. ಹಾಗೆ ಹಿಡಿತಕ್ಕೆ ಬಂದ 'ಒಂದು' ಲಕ್ಷ್ಯವನ್ನು ಸಾಧಿಸಲು ಇರುವುದು 'ಎರಡು' ಕೈಗಳು. ಹೀಗೆ ಜಗತ್ತೆಲ್ಲಾ ಒಂದಕ್ಕೊಂದು ಪೂರಕವಾಗಿದೆ ಅಲ್ಲವೇ?

ನಾವು ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಇಡೀ ಸೃಷ್ಟಿಯಲ್ಲಿ ಅದ್ವೈತಕ್ಕೆ ದ್ವೈತದ ಮತ್ತು ದ್ವೈತಕ್ಕೆ ಅದ್ವೈತದ ಒತ್ತಾಸೆ ಸಹಾಯ ಮತ್ತು ಅನಿವಾರ್ಯತೆಯಿಂದ(inevitable co-existence) ಕೂಡಿದ ಅವಶ್ಯಕತೆಯನ್ನು ಕಾಣಬಹುದು. ನಮ್ಮ ದೇಹವನ್ನೇ ಗಮನಿಸಿದರೆ ಒಂದು ಮೆದುಳು-ಎರಡು ಭಾಗ, ಎರಡು ಕಣ್ಣು ಒಂದು ಗಮನ, ಒಂದು ಮೂಗು ಎರಡು ಹೊಳೆಗಳು ಒಂದೇ ಶ್ವಾಸಕೋಶ-ಎರಡು ಭಾಗಗಳು ಒಂದು ಗಂಟಲು ಎರಡು ನಾಳಗಳು, ಹೀಗೆ ನೋಡುತ್ತಾ ಹೋದರೆ ದ್ವೈತಾದ್ವೈತಗಳ ಪರಸ್ಪರತೆ ನಮಗೆ ಕಾಣುತ್ತದೆ. ಇದು

1ಸಂಸಂ

| | |
|---|---|
| ಕಗ್ಗರಸಧಾರೆ | ಮತತ್ರಯ 769-773 |

ಏಕೆ ಹೀಗಿದೆ? ಎಂದು ಪ್ರಶ್ನಿಸುವ ಅಥವಾ ಆಲೋಚಿಸುವುದಕ್ಕೆ ಅವಕಾಶವೇ ಇಲ್ಲ. ಒಂದಾಗಿದ್ದದ್ದು ಹಲವಾಗಿ ಆ ಹಲವು ಒಂದರೆಡೆಗೆ ತುಡಿಯುವುದನ್ನೇ 'ಚೈತನ್ಯಲೀಲೆಯಿದು' ಎಂದರು ಮಾನ್ಯ ಗುಂಡಪ್ಪನವರು

ಸರಿ, ನಾವೇನು ಮಾಡಬೇಕು? ಎಂದರೆ ಚೈತನ್ಯಲೀಲೆಯಲ್ಲಿ ಕೊರತೆಗಳನ್ನು ಕಾಣುವುದನ್ನು ನಿಲ್ಲಿಸಬೇಕು. ದ್ವೈತಾದ್ವೈತಗಳ ಸಮ್ಮಿಲನವಾದ ಈ ಜಗತ್ತಿನಲ್ಲಿ ನಾವು ನಮ್ಮ ಅತೀ ಬುದ್ಧಿವಂತಿಕೆಯಿಂದ 'ಭೇದ' ವನ್ನು ಕಾಣಬಾರದು. ಇದು ಸರಿ, ಇದು ತಪ್ಪು ಎನ್ನುವ ವಿಶ್ಲೇಷಣೆ ಮಾಡಿದರೆ ಅದು ಸೃಷ್ಟಿಕರ್ತನ ಸೃಷ್ಟಿಯ ಉದ್ದೇಶವನ್ನೇ ಪ್ರಶ್ನಿಸಿದ ಹಾಗಾಗುತ್ತದೆ. ಎಲ್ಲ ವೈವಿಧ್ಯತೆಗಳ ನಡುವೆ ಇದ್ದರೂ, ನಾವೂ ಸಹ ಆ ವೈವಿಧ್ಯತೆಯ ಒಂದು ಭಾಗವಾಗಿದ್ದರೂ, ಎಲ್ಲ ವೈವಿಧ್ಯತೆಗೂ ಕಾರಣನಾದ ಸೃಷ್ಟಿಕರ್ತನೊಬ್ಬನನ್ನೇ ಅರಿಯುವ ಪ್ರಯತ್ನವನ್ನು ಮಾಡಿದರೆ ನಮಗೆ ಭಿನ್ನತೆಯಲ್ಲೂ ಸಮಗ್ರತೆಯ ಅನುಭವವಾಗುತ್ತದೆ, ಭೇಧವಳಿಯುತ್ತದೆ, ಪರತತ್ವದ ದರ್ಶನವಾಗುತ್ತದೆ. ಶಬ್ದ, ಸ್ಪರ್ಶ, ರೂಪ, ರಸ ಗಂಧಗಳಿಂದ ಬೇರ್ಪಟ್ಟು ಭಿನ್ನವಾಗಿ ಕಾಣುವ ಇಡೀ ಜಗತ್ತು 'ಒಂದಾ' ಗಿ ಕಾಣುತ್ತದೆ. 'ಜಗದಾತ್ಮಾನುಭವ'ವಾಗುತ್ತದೆ. ಪ್ರಯತ್ನಪಟ್ಟರೆ ಸಾಧ್ಯ.

**ಮುಕ್ತಕ – 771**

**ನೀರಧಿ ಬ್ರಹ್ಮ, ನೀರ್ಗಲ್ ಜೀವವೆನುತೊಂದು |**

**ಕ್ಷೀರವದು, ಘೃತವಿದದರೊಳಗೆನ್ನುತೊಂದು**

**ಕೀರು ಪರಮಾನ್ನವದು, ದ್ರಾಕ್ಷಿಯಿದೆನುತ್ತೊಂದು |**

**ಮೂರಿಂತು ಮತವಿವರ ಮಂಕುತಿಮ್ಮ ||**

ಜೀವವೆನುತೊಂದು=ಜೀವ+ವೆನುತ+ಒಂದು,ಘೃತವಿದದರೊಳಗೆನ್ನುತೊಂದು=ಘೃತವಿದು+ಅದರೊಳಗೆ+ಎನ್ನುತ+ಒಂದು, ಪರಮಾನ್ನವದು=ಪರಮಾನ್ನವು+ಅದು,

ದ್ರಾಕ್ಷಿಯಿದೆನುತ್ತೊಂದು=ದ್ರಾಕ್ಷಿ+ಇದು+ಎನ್ನುತ್ತ+ಒಂದು, ಮೂರಿಂತು=ಮೂರು+ಇಂತು.

ನೀರಧಿ=ಕಡಲು, ನೀರ್ಗಲ್=ಮಂಜು ಗಡ್ಡೆ, ಘೃತ=ತುಪ್ಪ

ಸೃಷ್ಟಿಕರ್ತ ಬ್ರಹ್ಮ, ಕಡಲಂತೆ. ಜೀವ ಕಡಲ ಮೇಲೆ ತೇಲುವ ಮಂಜಗಡ್ಡೆಯಂತೆ ಎನ್ನುವುದು ಒಂದು ಅಭಿಪ್ರಾಯ. ಪರಮಾತ್ಮ ಹಾಲು, ಆ ಹಾಲಿನಲ್ಲಿ ಇರುವ ತುಪ್ಪವೇ ಜೀವ ಎನ್ನುವುದು ಇನ್ನೊಂದು ಅಭಿಪ್ರಾಯ, ಆ ಪರಮಾತ್ಮ ಪಾಯಸ ಪರಮಾನ್ನವಿದ್ದಹಾಗೆ, ಅದರಲ್ಲಿ ತೇಲಾಡುವ ದ್ರಾಕ್ಷಿಯೇ ಜೀವ ಎನ್ನುವುದು ಮತ್ತೊಂದು ಅಭಿಪ್ರಾಯ. ಹೀಗೆ ಪರಮಾತ್ಮ ಮತ್ತು ಜೀವಾತ್ಮರ ಸ್ವರೂಪ ಕುರಿತು ಮೂರು ಅಭಿಪ್ರಾಯಗಳಿವೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕಡಲೇ ಪರಮಾತ್ಮ ಕಡಲು ಬೇರೆಯಲ್ಲ, ಕಡಲ ಮೇಲಿನ, ಕಡಲ ನೀರಿನಿಂದಲೇ ಆದ ನೀರ್ಗಲ್ಲು ಎಂದರೆ ಮಂಜುಗಡ್ಡೆ ಬೇರೆಯಲ್ಲ ಎಂಬುದು ಒಂದು ಮತ. ಕಡಲ ಮೇಲಿನ ನೀರ್ಗಲ್ಲು ಕರಗಿದರೆ ಮತ್ತೆ ಕಡಲ ನೀರೇ

ಆಗಿ ನಾಮಾವಶೇಷವಿಲ್ಲದೆ ಕಡಲ ನೀರೊಳಗೆ ಬೆರೆತು ಹೋಗುತ್ತದೆಯಲ್ಲವೇ ಹಾಗೆ ಪರಬ್ರಹ್ಮನಿಂದ ಬಂದು ಅವನಲ್ಲೇ ಮತ್ತೆ ಲೀನವಾಗುವುದೇ 'ಆತ್ಮ' ಎನ್ನುವುದು ಒಂದು ಅಭಿಪ್ರಾಯ. ಪರಮಾತ್ಮ ಹಾಲು, ಹಾಲಿನಲ್ಲಿ ತುಪ್ಪ ಅಡಕವಾಗಿದೆ. ಹಾಲನ್ನು ಕಾಯಿಸಿ ಹೆಪ್ಪುಗಟ್ಟಿಸಿ ಮೊಸರಾಗಿಸಿ, ಕಡೆದು ಬೆಣ್ಣೆಯ ಹೊರತೆಗೆದು, ಅದನ್ನು ಕಾಯಿಸಿದಾಗ ತುಪ್ಪದ ಅವತಾರ. ಹಾಲಿನಿಂದ ಬೆಣ್ಣೆಯನ್ನು ತೆಗೆಯಬಹುದು. ಆದರೆ ತುಪ್ಪದಿಂದ ಹಾಲನ್ನು ತೆಗೆಯಲಾಗುವುದಿಲ್ಲ. ಹಾಗಾಗಿ ಹಾಲಿನಿಂದಲೇ ತುಪ್ಪದ ಆವಿರ್ಭಾವವಾದರೂ, ಹಾಲು ಬೇರೆ -ತುಪ್ಪ ಬೇರೆ ಎನ್ನುವಂತೆ, ಪರಮಾತ್ಮ ಬೇರೆ ಆತ್ಮ ಬೇರೆ ಎನ್ನುವುದು ಎರಡನೆಯ ಅಭಿಪ್ರಾಯ.

ಹಾಲಿನಿಂದ ಜಗದ್ವ್ಯಾಪಾರಕ್ಕಾಗಿ ರೂಪಬದಲಾವಣೆ ಹೊಂದಿ ಸುಂದರವಾಗಿ ಮಧುರವಾಗಿರುವ ಕೀರು ಪರಮಾನ್ನಗಳೇ ಆ ಪರಮಾತ್ಮ, ಅದರ ಮೇಲೆ ತೇಲಾಡುವ ದ್ರಾಕ್ಷಿಯೇ ಜೀವಾತ್ಮ ಎನ್ನುವುದು ಮೂರನೆಯ ಮತ, ಪರಮಾತ್ಮ ಬೇರೆ ಮತ್ತು ಜೀವಾತ್ಮ ಸಂಪೂರ್ಣ ಬೇರೆ ಎನ್ನುವುದು ಮೂರನೆಯ ಅಭಿಪ್ರಾಯ.

ಹೀಗೆ ಪರಮಾತ್ಮ ಮತ್ತು ಜೀವಾತ್ಮರ ಕುರಿತು ಇರುವುದು ಮೂರು ಅಭಿಪ್ರಾಯಗಳು. ಆ ಪರಮಾತ್ಮ ಸ್ವರೂಪವನ್ನು ಯಾರು ಹೇಗೆ ಬೇಕಾದರೂ ಪ್ರತಿಪಾದಿಸಬಹುದು. "ಅವರವರ ಭಾವಕ್ಕೆ ಅವರವರ ಭಕುತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ, ನರರೇನುಭಾವಿಸುವರದರಂತೆ ಕಾಣುವನು" ಎಂದಿದ್ದಾರೆ ನಿಜಗುಣ ಶಿವಯೋಗಿಗಳು. ತೀರ ಹಸಿವಾದವನಿಗೆ ಊಟದೆಲೆಯಮೇಲೆ ಎದುರಿಗಿಟ್ಟ 'ಅನ್ನ' ವೇ ಜೀವ ಉಳಿಸುವ ಪರಬ್ರಹ್ಮವಸ್ತುವಂತೆ ಕಾಣುತ್ತದೆ. ಅವರವರ ಅನುಭವಕ್ಕೆ ಅವರವರಿಗೆ ಹೇಗೆ ಬೇಕೋ ಹಾಗೆ ಕಾಣುವವನೇ ಪರಮಾತ್ಮ ಮತ್ತು ನೋಡುವವನೇ ಜೀವಾತ್ಮ ಎಂದು ಅವರ ಅಭಿಪ್ರಾಯ. ಈ ವಿಷಯದ ಬಗ್ಗೆ ಬಹಳಷ್ಟು ಅಭಿಪ್ರಾಯಗಳು ಭಿನ್ನಾಭಿಪ್ರಾಯಗಳು ಇವೆ. ಆದ್ದರಿಂದಲೇ ಜಗತ್ತಿನಲ್ಲಿ ಇಷ್ಟೊಂದು ಮತಗಳು ಹುಟ್ಟಿಕೊಂಡಿವೆ. ಮತ್ತೊಬ್ಬರ ಅಭಿಪ್ರಾಯದ ಚೌಕಟ್ಟಿನಿಂದ ಹೊರಬಂದು, ನಮ್ಮ ಮತವನ್ನು ಬೇರೆಯವರಮೇಲೆ ಒತ್ತಾಯದಿಂದ ಹೇರದೆ, ನಾವು ನಮ್ಮದೇ ರೀತಿಯಲ್ಲಿ ನಮ್ಮಿಷ್ಟಕ್ಕೆ ನಾವು 'ಪರತತ್ವವನ್ನು ಅನುಭವಿಸಲಾದರೆ ಅದೇ ನಮ್ಮ ಸಾಧನೆಯಾಗುತ್ತದೆ.

**ಮುಕ್ತಕ 772**

**ಮೂರಿರಲಿ ವಾದ, ಮುನ್ನೂರಿರಲಿ; ಸಕಲರುಂ |**

**ಸಾರವಸ್ತುವನೊಂದನೊಪ್ಪಿಕೊಳುವವರೇ ||**

**ಪಾರಮಾರ್ಥಿಕವನಂತೆಣಿಸಿದ ವ್ಯವಹಾರ |**

**ಭಾರವಾಗದು ಜಗಕೆ – ಮಂಕುತಿಮ್ಮ ||**

ಮೂರಿರಲಿ=ಮೂರು+ಇರಲಿ, ಮುನ್ನೂರಿರಲಿ=ಮುನ್ನೂರು+ಇರಲಿ,

ಸಾರವಸ್ತುವನೊಂದನೊಪ್ಪಿಕೊಳುವವರೇ=ಸಾರವಸ್ತುವು+ಒಂದನು+ಒಪ್ಪಿಕೊಳ್ಳುವವರೇ,

ಪಾರಮಾರ್ಥಿಕವನಂತೆಣಿಸಿದ=ಪಾರಮಾರ್ಥಿಕವನು+ಅಂತೆ+ಎಣಿಸಿದ

ಸಕಳರುಂ=ಎಲ್ಲರೂ, ಸಾರವಸ್ತುವು=ಸತ್ವಭರಿತವಾದ ವಸ್ತುವು,

ಹಿಂದಿನ ಮುಕ್ತಕದಲ್ಲಿ ಹೇಳಿದಂತೆ ಪರಮಾರ್ಥದ ಅಭಿಪ್ರಾಯ ಮೂರಿರಲಿ ಅಥವಾ ಮುನ್ನೂರಿರಲಿ, ಆದರೆ ಎಲ್ಲರೂ ಆ ಪರಮಾರ್ಥದ ಮೂಲವಸ್ತುವು ಒಂದೇ ಎಂದು ಒಪ್ಪಿಕೊಳ್ಳುತ್ತಾರೆ. ಎಲ್ಲರ ಮನಸ್ಸು ಯಾವ ರೂಪದಲ್ಲಾದರೂ ಸರಿ, ಕೇವಲ ಒಂದೇ ಪರಬ್ರಹ್ಮ ವಸ್ತುವನ್ನು ಮನದಲ್ಲಿಟ್ಟುಕೊಂಡು ಪರಸ್ಪರ ವ್ಯವಹರಿಸಿದರೆ ಜಗತ್ತಿನ ಬದುಕು ಹಗುರವೆಂದೆನಿಸುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿರುವ ಜನರಲ್ಲಿ 'ಪರಮಾತ್ಮ'ನನ್ನು ನಂಬುವವರು ಎಷ್ಟು ಜನರಿದ್ದಾರೋ ಅಷ್ಟು ರೀತಿಯ ನಂಬಿಕೆಗಳಿರುತ್ತವೆ. ಏಕೆಂದರೆ ಆ ಪರಮಾತ್ಮ ವಸ್ತುವು 'ಭಾವನೆ'ಗೆ ನಿಲುಕುವಂತಹದ್ದು. ಹಾಗಾಗಿ ಎಷ್ಟು ಜನರಿದ್ದಾರೋ ಅಷ್ಟು ಭಾವನೆಗಳು ಮತ್ತು ಅಷ್ಟು ರೀತಿಯ ನಂಬಿಕೆಗಳು. ಒಬ್ಬರ ಭಾವನೆ ಮತ್ತೊಬ್ಬರದಕ್ಕಿಂತ ಭಿನ್ನ. ಆದರೆ ಅವರು ನಂಬುವ ವಸ್ತುವು ಒಂದೇ ಆಗಿರುವಾಗ ನಂಬಲಿ ಬಿಡಿ. ಒಬ್ಬನಿಗೆ ರಾಮ ಮತ್ತೊಬ್ಬನಿಗೆ ರಹೀಮ್,

ಒಬ್ಬನಿಗೆ ಶಂಕರ, ಮತ್ತೊಬ್ಬನಿಗೆ ನಾರಾಯಣ. ಆದರೆ ಎಲ್ಲರೂ ಭಾವಿಸುವುದು, ಈ ಜಗತ್ತನ್ನು ಸೃಷ್ಟಿಸಿ, ಪಾಲಿಸುವ ಆ ಬೃಹಚ್ಛಕ್ತಿಯನ್ನು ಅಲ್ಲವೇ? ಹೆಸರು ಬೇರಾದರೇನು ಭಾವ ಮುಖ್ಯವಲ್ಲವೇ ?

"ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ? ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ??" ಎಂದು ಭಗವದ್ಗೀತೆ(7-21)ಯಲ್ಲಿ ಕೃಷ್ಣ ಹೇಳುತ್ತಾನೆ. ಅರ್ಥಾತ್ ಯಾರು ಯಾವರೂಪದಲ್ಲಿ ನನ್ನನ್ನು ಶ್ರದ್ಧೆಯಿಂದ ನೋಡಲಿಚ್ಛಿಸುತ್ತಾರೋ ಅವರಿಗೆ ಆ ರೂಪವನ್ನು ಕಾಣುವ ಶ್ರದ್ಧೆಯನ್ನು ನೀಡುತ್ತೇನೆ ಎನ್ನುತ್ತಾನೆ ಯೋಗಾಚಾರ್ಯ ಕೃಷ್ಣ, ಹಾಗಾಗಿ ಶ್ರದ್ಧೆಯೇ ಮುಖ್ಯ. ಆ ಶ್ರದ್ಧೆಯೇ ಪಾರಮಾರ್ಥಿಕತೆ.

| 1ಸ೦3 |
|---|

| ಕಗ್ಗರಸಧಾರೆ | ಮತತ್ರಯ 769 - 773 |
|---|---|

ಸಂಸ್ಕೃತಿಗೆ ಸಂಬಂಧಪಟ್ಟ ಆಚಾರ, ವಿಚಾರ, ಸಂಪ್ರದಾಯ, ವ್ರತ, ನಿಯಮ, ನಿಷ್ಠೆಗಳ ಭಾರವನ್ನು ಹೊತ್ತೇ ನಡೆಯಬೇಕು, ಆದರೆ ಅವುಗಳೆಲ್ಲ, ನಾವು ಮೇಲೇರುವುದಕ್ಕೆ ಕೇವಲ ಮೆಟ್ಟಿಲುಗಳೆಂದು ಪರಿಗಣಿಸಿ ಅವುಗಳ ಬಗ್ಗೆ ತಾತ್ಸಾರ ಭಾವ ಬೆಳೆಸಿಕೊಂಡು ಬಾಳಿದರೆ, ಅದೇ ಉತ್ತಮ ಮಾರ್ಗ.

ಆದರೆ ಒಂದರಲ್ಲಿ ಇದ್ದು ಅದರ ಬಗ್ಗೆ ವಿರಕ್ತಿ, ಉದಾಸೀನ ಅಥವಾ ತಾತ್ಸಾರದಂತಹ ಭಾವಗಳನ್ನು ಬೆಳೆಸಿಕೊಳ್ಳುವುದು ಹೇಗೆ? ಇದು ಪ್ರಮುಖವಾಗಿ ಸಾಧಕನ ಮುಂದೆ ಬರುವ ಪ್ರಶ್ನೆ, ಹೌದು ಬಹಳ ಕಷ್ಟತರವಾದ ಕೆಲಸ. ಆದರೆ ಅದನ್ನು ಸಾಧಿಸಬಹುದು. ಪ್ರಯತ್ನದಿಂದ ಖಂಡಿತ ಸಾಧಿಸಬಹುದು. ಮಾರ್ಗವೇನೆಂದರೆ 'ನಾನು, ನನ್ನದು, ನಮ್ಮದು, ನನಗೆ, ನಮಗೆ' ಎನ್ನುವ ಮಮಕಾರದ ಭಾವನೆಗಳನ್ನು ತೊರೆದರೆ ಸಾಧ್ಯ ಎನ್ನುವುದನ್ನು ನಾವು ನಮ್ಮ ಪೂರ್ವಜರ ಜೀವನದಿಂದ ಕಲಿಯಬಹುದು.

ಇಂದಿನ ಜಗತ್ತಿನ, ಬಹು ದಿಕ್ಕಿನ ಸೆಳೆತಗಳಲ್ಲಿದ್ದುಕೊಂಡು ವಿರಕ್ತಿ, ಉದಾಸೀನ ಅಥವಾ ತಾತ್ಸಾರದಂತಹ ಭಾವಗಳನ್ನು ಬೆಳೆಸಿಕೊಳ್ಳುವುದು ಬಹಳ ಕಷ್ಟ. ಆದರೆ 'ವರಯೋಗಮಾರ್ಗವಿದು' ಎಂದು ನಮಗೆ ಮನದಟ್ಟಾದರೆ ಮತ್ತು ಆ ಮಾರ್ಗದಲ್ಲಿ ಹೋಗುವ ದೃಢ ಇಚ್ಛೆ ನಮಗೆ ಬಂದರೆ ಮತ್ತು ಆ ಇಚ್ಛೆಗೆ ಪೂರಕವಾಗಿ ನಮ್ಮ ಪ್ರಯತ್ನವೂ

ಆದರೆ ಅದು ಸಾಧ್ಯ. ಅಂತರಂಗದಿಂದ ಮಮಕಾರದ 'ಅಂಟನ್ನು ಬಿಡಿಸಿಕೊಂಡರೆ ಪರತತ್ವವನ್ನರಿಯುವ ಹಾದಿ ಸುಗಮವಾಗುತ್ತದೆ. ಯಾರು ಎಷ್ಟು ಪ್ರಯತ್ನ ಪಟ್ಟರೆ ಅವರಿಗಷ್ಟು ಲಭ್ಯ.

**ಮುಕ್ತಕ – 774**

**ತರಣಿದರ್ಶನಕಿಂತ ಕಿರಣಾನುಭವ ಸುಲಭ |**

**ಪರಮಶಾಸ್ತ್ರಕ್ಕಿಂತ ಸರಿಯುದಾಹರಣೆ ||**

**ಪರಮತತ್ವವ ಕಂಡ ಗುರುವನರಸುವುದೆಲ್ಲಿ? |**

**ದೊರೆತಂದು ನೀಂ ಧನ್ಯ - ಮಂಕುತಿಮ್ಮ ||**

ಕಿರಣಾನುಭವ=ಕಿರಣ+ಅನುಭವ, ಸರಿಯುದಾಹರಣೆ=ಸರಿ+ಉದಾಹರಣೆ,

ಗುರುವನರಸುವುದೆಲ್ಲಿ=ಗುರುವನು+ಅರಸುವುದು+ಎಲ್ಲಿ, ದೊರೆತಂದು=ದೊರೆತ+ಅಂದು

ತರಣಿ=ಸೂರ್ಯ, ಪರಮ=ಅತ್ಯುತ್ತಮ

ಸೂರ್ಯನನ್ನು ನೋಡುವುದಕ್ಕಿಂತ ಅವನ ಕಿರಣಗಳಿಂದ ಹೊರಸೂಸುವ ಬೆಳಕು ಸಹನೀಯ. ಅತ್ಯುತ್ತಮ ಶಾಸ್ತ್ರಗಳನ್ನು ಅರಿಯುವುದಕ್ಕಿಂತ ಅದರ ಸಾರವನ್ನು ಉದಾಹರಣೆಯಾಗಿ ನೋಡಿದರೆ ಅರ್ಥವಾಗುವುದು ಸುಲಭ. ಹಾಗೆ ಪರತತ್ವವನ್ನು ಅರಿತ ಗುರುವನ್ನು ಅರಸುವುದು ಎಲ್ಲಿ? ಅಂತಹ ಗುರು ದೊರೆತ ದಿನ ನೀನು ಧನ್ಯ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಸಾರವಸ್ತುವನೊಂದನೊಪ್ಪಿಕೊಳ್ಳುವವರೇ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಹೌದು ಆ ಪರಬ್ರಹ್ಮ ವಸ್ತುವು 'ಸಾರ' ಭರಿತವಾದದ್ದು. ಹಾಗಾಗಿಯೇ ವೇದಗಳು 'ರಸೋ ವೈ ಸಹ' ಎಂದಿವೆ. ರಸ ಅಥವಾ ಸಾರ ಭರಿತವಾದವನೇ ಆ ಪರಮಾತ್ಮ. ಹಾಗಾಗಿ ಅವನು ಸಾರವನ್ನು ತುಂಬಿ ಸೃಷ್ಟಿಸಿದ ಈ ಜಗತ್ತಿಗೆ 'ಸಂಸಾರ' ವೆಂದು ಹೆಸರು. ಸಂಸಾರದಲ್ಲಿರುವ ನಾವು ನಮ್ಮ 'ಮೂಲ' ವಾದ ಆ ಸಾರವನ್ನು ಶ್ರದ್ಧೆಯಿಂದ ಯಾವ ಭಾವದಿಂದ ಬೇಕಾದರೂ ಧ್ಯಾನಿಸಬಹುದು. ಹಾಗೆ ಎಲ್ಲರ ಭಾವದಲ್ಲಿ ಆ ಪರತತ್ವದ ಸಾರ ತುಂಬಿದ್ದರೆ ಈ ಜಗತ್ತಿನಲ್ಲಿ ಸುಖ-ದುಃಖಗಳ ಭಾರ ಕಡಿಮೆಯಾಗಿ, ಬದುಕು ಹಗುರವಾಗುತ್ತದೆ ಎನ್ನುವದೇ ಈ ಮುಕ್ತಕದ ಹೂರಣ. ನಮ್ಮಲ್ಲಿ ಆ ಪಾರಮಾರ್ಥಿಕದ ಅನುಭವ ಇಲ್ಲದಿದ್ದರೆ ಬೆಳೆಸಿಕೊಳ್ಳಬಹುದು ಅಥವಾ ಅಲ್ಪವಾಗಿದ್ದರೆ ಅದನ್ನು ಪ್ರಯತ್ನಪೂರ್ವಕವಾಗಿ ಹೆಚ್ಚಿಸಿಕೊಳ್ಳಬಹುದು.

**ಮುಕ್ತಕ – 773**

**ಹೊರಗೆ ಲೋಕಾಸಕ್ತಿಯೊಳಗೆ ಸಕಲ ವಿರಕ್ತಿ |**
**ಹೊರಗೆ ಕಾರ್ಯಧ್ಯಾನವೊಳಗುದಾಸೀನ ||**
**ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ |**
**ವರಯೋಗಮಾರ್ಗವಿದು – ಮಂಕುತಿಮ್ಮ ||**

ಲೋಕಾಸಕ್ತಿಯೊಳಗೆ=ಲೋಕ+ಆಸಕ್ತಿ+ಒಳಗೆ, ಕಾರ್ಯಧ್ಯಾನವೊಳಗುದಾಸೀನ=ಕಾರ್ಯ+ಧ್ಯಾನ+ಒಳಗೆ+ಉದಾಸೀನ, ಸಂಸ್ಕೃತಿಭಾರವೊಳಗದರ= ಸಂಸ್ಕೃತಿ+ಭಾರ+ಒಳಗೆ ವರ=ಶ್ರೇಷ್ಠ

ಹೊರಗೆ ಲೋಕದಲ್ಲಿ ಆಸಕ್ತಿ ಮತ್ತು ಒಳಗೆ ಎಲ್ಲದರಲ್ಲೂ ವಿರಕ್ತಿ, ಹೊರಗೆ ಸದಾಕಾಲ ಕಾರ್ಯ ತತ್ಪರತೆ ಆದರೆ ಯಾವುದರಲ್ಲೂ ಆಸಕ್ತಿಯಿಲ್ಲದೆ ಉದಾಸೀನ. ಹೊರಗೆ ಸಂಸ್ಕೃತಿಯ ಭಾರ, ಒಳಗೆ ಅದರಲ್ಲಿ ತಾತ್ಸಾರ, ಈ ರೀತಿಯಿರುವುದು ಶ್ರೇಷ್ಠತಮ ಯೋಗಮಾರ್ಗವೆಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವರಯೋಗ ಮಾರ್ಗವೆಂದರೆ 'ಪರತತ್ವವನ್ನು ಅರಿಯಲು ಮತ್ತು ಅನುಸಂಧಾನಮಾಡಲು ಅತ್ಯುತ್ತಮ ಅಥವಾ ಶ್ರೇಷ್ಠತಮ ಮಾರ್ಗ' ವೆಂದು ಅರ್ಥ. ಆ ಮಾರ್ಗದಲ್ಲಿ ನಮ್ಮ ನಡೆ ಹೇಗಿರುತ್ತದೆ ಎಂದರೆ, ನಮಗೆ ಹೊರಗಿನ ಜಗತ್ತಿನಲ್ಲಿ ಆಸಕ್ತಿಯಿರಬೇಕು, ಎಂದರೆ ಹೊರಗಿನ ಲೋಕವ್ಯವಹಾರದಲ್ಲಿ ನಮ್ಮನ್ನು ನಾವು ಸಂಪೂರ್ಣತಯಾ ತೊಡಗಿಸಿಕೊಳ್ಳಬೇಕು. ಆದರೆ ಯಾವುದಕ್ಕೂ ಒಳಗಿಂದ ಅಂಟಿಕೊಳ್ಳದೆ ಒಂದು ವಿರಕ್ತ ಭಾವವನ್ನು ಹೊಂದಿರಬೇಕು.

ಮಾಡಬೇಕಾದ ಕರ್ತವ್ಯವನ್ನು ಕೇವಲ ಕರ್ತವ್ಯವೆಂದೆಣಿಸಿ, ಫಲಾಪೇಕ್ಷೆಯಿಲ್ಲದೆ ಮತ್ತು ಸಂದ ಫಲದಿಂದ ವಿಚಲಿತರಾಗದೆ ಒಂದು ಉದಾಸೀನ ಭಾವವನ್ನು ಬೆಳೆಸಿಕೊಂಡು ಮಾಡಬೇಕು. ಸಂಸ್ಕಾರ ಮತ್ತು

1ಸ05

ಕಗ್ಗರಸಧಾರೆ

ಗುರು ಲಕ್ಷಣ 774 - 778

ಸೂರ್ಯನನ್ನು ನೋಡಿದರೆ ಕಣ್ಣು ಕುಕ್ಕುತ್ತದೆ. ಹಾಗೆ ನೋಡಲು ಕ್ಷಮತೆ ಬೇಕು. ಆದರೆ ಸೂರ್ಯನ ಕಿರಣಗಳು ಹೊರಸೂಸುವ ಬೆಳಕು ನಮಗೆ ಬಹಳ ಹಿತವಲ್ಲವೆ? ಹಾಗೆಯೇ ಯಾವುದಾದರೂ ವಿಚಾರವನ್ನು ಕೈಗೆತ್ತಿಕೊಂಡಾಗ, ಅದನ್ನು ಪ್ರತಿಪಾದಿಸುವ ಶಾಸ್ತ್ರದ ಮೂಲವನ್ನು ಹುಡುಕಿ ಅದನ್ನು ಅರ್ಥೈಸಿಕೊಂಡು ಅನುಸಂಧಾನಮಾಡುವುದು ಸುಲಭ ಮಾರ್ಗವಲ್ಲ. ಆದರೆ ಅದನ್ನು ಓದಿ ಅನುಸಂಧಾನ ಮಾಡಿಕೊಂಡವರ ಉದಾಹರಣೆ ಅಥವಾ ಅವರು ನೀಡುವ ಉದಾಹರಣೆಯಿಂದ ಆ ಶಾಸ್ತ್ರದ ಹಿಂದಿರುವ ತತ್ವವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆದರೆ ನಮಗೆ ಹಾಗೆ ಶಾಸ್ತ್ರವನ್ನು ಸರಿ ರೀತಿಯಲ್ಲಿ ಅರ್ಥಮಾಡಿಕೊಂಡು ಅದನ್ನು ಹಾಗೆ ನಮಗೆ ಬೋಧಿಸುವ ಗುರು ಸಿಗಬೇಕಲ್ಲ!!

ನಮ್ಮ ಸಮಾಜದಲ್ಲಿ ಸಿಗುವ ಬಹಳಷ್ಟು 'ಗುರು-ಸನ್ಯಾಸಿ-ಸ್ವಾಮಿ'ಗಳು ನಮಗೆ ಆ 'ದೇವರನ್ನೇ ತೋರಿಸಿಬಿಡುತ್ತಾರೆ!!!!!!!' ತಾವೇ ಅಜ್ಞಾನದ ಕೂಪದಲ್ಲಿ ಬಿದ್ದು, ಜಾತಿವಾದ, ಸ್ವಾರ್ಥ, ದುಡ್ಡು, ಗುಂಪುಗಾರಿಕೆ, ಅನಾಚಾರ, ಗೂಂಡಾಗಿರಿಯನ್ನು ಮಾಡುತ್ತಾ ಕೋಟಿ ಕೋಟಿ ಹಣ ಲೂಟಿಮಾಡುತ್ತಾ, ಹೊರಪ್ರಪಂಚಕ್ಕೆ ತಾವು ದೇವರ ಅಪರಾವತಾರವೆಂಬಂತೆ ತೋರುವ ಈ ಡೋಂಗಿಗಳು, ನಮಗೆ ಉದಾಹರಣೆಯಾಗಲೂ ಸಾಧ್ಯವಿಲ್ಲ ಅಥವಾ ನಮಗೆ ಕಿರಾಣಾನುಭವವನ್ನು ನೀಡಲಿಕ್ಕೂ ಸಮರ್ಥರಲ್ಲ. ಇವರು ನಮ್ಮನ್ನು ಆ ಪರತತ್ವದಿಂದ ದೂರವಿಟ್ಟು ನಮ್ಮ ಮೇಲೆ ತಮ್ಮದೇ ಆಧಿಪತ್ಯ ಸ್ಥಾಪಿಸಲು ಸಮರ್ಥರಷ್ಟೆ. ಇಂತಹವರಿಂದ ನಾವು ಎಷ್ಟು ದೂರವಿದ್ದರೆ ಅಷ್ಟು ಒಳ್ಳೆಯದು.

'ದೇವಸ್ಯ ಭರ್ಗಃ ಧೀಮಹಿ' ಎಂದರೆ 'ಪರಮ' ಜ್ಞಾನದ ಪ್ರತೀಕವಾದ ದಿವಿಯ ಬೆಳಕಿಗೆ ನಾನು ಶರಣಾಗುತ್ತೇನೆ ಎಂದು ಅರ್ಥ. ಬ್ರಹ್ಮರ್ಷಿ ವಿಶ್ವಾಮಿತ್ರ ಪ್ರತಿಪಾದಿಸಿದ ಗಾಯತ್ರಿಯ ಮೂಲ ಸತ್ವ ಇದು. ಜಗತ್ತಿನ ಜೀವಾತ್ಮರ ಉದ್ಧಾರಕ್ಕೆ ತಪಸ್ಸನ್ನು ಮಾಡಿದ ಮಹಾತ್ಮರು ಅವರು. ಅವರು ನಮಗೆ ಉದಾಹರಣೆಯಾಗಬೇಕು. ಅಂತಹ ಗುರುಗಳು ನಮಗೆ ಸಿಗಬೇಕು. ಅಂಥಹ ಗುರುಗಳು ಸಿಕ್ಕರೆ ನಾವು ಧನ್ಯರಾಗುತ್ತೇವೆ. ಅವರು ಪ್ರತಿಪಾದಿಸಿದ ಸತ್ವ ಮತ್ತು ತತ್ವವನ್ನು ನಾವು ನಮ್ಮ ಅಂತರಂಗದಲ್ಲಿ ಅನುಸಂಧಾನಮಾಡಿಕೊಂಡರೆ, ಆ ತತ್ವ ನಮ್ಮಲ್ಲಿ ಸ್ಥಿರವಾದರೆ, ನಾವೂ ಸಹ ಖಂಡಿತ ಒಂದಲ್ಲ ಒಂದು ದಿನ ಧನ್ಯರಾಗುತ್ತೇವಲ್ಲವೇ?

**ಮುಕ್ತಕ - 775**

**ಕಾಗೆಯುಂ ಕೋಗಿಲೆಯುಮೊಂದೆ ಮೇಲ್ನೋಟಕ್ಕೆ |**

**ಯೋಗಿಯುಂ ಸಂಸಾರಭೋಗಿಯೇ ಹೊರಕೆ ||**

**ಲೋಗರವೊಲಿರುತೆ ಸುಖದುಃಖಸಂಭ್ರಮಗಳಲಿ |**

**ತ್ಯಾಗಿಯವನಂತರದಿ - ಮಂಕುತಿಮ್ಮ ||**

ಕೋಗಿಲೆಯುಮೊಂದೆ =ಕೋಗಿಲೆಯುಂ+ಒಂದೆ, ಮೇಲ್ನೋಟಕ್ಕೆ ಮೇಲು+ನೋಟಕ್ಕೆ,

ಲೋಗರವೊಲಿರುತೆ=ಲೋಗರ+ಒಲು +ಇರುತೆ,

ತ್ಯಾಗಿಯವನಂತರದಿ=ತ್ಯಾಗಿಯು+ಅವನು+ಅಂತರದಿ

ಲೋಗರ = ಲೋಕದ ಜನ, ಒಲು=ಹಾಗೆ, ಅಂತರದಿ=ಅಂತರಂಗದಲಿ.

ಕಾಗೆ ಮತ್ತು ಕೋಗಿಲೆಗಳು ಮೇಲು ನೋಟಕ್ಕೆ ಒಂದೇ ರೀತಿ ಕಾಣುತ್ತವೆ. ಯೋಗಿಯೂ ಹೊರನೋಟಕ್ಕೆ ಸಂಸಾರಿಯಂತೆ ಕಾಣುತ್ತಾನೆ. ಭೋಗಿಯಂತೆ ಕಾಣುತ್ತಾನೆ. ಆದರೆ ಅವನು ಲೋಕದ ಎಲ್ಲ ಜನರಂತೆ ಕಾಣುತ್ತಾ ಎಲ್ಲಾ ಸುಖ ದುಃಖ ಸಂಭ್ರಮಗಳಲ್ಲಿ ಪಾಲ್ಗೊಳ್ಳುತ್ತಾ ಅಂತರಂಗದಲ್ಲಿ ತ್ಯಾಗಿಯಾಗಿರುತ್ತಾನೆ, ಎಂದು ನಿಜವಾದ ತ್ಯಾಗಿಗಳ ಲಕ್ಷಣವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಕಾಗೆಯಂತೆ ಕಾಣುತ್ತದೆ ಕೋಗಿಲೆ. ಒಂದೇ ಆಕಾರ ಒಂದೇ ಬಣ್ಣ. ಆದರೆ ಬಾಯಿ ಬಿಟ್ಟರೆ ಅದರ ಸ್ವರೂಪ ಬಯಲಾಗುತ್ತದೆ. ಸಂಸಾರದಲ್ಲಿದ್ದುಕೊಂಡು ಸಾಂಸಾರಿಕ ಜೀವನದ ಎಲ್ಲ ಸುಖ ದುಃಖ ಸಂಭ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೂ ಯಾವುದನ್ನೂ ಅಂತರಂಗಕ್ಕೆ ಇಳಿಸಿಕೊಳ್ಳದೆ, ಒಳಗೆ ಸದಾ ಕಾಲ ಪರತತ್ವವನ್ನು

ನಿಲಿಸಿಕೊಂಡವರು ಯೋಗಿಗಳು. ಅಂತಹ ಯೋಗಿಗಳು ನಮಗೆ ಗುರುಗಳಾಗಿ ಸಿಗಬೇಕು, ಎಂದು ಹಿಂದಿನ ಮುಕ್ತಕದ 'ಎಂತಹ ಗುರು' ಸಿಗಬೇಕು ಎನ್ನುವುದನ್ನು ಇಂದಿನ ಮುಕ್ತಕದಲ್ಲಿ ಮುಂದುವರೆಸಿದ್ದಾರೆ ಡಿವಿಜಿಯವರು.

ನಮ್ಮ ಸುತ್ತುಮುತ್ತಲಿನಲ್ಲೇ ಅಂತಹವರು ಇರಬಹುದು. ಸಾಂಸಾರಿಕ ಜೀವನವನ್ನು ನಡೆಸುತ್ತಾ ಮನೆ, ಮಡದಿ, ಮಕ್ಕಳು, ಬಂಧು, ಮಿತ್ರರು, ಎಂದು ಎಲ್ಲವನ್ನೂ ಕಟ್ಟಿಕೊಂಡು ಇದ್ದರೂ ಯಾವುದಕ್ಕೂ ಅಂಟದೆ 'ತಾವರೆ ಎಲೆಯ ಮೇಲಿನ ನೇರ ಹನಿಯಂತೆ ಜೀವನ ನಡೆಸುತ್ತಿರುತ್ತಾರೆ. ಅವರಿಗೆ ಎಲ್ಲವೂ ಬೇಕು, ಆದರೆ ಯಾವುದೂ ಬೇಡ, ಹೊರಗಿನ ಜೀವನಕ್ಕೆ ಎಲ್ಲವೂ ಬೇಕು ಅಂತರಂಗದ ಒಳಗಿಳಿಸಿಕೊಳ್ಳಲು ಅದಾವುದೂ ಬೇಡ. ಹುಟ್ಟಿದ್ದೇವೆ ಬದುಕಬೇಕು. ಇದೆಲ್ಲ ನಶ್ವರ, ಎಂದರೆ ಯಾವುದೂ ಶಾಶ್ವತವಲ್ಲ ಎಂದು ನಮಗೆ ಗೊತ್ತು. ಹಾಗೆಂದು ಬದುಕುವುದನ್ನು ಬಿಟ್ಟು ಓಡುವುದಕ್ಕಾಗುವುದೇ, ಆಗುವುದಿಲ್ಲವಾದ್ದರಿಂದ ಇದರಲ್ಲಿ ಇದ್ದೂ ಇಲ್ಲದ ಹಾಗೆ ಬದುಕುವುದೇ 'ತ್ಯಾಗಿ' ಗಳ ಲಕ್ಷಣ. 'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶು:" ಎನ್ನುತ್ತದೆ ಮಹಾನಾರಾಯಣ ಉಪನಿಷತ್ತು, ಎಂದರೆ ತ್ಯಾಗದಿಂದ ಮಾತ್ರ ಅಮೃತತ್ವ ಸಿಗುವುದು ಎಂದರ್ಥ.





ತ್ಯಾಗವೆಂದರೆ ಎಲ್ಲವನ್ನೂ ಬಿಟ್ಟು, ಗಡ್ಡ ಮೀಸೆಗಳ ಬಿಟ್ಟು, ಕಾಡಿಗೆ ಹೋಗಿ ಯಾವುದೋ ಮರದ ಕೆಳಗೆ, ಮೂಗ ಹಿಡಿದುಕೊಂಡು ಕುಳಿತು ತಪಸ್ಸನ್ನು ಮಾಡುವವನಂತೆ ಕುಳಿತುಕೊಳ್ಳುವುದಲ್ಲ. ಎಲ್ಲವನ್ನೂ ಇಟ್ಟುಕೊಂಡು ಯಾವುದೂ ಇಲ್ಲವೆಂಬಂತೆ, ಯಾವುದೂ ನನ್ನದಲ್ಲವೆಂಬಂತೆ, ಯಾವುದರ ಮೇಲೂ ವ್ಯಾಮೋಹ ಮಮಕಾರವಿಲ್ಲದಂತೆ, ಇದ್ದರೆ ಆಗ ಪರತತ್ವ ತಾನಾಗೇ ಬಂದು ನಮ್ಮ ಮನಸ್ಸನ್ನು ಅಲಂಕರಿಸುತ್ತದೆ. ಹಾಗಿರುವವರು ನಮ್ಮ ಮಾರ್ಗದರ್ಶಕರಾದರೆ ನಾವೂ ಸಹ ಸರಿಯಾದ ಮಾರ್ಗದಲ್ಲೇ ಪ್ರಯಾಣಿಸಬಹುದು. ಎಂದೋ ಒಂದು ದಿನ ಬದುಕಿನ 'ಅಂಟಿ' ನಿಂದ ಮುಕ್ತವಾಗಬಹುದು. ಆದರೆ ಇದು ಸುಲಭವಲ್ಲ.

ಇದು, ಒಂದು ದಿನ, ವರ್ಷ ಅಥವಾ ಜನ್ಮದಲ್ಲಿ ಆಗುವ ಪ್ರಕ್ರಿಯೆಯಲ್ಲ. ಆ ಸ್ಥಿತಿಗೆ ತಲುಪಲು ಯಾವ ಪವಾಡವೂ ಸಾಧ್ಯವಿಲ್ಲ. ಎಲ್ಲದರಲ್ಲಿ ಇದ್ದೂ ಅಂಟಿಲ್ಲದ ಸ್ಥಿತಿಗೆ ತಲುಪಲು ಸಾಧನೆ ಬೇಕು. ಅಂತಹ ಸಾಧನೆಗೆ ಅಂತಹ ಗುರುಗಳೇ ಬೇಕಲ್ಲವೇ? ನಮಗೆ ಅಂತಹ ಗುರು ಸಿಕ್ಕರೆ, ಅವರಿಂದ ನಮಗೆ ಮಾರ್ಗದರ್ಶನವಾದರೆ, ಆ ದರ್ಶನವನ್ನು ನಾವು ನಮ್ಮ ಅಂತರಂಗಕ್ಕೆ ಇಳಿಸಿಕೊಳ್ಳಲಾದರೆ, ನಾವೇ ಧನ್ಯರಲ್ಲವೇ?

**ಮುಕ್ತಕ – 776**

**ಪರಿಪರಿಯ ರೂಪದಲ್ಲಿ ಪರದೈವ ಕಣ್ಮುಂದೆ |**

**ಚರಿಸುತಿರೆ ನರನದರ ಗುರುತನರಿಯದೆಯೆ ||**

**ಧರೆಯದದು ತನ್ನಂದದ ಪ್ರಾಣಿಯೆಂದೆಣಿಸಿ |**

**ತೊರೆಯುವನು ದೊರೆತುದನು - ಮಂಕುತಿಮ್ಮ ||**

ಚರಿಸುತಿರೆ=ಚರಿಸುತ+ಇರೆ, ನರನದರ=ನರನು+ಅದರ, ಗುರುತನರಿಯದೆಯೆ=ಗುರುತನು+ಅರಿಯದೆಯೆ, ಧರೆಯದದು=ಧರೆಯದು+ಅದು, ತನ್ನಂದದ=ತನ್ನ+ಅಂದದ, ಪ್ರಾಣಿಯೆಂದೆಣಿಸಿ=ಪ್ರಾಣಿ+ಎಂದು+ಎಣಿಸಿ, ದೊರೆತುದನು=ದೊರೆತ+ಅದನು ಚರಿಸುತ=ಓಡಾಡುತ್ತಾ, ತನ್ನಂದದ=ತನ್ನಂತಹ.

ವಿದವಿದವಾದ ರೂಪಗಳನ್ನು ಹೊತ್ತು ಆ ಪರದೈವ ಕಣ್ಣ ಮುಂದೆಯೇ ಓಡಾಡುತ್ತಾ ಇದ್ದರೂ ಅದರ ಗುರುತನ್ನು ತಿಳಿಯಲಾಗದೆ, ಅದೂ ಸಹ ಭೂಮಿಯ ಮೇಲೆ ಓಡಾಡುವ ತನ್ನಂತಹ ಮತ್ತೊಂದು ಪ್ರಾಣಿ, ಎಂದು ತಿಳಿದು ಕೈಗೆ ಸಿಕ್ಕ ದೈವವನ್ನು ಬಿಟ್ಟು ಬಿಡುತ್ತಾನೆ ಮನುಷ್ಯ ಎಂದು, ಸರ್ವಾತ್ಮಾನುಭವದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಅತಿ ಸೂಕ್ಷ್ಮ ಕೀಟದಿಂದ ಹಿಡಿದು ಬೃಹತ್ತಾದ ಪ್ರಾಣಿಯವರೆಗೆ ಒಂದು ಸಾಮ್ಯತೆ( similarity) ಯನ್ನು ನಾವು ಕಾಣಬಹುದು. ಎಲ್ಲವೂ ಹುಟ್ಟುತ್ತವೆ, ಬೆಳೆಯುತ್ತವೆ, ಬದುಕುತ್ತವೆ ಮತ್ತು ಸಾಯುತ್ತವೆ. ಇದಕ್ಕೆ ಮನುಷ್ಯ

ಹೊರತಲ್ಲ. ಈ ಹುಟ್ಟುವುದು, ಬೆಳೆಯುವುದು, ಬದುಕುವುದು ಮತ್ತು ಸಾಯುವುದು ಎಂಬ ಪ್ರಕ್ರಿಯೆ ನಡೆಯುವುದು ಆ ಪರಮ ಚೇತನದ ಒಂದಂಶವಾದ ಚೇತನವು ಈ ಎಲ್ಲ ಪ್ರಾಣಿಗಳ ದೇಹವನ್ನು ಧರಿಸಿದ್ದರೆ ಮಾತ್ರ. ಒಂದೊಂದಕ್ಕೆ ಒಂದೊಂದು ರೂಪವಿದ್ದರೂ, ಈ ಜಗತ್ತಿನಲ್ಲಿ ಜೀವಿಸಲು ಇರಬೇಕಾದರೆ ಬೇಕಾದ 'ಚೈತನ್ಯ' ದ ರೂಪ ಒಂದೇ ಆಗಿರುತ್ತದೆ. ಹಾಗಾಗಿ ಎಲ್ಲ ಜೀವಿಗಳಲ್ಲೂ ಇರುವ ಚೈತನ್ಯವೇ ಆ ಪರಮಾತ್ಮ. ಏಕೆಂದರೆ ಆ ಪರಮಾತ್ಮನೇ 'ಸ್ವ ಇಚ್ಛೆ' ಯಿಂದ ಬೇರೆ ಬೇರೆ ರೂಪಗಳನ್ನು ಸೃಷ್ಟಿಸಿ ತಾನು ಅದರೊಳಕ್ಕೆ ಹೊಕ್ಕು ಲೋಕವ್ಯಾಪಾರವನ್ನು ಅಥವಾ ಜಗನ್ನಾಟಕವನ್ನು ನಡೆಸುತ್ತಿದ್ದಾನೆ ಎನ್ನುವುದು ನಮ್ಮ ದಾರ್ಶನಿಕರ ಮತ.

'ಸುಮ್ಮನೊಬ್ಬಂಟಿ ಎಂತಿಹುದು? ಬೇಸರವಹುದು ಹೊಮ್ಮುವೆನು ಕೋಟಿ ರೂಪದಲಿ ತಾನೆಂದು" (ಮುಕ್ತಕ 74) ಎಂದು ಗುಂಡಪ್ಪನವರೇ ಹೇಳುವ ಹಾಗೆ ಕೋಟಿ ಕೋಟಿ ರೂಪಗಳಲ್ಲಿ ಪ್ರಕಟಗೊಂಡಿರುವುದೇ ಆ ಪರಮ ಚೈತನ್ಯ. ಅಂದರೆ ಎಲ್ಲರನ್ನೂ ಹೊತ್ತು, ಎಲ್ಲರಲ್ಲೂ ಇರುವುದೇ ಪರಮಾತ್ಮನೆಂದಾದಮೇಲೆ ಎಲ್ಲವೂ ಪರಮಾತ್ಮನೆಂಬ 'ಜಗದಾತ್ಮಭಾವ ನಮ್ಮಲ್ಲಿ ಮೂಡಬೇಕು. ಆದರೆ ಹಾಗಾಗಿದೆಯೇ? ನಮಗೆ ಎಲ್ಲವೂ ಭಿನ್ನವಾಗೇ ಕಾಣುತ್ತದೆ. ಏಕತೆ ಕಾಣುವುದೇ ಇಲ್ಲ. ಕಾರಣವೇನೆಂದರೆ ನಾವು ನೋಡುವುದು, ಗುರುತಿಸುವುದು, ನೆನಪಿಸಿಕೊಳ್ಳುವುದು ಎಲ್ಲವೂ ಅಶಾಶ್ವತವಾದ ಹೊರ ರೂಪವನ್ನಾಗಲಿ, ಶಾಶ್ವತವಾದ ಅಂತರಂಗದ ಚೈತನ್ಯವನ್ನಲ್ಲ. ನಮ್ಮ ಎದುರಿಗೆ ಆ ಚೈತನ್ಯ ಬೇರೆ ಬೇರೆ ರೂಪ ಧರಿಸಿ ಓಡಾಡುತ್ತಿದ್ದರೂ ನಮಗೆ ಕಾಣುವುದೇ ಇಲ್ಲ. ಕಾಣಲು ನಾವು ಶಕ್ಯರೂ ಅಲ್ಲ. ಏಕೆಂದರೆ 'ರೂಪವಿಲ್ಲದ ಏನನ್ನೂ ನೋಡಲು ನಮಗೆ ಶಕ್ತಿಯಿಲ್ಲ'. ಹಾಗಾಗಿಯೇ ನಾವು ಹಲವಾರು ರೀತಿಯ ರೂಪಗಳ ಮೂರ್ತಿಗಳನ್ನು ಕೆತ್ತಿ ಅವುಗಳಿಗೆ ಬೇರೆ ಬೇರೆ ದೇವರುಗಳ ಹೆಸರುಗಳನ್ನು ಇತ್ತು, ಆ ರೂಪವನ್ನೇ ಮನಸ್ಸಿನಲ್ಲಿ ಧಾರಣೆ ಮಾಡಿ ಪ್ರತಿನಿತ್ಯ ಪೂಜಿಸುತ್ತೇವೆ.

'ರೂಪವಿಲ್ಲದ ಚೈತನ್ಯವು ನಮ್ಮ ಎದುರಿಗೆ ಇದೆ, ಎಲ್ಲ ಪ್ರಾಣಿಗಳ ರೂಪದಲ್ಲಿ, ಆ ಪ್ರಾಣಿಗಳ ವೈವಿಧ್ಯತೆಯಲ್ಲಿ, ಗಿಡ ಮರಗಳಲ್ಲಿ, ಅವುಗಳ ವಿನ್ಯಾಸದಲ್ಲಿ, ಶಬ್ದ ಸ್ಪರ್ಶ ರೂಪ ರಸ ಗಂಧದಲ್ಲಿ ಒಳಹೊಕ್ಕು ತಾನೇ ಎಲ್ಲವನ್ನೂ ಅನುಭವಿಸುತ್ತಾ ಆನಂದದಿಂದ ಇದೆ. ಅದನ್ನು ನೋಡಲು ಹೊರಗಿನ ಕಣ್ಣುಗಳಿಗೆ ಕ್ಷಮತೆ ಇಲ್ಲ. ನಾವು ನಮ್ಮ ಅಂತರಂಗದ ಕಣ್ಣುಗಳಿಂದ ಬೃಹಚ್ಚೇತನವು ಅಣುಚೇತನವಾಗಿ ಬೇರೆ ಬೇರೆ ರೂಪಗಳನ್ನು ಧಾರಣೆ ಮಾಡಿರುವುದನ್ನು ಕಾಣಬೇಕು. ಹಾಗೆ ಕಾಣಲಾದರೆ ನಮ್ಮ ಮನಸ್ಸಿನಲ್ಲಿ ಭೇಧವಳಿದು ನಮಗೆ ಜಗತ್ತಿನಲ್ಲಿ 'ಏಕಾತ್ಮ'ದ ದರ್ಶನವಾಗುತ್ತದೆ. ನಿರಂತರ ಪ್ರಯತ್ನದಿಂದ ಅಂತಹ ದರ್ಶನವನ್ನು ಪಡೆಯಬಹುದು.

| 1ಸ೦೭ |
|---|



**ಮುಕ್ತಕ-777**

**ಸಾಮಾನ್ಯ ರೂಪದಲಿ ಸಂಸಾರಿವೇಷದಲಿ |**

**ಸ್ವಾಮಿ ನಿನ್ನೆಡೆಗೆ ಬರಬಹುದು ವರ ನೀಡಿ ||**

**ಮೈಮೆ ಕಾಂಬೊಡೆ ನಿನಗೆ ಸಂಸ್ಕಾರವಿರಬೇಕು |**

**ತಾಮಸಿಗೆ ವರವೆಲ್ಲಿ - ಮಂಕುತಿಮ್ಮ ||**

ಮೈಮೆ=ಮಹಿಮೆ, ಕಾಂಬೊಡೆ= ಕಾಣಲು

ಪರಮಾತ್ಮ ನಿನಗೆ ವರ ನೀಡಲು, ಸಾಮಾನ್ಯನ ರೂಪಧರಿಸಿ ಬರಬಹುದು, ಸಂಸಾರಿಯ ವೇಷಧರಿಸಿ ಬರಬಹುದು. ಅವನ ಮಹಿಮೆಯನ್ನು ಕಾಣಲು ಒಂದು ಉನ್ನತ ಸಂಸ್ಕಾರವಿರಬೇಕು. ತಾಮಸ ಗುಣವುಳ್ಳವನಿಗೆ ವರವೆಲ್ಲಿ ಸಿಗುವುದು ಎಂದು ಸರ್ವಾತ್ಮಾನುಭವದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ವಿಷಯವನ್ನು ಪುಷ್ಟಿಕರಿಸುವ ಹಲವಾರು ಕತೆಗಳು ನಮಗೆ ನಮ್ಮ ಪುರಾಣಗಳಲ್ಲಿ ನಮ್ಮ ಸಾಧುಸಂತರ ಜೀವನ ಚರಿತ್ರೆಯಲ್ಲಿ ಹೇರಳವಾಗಿ ಸಿಗುತ್ತದೆ. ನಮ್ಮ ಮನಸ್ಸಿನಲ್ಲಿ ಆ ಪರತತ್ವವನ್ನು ಕಾಣುವ ಬಯಕೆ ಉತ್ಕಟವಾದರೆ ಯಾವುದಾದರೂ ರೂಪದಲ್ಲಿ ದರ್ಶನವಾಗಬಹುದು. ಏಕೆಂದರೆ ನಮಗೆ, ಆಗುವುದು, ಆಗದಿರುವುದು, ಬರುವುದು ಹೋಗುವುದು ಎಲ್ಲಕ್ಕೂ ನಮ್ಮ ಮನಸ್ಸಿನ ದೃಢ ಸಂಕಲ್ಪ ಮತ್ತು ಶುದ್ಧ ಪ್ರಯತ್ನವೇ ಕಾರಣ. ಎಷ್ಟೋ ಬಾರಿ ಆ

ಪರತತ್ವದ ಪ್ರತಿರೂಪವಾಗಿ ನಮ್ಮ ಮುಂದೆ ಯಾರಾದರೂ ಸುಳಿಯುತ್ತಿದ್ದರೂ ನಮಗೆ ಅರಿವಾಗುವುದೇ ಇಲ್ಲ. ಏಕೆಂದರೆ ನಾವು ಅದನ್ನು ನೋಡಲು ಬಯಸಿಲ್ಲ ಮತ್ತು ನೋಡಲು ನಮ್ಮಲ್ಲಿ ಮಾನಸಿಕ ಸಿದ್ಧತೆ ಇನ್ನೂ ಆಗಿಲ್ಲ. ಹಾಗಾಗಿ ಕಾಣುವುದಿಲ್ಲ.

ಬಹಳ ದಣಿವಾಗಿ, ಬಿಸಿಲಲ್ಲಿ ದಣಿದಿರುವಾಗ ಯಾರಾದರೂ ಒಂದು ಚೊಂಬು ನೀರನ್ನು ಕೊಟ್ಟರೆ 'ದೇವರು ಬಂದ ಹಾಗೆ ಬಂದೆಯಪ್ಪ" ಎನ್ನುವುದಿಲ್ಲವೇ? ಆದ್ದರಿಂದ 'ಅವನು' ಯಾವರೂಪದಲ್ಲಿಯಾದರೂ ಬರಬಹುದಾದ್ದರಿಂದ ಎಲ್ಲ ರೂಪವೂ 'ಅವನೇ' ಎಂದು ನಂಬಿಬಿಟ್ಟರೆ, ಇದೋ ಅದೋ' ಅಥವಾ 'ಇಹುದೋ, ಅಲ್ಲವೋ' ಎನ್ನುವ ದ್ವಂದ್ವಗಳು ನಾಶವಾಗಿ ಶಾಂತವಾದ ಮನಸ್ಸಿಗೆ ಎಲ್ಲೆಲ್ಲೂ ಪರತತ್ವದ ದರ್ಶನವೇ ಆಗುತ್ತಿರುತ್ತದೆ. ಆದರೆ ಹಾಗೆ ಕಾಣಲು ಮಾನಸಿಕ ಸಿದ್ಧತೆ ಬೇಕು. ಸಚೇತರಾಗಿರಬೇಕು. ಮಾನ್ಯ ಗುಂಡಪ್ಪನವರು 'ತಾಮಸಿಗೆ ವರವೆಲ್ಲಿ' ಎಂದಿದ್ದಾರೆ. ತಾಮಸಿ ಎಂದರೆ ತಾಮಸ ಗುಣವಿರುವವರು ಎಂದು ಅರ್ಥ. ಕಪಟ, ಸುಳ್ಳು, ನಿದ್ದೆ, ಸೋಂಬೇರಿತನ, ಕೊಳಕುತನಗಳ ಆಗರವಾದ ತಾಮಸಿ, ಅವನು ತನ್ನ ಹೊಲಸಲ್ಲೇ ಬಿದ್ದು ಹೊರಳಾಡುತ್ತಿರುವಾಗ ಅವನಿಗೆ ಪರತತ್ವದ ಬಗ್ಗೆ ಯೋಚಿಸುವ ಸಂಸ್ಕಾರವಾದರೂ ಹೇಗೆ ಬರಬೇಕು ಹೇಳಿ, ಬಯಕೆಯೇ ಇಲ್ಲದಿದ್ದರೆ 'ವರ' ಸಿಗುವುದೆಂತು. 'ವರ' ವೆಂದರೆ ಶ್ರೇಷ್ಠತಮ ವಸ್ತು ಎಂದು ಅರ್ಥ.

11ಸಂ

ಕಗ್ಗರಸಧಾರೆ ಗುರು ಲಕ್ಷಣ 774 - 778

ಈ ಜಗತ್ತಿನಲ್ಲಿ 'ಸೃಷ್ಟಿಕರ್ತ'ನಿಗಿಂತ ಶ್ರೇಷ್ಠವಾದದ್ದು ಯಾವುದೂ ಇರಲಿಕ್ಕೆ ಸಾಧ್ಯವಿಲ್ಲ. ಅವನೇನೂ ನಮ್ಮ ಪುರಾಣಗಳು ಹೇಳುವಂತೆ 'ಚತುರ್ಭುಜನಾಗಿ, ಶಂಖಚಕ್ರಗಳನ್ನು ಧರಿಸಿಯೋ' ಅಥವಾ 'ಚಂದ್ರಮೌಳಿಯಾಗಿ, ಗಂಗಾಧರನಾಗಿ, ತ್ರಿಶೂಲ, ಡಮರುಗ ಮತ್ತು ಕಪಾಲಪಾಣಿ' ಯಾಗಿ ನಮ್ಮ ಮುಂದೆ ಬಂದು ನಿಲ್ಲುವುದಿಲ್ಲ. ನಮ್ಮ ಸುತ್ತಲಿನ ಸಕಲದಲ್ಲೂ ಆ ಪರತತ್ವದ ಪ್ರತಿರೂಪವನ್ನು ಕಾಣುವ ಮನೋಭಾವವನ್ನು ಬೆಳೆಸಿಕೊಂಡರೆ ನಾವು ನೋಡಿದಲ್ಲೆಲ್ಲಾ ನಮಗೆ ಪರಮಾತ್ಮನ ಪ್ರತಿರೂಪದ ದರ್ಶನವಾಗುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 778**

**ವಿಷಯಭೋಗವಿರಕ್ತಿ, ವಿಶ್ವಲೀಲಾಸಕ್ತಿ ।**
**ಕೃಷಿಗೆ ಸಂತತ ದೀಕ್ಷೆ, ವಿಫಲಕೆ ತಿತಿಕ್ಷೆ ॥**
**ವಿಷಮದಲಿ ಸಮದೃಷ್ಟಿ, ವಿವಿದಾತ್ಮ ಸಂಸೃಷ್ಟಿ ।**
**ಕುಶಲಸಾಧನಗಳಿವು – ಮಂಕುತಿಮ್ಮ ॥**

ವಿಶ್ವಲೀಲಾಸಕ್ತಿ = ವಿಶ್ವಲೀಲ+ಆಸಕ್ತಿ, ವಿವಿದಾತ್ಮ= ವಿವಿಧ+ಆತ್ಮ, ಕುಶಲಸಾಧನಗಳಿವು= ಕುಶಲ+ಸಾಧನಗಳು+ಇವು, ತಿತಿಕ್ಷೆ=ತಾತ್ಸಾರ, ವಿಷಮ=ಕಷ್ಟತರ, ಸಂಸೃಷ್ಟಿ=ಸಮದೃಷ್ಟಿ

ವಿಷಯಗಳ ಭೋಗದಲಿ ವಿರಕ್ತಿ, ವಿಶ್ವ ಲೀಲೆಯಲ್ಲಿ ಆಸಕ್ತಿ, ಕರ್ತವ್ಯವನ್ನು ಮಾಡಲು ಸದಾ ನಿರತ, ವೈಫಲ್ಯಕ್ಕೆ ಅವಿಚಲಿತ, ಜಗತ್ತಿನ ವೈವಿಧ್ಯತೆಯಲ್ಲಿ ಸಮದೃಷ್ಟಿ, ಜಗತ್ತಿನ ಆತ್ಮಗಳೆಲ್ಲವೂ ಒಂದೇ ಎನ್ನುವ ಜಗದಾತ್ಮಭಾವ, ಇಂತಹ ಗುಣಗಳಿದ್ದರೆ ಅವುಗಳು ಪರತತ್ವವನ್ನು ಅರಿಯುವ ಪ್ರಯತ್ನಕ್ಕೆ ಸೂಕ್ತವಾದ ಸಾಧನಗಳು ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಆಹಾ ಈ ಜಗತ್ತು ಎಷ್ಟು ಸುಂದರವಾಗಿದೆ, ಎಲ್ಲವೂ ನನ್ನ ಸಂತೋಷಕ್ಕಾಗಿ ಸೃಷ್ಟಿಸಲ್ಪಟ್ಟಿದೆ, ನನ್ನ ಸಂತೋಷಕ್ಕಾಗಿ ನಾನೇ ಎಷ್ಟು ಮಾರ್ಗಗಳನ್ನು ಕಂಡುಕೊಂಡಿದ್ದೇನೆ" ಎನ್ನುತ್ತಾ ಸದಾಕಾಲ ಈ ಭೋಗಗಳನ್ನು ಅನುಭವಿಸುವುದರಲ್ಲೇ ತಲ್ಲೀನರಾದವರಿಗೆ, ಪರತತ್ವವನ್ನು ಕುರಿತು ಚಿಂತಿಸಲು ಸಮಯವಾದರೂ ಎಲ್ಲಿರುತ್ತದೆ? ಭೋಗದಲ್ಲಿ ರಕ್ತರಾಗದೆ, ವಿರಕ್ತರಾದರೆ ಆಗ ಪರತತ್ವದ ವಿಚಾರಗಳು ಮನಸ್ಸಿಗೆ ಬರಬಹುದು. ಹಾಗೆಂದು ಎಲ್ಲವನ್ನೂ ತೊರೆಯಬೇಕು ಎಂದರ್ಥವಲ್ಲ. ಇದನ್ನು ಪರಮಾತ್ಮನ ಲೀಲಾವಿನೋದದ ತಾಣವೆಂದು ಬಗೆಯಬೇಕು. ಇದು ನಾನು ಮಾಡುತ್ತಿಲ್ಲ, ನಾನು ಏನೇ ಮಾಡಿದರೂ ಅದು ಆ ಪರಮಾತ್ಮನ ಲೀಲಾವಿನೋದಕ್ಕೆ ಪೂರಕವಾಗಿರಬೇಕು ಎನ್ನುವ ಭಾವ ತುಂಬಿದರೆ ಆಗ ಈ 'ವಿಶ್ವಲೀಲೆಯಲ್ಲಿ ಆಸಕ್ತ' ರಾದರೂ 'ಅಂತರಂಗದಲ್ಲಿ ವಿರಕ್ತ ರಾಗಿರಬಹುದು.

ಹಾಗೆ, ಇದು ನಮ್ಮದಲ್ಲ, ಎಲ್ಲವೂ ಆ ಜಗನ್ನಾಟಕ ಸೂತ್ರಧಾರಿಯು ತನ್ನ ಸಂತೋಷಕ್ಕೆ ಕಟ್ಟಿಕೊಂಡ ನಾಟಕ ಎಂದು ಭಾವಿಸಿದಾಗ, ನಾವು ಮಾಡುವ ಕೆಲಸಕ್ಕೂ ಮತ್ತು ಅದರಿಂದ ಸಿಗುವ ಫಲಕ್ಕೂ ಅಂಟಿಕೊಳ್ಳಲು ಸಾಧ್ಯವಿಲ್ಲ. ಫಲಾಪೇಕ್ಷೆಯಿಲ್ಲದೆ ನಡೆಸುವ ನಮ್ಮ ಕೆಲಸಗಳಿಂದ ನಮಗೆ ಸಂತೋಷವೋ, ದುಃಖವೋ ಉಂಟಾಗುವುದಿಲ್ಲ, ತಟಸ್ಥ ಮನೋಭಾವದ ನೆಲೆ ಸಿಕ್ಕುತ್ತದೆ. ನಾನು ನನ್ನದು ಎನ್ನುವ ಮಮಕಾರವನ್ನು ತೊರೆದು ವಿರಕ್ತಿಯ ಸ್ಥಿತಿಯಲ್ಲಿ ಜಗತ್ತಿನ ವೈವಿಧ್ಯತೆಯಲ್ಲಿ ಸಮಭಾವ ಉಂಟಾಗುತ್ತದೆ. 'ಸಕಲ ಚರಾಚರಗಳಲ್ಲಿ ಚೈತನ್ಯ ರೂಪದಲ್ಲಿ ಆ ಪರಮಾತ್ಮನೇ ಇದ್ದಾನೆ' ಎನ್ನುವ ತತ್ವ ಮನದಲ್ಲಿ ಗಟ್ಟಿಯಾಗಿ ನಿಂತರೆ ಆಗ 'ಏಕಾತ್ಮ ಅಥವಾ ಜಗದಾತ್ಮ' ಭಾವ ಉಂಟಾಗುತ್ತದೆ.

ಅಂತಹ ಸ್ಥಿತಿಯಲ್ಲಿ ನಮಗೆ ಕಂಡಲ್ಲೆಲ್ಲಾ ಆ ಪರಮಾತ್ಮನ ಲೀಲೆ ಕಾಣುತ್ತದೆ. ಸ್ವಾರ್ಥ, ಮಮಕಾರ, ಭೇದಗಳು ನಮ್ಮ ಅಂತರಂಗದಲ್ಲಿ ನಶಿಸಿ ಆನಂದದ ಸ್ಥಿತಿ ಸಿಗುತ್ತದೆ. ಆ ಸ್ಥಿತಿಯಲ್ಲಿ ಮನದಲ್ಲಿ ಪರತತ್ವವನ್ನು ಅನುಸಂಧಾನಮಾಡಲು ಸೂಕ್ತವಾದ ವೇದಿಕೆ ಅಥವಾ ಭೂಮಿಕೆ ನಿರ್ಮಾಣವಾಗುತ್ತದೆ. ಅಲ್ಲಿಂದ ಉತ್ತರೋತ್ತರವಾಗಿ ಬೆಳೆಯಲು ನಮಗೆ ಸಾಧನವಾಗುತ್ತದೆ. ಕೇಳಲು, ಹೇಳಲು, ಬರೆಯಲು ಮತ್ತು ಅನುಭವಿಸಲೂ ಸಹ ಬಹಳ ಸುಲಭ ಮತ್ತು ಸುಂದರ. ಆದರೆ ಆ ಸ್ಥಿತಿಗೆ ತಲುಪಬೇಕಾದರೆ ಸಾಧನೆ ಬೇಕು. ಮಮಕಾರದ ಅಂಟನ್ನು ತೊರೆಯುವ ಸಾಧನೆಯಾಗಬೇಕು. ಜಗತ್ತಿನ ಸೆಳೆತಗಳಲ್ಲಿ ಅದು ಕಷ್ಟವಾದರೂ ಅಸಾಧ್ಯವಲ್ಲ. ಪ್ರಯತ್ನ ಪಟ್ಟರೆ ಎಲ್ಲರಿಗೂ ಸಾಧ್ಯ.

**ಮುಕ್ತಕ – 779**

**ದೊರೆವ ಜೀತಕ್ಕೆ ದುಡಿತ, ಮರುದಿನದ ಚಿಂತೆ ಮಿತ |**
**ಹೊರೆಯ ಹಗುರಾಗಿಸುವ ಕೆಳೆಯರೊಡನಾಟ ||**
**ಸರಳತೆಯ ಪರಿತುಷ್ಟಿ, ಪರಮಾರ್ಥ ದೃಷ್ಟಿಯಿವು |**
**ಸರಿಗೂಡೆ ಸುಕೃತವಿದು - ಮಂಕುತಿಮ್ಮ ||**

ಹಗುರಾಗಿಸುವ=ಹಗುರ+ಆಗಿಸುವ, ಕೆಳೆಯರೊಡನಾಟ-ಕೆಳೆಯರ+ಒಡನಾಟ, ಸರಿಗೂಡೆ=ಸರಿ+ಕೂಡೆ,
ಸುಕೃತವಿದು=ಸುಕೃತವು+ಇದು, ಕೆಳೆಯ-ಗೆಳೆಯ, ಪರಿತುಷ್ಟಿ=ಸಂತೃಪ್ತಿ, ಸುಕೃತ=ಮಣ್ಯ

ನಮಗೆ ಎಷ್ಟು ಹಣ ಸಿಗುತ್ತದೋ ಅಷ್ಟಕ್ಕೆ ನಿರ್ವಂಚನೆಯಿಂದ ದುಡಿತ, ಮುಂದೇನು ಎನ್ನುವುದರ ಕುರಿತು ಮಿತವಾದ ಚಿಂತೆ, ಜೀವನದ ಹೊರೆಯನ್ನು ಹಗುರಾಗಿಸಿಕೊಳ್ಳಬಹುದಾದಂತಹ ಸಂಗ-ಸಹವಾಸಗಳು,

ಸರಳವಾದಂತಹ ಜೀವನದ ಶೈಲಿಯಿದ್ದರೆ, ಬದುಕಿನಲ್ಲಿ ಪರಮಾರ್ಥ ಚಿಂತನೆಗೆ ಸಾಕಷ್ಟು ಸಮಯ ಸಿಗುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.



ಪರಮಾರ್ಥ ಚಿಂತನೆಗೆ ನಾವು ಬದುಕಿರಬೇಕು. ಬದುಕಿಗೆ ಬೇಕಾದ ಮೂಲ ಅವಶ್ಯಕತೆಗಳಿಗೆ ಸಂಪಾದನೆ ಬೇಕು. ಎಷ್ಟು ಅವಶ್ಯಕತೆ ಇದೆಯೋ ಅಷ್ಟನ್ನು ಸಂಪಾದಿಸಬೇಕು. ಸರಳ ಜೀವನ ನಡೆಸಿದರೆ ನಮ್ಮ ಅವಶ್ಯಕತೆಗಳು ಅಧಿಕವಾಗಿರುವುದಿಲ್ಲ ಮತ್ತು ನಾವು ಸಂಪಾದಿಸುವುದು ಸರಳ ಜೀವನಕ್ಕೆ ಸಾಕಾಗುವಷ್ಟಿರಬೇಕು. ಎಂದರೆ ಸರಳ ಜೀವನ ಮತ್ತು ಅದಕ್ಕೆ ಸೂಕ್ತವಾದ ಸಂಪಾದನೆ ಇದ್ದರೆ, ಬದುಕಿನಲ್ಲಿ ಹೆಚ್ಚು ಜಂಜಾಟಕ್ಕೆ ಸಿಲುಕಿಕೊಳ್ಳದೆ, ಪರಮಾರ್ಥ ಚಿಂತನೆಗೆ ಹೆಚ್ಚು ಸಮಯ ಸಿಗುತ್ತದೆ ಎಂಬುದೇ ಮಾನ್ಯ ಗುಂಡಪ್ಪನವರು ಮತ.

ಅಷ್ಟೇ ಅಲ್ಲ ನಮ್ಮ 'ಸಂಗ' ವೂ ನಮ್ಮ ಬದುಕಿನಲ್ಲಿ ಬೇಕಾಗಿರುವ ಮತ್ತು ನಮ್ಮ ಗುರಿಯಾಗಿರುವ ಪರಮಾರ್ಥ ಚಿಂತನೆಗೆ ಪೂರಕವಾಗಿರಬೇಕು. 'ಸತ್ಸಂಗತ್ವೆ ನಿಸ್ಸಂಗತ್ವಂ' ಎನ್ನುತ್ತಾರೆ ಶಂಕರಭಗವತ್ಪಾದರು. ಸತ್ಸಂಗದಿಂದ ನಿಸ್ಸಂಗವಾಗುತ್ತದೆ, ಎಂದರೆ ಪರಮಾರ್ಥ ಚಿಂತನೆಗೆ ಮಾರಕವಾಗಿರುವ ಎಲ್ಲಾ ಗುಣಗಳೂ, ಸತ್ಸಂಗದಿಂದ ನಮ್ಮ ಅಂತರಂಗದಿಂದ ದೂರವಾಗಿ ಪರತತ್ವದ ಚಿಂತನೆಗೆ ದಾರಿಯಾಗುತ್ತದೆ.

ಹೀಗೆ ಸರಳವಾದ ಜೀವನ ನಡೆಸುವುದರಿಂದ, ಜಂಜಾಟ ಕಡಿಮೆಯಾಗುತ್ತದೆಯಾದ್ದರಿಂದ 'ಜಗತ್ತನ್ನಲ್ಲದೆ ಜಗತ್ಕಾರಕ' ನನ್ನು ಕುರಿತು ಚಿಂತನೆಗೆ ಹೆಚ್ಚು ಅವಕಾಶ, ಸಮಯ ಸಿಗುತ್ತದೆ. ಸಂತ್ಸಂಗದಿಂದ ದುರಾಚಾರ ನಿಸ್ಸಂಗವಾಗಿ, ಮೋಹ ಮಮಕಾರಗಳು ನಶಿಸಿ, ಪರಮಾತ್ಮತತ್ವ ಸ್ಪಷ್ಟವಾಗಿ ಅರಿವಾಗುತ್ತಾ, ಮೋಕ್ಷಕ್ಕೆ ದಾರಿಯಾಗುತ್ತದೆ. ಪರಮಾತ್ಮ ತತ್ವದ ಚಿಂತನೆಗೆ ಹೆಚ್ಚು ಅವಕಾಶ ಸಿಗುತ್ತದೆ. ಹೀಗೆ ಕಡಿಮೆ ಜಂಜಾಟ, ಸರಳ ಮತ್ತು ತೃಪ್ತಿಯ ಜೀವನ, ಸತ್ಸಂಗಗಳು ನಮಗೆ ಲಭ್ಯವಾದರೆ ಅದಕ್ಕಿಂತ ಪುಣ್ಯ ಬೇರೇನು ಬೇಕು, ಎನ್ನುವುದು ಈ ಮುಕ್ತಕದ ಹೂರಣ. ಮನುಷ್ಯ ಜನ್ಮದಲ್ಲಿ ಮಾತ್ರ ಇದು ಸಾಧ್ಯ. ಪ್ರಯತ್ನಪಟ್ಟು ಸಾಧಿಸಿದರೆ ಖಂಡಿತ ಸಾಧ್ಯ .

**ಮುಕ್ತಕ – 78ಸಂ**

**ಮಳೆಗೊಂದು ಬೆಳೆಗೊಂದು ಫಲಕೊಂದು ಋತುವಂತೆ ।**

**ಬೆಳೆಯಿಸುದು ಜೀವವೃಕ್ಷವ ಕಾಲನಿಯತಿ ॥**

**ತಿಳಿವುಮೊಳನಮುಂ ವಿರಕ್ತಿಯುಂ ಮುಕ್ತಿಯುಂ ।**

**ಗಳಿಗೆ ಸರಿಸೇರ್ದಂದು-ಮಂಕುತಿಮ್ಮ ॥**

ತಿಳಿವುಮೊಳನಮುಂ=ತಿಳಿವುಂ+ಒಳನಮುಂ, ಸರಿಸೇರ್ದಂದು=ಸರಿ+ಸೇರಿದ+ಅಂದು.

ಒಳನಮುಂ= ಒಳ್ಳೆಯತನವು

ಮಳೆಗೆ ಒಂದು ಋತು, ಬೆಳೆಗೆ ಒಂದು ಋತು, ಫಲಕ್ಕೆ ಒಂದು ಋತುವಿರುವಂತೆ, ಈ ಜೀವವೆಂಬ ವೃಕ್ಷವೂ ಕಾಲಾನುಕಾಲಕ್ಕೆ ಬೆಳೆಯುತ್ತದೆ. ಅದೇ ರೀತಿ ಸರಿಯಾದ ಸಮಯ ಕೂಡಿಬಂದಾಗ ತಿಳಿವು, ಒಳ್ಳೆಯತನವು, ವಿರಕ್ತಿ ಮತ್ತು ಮುಕ್ತಿಗಳೂ ಲಭ್ಯವಾಗುತ್ತದೆ ಎಂಬ ಅರಿವನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಪರತತ್ವದ ಸಂಕಲ್ಪಮಾತ್ರದಿಂದ ಆದಂತಹ ಈ ಸೃಷ್ಟಿ, ಇಂದು ನಾವು ಕಾಣುತ್ತಿರುವಂತೆ ಆಗುವುದಕ್ಕೂ ಕೋಟ್ಯಾಂತರ ವರ್ಷಗಳೇ ಸಂದಿವೆ ಎಂದು ನಮ್ಮ ವಿಜ್ಞಾನಿಗಳು ದೃಢಪಡಿಸಿದ್ದಾರೆ. ಇಲ್ಲಿ ಯಾವುದೂ ಪವಾಡ ನಡೆಯುವುದಿಲ್ಲ. ಮಳೆ ಬೀಳುವುದಕ್ಕೆ ಪ್ರಕೃತಿಯಲ್ಲಿ ಒಂದು ಪೂರ್ವ ಸಿದ್ಧತೆಯಾಗಬೇಕು, ಅದಕ್ಕೆ ಒಂದು ಕಾಲವಿದೆ. ಬಿದ್ದ ಮಳೆಯಿಂದ ಭೂಮಿ ತಣಿದು, ಆ ಭೂಮಿಯನ್ನು ಹದಗೊಳಿಸಿ, ಸಿದ್ಧಪಡಿಸಿ, ಬೀಜದ ನಾಟಿಯಾದರೆ, ಆ ಬೀಜ, ಪ್ರಕೃತಿಯಲ್ಲಿನ ಅವಶ್ಯಕ ಸಾರವನ್ನೆಲ್ಲಾ ಹೀರಿ ಮೊಳೆತು, ಸಸಿಯಾಗಿ, ಗಿಡವಾಗಿ, ಮರವಾಗಿ, ಫಲ ನೀಡಲು, ಪ್ರತಿ ಗಿಡಕ್ಕೂ ಒಂದು ಸಮಯವಿದೆ. ಬತ್ತಕ್ಕೆ ಆರು ತಿಂಗಳಾದರೆ, ಮಾವಿಗೆ 6 ವರ್ಷ, ತೆಂಗಿಗೆ 5 ವರ್ಷ, ಕಬ್ಬಿಗೆ ಹನ್ನೆರಡು

ತಿಂಗಳು ಇತ್ಯಾದಿ. ಇಲ್ಲಿ ಯಾವುದೂ ಪವಾಡವಿಲ್ಲ. ಒಂದು ಬಸ್ಸಿನಲ್ಲಿ ಟಿಕೆಟ್ ತೆಗೆದುಕೊಂಡು ಕೂತಾಕ್ಷಣವೇ ನಾವು ಸೇರಬೇಕಾದ ಊರು ಬರುವುದಿಲ್ಲ ಅಲ್ಲವೇ? ಚಾಲಕ ಗಾಡಿಯನ್ನು ಓಡಿಸಬೇಕು, ಕ್ರಮವಾಗಿ ಮೈಲಿ ಮೈಲಿಯನ್ನೂ ದಾಟಿದರೆ ಮಾತ್ರ ಗಮ್ಯ ಸೇರುವುದಲ್ಲವೇ?

ಅದೇ ರೀತಿ ಜೀವವೃಕ್ಷವೂ ಬೆಳೆದು ಫಲ ನೀಡಬೇಕಾದರೆ ಕಾಲ ಸೇರಿ ಬರಬೇಕು ಎಂದಿದ್ದಾರೆ 'ಡಿವಿಜಿ' ಯವರು. ಜೀವ ವೃಕ್ಷದ ಬೆಳವಣಿಗೆ ಹೇಗಾಗುತ್ತದೆ ಎಂದು ಅವರೇ ಹೇಳಿದ್ದಾರೆ, ನೋಡಿ. "ತಿಳಿವುಮೊಳನಮುಂ ವಿರಕ್ತಿಯುಂ ಮುಕ್ತಿಯುಂ" ಎಂದರೆ ತಿಳುವಳಿಕೆ ಮೂಡಲು, ಆ ತಿಳುವಳಿಕೆ'ಯಿಂದ ಪರತತ್ವವನ್ನು ಅರಿಯಲು ಪ್ರತಿಬಂಧಕವಾದ ವಿಷಯಗಳನ್ನು ನಿವಾರಿಸಿಕೊಂಡು 'ಒಳ್ಳೆಯತನ' ವನ್ನು ಬೆಳೆಸಿಕೊಂಡು, ಅದು ನಮ್ಮ ಮನಸ್ಸಿನಲ್ಲಿ ಜಗತ್ತಿನ ನಶ್ವರತೆಯ ಅರಿವು ಮೂಡಿಸಿ, ಜಗದ್ವಿಷಯಗಳೊಂದಿಗಿನ 'ಅಂಟನ್ನು' ತೊಳೆದು ವಿರಕ್ತಿಯನ್ನು ಬೆಳೆಸಿಕೊಂಡಾಗ ಜೀವ ಅಥವಾ ಆತ್ಮ ಬೆಳೆದು 'ಮುಕ್ತಿ'ಎಂಬ ಫಲವನ್ನು ನೀಡುತ್ತದೆ. ಮುಕ್ತಿಯೆಂದರೆ ಈ ಜಗತ್ತಿನಿಂದ ಮುಕ್ತಿ ಎಂದು ಅರ್ಥವಲ್ಲ. ಜಗತ್ತಿನಲ್ಲಿರುವಾಗ ಜಗತ್ತಿನ ವಿಷಯ, ವಸ್ತು ಮತ್ತು





ವ್ಯಕ್ತಿಗಳೊಂದಿಗೆ ಅಂಟಿಕೊಂಡರೆ ಸಿಗುವ ಫಲ, ಕೇವಲ ನೋವು, ಸಂಕಟ, ದುಃಖ ಮತ್ತು ವ್ಯಥೆ. ಈ ಅಂಟಿನಿಂದ ಬಿಡಿಸಿಕೊಂಡರೆ ಸಿಗುವುದು ಕೇವಲ ಆನಂದ. ಮುಕ್ತನಾದವನಿಗೆ ಸಿಗುವ ಫಲ ಕೇವಲ 'ಆನಂದ'.

ಹೀಗೆ ಒಂದು ಪ್ರಕ್ರಿಯೆಯಿಂದಲೇ ಆತ್ಮ ಶುದ್ಧಿಯಾಗಿ ಪರತತ್ವದ ಅರಿವು ಮೂಡಬೇಕು. ಇದಕ್ಕೆ ದೃಢ ಇಚ್ಛೆ, ಸಿದ್ಧತೆ, ಪ್ರಯತ್ನ ಮತ್ತು ಆ ದಿಕ್ಕಿನಲ್ಲಿ ನಿರಂತರ ಪ್ರಯಾಣ ಬೇಕು. ಪ್ರತಿಬಂಧಕವಾದ ವಿಷಯಗಳನ್ನು ನಿವಾರಿಸುತ್ತಾ ಹೋಗಬೇಕು. ಮೊದಲು ಇದ್ದದ್ದನ್ನು ಬಿಡಿಸಿಕೊಳ್ಳುವ ಪ್ರಯತ್ನ, ಬಿಡಿಸಿಕೊಂಡಮೇಲೆ ಹೊಸತನ್ನು ಹಿಡಿದುಕೊಳ್ಳುವ ಪ್ರಯತ್ನ ನಡೆದು, ಪರಿಶುದ್ಧರಾಗುತ್ತಾ ಹೋಗುವುದಕ್ಕೆ ಸಮಯಬೇಕು. ಒಳಗಿನ ಇಚ್ಛೆ, ಸಿದ್ಧತೆ, ಪ್ರಯತ್ನ ಮತ್ತು ಪ್ರಯಾಣಗಳು ಸರಿಯಾಗಿದ್ದು ಹೊರಗಿನ ಪೂರಕತ್ವವೂ ಕೂಡಿ ಬಂದಾಗ ಜೀವ ವೃಕ್ಷ ಬೆಳೆದು 'ಮುಕ್ತಿ' ಎಂಬ ಫಲವನ್ನು

ನೀಡುತ್ತದೆ. ಪ್ರಯತ್ನ ಪಡಬೇಕು ಕಾಲ ಕೂಡಿಬರಬೇಕು, ಎರಡೂ ಆದಾಗ ನಮಗೆ ಮುಕ್ತಿ ಸಿಗುತ್ತದೆ. ಆದರೆ ಅದು ಕೇವಲ ಆ ದಿಕ್ಕಿನಲ್ಲಿದ್ದವರಿಗೆ ಮಾತ್ರ ವಿಮುಖರಾದವರಿಗಲ್ಲ.

**ಮುಕ್ತಕ – 781**

**ಕಾಳನುಯದಿ ಬಿತ್ತೆ ಸಂಜೆಗದು ಪೈರಹುದೆ? ।**

**ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ**

**ವೇಳೆ ಗಡು ಮರೆತಾತುರದಿನ್ ಅಡುಗೆ ಪಕ್ಕಹುದೆ ।**

**ತಾಳುಮೆಯೆ ಪರಿಪಾಕ – ಮಂಕುತಿಮ್ಮ ॥**

ಕಾಳನುಯದಿ-ಕಾಳನು+ಉದಯದಿ, ಸಂಜೆಗದು=ಸಂಜೆಗೆ+ಅದು, ಪೈರಹುದೆ=ಪೈರು+ಅಹುದೆ,

ಪಾಲುಂಟು=ಪಾಲು+ಉಂಟು, ಮರೆತಾತುರದಿನ್=ಮರೆತು+ಆತುರದಿನ್, ಪಕ್ಕಹುದೆ=ಪಕ್ಕ+ಅಹುದೆ

ಉದಯದಿ= ಬೆಳಗ್ಗೆ, ಬಿತ್ತೆ=ಬಿತ್ತಿದರೆ, ಅಹುದೆ=ಆಗುತ್ತದೆಯೇ? ಕಾಲಂಗೆ=ಕಾಲಕ್ಕೆ(ನಿಗೆ), ವೇಳೆ ಗಡು=ಸಮಯದ ಮಿತಿ, ಪಕ್ಕ =ಪಕ್ವ

ಸೂರ್ಯೋದಯದ ಸಮಯಕ್ಕೆ ಕಾಳ ಬಿತ್ತಿದರೆ ಸಂಜೆಯ ವೇಳೆಗೆ ಅದು ಮೊಳೆತು ಪೈರಾಗುವುದೇ? ಎಲ್ಲಕ್ಕೂ ಸಮಯದ ಒಂದು ನಿಯಮವುಂಟು. ಅಡುಗೆ ಮಾಡುವಾಗ ಇಟ್ಟ ವಸ್ತುಗಳು ಕಾದು, ಬೆಂದು ಪಕ್ವವಾಗಲು ಒಂದು ಸಮಯದ ಮಿತಿ ಇದೆ ಅಲ್ಲವೇ? ಆತುರ ಪಟ್ಟರೆ ಅಡುಗೆ ಪಕ್ವವಾಗುವುದೇ ಹಾಗಾಗಿ ಜಗತ್ತಿನಲ್ಲಿ ನಾವು ಪಕ್ವವಾಗಬೇಕಾದರೆ ತಾಳ್ಮೆ ಬಹಳ ಮುಖ್ಯ ಎಂದು ಉಲ್ಲೇಖ ಮಾಡಿದ್ದಾರೆ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಕಾಳನ್ನು ಭೂಮಿಯಲ್ಲಿ ಬಿತ್ತಿದರೆ, ಅದು ಮೊದಲು ಭೂಮಿಯ ಆ ಬೆಚ್ಚನೆಯ ಸ್ಪರ್ಶದಲ್ಲಿ, ಮೇಲೆ ಹನಿಸುವ ನೀರಿನ ಸಹಾಯದಿಂದ ಒದ್ದೆಯಾಗಿ ಮೆತ್ತಗಾಗಿ, ಭೂಮಿಯ ಸಾರವನ್ನು ತನ್ನೊಳಕ್ಕೆ ಇಳಿಸಿಕೊಂಡು ಆ ಸಾರದೊಂದಿಗೆ ತನ್ನೊಳಗಿನ ಗುಣಗಳನ್ನು ಪ್ರತಿಕ್ರಿಯಿಸಿ, ನಿಧಾನವಾಗಿ ಮೊಳೆತು ತನ್ನ ತಲೆಯ ಮೇಲಿರುವ ಆ

ಭೂಮಿಯ ಪದರಗಳನ್ನು ಸೀಳಿಕೊಂಡು ತಲೆಯೆತ್ತಿ, ಸೂರ್ಯನ ಬೆಳಕು, ಪ್ರಕೃತಿಯ ಗಾಳಿಯನ್ನು ಕುಡಿಯುತ್ತಾ ಭೂಮಿಯೊಳಗಿನ ಸಾರವನ್ನು ಹೀರುತ್ತಾ, ನಿಧಾನವಾಗಿ ಬೆಳೆದು, ತೆನೆ ತಳೆದು, ಕಾಳ ಕಟ್ಟಿ, ಕಾಲ ಕಾಲಕ್ಕೆ ಪಕ್ವವಾಗುತ್ತದೆ. ಹಾಗಾದರೆ ಮಾತ್ರ ಅದು ಫಲವೆಂದೆನಿಸಿಕೊಳ್ಳುತ್ತದೆ. ಆತುರಪಟ್ಟು ಮಧ್ಯದಲ್ಲೇ, 'ಆಯಿತೇ? ಎನ್ನುವ ಕುತೂಹಲದಿಂದ ಕಿತ್ತರೆ ಅದು ಅಪಕ್ವಫಲವಾಗುತ್ತದೆ. ಹಾಗಾಗಿ ಅದು ಪಕ್ವವಾಗಲು ಸಮಯ ನೀಡಬೇಕು.

ಅದೇ ರೀತಿ ಅಡಿಗೆ ಮಾಡುವಾಗ ಅಕ್ಕಿಯೋ, ಬೇಳೆಯೋ ಬೇಯಲು ಸಮಯ ಬೇಕು. ಬೆಂದ ಬೇಳೆಯನ್ನು ತರಕಾರಿ ಮತ್ತು ಇತರೆ ಸಾಮಗ್ರಿಗಳೊಡನೆ ಬೆರೆಸಿ ಒಂದು ಹದಕ್ಕೆ ಕುದಿಸಿದರೆ ಮಾತ್ರ ಅದು ರುಚಿಗಟ್ಟುತ್ತದೆ. ಒಲೆಯ ಮೇಲಿಟ್ಟ ಪಾತ್ರೆಯನ್ನು ತಕ್ಷಣ ತೆಗೆದು ಬಿಟ್ಟರೆ, ಅದು ಬೆಂದೂ ಇರುವುದಿಲ್ಲ ಮತ್ತು ರುಚಿಯೂ ಕಟ್ಟುವುದಿಲ್ಲ. ಹಾಗಾಗಿ ಇದಕ್ಕೂ ಸಮಯವನ್ನು ಕೊಟ್ಟು ಪಕ್ವವಾಗಿಸಬೇಕು. ಇವೆರಡೂ ದೃಷ್ಟಾಂತಗಳು ನಮ್ಮ ಜೀವನದಲ್ಲಿಯೂ ಅನ್ವಯವಾಗುತ್ತದೆ. ಪರತತ್ವವನ್ನು ಕಾಣಬೇಕೆಂಬ ಆಸೆಯಿದ್ದರೆ ಸಾಲದು ಅದಕ್ಕೆ ಕೃಷಿ ಬೇಕು, ಆದರೆ ಆ ಬದಲಾವಣೆಯಾಗಲು 'ಪಾಲುಂಟು ಕಾಲಂಗೆ' ಎಂದು ಡಿವಿಜಿ ಯವರು ಹೇಳುವ ಹಾಗೆ ಒಂದು ಸಮಯ ಬೇಕು. ಹಳತನ್ನು ತೊರೆದು ಹೊಸತನ್ನು ಒಳಬರಮಾಡಿಕೊಂಡು ಹೊಸತಿನ ಸತ್ವವನ್ನು ನಮ್ಮೊಳಕ್ಕೆ ಇಳಿಸಿಕೊಂಡು ಅದನ್ನು ನಮ್ಮ ಸ್ವಾಭಾವವನ್ನಾಗಿಸಿಕೊಂಡು ನಾವು ಪಕ್ವವಾಗಿ, ಬದಲಾಗಬೇಕಾದರೆ 'ಸಮಯ' ಬೇಕು.

ಪರತತ್ವವು ಬಹಳ ನಿಗೂಢ, ಆದರೆ ಬಹಳ ಸುಲಭಸಾಧ್ಯ. ಅದನ್ನು ಅರಿಯುವ ಮತ್ತು ಪಡೆಯುವ ಉತ್ಕಟ ಅಪೇಕ್ಷೆಬೇಕು. ಆ ಅಪೇಕ್ಷೆಗೆ ಪೂರಕವಾಗಿ ಕೃಷಿ ಬೇಕು. ಮೊಳಕೆ ತನ್ನ ಬೇರನ್ನು ಭೂಮಿಯೊಳಗಿಳಿಸುತ್ತಾ ಸಾರವ ಹೀರುತ್ತಾ, ಭೂಮಿಯಿಂದ ಹೊರಗೆ ತಲೆಯೆತ್ತಿ, ಹೇಗೆ ಬೆಳೆಯುತ್ತದೆಯೋ, ಹಾಗೆಯೇ ನಾವೂ ಸಹ ಅಸತ್ತನ್ನು ಹೊರಹಾಕಿ ಸಾರವನ್ನು ಹೀರಿಕೊಂಡು ಪಕ್ವವಾಗಬೇಕು. ಪಕ್ವವಾದರೆ 'ಆನಂದ' ವೆಂಬ ಫಲ ನಮಗೆ ಸಿಗುತ್ತದೆ. ಆದರೆ ಇದ್ಯಾವುದೂ 'ಪವಾಡ'ದಂತೆ ಆಗುವುದಿಲ್ಲ. ಎಲ್ಲವೂ ಒಂದು ಪ್ರಕ್ರಿಯೆಯಂತೆ, ತನ್ನ ಸಮಯವನ್ನು ತೆಗೆದುಕೊಂಡೇ ಆಗುತ್ತದೆ. ಆ ಸಮಯಕ್ಕೆ ಕಾಯಬೇಕು, ತಾಳ್ಮೆಬೇಕು. 'ತಾಳಿದವನು ಬಾಳಿಯಾನು' ಎನ್ನುವಂತೆ 'ಸಬರ್ ಕ ಫಲ್

ಮೀರಾ ಹೋತಾ ಹೈ' ಎನ್ನುವಂತೆ ತಾಳ್ಮೆ ಮತ್ತು ಸತತ ಕೃಷಿಯಿಂದ ಪರತತ್ವವನ್ನು ಸಾಧಿಸಿ 'ಆನಂದ' ವೆಂಬ ಫಲವನ್ನು ಪಡೆಯಬಹುದು



**ಮುಕ್ತಕ – 782**

**ಅಂದಿಗಂದಿನ ಕೆಲಸ, ಸಂದನಿತರಲಿ ತೃಪ್ತಿ ।**

**ಕುಂದದುಬ್ಬದ ಮನಸು ಬಂದುದೇನಿರಲಿ ॥**

**ಬಂಧು ಮತಿ ಲೋಕದಲಿ, ಮುನ್ ದೃಷ್ಟಿ ಪರಮದಲಿ ।**

**ಹೊಂದಲಿರುವುದು ಪುಣ್ಯ-ಮಂಕುತಿಮ್ಮ ॥**

ಅಂದಿಗಂದಿನ + ಅಂದಿಗೆ+ಅಂದಿನ, ಸಂದನಿತರಲಿ=ಸಂದ+ಅನಿತರಲಿ, ಕುಂದದುಬ್ಬದ=ಕುಂದದ +ಉಬ್ಬದ, ಬಂದುದೇನಿರಲಿ= ಬಂದುದು+ಏನಿರಲಿ, ಹೊಂದಲಿರುವುದು=ಹೊಂದಲು+ಇರುವುದು

ಸಂದ=ಬಂದ, ಸಿಕ್ಕ, ಅನಿತರಲಿ=ಅಷ್ಟರಲ್ಲಿ, ಕುಂದದ=ಕಡಿಮೆಯಾಗದ, ಉಬ್ಬದ=ಅಧಿಕವಾಗದ, ಬಂಧುಮತಿ=ಸ್ನೇಹಭಾವ,

ಅಂದಿಗೆ ಅಂದಿನ ಕೆಲಸ, ಬಂದದ್ದರಲ್ಲಿ ಸಂತೃಪ್ತಿ, ಏನೇ ಸಿಕ್ಕರೂ, ಕಡಿಮೆ ಸಿಕ್ಕರೆ ಕೊರಗದೆ, ಅಧಿಕ ಸಿಕ್ಕರೆ ಗರ್ವಪಡದೆ, ಜಗತ್ತಿನ ಎಲ್ಲರೂ ನನ್ನ ಬಂಧುಗಳೇ ಎನ್ನುವ ಭಾವದಿಂದ, ಜಗತ್ತಿನ ಮೇಲೆ ಅಲ್ಲದೆ ಪರತತ್ವದ ಮೇಲೆ ದೃಷ್ಟಿ ಇಟ್ಟು ಪ್ರಯತ್ನ ಯಾರಿಗೆ ಮಾಡಲಾಗುತ್ತದೆಯೋ, ಅವರೇ ಪುಣ್ಯವಂತರು ಎಂದು ಉಲ್ಲೇಖಮಾಡಿದ್ದಾರೆ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗತಿಸಿಹೋದದ್ದನ್ನು ಕುರಿತು ಚಿಂತೆ ಮತ್ತು ಮುಂದೆ ನಡೆಯಬೇಕಾದದ್ದನ್ನು ಕುರಿತು ಚಿಂತನೆಯಿಲ್ಲದೆ, ಅಂದಿಗೆ ಸಂದ ಕೆಲಸವನ್ನು ಅಂದು, ನಿರ್ವಂಚನೆಯಿಂದ, ನಿಷ್ಠೆಯಿಂದ ಮಾಡುವುದನ್ನು ರೂಢಿಸಿಕೊಂಡರೆ ಮನಸ್ಸನ್ನು ಆ ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಆಗುತ್ತದೆ ಮತ್ತು ಚಿಂತೆ ಕಡಿಮೆಯಾಗಿರುತ್ತದೆ. ಆ ಕೆಲಸದಲ್ಲಿ ಸಿಗುವ ಫಲದಿಂದ ತೃಪ್ತರಾಗಿ ಜೀವಿಸಿದರೆ ಕೇಶ ಕಡಿಮೆಯಾಗುತ್ತದೆ. ನಮ್ಮ ಜೀವನದಲ್ಲಿ ನಮ್ಮ ಅವಶ್ಯಕತೆಗಳೆಷ್ಟೋ

ಇರುತ್ತವೆ. ಅವುಗಳನ್ನು ಪಡೆಯಲು ನಮ್ಮ ಪ್ರಯತ್ನ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಕೆಲವು ಕೈಗೂಡುತ್ತವೆ, ಕೆಲವು ಕೈಕೊಡುತ್ತವೆ. ಬಯಸಿದ್ದು ಸಿಕ್ಕಾಗ ಉಬ್ಬುವುದು ಮತ್ತು ಸಿಗದಿದ್ದಾಗ ಕುಗ್ಗುವುದು ಮನುಷ್ಯ ಸಹಜವಾದ ಪ್ರವೃತ್ತಿ. ಹಾಗೆ ಉಬ್ಬದೆ ಅಥವಾ ಕುಗ್ಗದೆ ನಾವು, ಸಮಸ್ಥಿತಿ ಅಥವಾ ಸಮಭಾವದಲ್ಲಿ ಇರಲಾದರೆ ಅದು ಒಂದು ಸಾಧನೆಯೇ ಸರಿ.

ನಾವು ಈ ಜಗತ್ತಿನಲ್ಲಿ ಬದುಕುವಾಗ, ಧರ್ಮದ, ಭಾಷೆಯ, ಬಣ್ಣದ, ಜಾತಿಯ, ಸಿರಿತನದ, ಬಡತನದ, ನಮ್ಮ ಇಷ್ಟಾನಿಷ್ಟಗಳ, ಇತ್ಯಾದಿಗಳ ವೃತ್ತಗಳನ್ನು ಸೃಷ್ಟಿಕೊಂಡಿರುತ್ತೇವೆ ಅಥವಾ ಯಾವುದೋ ಒಂದು ವೃತ್ತದಲ್ಲಿ ನಾವು ಹುಟ್ಟುತ್ತೇವೆ. ಈ ವೃತ್ತಗಳು ನಮ್ಮನ್ನು ಸದಾ ತಮ್ಮ ಅಂಕೆಯೊಳಗೆ ಇರಿಸಿಕೊಂಡಿರುತ್ತದೆ. ಈ ವೃತ್ತಗಳಲ್ಲಿರುವಾಗ ನಾವು, ಅವುಗಳಿಗೆ ಸಂಬಂಧಿತ ವಿಚಾರಗಳಲ್ಲೇ ಮುಳುಗಿ ಪರತತ್ವವನ್ನು ಚಿಂತಿಸುವ ಪ್ರಯತ್ನವನ್ನು ಮಾಡುವುದಿಲ್ಲ. ಅಕಸ್ಮಾತ್ ಮಾಡಿದರೂ ಅದು ಆ ವೃತ್ತದ ವಿಚಾರದ ಲೇಪವನ್ನು ಹೊತ್ತೇ ಇರುತ್ತದೆ. ಹಾಗಾಗಿ ನಾವು ಆ ವೃತ್ತ ಮತ್ತು ಆ ವೃತ್ತದ ವಿಚಾರದ ಲೇಪದ ಪರಿಧಿಯಿಂದ ಹೊರಬಂದು ಪರತತ್ವದ





ಜಗದ್ವ್ಯಾಪಕತ್ವವನ್ನು ಅರಿತು ಸಕಲ ಲೋಕದಲಿ 'ಬಂಧು ಮತಿ' ಎಂದರೆ ಪ್ರೀತಿಯ, ವಿಶ್ವಾಸದ ಮತ್ತು ಏಕಾತ್ಮ ಭಾವವನ್ನು ಬೆಳೆಸಿಕೊಂಡರೆ ನಾವು ಪರತತ್ವದ ಕುರುತು ಅರಿಯುವ ಮತ್ತು ಚಿಂತಿಸುವ ಸಾಧ್ಯತೆ ಅಧಿಕವಾಗುತ್ತದೆ ಎನ್ನುವುದೇ ಈ ಮುಕ್ತಕದ ಆಶಯ.

ಹೀಗೆ ನಾವು 'ಡೇಲ್ ಕಾರ್ನೆಗಿ' ಎನ್ನುವ ಚಿಂತಕ ಹೇಳುವಂತೆ 'water tight day' ಎಂದರೆ ಅಂದಿಗಂದಿಗೆ ಸಂದ ಕೆಲಸಗಳನ್ನು ಮಾಡುತ್ತಾ ಅದರಿಂದ ಸಂದ ಫಲವನ್ನು ತೃಪ್ತಿಯಿಂದ ಅನುಭವಿಸುತ್ತಾ ಜಗತ್ತಿನ ಜನರೆಲ್ಲರಲ್ಲೂ 'ಏಕಾತ್ಮ ಭಾವ' ದಿಂದ ಇರುವಂತಹ ಗುಣವನ್ನು ಪ್ರಯತ್ನಪೂರ್ವಕವಾಗಿ, ಸಾಧನೆಯಿಂದ ಬೆಳೆಸಿಕೊಳ್ಳಲಾದರೆ ಅದೇ ನಾವು ಗಳಿಸುವ ಪುಣ್ಯ ಅಥವಾ ನಾವೇ ಪುಣ್ಯವಂತರು ಎಂದೇ ಭಾವಿಸಬೇಕು ಎನ್ನುವುದೇ ಡಿವಿಜಿಯವರ ಅಭಿಮತ

**ಮುಕ್ತಕ – 783**

**ಬುದ್ಧಿ ಮಾತಿದು ನಿನಗೆ; ಸಿದ್ಧನಿರು ಸಕಲಕ್ಕಂ ।**

**ಎದ್ದು ಕುಣಿಯಲಿ ಕರ್ಮ; ದೈವ ನಿದ್ರಿಸಲಿ ॥**

**ಅದ್ಭುತಗಳರಿದಿಲ್ಲ; ಭವ್ಯಕ್ಕೆ ಹದ್ದಿಲ್ಲ ।**

**ಸಿದ್ಧನಾಗೆಲ್ಲಕಂ - ಮಂಕುತಿಮ್ಮ ॥**

ಅದ್ಭುತಗಳರಿದಿಲ್ಲ=ಅದ್ಭುತಗಳು+ಅರಿದಿಲ್ಲ, ಸಿದ್ಧನಾಗೆಲ್ಲಕಂ=ಸಿದ್ಧನಾಗು+ಎಲ್ಲಕಂ

ಅದ್ಭುತ= ಪವಾಡ ಅರಿದಿಲ್ಲ,=ಅಪರೂಪವಲ್ಲ.

ನೀ ಮಾಡಿದ ಕರ್ಮಾನುಸಾರ ನಿನ್ನ ಜೀವನ ಎಷ್ಟೇ ಏರುಪೇರಾಗಲಿ ಅಥವಾ ದೈವದ ಸಹಾಯ ನಿನಗೆ ಇಲ್ಲದಿರಲಿ. ನಿನಗೆ ಇದು ಬುದ್ಧಿಮಾತು, ಕೇಳಿಕೋ ಎಲ್ಲಕ್ಕೂ ಸಿದ್ಧನಿರು. ಜಗತ್ತಿನಲ್ಲಿ ಪವಾಡಗಳು ಮತ್ತು ಅದ್ಭುತಗಳು ಅಪರೂಪವಲ್ಲ ಮತ್ತು ಪರಮಾತ್ಮನ ಶಕ್ತಿಗೆ ಮಿತಿಯೇ ಇಲ್ಲ, ಹಾಗಾಗಿ ನೀನು ಎಲ್ಲದಕ್ಕೂ ಸಿದ್ಧನಾಗಿರು ಎಂದು ಧೈರ್ಯದಿಂದ ಬದುಕಬೇಕಾದ ಮನಸ್ತತ್ವವನ್ನು ಹೇಗೆ ರೂಢಿಸಿಕೊಳ್ಳಬೇಕೆಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ನಾವು ಮಾಡುವ ಮತ್ತು ನಮಗೆ ಸಂಬಂಧಪಟ್ಟವರು ಮತ್ತು ಪಡದವರೂ ಸಹ ಮಾಡುವ ಕರ್ಮಗಳಿಂದ, ನಮ್ಮ ಜೀವನದಲ್ಲಿ ಉಂಟಾಗುವ ಏರುಪೇರುಗಳಿಂದ ವಿಚಲಿತರಾಗದೆ ಮತ್ತು ಅಂತಹ ಸ್ಥಿತಿಯಲ್ಲಿ ನಾವು ಅಪೇಕ್ಷಿಸಿದ ದೈವ ಸಹಾಯ ಸಿಗದೇ ಹೋದರೂ ವಿಚಲಿತರಾಗದೆ ಇರುವುದೇ ಸೂಕ್ತ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಬಲಹೀನ ಮನಸ್ಸುಗಳು ಬೇಗ ವಿಚಲಿತರಾಗಿ, ಇರುವ ಸ್ಥಿತಿಯನ್ನು ಬದಲಿಸಲು ಆನುಕೂಲಿಕ ಸ್ಥಿತಿ ತಂದುಕೊಳ್ಳಲು ಹೆಣಗಾಡುತ್ತವೆ. ಹಾಗೆ ಮಾಡುವುದರಿಂದ ಬದುಕಿನಲ್ಲಿ ಮತ್ತಷ್ಟು ಕ್ಲಿಷ್ಟತೆ ಉಂಟಾಗುತ್ತೆ ಎನ್ನುವ

ಜ್ಞಾನ ನಮಗೆ ಬರುವುದಿಲ್ಲ. ಎಲ್ಲವನ್ನೂ ಅನುಭವಿಸಿ ಕಡೆಗೆ 'ಅಯ್ಯೋ ನಮ್ಮ ಕರ್ಮವೇ ಇಷ್ಟು ಎಂದುಕೊಳ್ಳುವುದಕ್ಕಿಂತ, ಬರುವುದೆಲ್ಲಾ ಬರಲಿ ನಾನೂ ನೋಡಿಯೇ ಬಿಡುತ್ತೇನೆ' ಎಂದು ಧೈರ್ಯವಾಗಿ, ದಿಟ್ಟವಾಗಿ ಎದುರಿಸಿ ನಿಂತರೆ, ಆಗುವುದೆಲ್ಲಾ ಆಗುತ್ತಿದ್ದರೂ ನಾವು ವಿಚಲಿತರಾಗದೆ ಶಾಂತ ಸ್ಥಿತಿಯಲ್ಲಿರಬಹುದು.

"ಅದ್ಭುತಗಳರಿದಿಲ್ಲ, ಭವ್ಯಕ್ಕೆ ಹದ್ದಿಲ್ಲ' ಎಂದಿದ್ದಾರೆ ಮಾನ್ಯಗುಂಡಪ್ಪನವರು. ಎಂದರೆ ಯಾವ ಸಮಯಕ್ಕೆ ಏನು ಬೇಕಾದರೂ ಆಗಬಹುದು. ಅದು ಏಕಾಯಿತು, ಹೇಗಾಯಿತು ಎಂದು ಹುಡುಕಿದರೂ ಅದರ ಕಾರಣಗಳು ನಮಗೆ ಅರ್ಥವಾಗುವುದಿಲ್ಲ. ಹಾಗಾಗಿ ನಮಗೆ ಅದು ಒಂದು ಪವಾಡದಂತೆ, ಅದ್ಭುತದಂತೆ ಕಾಣುತ್ತದೆ. ಅಷ್ಟೇ ಅಲ್ಲ, ಇಲ್ಲಿ ಅಗುವುದೆಲ್ಲವೂ ದೈವದ ನಿಯಮದಂತೆ ನಡೆಯುತ್ತದೆ. ಅದರ ಹಿಂದಿನ ಮರ್ಮ ನಮಗೆ ಅರ್ಥವಾಗುವುದಿಲ್ಲ. ಅದೂ ಸಹ ನಮಗೆ ಪವಾಡದಂತೆ ಕಾಣುತ್ತದೆ. ನಾವಿರುವ ಭೂಮಿ ಮತ್ತು ಅದಕ್ಕಿಂತ ಲಕ್ಷಾಂತರ ಪಾಲು ದೊಡ್ಡದಾದ ಸೂರ್ಯ ಮತ್ತು ಅದಕ್ಕಿಂತ ಸಾವಿರಾರು ಪಾಲು ದೊಡ್ಡದಾದ ಅನ್ಯ ಆಕಾಶಕಾಯಗಳು ಎಲ್ಲವನ್ನೂ ಆಗಸ(space )ದಲ್ಲಿ ನಿಲ್ಲಿಸಿರುವುದೇ ನಮಗೆ ಪವಾಡದಂತೆ ಕಾಣುತ್ತದೆ. ಆದರೆ ಅವಾವುದೂ ಪವಾಡವಲ್ಲ . ಎಲ್ಲವೂ ಹದ್ದಿಲ್ಲದ ಅಮಿತವಾದ ಶಕ್ತಿಯ ದೈವದ ನಿಯಮದಂತೆ ನಡೆಯುತ್ತದೆ. ನಮ್ಮ ಪರಿಮಿತ ಮತಿಗೆ ಅದು ಅರ್ಥವಾಗುವುದಿಲ್ಲವಾದ್ದರಿಂದ ನಮಗದು ಪವಾಡದಂತೆ, ಅದ್ಭುತದಂತೆ ಕಾಣುತ್ತದೆ.

ನಮ್ಮ ಮತ್ತು ಪರರ ಕರ್ಮದ ಪ್ರಭಾವವನ್ನು ನಮಗೆ ಅರ್ಥಮಾಡಿಕೊಳ್ಳಲು, ತಡೆಯಲು ಆಗುವುದಿಲ್ಲ ಮತ್ತು ಅಪರಿಮಿತವಾದ ದೈವದ ಶಕ್ತಿ ಮತ್ತು ಪ್ರಭಾವವನ್ನು ನಮ್ಮ ಅನುಕೂಲಕ್ಕೆ ತಿದ್ದಿಕೊಳ್ಳಲೂ ಸಾಧ್ಯವಿಲ್ಲ. ಹಾಗಿರುವಾಗ ನಮಗೆ ಉಳಿದಿರುವುದು ಒಂದೇ ಮಾರ್ಗ, ತಟಸ್ಥಭಾವದಿಂದ ಧೈರ್ಯವಾಗಿ 'ಬಂದದ್ದೆಲ್ಲಾ ಬರಲಿ' ಎಂದು ದೃಢವಾಗಿ ನಿಲ್ಲುವುದು. ಆದ್ದರಿಂದಲೇ, ಮಾನ್ಯ ಡಿವಿಜಿ ಯವರು ನಮಗೆ 'ಸಿದ್ಧನಾಗೆಲ್ಲಕಂ' ಎಂದು ಸೂಕ್ತ ಸಲಹೆ ಮತ್ತು ಆದೇಶವನ್ನು ನೀಡಿದ್ದಾರೆ. ಪರತತ್ವವನ್ನು ಅರಿಯುವ ದಾರಿಯಲ್ಲಿ ಹೋಗುವ ನಿಶ್ಚಯ ಮತ್ತು ಪ್ರಯತ್ನ ನಾವು ಮಾಡಿದರೆ ಮಾತ್ರ ಆ ರೀತಿ ಗಟ್ಟಿಯಾಗಿ ನಿಲ್ಲಲು ಸಾಧ್ಯ. ಹಾಗೆ ನಿಲ್ಲಲಾದರೆ, ಅದು ಒಂದು ಸಾಧನೆಯೇ ಸರಿ.

**ಮುಕ್ತಕ 784**

**ಏನಾದೊಡೆಯುಮಪ್ಪುದುಂಟು, ಸಿದ್ಧನಿರದಕೆ ।**

**ಭಾನು ತಣುವಾದಾನು; ಸೋಮ ಸುಟ್ಟಾನು ॥**

**ಕ್ಷೋಣಿಯೇ ಕರಗೀತು; ಜಗ ಶೂನ್ಯವಾದೀತು ।**

**ಮೌನದಲಿ ಸಿದ್ಧನಿರು - ಮಂಕುತಿಮ್ಮ ॥**

ಏನಾದೊಡೆಯುಮಪ್ಪುದುಂಟು=ಏನು+ಆದೊಡೆಯುಂ+ಅಪ್ಪುದುಂಟು, ಸಿದ್ಧನಿರದಕೆ ಸಿದ್ಧನಿರು+ಅದಕೆ, ಅಪ್ಪುದುಂಟು=ಆಗುತ್ತದೆ,

ದಗದಗಿಸುವ ಸೂರ್ಯನೇ ತಣ್ಣಗಾಗಬಹುದು, ಶೀತಲ ಚಂದ್ರ ಬೆಂಕಿಯಾಗಿ ಸುಡಬಹುದು. ಭೂಮಿಯೇ ಕರಗಿಹೋಗಬಹುದು. ಜಗತ್ತಿನಲ್ಲಿ ಏನೂ ಇಲ್ಲದೆ ಸಂಪೂರ್ಣ ಶೂನ್ಯವಾಗಬಹುದು. ಇದಾವುದಕ್ಕೂ ವಿಚಲಿತನಾಗದೆ, ಮೌನದಿಂದ ಎಲ್ಲವನ್ನೂ ಎದುರಿಸಲಿಕ್ಕೆ ಸಿದ್ಧನಾಗಿರು, ಎಂದು ಬದುಕಿನಲ್ಲಿ ನಿರ್ಭಯವಾದ ಜೀವನಕ್ಕೆ ಒಂದು ಕಿವಿಮಾತನ್ನು ನಮಗೆ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

ನಮ್ಮ ಅಪೇಕ್ಷೆಯಂತೆ ನಮ್ಮ ಕೆಲಸ ಕಾರ್ಯಗಳು ಆಗದಿದ್ದರೆ ನಮಗೆ ನೋವು ಬೇಸರ ಚಿಂತೆಗಳಾಗುತ್ತದೆ. ನಮ್ಮ ಕೈಲಿ ಆ ಕೆಲಸವಾಗಲಿಲ್ಲವಲ್ಲಾ ಎಂದು ವ್ಯಥೆ, ನಿರಾಸೆಯುಂಟಾಗಿ ನಮ್ಮನ್ನು ಮಾನಸಿಕವಾಗಿ ಕುಗ್ಗಿಸುತ್ತದೆ. ಕುಗ್ಗಿದ ಮನಸ್ಸು ಮುಂದಿನ ಹೆಜ್ಜೆ ಇಡುವುದರಲ್ಲಿ ಉತ್ಸಾಹವನ್ನು ಕಳೆದುಕೊಳ್ಳುತ್ತದೆ. ಇದು ಬಯಸಿದ ಫಲ ಸಿಗದೇ ಇರುವ ಮನಸ್ಸಿನ ಸ್ಥಿತಿ. ಬಯಸಿದ್ದು ಸಿಕ್ಕರೆ, ಮತ್ತಷ್ಟು ಬಯಸುವ ಅಸೆ, ಸಿಕ್ಕದ್ದು ನಮ್ಮಲ್ಲೇ ಇರಬೇಕೆಂಬ ಮೋಹ,

ನಮಗೇ ಸಿಕ್ಕಿತೆಂಬ ಹೆಮ್ಮೆ, ಕಡಿಮೆ ಸಿಕ್ಕರೆ ಅಧಿಕವಾಗಿ ಪಡೆದುಕೊಂಡವರ ಕಂಡು ಮತ್ಸರ. ಇದು ಬಯಸಿದ ಫಲ ಸಿಕ್ಕಾಗ ಇರುವ ಮನಸ್ಸಿನ ಸ್ಥಿತಿ. ಎರಡೂ ಸ್ಥಿತಿಗಳಲ್ಲಿ ಮನಸ್ಸು ತನ್ನ ಸಂತುಲನೆಯನ್ನು ಕಳೆದುಕೊಳ್ಳುತ್ತದೆ.

ಏನೋ ಆಗಿಬಿಡುತ್ತದೆಂಬ ಕಳವಳವೇ ಮನುಷ್ಯನನ್ನು ಬಹಳಷ್ಟು ಬಾರಿ ಖಿನ್ನನಾಗಿಸುತ್ತದೆ. ತೀರ ಅಂತಿಮವಾಗಿ ಏನಾಗಬಹುದು, ಬದುಕಿಗೆ ಪೂರಕವಾಗಿ ಬೆಳಕು ಮತ್ತು ಶಾಖವನ್ನು ನೀಡುತ್ತಿರುವ ಸೂರ್ಯನೇ ತಣ್ಣಗಾಗಿಬಿಡಬಹುದು, ಶೀತಲತೆಗೆ ಹೆಸರಾದ ಚಂದ್ರ ಸುಡುವಂತಾಗಬಹುದು, ಭೂಮಿಯೇ ಕರಗಿ ನೀರಾಗಿಬಿಡಬಹುದು ಮತ್ತು ಇಡೀ ಜಗತ್ತೇ ಶೂನ್ಯವಾಗಿಬಿಡಬಹುದು. ಇವುಗಳ ಬಗ್ಗೆ ತೀವ್ರವಾಗಿ ಸಾಯುವವರು ಇಂದೇ ವಿಚಾರಮಾಡುತ್ತಾ ಕಳವಳಪಟ್ಟರೆ, ಎಂದೋ ಸತ್ತುಹೋಗಬಹುದು. ಆರೋಗ್ಯವಾಗಿರುವ ಮನುಷ್ಯರು ಗಾಭರಿಯಲ್ಲಿ ಹೃದಯಾಘಾತವಾಗಿ ಅಸುನೀಗಿದವರ ದೃಷ್ಟಾಂತಗಳನ್ನು ನಾವು ಕೇಳಿ, ಕಂಡಿದ್ದೇವಲ್ಲವೇ? ಕಳವಳ ಪಡದೆ ಧೈರ್ಯದಿಂದ 'ಏನಾಗುವುದೋ ನೋಡಿಯೇ ಬಿಡೋಣ' ಎನ್ನುವ ಭಾವ ತಳೆದರೆ ಅಂತ್ಯವಾಗುವ ಅಂತಿಮ ಘಳಿಗೆಯಿಂದಲೂ ಪಾರಾಗಿ ಹೊರಬರುವ ಸಾಧ್ಯತೆಗಳು ಅಧಿಕವಾಗಿರುತ್ತದೆ.

| 12ಸಂ |
|---|

| ಕಗ್ಗರಸಧಾರೆ | ಇಂದ್ರಿಯ ಶಾಂತಿ 784 - 788 |
|---|---|

ನಮ್ಮ ಬದುಕಿನಲ್ಲಿ ಯಾವ ಸಮಯದಲ್ಲಿ ಏನು ಬೇಕಾದರೂ ಆಗಬಹುದು. ಆಘಾತಕಾರಿ ಘಟನೆಗಳಿಂದ ಇಡೀ ಬದುಕೇ ನಡುಗಿ, ಚದುರಿ ಹೋಗಬಹುದು. ನಮ್ಮ ಸುತ್ತಲಿನ ಸಮಾಜದಲ್ಲಿ ಅಂತಹ ವಿಪರೀತ ಸ್ಥಿತಿಗಳನ್ನು ನಾವು ನೋಡಿದ್ದೆವಲ್ಲವೇ? ಇಂದು ಯಾರಿಗೋ ಆಗಿದೆ. ನಾಳೆ ನಮಗೂ ಆಗಬಹುದು ಅಥವಾ ಆಗದೆಯೂ ಇರಬಹುದು. ಅಕಸ್ಮಾತ್ ಅಂತಹ ಸ್ಥಿತಿ ನಮಗೆ ಬಂದರೆ ಮಾನಸಿಕವಾಗಿ ವಿಚಲಿತರಾಗದೆ, ಬಂದದ್ದನ್ನೆಲ್ಲಾ ಮೌನವಾಗಿ ಅನುಭವಿಸಿದರೆ, ಕ್ಲಿಷ್ಟ ಸಮಯವನ್ನು ಅನುಭವಿಸಿ, ಅನುಭವಿಗಳಾಗಿ, ಪ್ರಾಜ್ಞರಾಗಿ, ಹೊರಬರಬಹುದು. ನವಚೈತನ್ಯದಿಂದ ಮತ್ತೆ ಜೀವಿಸಲು ಆರಂಭಿಸಬಹುದು. ಹಾಗಾಗಿ ಮಾನ್ಯ ಗುಂಡಪ್ಪನವರು 'ಮೌನದಲಿ ಸಿದ್ಧನಿರು' ಎಂದು ಹೇಳುವಂತೆ, ಬಂದದ್ದನ್ನೆಲ್ಲಾ ಅನುಭವಿಸುವುದಕ್ಕೆ ಸಿದ್ಧರಾಗಿಬಿಟ್ಟರೆ ಆಗುವ ಪರಿಣಾಮಗಳಿಂದ ವಿಚಲಿತರಾಗದೆ

ಉಳಿಯಬಹುದು. ಬದುಕಿನಲ್ಲಿ ಅತೀ ವಿಷಮ ಸ್ಥಿತಿಯನ್ನೆದುರಿಸಲು ಸಿದ್ಧರಾಗಿಬಿಟ್ಟರೆ, ಬೇರೆ ಎಂತಹ ಸ್ಥಿತಿಯನ್ನೂ ಎದುರಿಸುವ ಶಕ್ತಿ ನಮಗೆ ಬರುತ್ತದೆ ಎಂದು ಹೇಳುವುದೇ ಈ ಮುಕ್ತಕ.

**ಮುಕ್ತಕ – 785**

**ಕುಂದದೆಂದಿಗುಮೆನ್ನಿಸುವ ಮನದ ಕಾತರತೆ |**

**ಯೆಂದೊ ತಾನೇ ಬಳಲಿ ತಣ್ಣಗಾಗುವುದು ||**

**ಮಂದದಾ ಕಾರ್ಮೋಡ ಬಿರಿದು ರವಿ ಬೆಳಗುವನು |**

**ಅಂದಿನಾ ಸುಖವೆ ಸುಖ - ಮಂಕುತಿಮ್ಮ ||**

ಕುಂದದೆಂದಿಗುಮೆನ್ನಿಸುವ =ಕುಂದದು+ಎಂದಿಗುಂ+ಎನ್ನಿಸುವ, ಕಾತರತೆ=ಚಿಂತೆ, ಕಳವಳ

ದಪ್ಪ ಮತ್ತು ದಟ್ಟವಾದ ಕಾರ್ಮೋಡ, ಮಳೆ ಸುರಿದೋ ಅಥವಾ ಗಾಳಿಯ ಆರ್ಭಟಕ್ಕೂ ಚದುರಿಹೋಗಿ, ಸೂರ್ಯನ ಬೆಳಕು ಮತ್ತೆ ಬೆಳಗುವಂತೆ, ಎಂದಿಗೂ ಕಡಿಮೆಯಾಗುವುದೇ ಇಲ್ಲವೇನೋ ಎನ್ನುವ ಮನಸ್ಸಿನ ಕಳವಳ, ಕಾತರತೆ, ತಾನೇ ತಾನಾಗಿ ಕಡಿಮೆಯಾಗಿ ಮನಸ್ಸಿಗೆ ನಿರಾಳವಾದಾಗ ನಮಗಾಗುವ ಸುಖವೇ, ನಿಜವಾದ ಸುಖ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಸಮಸ್ಯೆ, ತೊಂದರೆ, ಕಷ್ಟಗಳು ಇಲ್ಲದ ವ್ಯಕ್ತಿಯೇ ಸಿಗುವುದಿಲ್ಲ, ಅಲ್ಲವೇ? ಎಲ್ಲರಿಗೂ ಯಾವುದೋ ಒಂದು ರೀತಿಯ ಸಮಸ್ಯೆ, ಕೆಲವರಿಗೆ ದೊಡ್ಡದು, ಕೆಲವರಿಗೆ ಚಿಕ್ಕದು. ಬಲಹೀನರಾದವರಿಗೆ ಸಣ್ಣ ಸಮಸ್ಯೆಯೂ ಅತಿಯಾದ ಕಷ್ಟಕ್ಕೆ ಕಾರಣ, ಶಕ್ತಿವಂತರಿಗೆ ದೊಡ್ಡ ಸಮಸ್ಯೆಯೂ ನಗಣ್ಯ. ಕೆಲವರಿಗೆ ಸ್ವಲ್ಪ ಕಾಲದ ಕಷ್ಟ, ಮತ್ತೆ ಕೆಲವರಿಗೆ ಕಷ್ಟವೇ ಬದುಕೆಲ್ಲ. ಕೆಲವರಿಗೆ ಇಲ್ಲದ ಸಮಸ್ಯೆಯ ಕುರಿತು ಕಳವಳ. ಕೆಲವರು ಸಕಲ ಸಮಸ್ಯೆಗಳ ನಡುವೆಯೂ ಮಾನಸಿಕರಾಗಿ ನಿರಾಳ, ಕೆಲವರಿಗೆ ಬದುಕಿನ ಆದಿಯಲ್ಲಿ ಅತಿಯಾದ ಕಷ್ಟಗಳು ಬಂದು ಸ್ವಲ್ಪ

ಸಮಯದಲ್ಲೇ ಅವುಗಳೆಲ್ಲಾ ತೀರಿ ಬದುಕು ಸುಗಮ, ಕೆಲವರಿಗೆ ಬದುಕೆಲ್ಲ ನಿರಾಳವಾಗಿ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆ ಅಸಹನೀಯವಾದ ಕಷ್ಟಗಳ ಸುರಿಮಳೆ, ಕೆಲವರಿಗೆ ಮಧ್ಯಂತರದಲ್ಲಿ ಕಷ್ಟಗಳ ಸರಮಾಲೆ, ಕೆಲವರಿಗೆ ಬದುಕಿನುದ್ದಕ್ಕೂ ಕಷ್ಟಗಳ ಸರಮಾಲೆ ಮತ್ತೆ ಕೆಲವರಿಗೆ ಬದುಕೇ ಸುಖದ ಸುಪ್ಪತ್ತಿಗೆ. ಇದೇ ಬದುಕಿನ ಚಿತ್ರ.

ಕೆಲವರಿಗೆ ಕೆಲ ರೀತಿಯ ಕಷ್ಟಗಳು ಏಕೆ ಬರುತ್ತವೆ? ಎಂದು ಯೋಚಿಸಿದರೆ ನಮಗೆ ಸೂಕ್ತ ಉತ್ತರ ಸಿಗುವುದೇ ಇಲ್ಲ. ವಿಧಿ, ಕರ್ಮ, ಪಾಪ, ಪುಣ್ಯ ಎಂದು ಏನನ್ನುಬೇಕಾದರೂ ಕಾರಣವಾಗಿ ನೀಡಬಹುದು. ಆದರೆ ಅದಾವುದೂ ಆಗದೆ ನಮ್ಮ ಅರಿವಿಗೆ ಬಾರದ ಬೇರೇನೋ ಕಾರಣವಿರಬಹುದು. ಜೀವನದಲ್ಲಿ ಕಷ್ಟಗಳನ್ನು ಅನುಭವಿಸುವಾಗ 'ಅಯ್ಯೋ ಇದು ಎಂದಿಗೂ ಮುಗಿಯುವುದೇ ಇಲ್ಲವೇ' ಎಂದು ಕಾತರತೆಯಿಂದ ಇರುವಾಗ, ಸ್ವಪ್ರಯತ್ನದಿಂದಲೋ, ಭಗವದೃಪೆಯಿಂದಲೋ ಅಥವಾ ಮತ್ತ್ಯಾವುದೋ ಕಾರಣದಿಂದ ಬವಣೆಗೆ ಮುಕ್ತಿ ಸಿಕ್ಕರೆ ಕವಿದಿರುವ ಕಾರ್ಮೋಡ ಚದುರಿ ಸೂರ್ಯನ ಬೆಳಕು ಹರಿದಂತೆ ಅಲ್ಲವೇ? ಕಷ್ಟಗಳು ಪರಿಹಾರವಾಗಿಯಾದರೂ ನೆಮ್ಮದಿ ಸಿಗಬಹುದು ಅಥವಾ ಕಷ್ಟಗಳನ್ನು ಅನುಭವಿಸುವ ದೃಢವಾದ ಮಾನಸಿಕ ಶಕ್ತಿಯಿಂದ ಕಾತರತೆ ಕಡಿಮೆಯಾಗಬಹುದು ಅಥವಾ ಧೀರ್ಘಕಾಲ ಅನುಭವಿಸಿ, ಕಷ್ಟಗಳನ್ನು ತಡೆದುಕೊಂಡು, ಅನುಭವಿಸುವ ಅಭ್ಯಾಸವಾಗಿಬಿಡಬಹುದು. ಹೇಗೋ ಒಂದು ರೀತಿ ಕಾತರತೆ ಕಡಿಮೆಯಾಗಬಹುದು.

ಒಟ್ಟಿನಲ್ಲಿ ಕಷ್ಟ ಕರಗದೆ ಇದ್ದರೂ, ಕಾತರತೆ, ಕಳವಳ ಚಿಂತೆಗಳು ಕರಗಿದರೆ, ಅದರಿಂದ ಮನಸ್ಸಿಗೆ ನಿರಾಳವಾದರೆ ಸಾಕಲ್ಲವೇ? 'ಈಸಬೇಕು, ಈಸಿ ಜಯಿಸಬೇಕು' ಎನ್ನುವ ದಾಸರ ಉಕ್ತಿಯಂತೆ ಕಷ್ಟ ಬಂದರೂ ಸುಖ

ಬಂದರೂ ಬದುಕನ್ನು ಬಿಡಲಾಗುವುದಿಲ್ಲ ಆದರೆ ಕಾರ್ಮೋಡದಂತೆ ಕಷ್ಟಗಳು ನಮ್ಮನ್ನು ಪೀಡಿಸುವಾಗ ಪರತತ್ವದ ಚಿಂತನೆ ಮತ್ತು ನಿರ್ಲಿಪ್ತತೆಯಿಂದ ಕೂಡಿದ ವಿರಕ್ತಿಯಿಂದ ಬದುಕಿನಲ್ಲಿ ಬೆಳಕನ್ನು ಕಾಣಬಹುದು.





**ಮುಕ್ತಕ-786**

**ಅಂತವೆಲ್ಲಕುಮಿರುವುದಿರಲಿ; ವಿಷಯೇಂದ್ರಿಯದ |**

**ಸಂತಾಪವುಂ ಮುಗಿವುದೆಂಬುದಲ ಪುಣ್ಯ ||**

**ಎಂತೋ, ನಿನ್ನಾಜ್ಞೆಯಿನೊ, ತಾಂ ಸೋತೋ, ಬೇಸತ್ತೋ |**

**ಶಾಂತಿವಡೆಯಲಿ ಕರಣ - ಮಂಕುತಿಮ್ಮ ||**

ಅಂತವೆಲ್ಲಕುಮಿರುವುದಿರಲಿ=ಅಂತವು+ಎಲ್ಲಕುಂ+ಇರುವುದು+ಇರಲಿ, ಮುಗಿವುದೆಂಬುದಲ=ಮುಗಿವುದು+ಎಂಬುದು+ಅಲ, ಶಾಂತಿವಡೆಯಲಿ=ಶಾಂತಿ+ಅಡೆಯಲಿ ಕರಣ=ಅಂಗಾಂಗಗಳು,

ಎಲ್ಲಕ್ಕೂ ಒಂದು ಅಂತ್ಯವಿದೆ ಎನ್ನುವ ವಿಚಾರ ಒತ್ತಟ್ಟಿಗಿರಲಿ, ವಿಷಯಾಸಕ್ತಿಯಿಂದ ಇಂದ್ರಿಯಗಳು ಪಡುವ ದುಃಖಕ್ಕೆ ಒಂದು ಅಂತ್ಯವುಂಟು ಎನ್ನುವುದೇ ಪುಣ್ಯ. ಆ ಅಂತ್ಯ ಹೇಗಾದರೂ ಆಗಬಹುದು, ನೀನೇ ಇಂದ್ರಿಯ ನಿಗ್ರಹ ಮಾಡಬಹುದು ಅಥವಾ ಅವುಗಳೇ ಸೋತು ಹೋಗಬಹುದು ಅಥವಾ ಅನುಭವಿಸಿದ್ದು ಸಾಕಾಗಿ ಬೇಸತ್ತುಹೋಗಬಹುದು. ಹೇಗಾದರಾಗಲಿ ಇಂದ್ರಿಯಗಳ ಪ್ರಚೋದನೆಯಿಂದ ನಿರಂತರ ಕ್ರಿಯೆಯಲ್ಲಿ ಮಗ್ನರಾದ ಅಂಗಾಂಗಗಳು ಶಾಂತವಾದರೆ ಸಾಕು ಎಂದು ಬದುಕಿನಲ್ಲಿ ನಾವು ಪಡೆಯಬೇಕಾದ ನಿಜವಾದ ಶಾಂತಿಯ ಸ್ವರೂಪವನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೇ ನಮ್ಮನ್ನು ಈ ಜಗತ್ತಿಗೆ ಅಂಟಿಸಿ ಇಟ್ಟಿರುವುದು. ಅವುಗಳು ಇಂದ್ರಿಯಗಳ ಮೂಲಕ ಒಳಗೆ ನುಗ್ಗುತ್ತವೆ. ನಮ್ಮನ್ನು ಅಲುಗಾಡಿಸುತ್ತವೆ. ನಮಗೆ ಅವುಗಳ ಒಳ ಹರಿವಿನ ಪ್ರವಾಹವನ್ನು ತಡೆದುಕೊಳ್ಳಲಾಗಲೀ ಅಥವಾ ಅವುಗಳನ್ನು ಧಾರಣೆ ಮಾಡಲಾಗಲೀ ಶಕ್ತಿಯಿಲ್ಲ ಅಥವಾ ಶಕ್ತಿಯನ್ನು ನಾವು ಬೆಳೆಸಿಕೊಂಡಿಲ್ಲ. ಹಾಗಾಗಿ ನಾವು ಜರ್ಝರಿತ. ಈಗಾಗಲೇ ಮುದ್ರಿಸಲ್ಪಟ್ಟಿರುವ ಜ್ಞಾಪಕಗಳು, ಪುಟಿದೆದ್ದು ತಾಂಡವವಾಡುವ ಮನಸ್ಸು, ಕಂಡದ್ದನ್ನೆಲ್ಲಾ ಬಯಸುವ, ಕೇಳಿದ್ದಕ್ಕೆಲ್ಲಾ ಪ್ರತಿಕ್ರಿಯಿಸುವ ಮನಸ್ಸು, ಹೀಗೆ ಈ ಇಂದ್ರಿಯಗಳು ನಮ್ಮ ಮನಸ್ಸಿನ ಮೇಲೆ ತಮ್ಮ ಪ್ರಭಾವವನ್ನು ಬೀರಿ ನಮ್ಮನ್ನು ತೀರ ಅಶಾಂತ ಸ್ಥಿತಿಗೆ ತಳ್ಳುತ್ತವೆ. ಅಶಾಂತ ಮನಸ್ಸಿನ ಸಹಾಯದಿಂದ ಪರತತ್ವವನ್ನು ಅನುಸಂಧಾನ ಮಾಡಲು ಸಾಧ್ಯವಿಲ್ಲ. ಹಾಗಾಗಿ ಇಂದ್ರಿಯಗಳು ಶಾಂತವಾಗಬೇಕು.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ, ದೇಹವನ್ನು 'ರಥಂ ವಿದ್ಧಿ' ಎಂದು ಹೇಳಿ, ಈ ರಥದ ಸಾರಥಿಯೇ ಬುದ್ಧಿ ಅಥವಾ ವಿವೇಕ, ಮನಸ್ಸು, ಕುದುರೆಗಳಿಗೆ ಹಾಕಿರುವ ಲಗಾಮು, ಓಡುವ ಕುದುರೆಗಳೇ ಇಂದ್ರಿಯಗಳು ಮತ್ತು ರಥದಲ್ಲಿ ಕುಳಿತ ಯಜಮಾನನೇ 'ಆತ್ಮ' ಎನ್ನುತ್ತಾನೆ. ಎಲ್ಲಿಯತನಕ ಲಗಾಮು ಸಾರಥಿಯ ಹಿಡಿತದಲ್ಲಿ ಭದ್ರವಾಗಿ ಇರುತ್ತದೆಯೋ, ಅಲ್ಲಿಯ ತನಕ ಕುದುರೆಗಳು, ಯಜಮಾನ ಸೇರಬೇಕಾದ ಸ್ಥಳದ ದಿಕ್ಕಿಕ್ಕೆ ಓಡುತ್ತವೆ. ಹಾಗಲ್ಲದೆ





ಇದ್ದರೆ, ಕುದುರೆಗಳು ಎತ್ತ ಓಡಿದರೆ, ಯಜಮಾನ ಅಲ್ಲಿಗೆ ಸೇರುತ್ತಾನೆ. ಪರತತ್ವವನ್ನು ಅರಿಯುವ ಪ್ರಯತ್ನದಲ್ಲಿ ಇಂದ್ರಿಯಗಳು ಮನಸ್ಸಿನ ಮೂಲಕ, ವಿವೇಕದ ಹಿಡಿತದಲ್ಲಿ ಇದ್ದರೆ, ಅವುಗಳ ನಡೆಯೂ ಶಾಂತವಾಗಿ ಇದ್ದು ಆತ್ಮಕ್ಕೆ ಹಿತ ಮತ್ತು ಶಾಂತಿ ದೊರೆಯುತ್ತದೆ.

ಪ್ರಕೃತಿ ಪ್ರೇರಿತವಾದ ಇಂದ್ರಿಯಗಳು ನಮ್ಮ ಮೇಲೆ ಬೀರುವ ಪ್ರಭಾವವನ್ನು ನಿಯಂತ್ರಿಸಲು ನಮ್ಮ ಪೂರ್ವಜರು ನಮಗೆ ಹಲವಾರು ಮಾರ್ಗಗಳನ್ನು ತೋರಿದ್ದಾರೆ. ಯಾವ ಮಾರ್ಗವನ್ನು ಬೇಕಾದರೂ ಅನುಸರಿಸಿ ನಮ್ಮ ಗಮ್ಯವನ್ನು ನಾವು ಸೇರಬಹುದು. ನಾವು ಸ್ವ-ಇಚ್ಛೆಯಿಂದ ಮನಸ್ಸನ್ನು ನಿಗ್ರಹಿಸಿ ಇಂದ್ರಿಯ ನಿಗ್ರಹವನ್ನು

ಮಾಡಬಹುದು ಅಥವಾ ಅತಿ ಪ್ರವೃತ್ತಿಯಿಂದ, ಸೋತು, ರೋಗ ರುಜಿನಗಳಿಗೆ ತುತ್ತಾಗಿಯೂ ಇಂದ್ರಿಯಗಳು ಸುಮ್ಮನಾಗಬಹುದು ಅಥವಾ ಅಶಾಶ್ವತವಾದ ಇಂದ್ರಿಯ ಸುಖಗಳಲ್ಲಿ ಜಿಗುಪ್ಸೆಯುಂಟಾಗಿ, ಅದರಿಂದ ವಿಮುಖರಾಗಬಹುದು. ಹೇಗೇ ಆದರೂ ನಮ್ಮ ಇಂದ್ರಿಯಗಳು ಪ್ರವೃತ್ತಿಯಿಂದ ನಿವೃತ್ತಿ ಹೊಂದಿ ಶಾಂತವಾದರೆ, ಆಗ ಮನಸ್ಸು ಬುದ್ಧಿಗಳು ಪರತತ್ವದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಲು ಸೂಕ್ತ ಭೂಮಿಕೆಯಾಗುತ್ತದೆ. ಅಂತಹ ಭೂಮಿಕೆ ನಮ್ಮೊಳಗೆ ಸಿದ್ಧವಾದರೆ ನಾವು ಪುಣ್ಯವಂತರೆಂದೇ ಭಾವಿಸಿಕೊಳ್ಳಬೇಕು

**ಮುಕ್ತಕ – 787**

**ಶೀತಾಳೆ ಸಿಡುಬು ಶಿಶುಗಳ ಕಲುಕಿ ತೆರಳುವುದು |**

**ಪ್ರೀತಿ ಕಾಮನೆಗಳಷ್ಟಿಷ್ಟು ಬೆಳೆದವರ ||**

**ಯಾತನೆಗಳಿಂ ಕುದಿಸಿ ಕುಲುಕಿ ಬಳಿಕಾರುವುವು |**

**ಕಾತರತೆ ಕಳೆಯೆ ಸುಖ – ಮಂಕುತಿಮ್ಮ ||**

ಕಾಮನೆಗಳಷ್ಟಿಷ್ಟು=ಕಾಮನೆಗಳು+ಅಷ್ಟಿಷ್ಟು, ಬಳಿಕಾರುವುವು=ಬಳಿಕ+ಆರುವುವು

ಕಲುಕಿ =ಅಲುಗಾಡಿಸಿ, ಯಾತನೆಗಳಿಂ=ನೋವಿನಿಂದ, ಕಾತರತೆ=ಆತಂಕ

ಮಕ್ಕಳಿಗೆ ಸಿಡುಬು ಶೀತಾಳೆಗಳಂತಹ ಖಾಯಿಲೆಗಳು ಬಂದು, ಅವರನ್ನು ಒಂದು ಬಾರಿ ನಡುಗಿಸಿ ಮತ್ತೆ ಬಾರದಂತೆ ಹೊರಟು ಹೋಗುತ್ತವೆ. ದೊಡ್ಡವರನ್ನು ಪ್ರೀತಿ, ಆಸೆಗಳಂತಹ ಭಾವಗಳು ಒಂದು ರೋಗದಂತೆ ಹಿಡಿದು ಯಾತನೆಗೊಳಪಡಿಸುತ್ತದೆ. ಕೆಲಕಾಲ ಅಲುಗಾಡಿಸಿ ಮತ್ತೆ ಆರಿಹೋಗುತ್ತವೆ. ಹಾಗಿ ಆರಿ ನಮ್ಮಲ್ಲಿನ ಕಾತರತೆ ಕಡಿಮೆಯಾದರೆ ಅದೇ ಸುಖ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಕ್ಕಳಿಗೆ ಬರುವ ಈ ಸಿಡುಬು ಶೀತಾಳೆಗಳು ಕೇವಲ ದೃಷ್ಟಾಂತಗಳಷ್ಟೆ. ನಮ್ಮ ಮನಸ್ಸುಗಳಲ್ಲಿ ಬುಗ್ಗೆ ಬುಗ್ಗೆಯಾಗಿ ಪುಟಿದು ಏಳುವ ಕಾಮನೆಗಳ ಸರಮಾಲೆಗಳಂತೆ ಇವುಗಳು. ತಮ್ಮ ಪ್ರಭಾವ ಬೀರಿ ನಮ್ಮನ್ನು ಪ್ರಚೋದಿಸಿ, ನಾನಾ ದಿಕ್ಕುಗಳಿಗೆ ನಮ್ಮನ್ನು ಹುಚ್ಚರಂತೆ ಓಡಿಸುವ ಈ ಕಾಮನೆಗಳಿಗೆ ಅಂತ್ಯವೇ ಇರುವುದಿಲ್ಲ. ನಮ್ಮ ಇಂದ್ರಿಯಗಳ

ಮೂಲಕ ಈ ಜಗತ್ತಿನೊಂದಿಗೆ ನಂಟು ಏರ್ಪಟ್ಟಮೇಲೆ, ಕಾಮನೆಗಳು ಸಹಜ. ಆದರೆ ಅವುಗಳು ನಮ್ಮ ಸಂತೋಷಕ್ಕಿರಬೇಕೇ ಹೊರತು ನಮ್ಮನ್ನು ಹಿಡಿದು ಪೀಡಿಸುವುದಕ್ಕಲ್ಲ. ತೀರ ಗಾಢವಾದ ಛಾಯೆಯನ್ನು ಬಿಟ್ಟುಹೋಗುವ ಶೀತಾಳೆ ಸಿಡುಬುಗಳಂತೆ, ನಮ್ಮ ಸ್ವಭಾವದ ಮೇಲೆ ತನ್ನ ಮುದ್ರೆಯನ್ನು ಒತ್ತಿಯೇ ಹೋಗುತ್ತದೆ. ಒಂದು ಸಲ ಕಾಮನೆಗಳು ನಮ್ಮೊಳಗೆ ನುಗ್ಗಿದ ಮೇಲೆ, ಅವುಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

ಬಾಲ್ಯದಲ್ಲಿ ಶೀತಾಳೆ ಸಿಡುಬಗಳಿಂದ ಪೀಡಿತರಾಗಿದ್ದವರು ಬೆಳೆದಂತೆ ಹೇಗೆ ಅದರ ಪ್ರಭಾವದ ಛಾಯೆಯಿಂದ ಕ್ರಮೇಣ ಹೊರಬರುತ್ತಾರೋ, ಅದೇ ರೀತಿ ಅಂತರಂಗದ ಬೆಳವಣಿಗೆಯ ಪ್ರಾಥಮಿಕ ಹಂತದಲ್ಲಿರುವವರು ಕಾಮ ಕ್ರೋದಾಧಿಗಳು, ರಾಗ ದ್ವೇಷಾಧಿಗಳಿಂದ ಪ್ರೇರಿತರಾದ, ಪೀಡಿತರಾದ ಸ್ವಾಭಾವವುಳ್ಳವರಾಗಿದ್ದರೂ, "ಬೆಳೆದವರ" ಎಂದು ಗುಂಡಪ್ಪನವರು ಹೇಳುವಂತೆ, ಓದು, ವಿದ್ಯಾಭ್ಯಾಸ, ಅಭ್ಯಾಸ, ಸಾಧನೆಗಳಿಂದ ವ್ಯಕ್ತಿ ಬೆಳೆದಾಗ, ಅವುಗಳು ಮಾಡಿದ ರಭಸ' ದ ಪ್ರಭಾವದಿಂದ ಹೊರಬಂದು, ಕಾತರತೆ ಕಡಿಮೆಯಾಗಿ, ಮನಸ್ಸು ಶಾಂತವಾಗುತ್ತದೆ, ಎನ್ನುತ್ತಾರೆ ಮಾನ್ಯ ಡಿವಿಜಿಯವರು.

ನಮ್ಮನ್ನು ಹಿಡಿದು ಪೀಡಿಸುವ ಅರಿಷಡ್ವರ್ಗಗಳ ಪ್ರಭಾವದಿಂದ ಹೊರಬರಬೇಕಾದರೆ ನಾವು ಬೆಳೆಯಬೇಕು, ಅಂತರಂಗದಿಂದ ಪಕ್ವವಾಗಬೇಕು, ನಮ್ಮನ್ನು ಮಾನಸಿಕವಾಗಿ ಪ್ರಕ್ಷುಬ್ಧಗೊಳಿಸುವ, ನಮ್ಮನ್ನು ಅಲುಗಾಡಿಸುವ, ನಡುಗಿಸುವಂತಹ ಅವಗಳ ಕ್ಷುಲ್ಲಕತೆಯಿಂದ ಮೇಲೇರಿ ಉದಾತ್ತತೆಯನ್ನು ಬೆಳೆಸಿಕೊಂಡು, ಪ್ರಯತ್ನಪೂರ್ವಕವಾಗಿ

ಸಾಧಿಸಿ, ನಮ್ಮ ಮನಸ್ಸನ್ನು ಶಾಂತವಾಗಿಸಿಕೊಂಡರೆ, ಅದು ನಿಜವಾದ ಸುಖವನ್ನು ನೀಡುತ್ತದೆ. 'ಕುದ್ದು ಆವಿಯಾಗುವಕ್ಕಿಂತ ಆರಿ ತಣ್ಣಗಾಗುವುದು' ಉತ್ತಮವಲ್ಲವೇ?

**ಮುಕ್ತಕ – 788**

**ಜ್ವರ ಬಂದು ತನು ಬೆಂದ ಯಾತನೆಯ ಮಾತೇನು? |**

**ಉರಿಬೇಗೆಯಿಳಿಯ ಹೊಸ ಹೊಸಬನಾ ನರನು ||**

**ಕರಣತಪನೆಗಳಿಳಿಯೆ, ಕಾರಣವದೇನಿರಲಿ !**

**ಮರುಜನ್ಮವಾತ್ಮಂಗೆ - ಮಂಕುತಿಮ್ಮ ||**

ಉರಿಬೇಗೆಯಿಳಿಯೆ=ಉರಿ+ಬೇಗೆಯು+ಇಳಿಯೆ, ಹೊಸಬನಾ=ಹೊಸಬನು+ಆ,

ಕರಣತಪನೆಗಳಿಳಿಯೆ=ಕರಣ+ತಪನೆಗಳು+ಇಳಿಯೆ, ಕಾರಣವದೇನಿರಲಿ+ಕಾರಣವು+ಅದೇನಿರಲಿ,

ಮರುಜನ್ಮವಾತ್ಮಂಗೆ=ಮರುಜನ್ಮವು+ಆತ್ಮಂಗೆ ಕರಣ=ಇಂದ್ರಿಯ,

ಜ್ವರ ಬಂದು ತನು ಎಂದರೆ ದೇಹ ಆ ಜ್ವರದ ತಾಪದಿಂದ ಬೆಂದು ಯಾತನೆಯನ್ನು ಅನುಭವಿಸಿದ ನಂತರ, ಆ ಜ್ವರ, ಕಡಿಮೆಯಾಗಿ ಚೇತರಿಸಿಕೊಳ್ಳುವಾಗ ಒಂದು ರೀತಿಯ ಹೊಸತನದ, ಅನುಭವವಾಗುತ್ತದೆಯಲ್ಲವೇ, ಅದೇ





ರೀತಿ ವಾಂಛಗಳಿಂದ ಉಂಟಾದ ಬೇಗೆಯೂ ಅಡಗಿ ಇಂದ್ರಿಯಗಳು ಶಾಂತವಾದರೆ ಮನುಷ್ಯನಿಗೆ ಅದು ಮರುಜನ್ಮದ ರೀತಿ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಂದ್ರಿಯ ಸುಖದ ಬೆನ್ನಟ್ಟಿ ಹೋಗುವಾಗ ಮನಸ್ಸು, ದೇಹ ಮತ್ತು ಬುದ್ಧಿಗಳು, ಬಯಕೆಗಳಿಂದುಂಟಾಗುವ 'ಜ್ವರ' ದ ತಾಪವನ್ನು ಅನುಭವಿಸಿ, ಹೋರಾಡಿ ಬೇಸತ್ತು, ಅವುಗಳ ಕ್ಷಣಿಕತೆಯ, ಅರಿವಾಗಿ ಅವುಗಳನ್ನು ತೊರೆಯುವ ಇಚ್ಛೆಯುಂಟಾಗಿ, ಅದಕ್ಕೆ ಪೂರಕವಾಗಿರುವ ಪ್ರಯತ್ನವನ್ನು ಛಲಬಿಡದೆ ಮಾಡಿದರೆ, ಆಗ ನಮ್ಮ ಬಯಕೆಗಳು ನಮ್ಮ ಮೇಲೆ ಮಾಡಿದ ದುಷ್ಪರಿಣಾಮದ ಪ್ರಭಾವದಿಂದ ಹೊರಬರಬಹುದು. ಅಂತಹ ಪ್ರಯತ್ನದ ಅಂತ್ಯದಲ್ಲಿ ಕಲ್ಮಶವಿಲ್ಲದ ಅಪರಂಜಿ ಚಿನ್ನದಂತೆ, ನಾವು ಹೊರಹೊಮ್ಮಬಹುದು.

ಜ್ವರ ಬಂದಾಗ, ಅದು ಸ್ವಲ್ಪದಿನ ಇದ್ದು ಬಿಟ್ಟು ಹೋಗುತ್ತದೆ. ಆದರೆ ನಮ್ಮನ್ನು ಆಂತರಿಕ ತಪನಕ್ಕೆ ಗುರಿಪಡಿಸುವ ಇಂದ್ರಿಯಗಳನ್ನು ಪ್ರಚೋದಿಸುವ ಬಯಕೆಗಳ ಜ್ವರ ನಮ್ಮನ್ನು ಬಿಟ್ಟು ಹೋಗಬೇಕಾದರೆ "ನಾವು ಅದನ್ನು ಬಿಡಬೇಕು". ಬದುಕಿನಲ್ಲಿ ಸಾಮಾನ್ಯ ನಾವೇ ಎಲ್ಲವನ್ನೂ ಹಿಡಿದುಕೊಂಡು ಪರದಾಡುತ್ತಾ 'ಅಯ್ಯೋ ನನಗೆ ಎಂತಹ ಗತಿ ಬಂದಿದೆ. ಈ ಕಷ್ಟಗಳು ಮುಗಿಯುವುದೇ ಇಲ್ಲವಲ್ಲ' ಎಂದು ಹಲುಬುತ್ತೇವೆ. ಆದರೆ 'ನಾವು ಅದನ್ನು ಬಿಟ್ಟರೆ, ಅದು ನಮ್ಮನ್ನು ಬಿಡುವ ಸಾಧ್ಯತೆ ಖಂಡಿತ ಇದೆಯಾದ್ದರಿಂದ, ಬಿಡುವ ಪ್ರಯತ್ನವನ್ನು ನಾವೇ
ಮಾಡಬೇಕು.

ಶಾಂತ ಮತ್ತು ನೆಮ್ಮದಿಯ ಬದುಕಿಗೆ ಯಾವುದು ಮಾರಕವೋ ಅವುಗಳನ್ನು ನಾವು ತೊರೆಯಲಾದರೆ ಒಳ್ಳೆಯದು. ಆದರೆ ಅವು ಅಷ್ಟು ಸುಲಭದಲ್ಲಿ ನಮ್ಮನ್ನು ಬಿಟ್ಟುಹೋಗುವುದಿಲ್ಲ. 'ಇದು ಸರಿಯಲ್ಲ, ನಮ್ಮ ಉದ್ಧಾರಕ್ಕೆ ಪೂರಕವಲ್ಲ' ಎಂದು ಅರಿತರೂ ಅವುಗಳ ಸೆಳೆತ ನಮ್ಮನ್ನು ತನ್ನ ಬಿಗಿಹಿಡಿತದಲ್ಲಿ ಕಟ್ಟಿಹಾಕಿರುತ್ತದೆ. ಅದನ್ನು ಹೊರಹಾಕಲು ಪ್ರಯತ್ನ ಪಡುವುದರ ಬದಲು, ಅದಕ್ಕೆ ವಿರುದ್ಧವಾದ ಧ್ಯಾನ, ಮೌನ, ಜಪ, ತಪ, ಸತ್ಸಂಗ ಮುಂತಾದವುಗಳನ್ನು ನಮ್ಮ ಒಳಗೆ ಹರಿಯಬಿಟ್ಟರೆ ಆಗ ಒಳಗಿರುವ ಇಂದ್ರಿಯಗಳ ನಂಟು ಮತ್ತು ಬಯಕೆಗಳ ಗಂಟು ಹೊರನೂಕಲ್ಪಟ್ಟು ನಾವು ಕಳಂಕ ಮತ್ತು ಕಲ್ಮಶರಹಿತರಾಗಿ ಮಾನ್ಯ ಗುಂಡಪ್ಪನವರು 'ಮರುಜನ್ಮವಾತ್ಮಂಗೆ' ಎಂದು ಹೇಳುವಂತೆ ಬದುಕಿನಲ್ಲಿ ಹೊಸತನವನ್ನು ಪಡೆದುಕೊಂಡು ಆನಂದದ ಅನುಭವವನ್ನು ಪಡೆಯಬಹುದು.

**ಮುಕ್ತಕ – 789**

**ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು |**

**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ||**

**ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ |**

**ಎಲ್ಲರೊಳಗೊಂದಾಗು – ಮಂಕುತಿಮ್ಮ ||**

ಎಲ್ಲರೊಳಗೊಂದಾಗು =ಎಲ್ಲರೊಳಗೆ+ಒಂದಾಗು ದೀನದುರ್ಬಲರಿಂಗೆ=ದೀನರು ಮತ್ತು ಮತ್ತು ದುರ್ಬಲರಿಗೆ

ನೀನು, ಬೆಟ್ಟದಡಿ ದನಕರುಗಳಿಗೆ ಮೇವಾಗುವಂತಹ ಹುಲ್ಲಾಗು, ನಿನ್ನ ಮನೆಗೆ ಸುವಾಸನಾಭರಿತವಾದ ಮಲ್ಲಿಗೆಯ ಹೂವಂತಾಗು, ವಿಧಿ ನಿನ್ನ ಬದುಕಿನಲ್ಲಿ ಕಷ್ಟಗಳನ್ನು ಮಳೆಯಂತೆ ಸುರಿದರೆ, ನೀ ಕಲ್ಲಂತೆ ಗಟ್ಟಿಯಾಗಿ ಅವುಗಳನ್ನು ಎದುರಿಸು, ದೀನರಿಗೆ ದುರ್ಬಲರಿಗೆ ನೀನು ಬೆಲ್ಲದಂತಾಗು, ಎಲ್ಲರೊಳು ಒಂದಾಗು ಎಂದು, ಸ್ವಾರಸ್ಯಕರ ಬದುಕಿನ ಗುಟ್ಟನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಪ್ರಯೋಜಕರಾಗಿ ಬದುಕಬೇಕು ಎನ್ನುವುದು ನಮ್ಮ ಸಂಸ್ಕೃತಿಯ ಮತ್ತು ಸಂಸ್ಕಾರಗಳ ಆಶಯ. ಆದರೆ ಹೇಗೆ? ಎನ್ನುವುದೇ ಪ್ರಶ್ನೆ. ಬಹಳಷ್ಟು ಬಾರಿ ನಾವು 'ನಮಗೇ' ಪ್ರಯೋಜನಕಾರಿಯಾಗಿ ವರ್ತಿಸುವುದಿಲ್ಲ, ಹಾಗಿರುವಾಗ ನಾವು ಜಗತ್ತಿಗೆ ಉಪಯೋಗಿಗಳಾಗಿ ಬದುಕುವುದು ಹೇಗೆ? ನಮ್ಮ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಂಡರೆ, ನಮ್ಮ ಕ್ಷಮತೆಯ ಕಿಂಚಿತ್ ಭಾಗವನ್ನು ಪರಹಿತಕ್ಕಾಗಿ ಬಳಸಬಹುದು. ಬೆಟ್ಟದಡಿಯ ಹುಲ್ಲು ತನ್ನಷ್ಟಕ್ಕೆ ತಾನು ಬೆಳೆದರೂ ಅದು ದನಕರುಗಳಿಗೆ ಮೇವಾಗುತ್ತದೆಯಲ್ಲಾ, ಆ ರೀತಿ ನಾವೂ ಸಹ ಬದುಕಬೇಕು ಎನ್ನುತ್ತಾರೆ ಡಿವಿಜಿಯವರು. 'ಮನೆಗೆ ಮಾರಿ ಪರರಿಗುಪಕಾರಿ ಎನ್ನುವ ಗಾದೆ ಮಾತಿದೆ. ಹಾಗಲ್ಲದೆ ತನ್ನ ಮನೆಯವರೆಲ್ಲರಿಗೂ ಹಿತವನ್ನು ನೀಡುತ್ತಾ, ತಾನಿರುವ ಮನೆ, ಸಮಾಜ, ದೇಶ ಮತ್ತು ಜಗತ್ತಿಗೆ, ಮಲ್ಲಿಗೆಯ ಸುಗಂಧದಂತೆ ಇದ್ದರೆ, ಎಲ್ಲರೂ ನಮ್ಮನ್ನು ಇಷ್ಟಪಡುವಂತೆ ಬದುಕಿದರೆ ಅದು ಸುಂದರ ಮತ್ತು ಸಾರ್ಥಕ ಬದುಕಾಗುತ್ತದೆ.

ಇನ್ನು ಕಷ್ಟಗಳು ಬಾರದ ಜೀವಿ ಈ ಜಗತ್ತಿನಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಆದರೆ ಆ ಕಷ್ಟಗಳ ಭಾರದಿಂದ ಕುಗ್ಗುವವರೇ ಹೆಚ್ಚು. ಹಾಗೆ ಕುಗ್ಗಿದ ಮನಸ್ಸು ಸಕ್ರಿಯಾತ್ಮಕವಾಗಿಲ್ಲದೆ, ಬಾಡಿದಾಗ ಜೀವನ ನೀರಸವಾಗುತ್ತದೆ. ಹಾಗೆ ಕುಗ್ಗದೆ ಬಂದದ್ದನೆಲ್ಲಾ ಅನುಭವಿಸಿಯೇ ತೀರಿಸುತ್ತೇನೆ ಎಂದು ಮನಸ್ಸನ್ನು ಕಲ್ಲಿನಂತೆ ಗಟ್ಟಿಯಾಗಿಸಿ, ಮಾನಸಿಕ

ಸಂತುಲನೆಯನ್ನು ಕಳೆದುಕೊಳ್ಳದೆ, ದೃಢವಾಗಿ ಮತ್ತು ಧೈರ್ಯವಾಗಿ ನಿಂತರೆ, ಎಂತಹ ಕಷ್ಟಗಳನ್ನೂ ಎದುರಿಸುವ, ಅನುಭವಿಸುವ ಮತ್ತು ಗೆದ್ದು ಹೊರಬರುವ ಸಾಧ್ಯತೆಗಳು ಅಧಿಕ. ಅದಕ್ಕೊಂದು ಮಾರ್ಗವಿದೆ. ನಮಗಿಂತ ತೀರ ಹೀನ ಗತಿಯಲ್ಲಿರುವ ದೀನರ ಮತ್ತು ದೈನ್ಯರ ಕಷ್ಟಗಳಿಗೆ ಹೋಲಿಸಿಕೊಂಡಾಗ,





ನಮ್ಮ ಕಷ್ಟವು ಗೌಣವಾಗುತ್ತದೆ. ಅಂತಹವರಿಗೆ ಆಸರೆಯಾಗಿ, ಆಶ್ರಯವಾಗಿ ನಿಂತಾಗ ಅವರಿಗೆ ನಾವು 'ಇರುವೆಗಳಿಗೆ ಬೆಲ್ಲದಂತೆ' ಅವರಿಗೆ ಸನ್ನಿಹಿತರಾಗಬಹುದು ಮತ್ತು ಸವಿಯನ್ನು ಹಂಚಬಹುದು.

ಹೀಗೆಲ್ಲಾ ಆಗಬೇಕಾದರೆ, 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ ಎಂದು ವಚನಕಾರ ಸರ್ವಜ್ಞ ಹೇಳಿದಂತೆ ನಾವು ಎಲ್ಲರೊಳಗೆ ಒಂದಾಗಬೇಕು. ಸ್ವಹಿತಗಳನ್ನು ಬದಿಗಿರಿಸಿ ಪರಹಿತದ ಕಾರ್ಯಗಳನ್ನು ಮಾಡಿ, "ಆತ್ಮವತ್ ಸರ್ವ ಭೂತೇಷು' ಎನ್ನುವಂತೆ, ಏಕಾತ್ಮಭಾವದಿಂದ ಪರರ ಸಂತೋಷವನ್ನು ನಮ್ಮ ಸಂತೋಷವೆಂದುಕೊಳ್ಳುತ್ತಾ, ಪರರ ನೋವನ್ನು ಹಂಚಿಕೊಳ್ಳುತ್ತಾ 'ಎಲ್ಲರೊಳಗೆ ಒಂದಾಗಿ' ಬದುಕಿದರೆ ಒಂದು ಧನ್ಯತೆಯ ಭಾವ ನಮ್ಮ ಮನಸ್ಸಿಗೆ ಬಂದು, ತುರೀಯಾವಸ್ಥೆಯ ಆನಂದವನ್ನು ಪಡಬಹುದು. ಆದರೆ ಇಂದಿನ ಸಮಾಜದಲ್ಲಿ ಸ್ವಾರ್ಥಕ್ಕಾಗಿಯೇ ಪರರಿಗೆ ನೋವನ್ನುಂಟುಮಾಡುವ, ಸ್ವಹಿತ ರಕ್ಷಣೆಗಾಗಿಯೇ ಪರರನ್ನು ಅನುಸರಿಸುವ ಮತ್ತು ಪರರ ಆನಂದದಲ್ಲಿ ತಮ್ಮ ಸಂತೋಷವಿರುವಂತೆ ನಟಿಸುವ ಜನರೇ ಅಧಿಕವಾಗಿರುವಾಗ ಎಲ್ಲರೊಳಗೊಂದಾಗಿ ಬದುಕುವುದು ಕಷ್ಟ. ಹಾಗೆ ಬದುಕ ಬಯಸುವವರು ಬರುವ ಸಂಕಷ್ಟಗಳನ್ನು ಎದುರಿಸಲು ತಯಾರಾಗಿರಬೇಕು. ಆ ರೀತಿ ಬದುಕಿದರೆ ಅಂತಹ ಬದುಕಿನ ಅಂತ್ಯದಲ್ಲಿ ಖಂಡಿತ 'ಆನಂದ' ಸಿಗುತ್ತದೆ.

**ಮುಕ್ತಕ – 79ಸಂ**

**ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ |**

**ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ ||**

**ಹೀನಮಾವುದುಮಿಲ್ಲ ಜಗದ ಗುಡಿಯೂಳಿಗದಿ |**

**ತಾಣ ನಿನಗಿಹುದಿಲ್ಲಿ - ಮಂಕುತಿಮ್ಮ ||**

ಏನಾನುಮಂ=ಏನು+ಆನುಮಂ, ದೊರೆತುಜ್ಜುಗವ=ದೊರೆತ+ಉಜ್ಜುಗವ, ಹುಲುಕಡ್ಡಿಯೆಂಬ=ಹುಳುಕಡ್ಡಿ+ಎಂಬ, ಹೀನವಾವುದುಮಿಲ್ಲ=ಹೀನಂ+ಆವುದುಂ+ಇಲ್ಲ, ಗುಡಿಯೂಳಿಗದಿ=ಗುಡಿಯ+ಊಳಿಗದಿ, ನಿನಗಿಹುದಿಲ್ಲಿ =ನಿನಗೆ+ಇಹುದು+ಇಲ್ಲಿಆನುಮಂ=ಆದರೂ, ಉಜ್ಜುಗವ=ಉದ್ಯೋಗವ,

ಕೈಗೆ ಸಿಕ್ಕ ಯಾವುದಾದರೂ ಉದ್ಯೋಗವನ್ನು ಮಾಡು. 'ನಾನು ಹುಲುಮಾನವ, ನನ್ನ ಕೈಲೇನಾಗುತ್ತದೆ' ಎನ್ನುವ ಮಾತನ್ನು ಆಡಬೇಡ. ಈ ಜಗತ್ತೆಂಬ ದೇವಾಲಯದಲ್ಲಿ ಯಾವ ಕೆಲಸವೂ ಹೀನವಾದ ಕೆಲಸವಿಲ್ಲ. ನಿನಗೂ ಏನಾದರೂ ಕೈಂಕರ್ಯ, ಕೆಲಸ ಮಾಡಲು ಅವಕಾಶವಿದೆ ಎಂದು ಹೇಳುತ್ತಾ ಜಗತ್ತಿನಲ್ಲಿ ಸೃಷ್ಟಿಯಾದ ಪ್ರತೀ ವಸ್ತುವಿಗೂ ಒಂದು ಪ್ರಯೋಜವಿದೆ ಎಂಬ ಸತ್ಯವನ್ನು ಪ್ರಕಾಶಿಸಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಅತೀ ಸಾಹಸದಿಂದ 'ನಾನು ಏನನ್ನಾದರೂ ಮಾಡಿಬಿಡುತ್ತೇನೆ' ಎನ್ನುವ ಮಾತು ಹೇಗೆ ಸರಿಯಲ್ಲವೋ ಹಾಗೆಯೇ 'ನಾನು ಸಣ್ಣವ, ನನ್ನ ಕೈಲಿ ಏನಾಗುತ್ತದೆ?' ಎನ್ನುವ ಕೀಳುರಿಮೆಯ ಮಾತೂ ಸರಿಯಲ್ಲ. ಏಕೆಂದರೆ





ಪ್ರತಿಯೊಬ್ಬರಿಗೂ ಒಂದೊಂದು ಕ್ಷಮತೆ ಇರುತ್ತದೆ. ಅದನ್ನು ಅರಿತುಕೊಳ್ಳುವುದು ಮತ್ತು ಆ ವೈಯಕ್ತಿಕ ಕ್ಷಮತೆಯ ಬಲದಿಂದ ಸಾಧ್ಯವಾದ ಕೆಲಸವನ್ನು ಮಾಡುವುದೇ ಸರಿಯಾದ ಮಾರ್ಗ. ಎಲ್ಲರೂ ಏನಾದರೂ ಕೆಲಸವನ್ನು ಮಾಡುತ್ತಲೇ ಇರಬೇಕು. ಕೆಲವರಿಗೆ ತಾವು ಇಷ್ಟಪಡುವ ಕೆಲಸ ಸಿಗುತ್ತದೆ. ಕೆಲವರು ಸಿಕ್ಕ ಕೆಲಸವನ್ನು ಇಷ್ಟಪಡುತ್ತಾರೆ. ಕೆಲವರು ಮಾಡುವ ಕೆಲಸ ಇಷ್ಟವಾಗದೆ ಇದ್ದರೂ ಅನಿವಾರ್ಯತೆಯಿಂದ ಆ ಕೆಲಸವನ್ನು

ಮಾಡುತ್ತಾರೆ. ಕೆಲವರು ಇಷ್ಟವಾಗದ ಕೆಲಸವನ್ನು ಮಾಡುವುದೇ ಇಲ್ಲ ಮತ್ತೆ ಕೆಲವರು ಇಷ್ಟಾನಿಷ್ಟಗಳ ರೇಖೆಯನ್ನು ದಾಟಿ ತಮಗೆ ಸಂದ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿರ್ಲಿಪ್ತತೆಯಿಂದ ಆ ಕೆಲಸವನ್ನು ಕರ್ತವ್ಯವೆಂದು ಪರಿಗಣಿಸಿ, ಶ್ರದ್ಧಾಪೂರ್ವಕವಾಗಿ ಮಾಡುತ್ತಾರೆ. ಆದರೆ ಪ್ರತಿಯೊಬ್ಬರಿಗೂ ಮಾಡಲು ಏನಾದರೊಂದು ಕೆಲಸ ಇದ್ದೇ ಇರುತ್ತದೆ ಎನ್ನುವುದನ್ನೇ ಮಾನ್ಯ ಗುಂಡಪ್ಪನವರು 'ತಾಣ ನಿನಗಿಹುದಿಲ್ಲಿ ಎಂದಿದ್ದಾರೆ.

ಎಲ್ಲರಿಗೂ ಎಲ್ಲ ಕೆಲಸವನ್ನೂ ಮಾಡಲಾಗುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಕ್ಷಮತೆ. ಒಬ್ಬೊಬ್ಬರಿಗೆ ಒಂದೊಂದು ಕ್ಷೇತ್ರದಲ್ಲಿ ಪ್ರವೀಣರು. ಹಾಡುವವನಿಗೆ ಚಿತ್ರ ಬಿಡಿಸಲಾಗುವುದಿಲ್ಲ, ಕುಣಿಯುವವನಿಗೆ ಹಾಡಲಾಗುವುದಿಲ್ಲ, ಒಬ್ಬ ವಕೀಲ, ಒಬ್ಬ ಉಪಾಧ್ಯಾಯ, ಒಬ್ಬ ನಿರ್ವಾಹಕ, ಒಬ್ಬ ಕೂಲಿ, ಒಬ್ಬ ಯಜಮಾನ, ಹೀಗೆ ಒಬ್ಬೊಬ್ಬರದು ಒಂದೊಂದು ಕ್ಷೇತ್ರ ಒಂದು ವಿಷಯವನ್ನು ನಾವು ಮನಗಾಣಬಹುದು. ಅದೇನೆಂದರೆ ಇಲ್ಲಿ ಎಲ್ಲರಿಗೂ ಮಾಡಲು ಉದ್ಯೋಗವುಂಟು. ಕೆಲಸದಲ್ಲಿ ದೊಡ್ಡದು ಚಿಕ್ಕದು ಎನ್ನುವ ಬೇಧವಿರಬಾರದು. ಸಂದ ಕೆಲಸವನ್ನು ಕರ್ತವ್ಯವೆಂದು ಬಗೆದು ನಿಷ್ಠೆಯಿಂದ ಮಾಡಬೇಕೆನ್ನುವುದೇ ಈ ಮುಕ್ತಕದ ಆಶಯ.

ಬೀದಿ ಕಸ ಗುಡಿಸುವವರು, ಕಸವನ್ನು ಗುಡಿಸದೇ ಇದ್ದರೆ, ಊರೆಲ್ಲಾ ಹೊಲಸು ತುಂಬಿ ನಾರುತ್ತಾ ಬದುಕುವುದೇ ಅಸಹನೀಯವಾಗುವ ಪರಿಸ್ಥಿತಿ ನಾವು ನಮ್ಮ ಸುತ್ತಮುತ್ತಲ್ಲೇ ಕಂಡಿದ್ದೇವಲ್ಲವೇ. ನಮ್ಮ ಬದುಕಿಗೆ, ನಮ್ಮ ಹಾದಿ ಬೀದಿಗಳ ಸ್ವಚ್ಛತೆಗೆ ಬಹು ಮುಖ್ಯವಾದ ಆ ಕೆಲಸವನ್ನು ಹೀನವೆನ್ನಲಾಗುವುದೇ? ಆ ಕೆಲಸವನ್ನು ಮಾಡುವವರನ್ನು ಹೀನರೆನ್ನಲಾಗುವುದೇ?. ಈ ಜಗತ್ತೇ ಆ ಪರಮಾತ್ಮನ ಅವಾಸಸ್ಥಾನವಾದ ಒಂದು ಸುಂದರ ದೇವಾಲಯ. ಇಲ್ಲಿ ನಾವು ಮಾಡುವ ಪ್ರತಿಯೊಂದು ಕೆಲಸವನ್ನೂ ಆ ದೇವದೇವನ ಸೇವೆಯೆಂದು ಭಾವಿಸಿದರೆ ನಾವು ಮಾಡುವ ಯಾವುದೇ ಕೆಲಸವೂ ಮೇಲೂ ಆಗುವುದಿಲ್ಲ, ಕೀಳೂ ಆಗುವುದಿಲ್ಲ. ಅಂತಹ ಭಾವನೆಗಳು ನಮ್ಮಲ್ಲಿ ಬಂದರೆ ಮತ್ತು ಅವು ದೃಢವಾಗಿ ನಿಂತರೆ ನಮ್ಮಲ್ಲಿ ಭೇದಗಳು ನಶಿಸಿ ನಾವು ಮಾಡುವ ಕೆಲಸವನ್ನು ಕರ್ತವ್ಯವೆಂದು ಬಗೆದು, ನಿರ್ಲಿಪ್ತತೆಯಿಂದ ಬದುಕಿದರೆ ತೃಪ್ತಿಯಿಂದ ಜೀವನ ನಡೆಸಬಹುದು.

**ಮುಕ್ತಕ 791**

**ದಿನದಿನವು ಕುಸಿದು ಕಟ್ಟಿಸಿಕೊಳ್ಳುವ ಗುಡಿ ವಿಶ್ವ ।**

**ಜನರೆಲ್ಲರಾಗುಡಿಯ ಕೆಲಸದಾಳುಗಳು ॥**

**ಮನೆಯೇನು? ನಾಡೇನು? ಕುಲವೇನು? ಮಠವೇನು ।**

**ಎಣಿಸೆಲ್ಲವದೆಯೆಂದು - ಮಂಕುತಿಮ್ಮ ॥**

ಜನರೆಲ್ಲರಾಗುಡಿಯ=ಜನರು+ಎಲ್ಲರು+ಆ+ಗುಡಿಯ, ಕೆಲಸದಾಳುಗಳು=ಕೆಲಸದ+ಆಳುಗಳು,

ಎಣಿಸೆಲ್ಲವದೆಯೆಂದು=ಎಣಿಸು+ಎಲ್ಲವು+ಅದೆ+ಎಂದು, ಗುಡಿ =ದೇವಸ್ಥಾನ

ಪ್ರತಿನಿತ್ಯವೂ ಕುಸಿದು ಬಿದ್ದು ಮತ್ತೆ ಮತ್ತೆ ಕಟ್ಟಲ್ಪಡುವುದೇ ಈ ಜಗತ್ತೆಂಬ ದೇವಾಲಯ, ಕೆಡವುವ ಮತ್ತು ಕಟ್ಟುವ ಕೆಲಸದಲ್ಲಿ ಎಲ್ಲಾ ಜನರೂ ಕೆಲಸದಾಳುಗಳು. ಮನೆ, ನಾಡು, ಕುಲ, ಮಠ ಹೀಗೆ ಎಲ್ಲದರಲ್ಲೂ ಮತ್ತು ಎಲ್ಲವೂ ಆ ಪರಮಾತ್ಮನೆಂದು ತಿಳಿದುಕೋ ಎಂದು, ಗುಂಡಪ್ಪನವರು ಆದೇಶಿಸಿದ್ದಾರೆ ನಮಗೆ ಈ ಮುಕ್ತಕದಲ್ಲಿ.

'ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚಿತ್ ಜಗತ್ಯಾಂ ಜಗತ್' ಎಂದು ಹೇಳುವ ಈಶಾವಾಸ್ಯೋಪನಿಷತ್ತು ಮತ್ತು 'ಅಂತರ್ಬಹಿ ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂದು ಹೇಳುವ ನಾರಾಯಣೋಪನಿಷತ್ತು, ಎರಡೂ ಸಹ ಆ ಪರಮಾತ್ಮನ ಮತ್ತು ಪರತತ್ವದ ಸರ್ವ ವ್ಯಾಪಕತ್ವವನ್ನು ಪ್ರತಿಪಾದಿಸುತ್ತದೆ. ವೇದದ ಮೂಲ ಸತ್ವವೇ ಪರಮಾತ್ಮನ ಸರ್ವ ವ್ಯಾಪಕತ್ವವನ್ನು ಹೇಳುವುದು. ನಮ್ಮ ಊಹೆಗೂ ನಿಲುಕದಷ್ಟು ಬೃಹತ್ತಾಗಿರುವ ಈ ಜಗತ್ತಿನಲ್ಲಿ ಭೂಮಿ ಒಂದು ಸಣ್ಣ ಬಿಂದು. ಆ ಭೂಮಿಯ ಮೇಲೆ ನಮ್ಮ ವಾಸ. ಲಕ್ಷಾಂತರವರ್ಷಗಳಿಂದ ಭೂಮಿಯ ಮೇಲೆ ಜೀವಿಗಳ ವಾಸ. ಅಂದು ಇದ್ದದ್ದು ಇಂದಿಲ್ಲ. ಎಲ್ಲವೂ ಬದಲಾಗಿದೆ. ಇದನ್ನು ನೋಡುವ ಮತ್ತು ಅರಿಯುವ ವಿಧಾನವೂ ಬದಲಾಗಿದೆ. ಪ್ರತಿನಿತ್ಯ ಬದಲಾಗುವುದೇ ಪ್ರಪಂಚ, ಪ್ರತಿನಿತ್ಯ ಜಗತ್ತಿನ ಎಲ್ಲವೂ ಬದಲಾಗುತ್ತಾ ಹೋಗುತ್ತದೆ.

ಆದರೆ ಈ ಬದಲಾವಣೆಯನ್ನು ನಿರ್ದೇಶಿಸುವವರು ಯಾರು? ಮಾಡುವವರು ಯಾರು? 'ತನಗೆ ಹೇಗೆ ಬೇಕೋ ಹಾಗೆ ಈ ಜಗತ್ತನ್ನು ಸೃಷ್ಟಿಸಿಕೊಂಡು ತಾನು ಚೈತನ್ಯದ ರೂಪದಲ್ಲಿ ಎಲ್ಲದರೊಳಗೂ ತೂರಿಕೊಂಡು, ಎಲ್ಲವೂ ತಾನೇ ಆಗಿ ಎಲ್ಲವನ್ನೂ ತಾನೇ ಅನುಭವಿಸುತ್ತಾ ಆನಂದವಾಗಿರುವವನು ಆ ಪರಮಾತ್ಮ ನಿತ್ಯವಾದ, ಸತ್ಯವಾದ ಮತ್ತು

ಅನಂತವಾದ ಈ ಜಗತ್ತಿನಲ್ಲಿ ಒಂದು ರೂಪವನ್ನು ಹೊತ್ತು ಬಂದು ಹೋಗುವ ನಾವೆಲ್ಲಾ ಈ ಜಗದ್ವ್ಯಾಪಾರದಲ್ಲಿ ಪಾಲ್ಗೊಂಡು ಅವನ ಈ ದೇವಾಲಯವನ್ನು' ಅವನ ಇಚ್ಛೆ ಮತ್ತು ಸಂಕಲ್ಪಗಳಿಗನುಸಾರವಾಗಿ ಬದಲಾಯಿಸುವ ಕೂಲಿಯಾಳುಗಳಷ್ಟೇ. ನಮ್ಮ ಮನೆ, ನಮ್ಮ ನಾಡು, ನಮ್ಮ ಜಾತಿ, ನಮ್ಮ ಕುಲ, ನಮ್ಮ ಭಾಷೆ, ಮತ ಮತ್ತು ಮಠ ಎಂದು ಭೇಧವನ್ನು ಕಾಣುವ ನಾವು ಎಲ್ಲದರಲ್ಲೂ

| 13ಸಂ |
|---|

| ಕಗ್ಗರಸಧಾರೆ | ಜಗತ್ತು ಗುಡಿ 789-793 |
|---|---|

ಪರತತ್ವದ ಆವಾಸ ಮತ್ತು ಎಲ್ಲವೂ ಆ ಪರತತ್ವದ ಭಿನ್ನಭಿನ್ನ ರೂಪಗಳು ಮತ್ತು ಈ ರೂಪಗಳನ್ನು ಹೊತ್ತ ನಾವು ಆ ಪರಮಾತ್ಮನ ನಿರ್ದೇಶನದಂತೆ ಕೈ-ಕಾಲಾಡಿಸುವ 'ಬೊಂಬೆ' ಗಳು ಎಂದು ಅರಿತು ಬಾಹ್ಯ ರೂಪವನ್ನು ಬಿಟ್ಟು ಅಂತರಂಗದಲ್ಲಿರುವ ಚೈತನ್ಯದ ಸಾಮ್ಯತೆಯನ್ನು ಮನಗಾಣಬೇಕು ಎನ್ನುವುದು ಮಾನ್ಯ ಗುಂಡಪ್ಪನವರ ಆದೇಶ.

ನಾವೆಲ್ಲಾ, 'ನಾವು ಮಾಡುತ್ತಿದ್ದೇವೆ, ಮಾಡುತ್ತೇವೆ ಮಾಡಿ ಬಿಡುತ್ತೇವೆ' ಎನ್ನುವಂತಹ ಮಾತುಗಳನ್ನಾಡುತ್ತಾ 'ನಾವೇ' ಮಾಡುತ್ತೇವೆ ಎನ್ನುವ ಭ್ರಮೆಯಲ್ಲಿರುತ್ತೇವೆ. ಆದರೆ ಸತ್ಯವೇನೆಂದರೆ ಆ ಪರತತ್ವದ ಪ್ರಮೇಯವಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡಲು ಸಾಧ್ಯವಿಲ್ಲವಾದ್ದರಿಂದ ಅಂತಹ 'ದುರ್ಭಾವ' ವನ್ನು ಬಿಟ್ಟು 'ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ ಏನೆಲ್ಲಕೆ ದೇವ ಪ್ರೇರಣೆಯೆಂದು' ಎಂದು ಪುರಂದರದಾಸರು ಹೇಳುವಂತೆ ನಾವೂ ಭಾವಿಸಿ, ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡಲಾದರೆ ಆಗ ಪರಮಾತ್ಮನ ಜಗದ್ವ್ಯಾಪಕತ್ವದ ಅನುಭವ ನಮಗೂ ಆಗಿ ನಮ್ಮಲ್ಲಿ ಭೇಧಗಳು ನಶಿಸಿ, ಪರತತ್ವವನ್ನು ಅರಿಯುವ ನಮ್ಮ ಮಾರ್ಗ ಸುಗಮವಾಗಬಹುದು.

**ಮುಕ್ತಕ – 792**

**ಆಶೆಗಳ ಕೆಣಕದಿರು, ಪಾಶಗಳ ಬಿಗಿಯದಿರು |**

**ಕ್ಲೇಶದ ಪರೀಕ್ಷೆಗಳಿಗೆನ್ನ ಕರೆಯದಿರು ||**

**ಬೇಸರದ ಪಾತಕಸ್ಮೃತಿಯ ಚುಚ್ಚದಿರ್: ಎನ್ನು -|**

**ತೀಶನನು ಬೇಡುತಿರೋ - ಮಂಕುತಿಮ್ಮ ||**

ಕೆಣಕದಿರು=ಕೆಣಕದೆ+ಇರು, ಬಿಗಿಯದಿರು=ಬಿಗಿಯದೆ+ಇರು, ಪರೀಕ್ಷೆಗಳಿಗೆ=ಪರೀಕ್ಷೆಳಿಗೆ+ಎನ್ನ,
ಕರೆಯದಿರು=ಕರೆಯದೆ+ಇರು, ಚುಚ್ಚದಿರ್=ಚುಚ್ಚದೆ+ಇರು ಎನ್ನತೀಶನನು=ಎನ್ನುತ+ಈಶನನು,

"ಹೇ ಪರಮಾತ್ಮ, ನನ್ನಲ್ಲಿ ಆಸೆಗಳು ಉಂಟಾಗದಂತೆ ಮಾಡು, ಜೀವನದ ಬಂಧಗಳಿಂದ ಬಿಗಿಯಲ್ಪಡದಂತೆ ಮಾಡು. ಬದುಕಿನ ಕಷ್ಟತರವಾದ ಪರೀಕ್ಷೆಗಳಿಗೆನ್ನ ಗುರಿಮಾಡದಿರು. ಗತಿಸಿಹೋದ ಕಾಲದಲ್ಲಿ ನಾನು ಮಾಡಿದ ಪಾಪಗಳ ನೆನಪು ನನಗೆ ಇಲ್ಲದಂತಾಗುವಂತೆ ಕರುಣಿಸು" ಎಂದು ಸದಾಕಾಲ ಆ ಜಗದ್ರಕ್ಷಕನನ್ನು ಬೇಡುತ್ತಿರು ಎಂದು ತಮಗೆ ತಾವೇ ಹೇಳಿಕೊಳ್ಳುತ್ತಾ, ನಮಗೂ ಯಾವ ಮಾರ್ಗ ಅನುಸರಣೀಯ ಎಂದು ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

ಬದುಕಿನಲ್ಲಿ ನಮ್ಮನ್ನು ಹಿಂಸಿಸುವ ವಿಷಯಗಳೆಂದರೆ ಎಂದಿಗೂ ತುಂಬದ ನಮ್ಮ 'ಆಸೆ'ಗಳ ಬಟ್ಟಲು. ಕುದಿಯುವ ಪಾತ್ರೆಯಲ್ಲಿ ಬುಗ್ಗೆ ಬುಗ್ಗೆಯಾಗಿ ಮೇಲೇಳುವ ನೀರ ಗುಳ್ಳೆಗಳಂತೆ ಸದಾಕಾಲ ಪ್ರಕ್ಷುಬ್ಧವಾದ ನಮ್ಮ ಮನಸ್ಸಿನಲ್ಲಿ ಎದ್ದು ಕುಣಿಯುತ್ತಿರುತ್ತವೆ, ನಮ್ಮ ಆಸೆಗಳು. ಈ ಆಸೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ನಾವು





ಪಡುವ ಪಾಡು ಅಷ್ಟಿಷ್ಟಲ್ಲ. ತೃಪ್ತಿಯೇ ಆಗದ ಈ ಆಸೆಯ ಬುಗ್ಗೆಗಳು ಮತ್ತೆ ಮತ್ತೆ ಮೇಲೆ ಏಳದಂತೆ ನಮ್ಮ ಮನಸ್ಸು ಶಾಂತವಾದರೆ ನಮ್ಮ ಜೀವನವೂ ಶಾಂತವಾಗುತ್ತದೆ. ಹಾಗಾಗಿ ಆ ಪರಮಾತ್ಮನಲ್ಲಿ ಒಂದು ಪ್ರಾರ್ಥನೆ. ಇನ್ನು ನಾವು ಈ ಜಗತ್ತಿನಲ್ಲಿ ಈ ರೂಪ ಹೊತ್ತು ಬಂದಾಗಿನಿಂದ ನಮಗೆ ಸುತ್ತಿಕೊಂಡಂತಹ ಮತ್ತು ಮೇಲೆ ಹೇಳಿದ ಆಸೆಯ ಕಾರಣ ನಾವೇ, ಸುತ್ತಿಕೊಂಡಂತಹ ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗಿನ ಬಂಧನದ ಪಾಶಗಳೂ ಸಹ ನಮ್ಮ ಮನಸ್ಸಿನ ಶಾಂತಿಗೆ ಭಂಗವನ್ನು ಉಂಟುಮಾಡುವಂತಹವೇ!!!! ಕಟ್ಟಿಕೊಂಡ ಸಂಬಂಧಗಳನ್ನು ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಾಗದೆ, ಆ ಬಂಧನದ ಪಾಶಗಳನ್ನು ಕಡಿದುಕೊಳ್ಳಲಾಗದೆ, ಜೀವಿಗಳು ಪಡುವ ಪಾಡು ಎಲ್ಲರಿಗೂ ಗೊತ್ತಿರುವುದೇ ಅಲ್ಲವೇ?

ಹುಟ್ಟಿದಾಗಿನಿಂದ ಇಂದಿನವರೆಗೂ ನಮ್ಮ ಜೀವನದಲ್ಲಿ ನಡೆದುಹೋದ ಘಟನೆಗಳಲ್ಲಿ ನಾವು ಮಾಡಿದ ಪಾಪ ಕರ್ಮಗಳೆಲ್ಲವೂ ಅಳಿಸಿ ಹೋಗಿರದಿದ್ದರೂ ಮನಸ್ಸಿನ ಅಂತರಾಳದಲ್ಲಿ ಸುಪ್ತವಾಗಿ ಬಿದ್ದುಕೊಂಡಿರುತ್ತವೆ. ನಮಗೆ ಅದರ ನೆನಪು ಬಂದರೆ ಮತ್ತೆ ಮನಸ್ಸು ನೋಯುತ್ತದೆ. ಇಂದಿನ ಬದುಕು ಇಂದಿಗಾಗಬೇಕೇ ವಿನಃ, ಅಂದಿನ ಬದುಕಿನ ಹಾಳೆಗಳನ್ನು ಕೆದಕಿ ಮನಸ್ಸಿಗೆ ಘಾಸಿಯುಂಟಾಗಿಸಿ, ಇಂದನ್ನೂ ಹಾಳು ಮಾಡುವಂತಾಗಬಾರದು. ಮನದಾಳದಿ ಅಡಗಿನಿಂತ ಗತಿಸಿಹೋದ ಘಟನೆಗಳು ಮತ್ತೆ ಚಿಗುರಿ ನಮ್ಮನ್ನು ಕುಟಕಬಾರದು", ಮತ್ತು ಕುಟುಕಿ ನಮ್ಮ ಇಂದಿನ ಬದುಕನ್ನು ಕದಡಿ ಕೆಡಿಸಬಾರದು, ಅಲ್ಲವೇ?

ಸರಿ ಹೀಗೆಲ್ಲಾ ಆಗಬೇಕಾದರೆ ಏನು ಮಾಡಬೇಕು ಎಂದು ಮಾನ್ಯ ಗುಂಡಪ್ಪನವರು ಒಂದು ಸಲಹೆಯನ್ನಿತ್ತಿದ್ದಾರೆ. "ಹೇ ಪರಮಾತ್ಮ ನಾನು ನಿನಗೆ ಶರಣಾಗಿದ್ದೇನೆ. ನೀನೇ ಕೊಟ್ಟ ಬದುಕಿನಲ್ಲಿ, ನಾನು ಶಾಂತ ಜೀವನವನ್ನು ಮಾಡಿ ನೀನು ತೋರಿದ ಮಾರ್ಗದಲ್ಲಿ ನಡೆಯಬೇಕಾದರೆ, ನನ್ನ ಮನಸ್ಸಿನಲ್ಲಿ ಆಸೆಗಳನ್ನು ತೊಲಗಿಸು, ನಾನು ಸುತ್ತಿಕೊಂಡಿರುವ ಬಂಧನದ ಸೂತ್ರಗಳನ್ನು ಕಡಿದುಹಾಕು, ನನ್ನನ್ನು ಕ್ಲಿಷ್ಟತರವಾದ ಪರೀಕ್ಷೆಗಳಿಂದ ಪಾರುಮಾಡು ಮತ್ತು ನನ್ನ ಪಾಪಗಳ ನೆನಪುಗಳನ್ನು ಮನಸ್ಸಿನಿಂದ ಅಳಿಸಿಹಾಕು ಎಂದು ಸದಾ ಕಾಲ ಬೇಡುತ್ತಿದ್ದರೆ, ಎಂದೋ ಒಂದು ದಿನ ಅವೆಲ್ಲ ಮಾಯವಾಗಿ ನಮ್ಮ ಮನಸ್ಸು ಮತ್ತು ತನ್ಮೂಲಕ ಆತ್ಮ ಶಾಂತವಾಗುವುದರಲ್ಲಿ ಸಂದೇಹವೇ ಇಲ್ಲ . ಪ್ರಾರ್ಥನೆ ನಿರಂತರವಾಗಿರಬೇಕು.





**ಮುಕ್ತಕ - 793**

**ನಾನೆಂಬುದೊಂದಂಶವಿತರ ಜಗವೊಂದಂಶ |**

**ನಾನು ನೀನುಗಳಳಿದ ಸರ್ವೈಕ್ಯವೊಂದು ||**

**ಧ್ಯಾನಿಸುತ್ತೈಕ್ಯವನು ಪಾಲಿಸುವುದುಭಯವನು |**

**ಜಾಣಿನಾ ನಾಟಕವೋ – ಮಂಕುತಿಮ್ಮ ||**

ನಾನೆಂಬುದೊಂದಂಶವಿತರ=ನಾನು+ಎಂಬುದು+ಒಂದು+ಅಂಶ, ಜಗವೊಂದಂಶ=ಜಗವು ಒಂದಂಶ,

ನೀನುಗಳಳಿದ=ನೀನುಗಳು+ಅಳಿದ, ಸರ್ವೈಕ್ಯವೊಂದು=ಸರ್ವ+ಐಕ್ಯ+ಒಂದು,

ಧ್ಯಾನಿಸುತ್ತೈಕ್ಯವನು=ಧ್ಯಾನಿಸುತ+ಐಕ್ಯವನು, ಪಾಲಿಸುವುದುಭಯವನು=ಪಾಲಿಸುವುದು+ಉಭಯವನು.

ನಾನು ಎಂಬುದು ಒಂದು ಅಂಶ. ನಾವಿರುವ, ಈ ಜಗತ್ತು ಎಂಬುದು ಇನ್ನೊಂದು ಅಂಶ. ನಾನು ನೀನು ಎಂಬ ಬೇಧವು ಇಲ್ಲವಾದರೆ ಎಲ್ಲವೂ ಐಕ್ಯವಾಗಿ ಒಂದಾಗುತ್ತದೆ. ಭೇಧಗಳಿರುವ ಈ ಜಗತ್ತಿನಲ್ಲಿ ಇದ್ದು ಸಾಮಾನ್ಯವಾಗಿ ಜೀವಿಸುತ್ತಾ ಅಂತಹ 'ಸರ್ವೈಕ್ಯ'ವನ್ನು ಧ್ಯಾನಿಸುವುದು, ಜಾಣತನದ ನಾಟಕ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪಂಚಭೂತಗಳಿಂದಾದ ಈ ಜಗತ್ತು. ಈ ಜಗತ್ತಿನ ಅಂಶದಿಂದಲೇ ಹುಟ್ಟಿಬಂದ, ಎಂದರೆ ರೂಪವನ್ನು ತಳೆದ ನಾವು ಮತ್ತು ಸಕಲ ಜೀವರಾಶಿ. ಆದರೂ ಆ ಜಗತ್ತಿನಿಂದ ಭಿನ್ನವಾಗಿ ಕಾಣುವಂತಹ ರೂಪ ಹೊತ್ತಿದ್ದೇವೆ. ಅದಕ್ಕೆ ಕಾರಣಗಳು ಹಲವಾರು. ಪ್ರತಿಯೊಬ್ಬರಿಗೂ ಒಂದು ಬೇರೆಯದೇ ಆದ, ಭಿನ್ನವಾದ ರೂಪ, ಸ್ವಭಾವ, ಮಾನಸಿಕ ಪ್ರವೃತ್ತಿ, ಬುದ್ಧಿವಂತಿಕೆ, ಬಣ್ಣ ಹೀಗೆ ಎಲ್ಲವೂ ಭಿನ್ನ, ಯಾವ ಒಬ್ಬರೂ ಮತ್ತೊಬ್ಬರಂತೆ ಇಲ್ಲ. ಒಂದೇ ತಾಯಿಯ ಗರ್ಭದಲ್ಲಿ ಒಂದೇ ಬಾರಿ ಜನ್ಮ ತಳೆದ 'ಅವಳಿ' ಮಕ್ಕಳ ಸ್ವಭಾವ, ರೂಪಗಳಲ್ಲಿ ಅಜಗಜಾಂತರ. ಹೀಗಿರುವಾಗ 'ಸರ್ವೈಕ್ಯ'ವೆನ್ನುವುದು ಯಾವುದನ್ನು ವೈವಿಧ್ಯತೆಯೇ ಜಗತ್ತಿಗೆ ಸೌಂದರ್ಯವನ್ನು ಕೊಟ್ಟಿರುವುದು. ಆ ವೈವಿಧ್ಯತೆಯನ್ನು ಬಿಟ್ಟು ಎಲ್ಲವೂ ಒಂದೇ ಆಗಿಬಿಟ್ಟ ಸರ್ವೈಕ್ಯಭಾವದ' ಸ್ಥಿತಿಯನ್ನು ಧ್ಯಾನಿಸುವುದು ಹೇಗೆ?

ಆತ್ಮವು ಈ ದೇಹವನ್ನು ಧಾರಣೆ ಮಾಡಿದೆ. ಈ 'ಶಬ್ದ ಸ್ಪರ್ಶ ರೂಪ ರಸ ಗಂಧ' ಗಳ ಅನುಭವ ಕೇವಲ ಆತ್ಮ ಧರಿಸಿದ ದೇಹಕ್ಕೆ ಸಂಬಂಧಿಸಿದ್ದು, ಆತ್ಮಕ್ಕಲ್ಲ. ಇದರಿಂದಲೇ ರೂಪ ಭಾವ ಇತ್ಯಾಧಿಗಳಲ್ಲಿ ವೈವಿಧ್ಯತೆ. ಹಾಗಾಗಿಯೇ ನಾವು 'ನಾನು, ನೀನು, ಅವನು, ಅವಳು ಅವರು ಇವರು' ಎಂದು ಭಿನ್ನತೆಯನ್ನು ಗುರುತಿಸಲಾಗುತ್ತಿದೆ. ಈ ಎಲ್ಲಾ ಗುರುತುಗಳೂ ಮನಸ್ಸು ಬುದ್ಧಿ ಮತ್ತು ದೇಹಕ್ಕೆ ಸಂಬಂಧಿಸಿದ್ದು, ಇದು ಹೊರಗಿನ ಗುರುತು. ಅಂತರಂಗದಲ್ಲಿರುವ ಆತ್ಮವಸ್ತುವಿಗೆ ಇದ್ಯಾವುದೂ ಅಂಟುವುದಿಲ್ಲ. ನಮ್ಮ ಅಸ್ತಿತ್ವಕ್ಕೆ ಕಾರಣವಾದ, ನಮ್ಮ ಜೀವನ ಪರ್ಯಂತ ಮತ್ತು ದೇಹದೊಳಕ್ಕೆ ಹೋಗಿ ಹೊರಬರುವ ನಮ್ಮ ಉಸಿರು' ಎಂದಿಗೂ ನಮ್ಮ ದೇಹದ ಒಂದು ಭಾಗವಾಗುವುದು ಸಾಧ್ಯವಿಲ್ಲ ಅಲ್ಲವೇ? ವೈವಿಧ್ಯತೆಯನ್ನು ಮೂಡಿಸುವ ಎಲ್ಲವೂ ಬದಲಾಗುತ್ತಾ

ನಾಶವಾಗಿ ಹೋಗುತ್ತದೆ. ಆದರೆ ಯಾವುದು ಈ ವೈವಿಧ್ಯತೆಯನ್ನು ಧರಿಸಿದೆಯೋ ಅದು ಶಾಶ್ವತ ಮತ್ತು "ಅವಿನಾಶಿ', ಹೊರಗಿನ ರೂಪವೇ ಸತ್ಯವೆಂದುಕೊಂಡರೆ 'ಭಿನ್ನತೆ' ಒಳಗಿನ ಚೇತನವನ್ನು ಸತ್ಯವೆಂದು ಕೊಂಡರೆ 'ಐಕ್ಯತೆ'.

ಒಂದು ರೂಪವನ್ನು ಧರಿಸಿ ನಾವು ಬಂದಿದ್ದೇವಾದ್ದರಿಂದ ಹೊರರೂಪಗಳಲ್ಲಿ ಇದ್ದು ಹೊರರೂಪಗಳನ್ನು ಅನುಭವಿಸುತ್ತಾ. ನಾನು ಕೇವಲ ಈ ರೂಪವನ್ನು ಧರಿಸಿದ್ದೇನೆ ನಾವು ಈ ರೂಪವಲ್ಲ ಎನ್ನುವ ಭಾವ ಗಟ್ಟಿಯಾಗಿ ಅಂತಹ ರೂಪಗಳನ್ನು ಧರಿಸಿರುವ ಎಲ್ಲ ಆತ್ಮಗಳೂ ಒಂದೇ ಎನ್ನುವ 'ಸರ್ವೈಕ್ಯಭಾವ'ವನ್ನು ಮನದಲ್ಲಿ ತಳೆದು ಅಶಾಶ್ವತವಾದ ರೂಪ ಮತ್ತು ತತ್ಸಂಬಂಧಿತ ವಿಷಯಗಳಿಗೆ ಅಂಟಿಕೊಳ್ಳದೆ, ಆತ್ಮಾನುಸಂಧಾನ ಮಾಡಿದಾಗ, ಅಂತರಂಗದಲ್ಲಿ ಬೇಧಗಳು ಅಳಿಸಿ ಮಾನ್ಯ ಡಿವಿಜಿಯವರು 'ನಾನು ನೀನುಗಳಳಿದ ಸರ್ವೈಕ್ಯವೊಂದು 'ಎಂದು ಹೇಳುವಂತೆ ಏಕಾತ್ಮಭಾವ ಮತ್ತು ಲೋಕಾತ್ಮಭಾವ' ನಮ್ಮಲ್ಲಿ ಮೂಡಿ ನಾವು ಆನಂದದ ತುರೀಯಾವಸ್ಥೆಯಲ್ಲಿ ನಿಲ್ಲಬಹುದು. ಹಾಗೆ ಇಲ್ಲಿ ಇದ್ದು, ಈ ಬೇಧಗಳನ್ನು ಅನುಭವಿಸುತ್ತಾ, ಅವುಗಳಿಗೆ ಅಂಟದೆ ಅವುಗಳ ಪ್ರಭಾವದಿಂದ ಮೇಲೇರಿ 'ಸರ್ವೈಕ್ಯತೆ'ಯನ್ನು ಧ್ಯಾನಿಸುವುದು ಮತ್ತು ಅನುಸಂಧಾನಮಾಡುವುದು ಜಾಣತನದ ನಾಟಕವೆನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅಂತಹ ಸ್ಥಿತಿಗೆ ತಲುಪಲು ಪ್ರತೀ ಜೀವಿಯೂ ಪ್ರಯತ್ನ ಪಡಬೇಕು.

**ಮುಕ್ತಕ – 794**

**ಮನಸು ಬೆಳೆಯಲಿ ಭುಜಿಸಿ ನೂರು ನೂರನುಭವವ |**

**ಹೊನಲು ನೂರೀ ಬಾಳ ಕಡಲನುಬ್ಬಿಸಲಿ ||**

**ತನುಬಂಧ ಕಳಚೆ, ಜೀವವಖಂಡಚೇತನದ |**

**ಕುಣಿತದಲ್ಲಿ ಕೂಡಿರಲಿ - ಮಂಕುತಿಮ್ಮ ||**

ನೂರನುಭವವ=ನೂರು+ಅನುಭವವ, ನೂರೀ=ನೂರು+ಈ, ಕಡಲನುಬ್ಬಿಸಲಿ=ಕಡಲನು+ಉಬ್ಬಿಸಲಿ, ಜೀವವಖಂಡಚೇತನದ=ಜೀವವು+ಅಖಂಡ+ಚೇತನದ ಹೊನಲು=ನದಿ, ತನುಬಂಧ-ದೇಹಾಭಿಮಾನ, ಅಖಂಡ=ಸಮಗ್ರವಾದ,

ನೂರಾರು ನದಿಗಳು ಬಂದು ಸೇರಿ ಕಡಲು ಉಬ್ಬುವಂತೆ, ಬಾಳಿನಲ್ಲಿ ಮನಸ್ಸಿನ ಕಡಲೂ ಸಹ ನೂರಾರು ಅನುಭವಗಳ ಮಹಾಪೂರದಿಂದ ಬೆಳೆಯಬೇಕು, ವಿಕಾಸಗೊಳ್ಳಬೇಕು. ದೇಹದ ವ್ಯಾಮೋಹವನ್ನು ತೊರೆದು ಪರಬ್ರಹ್ಮವಸ್ತುವಿನ ತಾಂಡವದೊಡಗೂಡಿ, ನಿನ್ನ ಆತ್ಮವೂ ಸಂಭ್ರಮಿಸಲಿ ಎಂದು ಒಂದು ಅದ್ಭುತವಿಚಾರವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗದ ಆತ್ಮದ ಕುಣಿತವು ಹೇಗಿರುತ್ತದೆಂದರೆ, ಗಗನದಲ್ಲಿ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳ ಗಾಂಭೀರ್ಯ,





ಅದೇ ಹಕ್ಕಿಗಳ ಮುಂಜಾವಿನ ಇಂಚರ, ಬಗೆಬಗೆಯ ವಿನ್ಯಾಸದ, ಬಣ್ಣಗಳ ಮತ್ತು ಸುಗಂದಗಳ ಹೊತ್ತು ಗಿಡಗಳ ಶಿಖರದಲ್ಲಿ ತೂಗುವ ಪುಷ್ಪ ಸಂಕುಲ, ಲಕ್ಷಾಂತರ ಬಣ್ಣ, ಚಿತ್ತಾರ ಮತ್ತು ವಿನ್ಯಾಸಗಳನ್ನು ಧರಿಸಿ, ಕಡಲಂತರಾಳದಲ್ಲಿ ಸರಿದಾಡುವ ಜಲಚರಗಳು, ಭೂಮಿಯ ಮೇಲೆ ಹರಿದಾಡುವ ಸರೀಸೃಪಗಳು(ಉರಗ), ಕ್ರಿಮಿ, ಕೀಟ, ಪ್ರಾಣಿಗಳು, ಬಣ್ಣ ಬಣ್ಣದ ಚಿಟ್ಟೆಗಳು, ವಿಕಸಿತ ಪ್ರಾಣಿಯಾದ ಮನುಷ್ಯ ಮುಂತಾದವುಗಳ ಬದುಕೇ ಆ ಚೇತನದ ತಾಂಡವ. ಆದರೆ ಇವೆಲ್ಲರ ಅಸ್ತಿತ್ವಕ್ಕೆ ಕಾರಣವಾಗಿರುವುದು ಮತ್ತು ಇವೆಲ್ಲವನ್ನೂ ಧರಿಸಿರುವುದು, ಯಾವ ರೂಪ, ಬಣ್ಣಗಳೂ ಇಲ್ಲದ ಚೇತನ', ಇದಕ್ಕೊಂದು ಉದಾಹರಣೆಯೆಂದರೆ, ಹಲವಾರು ಬಣ್ಣಗಳ ಮತ್ತು ಹಲವಾರು ಗಾತ್ರ ಮತ್ತು ರೂಪಗಳಿಂದ ಅಲಂಕರಿಸಿದ ವಿದ್ಯುತ್ ದೀಪಗಳು ನಮಗೆ ವಿಧವಿಧವಾಗಿ ಕಂಡರೂ ಅವುಗಳನ್ನು ಬೆಳಗುವ ವಿದ್ಯುತ್ ಮಾತ್ರ ಒಂದೇ ಆಗಿರುವಂತೆ ಕೋಟಿರೂಪಗಳನ್ನು ಧರಿಸಿರುವುದು ಏಕರೂಪದ ಚೇತನವಲ್ಲವೇ?

"ಸುಮ್ಮನೊಬ್ಬಂಟಿಯೆಂತಿಹುದು ಬೇಸರವಹುದು ಹೊಮ್ಮುವೆನು ಕೋಟಿರೂಪದಲಿ"(ಮುಕ್ತಕ-74) ಎಂದು ಆ ಪರತತ್ವವೇ ಅಖಂಡವಾಗಿ ಎಲ್ಲ ರೂಪಗಳನ್ನು ಧರಿಸಿದೆ ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು. ಎಂದರೆ ನಾವೆಲ್ಲಾ ಆ ಪರಮಾತ್ಮ ಧರಿಸಿದ ಬೇರೆ ಬೇರೆ ರೂಪಗಳೆಂದು ಅರ್ಥ. ಆದರೆ ನಾವು, ಇದು ನಾನು, ನನ್ನ ದೇಹ, ನನ್ನ ರೂಪ ಎಂದು ನಮ್ಮನ್ನು ನಾವು ಈ ದೇಹ, ಮನಸ್ಸು, ಬುದ್ಧಿಗಳೊಂದಿಗೆ ಗುರುತಿಸಿಕೊಳ್ಳುತ್ತಾ ಇರುತ್ತೇವೆ. ಅದು ಅರಿವಿಲ್ಲದ ಸ್ಥಿತಿ. ಬದುಕಿನ 'ಪರಿಣಾಮ'ಗಳಿಂದ ನಮಗೆ ಸಾವಿರಾರು ಅನುಭವಗಳಾಗುತ್ತವೆ. ಅನುಭವಗಳು ನಮ್ಮನ್ನು ಸತ್ಯದ ಹತ್ತಿರಕ್ಕೆ ಕೊಂಡೊಯ್ಯಬೇಕು. ದೇಹಾಭಿಮಾನ ಮತ್ತು ರೂಪ ಬೇಧ ಅಳಿದು ಏಕಾತ್ಮ ಭಾವ ಮೂಡಬೇಕು.

ಅಂತಹ ಭಾವ ಮೂಡಿದೊಡನೆ, ಮನೆಯಲ್ಲಿ ಕಟ್ಟಿಕೊಂಡ ಗೋಡೆಗಳು, ಮುಚ್ಚಿಕೊಂಡ ಕಿಟಕಿ ಬಾಗಿಲುಗಳನ್ನು ತೆರೆದಾಗಲೋ ಅಥವಾ ತೊಲಗಿಸಿದಾಗಲೋ ಮನೆಯೆಲ್ಲಾ ಪ್ರಖರವಾದ ಬೆಳಕಿನಿಂದ ತುಂಬಿದಂತೆ, ದೇಹ, ಮನಸ್ಸು, ಬುದ್ಧಿಗಳಿಗೆ ಇಂದ್ರಿಯ ಮತ್ತು ಪ್ರಕೃತಿಯ ಸಂಪರ್ಕದಿಂದ ನಮ್ಮೊಳಗೆ ಉಂಟಾಗಿದ್ದ ಬೇಧಭಾವ, ಮೋಹ, ದ್ವೇಷ, ಮತ್ಸರ ಮುಂತಾದ ಆತ್ಮದ ಔನ್ನತ್ಯಕ್ಕೆ ಮಾರಕವಾದ ಗುಣಗಳೆಲ್ಲಾ ನಾಶವಾಗಿ ಮನುಷ್ಯ ಮನುಷ್ಯರ ಮಧ್ಯೆ ನಿರ್ಮಿತವಾದ ಭಾವನಾತ್ಮಕವಾದ ಗೋಡೆಗಳೆಲ್ಲ ಕಳಚಿ ಬಿದ್ದರೆ, ಉಳಿಯುವುದೇ ಕೇವಲ ಸರ್ವವ್ಯಾಪಿಯಾದ 'ಏಕಾತ್ಮಭಾವ. ನಮ್ಮೊಳಗೇ ನಾವು ಅಂತಹ ವೈಶಾಲ್ಯವನ್ನು ಬೆಳೆಸಿಕೊಂಡರೆ ಮನಸ್ಸು ಬುದ್ಧಿಗಳಿಗೆ ಅಂಟಿಕೊಂಡ ಹೊಲಸನ್ನು ತೊಳೆದುಕೊಂಡು ಶುದ್ಧರಾಗಿ ಅಖಂಡ ಚೇತನದ ಲೀಲಾವಿನೋದದಲ್ಲಿ ಒಂದಾಗಿ ಆನಂದವನ್ನು ಅನುಭವಿಸಬಹುದು.





**ಮುಕ್ತಕ- 795**

**ಮೊಳೆವ ಸಸಿಯೊಳು ನಾನು, ತೊಳಗುವಿನನೊಳು ನಾನು |**

**ಬೆಳೆವ ಶಿಶುವೊಳು ನಾನು, ಕೆಳೆನೋಟ ನಾನು ||**

**ಕಳಕಳಿಸುವೆಲ್ಲಮುಂ ನಾನೆಂದು ಭಾವಿಸುತೆ |**

**ಒಳಗೂಡು ವಿಶ್ವದಲಿ - ಮಂಕುತಿಮ್ಮ ||**

ಕಳಕಳಿಸುವೆಲ್ಲಮುಂ=ಕಳಕಳಿಸುವ+ಎಲ್ಲಮುಂ, ನಾನೆಂದು=ನಾನು+ಎಂದು

ತೊಳಗು=ಬೆಳಗು, ಕೆಳೆ=ಸ್ನೇಹ, ಕಳಕಳಿ=ಕಾಳಜಿ, ಕರುಣೆ, ಅನುಕಂಪ,

ಮೊಳೆಯುವ ಸಸಿಯಲ್ಲಿ ನಾನು, ಬೆಳಗುವ ಪ್ರಭೆಯಲ್ಲಿ ನಾನು ಬೆಳೆವ ಶಿಶುವಿನಲ್ಲಿ ನಾನು, ಸ್ನೇಹಭಾವದಲ್ಲಿ ನಾನು, ಜಗತ್ತಿನ ಎಲ್ಲ ಜನರ ಕಳಕಳಿಯಲ್ಲಿ ನಾನು, ನಾನೆಂಬ ಭಾವದಿಂದ ಜಗತ್ತಿನಲ್ಲಿ ನೀನು ಒಂದಾಗು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಕಾಳು ಭೂಮಿಗೆ ಬಿದ್ದು, ಆ ಭೂಮಿಯ ಸಾರ, ಸೂರ್ಯನ ಬೆಳಕು ಮತ್ತು ಶಾಖಗಳನ್ನು "ಹೀರಿಕೊಂಡು' ತನ್ನಲ್ಲಿರುವ ಮೊಳೆಯುವ 'ಶಕ್ತಿ'ಯನ್ನು ಬಳಸಿ ಸಸಿಯಾಗಿ ಮೊಳೆಯುತ್ತದೆ. ಆದರೆ ಆ ಹೀರಿಕೊಳ್ಳುವ ಮತ್ತು ಬೀಜದಲ್ಲಿರುವ ಗುಣಗಳನ್ನು ವಿಕಾಸಗೊಳಿಸುವ ಆ ಶಕ್ತಿ ಯಾವುದು? ಎಂದರೆ ಅದೇ ಚೈತನ್ಯ, ಅದು ಈ ಜಗತ್ತಿನ ಬೃಹಚ್ಚೇತನದ ಒಂದಂಶ. ಆ ಚೈತನ್ಯವೇ ತಾಯಗರ್ಭದಲ್ಲಿ ಸೇರಿದ ವೀರ್ಯಾಣುವನ್ನು ಅಲ್ಲೇ ಇದ್ದ ಅಂಡಾಣುವಿನೊಂದಿಗೆ ಸೇರಿಸಿ ಒಂದು ಶಿಶುವಾಗಿಸಿ ಗರ್ಭದಲ್ಲೇ ನವ ಮಾಸ(ಮನುಷ್ಯರಲ್ಲಿ ಬೆಳೆಸಿ ಪೋಷಿಸಿ ಈ ಜಗತ್ತಿಗೆ ತರುವುದೂ ಸಹ. ಇದು ಜಗತ್ತಿನ ಸಕಲ ಜೀವರಾಶಿಗಳಿಗೂ ಅನ್ವಯ.

ಪ್ರಾಣಿಗಳು, ಎಂದರೆ ನಾವು ಪರಸ್ಪರ ತೋರುವ ಸ್ನೇಹ, ಪ್ರೀತಿ, ಕಳಕಳಿಯಂತಹ ಭಾವಗಳೆಲ್ಲ ಪ್ರಕಟವಾಗುವುದು ಆ ಚೈತನ್ಯದ ಮೂಲಕವೇ. ಒಂದು ಪ್ರಾಣಿಯಲ್ಲಿ ಆ ಚೈತನ್ಯವಿರುವ ತನಕ ಅದು ಪ್ರಾಣಿ, ಚೈತನ್ಯವಿಲ್ಲದಿದ್ದರೆ ಅದು "ಜಡ', ಪ್ರಾಣವಿಲ್ಲದ್ದು ಎಂದರೆ ಭಾವ ಮತ್ತು ಕ್ರಿಯಾ ಹೀನ. ಹಾಗಾಗಿ ಎಲ್ಲ ಕ್ರಿಯೆ ಮತ್ತು ಭಾವಕ್ಕೆ ಆ ಚೈತನ್ಯವೇ ಕಾರಣ. ನಮ್ಮ ಅಸ್ತಿತ್ವವೇ ಆ ಚೈತನ್ಯದಿಂದ ಅಥವಾ ಆ ಚೈತನ್ಯವೇ ನಮ್ಮ ಅಸ್ತಿತ್ವ ಹಾಗಾಗಿ 'ಆತ್ಮವತ್ ಸರ್ವಭೂತೇಷು" ಎಂಬಂತೆ ಸಕಲ ಜೀವರಾಶಿಗಳಲ್ಲೂ ಇರುವುದು ಒಂದೇ ಚೈತನ್ಯವೆಂಬ ಅರಿವು ಮೂಡಿದರೆ ಮತ್ತು ನಮ್ಮ ಅಸ್ತಿತ್ವವನ್ನು ಆ ಚೈತನ್ಯದೊಂದಿಗೆ ಕಲ್ಪಿಸಿಕೊಂಡರೆ, ಏಕಾತ್ಮಭಾವ ಅಥವಾ ಜಗದಾತ್ಮಭಾವ ಉಂಟಾಗುತ್ತದೆ. ಆದರೆ ಆ ಕಲ್ಪನೆ ಕೇವಲ ಜ್ಞಾನಕ್ಕೆ ಸೀಮಿತವಾಗದೆ, ಸುಮ್ಮನೆ ಬಂದುಹೋಗುವ ಭಾವವಾಗದೆ ನಮ್ಮ ಅಂತರಂಗದಲ್ಲಿ ದೃಢವಾಗಬೇಕು.

"ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" 'ಸ ಭೂಮಿಂ ವಿಶ್ವತೋ ವೃತ್ವಾ' ಎಂದು ಪರತತ್ವದ ಸರ್ವವ್ಯಾಪಕತ್ವವನ್ನು ಹೇಳುವಾಗ 'ನಾನು, ನೀನು, ಅವರು, ಇವರು' ಎಂಬ ಭೇದಗಳು ಕೇವಲ ನಮ್ಮ ಅಜ್ಞಾನ ಜನ್ಯವಲ್ಲದೆ ಮತ್ತೇನು? ನಾನು ಈ ದೇಹವಲ್ಲ, ರೂಪವಲ್ಲ, ಬಣ್ಣವಲ್ಲ, ಲಿಂಗವಲ್ಲ, ನಾನು ಕೇವಲ ಚೇತನ ಮತ್ತು ಸಕಲ ಚರಾಚರಗಳಲ್ಲಿನ ಚೇತನವೂ ಒಂದೇ ಎನ್ನುವ ಭಾವ ಬಂದಾಗ, ನಮಗೆ ಜಗತ್ತನ್ನೇ ಬಾಚಿ ತಬ್ಬಿಕೊಂಡಂತೆ' ಅನಿಸುತ್ತದೆ. ಪ್ರಕೃತಿಯ ಮತ್ತು ಪಂಚಭೂತಗಳ ಸೆಳೆತಗಳಿಂದ ಹೊರಬರಬೇಕು, ವಸ್ತು, ವಿಷಯ ಮತ್ತು ವ್ಯಕ್ತಿಗಳೊಡನಲ್ಲದೆ, ಅವೆಲ್ಲಕ್ಕೂ ಆಧಾರವಾದ ಚೈತನ್ಯದೊಂದಿಗೆ ನಮ್ಮನ್ನು ನಾವು ಗುರುತಿಸಿಕೊಂಡರೆ, ಏಕಾತ್ಮಭಾವ ದೃಢವಾಗುತ್ತದೆ. ಅಲ್ಲಿ ನಮಗೆ ಖಂಡಿತವಾಗಿ ನಿಜವಾದ ಆನಂದ ಸಿಗುತ್ತದೆ. ಆದರೆ, ಇದು ಕೇವಲ ಅನುಭವ ವೇದ್ಯ. ಪ್ರಯತ್ನಪಟ್ಟವರಿಗೆಲ್ಲ ಲಭ್ಯ.

**ಮುಕ್ತಕ – 796**

**ಸರಿ ಹದದ ಕಾಳು ತಿರೆಯಪ್ಪಿದೊಡೆ ಮೊಳೆಯುವುದು।**
**ಹುರಿದೊಡದು ಮೊಳೆಯದರಳಹುದು ಬಾಯ್ಸವಿಗೆ ॥**
**ಪರಮತತ್ವಜ್ಞಾನಿಯೊಡರಿಸುವ ಕರುಮಗಳು।**
**ಮರುಬೆಳೆಗೆ ಬಿತ್ತಲ್ಲ – ಮಂಕುತಿಮ್ಮ ॥**

ತಿರೆಯಪ್ಪಿದೊಡೆ=ತಿರೆಯ+ಅಪ್ಪಿದೊಡೆ, ಹುರಿದೊಡದು=ಹುರಿದೊಡೆ+ಅದು,
ಮೊಳೆಯದರಳಹುದು=ಮೊಳೆಯದು+ಅರಳಹುದು, ಬಾಯ್ಸವಿಗೆ=ಬಾಯ್+ಸವಿಗೆ,
ಪರಮತತ್ವಜ್ಞಾನಿಯೊಡರಿಸುವ=ಪರಮತತ್ವಜ್ಞಾನಿಯು+ಒಡರಿಸುವ
ತಿರೆಯ=ಧರೆಯ, ಭೂಮಿಯ. ಹುರಿದೊಡೆ=ಹುರಿದುಬಿಟ್ಟರೆ, ಸವಿಗೆ=ರುಚಿಗೆ, ಒಡರಿಸುವ =ಎಸಗುವ,

ಮಾಡುವ. ಕರುಮ=ಕರ್ಮ,ಕೆಲಸ, ಬಿತ್ತಲ್ಲ=ಬೀಜವಲ್ಲ.

ಸರಿಯಾಗಿ ಹದವಾದ ಕಾಳು ಭೂಮಿಯ ಸಂಸರ್ಗದಿಂದ ಸಸಿಯಾಗಿ ಮೊಳೆಯುವುದು. ಆದರೆ ಅದೇ ಕಾಳನ್ನು ಹುರಿದುಬಿಟ್ಟರೆ, ಅದು ಅರಳಾಗಿ ಬಾಯ ರುಚಿಗೆ ದಕ್ಕುತ್ತದೆ. ಪರಮತತ್ವವನ್ನು ಪ್ರತಿಪಾದಿಸುವ ಮತ್ತು ಅನುಸರಿಸುವ ತತ್ವಜ್ಞಾನಿಯ ಕರ್ಮಗಳು ಮುಕ್ತಿಗೆ ಹೊರತು ಮರು ಜನ್ಮಕ್ಕಲ್ಲ ಎಂದು ಜಗದ ಅಂಟು ಮತ್ತು ಅಂಟಿಲ್ಲದ ಸ್ಥಿತಿಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಬೀಜದಲ್ಲಿ, ಮೊಳೆತು ಸಸಿಯಾಗುವ ಗುಣವಿರುವ ಒಂದು ಕಣವಿರುತ್ತದೆ. ಅದು ತನ್ನ ಗುಣಗಳನ್ನೆಲ್ಲಾ ತನ್ನಲ್ಲೇ ಅಡಕವಾಗಿಟ್ಟುಕೊಂಡಿರುತ್ತದೆ. ಅದು ಮೊಳೆತು ಸಸಿಯಾಗಬೇಕಿದ್ದರೆ ಬೇಕಾದ ಸೂಕ್ತ ವಾತಾವರಣ ಸಿಕ್ಕಾಗ ಅದು ಮೊಳೆಯುತ್ತದೆ. ಮೊಳೆತು ಸಸಿಯಾಗಿ, ಗಿಡವಾಗಿ ಮರವಾಗಿ, ತನ್ನ ತಾಯಿ ಗಿಡದಿಂದ ಹೊತ್ತು ತಂದ, ಎಲೆ, ಹೂವು, ಕಾಯಿ, ಹಣ್ಣು, ಬಣ್ಣ, ವಾಸನೆ, ರೂಪ ಮುಂತಾದ ತನ್ನ ಎಲ್ಲ ಗುಣಗಳನ್ನೂ ಆ ಸಸಿ, ಗಿಡ ಮತ್ತು ಮರದ ಮೂಲಕ ಪ್ರಕಟಗೊಳಿಸುತ್ತದೆ. ಆದರೆ ಅದಕ್ಕೆ ಭೂ ಸಂಪರ್ಕವಾಗುವ ಮುನ್ನ ಅದನ್ನು





ಹುರಿದುಬಿಟ್ಟರೆ, ಮತ್ತೆ ಮೊಳೆಯುವ ಕ್ಷಮತೆ ನಶಿಸಿ ಆ ಕಾಳು ಅರಳಾಗಿಯೋ ಅಥವಾ ಹುರಿಟ್ಟಾಗಿಯೋ, ಕೇವಲ ಬಾಯರುಚಿಗೆ ಸೂಕ್ತವಾಗಿರುತ್ತದೆ. ಎಂದರೆ ಗುಣಗಳಿರುವ ತನಕ ಜಗತ್ತಿನ ಸಂಪರ್ಕ, ಗುಣ ನಾಶವಾದರೆ ಮುಕ್ತಿ.

ಆ ಬೀಜದ ರೀತಿಯೇ ನಾವೂ ಎಂದರೆ ಆತ್ಮವೂ ತಾನು ದೇಹದ ಸಂಪರ್ಕದಿಂದ ಸಂಗ್ರಹಿಸಿಕೊಂಡ ಗುಣಗಳನ್ನೆಲ್ಲ ಮತ್ತೊಂದು ದೇಹಸಿಕ್ಕಾಗ ಪ್ರಕಟಗೊಳಿಸುತ್ತದೆ. ಹುಟ್ಟಿನಿಂದ ತಂದದ್ದು ಒಂದಷ್ಟು, ಇಲ್ಲಿ

ಸಂಗ್ರಹಿಸಿಕೊಳ್ಳುವುದೊಂದಷ್ಟು, ಕಳೆದುಕೊಳ್ಳುವುದೊಂದಿಷ್ಟು ಮತ್ತು ಗುಣಿಸಿ ಭಾಗಿಸಿ ಉಳಿಸಿಕೊಳ್ಳುವುದೊಂದಿಷ್ಟು ಗುಣಗಳು. ಗುಣಗಳಿದ್ದಷ್ಟು ದಿನವೂ ಕರ್ಮವಿದ್ದೇ ಇರುತ್ತದೆ. ಪ್ರತಿ ಹುಟ್ಟಿನಲ್ಲೂ ಒಂದಿಷ್ಟು ಕರ್ಮಶೇಷವಿದ್ದೇ ಇರುತ್ತದೆ. ಅದೇ ನಮ್ಮ ಮುಂದಿನ ಬದುಕನ್ನು ರೂಪಿಸುತ್ತದೆ.

ಆದರೆ ಪರತತ್ವವನ್ನು ಅನುಸಂಧಾನ ಮಾಡುವ ಜ್ಞಾನಿಗಳು ತಮ್ಮ ಕರ್ಮಕ್ಕೆ ಹೇತುವಾದ ಗುಣಗಳನ್ನು, ತಪಸ್ಸು, ಧ್ಯಾನ, ಸತ್ಸಂಗ, ಸ್ವಾಧ್ಯಾಯ, ಜಿಜ್ಞಾಸೆ ಮತ್ತು ಅನುಸಂಧಾನ ಎಂಬ ಬೆಂಕಿಯಲ್ಲಿ ಸುಟ್ಟು ಇಲ್ಲವಾಗಿಸಿಕೊಳ್ಳುವ ಸಾಧನೆ ಮಾಡುತ್ತಾರೆ. ಜ್ಞಾನದೇವತೆ ಸರಸ್ವತಿಯನ್ನು ಧ್ಯಾನಿಸುವಾಗ 'ಸಾ ಮಾಂ ಪಾತು ಸರಸ್ವತಿ, ನಿ:ಶೇಷ ಜಾಡ್ಯಾಪಃ' ಎಂದು ಬೇಡಿ ಜ್ಞಾನಕ್ಕೆ ಶರಣಾಗುತ್ತಾರೆ. ಅಂತಹವರು ಇಹದ ಅಂಟು ಶೀಘ್ರವಾಗಿ ಬಿಟ್ಟು, ಮಾನ್ಯ ಗುಂಡಪ್ಪನವರು 'ಕರುಮಗಳು ಮರುಬೆಳೆಗೆ ಬಿತ್ತಲ್ಲ' ಎಂದು ಹೇಳುವಂತೆ ಭವದ ಅಂಟಿಂದ ಬಿಡಿಸಿಕೊಂಡು ಮುಕ್ತಿಯ ಕಡೆಗೆ ಸಾಗುತ್ತಾರೆ. ಇದು ಜನ್ಮಜನ್ಮಾಂತರದಲ್ಲಿ ಆಗುವ ಸಂಸ್ಕಾರವಾದ್ದರಿಂದ ಆ ಹಾದಿಯಲ್ಲಿರಬೇಕು, ನಿರಂತರ ಪ್ರಯತ್ನ ಸಾಗಬೇಕು 'ದೇವಸ್ಯ ಭರ್ಗ ಧೀಮಹಿ" ಎನ್ನುವಂತೆ ಜ್ಞಾನಕ್ಕೆ ಸಂಪೂರ್ಣ ಶರಣಾದರೆ ಮುಕ್ತಿಯನ್ನು ಪಡೆಯಬಹುದು.

**ಮುಕ್ತಕ - 797**

**ಸುಟ್ಟ ಹಗ್ಗದ ಬೂದಿ ರೂಪ ಮಾತ್ರದಿ ಬೂದಿ ।**
**ಗಟ್ಟಿ ಜಗವಂತು ತತ್ವಜ್ಞಾನ ಸೋಕೆ ॥**
**ತೊಟ್ಟಿಹುದು ಲೋಕರೂಪವ, ತಾತ್ವಿಕನ ವೃತ್ತಿ ।**
**ಕಟ್ಟದವನಾತ್ಮವನು - ಮಂಕುತಿಮ್ಮ ॥**

ಜಗವಂತು=ಜಗವು+ಅಂತು, ತೊಟ್ಟಿಹುದು =ತೊಟ್ಟು+ ಇಹುದು, ಕಟ್ಟದವನಾತ್ಮವನು=ಕಟ್ಟದು+ಅವನ+ಆತ್ಮವನು, ಅಂತು=ಹಾಗೆ, ಸೋಕೆ=ಸ್ಪರ್ಶಿಸಿದರೆ, ತೊಟ್ಟು=ಧರಿಸಿ, ಕಟ್ಟದು=ಬಂಧಿಸದು,

ಒಂದು ಹಗ್ಗವನ್ನು ಸುಟ್ಟ ನಂತರ ಅದರ ಬೂದಿ ಹಗ್ಗದ ಆಕಾರದಲ್ಲಿ ಇದ್ದರೂ ಹಗ್ಗವಾಗಿರದೆ ಇರುವಂತೆ, ತತ್ವಜ್ಞಾನದ ಬೆಂಕಿಯ ಸ್ಪರ್ಶವಾದ ತತ್ವಶಾಸ್ತ್ರಜ್ಞನು ಲೌಕಿಕನಂತೆ ಕಂಡರೂ ಈ ಜಗತ್ತು ಅವನನ್ನು ತನ್ನತ್ತ ಸೆಳೆಯುವುದರಲ್ಲಿ ವಿಫಲವಾಗುತ್ತದೆ ಎಂದು ತತ್ವಜ್ಞಾನಿಯ ಪರಿಯನ್ನು ಅರುಹಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತತ್ವಶಾಸ್ತ್ರವೆಂದರೆ ಈ ಜಗತ್ತಿಗೆ ಆಧಾರವಾಗಿರುವ ಸತ್ವವನ್ನು ಮತ್ತು ಅದರ ಕ್ರಿಯೆಯನ್ನು ಅರಿಯುವುದು. ಅದೊಂದು ಬೇರೆಯದೇ ಆದ ಲೋಕ. ಈ ಲೋಕಕ್ಕಿಂತ ಭಿನ್ನ. ನಮ್ಮ ಲೋಕವ್ಯವಹಾರವೆಲ್ಲಾ ವ್ಯರ್ಥವೆನ್ನುವ ಭಾವಕ್ಕೆ ಕಾರಣವಾಗಬಹುದಾದ ಲೋಕ. ಆದರೆ ಆ ಲೋಕವನ್ನು ಅರಿಯುವ ಕೆಲಸ ಈ ಲೋಕದಲ್ಲಿ, ಈ ದೇಹವನ್ನು ಹೊತ್ತೇ ಆಗಬೇಕು. ಮಹಡಿಯ ಮೇಲೆ ಹತ್ತಲು, ಹೆಜ್ಜೆ ಇಟ್ಟ ಮೆಟ್ಟಿಲನ್ನು ಬಿಟ್ಟು ಮೇಲಿನ ಮೆಟ್ಟಿಲಿನಮೇಲೆ ಕಾಲಿಡುತ್ತಾ ಮೇಲೇರುವಂತೆ, ಈ ಜಗತ್ತಿನ ತತ್ವ ಮತ್ತು ಸತ್ವದಜ್ಞಾನ ನಮಗೆ ಅರಿವಾಗಬೇಕಾದರೆ ಈ ಜಗತ್ತಿನಲ್ಲಿ ಇದ್ದೇ ಆಗಬೇಕು. "ನ ಕರ್ಮಣಾ, ನ ಪ್ರಜಯಾ, ಧನೇನ, ತ್ಯಾಗೇನೈಕೇ ಅಮೃತತ್ವ ಮಾನಸು:" ಎನ್ನುತ್ತದೆ ಉಪನಿಷತ್ತು. ಎಂದರೆ 'ನಾವು ಮಾಡುವ ಕೆಲಸದಿಂದಲ್ಲ. ನಮ್ಮ ಹಿಂದೆ ಬರುವ ಜನರ ಗುಂಪಿನಿಂದಲ್ಲ ಅಥವಾ ನಾವು ಆರ್ಜಿಸಿದ ಸಂಪತ್ತಿನಿಂದಲ್ಲ, ತ್ಯಾಗದಿಂದ ಮಾತ್ರ ಅಮೃತತ್ವ ಸಿಗುತ್ತದೆ' ಎಂದರ್ಥ. ನಮಗೆ ಪರತತ್ವವನ್ನು ಅರಿಯಲು ಭಾಧಕವಾಗಿರುವುದನ್ನೆಲ್ಲಾ 'ತ್ಯಾಗ' ಮಾಡಬೇಕು.

ಅಲ್ಲಿ 'ದಹ್ರಂ ವಿಪಾಪಂ' ಎನ್ನುವ ಪದ ಪ್ರಯೋಗವೂ ಉಂಟು. ಸುಡಬೇಕು, ಕಸವನ್ನೆಲ್ಲಾ ಸುಟ್ಟರೆ ರಸವು ಉಳಿದುಕೊಳ್ಳುತ್ತದೆ. ಹೊರ ರೂಪ ಅದೇ ಇದ್ದರೂ ಒಳರೂಪ ಬದಲಾಗುತ್ತದೆ. ಹಾಗೆ ಒಳರೂಪ ಬದಲಾದವರೇ ತತ್ವಜ್ಞಾನಿಗಳು. ನಮ್ಮ ನಿಮ್ಮಂತೆ ಸಾಮಾನ್ಯ ಮಾನವರಂತೆಯೇ ಕಂಡರೂ ಒಳಗಿನಿಂದ ಬದುಕಿನ “ಅಂಟಿನಿಂದ ಬಿಡಿಸಿಕೊಂಡು ಮುಕ್ಕಾಗಿರುತ್ತಾರೆ. ಭವ ಬಂಧನದ ಸಂಕೋಲೆಗಳನ್ನು ಬಿಡಿಸಿಕೊಂಡು ಅಂತರಂಗದಲ್ಲಿ ಮುಕ್ತರಾಗಿರುತ್ತಾರೆ. ಹಗ್ಗ ಸುಟ್ಟರೂ ರೂಪವ ಬಿಡದಂತೆ ಇವರೂ ಸಹ ಕಾಮ ದಾದಿಗಳನ್ನು ಸುಟ್ಟು ಶುದ್ಧಾತ್ಮರಾಗಿ ಸದಾಕಾಲ ತತ್ವಜ್ಞಾನದಲ್ಲಿ ಮುಳುಗಿರುತ್ತಾರೆ. ಅವರುಗಳ ಆತ್ಮ ದೇಹ ಮನಸ್ಸು ಬುದ್ಧಿಗಳ ಸಂಸರ್ಗದಲ್ಲಿದ್ದರೂ ಅವುಗಳ ಭಾವಗಳ ಪರಿಧಿಯಿಂದ ಹೊರಗಿದ್ದು ಮುಕ್ತವಾಗಿರುತ್ತದೆ,

ಜಲಘನತೆಯಿಂದ ಕೂಡಿದ ಮೋಡಗಳು ಧರೆಗೆ ಮಳೆಗೆರೆದು ತಮ್ಮನ್ನು ತಾವು ಇಲ್ಲವಾಗಿಸಿಕೊಳ್ಳುವಂತೆ, ತತ್ವಜ್ಞಾನಿಗಳೂ ಸಹ, 'ಕಟ್ಟದವನಾತ್ಮವನು' ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ. ಘನೀಭೂತವಾದ ಪ್ರಾಪಂಚಿಕ ಭಾವಗಳನ್ನೆಲ್ಲಾ ತೊರೆದು ಹಗುರಾಗಿ ಯಾವ ವೃತ್ತದ ಪರಿಧಿಯೊಳಕ್ಕೂ ನಿಲುಕದ ಮತ್ತು ಸಿಲುಕದ ಪರತತ್ವವನ್ನು ತುಂಬಿಕೊಂಡು ಇರುತ್ತಾರೆ. ಅಂತಹ ಸ್ಥಿತಿಗೆ ತಲುಪಲು ಜನ್ಮಜನ್ಮಾಂತರದ ಸಾಧನೆ ಬೇಕು. ಸದ್ವಿಚಾರ, ಸತ್ಸಂಗ ಮತ್ತು ಒಬ್ಬ ಸದ್ಗುರುವಿನ ಮಾರ್ಗದರ್ಶನ ಮತ್ತು ನಿರಂತರ ಸಾಧನೆಯಿಂದ 'ಮುಕ್ತ ಸ್ಥಿತಿ ಗೆ ತಲುಪಬಹುದು.





**ಮುಕ್ತಕ - 798**

**ನೈರಾಶ್ಯನಿರತಂಗೆ ದೇವತೆಗಳಿಂದೇನು ? |**

**ವೈರಾಗ್ಯಪಥಿಕಂಗೆ ನಷ್ಟಭಯವೇನು ? ||**

**ಪಾರಂಗತಂಗಂತರಾಳ ದೂರಗಳೇನು ||**

**ಸ್ವೈರಪಥವಾತನದು - ಮಂಕುತಿಮ್ಮ ||**

ಪಾರಂಗತಂಗಂತರಾಳ=ಪಾರಂಗತಂಗೆ+ಅಂತರಾಳ, ಸ್ವರಪಥವಾತನದು=ಸ್ವರ+ಪಥವು+ಆತನದು

ನೈರಾಶ್ಯನಿರತಂಗೆ=ನಿರಾಸೆಯಲ್ಲಿ ಮುಳುಗಿದವನಿಗೆ, ವೈರಾಗ್ಯಪಥಿಕಂಗೆ= ವೈರಾಗ್ಯದ ಹಾದಿಯಲ್ಲಿ ನಡೆಯುವವನು. ಸ್ವೈರಪಥ=ಸ್ವ ಇಚ್ಛೆಯ ಪಥ

ನಿರಾಶೆಯಿಂದ ಕೂಡಿದವನಿಗೆ ದೇವತೆಗಳಿಂದ ಏನಾಗಬೇಕು? ವೈರಾಗ್ಯದ ಹಾದಿಯಲ್ಲಿ ನಡೆಯುವವನಿಗೆ ನಷ್ಟದ ಭಯವೆಲ್ಲಿರುವುದು? ಅಂತರಂಗದಲ್ಲಿ ಪರತತ್ವವನ್ನು ಅನುಸಂಧಾನ ಮಾಡುವವಗೆ, ಯಾವ ದೂರವೂ ದೊಡ್ಡದಲ್ಲ. ಈ ಮೂರೂ ರೀತಿಯ ಜನರದು 'ಸ್ವ-ಇಚ್ಛೆ' ಯ ಹಾದಿ ಎಂದು ವಿಮರ್ಶೆ ೯ಮಾಡಿದ್ದಾರೆ ಮಾನ್ಯ

ಗುಂಡಪ್ಪನವರು ಈ ಮುಕ್ತಕದಲ್ಲಿ.

ಲೌಕಿಕ ಜೀವನದಲ್ಲಿ ಆಸೆಯೇ ನಮ್ಮನ್ನು ಓಡುವಂತೆ ಮಾಡುತ್ತದೆ. ನಮ್ಮ ಬದುಕಿನಲ್ಲಿ ಕ್ರಿಯಾಶೀಲತೆಗೆ ವೇಗವರ್ಧಕವೇ (Catalyst) 'ಆಸೆ'. ದೇವತೆಗಳನ್ನು ಕುರಿತು ನಾವು ಮಾಡುವ ಪೂಜೆ, ನೇಮ ವ್ರತ, ಹೋಮ ಹವನಗಳೆಲ್ಲವೂ ಆ ದೇವತೆಗಳನ್ನು ಸುಪ್ರೀತಗೊಳಿಸಿ, ನಮ್ಮ ಆಸೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿಯೇ ಅಲ್ಲವೇ? ಆದರೆ ಆ 'ಆಸೆ" ಎಂಬುದು ಯಾರಲ್ಲಿ ಇಲ್ಲವೋ ಅವರಿಗೆ ಆ ದೇವತೆಗಳಿಂದ ಏನಾಗಬೇಕಾಗಿದೆ?. ಬದುಕಿನಲ್ಲಿ ಯಾವುದಕ್ಕಾದರೂ ಭಾವನಾತ್ಮಕವಾಗಿ ಅಂಟಿಕೊಂಡಿದ್ದರೆ ಹಾಗೂ ಅದನ್ನು ಕಳೆದುಕೊಳ್ಳಬೇಕಾದರೆ, ಆಗ ನಷ್ಟದ ಮತ್ತು ಅದರಿಂದುಂಟಾಗುವ ಭಯದ ಚಿಂತೆಯಿರುತ್ತದೆ. ಯಾವುದಕ್ಕೂ ಅಂಟದ ಮತ್ತು ಎಲ್ಲವನ್ನೂ ತೊರೆದ ವಿರಾಗಿಗೆ ಅಂತಹ ಭಯವಿರುವುದಿಲ್ಲ. ಅವನು ನಿಶ್ಚಿಂತ. ಅವನು ಲಾಭ ನಷ್ಟಗಳಿಂದ ವಿಚಲಿತನಾಗುವುದಿಲ್ಲ. ಅವನಿಗೆ ಯಾವುದೇ ಭಯವೂ ಇಲ್ಲ.

ಪಾರಂಗತ ಎಂದರೆ ಸಾಮಾನ್ಯವಾಗಿ ಪಂಡಿತ ಎನ್ನುವ ಅರ್ಥವನ್ನು ಹೇಳುತ್ತಾರೆ. ಆದರೆ 'ಪಾರಂಗತ' ಎಂದರೆ ಲೌಕಿಕ ಮೀರಿ ಪಾರಮಾರ್ಥದೆಡೆಗೆ ಹೊರಟವನು ಎಂದರ್ಥ. ಮಾನ್ಯ ಗುಂಡಪ್ಪನವರು 'ಪಾರಂಗತಂಗಂತರಾಳ ದೂರಗಳೇನು' ಎಂದು ಹೇಳಿದ ಹಾಗೆ ಪಾರಂಗತನಾಗಿ ಪರತತ್ವವನ್ನು ಅಂತರಂಗದಲ್ಲಿ ತುಂಬಿಕೊಂಡವನಿಗೆ, ಅದು ದೂರವಲ್ಲ ಬಹಳ ಸನಿಹ ಎನ್ನುವುದೇ ಸತ್ಯ, ಈಶಾವಾಸ್ಯೋಪನಿಷತ್ತಿನಲ್ಲಿ 'ತದ್ದೂರೇ ತದ್ವಂತಿಕೆ' ಎಂದು ಹೇಳಲ್ಪಟ್ಟಿದೆ. ಇದು ಪಾರಗಂತರ ವಿಚಾರದಲ್ಲಿ ಬಹಳ ಸತ್ಯ. ದೂರದಲ್ಲಿದೆ ಎಂದು ತಿಳಿದ ವಸ್ತು ಅಂತರಂಗದಲ್ಲೇ ಇರುವುದರಿಂದ ಅದು ಅವರಿಗೆ ದೂರವಲ್ಲ.

| 14ಸಂ |
|---|

| | |
|---|---|
| ಕಗ್ಗರಸಧಾರೆ<br>8ಸಂ3 | ಬಂಧ ನಿವಾರಣೆ 794 - |

ಆಸೆಯಿಲ್ಲದ ಬದುಕು, ಬದುಕಿನಲ್ಲಿ ಸಂಪೂರ್ಣ ವೈರಾಗ್ಯ ಮತ್ತು ಪರತತ್ವದ ವಿಚಾರದಲ್ಲಿ ಅಪಾರವಾದ ಜ್ಞಾನವಿರುವವರದು "ಸ್ವೈರ ಪಥ " ಎಂದರೆ ಸ್ವತಂತ್ರವಾದ ಹಾದಿ. ಅವರ ಮಾರ್ಗ ಮತ್ತು ಅವರ ನಡಿಗೆ ಬೇರೆ

ಯಾವುದೇ ವಿಚಾರದಿಂದ ಪ್ರಭಾವಿತವಾಗಿ ವಿಚಲಿತಗೊಳ್ಳುವುದಿಲ್ಲ. ಅವರದು ದಿಟ್ಟ ಮತ್ತು ಧೀರ ನಡೆಯಾಗಿರುತ್ತದೆ. ನಾವು ಅಂಥಹ ಸ್ಥಿತಿಗೆ ತಲುಪಲು ಪ್ರಯತ್ನ ಮಾಡಬಹುದು.

**ಮುಕ್ತಕ – 799**

**ಘೋರವನು ಮೋಹವನು ದೇವತೆಗಳಾಗಿಪರು |**

**ಭೀರು ಯಾಚಕರಾಸ್ಥೆ ತಪ್ಪದಿರಲೆಂದು ||**

**ಆರಿಂದಲೇಂ ಭೀತಿ, ಏಂ ಬಂದೊಡದ ಕೊಳುವ |**

**ಪಾರಮಾರ್ಥಿಕನಿಗೆಲೊ ? - ಮಂಕುತಿಮ್ಮ ||**

ದೇವತೆಗಳಾಗಿಪರು=ದೇವತೆಗಳು+ಆಗಿಪರು, ಯಾಚಕರಾಸ್ಥೆ=ಯಾಚಕರ+ಆಸ್ಥೆ, ತಪ್ಪದಿರಲೆಂದು=ತಪ್ಪದೆ+ಇರಲೆಂದು, ಅರಿಂದಲೇಂ=ಆರಿಂದಲು+ಏಂ, ಬಂದೊಡದ=ಬಂದೊಡೆ+ಅದ, ಪಾರಮಾರ್ಥಿಕನಿಗೆಲೊ=ಪಾರಮಾರ್ಥಿಕನಿಗೆ+ಎಲೊ.
ಭೀರು=ಹೆದರಿಕೆಯುಳ್ಳವ, ಯಾಚಕ=ಬೇಡುವವ,ಆಸ್ಥೆ=ನಂಬಿಕೆ, ಶ್ರದ್ಧೆ, ಭೀತಿ=ಭಯ, ಹೆದರಿಕೆ,
ಕೊಳುವ=ತೆಗೆದುಕೊಳ್ಳುವ

ಭಯಪಡುವ ಮತ್ತು ಯಾಚಕರಾದ ಜನರು ತಮ್ಮಲ್ಲಿ ಆಸ್ಥೆ ಮತ್ತು ಶ್ರದ್ಧೆಗಳನ್ನು ಎಲ್ಲಿ ಕಳೆದುಕೊಂಡುಬಿಡುವರೋ ಎಂದು ದೇವತೆಗಳು, ಭುವಿಯ ಮನುಜರಿಗೆ ಮೋಹವನ್ನು ಮತ್ತು ಆ ಮೋಹದಿಂದುಂಟಾಗುವ ಘೋರವಾದ ಕಷ್ಟಗಳನ್ನು ನೀಡುತ್ತಾರೆ. ಆದರೆ ಏನೇ ಬಂದರೂ ತೆಗೆದುಕೊಳ್ಳುತ್ತೇನೆ. ಒಪ್ಪಿಕೊಳ್ಳುತ್ತೇನೆ ಮತ್ತು ತಡೆದುಕೊಳ್ಳುತ್ತೇನೆ ಎನ್ನುವ ಧೋರಣೆಯನ್ನು ಪಾಲಿಸುವ ಪಾರಮಾರ್ಥವನ್ನು ನಂಬಿಕೊಂಡವನಿಗೆ ಯಾರಿಂದಲೂ ಭೀತಿಯಿರುವುದಿಲ್ಲ ಎಂದು ವಿಮರ್ಶಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಪರಮಾರ್ಥವನ್ನು ಅನುಸಂಧಾನ ಮಾಡುವವರು, ಆ ಪರಮಾತ್ಮನಲ್ಲಿ, ಪರಮಾತ್ಮನನ್ನು ಅಥವಾ ಪರತತ್ವವನ್ನು ಹೊರತು ಬೇರೆ ಏನನ್ನೂ ಯಾಚಿಸುವುದಿಲ್ಲ. ಪರಮಾರ್ಥವನ್ನು ಬಿಟ್ಟು ಈ ಪ್ರಪಂಚದ ಸೆಳೆತಗಳಿಗೆ ಸಿಕ್ಕಿ, ಇಲ್ಲಿನ ಭಯಂಕರ ಪರಿಸ್ಥಿತಿಗಳನ್ನು ಎದುರಿಸಲಾಗದೆ ಎದೆಗುಂದಿ ಹೆದರುವವರು ಸದಾ ಕಾಲ ಲೌಕಿಕ ಭೋಗಗಳನ್ನು ಯಾಚಿಸುತ್ತಾ, ತಮ್ಮ ಲೌಕಿಕ ಕಷ್ಟಗಳನ್ನು ನೀಗಿಸುವಂತೆ ಆ ಪರಮಾತ್ಮನನ್ನು ಬೇಡುತ್ತಾ ಇರುತ್ತಾರೆ. ಹಾಗಾಗಿ ಅವರಿಗೆ ಪರಮಾತ್ಮನಲ್ಲಿ ಆ ರೀತಿಯ ಶ್ರದ್ಧೆ ಮತ್ತು ನಂಬಿಕೆ. ಬೇರೆ ಬೇರೆ ದೇವತೆಗಳಿಂದ ಬೇರೆ ಬೇರೆ ಅನುಕೂಲಗಳಾಗುತ್ತದೆಂಬ 'ಕುರುಡು' ನಂಬಿಕೆಯಿಂದ ಇರುತ್ತಾರಾದ್ದರಿಂದ, ಆ ದೇವತೆಗಳೂ ಸಹ ಜನರಿಗೆ

ಕಷ್ಟಗಳನ್ನು ಕೊಟ್ಟು ತಮ್ಮಲ್ಲಿ ಜನರ ನಂಬಿಕೆಯನ್ನು ದೃಢವಾಗಿರಿಸಿಕೊಳ್ಳುತ್ತಾರೇನೋ, ಎಂದು ಮಾನ್ಯ ಗುಂಡಪ್ಪನವರು ಒಂದು ವಿಚಾರವನ್ನು ವಿಡಂಬನಾತ್ಮಕವಾಗಿ ಹೇಳಿದ್ದಾರೆ.





ಬಿಕ್ಷುಕರಿಗೆ ಸ್ವಂತವಾಗಿ ಕೆಲಸಮಾಡಲು ಹೇಗೆ ಕೈಲಾಗದತನವೋ, ಸೋಮಾರಿತನವೋ ಇರುತ್ತದೆಯೋ ಹಾಗೆ ಪರತತ್ವವನ್ನು ಅಂತರಂಗಕ್ಕೆ ತಂದುಕೊಳ್ಳಲಾಗದವರು ಪ್ರಪಂಚದ ವ್ಯಾಮೋಹಕ್ಕೆ ಬಿದ್ದು ಕಷ್ಟಪಡದೇ ಫಲ ದೊರಕಬೇಕೆಂಬ ಭಾವದಿಂದ, ಪೂಜೆ, ಪುನಸ್ಕಾರ, ಹೋಮ, ಹವನ, ಅರ್ಚನೆಗಳನ್ನೂ ಮಾಡಿಸುತ್ತಾ, 'ದೇವರೇ ನನಗೆ ಇದು ಸಿಕ್ಕರೆ, ತಕ್ಷಣ 'ನೂರು ತೆಂಗಿನಕಾಯಿ ಒಡೆಯುವೆ' ಎಂದೋ ಅಥವಾ ಇನ್ನೇನ್ನನ್ನೋ ಆ ದೇವರಿಗೆ 'ಲಂಚ'ವಾಗಿ ಕೊಡಲು ಸಿದ್ಧರಾಗುತ್ತಾರೆ. ಕೊಡಲಾಗದವರು ಸುಮ್ಮನೆ ಬೇಡುತ್ತಾರೆ. ಏನಾಗುತ್ತದೋ ಎಂದು ಕೊರಗುತ್ತಾರೆ. ಕಷ್ಟಪಡುತ್ತಾರೆ, ಹಲುಬುತ್ತಾರೆ ಮತ್ತು ಭಯಪಡುತ್ತಾರೆ. ಈ ಭಯವೇ ಇವರಲ್ಲಿ ಆ ದೇವತೆಗಳಲ್ಲಿನ ಶ್ರದ್ಧೆಯನ್ನು ಹೆಚ್ಚಿಸುತ್ತದೆ. ಈ ಜನರ ಕೊರತೆ ಮತ್ತು ಭಯಗಳೇ ಈ ದೇವತೆಗಳ ಇಡುಗಂಟು (capital).

ಯಾರಿಂದಲೂ ಏನನ್ನೂ ಬೇಡದೆ ಯಾವುದಕ್ಕೂ ಅಂಟಿಕೊಳ್ಳದೆ ಇರುವುದರಿಂದ ಯಾವುದನ್ನಾದರೂ ಕಳೆದುಕೊಳ್ಳುವ ಭಯವಿರುವುದಿಲ್ಲವಾದ್ದರಿಂದ, ಪರತತ್ವವನ್ನು ಅನುಸಂಧಾನಮಾಡಿ ಅದನ್ನು ತನ್ನ ಒಳಕ್ಕೆ ಇಳಿಸಿಕೊಂಡವನಿಗೆ ಯಾವ ಭಯವೂ ಇರುವುದಿಲ್ಲ. ಬಂದದ್ದನ್ನು ಬಂದ ಹಾಗೆ ಸ್ವೀಕರಿಸುವ ಸ್ವಭಾವವಿರುವುದರಿಂದ ಅವನ ನಿರ್ಲಿಪ್ತತೆಗೆ ಮತ್ತು ಪರತತ್ವ ಅನುಸಂಧಾನಕ್ಕೆ ಮತ್ತಷ್ಟು ಇಂಬುಕೊಟ್ಟಂತಾಗುತ್ತದೆ. ಇದು ಯಾರು ಬೇಕಾದರೂ ಅಭ್ಯಾಸಮಾಡಬಹುದಾದ ವಿಷಯ ಮತ್ತು ಸಾಧಿಸಬಹುದಾದ ವಿಚಾರ. ಪ್ರಯತ್ನವನ್ನು ಮಾಡಿದರೆ ಎಲ್ಲರಿಗೂ ಸಾಧ್ಯ.

**ಮುಕ್ತಕ – 8ಸಂಸಂ**

**ಹಣ್ಣೇನು ಕಾಯೇನು ಹೊಟ್ಟೆ ತುಂಬಿರುವಂಗೆ |**

**ಪುಣ್ಯವೇಂ ಪಾಪವೇಂ ಪೂರ್ಣದರ್ಶನಿಗೆ ||**

**ಉನ್ನತ ಶಿಖರದಿಂ ತಿಟ್ಟೇನು ಕುಳಿಯೇನು |**

**ಪೂರ್ಣತೆಗೆ ಸೊಟ್ಟೇನು ? - ಮಂಕುತಿಮ್ಮ ||**

ತುಂಬಿರುವಂಗೆ=ತುಂಬಿರುವವನಿಗೆ, ಉನ್ನತ ಶಿಖರದಿಂ=ಎತ್ತರದ ಬೆಟ್ಟದಿಂದ, ತಿಟ್ಟು= ದಿಣ್ಣೆ, ಕುಳಿ=ಹಳ್ಳ

ಹೊಟ್ಟೆ ತುಂಬಿ, ಬೇರೇನೂ ತಿನ್ನಲು ಇಷ್ಟಪಡದವನಿಗೆ ಹಣ್ಣಾದರೇನು? ಕಾಯಾದರೇನು? ಪರತತ್ವದ ಪೂರ್ಣ ದರ್ಶನವಾದವನಿಗೆ ಪಾಪವೇನು? ಪುಣ್ಯವೇನು? ಎತ್ತರದ ಬೆಟ್ಟದಲ್ಲಿ ನಿಂತು ನೋಡುವವನಿಗೆ ಕೆಳಗಿನ ಭೂಭಾಗದಲ್ಲಿರುವ ಹಳ್ಳ ದಿಣ್ಣೆಗಳು ಸಮನಾಗಿ ಕಾಣುವಂತೆ ಪೂರ್ಣತೆಯನ್ನು ಸಾಧಿಸಿದವನಿಗೆ ಯಾವುದೂ ಸೊಟ್ಟಗೆ ಕಾಣುವುದಿಲ್ಲ, ಎಂದು ಹೇಳುತ್ತಾರೆ ಈ ಮುಕ್ತಕದಲ್ಲಿ, ಸಂಪೂರ್ಣ ತೃಪ್ತಿಯನ್ನು ಪಡೆದು ಮತ್ತೇನನ್ನೂ ಆಸೆಪಡದವನ ಮುಂದೆ, ಏನೇ ಇದ್ದರೂ ಅವನನ್ನು ಪ್ರಲೋಭಗೊಳಿಸಲು ಸಾಧ್ಯವಿಲ್ಲ. ಅವನು ತೃಪ್ತನಷ್ಟೇ ಅಲ್ಲ, ಅವನು ಆಸೆಯನ್ನು ಗೆದ್ದಿರುವವನು. ಅವನ ಮುಂದೆ ಇಡೀ ಜಗತ್ತಿನ ಎಲ್ಲ ಭೋಗವಸ್ತುಗಳನ್ನು ಇಟ್ಟರೂ ಅವನು ವಿಚಲಿತನಾಗುವುದಿಲ್ಲ. ಹಾಗೆಯೇ ಪರತತ್ವದ ದರ್ಶನವಾದವನಿಗೆ ಅವನ ಮಾಡುವ





ಸಂಪೂರ್ಣ ತೃಪ್ತಿಯನ್ನು ಪಡೆದು ಮತ್ತೇನನ್ನೂ ಆಸೆಪಡದವನ ಮುಂದೆ, ಏನೇ ಇದ್ದರೂ ಅವನನ್ನು ಪ್ರಲೋಭಗೊಳಿಸಲು ಸಾಧ್ಯವಿಲ್ಲ. ಅವನು ತೃಪ್ತನಷ್ಟೇ ಅಲ್ಲ, ಅವನು ಆಸೆಯನ್ನು ಗೆದ್ದಿರುವವನು. ಅವನ ಮುಂದೆ ಇಡೀ

ಜಗತ್ತಿನ ಎಲ್ಲ ಭೋಗವಸ್ತುಗಳನ್ನು ಇಟ್ಟರೂ ಅವನು ವಿಚಲಿತನಾಗುವುದಿಲ್ಲ. ಹಾಗೆಯೇ ಪರತತ್ವದ ದರ್ಶನವಾದವನಿಗೆ ಅವನ ಮಾಡುವ ಕೆಲಸಗಳಲ್ಲಿ ಯಾವುದು ಪಾಪ ಅಥವಾ ಯಾವುದು ಪುಣ್ಯ ಎಂದು ಯೋಚಿಸುವ ಅವಶ್ಯಕತೆಯೇ ಬರುವುದಿಲ್ಲ. ಏಕೆಂದರೆ ಅವನು ಮಾಡುವ ಎಲ್ಲ ಕೆಲಸಗಳೂ 'ತಾನು ಪರತತ್ವದ ಪ್ರೇರಣೆಯಿಂದ, ಅದರ ಆಣತಿಯಂತೆ, ಅದಕ್ಕೋಸ್ಕರ ಮಾಡುತ್ತಿದ್ದೇನೆ' ಎನ್ನುವ ಭಾವವಿರುತ್ತದೆ.

ಎತ್ತರದ ಬೆಟ್ಟವನ್ನು ಹತ್ತಿ ನಿಂತವನಿಗೆ ತಳದಲ್ಲಿರುವ ಭೂಮಿಯಲ್ಲಿನ ಏರು ತಗ್ಗುಗಳು, ಹಳ್ಳ ದಿಣ್ಣೆಗಳು, ಎಲ್ಲವೂ ಹೇಗೆ ಸಮನಾಗಿ ಕಾಣುತ್ತದೆಯೋ, ಹಾಗೆಯೇ ಪರತತ್ವವನ್ನು ಅಂತರಂಗದಲ್ಲಿ ತುಂಬಿಕೊಂಡು 'ಅರಿವಿನ ಉತ್ತುಂಗ ಶಿಖರ'ದಲ್ಲಿರುವವನಿಗೆ ಜಗತ್ತಿನ ಸಕಲದಲ್ಲೂ ಬೇಧಭಾವ ನಶಿಸಿ ಎಲ್ಲದರಲ್ಲೂ ಆ ಪರತತ್ವವನ್ನೇ ಕಾಣುವ ಕ್ಷಮತೆಯುಂಟಾಗಿ 'ಆತ್ಮವತ್ ಸರ್ವ ಭೂತೇಷು' ಎನ್ನುವ ಭಾವ ತುಂಬಿ ಇಡೀ ಜಗತ್ತನ್ನೇ ಅಪ್ಪಿಕೊಂಡು ಪ್ರೀತಿಸುವ ಗುಣವುಂಟಾಗುತ್ತದೆ. ಆ ಸ್ಥಿತಿಯಲ್ಲಿ ಅವನಿಗೆ ಯಾವುದೂ ಸೊಟ್ಟಗೆ ಕಾಣದೆ, ಎಲ್ಲದರಲ್ಲೂ ಒಂದು 'ಪರತತ್ವದ ಕಾರಣ, ಪೂರ್ಣತೆ ಮತ್ತು ಲೀಲಾವಿನೋದ' ವೇ ಕಾಣುತ್ತದೆ.

ಆದರೆ ಎಲ್ಲಿಯತನಕ ನಮ್ಮನ್ನು ನಾವು ಈ 'ದೇಹ, ಮನಸ್ಸು ಮತ್ತು ಬುದ್ಧಿ' ಗಳಲ್ಲಿ ಗುರುತಿಸಿಕೊಳ್ಳುತ್ತೇವೆಯೋ, ಎಲ್ಲಿಯ ತನಕ ಇಡೀ ಜಗತ್ತನ್ನು ವೈವಿಧ್ಯಮಯ ರೂಪಗಳಲ್ಲಿ ಕಾಣುತ್ತೇವೆಯೋ, ಅಲ್ಲಿಯತನಕ ನಮಗೆ ಮನುಷ್ಯ ಮನುಷ್ಯರಲ್ಲಿ ಬೇಧವನ್ನು ಕಾಣುವ ಪ್ರವೃತ್ತಿ ಹೋಗಲಾರದು. ಎಂದು, ನಾವು ಈ ಜಗತ್ತಿನ ಎಲ್ಲವೂ ಆ ಪರತತ್ವದಿಂದ ಆವೃತವಾಗಿ ತನ್ನದೇ ಲೀಲೆಯಲ್ಲಿ ಮೆರೆಯುತ್ತಿದೆ ಎಂದು ಅರಿವಾಗುತ್ತದೋ ಮತ್ತು ಆ ಅರಿವು ದೃಢವಾಗುತ್ತದೋ ಅಂದು ನಮಗೆ ಜಗತ್ತಿನ ಏಕಾತ್ಮಭಾವದ ಅನುಭವವಾಗುತ್ತದೆ.

"ಜಗತ್ತಿನ ಅಂಟನ್ನು ಬಿಡಿಸಿಕೊಂಡರೆ ಜಗತ್ಕಾರಕನ ನಂಟು ಬೆಳೆಯಬಹುದು". ಪ್ರಯತ್ನಿಸಿದರೆ ಸಾಧ್ಯ.

**ಮುಕ್ತಕ – 8ಸಂ1**

**ಕೋಡುಗಲ್ಲನ್ನು ಹತ್ತಿ ದೂರವನು ನೋಳಂಗೆ |**
**ಗೋಡೆಗೊತ್ತುಗಳೇನು? ಮೇಡು ಕುಳಿಗಲೇನು ||**
**ನೋಡು ನೀನುನ್ನತದಿ ನಿಂತು ಜನಜೀವಿತವ |**
**ಮಾಡುದಾರದ ಮನವ – ಮಂಕುತಿಮ್ಮ ||**

ನೀನುನ್ನತದಿ=ನೀನು+ಉನ್ನತದಿ, ಮಾಡುದಾರದ=ಮಾಡು+ಉದಾರದ

ನೋಳ್ಪಗೆ =ನೋಡುವವನಿಗೆ,ಗೊತ್ತು=ಗೂಟ, ಕುಳಿ=ಹಳ್ಳ

ಎತ್ತರದ ಕೋಡುಗಲ್ಲನ್ನು ಹತ್ತಿ, ಅಲ್ಲಿಂದ ಕೆಳಗೆ ನೋಡುವವನಿಗೆ, ಕೆಳಗೆ ಕಟ್ಟಿರುವ ಗೋಡೆಗಳಾಗಲೀ, ಗೂಟಗಳಾಗಲೀ, ಗುಡ್ಡಗಳಾಗಲೀ, ಹಳ್ಳಗಳಾಗಲೀ ಹೇಗೆ ಬಿಡಿಬಿಡಿಯಾಗಿ ಕಾಣುವುದಿಲ್ಲವೋ, ಹಾಗೆಯೇ ನೀನು





ಅರಿವಿನ ಉನ್ನತದಿ ನಿಂತು ಉದಾರವಾದ ಮನಸ್ಸಿನಿಂದ ಜನರ ಜೀವಿತವ ನೋಡು ಎಂದು ಆದೇಶಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಇಲ್ಲಿ ಕೋಡುಗಲ್ಲು ಎನ್ನುವುದು ಕೇವಲ ಸೂಚ್ಯವಾಗಿದೆ. ಎಂದರೆ ನಾವು ಸಮಾಜದ ಜನರನ್ನು ಒಂದು ಉದಾರತೆಯ ಭಾವದಿಂದ ಮತ್ತು ಅರಿವಿನ ಔನ್ನತ್ಯದ ಸ್ಥಿತಿಯಿಂದ ನೋಡಬೇಕು ಎನ್ನುವುದೇ ಮುಖ್ಯ ಆದೇಶ. ಒಂದು ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳದೆ ಸಂಕುಚಿತತೆಯಿಂದ ನೋಡಿದಾಗ ನಮಗೆ ಕಾಣುವುದು ಕೇವಲ ನ್ಯೂನತೆಗಳೇ ಹೊರತು ಗುಣಗಳಲ್ಲ. ಆದರೆ ಅಲ್ಲಿ ಗುಣವಿಲ್ಲದಿದ್ದರೂ, ನಮ್ಮ ದೃಷ್ಟಿ ವಿಶಾಲವಾದಾಗ ಅಥವಾ ಅರಿವಿನ ಉನ್ನತ ಶಿಖರದಿಂದ ನಾವು ಅದನ್ನು ನೋಡಿದಾಗ ನಮಗೆ ಅಲ್ಲಿನ ಕೊರತೆಗಳಾಗಲೀ ನ್ಯೂನತೆಗಳಾಗಲೀ ಕಾಣುವುದಿಲ್ಲ.

ಜಗತ್ತಿನ ಜನರನ್ನು ಅವರ ಕೊರತೆ ಮತ್ತು ನ್ಯೂನತೆಗಳನ್ನು ನೀಗಿಕೊಳ್ಳುವಂತೆ ಮಾಡಲು ಸಾಧ್ಯವಿಲ್ಲ ಅಥವಾ ಬಹಳ ಕಷ್ಟ ಸಾಧ್ಯ. ಬೇರೆ ಬೇರೆ ರೀತಿಯ ಸಂಸ್ಕಾರಗಳು ಮತ್ತು ಪೂರ್ವಕರ್ಮಗಳನ್ನು ಹೊತ್ತು ಬಂದಿರುವ ಜಗತ್ತಿನ ಜನರಲ್ಲಿ ಕುಂದುಗಳು ಇರುತ್ತವೆ. ಅದನ್ನು ತಿದ್ದುವ ಬದಲು, ಒಂದು ಗೆರೆಯನ್ನು ಚಿಕ್ಕದಾಗಿಸಲು ಅದರ ಪಕ್ಕದಲ್ಲಿ ಒಂದು ದೊಡ್ಡಗೆರೆಯನ್ನು ಎಳೆಯುವಂತೆ, ನಾವು ಬೆಳೆದು, ನಮ್ಮ 'ನೋಡುವ ಪರಿ' ಯನ್ನು ತಿದ್ದಿಕೊಂಡರೆ, ಎಲ್ಲರನ್ನೂ

ಅವರವರುಗಳು ಹೇಗಿದ್ದಾರೋ ಹಾಗೆಯೇ ಒಪ್ಪಿಕೊಂಡು, "ಅವರು ಹೀಗಿದ್ದರೆ ಚೆನ್ನ ಎಂದೋ ಅಥವಾ ಅವರು ಹಾಗಿದ್ದರೆ ನನಗಿಷ್ಟ' ಎನ್ನುವ ಸಂಕುಚಿತತೆಯನ್ನು ತೊರೆದು ಒಂದು ವಿಶಾಲ ಮನೋಭಾವದಿಂದ ಅಪ್ಪಿಕೊಂಡರೆ ನಾವು ನಮ್ಮ ಮನಸ್ಸನ್ನೂ ಶುದ್ಧವಾಗಿಟ್ಟುಕೊಳ್ಳಬಹುದು ಮತ್ತು ಅನ್ಯರೊಂದಿಗೆ ಒಳ್ಳೆಯ ಬಾಂಧವ್ಯದಿಂದ ಬೆಸೆದುಕೊಳ್ಳಬಹುದು.

ಇದಕ್ಕೆ ನಾವು, ನಮ್ಮಂತರಂಗದಲ್ಲಿ ಅರಿವು, ಸದ್ಭಾವ ಮತ್ತು ದೃಷ್ಟಿ ವೈಶಾಲ್ಯತೆಯನ್ನು ಬೆಳೆಸಿಕೊಂಡರೆ ಮಾತ್ರ ಸಾಧ್ಯ. ನಾವು ಅಂತರಂಗದಲ್ಲಿ ಬೆಳೆದರೆ ಮಾತ್ರ ಸಾಧ್ಯ. ಇದನ್ನು ಸಾಧಿಸಬೇಕಾದರೆ, ಮೊದಲು ಮೌನ, ಚಿಂತನೆ, ಮಂಥನ, ಪೂರ್ವಾಗ್ರಹವಿಹೀನತೆ ಇವೆಲ್ಲವನ್ನೂ ಹಂತ ಹಂತವಾಗಿ ನಮ್ಮೊಳಗೇ ನಾವು ಬೆಳೆಸಿಕೊಂಡರೆ ಆಗ ನಾವು ಮಾನ್ಯ ಗುಂಡಪ್ಪನವರು ನೀನುನ್ನತದಿ ನಿಂತು' ಎಂದು ಹೇಳುವಂತೆ, ಎತ್ತರಕ್ಕೆ ಬೆಳೆದು 'ಮಾಡುದಾರದ ಮನವ' ಎಂದು ಅವರು ಹೇಳುವಂತೆ ಉದಾರತೆಯಿಂದ ಮತ್ತು ಭಾವ ವೈಶಾಲ್ಯತೆಯಿಂದ ಜಗತ್ತನ್ನು ನೋಡಬಹುದು. ಇಂತಹ ಸ್ಥಿತಿಯನ್ನು ಸಾಧಿಸಿದರೆ ನಮ್ಮ ಜೀವನ ಸಾರ್ಥಕವಾಗಬಹುದು.





**ಮುಕ್ತಕ – 8ಸ೦2**

**ಹರ್ಮ್ಯಾಗ್ರಕೇರಿ ಸೋಪಾನದಿನತೀತನ ।**

**ನಿರ್ಮಮತೆಗೇರಿ ಕರ್ಮಾತೀತನಪ್ಪೆ ॥**

**ಬ್ರಹ್ಮಪದದಿಂದ ಧರ್ಮಾಧರ್ಮಗಳ ನಿಯಮ ।**

**ನಿರ್ಮಾಲ್ಯವಾಗುವುದು – ಮಂಕುತಿಮ್ಮ ॥**

ಹರ್ಮ್ಯಾಗ್ರಕೇರಿ= ಹರ್ಮ್ಯಾಗ್ರಕೆ+ಏರಿ, ಸೋಪಾನದಿನತೀತನಹೆ=ಸೋಪಾನದಿಗೆ +ಅತೀತನಹೆ, ನಿರ್ಮಮತೆಗೇರಿ=ನಿರ್ಮಮತೆಗೆ+ಏರಿ, ಕರ್ಮಾತೀತನಪ್ಪೆ =ಕರ್ಮ+ಅತೀತನು+ಅಪ್ಪೆ

ಹರ್ಮ್ಯಾಗ್ರ=ಉಪ್ಪರಿಗೆ, ಮಹಡಿಯ ತುದಿ, ಸೋಪಾನ= ಮೆಟ್ಟಿಲು, ನಿರ್ಮಾಲ್ಯ= ಹಿಂದಿನ ದಿನ ದೇವರಿಗಿಟ್ಟ ಹೂಗಳು.

ಉಪ್ಪರಿಗೆಯನ್ನು ಏರಿದಮೇಲೆ, ಅದನ್ನೇರಲು ಬಳಸಿದ ಮೆಟ್ಟಿಲುಗಳಿಗೆ ನೀನು ಅತೀತನಾಗುವೆ. ಮಮಕಾರವನ್ನು ತೊರೆದರೆ, ಕರ್ಮಕ್ಕೆ ಅತೀತನಾಗಿ ನಿಲ್ಲುವೆ. ಅದೇ ರೀತಿ ಬ್ರಹ್ಮಜ್ಞಾನದ ಉತ್ತುಂಗ ಸ್ಥಿತಿಗೆ ತಲುಪಿದ ನಂತರ ಧರ್ಮ ಮತ್ತು ಅಧರ್ಮದ ನಿಯಮಗಳಿಗೆಲ್ಲ ಅತೀತನಾಗುವೆ. ಹೀಗೆ ಮೇಲೇರಲು ಬಳಸಿದ, ಮೆಟ್ಟಿಲು, ಕರ್ಮಗಳು ಮತ್ತು ಧರ್ಮಾಧರ್ಮದ ನಿಯಮಗಳು, ಹಿಂದಿನ ದಿನ ದೇವರಿಗೆ ಅಲಂಕಾರಕ್ಕಾಗಿ ಇಡಲ್ಪಟ್ಟ ಹೂಗಳನ್ನು, ಮರುದಿನ ನೈರ್ಮಾಲ್ಯವೆಂದು ತೆಗೆದುಹಾಕುವಂತೆ ಎಂದು, ಒಂದು ಅದ್ಭುತ ವಿಚಾರವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು, ಪರತತ್ವದಿಂದ ಕೂಡಿದ ಪರಬ್ರಹ್ಮವಸ್ತು. ಎರಡು, ಅದರ ಮಹಿಮೆಯಿಂದಲೇ ಸೃಷ್ಟಿಸಲ್ಪಟ್ಟ ಈ ಪ್ರಪಂಚ ಮತ್ತು ಈ ಪ್ರಪಂಚದೊಳಗೆ ನಮ್ಮ ಇರವು. ಜಗತ್ತಿನಲ್ಲಿರುವಾಗ ಜಗತ್ಕಾರಕನನ್ನು ಅರಿಯುವ ಹಂಬಲ, ಅದಕ್ಕಾಗಿ ಬೇಕಾದಷ್ಟು ದಾರಿಗಳು, ಮಹಡಿಯನ್ನು ಹತ್ತಲುಪಯೋಗಿಸುವ ಮೆಟ್ಟಿಲುಗಳು ಕೇವಲ ಮೆಟ್ಟಿಲುಗಳೇ ಹೊರತು, ಮಹಡಿಯಾಗಲು ಸಾಧ್ಯವಿಲ್ಲ. ಮೇಲೆ ಹತ್ತಿದ ಮೇಲೆ ಹೇಗೆ ಆ ಮೆಟ್ಟಿಲುಗಳ ಅವಶ್ಯಕತೆ ಇರುವುದಿಲ್ಲವೋ, ಹಾಗೆಯೇ ಪರಬ್ರಹ್ಮವಸ್ತುವನ್ನು ಅರಿತ ನಂತರ ನಮ್ಮ ಪ್ರಯತ್ನಕ್ಕೆ ಪೂರಕವಾಗಿದ್ದ ಆಚಾರ ವಿಚಾರಗಳು, ಸತ್ಕರ್ಮ, ಸತ್ಸಂಗ, ಸದ್ವಿಚಾರಗಳು ನಮ್ಮಿಂದ ಮಾಯವಾಗಬೇಕು. ಏಕೆಂದರೆ ಅರಿವಿನ ಉತ್ತುಂಗಕ್ಕೆ ತಲುಪಿದ ಮೇಲೆ ಮತ್ತೆ ಹಿಂದೆ ಬರುವ ಸಾಧ್ಯತೆ ಇಲ್ಲ.

ಪ್ರತಿಯೊಬ್ಬರಿಗೂ ಅವರವರದೇ ದಾರಿ. ಯಾವುದೂ, ಮೇಲೂ ಅಲ್ಲ ಮತ್ತ್ಯಾವುದೂ ಕೀಳೂ ಅಲ್ಲ. ಅವು ಪಾರಮಾರ್ಥವನ್ನು ಅರಿಯುವ ಸಾಧನಗಳೇ ಹೊರತು ಅವೇ ಪರಮಾರ್ಥವಾಗುವುದಕ್ಕೆ ಸಾಧ್ಯವಿಲ್ಲ. ಯಾರಿಗೆ ಯಾವ ಮಾರ್ಗ ಬೇಕೋ ಅಥವಾ ಹಿತವೆನಿಸುತ್ತದೆಯೋ ಆ ಮಾರ್ಗದಲ್ಲಿ ಹೋಗಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ನಾವು ಈ ಜಗತ್ತಿನಲ್ಲಿ ಕಾಣುವುದೇನೆಂದರೆ, ಮೆಟ್ಟಿಲೇ ಮಹಡಿಯಂಬಂತೆ ಆಚಾರ ಮತ್ತು ಸಂಪ್ರದಾಯಗಳಿಗೆ ಜೋತುಬಿದ್ದು ಪರತತ್ವವನ್ನು ಸಂಪೂರ್ಣ ಮರೆತುಹೋಗುವುದು, ಜಗತ್ತಿನಲ್ಲಿ ವಸ್ತು, ವಿಷಯ ಮತ್ತು ವ್ಯಕ್ತಿಗಳೊಡನೆ ಮಮಕಾರವನ್ನು ಬೆಳೆಸಿಕೊಂಡು, ಕರ್ಮಗಳನ್ನು ಮಾಡುತ್ತಾ ಅವುಗಳಿಗೇ

ಕಗ್ಗರಸಧಾರೆ ಬಂಧ ನಿವಾರಣೆ 794 - 8ಸಂ3

ಪ್ರಪಂಚದಲ್ಲಿ ಮುಳುಗಿ ಹೋಗಿ ಪರತತ್ವವನ್ನು ತೊರೆದುಬಿಡುವುದು ಮತ್ತು ಧರ್ಮದ ಹೆಸರಿನಲ್ಲಿ ಕೇವಲ ಅಧರ್ಮವನ್ನು ಆದರಿಸುವುದು.

ಎಂತಹ ವಿಪರ್ಯಾಸ. ಸುಲಭವಾದ ಮಾರ್ಗಗಳನ್ನು ಕ್ಲಿಷ್ಟವಾಗಿಸುತ್ತಾ, 'ನನಗೆ ತಿಳಿದಿದೆ, ನಿನಗಿಲ್ಲ, ನಾ ಹೇಳುವುದನ್ನು ಕೇಳು, ನಾ ಹೇಳುವುದೇ ಸರಿ, ನಾ ಹೇಳಿದ್ದನ್ನು ಕೇಳದಿದ್ದರೆ ನಿನಗೆ ನರಕವೇ ಗತಿ' ಎಂದು ಮುಗ್ಧ ಜನರನ್ನು ಹೆದರಿಸಿ ಅವರನ್ನು ಸ್ವತಂತ್ರವಾಗಿ ಬೆಳೆಯಲು ಬಿಡದೆ, ತಮ್ಮ ಆದಿಪತ್ಯವನ್ನು ಸಾಧಿಸಿ ಅಹಂಕಾರದಿಂದ ಬೀಗುವ ದುರಾಚಾರಿಗಳನ್ನು ನಾವು ನೋಡುತ್ತಿದ್ದೇವೆ ಅಲ್ಲವೇ? ಕಾರಣವೇನೆಂದರೆ ಇಂದಿನ ಕಾಲದಲ್ಲಿ ಸದ್ಗುರು ಅಥವಾ ನಿಜಾರ್ಥದ ಗುರು ನಮಗೆ ಸಿಗುವುದೇ ಬಹಳ ದುಸ್ತರ. ಬುದ್ಧಿವಂತರಾದವರು, ಪರಿಣಾಮಗಳ ಭೀತಿಯಿಂದ ಹೊರಬಂದು, ತಮ್ಮದೇ ಆದ ಮಾರ್ಗವನ್ನು ಕಂಡುಕೊಂಡು, ಆ ಮಾರ್ಗದಲ್ಲಿ ದೃಢ ನಿರ್ಧಾರದಿಂದ ಸಾಗಿ ತಮ್ಮದೇ ರೀತಿಯಲ್ಲಿ 'ಪರತತ್ವ' ದ ಸಾಕ್ಷಾತ್ಕಾರವನ್ನು ಪಡೆಯಬೇಕು. ಮೆಟ್ಟಿಲುಗಳು ಬೇಕು, ಕರ್ಮವನ್ನು ಮಾಡಬೇಕು ಮತ್ತು ಧರ್ಮಾಚರಣೆಯಾಗಬೇಕು. ಅವುಗಳನ್ನು ತೊರೆದು ಅವುಗಳ 'ಗಮ್ಯ'ವಾದ ಪರಮಾತ್ಮ ತತ್ವವನ್ನು ಪಡೆದು ನಿತ್ಯ ಸಂತೋಷಿಗಳಾಗಬೇಕು. ಹಾಗಾದರೆ ಜೀವನ ಸಾರ್ಥವಾಗುತ್ತದೆ

**ಮುಕ್ತಕ 8ಸಂ3**

**ಎಲ್ಲರೊಳು ತಾನು ತನ್ನೊಳಗೆಲ್ಲರಿರುವವೋ - |**

**ಲೆಲ್ಲೆಲ್ಲಿಯುಂ ನೋಡಿ ನಡೆದು ನಗುತಳುತ ||**

**ಬೆಲ್ಲ ಲೋಕಕ್ಕಾಗಿ ತನಗೆ ತಾಂ ಕಲ್ಲಾಗ |**

**ಬಲ್ಲವನೆ ಮುಕ್ತನಲ - ಮಂಕುತಿಮ್ಮ ||**

ತನ್ನೊಳಗೆಲ್ಲರಿರುವವೋಲೆಲ್ಲೆಲ್ಲಿಯುಂ=ತನ್ನ +ಒಳಗೆ+ಎಲ್ಲರು+ಇರುವ+ವೊಲು+ಎಲ್ಲೆಲ್ಲಿಯುಂ,

ನಗುತಳುತ=ನಗುತ+ಅಳುತ, ಮುಕ್ತನಲ=ಮುಕ್ತನು+ಅಲ

ಎಲ್ಲರಲ್ಲಿ ತಾನು ಮತ್ತು ತನ್ನೊಳಗೆ ಎಲ್ಲರಿದ್ದಾರೆ ಎನ್ನುವಂತೆ ನಡೆದುಕೊಂಡು ಬದುಕಿನಲ್ಲಿ ನಗುತ, ಅಳುತ, ಲೋಕಕ್ಕೆ ಬೆಲ್ಲದಂತೆ ಇದ್ದರೂ ಒಳಗೆ ಕಲ್ಲಂತೆ ಇರಬಲ್ಲವನೇ ಮುಕ್ತ ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಆತ್ಮವತ್ ಸರ್ವಭೂತೇಷು ಏ ಪಶ್ಯಂತಿ ನರೋತ್ತಮಾಃ ತೇ ವೈ ಭಾಗವತಾ ಸ್ಮೃತಾ'ಎಂದು ಭಾಗವತರ ಲಕ್ಷಣವನ್ನು ಹೇಳುವಲ್ಲಿ ಹೇಳಲ್ಪಟ್ಟಿದೆ. ಪರತತ್ವವನ್ನು ಒಳಗೆ ತುಂಬಿಕೊಂಡವನಿಗೆ ಮನಸ್ಸಿನಲ್ಲಿ ಬೇಧವನ್ನು ಸೃಷ್ಟಿಸುವ ರೇಖೆಗಳೆಲ್ಲಾ ಅಳಿಸಿಹೋಗಿ ಜಗತ್ತಿನಲ್ಲಿರುವವರೆಲ್ಲರೂ ತನ್ನೊಳಗೆ ಮತ್ತು ತಾನು ಎಲ್ಲರೊಳಗೆ ಎನ್ನುವ ಏಕಾತ್ಮಭಾವ ತುಂಬಿರುತ್ತದೆ. ಅನ್ಯರಿಗಾಗುವ ನೋವು, ಅವನಿಗೇ ಆದಂತೆ, ಅವನನ್ನು ಸ್ಪಂದಿಸಿ ಮಿಡಿಯುವಂತೆ ಮಾಡುತ್ತದೆ. ಅವರೊಡನೆ ತಾನೂ ಸಹ ಕಣ್ಣೀರಿಡುತ್ತಾನೆ. "ಅನೇಶಾಂ ಉದಯಂ ದೃಷ್ಟ್ವಾ ಏ ಅಭಿನಂದಂತಿ





ಮಾನವಾಃ"ಎನ್ನುವಂತೆ, ಅನ್ಯರಿಗಾಗುವ ಆನಂದದಿಂದ ಅವನಿಗೂ ಆನಂದವೆನಿಸಿ ಅವರೊಡನೆ ತಾನೂ ಸಂತೋಷಪಡುತ್ತಾನೆ. ಇದು ಪರತತ್ವದ ಅರಿವಿನ ಉತ್ತುಂಗ ಶಿಖರದಲ್ಲಿರುವವನ ಸ್ವಭಾವ.

ಅಂತಹ ಸ್ವಭಾವದವನನ್ನು ಎಲ್ಲರೂ ಪ್ರೀತಿಸುತ್ತಾರೆ. ಅವನು ಇರುವೆಗಳಿಗೆ ಬೆಲ್ಲದಂತೆ ಎಲ್ಲ ಜನರಿಂದಲೂ ಆವೃತನಾಗಿರುತ್ತಾನೆ. ಎಲ್ಲರ ಸುಖ-ದುಃಖಗಳನ್ನು ತಾನು ಅನುಭವಿಸಿದರೂ ಯಾವುದನ್ನೂ ತನ್ನ ಅಂತರಂಗವನ್ನು ಮುಟ್ಟದಂತೆ ತಡೆಯುತ್ತಾನೆ. ಒಳಗಿನಿಂದ ಅವನು ಕಲ್ಲಾಗಿರುತ್ತಾನೆ. ಹೊರಗೆ ಹೂವಂತೆ ಮೃದುವಾಗಿ ಕಂಡರೂ ಒಳಗಿಂದ ಶಿಲೆಯಷ್ಟು ಗಟ್ಟಿಯಾಗಿರುತ್ತಾನೆ. ಶಿಲೆಯ ತಲೆಯಮೇಲೆ ಬಿದ್ದ ಎಲ್ಲವೂ, ಅದರ ಮೇಲೆ ಬಿದ್ದರೂ ಯಾವುದೂ ಅಲ್ಲಿ ನಿಲ್ಲಲಾರದೆ ಕೆಳಗೆ ಬಿದ್ದುಹೋಗುವಂತೆ, ಯಾವುದೇ ಭಾವನೆಗಳು ಇವನೊಳಕ್ಕೆ ಹೋದರೂ ಯಾವುದೂ ಇವನನ್ನು ಅಂಟುವುದಿಲ್ಲ ಮತ್ತು ಇವನನ್ನು ವಿಚಲಿತನಾಗಿಸುವುದಿಲ್ಲ. ಇವನು ಜಿತಮನಸ್ಕ. ಇಂತಹ ಸ್ವಭಾವಗಳನ್ನು ಹೊಂದಿರುವವನೇ "ಮುಕ್ತ" ಎನ್ನುತ್ತಾರೆ ಮಾನ್ಯ ಗುಂಡಪ್ಪನವರು

ಮನುಷ್ಯರನ್ನು ಮನುಷ್ಯರಿಂದ ಬೇರ್ಪಡಿಸುವುದು ನಾವು ನಮ್ಮ ಸುತ್ತ ಎಳೆದುಕೊಂಡಂತಹ ರೇಖೆಗಳು, ಧರ್ಮ, ಜಾತಿ, ಭಾಷೆ, ದೇಶದ ರೇಖೆಗಳು. ಈ ರೇಖೆಗಳು ಎಷ್ಟು ಬಲವಾದ್ದೆಂದರೆ ಇವು ಸುಲಭವಾಗಿ ಅಳಿಸಲಾಗದೆ, ರೇಖೆಗಳಾಗಿ ಉಳಿಯದೆ, ಭದ್ರವಾದ 'ಗೋಡೆ'ಗಳಾಗಿಬಿಟ್ಟಿವೆ. ಒಂದು ಕಾಲಕ್ಕೆ ಬೇಧವಿಲ್ಲದೆ ಒಂದಾಗಿದ್ದ ಮಾನವ ಸಮಾಜ ಇಂದು ಹೋಳುಹೋಳಾಗಿರಲು ಈ ಗೋಡೆಗಳೇ ಕಾರಣ. ಇವೆಲ್ಲ ಮಾನವ ನಿರ್ಮಿತ ಗೋಡೆಗಳು, ಇವೆಲ್ಲ ನಾವುಗಳು ನಮ್ಮ ಅಂತರಂಗದಲ್ಲಿ ನಾವೇ ನಿರ್ಮಿಸಿಕೊಂಡಿರುವ ಗೋಡೆಗಳು. ಈ ಗೋಡೆಗಳು ಸೃಷ್ಟಿಸಿರುವ 'ಆವರಣ' ಗಳಲ್ಲಿ ನಾವೆಲ್ಲಾ ಬಂಧಿತರು. ಪರತತ್ವದ ಅನುಸಂಧಾನದಿಂದ ಈ ಗೋಡೆಗಳನ್ನು ಕೆಡವಿ ನಾವೂ ಸಹ ಏಕಾತ್ಮಭಾವವನ್ನು ಅನುಭವಿಸಿದಾಗ ಮತ್ತು ಆ ಅನುಭವ ನಿರಂತರವಾದಾಗ ನಾವೂ ಸಹ "ಮುಕ್ತ"ರಾಗಬಹುದು





**ಮುಕ್ತಕ - 8ಸ೦4**

**ಶುಭವಾವುದಶುಭವಾವುದು ಲೋಕದಲ್ಲಿ ನೋಡೆ ? ।**

**ವಿಭಜಿಸಲಾಗದನ್ಯೋನ್ಯಸಂಬಂಧ ॥**

**ಉಭಯವನು ಮೀರ್ದ ಸಾಮ್ಯದ ನೀತಿಯೊಂದಿಹುದು ।**

**ಅಭಯಪಥವದು ನಿನಗೆ – ಮಂಕುತಿಮ್ಮ ||**

ಶುಭವಾವುದಶುಭವಾವುದು=ಶುಭವು+ಆವುದು+ಅಶುಭವು+ಆವುದು,

ವಿಭಜಿಸಲಾಗದನ್ನೋನ್ಯಸಂಬಂಧ=ವಿಭಜಿಸಲೆ+ಆಗದ+ಅನ್ನೋನ್ಯ+ಸಂಬಂಧ,

ನೀತಿಯೊಂದಿಹುದು=ನೀತಿ+ಒಂದು+ಇಹುದು, ಅಭಯಪಥವದು=ಅಭಯ+ಪಥವು+ಅದು

ವಿಭಜಿಸಲೆ-ವಿಭಾಗಮಾಡಲಿಕ್ಕೆ, ಉಭಯ=ಎರಡೂ, ಮೀರ್ದ=ಮೀರಿದ, ಸಾಮ್ಯದ=ಅನ್ನೋನ್ಯತೆಯ,

ಅಭಯ=ಭಯವಿಲ್ಲದ.

ಹಾಗೆ ನೋಡಿದರೆ ಈ ಜಗತ್ತಿನಲ್ಲಿ ಶುಭ ಮತ್ತು ಅಶುಭ ಎನ್ನುವುದಾವುದು? ಇವೆರಡರನಡುವೆ ಒಂದು ಅನ್ನೋನ್ಯ ಸಂಬಂಧವಿದೆ ಮತ್ತು ಶುಭಾಶುಭಗಳನ್ನು ಮೀರಿದಂತಹ ಮತ್ತು ಇವೆರಡನ್ನೂ ಸಮನ್ವಯಗೊಳಿಸುವ ಒಂದು ನೀತಿಯಿದೆ. ಆ ನೀತಿಯ ಪಥವನ್ನು ತುಳಿದರೆ ಅಲ್ಲಿ ನಮಗೆ ಅಭಯವೇ ಸಿಗುತ್ತದೆ ಎಂದು ಲೋಕದ ಮತ್ತು ಲೋಕಾತೀತವಾದ ವಿಚಾರವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಶುಭ ಮತ್ತು ಅಶುಭವೆನ್ನುವುದು ನಾವು ಈ ಜಗತ್ತಿನಲ್ಲಿ ಜೀವಿಸುವಾಗ, ನಾವು ಅಪೇಕ್ಷೆಪಟ್ಟದ್ದಕ್ಕೆ ಸಿಕ್ಕ ಫಲವನ್ನು ಆಧರಿಸಿ ನಿರ್ಧರಿಸಲಾಗುತ್ತದೆ. ಆದರೆ ಅದು ಕೇವಲ ನಮ್ಮ ಭಾವನೆಯಷ್ಟೇ. ಮೂಲ ಸ್ವರೂಪದಲ್ಲಿ ಶುಭ ಮತ್ತು ಅಶುಭ ಎನ್ನುವ ಭಾವಕ್ಕೆ ಮೀರಿದ ಒಂದು ಸ್ಥಿತಿಯುಂಟು. ಅದು ಅರಿವಿನ ಸ್ಥಿತಿ. ಈ ಜಗತ್ತಿನಲ್ಲಿ ನಡೆಯುವುದೆಲ್ಲಾ ಆ ಪರಬ್ರಹ್ಮ ವಸ್ತುವಿನ ಲೀಲಾವಿನೋದವೆಂದು ಅರಿತು ದೃಢವಾಗಿ ನಂಬಿದರೆ, ಶುಭ ಮತ್ತು ಅಶುಭದ ನಡುವೆ ಇರುವ ಗೆರೆ ಮಾಯವಾಗಿ, ನಾವು ಭಯ ಮುಕ್ತರಾಗುತ್ತೇವೆ.

ಒಂದು ಹೆಣ್ಣು ಗರ್ಭಧಾರಣೆಮಾಡಿದಾಗ, ಅದನ್ನು ಶುಭವೆಂದು ಪರಿಗಣಿಸಿ, ಪುಂಸವನ, ಸೀಮಂತ ಎಂದು ನಡೆಸುವ ಕಾರ್ಯಕ್ರಮಗಳನ್ನು ಮತ್ತು ಶಿಶುವಿನ ಜನನವಾದಾಗ ಸಂತಸಪಟ್ಟು ಅದನ್ನು 'ಶುಭ' ವೆಂದೂ, ಅದೇ ಒಂದು ವ್ಯಕ್ತಿ ಮೃತನಾದಾಗ 'ಮರಣ'ವನ್ನು ಅಶುಭವೆಂದು ಪರಿಗಣಿಸಿ ನಡೆಸುವ ಕ್ರಿಯಾ ಕರ್ಮಗಳಿಗೆ “ಅಶುಭ'ವೆಂದೂ ನಾವು ಗೆರೆಗಳನ್ನು ಎಳೆದುಕೊಂಡಿದ್ದೇವೆ. ಒಂದು ಮಗು ನಮ್ಮ ಮನೆಗೆ ಬಂದಾಗ ನಮಗೆಲ್ಲಾ ಸಂತೋಷವಾಗುತ್ತದೆ, ಹಾಗಾಗಿ 'ಶುಭ' ಅದೇ ನಮ್ಮ ಒಬ್ಬ ವ್ಯಕ್ತಿ ಮೃತನಾದರೆ ನಮಗೆ ದುಃಖವಾಗುತ್ತದೆ. ಅದು ಅಶುಭ.

ಆದರೆ ಒಂದು ವಿಚಾರವನ್ನು ಸೂಕ್ಷ್ಮ ವಾಗಿ ಗಮನಿಸಿದರೆ ಈ ಸುಖ ಮತ್ತು ದುಃಖ'ಗಳು ಹೇಗೆ ನಮ್ಮ ಮನಸ್ಸಿನ ಭಾವನೆಗಳೋ ಹಾಗೆಯೇ ಈ ಶುಭಾಶುಭಗಳೂ ಎಂದು ತಿಳಿಯುತ್ತದೆ. ಜಗತ್ತಿನಲ್ಲಿ ಹುಟ್ಟು ಸಾವುಗಳು

ಸಹಜವಾಗಿ ನಡೆಯುವ ಮತ್ತು ನಡೆಯಲೇಬೇಕಾದ ಅನಿವಾರ್ಯ ಕ್ರಿಯೆಗಳು. ಇದು ಸೃಷ್ಟಿಯ ನಿಯಮಾನುಸಾರ ನಡೆಯುತ್ತದೆ. ನಾವು ಇಷ್ಟಪಟ್ಟರೂ, ಪಡದಿದ್ದರೂ, ಶುಭವೆಂದರೂ ಅಶುಭವೆಂದರೂ ನಡೆದೇ ನಡೆಯುತ್ತದೆ. ಹಾಗೆ ನಡೆಯುವುದೇ ಈ ಜಗತ್ತಿನ ಸಕಲ ಕ್ರಿಯೆಯೂ ಎಂದು ಅರಿತು, ಎಲ್ಲೆಡೆಯಲ್ಲೂ ಆ ಜಗತ್ಕಾರಕನ ಲೀಲಾವಿನೋದವನ್ನು ನೋಡುವಂತಾದರೆ, ನಾವು ಈ ಶುಭ ಮತ್ತು ಅಶುಭಗಳಿಂದ ಉಂಟಾಗುವ ಸಂತೋಷ ಮತ್ತು ದುಃಖದ ಭಾವದಿಂದ ಮತ್ತು ಭಾರದಿಂದ ಹೊರಬರಬಹುದು, ಮನಸ್ಸು ಹಗುರವಾಗಬಹುದು, ನಿರ್ಭಯದಿಂದ ಜೀವಿಸಬಹುದು. ಆದರೆ ನಾವು ಈ ಜಗತ್ತಿಗೆ ಭಾವನಾತ್ಮಕವಾಗಿ ಅಂಟಿಕೊಂಡಿದ್ದೇವೆ.

ಮಾನ್ಯ ಗುಂಡಪ್ಪನವರು 'ಸಿಂಬಳದ ನೊಣ' ಎಂದು ಹೇಳುವಂತೆ ನಾವು ಈ ಜಗತ್ತಿನೊಂದಿಗೆ ಗಾಢವಾಗಿ ಅಂಟಿಕೊಂಡಿದ್ದೇವೆ. ಈ 'ಅಂಟು' ತೊಲಗಿದರೆ 'ಭಾವ' ತೊಲಗುತ್ತದೆ. ಭಾವ ತೊಲಗಿದರೆ, 'ಭಯ' ತೊಲಗುತ್ತದೆ. ಪರತತ್ವದ ಲೀಲೆಯ ಸಂಪೂರ್ಣ ಅರಿವಾಗಿ ಮಾನ್ಯ ಗುಂಡಪ್ಪನವರು ಹೇಳುವ 'ಅಭಯಪಥ' ದಲ್ಲಿ ಚಲಿಸಿ ಭಯಮುಕ್ತರಾಗಿ ಜೀವಿಸಬಹುದು. ಶುಭಾಶುಭಗಳು ನಮ್ಮ ಭಾವನೆಯಾದ್ದರಿಂದ ಅದರ ಎಲ್ಲೆಯಿಂದ ಹೊರಬರುವುದೋ ಅಥವಾ ಅಲ್ಲೇ ತೊಳಲಾಡುವುದೋ ನಮ್ಮ ಆಯ್ಕೆಗೇ ಬಿಟ್ಟದ್ದಲ್ಲವೇ ?

**ಮುಕ್ತಕ – ೩೮೦5**

**ಸಾರ್ವಭೌಮನು ಸೃಷ್ಟಿಯೊಳಗದೊರ್ವನೆ ಕಾಣೇ |**

**ಸರ್ವವನು ತನ್ನಾತ್ಮವೆಂದು ಬದುಕುವನು ||**

**ನಿರ್ವಿಕಾರಾಂತರಂಗದಿ ಜಗವ ಧರಿಸುವನು |**

**ಸರ್ವಮಂಗಳನವನು – ಮಂಕುತಿಮ್ಮ ||**

ಸೃಷ್ಟಿಯೊಳಗದೊರ್ವನೆ=ಸೃಷ್ಟಿ+ಒಳಗೆ+ಅದು+ಒರ್ವನೆ, ತನ್ನಾತ್ಮವೆಂದು ತನ್ನ+ಆತ್ಮ+ಎಂದು, ನಿರ್ವಿಕಾರಾಂತರಂಗದಿ=ನಿರ್ವಿಕಾರನು+ಅಂತರಂಗದಿ, ಸರ್ವಮಂಗಳನವನು=ಸರ್ವಮಂಗಳನು+ಅವನು ಒರ್ವನೆ=ಒಬ್ಬನೇ,

ಯಾವುದೇ ರೀತಿಯ ಮನೋವಿಕಾರಗಳಿಲ್ಲದೆ, ಜಗತ್ತಿನಲ್ಲಿ ಸಂಚರಿಸುವ ಚೇತನವೇ ತನ್ನ ಆತ್ಮವೆಂದು, ಜಗತ್ತನ್ನು ಧಾರಣೆಮಾಡಿದವನು, ಸಕಲ ರೀತಿಯಲ್ಲೂ ಮಂಗಳಮಯನಾಗಿರುತ್ತಾನೆ ಮತ್ತು ಅವನೇ ಸಾರ್ವಭೌಮನು ಎಂದು ಉಲ್ಲೇಖಮಾಡಿದ್ದಾರೆ, ಈ ಮುಕ್ತಕದಲ್ಲಿ.

ಇಷ್ಟ ಅನಿಷ್ಟ, ಸುಖ-ದುಃಖ, ಆಸೆ-ನಿರಾಸೆ, ಪ್ರೀತಿ-ದ್ವೇಷ, ರಕ್ತಿ ಮತ್ತು ವಿರಕ್ತಿ ಮುಂತಾದವುಗಳ ಪರಿಧಿಯನ್ನು ದಾಟಿ, ಎಲ್ಲೆಗಳನ್ನು ಮೀರಿ ಇಡೀ ಜಗತ್ತೇ ತಾನು ಮತ್ತು ತನ್ನೊಳಗೆ ಸಕಲ ಜಗತ್ತು ಎಂದು ಯಾರು





ಇರುತ್ತಾರೋ, ಅವರಲ್ಲಿ ಸತ್ಯವಾದ ಮತ್ತು ನಿಜವಾದ 'ಆನಂದ' ಬಿಟ್ಟು ಬೇರೇನೂ ಇರಲು ಸಾಧ್ಯವಿಲ್ಲ. ಮನಸ್ಸಿನಲ್ಲಿ ಬೇಧಗಳನ್ನು ನಿರ್ಮಿಸಿಕೊಂಡು, ರೇಖೆಗಳನ್ನು ಎಳೆದುಕೊಂಡವರಿಗೆ ಆಯಾಯಾ ಭಾವಗಳಿಗೆ ತಕ್ಕಂತೆ, ಸುಖವೋ - ದುಃಖವೋ, ನೋವೋ-ನಲಿವೋ ಆಗುತ್ತಿರುತ್ತದೆ. ಅವುಗಳ ಎಲ್ಲೆಯನ್ನು ಮೀರಿ ದೃಢವಾಗಿ ನಿಂತವನಿಗೆ ಇವೆಲ್ಲವೂ ತಟ್ಟುವುದಿಲ್ಲ.

ಅವನು ಅಂತಹ ಎಲ್ಲ ಭಾವಗಳನ್ನೂ ಅನುಭವಿಸಿ, ಅವುಗಳ ನಿರರ್ಥಕತೆಯನ್ನು ಅರಿತು, ಅವುಗಳ ಎಲ್ಲೆಯಿಂದ ಮೇಲೇರಿ ಅವುಗಳಿಗೆ ಅತೀತವಾಗಿ ಬೆಳೆಯುತ್ತಾನೆ. ಹಾಗಾಗಿ ಅವನು '**ಡಿವಿಜಿ**' ಯವರು ಹೇಳುವಂತೆ ಅವನು 'ಸಾರ್ವಭೌಮ'. ಅಂತಹ ಸ್ಥಿತಿಯಲ್ಲಿ ಅವನಿಗೆ ಯಾರೂ ಸನ್ನಿಹಿತರೂ ಇರುವುದಿಲ್ಲ, ವಿರೋಧಿಗಳೂ ಇರುವುದಿಲ್ಲ. ಅವನು ಪ್ರೀತಿ, ಪ್ರೇಮ, ರಾಗ, ದ್ವೇಷದ ಭಾವಗಳಿಗೆ ಅತೀತನಾಗಿ ಬೆಳೆದಿರುತ್ತಾನೆ. ಅಂತಹವನನ್ನೇ ಮಾನ್ಯ ಗುಂಡಪ್ಪನವರು ನಿರ್ವಿಕಾರಾಂತರಂಗದಿ ಜಗವ ಧರಿಸುವನು' ಎಂದು ಹೇಳಿದ್ದಾರೆ.

ನಮಗೆ ಅಂತಹವರನ್ನು ನೋಡಲು ನಮ್ಮ ಮನದೊಳಗಿನ ಬೇಧದ ಗೆರೆಗಳು ಭಾಧಕವಾಗಿರುತ್ತವೆ. ಅವುಗಳನ್ನು ಅಳಿಸಿಹಾಕಲು ನಮಗೆ ಸಾಧ್ಯವಾಗಿಲ್ಲ. ಹಾಗಾಗಿ ಈ ಜಗತ್ತಿನಲ್ಲಿ ಅಂತಹವರು ಇದ್ದರೂ, ನಮಗೆ ಕಾಣುವುದಿಲ್ಲ. ಅಷ್ಟೇ ಅಲ್ಲ ನಾವೇ ಆ ಸಾರ್ವಭೌಮ ಪಟ್ಟಕ್ಕೇರಬಹುದು. ಹಾಗಾಗಲು ಮೊದಲು ನಾವು ಜಗತ್ತಿನೊಂದಿಗಿನ ಅಂಟನ್ನು ಬಿಡಿಸಿಕೊಳ್ಳಬೇಕು, 'ನಾನು ನನ್ನದು'ಎಂಬ ಮಮಕಾರವನ್ನು ತೊರೆಯಬೇಕು, ಎಲ್ಲರೂ ನನ್ನಂತೆಯೇ ಎಂಬ ಲೋಕಾತ್ಮ ಮತ್ತು ಏಕಾತ್ಮ ಭಾವವನ್ನು ಮನಸ್ಸಿನಲ್ಲಿ ಅನುಸಂಧಾನಮಾಡಿ, ಅದನ್ನು ಅಲ್ಲಿ ನಿಶ್ಚಲವಾಗಿ ನಿಲ್ಲಿಸಿಕೊಂಡರೆ ಸಾಧ್ಯವಾಗುತ್ತದೆ. ಆದರೆ ಜಗತ್ತಿನ ಸೆಳೆತಗಳು ನಮ್ಮನ್ನು ಬಿಡುವುದಿಲ್ಲವಲ್ಲಾ!!!! ಅವುಗಳ ಬಲವಾದ ಸೆಳೆತವನ್ನು ನಿವಾರಿಸಿಕೊಳ್ಳಬೇಕಾದರೆ ನಾವು ಅದಕ್ಕಿಂತ ಬಲವಂತರಾಗಬೇಕು ಮತ್ತು ಅಂತರಂಗದಲ್ಲಿ ಅದಕ್ಕಿಂತ ಎತ್ತರವಾಗಿ ಬೆಳೆಯಬೇಕು ಮತ್ತು ಅಂತಃಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಹಾಗೆ ನಮ್ಮೊಳಗು ಬಲವಾದರೆ ನಾವು ಬೆಳೆದು ವಿಶಾಲವಾದ ಕಾಲುಷ್ಯರಹಿತವಾದ ಭಾವಸಮುದ್ರದ ಒಡೆಯರಾಗಬಹುದು. ಮಾನ್ಯ ಗುಂಡಪ್ಪನವರು 'ಸಾರ್ವಭೌಮನು ಸೃಷ್ಟಿಯೊಳಗದೊರ್ವನೆ' ಎಂದು ಹೇಳುವಂತೆ ನಾವೂ ಸಾರ್ವಭೌಮರಾಗಬಹುದು.

15ಸಂ

ಕಗ್ಗರಸಧಾರೆ ಜಗದಾತ್ಮ ಜೀವನ ೮ಸಂ೦4 - ೮ಸಂ೦೮

**ಮುಕ್ತಕ - 8ಸಂ6**

**ಗರ್ವಪಡದುಪಕಾರಿ, ದರ್ಪ ಬಿಟ್ಟಧಿಕಾರಿ |**

**ನಿರ್ವಿಕಾರದ ನಯನದಿಂ ನೋಳ್ಪುದಾರಿ ||**

**ಸರ್ವಧರ್ಮಾಧಾರಿ, ನಿರ್ವಾಣಸಂಚಾರಿ |**

**ಉರ್ವರೆಗೆ ಗುರುವವನು - ಮಂಕುತಿಮ್ಮ ||**

ಗರ್ವಪಡದುಪಕಾರಿ=ಗರ್ವಪಡದ+ಉಪಕಾರಿ, ಬಿಟ್ಟಧಿಕಾರಿ=ಬಿಟ್ಟ+ಅಧಿಕಾರಿ, ನೋಳ್ಪುದಾರಿ=ನೋಳ್ಪ +ಉದಾರಿ ನೋಳ್ಪ =ನೋಡುವ, ನಿರ್ವಾಣ=ಪರತತ್ವದಲ್ಲಿ ತನ್ಮಯತೆ, ಉರ್ವರೆಗೆ=ಜಗದ ಜನರಿಗೆ,

ಉಪಕಾರ ಮಾಡಿ ತಾನು ಮಾಡಿದೆನೆಂಬ ಗರ್ವ ಪಡದವನು, ಅಧಿಕಾರವಿದ್ದರೂ ದರ್ಪವನು ತೋರದವನು, ನಿರ್ವಿಕಾರದಿಂದ ಜಗವನ್ನು ನೋಡುವ ಉದಾರಿ, ಎಲ್ಲ ಧರ್ಮಗಳನ್ನೂ ಧರಿಸಿರುವವನು ಮತ್ತು ಮಾನಸಿಕವಾಗಿ ಪರತತ್ವದಲ್ಲಿ ನಿಂತು ನಿರ್ವಾಣದಲ್ಲಿರುವವನು ಈ ಜಗತ್ತಿಗೆ ಗುರುವಂತೆ ಇರುವನು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಪರತತ್ವವನ್ನು ಅನುಸಂಧಾನಮಾಡಿ ತನ್ನೊಳಗೆ ಅದನ್ನು ಸಂಪೂರ್ಣವಾಗಿ ತುಂಬಿಕೊಂಡವನು ಜಗತ್ತಿನ ಎಲ್ಲದರಲ್ಲೂ ಅದನ್ನೇ ಕಾಣುವ ಸ್ಥಿತಿಗೆ ತಲುಪಿ 'ತುಳುಕದ ತುಂಬಿದ ಕೊಡ' ದಂತೆ ನಿಗರ್ವಿಯಾಗಿರುತ್ತಾನೆ. ಅವನು ತನ್ನ ಸುತ್ತಲಿರುವವರಿಗೆ ಮಾದರಿಯಾಗಿರುತ್ತಾನೆ. ಜ್ಞಾನಾಧಿಕಾರವನ್ನು ಪಡೆದಿದ್ದರೂ, ವಿನಯಪೂರ್ಣನಾಗಿರುವುದರಿಂದ ಯಾರ ಮೇಲೂ ದರ್ಪವನ್ನು ತೋರುವುದಿಲ್ಲ. ಬೇಧಭಾವದಿಂದ ಉಂಟಾಗುವ ಕಾಮಾದಿಗಳಿಂದ ಉಂಟಾಗುವ ಮನೋವಿಕಾರಗಳಿಗೆ ಅತೀತನಾಗಿರುತ್ತಾನೆ. ಪರತತ್ವದ ಧರ್ಮವನ್ನು ಧಾರಣೆ ಮಾಡಿರುತ್ತಾನಾದ್ದರಿಂದ ಅವನು ಎಲ್ಲ ಧರ್ಮಗಳಿಗೂ ಆಧಾರವಾಗಿರುತ್ತಾನೆ.

ಹೀಗೆ ಗರ್ವರಹಿತನಾಗಿ, ದರ್ಪರಹಿತನಾಗಿ, ಜ್ಞಾನಪೂರಿತನಾಗಿ, ವಿನಯವಂತನಾಗಿ, ವಿಕಾರರಹಿತನಾಗಿರುತ್ತಾನಾದ್ದರಿಂದ ಅವನು ಎಲ್ಲರಿಗೂ ಅನುಸರಣೀಯವಾಗಿರುತ್ತಾನೆ. ತಾನು ಸುಗುಣಗಳನ್ನು ಹೊಂದಿರುವುದಷ್ಟೇ ಅಲ್ಲ, ತನ್ನ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಅವುಗಳನ್ನು ತೋರುತ್ತಾ, ಅವನನ್ನು ಆಶ್ರಯಿಸಿದವರಿಗೆ ಜ್ಞಾನ ಬಿಟ್ಟರೆ ಬೇರೇನೂ ಸಿಗುವುದಿಲ್ಲವಾದ್ದರಿಂದ, ಜ್ಞಾನ ಮತ್ತು ತನ್ಮೂಲಕ ಪರತತ್ವವನ್ನು ಅರಸಿವವನಿಗೆ ಗುರು ಸಮಾನನಾಗಿರುತ್ತಾನೆ. ಸದ್ದಿಲ್ಲದೆ ತನ್ನ ಸಾಧನೆಯನ್ನು ಮಾಡುತ್ತಾ ಇತರರಿಗೆ ಉಪಕಾರ ಮಾಡುತ್ತಿರುತ್ತಾನೆ.

ಅಂತಹ ವ್ಯಕ್ತಿ ಆ ಸ್ಥಿತಿಗೆ ತಲುಪಲು, ಜಗತ್ತಿನ ಅಂಟನ್ನು ತೊರೆದು, ಆ ಆಂಟಿನೊಂದಿಗೆ ಬರುವ ಎಲ್ಲ ರೀತಿಯ ಮನೋವಿಕಾರಗಳನ್ನೂ ಕ್ರಮೇಣ ತೊರೆದು, ಸದ್ವಿಚಾರ, ಸದಾಚಾರ ಮತ್ತು ಸತ್ಸಂಗಗಳಿಂದ ಜಗತ್ತಿನ





ಮಮಕಾರವನ್ನು ಮೀರಿ ಜ್ಞಾನದ ಶಿಖರದಲ್ಲಿ ನಿಲ್ಲುತ್ತಾನೆ. "ಅಭ್ಯಾಸೇನ ತು ಕೌಂತೇಯ" ಎಂದು ಶ್ರೀ ಕೃಷ್ಣ ಹೇಳುವಂತೆ ದೃಢ ನಿಶ್ಚಯ, ಅಭ್ಯಾಸ ಮತ್ತು ಸಾಧನೆಯಿಂದ ಅಂತಹ ಸ್ಥಿತಿಗೆ ತಲುಪಬಹುದು. ಇದು ಎಲ್ಲರಿಗೂ ಸಾಧ್ಯ. ಪರತತ್ವದ ವಿಚಾರದಲ್ಲಿ ಮುಳುಗಿ ಅಲ್ಲಿ ಸಿಗುವ ನಿತ್ಯಾನಂದವನ್ನು ಅನುಭವಿಸಬೇಕೆನ್ನುವವರು ಪ್ರಯತ್ನ ಪಡಬೇಕು, ಪ್ರಯತ್ನ ನಿರಂತರವಾಗಿರಬೇಕು. ಕಷ್ಟವಾದರೂ ಅಸಾಧ್ಯವಲ್ಲ.

**ಮುಕ್ತಕ – ೩ಸ೦7**

**ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು ?**
**ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ??**
**ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು ?**
**ಬಗೆಯಲರಿತವನೆ ಸುಖಿ – ಮಂಕುತಿಮ್ಮ ??**

ಕಲ್ಯಾಣದೊಳಗಾತ್ಮ=ಕಲ್ಯಾಣದ+ಒಳಗೆ+ಆತ್ಮ ಬೀದಿಗಳೊಳು=ಬೀದಿಗಳ+ಒಳು, ನಿಜಾತ್ಮಯಾತ್ರೆಯನು=ನಿಜ+ಆತ್ಮ+ಯಾತ್ರೆಯನು, ಬಗೆಯಲರಿತವನೆ=ಬಗೆಯಲು+ಅರಿತವನೆ. ಕಲ್ಯಾಣ=ಉದ್ಧಾರ, ಅಭಿವೃದ್ಧಿ, ಪೂರ್ತಿಯನು=ಪರಿಪೂರ್ಣತೆಯನ್ನು, ನಿಜಜೀವಿತದ= ವೈಯಕ್ತಿಕ ಬದುಕಿನ ಬಗೆಯಲು=ಭಾವಿಸಲು

ಜಗತ್ತಿನ ಕಲ್ಯಾಣದೊಳು ಆತ್ಮ ಕಲ್ಯಾಣವನು, ಜಗತ್ತಿನ ಬೀದಿಗಳಲ್ಲಿ ನಿಜ ಆತ್ಮ ಯಾತ್ರೆಯನ್ನು, ಜಗತ್ತಿನ ಬದುಕಿನಲ್ಲಿ ವೈಯಕ್ತಿಕ ಬದುಕಿನ ಪರಿಪೂರ್ಣತೆಯನ್ನು ಕಾಣಬಲ್ಲವನೇ ಸುಖಿ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಾನು ಈ ಜಗತ್ತಿನಿಂದ ಬೇರೆ ಅಲ್ಲ, ತಾನು ಈ ಜಗತ್ತಿನ ಒಂದು ಭಾಗ, ಈ ಜಗತ್ತು ಉದ್ದಾರವಾದರೆ ನನ್ನ ಆಶಯ. ಎನ್ನುವುದು, ಇಲ್ಲಿನ ಉದ್ಧಾರವೂ ಆಗುತ್ತದೆ, ಎಂದು ಬಗೆಯಬೇಕು  ತಾನೊಬ್ಬ ಉದ್ಧಾರವಾಗುವುದಕ್ಕಿಂತ ತಾನು ಎಲ್ಲರಲ್ಲಿ ಒಂದಾದರೆ ಎಲ್ಲರ ಏಳಿಗೆ, ತನ್ನ ಏಳಿಗೆಗೂ ಹೇತುವಾದೀತು ಎಂದು ಅರಿತವನು ಸಮಾಜಮುಖಿಯಾಗುತ್ತಾನೆ. ತಾನು ಇತರರಿಗಿಂತ ಬೇರೆ, ಭಿನ್ನ ಎನ್ನುವುದನ್ನು ಮರೆಯುತ್ತಾನೆ. ಅವನು ಸಮುಷ್ಟಿ ಸಾಧನೆಯಿಂದ ವ್ಯಕ್ತಿಯುದ್ಧಾರವನ್ನು ಬಯಸುತ್ತಾನೆ. ಕೇವಲ ಸ್ವಾರ್ಥಪೂರಿತ ಪೈಪೋಟಿಯಿಂದಲೇ ಕೂಡಿರುವ ಈ ಜಗತ್ತಿನಲ್ಲಿ, ಸಾಮಾನ್ಯವಾಗಿ ನಮಗೆ ಕಾಣಸಿಗದ, ಉನ್ನತ ಭಾವ ಅದು.

ಇನ್ನು ನಾವು ಓಡಾಡುವಾಗ ನಮಗೆ ಬಹಳಷ್ಟು ಜನರು ಕಾಣುತ್ತಾರೆ. ನಾವು ಕಾಣುವುದು ಬೇರೆ ಬೇರೆ ರೂಪಗಳನ್ನು, ಆದರೆ ಆ ರೂಪಗಳನ್ನೆಲ್ಲ ಧರಿಸಿರುವುದು ಒಂದೇ ಚೇತನ' ಎನ್ನುವ ಭಾವನೆ ಬಂದಾಗ ನಮ್ಮಲ್ಲಿ ರೂಪಭೇಧವಳಿಸಿ ಏಕಾತ್ಮ ಭಾವ ಮೂಡುತ್ತದೆ. ಆದರೆ ಜಗತ್ತಿನಲ್ಲಿದ್ದಮೇಲೆ ಇಲ್ಲಿನ ರೂಪಗಳನ್ನು ನೋಡದೆ





ಮತ್ತು ಆ ರೂಪಗಳನ್ನು ಗುರುತಿಸದೆ ಇರುವುದು ಹೇಗೆ? ಎಂದು ಕೇಳಿದರೆ, ರೂಪಗಳು ಕೇವಲ ಹೊರ ರೂಪಗಳು. ಅದರಲ್ಲಿ ಬೇಧವಿದೆ ಮತ್ತು ಇದ್ದೇ ಇರುತ್ತದೆ. ಆದರೆ ಒಳರೂಪವನ್ನು ಕಂಡಾಗ ಅಂತರಂಗದ ಚೈತನ್ಯ ಯಾವ ರೂಪವೂ ಇಲ್ಲದೆ ಈ ಜಗತ್ತು ಒಂದು ಆತ್ಮಗಳ ಜಾತ್ರೆ ಅಥವಾ ಉತ್ಸವದಂತೆ ನಮಗೆ ಕಂಡೀತು.

ನಮ್ಮ ವ್ಯಕ್ತಿಗತ ಜೀವನಕ್ಕೆ ಅತಿಯಾದ ಮಹತ್ವವನ್ನು ನೀಡಿ 'ನಾನೊಬ್ಬ ಚೆನ್ನಾಗಿದ್ದರೆ ಸರಿ ಈ ಜಗತ್ತಿನಿಂದ ನನಗೇನೂ ಆಗಬೇಕಿಲ್ಲ'ಎನ್ನುವುದು ಮೂರ್ಖತನ. ಅಂತಹವರು 'ತಾವೂ ಈ ಜಗತ್ತಿನಲ್ಲೇ ಇದ್ದೇವೆ' ಎನ್ನುವುದನ್ನು ಮರೆತಿರುತ್ತಾರೆ. ನಾವು 'ನಮಗೇ' ಅಂಟಿಕೊಂಡಿದ್ದರೆ, ಸದಾಕಾಲ ನಮ್ಮದೇ ಚಿಂತೆಯಲ್ಲಿ ಮುಳುಗಿದ್ದರೆ, ವೈಯಕ್ತಿಕ ಅಪೇಕ್ಷೆಗಳು ಅಧಿಕವಾಗಿ, ನೋವು ತಪ್ಪಿದ್ದಲ್ಲ. ಹಾಗಲ್ಲದೆ, ನಮ್ಮ ಮನೋಭಾವ ವಿಶಾಲವಾದರೆ ನಮ್ಮ ಬಾಹುಗಳೂ ವಿಶಾಲವಾಗಿ, ಇಡೀ ಜಗತ್ತನ್ನೇ ತಬ್ಬಿಕೊಳ್ಳುವ ಕ್ಷಮತೆ ನಮ್ಮದಾಗುತ್ತದೆ. ಹೀಗೆ ಭಾವ ವೈಶಾಲ್ಯತೆಯನ್ನು ಅನುಸಂಧಾನ ಮಾಡಿದ ವ್ಯಕ್ತಿಗೆ ಜಗತ್ತಿನಿಂದ ವ್ಯಕ್ತಿಗತ ಅಪೇಕ್ಷೆಗಳಿಲ್ಲದ ಕಾರಣ, ನಿರಾಸೆಯಿಲ್ಲದೆ, ನೋವಿಲ್ಲದೆ ಆನಂದವಾಗಿರುತ್ತಾನೆ. ಹಾಗೆ ಜೀವಿಸಲರಿತವನೇ "ಸುಖಿ" ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಹಾಗೆ ಬದುಕಲರಿಯುವ ತನಕ ನಮಗೂ ಜಗತ್ತಿನ 'ದುಃಖ' ತಪ್ಪಿದ್ದಲ್ಲ, ಅಲ್ಲವೇ?

**ಮುಕ್ತಕ – ೪ಸಂ೪**

**ಚಿರಶಿಕ್ಷೆಯಿಂ ನಿನಗೆ ಸರ್ವಾತ್ಮತಾಭ್ಯಾಸ |**

**ಸರಳ ಸಹಜವದಹುದು ಮೂಗಿನುಸಿರವೋಲು ||**

**ಪರನಿಯತಿಯಿರದು ಸ್ವತಸ್ಸಿದ್ಧ ನಿಯತಿಯಿರೆ |**

**ಹೊರಸಡಿಲಗೊಳಹಿಡಿತ - ಮಂಕುತಿಮ್ಮ ||**

ಸರ್ವಾತ್ಮತಾಭ್ಯಾಸ=ಸರ್ವಾತ್ಮತಾ+ಅಭ್ಯಾಸ, ಸಹಜವದಹುದು=ಸಹಜವು+ಅದು+ಅಹುದು,

ಮೂಗಿನುಸಿರವೊಲು=ಮೂಗಿನ+ಉಸಿರ+ಒಲು, ಪರನಿಯತಿಯಿರದು=ಪರ+ನಿಯತಿ+ಇರದು,

ನಿಯತಿಯಿರೆ=ನಿಯತಿ+ಇರೆ, ಹೊರಸಡಿಲಕೊಳಹಿಡಿತ=ಹೊರ+ಸಡಿಲ+ಒಳ+ಹಿಡಿತ

ಚಿರಶಿಕ್ಷೆಯಿಂ=ನಿರಂತರ ಶಿಕ್ಷಣದಿಂದ, ಉಸಿರವೊಲು=ಉಸಿರಂತೆ, ಸ್ವತಸ್ಸಿದ=ಸ್ವಾನುಭವದ ಜ್ಞಾನ,

ಕಾಣುವ ಎಲ್ಲೆಲ್ಲೂ ಮತ್ತು ಕಾಣುವ ಎಲ್ಲದರಲ್ಲೂ ಆ ಪರಬ್ರಹ್ಮವಸ್ತುವನ್ನೇ ಕಾಣುವ ಅಭ್ಯಾಸವಾಗಬೇಕಾದರೆ ಮನಸ್ಸು ಬುದ್ಧಿಗಳಿಗೆ ನಿರಂತರ ಶಿಕ್ಷಣವಾಗಬೇಕು. ಸಹಜವಾದ ನಮ್ಮ ಉಸಿರಾಟದಂತೆ ಆ ಭಾವ ನಮ್ಮಲ್ಲಿ ಮೂಡಬೇಕು. ಇದಕ್ಕೆ ಹೊರಗಿನ ನಿಯಮಗಳಾವುದೂ ಇರುವುದಿಲ್ಲ, ಅದು ಸ್ವತಃ ಅಭ್ಯಾಸದಿಂದ ತನ್ನಲ್ಲಿ ತಾನೇ ಕಂಡುಕೊಂಡ ಸತ್ಯವಾಗಬೇಕು. ಅಂತಹ ಸ್ಥಿತಿ ತಲುಪಲು ಹೊರಗೆ ಸಹಜವಾಗಿ ಎಲ್ಲರಂತೆಯೇ ಇದ್ದರೂ, ಒಳಗೆ

ಮನಸ್ಸುಬುದ್ಧಿಗಳನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಟ್ಟುಕೊಂಡಿರಬೇಕು, ಎನ್ನುವುದೇ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಹೂರಣ.





'ನನಗೆ ಕಾಣುವುದೆಲ್ಲವೂ ಆ ಪರಬ್ರಹ್ಮ ವಸ್ತುವೇ " ಎನ್ನುವ ಭಾವ ಒಂದು ಕ್ಷಣಕ್ಕೂ ಅಥವಾ ಸ್ವಲ್ಪ ಸಮಯಕ್ಕೋ ನಮ್ಮ ಮನಸ್ಸಿನಲ್ಲಿರಬಹುದು. ಆದರೆ ಆ ಭಾವ ನಿರಂತರವಾಗಿ 'ಸ್ಥಾಯೀ' ರೂಪದಲ್ಲಿ ನಮ್ಮಲ್ಲಿ ನಿಲ್ಲಬೇಕಾದರೆ ಅದಕ್ಕೆ ನಿರಂತರ ಕೃಷಿ ಬೇಕು. ಅದು ಒಂದು ಕ್ಷಣಕ್ಕೆ ಬಂದು ಹೋಗುವ ಭಾವ ಆಗಿರದೆ, ನಮ್ಮ ಉಸಿರಾಟದಂತೆ, ಸದಾ ಕಾಲ ನಮ್ಮಲ್ಲಿ ನಿಲ್ಲಬೇಕಾದರೆ, ಮೊಟ್ಟ ಮೊದಲು ನಮ್ಮಲ್ಲಿ ಇಚ್ಚೆಯುಂಟಾಗಬೇಕು, ಆ ಇಚ್ಛೆ ಪ್ರಬಲವಾಗಬೇಕು, ಅದಕ್ಕೆ ಪೂರಕವಾಗಿ ಪ್ರಯತ್ನವಾಗಬೇಕು ಮತ್ತು ಆ ಪ್ರಯತ್ನ ನಿರಂತರವಾಗಬೇಕು. ಹಾಗಾದಾಗ ಹಂತ ಹಂತವಾಗಿ ನಮ್ಮಲ್ಲಿ ಜಗತ್ತಿನ ಸಕಲದಲ್ಲೂ ಆ ಪರತತ್ವದ ಅಸ್ತಿತ್ವದ ನಂಬಿಕೆಯುಂಟಾಗಿ ಆ ನಂಬಿಕೆ ವಿಸ್ತಾರವಾಗಿ ನಮ್ಮ ಮನಸ್ಸು ಬುದ್ಧಿಗಳಲ್ಲಿ ನೆಲೆನಿಲ್ಲುತ್ತದೆ. ಆಗ ನಮ್ಮ ಒಳಹೊರಗುಗಳಲ್ಲಿ ಪರತತ್ವದ ಅನುಭವವಾಗುತ್ತದೆ.

ಇದನ್ನು ಅನುಸಂಧಾನಮಾಡಲು ಹೊರಗಿನ ಯಾವುದೇ ನಿಯಮ, ಅದಾರ, ಸಂಪ್ರದಾಯಗಳಿಂದ ಸಾಧ್ಯವಿಲ್ಲ. ಕೇವಲ ಸ್ವಾನುಭವದಿಂದ, ಸ್ವಪ್ರಯತ್ನದಿಂದ, ಅಂತರಂಗದ ಮಂಥನದಿಂದ ಸಾಧ್ಯ. ಒಬ್ಬೊಬ್ಬರಿಗೆ ಒಂದೊಂದು ದಾರಿ. ಒಬ್ಬರ ಮಾರ್ಗದಂತೆ ಮತ್ತೊಬ್ಬರದ್ದಿರುವುದಿಲ್ಲ. ಹಾಗಾಗಿ ಪ್ರತಿಯೊಬ್ಬರ ದರ್ಶನವೂ

ಅವರವರದೇ ಆಗಿರುತ್ತದೆ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡುವವರೆಲ್ಲರೂ ತಾವು ಕಂಡಂತಹ ಸತ್ಯದಿಂದ ಮತ್ತು ತಮಗಾದ ಅನುಭವದಿಂದಲೇ ಪರತತ್ವವನ್ನು ನೋಡುತ್ತಾರೆ. ಇದು ಅಂತರಂಗದ ವಿಚಾರ. ಅದು ಅಲ್ಲಿಯೇ ಗಟ್ಟಿಯಾಗಿ ಉಳಿಯಬೇಕು. ಹಾಗೆ ಕಂಡುಕೊಂಡತಹವನು 'ತಾನು ಕಂಡುಕೊಂಡೆ' ಎನ್ನುವ ಭಾವದಿಂದ ಬೀಗಿ ತನ್ನ ಸುತ್ತಲಿರುವವರನ್ನು, ಆ ಹಾದಿಯಲ್ಲಿ ನಡೆಯಲು ಪ್ರಯತ್ನ ಪಡುವವರನ್ನು ಕಂಡು ಅವಹೇಳನ ಮಾಡದೆ, 'ನಾನು ಇವರೆಲ್ಲಿರಿಗಿಂತ ಭಿನ್ನ ಅಥವಾ ಉತ್ತಮ' ಎನ್ನುವ ಭಾವದಿಂದ ಬೀಗದೆ, ಹೊರಜಗತ್ತಿನಲ್ಲಿ ಸಹಜವಾಗಿ ಎಲ್ಲರಂತೆ ಇದ್ದು, ತನ್ನಂತರಂಗದಲ್ಲಿ ದೃಢ ಮನಸ್ಕನಾಗಿ ಪರಮಾತ್ಮಾನುಭವವನ್ನು ಅನುಭವಿಸಬೇಕು. ಇದೇ ಸರಿಯಾದ ಮಾರ್ಗವೆನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಹಿಂದೆ ಒಂದು ಕಾಲಕ್ಕೆ ಅದು ಸುಲಭವಾಗಿದ್ದಿರಬಹುದು. ಆದರೆ ಇಂದಿನ ಹೊರಜಗತ್ತಿನ ಸೆಳೆತಗಳ ಸುಳಿಯ ಮಧ್ಯೆ ಹೆಜ್ಜೆ ಹೆಜ್ಜೆಗೆ ನಮ್ಮನ್ನು ವಿಚಲಿತಗೊಳಿಸಬಹುದಾದ, ವಿಚಾರಗಳ ಜಾಲದ ಮಧ್ಯೆ ಇದ್ದೂ, ಅಂತಹ ಭಾವವನ್ನು ಸಾಧಿಸುವುದು ಬಹಳ ಕಷ್ಟ. ಈ ಜಗತ್ತಿನ ಅಂಟು ಬಹಳ ಗಟ್ಟಿ. ಒಂದು ಬಾರಿ ಅಂಟಿಕೊಂಡರೆ ಬಿಡಿಸಿಕೊಳ್ಳುವುದು ಬಹಳ ಕಷ್ಟ. ಬಿಟ್ಟಂತೆಯೇ ಇರುತ್ತದೆ, ಆದರೆ ಮತ್ತೆ ಮತ್ತೆ ಅಂಟಿಕೊಳ್ಳುತ್ತದೆ. ಹಾಗಾಗಿ ಇಂದು ಸಾಧನೆಯ ತೀವ್ರತೆ ಅಧಿಕವಾಗಬೇಕು. ಸ್ವಪ್ರಯತ್ನದಿಂದ ಈ ಪ್ರಾಪಂಚಿಕ ಪ್ರಲೋಭನೆಗಳ ಅಂಟಿನಿಂದ ಬಿಡಿಸಿಕೊಳ್ಳಬೇಕು. ಪ್ರಪಂಚದಿಂದ ಬಿಡಿಸಿಕೊಂಡರೆ ಪರತತ್ವ ತುಂಬಿಕೊಳ್ಳುತ್ತದೆ. ಒಳಗೆ ತುಂಬಿಕೊಂಡಂತಹ ಪರತತ್ವದ ಭಾವವೇ ನಮ್ಮ ಹೊರಗಿನ ವ್ಯವಹಾರಕ್ಕೆ ಪೂರಕವಾಗಿದ್ದರೆ, ಏಕಾತ್ಮಭಾವ ಮತ್ತು ಜಗದಾತ್ಮಭಾವವನ್ನು ನಾವು ಅಂತರಂಗದಲ್ಲಿ ಧಾರಣೆ ಮಾಡಿ, ಹೊರಜಗತ್ತಿಗೆ ಬಿಂಬಿಸಬಹುದು. ಇದು ಎಲ್ಲರಿಗೂ ಸಾಧ್ಯ, ಪ್ರಯತ್ನ ವಟ್ಟರೆ.





ಮುಕ್ತಕ - ೮ಸ೦೯

ದ್ವೈತವೇನದ್ವೈತವೇನಾತ್ಮದರ್ಶನಿಗೆ |

ಶ್ರೌತಾದಿವಿಧಿಯೇನು? ತಪನಿಯಮವೇನು? ||
ನೀತಿ ಸರ್ವಾತ್ಮಮತಿಯದರಿನಮಿತಪ್ರೀತಿ |
ಭೀತಿಯಿಲ್ಲದನವನು - ಮಂಕುತಿಮ್ಮ ||

ದ್ವೈತವೇನದ್ವೈತವೇನಾತ್ಮದರ್ಶನಿಗೆ=ದ್ವೈತವೇನು+ಅದ್ವೈತವೇನು+ಆತ್ಮ+ದರ್ಶನಿಗೆ, ಶ್ರೌತಾದಿವಿಧಿಯೇನು=ಶ್ರೌತಾದಿ+ವಿಧಿ+ಏನು? ತಪನಿಯಮವೇನು=ತಪ+ನಿಯಮವು+ಏನು, ಸರ್ವಾತ್ಮಮತಿಯದರಿನಮಿತಪ್ರೀತಿ=ಸರ್ವಾತ್ಮ+ಮತಿ+ಅದರಿನ್+ಅಮಿತ+ಪ್ರೀತಿ, ಭೀತಿಯಿಲ್ಲದನವನು= ಭೀತಿ+ಇಲ್ಲದನ್+ಅವನು

ದ್ವೈತ=ಒಂದಲ್ಲ ಎರಡು ಎನ್ನುವ ವಾದ, ಅದ್ವೈತ=ಎರಡಲ್ಲ, ಒಂದೇ ಎನ್ನುವ ವಾದ, ಶ್ರೌತ=ಶ್ರುತಿಗಳ ವಿಧಿ,

ಆತ್ಮದರ್ಶನವಾದವನಿಗೆ ದ್ವೈತ' ಮತ್ತು ಅದ್ವೈತದಿಂದ ಏನಾಗಬೇಕು?, ಶ್ರುತಿಗಳು ವಿಧಿಸಿರುವ ನಿಯಮಗಳ ಪಾಲನೆ, ತಪಸ್ಸು ಮುಂತಾದವುಗಳನ್ನು ಅವನು ಮಾಡಬೇಕೆಂದಿಲ್ಲ. ಅವನಿಗೆ ಜಗತ್ತಿನಲ್ಲೆಲ್ಲಾ ಪರಮಾತ್ಮನ ಮತ್ತು ಪರತತ್ವದ ದರ್ಶನವಾಗುತ್ತಿರುವಾಗ ಅದರಿಂದ ಎಲ್ಲರಲ್ಲೂ ಅಮಿತವಾದ ಪ್ರೀತಿಯನ್ನು ಹೊಂದಿರುತ್ತಾನಾದ್ದರಿಂದ ಅವನು ನಿರ್ಭೀತನಾಗಿರುತ್ತಾನೆ ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದ್ವೈತವೆಂದರೆ, ಪರಮಾತ್ಮ ಮತ್ತು ಜೀವಾತ್ಮ ಎರಡೂ ಬೇರೆ ಬೇರೆ ಎನ್ನುವ ಅಭಿಮತ, ಅದ್ವೈತವೆಂದರೆ ಪರಮಾತ್ಮ ಮತ್ತು ಜೀವಾತ್ಮ ಎರಡೂ ಒಂದೇ ಎಂದು ಹೇಳುವ ಅಭಿಮತ. ಆದರೆ ಇವೆರಡಕ್ಕೂ ಮೀರಿ ಸರ್ವಾತ್ಮಭಾವದಿಂದ ಎಲ್ಲೆಡೆಯಲ್ಲಿಯೂ ಆ ಪರಮಾತ್ಮನನ್ನೇ ಕಾಣುತ್ತಿರುವವನಿಗೆ ದ್ವೈತಾತಗಳ ಬಂಧನಗಳು ಬೇಕಿಲ್ಲ. ಅಷ್ಟೇ ಅಲ್ಲ ಪರತತ್ವವನ್ನು ಅರಿಯಬೇಕೆನ್ನುವವನಿಗೆ, ಶ್ರುತಿಗಳು ವಿಧಿಸಿರುವ ನಿತ್ಯ ಕರ್ಮಾನುಷ್ಠಾನದ, ಜಪ ತಪ, ನೇಮ ನಿಷ್ಠೆಗಳ, ಆಚಾರ ಸಂಪ್ರದಾಯಗಳ ಅವಶ್ಯಕತೆ ಇರುವುದಿಲ್ಲ. ಮಹಡಿಯನ್ನು ಹತ್ತಿದವನಿಗೆ ಮೆಟ್ಟಿಲುಗಳಿಂದೇನಾಗಬೇಕು, ಹೇಳಿ ?

'ಮತವೆಂದರೆ ಅಭಿಪ್ರಾಯ ಮತ್ತು ಮತವೆಂದರೆ ಮಿತಿ'. ಆ ಮತವು ನಂಬಿರುವ ಮತ್ತು ಹಾಕಿಕೊಂಡಿರುವ ನಿಯಮಗಳ ಮಿತಿಯನ್ನು ಮೀರಿ ಯಾರಿಗೂ ಯೋಚಿಸಲಾಗಲೀ ಆಚರಿಸಲಾಗಲೀ ಅಧಿಕಾರವಿರುವುದಿಲ್ಲ. ಇದು ಎಲ್ಲ ಮತಗಳಿಗೂ ಅನ್ವಯ. ಅಮಿತವಾದ ಪರತತ್ವವು ಮತದ ಮಿತಿಗೆ ಮೀರಿ ನಿಂತಿರುತ್ತದೆ. ಅದನ್ನು ಅನುಸಂಧಾನಮಾಡುವವನಿಗೆ ಈ ಮತಗಳು ಹಾಕಿರುವ ಮಿತಿಗಳ ಪರಿಧಿಯನ್ನು ದಾಟಿ ಮುಂದಕ್ಕೆ

ಹೋಗಬೇಕಾಗುತ್ತದೆ. ಅಲ್ಲಿ ಅವನಿಗೆ ಯಾವುದೇ ಎಲ್ಲೆಗಳಿಲ್ಲದೆ, ಆಕಾಶದಷ್ಟು ವಿಶಾಲವಾದ 'ಸರ್ವಾತ್ಮದರಿವಿನ ಭಾವ ಉಂಟಾದಾಗ ಅವನು ಎಲ್ಲರನ್ನೂ ಅಮಿತವಾದ ಪ್ರೀತಿಯಿಂದ ನೋಡುವಂತಾಗುತ್ತದೆ.





ಹೀಗೆ ಸರ್ವಾತ್ಮಭಾವ ಬಂದಾಗ ಅವನು ಮುಕ್ತನಾಗಿ ಯಾವುದಕ್ಕೂ ಅಂಟಿಕೊಳ್ಳುವುದಿಲ್ಲವಾದ್ದರಿಂದ, ಅವನಿಗೆ ಯಾವುದನ್ನೂ ಬಿಟ್ಟುಹೋಗುವ ಅಥವಾ ಕಳೆದುಕೊಳ್ಳುವ ಭೀತಿ ಇರುವುದಿಲ್ಲ. ಹೀಗೆ ಯಾವುದೇ ಮತ, ನಿಯಮದ ಕಟ್ಟುಪಾಡುಗಳ ಎಲ್ಲೆಯನ್ನು ಮೀರಿದ ಪರತತ್ವವನ್ನು ಅನುಸಂಧಾನ ಮಾಡಿದವನು ಭಯವಿಲ್ಲದೆ ಮತ್ತು ಬಂಧನವಿಲ್ಲದೆ ಮುಕ್ತನಾಗುತ್ತಾನೆ. ಆದರೆ ಜಗತ್ತಿನ ಸಂಬಂಧ, ಸಂಪರ್ಕ, ನಂಟು ನೆಂಟಸ್ಥನಗಳಿಗೆ ಅಂಟುಕೊಂಡಿರುವವನಿಗೆ ಈ ಮತಗಳ ಮಿತಿಯನ್ನು ಮತ್ತು ಅವುಗಳ ಹಿಡಿತದ ಎಲ್ಲೆಯನ್ನು ದಾಟಿ ಹೊರಬರಬೇಕಾದರೆ ಧೈರ್ಯಬೇಕು. ಅಂತಹ ಧೈರ್ಯವನ್ನು ನಾವು ಮಾಡುವಂತಾದರೆ ನಾವೂ ಸಹ ಪರತತ್ವದ ವೈಶಾಲ್ಯತೆಯೊಳಕ್ಕೆ ಹೊಕ್ಕು ನಿರ್ಭೀತಿಯಿಂದ ಆನಂದದಿಂದ ಜೀವಿಸಬಹುದು. ಪ್ರಯತ್ನಪಡಬೇಕು ಅಷ್ಟೇ.

**ಮುಕ್ತಕ – 81ಸಂ**

**ಬರಿ ಭಕ್ತಿ ಬರಿಕರ್ಮ ಬರಿತರ್ಕ ದೊರಕಿಸದು |**

**ಪರಮಾತ್ಮದರ್ಶನವ; ಬೇಕದಕೆ ತಪಸು ||**

**ಪರಿಪೂರ್ಣ ಜೀವನಾನುಭವತಾಪದಿ ಮತಿಯು।**

**ಪರಿಪಕ್ವವಾಗಲದು-ಮಂಕುತಿಮ್ಮ॥**

ಬೇಕದಕೆ= ಬೇಕು+ಅದಕೆ, ಜೀವನಾನುಭವತಾಪದಿ=ಜೀವನ+ಅನುಭವ+ತಾಪದಿ,

ಪರಿಪಕ್ವವಾಗಲದು=ಪರಿಪಕ್ವವು+ಆಗಲದು.

ಕೇವಲ ಭಕ್ತಿ, ಕರ್ಮ ಅಥವಾ ತರ್ಕದಿಂದ ಪರಮಾತ್ಮ ದರ್ಶನವಾಗುವುದಿಲ್ಲ. ಅದಕ್ಕೆ ತಪಸ್ಸು ಬೇಕು, ಜೀವನದ ಪರಿಪೂರ್ಣ ಅನುಭವದ ಬೇಗೆಯಲ್ಲಿ ಬೆಂದು ಹೊರಬಂದರೆ ಆಗ ನಮ್ಮ ಬುದ್ಧಿ ಪಕ್ವವಾಗುತ್ತದೆ ಎಂದು, ಪರತತ್ವ ದರ್ಶನಕ್ಕೆ ಅಗತ್ಯವಾಗಿ ಆಗಬೇಕಾದ ಸಂಸ್ಕಾರದ ಬಗ್ಗೆ ನುಡಿದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

ನಮ್ಮಲ್ಲಿ, ಭಕ್ತಿಯೆಂದರೆ ದೇವಸ್ಥಾನ ಪರಿಕ್ರಮಣ, ತೀರ್ಥಯಾತ್ರೆ, ಪೂಜೆ ಪುನಸ್ಕಾರ, ಧ್ಯಾನ ಜಪ ಮುಂತಾದವುಗಳು. ಕೇವಲ ಅವುಗಳನ್ನು ಮಾಡುವುದರಿಂದ ಪರತತ್ವದ ಪರಿಚಯವಾಗುವುದಿಲ್ಲ ಅಥವಾ ನಿತ್ಯಕರ್ಮಗಳು, ಹೋಮ ಹವನಾದಿಗಳು, ದಾನ ಧರ್ಮಾದಿಗಳಿಂದ ಪರತತ್ವದ ಪರಿಚಯವಾಗುವುದಿಲ್ಲ ಅಥವಾ ಇದೆಯೋ ಇಲ್ಲವೋ? ಒಂದೋ ಎರಡೋ? ಬೃಹತ್ತೋ ಅಣುವೋ? ಮುಂತಾದಾಗಿ ತರ್ಕ, ಜಿಜ್ಞಾಸೆ, ವಾದ ವಿವಾದಗಳನ್ನು ಮಾಡುವುದರಿಂದ ಪರತತ್ವದ ಪರಿಚಯವಾಗುವುದಿಲ್ಲ. ಅವುಗಳ ಮಿತಿಯಲ್ಲಿ ಇವೆಲ್ಲವೂ ಬೇಕು. ಆದರೆ ಪರತತ್ವದ ಪರಿಚಯವಾಗಬೇಕಾದರೆ ಬದುಕಿನಲ್ಲಿ ಅನುಭವವಾಗಬೇಕು. ನಮ್ಮನ್ನು ನಾವು ಜೀವನಾನುಭವಕ್ಕೆ ತೆರೆದುಕೊಳ್ಳಬೇಕು, ಒಳಪಡಿಸಿಕೊಳ್ಳಬೇಕು, ಬದುಕಿನ ಒರಳಲ್ಲಿ ರುಬ್ಬಲ್ಪಡಬೇಕು. ಹಾಗಾದಾಗ ಮಾತ್ರ ಬದುಕಿನ ಪರತತ್ವದ ಸಾರ ಅಥವಾ ಸತ್ವ ನನಗೆ ಅರ್ಥವಾಗುತ್ತದೆ.

'ನಾವೆಲ್ಲಾ ಬದುಕಿನಲ್ಲೇ ಇದ್ದು ಜೀವಿಸುತ್ತಿದ್ದೇವಲ್ಲ!!!!' ಎಂದರೆ ಹೌದು ಆದರೆ ನಮ್ಮೊಂದಿಗೆ ಆಗುವ ಘಟನೆಗಳಿಂದ ನಾವು ಎಷ್ಟು ಪ್ರಭಾವಿತರಾಗಿದ್ದೇವೆ ಮತ್ತು ಎಷ್ಟು ಅನುಭವ ಪಡೆದಿದ್ದೇವೆ ಮತ್ತು ಆ ಅನುಭವ ನಮ್ಮನ್ನು ಎಷ್ಟು ತಿದ್ದಿದೆ ಎನ್ನುವುದು ಮುಖ್ಯ. ಮಾನ್ಯ ಗುಂಡಪ್ಪನವರು ಬೇಕದಕೆ ತಪಸು' ಎನ್ನುತ್ತಾರೆ. ಹಾಗಂದರೆ ಎಲ್ಲೋ ಕಾಡಿಗೆ ಹೋಗಿ ಮೂಗ ಹಿಡಿದುಕೊಂಡು ಕಣ್ಣು ಮುಚ್ಚಿ ತಪಸ್ಸು ಮಾಡಬೇಕು ಎಂದಲ್ಲ. ಬದುಕಿನಲ್ಲಿ ಇದ್ದು, ಎಲ್ಲಕ್ಕೂ ನಮ್ಮನ್ನು ನಾವು ತೆರೆದುಕೊಂಡು ಪ್ರತಿಯೊಂದು ಅನುಭವದಿಂದಲೂ ಕಲಿಯುತ್ತಾ ಹೋಗಬೇಕು. ಅದೇ ತಪಸ್ಸು, ಸಾಮಾನ್ಯವಾಗಿ ನಮಗೆ ಕಷ್ಟ ಅಥವಾ ಸುಖ ಬಂದರೆ ತಡೆದುಕೊಳ್ಳಲಾಗುವುದಿಲ್ಲ. ಕಷ್ಟಬಂದರೆ ಅದನ್ನು ನೀಗಿಸಿಕೊಳ್ಳಲು ನಾವು ಪಡುವ ಪರದಾಟ ನೋಡಿದರೆ ನಗು ಬರುತ್ತದೆ. ದೇವರ ಬಳಿ ಮೊರೆ, ಜ್ಯೋತಿಷ್ಯನ ಬಳಿ ಓಟ, ಬಂಧುಗಳಲ್ಲಿ ಮತ್ತು ಸ್ನೇಹಿತರಲ್ಲಿ ಯಾಚನೆ, ಮಾನಸಿಕವಾಗಿ ಕುಸಿತ, ಖಿನ್ನತೆ. ಕಷ್ಟವೆಂದು ಹೇಳಿಕೊಳ್ಳುವುದನ್ನು ಬಿಟ್ಟರೆ ಕಷ್ಟವನ್ನು ಅನುಭವಿಸುವುದೇ ಇಲ್ಲ. ಸುಖ ಬಂದರೂ ಹಾಗೆಯೇ, ಬೀಗುವುದು, ಅಹಂಕಾರ ತೋರುವುದು, ಮದದಿಂದ ಏನೇನನ್ನೋ ಮಾಡಲುಪಕ್ರಮಿಸುವುದು, ಹಾಗೆ ಸುಖವನ್ನೂ ಅನುಭವಿಸುವುದಿಲ್ಲ. ಅದನ್ನು ಬಿಟ್ಟು ಶಾಂತವಾಗಿ ಕಷ್ಟ ಮತ್ತು ಸುಖ ಎರಡನ್ನೂ ಅನುಭವಿಸಿದರೆ ಕಷ್ಟ ಮತ್ತು ಸುಖಕ್ಕೂ ಮೀರಿದ ಒಂದು ಶಾಂತ ಅನುಭವವನ್ನು ಪಡೆದರೆ ಆಗ ಪರತತ್ವದ ಅನುಭವಾಗುತ್ತದೆ.

“ಅಯ್ಯೋ ಸುಖ ಬಂದಾಗ ಅನುಭವಿಸದೆ ಇರಲಿಕ್ಕಾಗುತ್ತದೆಯೇ?' ಎಂದು ಕೇಳುವವರಿಗೇನೂ ಕಡಿಮೆ ಇಲ್ಲ. ಅಶಾಶ್ವತವಾದ ಈ ಜಗತ್ತಿನ ಕಷ್ಟ ಸುಖಗಳು ಹೀಗೇ ಇರುತ್ತವೆ ಎಂದು ತಿಳಿದವರಿಗೆ ಮತ್ತು ಈ ಜಗತ್ತು ಮತ್ತು ಈ ಜಗತ್ತಿನ ಸೆಳೆತಗಳಲ್ಲೇ ಇರಬಯಸುವವರಿಗೆ ಪರತತ್ವದ ಅನುಭವ ಆಗುವುದೇ ಇಲ್ಲ. ಈ ಕಷ್ಟ ಸುಖಗಳನ್ನು ಮೀರಿ ನಿಲ್ಲಬೇಕು. ಅವುಗಳು ಉಂಟಾಗಿಸುವ ತಲ್ಲಣ ಮತ್ತು ಕಂಪನಗಳಿಗೆ ಬಲಿಯಾಗದೆ ಅದಕ್ಕಿಂತ ಮೇಲೇರಬೇಕು. "ಇವನ್ನೆಲ್ಲ ಉಂಟುಮಾಡುವವನು, ಇವಕ್ಕಿಂತ ಅತೀತನಾಗಿದ್ದಾನೆ. ಹಾಗಾಗಿ ಆ ಅತೀತನನ್ನು ಅರಿಯಬೇಕೆಂಬ ಆಸೆ ಈ ಕಷ್ಟ ಸುಖಗಳ ಅನುಭವದಿಂದ ಮುಂದೆ ಹೋದರೆ ಸಾಧ್ಯ. ಅವುಗಳ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಒಂದಿಷ್ಟೂ ಪ್ರಯತ್ನಪಡದೆ ಪರಿಪೂರ್ಣ ಅನುಭವವನ್ನು ಪಡೆದರೆ ಅದು ತಪಸ್ಸಾಗುತ್ತದೆ ಮತ್ತು ಆ ತಪಸ್ಸಿನಿಂದಲೇ ಪರತತ್ವದ ಅನುಭವ ಮತ್ತು ಅರಿವಾಗುತ್ತದೆ.

ಮುಕ್ತಕ 811

ಹೊರಗು ಹೊರೆಯಾಗದವೋಲ್ ಒಳಗನನುಗೊಳಿಸಿ, ನೀ- ।

ನೊಳಗು ಶೆಕೆಯಾಗದವೊಲ್ ಅಳವಡಿಸೆ ಹೊರಗ? ॥

ಸರಿಸಮದೊಳೆರಡನುಂ ಬಾಳಿನಲಿ ಜೋಡಿಪದೆ ।

ಪರಮಜೀವನಯೋಗ - ಮಂಕುತಿಮ್ಮ ॥

ಹೊರೆಯಾಗದವೊಲ್+ಹೊರೆ+ಆಗದ+ವೊಲ್, ಒಳಗನನುಗೊಳಿಸಿ=ಒಳಗನು+ಅನುಗೊಳಿಸಿ, ನೀನೊಳಗು= ನೀನು+ಒಳಗು, ಶೆಕೆಯಾಗದವೊಲ್=ಶೆಕೆ+ಆಗದ+ವೊಲ್, ಸರಿಸಮದೊಳೆರಡನುಂ=ಸರಿಸಮದೊಳ್+ಎರಡನುಂ, ಪರಮಜೀವನಯೋಗ = ಅತ್ಯುತ್ತಮ ಜೀವನ ಯೋಗ,

ನಮ್ಮ ಹೊರಗಿನದನ್ನು ಹೊರೆಯೆಂದು ಭಾವಿಸದಂತೆ ನಮ್ಮ ಒಳಗನ್ನು ಸಿದ್ಧಗೊಳಿಸಿ, ನಮ್ಮ ಹೊರಗು ನಮ್ಮೊಳಗೆ ನುಗ್ಗಿ ಬಿಸಿಯನ್ನುಂಟು ಮಾಡದಂತೆ ನಮ್ಮ ಒಳಗನ್ನೂ ಅಳವಡಿಸಿಕೊಂಡು, ಇವೆರಡನ್ನೂ ಸರಿಸಮವಾಗಿ ಜೋಡಿಸಿಕೊಳ್ಳಲಾದರೆ ಅದೇ ಜೀವನದಲ್ಲಿ ಅದೇ ಅತ್ಯುತ್ತಮವಾದ ಯೋಗ ಎಂದು ಹೇಳಿದ್ದಾರೆ, ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಇಲ್ಲಿ ಹೊರಗು ಎಂದರೆ, ನೋಡುವ, ಸ್ಪರ್ಶದಿಂದನುಭವಿಸುವ ಮತ್ತು ಕೇಳುವ ಹೊರಗಿನ ಪ್ರಪಂಚ, ಶಬ್ದ ಸ್ಪರ್ಶ ರೂಪ ರಸ ಗಂಧಾದಿಗಳಿಂದ ನಮ್ಮ ಸಂಪರ್ಕಕ್ಕೆ ಬರುವ ಹೊರಗಿನ ಪ್ರಪಂಚ, ಒಳಗು ಎಂದರೆ ನಮ್ಮ ಅಂತರಂಗ. ನಮ್ಮ ಅನುಭವಗಳು, ನಮ್ಮ ಜ್ಞಾಪಕಗಳಿಂದಾದ ನಮ್ಮ ಮನಸ್ಸು ಬುದ್ಧಿಗಳು, ಹೊರಗಿನದು ಒಳಗಿನ ಮೇಲೆ ಪ್ರಭಾವ ಬೀರುತ್ತದೆ. ಒಳಗಿನದು ಹೊರಗಿನದಕ್ಕೆ ಪ್ರತಿಕ್ರಿಯೆ ನೀಡುತ್ತದೆ. ಇದು ನಿರಂತರವಾಗಿ ನಡೆಯುವ ಪ್ರಕ್ರಿಯೆ. ಕೇವಲ ಪೂರ್ವ ಕರ್ಮಗಳ ವಾಸನೆಗಳನ್ನು ಹೊತ್ತು ತಂದ ಅಂತರಂಗ, ಬದುಕಿನಲ್ಲಿ ಹೊರಗಿನಿಂದ ಪ್ರಭಾವಿತವಾಗಿ ಮತ್ತಷ್ಟು ಗುಣಗಳನ್ನು ಅಂಟಿಸಿಕೊಂಡು ಹಲವನ್ನು ತೊರೆದು ಕೆಲವನ್ನು ಉಳಿಸಿಕೊಂಡು ತನ್ನ ಪ್ರಯಾಣವನ್ನು ಮುಂದುವರೆಸುತ್ತದೆ. ಇದು ಸಹಜವಾಗಿ ನಡೆಯುವ ಪ್ರಕ್ರಿಯೆ.

ಪ್ರತಿಯೊಬ್ಬರ ಸ್ವಭಾವ, ಗುಣ ಮತ್ತು ಬದುಕುವ ರೀತಿ, ಈ ಒಳಗು ಹೊರಗುಗಳ ಪರಸ್ಪರ ಹೊಂದಾಣಿಕೆಯ ಮೇಲೆ ಆಧಾರಪಟ್ಟಿರುತ್ತದೆ. "ಒಳಗನನುಗೊಳಿಸಿ" ಎಂದು ಡಿವಿಜಿಯವರು ಹೇಳುವಂತೆ, ಯಾವ ಹೊರಗಿನ ವಿಚಾರವನ್ನು ಒಳಕ್ಕೆ ತಂದುಕೊಳ್ಳಬೇಕು, ಎಷ್ಟು ತಂದುಕೊಳ್ಳಬೇಕು, ಅದರಲ್ಲಿ ಗುಣವೆಷ್ಟು, ನಿರ್ಗುಣವೆಷ್ಟು ಮತ್ತು ದುರ್ಗುಣವೆಷ್ಟು, ನಮ್ಮ ಅವಶ್ಯಕತೆಯೇನು ಮತ್ತು ಅದು ನಮ್ಮ ಅಂತರಂಗವನ್ನು ಅದೆಷ್ಟು ಪ್ರಭಾವಿಸಬೇಕು ಮುಂತಾದಾಗಿ ಯೋಚಿಸಿ ತೀವ್ರ ಮಂಥನ ಮಾಡಿ, ಹೊರಗಿನದಕ್ಕೆ ಅತಿಯಾದ ಮತ್ತು ಅನಾವಶ್ಯಕ ಪ್ರತಿಕ್ರಿಯೆ ನೀಡದೆ ಕೇವಲ 'ಗುಣ ಗ್ರಹಣ' ಮಾಡುವಂತಹ ರೀತಿಯಲ್ಲಿ ನಮ್ಮ ಅಂತರಂಗದ ರಂಗಮಂಚವನ್ನು ಸಿದ್ಧಪಡಿಸಿಕೊಳ್ಳಬೇಕು. ಇದು ಅಂತರಂಗದ ಸಿದ್ಧತೆ. ಅಷ್ಟೇ ಅಲ್ಲ ನಮ್ಮ ಹೊರಗು ನಮ್ಮೊಳಗೆ ನುಗ್ಗಿ ನಮ್ಮ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು. ಸತ್ಸಂಗ, ಸದ್ವಿಚಾರ, ಸದಾಚಾರ, ಸುಗುಣಗಳ ಪರಿಸರದಲ್ಲಿ ನಮ್ಮನ್ನು ನಾವು ನಿಲ್ಲಿಸಿಕೊಂಡಾಗ, ಯಾವ ದುಷ್ಪರಿಣಾಮವನ್ನೂ ಬೀರದೆ ನಮ್ಮ ಅಂತರಂಗಕ್ಕೆ





ಬಿಸಿಮುಟ್ಟಿಸದಂತೆ ಹೊರಗಿನ ಪರಿಸರವನ್ನು ಸ್ವಪ್ರಯತ್ನದಿಂದ ಸೃಷ್ಟಿಸಿಕೊಂಡಾಗ ಅದು ಹೊರಗಿನ ಸಿದ್ಧತೆಯಾಗುತ್ತದೆ.

ಹೀಗೆ ನಿರ್ಮಲವಾದ ಒಳಹೊರಗುಗಳ ಸಮನ್ವಯದಿಂದ, ಅಂತರಂಗ, ಬಹಿರಂಗಗಳ ಶುದ್ಧಿಯನ್ನು ಸಾಧಿಸಿದರೆ ಅದು 'ಪರಮಜೀವನಯೋಗ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಸಹೃದಯರೇ, ಆದರೆ ಇಂದಿನ ಪೈಪೋಟಿಯಿಂದ ಕೂಡಿದ, ಯಾವುದೇ ವಿಚಾರವನ್ನು ಆಳವಾಗಿ ನೋಡದೆ, ಕೇವಲ ಮೇಲುನೋಟಕ್ಕೆ ಇದ್ದಂತೆ ಇದ್ದು, ಯಾವುದರಲ್ಲೂ ಇರಲಾಗದ ಕ್ಲಿಷ್ಟ ಬದುಕಿನಲ್ಲಿ ಇದು ಸಾಧ್ಯವೇ? ಎಂದು ಪ್ರಶ್ನೆ ಉದ್ಭವವಾಗಬಹುದು. ರೋಗ ಹೆಚ್ಚಾದಂತೆ ಮದ್ದಿನ ತೀವ್ರತೆಯೂ ಅಧಿಕವಾಗಬೇಕಾದ ಹಾಗೆ, ಇಂದಿನ ಸಮಾಜಕ್ಕೆ ಅಂದು ಗುಂಡಪ್ಪನವರು

ಸೂಚಿರುವ ಈ ಒಳಹೊರಗುಗಳ ಸಮನ್ವಯದ ಜೀವನ ಅತಿ ಮುಖ್ಯ. ಪ್ರಯತ್ನಪಟ್ಟರೆ ಯಾರು ಬೇಕಾದರೂ ಸಾಧಿಸಬಹುದು. ದೃಢವಾದ ಇಚ್ಚೆ ಮತ್ತು ಪೂರಕವಾದ ಪ್ರಯತ್ನದಿಂದ ಸಾಧಿಸಬಹುದು.

**ಮುಕ್ತಕ – 812**

**ಅಳಬೇಕು, ನಗಬೇಕು, ಸಮತೆ ಶಮವಿರಬೇಕು ?**

**ಹೊಳೆಯ ನೆರೆವೊಲು ಹೃದಯರಸ ಹರಿಯಬೇಕು ??**

**ಅಲೆಯಿನಲುಗದ ಬಂಡೆಯವೊಲಾತ್ಮವಿರಬೇಕು ?**

**ತಿಳಿದವರ ಚರಿತವದು - ಮಂಕುತಿಮ್ಮ ??**

ಶಮವಿರಬೇಕು=ಶಮವು+ಇರಬೇಕು, ಅಲೆಯಿನಲುಗದ=ಅಲೆಯಿನ್+ಅಲುಗದ,

ಬಂಡೆಯವೊಲಾತ್ಮವಿರಬೇಕು=ಬಂಡೆಯ+ಒಲು+ಆತ್ಮವು+ಇರಬೇಕು, ಚರಿತವದು=ಚರಿತವು+ಅದು

ಅಲೆಯಿನ್=ಅಲೆಯಿಂದ, ಒಲು=ಹಾಗೆ, ಚರಿತ=ನಡವಳಿಕೆ

ಜಗತ್ತಿನಲ್ಲಿ ಬದುಕುವಾಗ ಎಲ್ಲರೊಡನೆ ಸೇರಿ ನಗಬೇಕು, ಸಮಯ ಬಂದಾಗ ಅಳಲೂ ಬೇಕು. ಆದರೆ ಅಂತರಂಗದಲ್ಲಿ ಶಮ, ಎಂದರೆ ನಿಗ್ರಹವಿರಬೇಕು. ಹೃದಯದ ಭಾವರಸವು, ಹೊಳೆಯ ನೆರೆಯಂತೆ ಹರಿಯಬೇಕು. ಆದರೆ ಆತ್ಮ ಆ ಭಾವರಸದ ಹೊಡೆತಕ್ಕೆ ಜಗ್ಗದೆ, ಬಂಡೆಯಂತೆ ದೃಢವಾಗಿ ಇರಬೇಕು. ಜಗತ್ತಿನಲ್ಲಿ, 'ಅರಿತವರ ಮತ್ತು ಜ್ಞಾನಿ' ಗಳ ನಡವಳಿಕೆ ಆ ರೀತಿಯಿರುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಮಾಜದಲ್ಲಿ ನಾವಿರುವಾಗ ಮತ್ತು ನಮಗೆ ಹಲವಾರು ವ್ಯಕ್ತಿ, ವಿಷಯ ಮತ್ತು ವಸ್ತುಗಳೊಂದಿಗೆ ಸಂಪರ್ಕವಿರುವಾಗ, ನಗುವ ಮತ್ತು ಅಳುವ ಸಂದರ್ಭಗಳು ಹೇರಳವಾಗಿ ಸಿಗುತ್ತವೆ. ಕಷ್ಟ ಬಂದರೆ ದುಃಖವಾಗುತ್ತದೆ ಮತ್ತು ಅಳುವ ಸ್ಥಿತಿಯುಂಟಾಗುತ್ತದೆ. ಆಗ ಅಳಬೇಕು ಆದರೆ ಆ ಆಳು ಆ ಕ್ಷಣಕ್ಕೆ ನಾಲ್ಕು ಹನಿ

ಕಣ್ಣೀರಿಡಲು ಮಾತ್ರ ಸೀಮಿತವಾಗಿಬೇಕು. ಅಳುವಿಗೆ ಕಾರಣವಾದ ದುಃಖ ನಮ್ಮ ಒಳಕ್ಕೆ ಹೊ(ಹೋ)ಗಬಾರದು. ಅದು ಹೊಕ್ಕರೆ ನಮಗೆ ಹಿಂಸೆ, ಖಿನ್ನತೆ, ಈರ್ಷೆ ಮುಂತಾದವುಗಳಾಗಿ ಆ ದುಃಖ ಮತ್ತಷ್ಟು ಅಧಿಕವಾಗಿ, ಹತ್ತು ಜನಕ್ಕೆ ಅದನ್ನು ಹಂಚುವಂತಾಗಿ ನಮ್ಮನ್ನು ಕುಗ್ಗಿಸುತ್ತದೆ ಮತ್ತು ಆ ಕಾರಣವಾಗಿ ಆತ್ಮ ಸೊರಗುತ್ತದೆ.

ಹಾಗೆಯೇ, ಸುಖ ಬಂದರೆ ಬಂದ ಕ್ಷಣದಲ್ಲಿ ಬಂದದ್ದನ್ನು ಅನುಭವಿಸಿ ಆನಂದಪಟ್ಟು ಮತ್ತೆ ಸಹಜ ಸ್ಥಿತಿಗೆ ಬಂದುಬಿಡಬೇಕು. ಅದನ್ನು ಬಿಟ್ಟು 'ನಾನು' ಸಾಧಿಸಿದೆನೆಂಬ ಅಹಂಕಾರವುಂಟಾದರೆ, ಆ ಅಹಂಕಾರ ನಮ್ಮನ್ನು ಕ್ಷಣಿಕ ಸುಖದಲ್ಲಿ ತೇಲಾಡಿಸಿ, ತಾತ್ವಿಕ ಮತ್ತು ನೈತಿಕ ಅಧೋಗತಿಗೆ ತಳ್ಳುತ್ತದೆ. ಇದರಿಂದಲೂ ಆತ್ಮ ಸೊರಗುತ್ತದೆ. ಹಾಗಾಗಿ ಹರಿದುಹೋಗುವ ನದಿಯಂತೆ ನಮ್ಮ ಹೃದಯದ ಭಾವಗಳು ಹರಿದುಹೊಗಬೇಕು. ನದೀ ತೀರದಲ್ಲಿನ ಬಂಡೆ ಆ ನದಿಯ ಅಲೆಗಳಿಂದ ಎಷ್ಟು ಬಾರಿ ಹೊಡೆತ ತಿಂದರೂ ಅಲುಗಾಡದೆ ನಿಂತಿರುವಂತೆ ಈ ಸುಖ ದುಃಖಗಳಿಂದ ನಮ್ಮ ಮನಸ್ಸು ಬುದ್ಧಿಗಳಲ್ಲಿ ಏಳುವ ಭಾವನೆಗಳ ಅಲೆಗಳು ಅಲುಗಿಸದಂತೆ ನಮ್ಮ ಆತ್ಮವನ್ನು "ಬಂಡೆ'ಯಂತೆ ಗಟ್ಟಿಯಾಗಿಟ್ಟುಕೊಳ್ಳಬೇಕು. ಸುಖ ಮತ್ತು ದುಃಖಗಳಿಗೆ ಸಾಕ್ಷೀಭೂತವಾಗಿ ನಿಂತಿರಬೇಕು, ಹೊರಗಿನದನ್ನು ಸಂಪೂರ್ಣವಾಗಿ ತಡೆಯಲು ನಮ್ಮಿಂದಾಗುವುದಿಲ್ಲ. ಅದಕ್ಕೆ ಮಾನ್ಯ ಗುಂಡಪ್ಪನವರು "ಸಮತೆ ಶಮವಿರಬೇಕು" ಎಂದು ಹೇಳುವಂತೆ, ಸುಖದುಃಖಗಳ ಮಹಾಪೂರ ನಮ್ಮನ್ನು ವಿಚಲಿತಗೊಳಿಸದಂತೆ ನಮ್ಮ ಅಂತರಂಗ ದೃಢವಾಗಿರಬೇಕು. ನಾವು ಹೊರಗಿನ ವಿಚಾರಗಳಲ್ಲಿ ಇದ್ದರೂ ಅವು ಒಳಗೆ ನುಗ್ಗಿ ಅಂತರಂಗವನ್ನು ಕದಡದಂತೆ ದೃಢವಾಗಿ ಇಟ್ಟುಕೊಳ್ಳಬೇಕು. ಹೀಗೆ ಹೊರ ಒಳಗುಗಳ ನಡುವೆ ಸೂಕ್ಷ್ಮ ಸಮನ್ವಯವನ್ನು ಸಾಧಿಸಬೇಕು. ಸಾಧಕನಿಗೆ ಈ ಸ್ಥಿತಿಯಲ್ಲಿ ಪರತತ್ವದ ಅನುಸಂಧಾನ ಬಹಳ ಸುಲಭವಾಗುತ್ತದೆ.

ದುಃಖವನ್ನು ಭರಿಸುವ ಅನಿವಾರ್ಯತೆ ಮತ್ತು ಸುಖಗಳ ಕ್ಷಣಿಕತೆಯನ್ನು ಅರಿತವರಿಗೆ ಹೀಗೆ ಹೊರಗಿನ ವಿಚಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೂ ಒಳಗೆ ಗಟ್ಟಿಯಾಗಿರುವ ಅಭ್ಯಾಸವಾಗಿ ಅವರು ನಿರ್ಭೀತರಾಗಿ, ನಿಶ್ಚಿಂತರಾಗಿ ಇರುತ್ತಾರೆ. ಅವರ ನಡವಳಿಕೆಯಲ್ಲೇ ನಮಗೆ ಅದು ಅರಿವಾಗುತ್ತದೆ. ಬಹುಶಃ ಅನ್ಯರನ್ನು ಕಂಡು "ಸುಖ ದುಃಖಗಳನ್ನು ಸಮನಾಗಿ ಕಾಣಬೇಕು' ಎಂದು ಹೇಳುವುದು ಬಹಳ ಸುಲಭ. ಆದರೆ ಆ ಸುಖವೋ ಅಥವಾ ಆ ದುಃಖವೋ ನಮ್ಮ ಕಾಲಬುಡಕ್ಕೆ ಬಂದಾಗ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಕೇವಲ

ಸಾಧನೆಯಿಂದ ಬರುತ್ತದೆ. ಅಂತಹ ಸಾಧನೆ ಎಲ್ಲರಿಗೂ ಸಾಧ್ಯ ಸಾಧಿಸಿದರೆ ಮನಸ್ಸು ಶಾಂತವಾಗಿ ಆನಂದವಾಗಿರಬಹುದು. ಪ್ರಯತ್ನಪಡಬೇಕು ಅಷ್ಟೇ !!!

| |
|---|
| 16ಸಂ |

| | |
|---|---|
| ಕಗ್ಗರಸಧಾರೆ | ಬಾಹ್ಯಾಂತರ್ಯ ಸಮುಚ್ಚಯ ೩ಸಂ೨ - |
| 813 | |

**ಮುಕ್ತಕ - 813**

**ಬಿಟ್ಟೆನೆಲ್ಲವನೆಂಬ ಹೃದಯಶೋಷಣೆಬೇಡ |**

**ಕಟ್ಟಿಕೊಳ್ಳುವ ಶಿರಃ ಪೀಡೆಯುಂ ಬೇಡ ||**

**ತೊಟ್ಟು ನಿರಹಂಕೃತಿಯ ಕವಚವನು ನೀಂ ಪೋರು |**

**ಮುಟ್ಟದಿಳೆಯಸಿ ನಿನ್ನ - ಮಂಕುತಿಮ್ಮ ||**

ಬಿಟ್ಟೆನೆಲ್ಲವನೆಂಬ=ಬಿಟ್ಟೆನು+ಎಲ್ಲವನು+ಎಂಬ, ಮುಟ್ಟದಿಳೆಯಸಿ+ಮುತ್ತದು+ಇಳೆಯ+ಅಸಿ,

ನಿರಹಂಕೃತಿಯ=ನಿರ್+ಅಹಂಕೃತಿಯ ಶಿರಃಪೀಡೆ= ತಲೆನೋವು, ಅಹಂಕೃತಿಯ=ಮಮಕಾರದ, ಅಸಿ=ಕತ್ತಿ

ನಾನು ಎಲ್ಲವನ್ನೂ ಬಿಟ್ಟಿದ್ದೇನೆ ಎಂದು ಹೃದಯ ಶೋಷಣೆಯನ್ನೂ ಮಾಡಿಕೊಳ್ಳಬೇಡ ಅಥವಾ ಎಲ್ಲವನ್ನೂ ಕಟ್ಟಿಕೊಂಡು ತಲೆನೋವನ್ನೂ ತಂದುಕೊಳ್ಳಬೇಡ. ನಿರಹಂಕಾರ' ದ ಕವಚವನ್ನು ತೊಟ್ಟುಬಿಡು. ಆಗ ಈ ಜಗತ್ತಿನ ಕತ್ತಿಯ ಅಲಗು ನಿನ್ನನ್ನು ಏನೂ ಮಾಡಲಾಗದು ಎಂದು ಘಾಸಿಗೊಳ್ಳದೆ ಬದುಕನ್ನು ಹೇಗೆ ಸಾಗಿಸಬೇಕು ಎನ್ನುವುದನ್ನು ಸೂಚಿಸಿದ್ದಾರೆ, ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

"ಅಯ್ಯೋ ನನಗೇನೂ ಬೇಡ. ನಾನು ಎಲ್ಲವನ್ನೂ ಬಿಟ್ಟಿದ್ದೇನೆ, ಈ ಜಗತ್ತಿನಿಂದ ನನಗೇನೂ ಆಗಬೇಕಿಲ್ಲ ಎಂದು ಹೊರಗೆ ಹೇಳಿ ಮತ್ತು ನಿಶ್ಚಯಿಸಿಕೊಂಡರೂ, ಮನಸ್ಸಿನ ಅಂತರಾಳದಲ್ಲಿ ಮತ್ತೆ ಮತ್ತೆ ಚಿಗುರುವ ಬೀಜಗಳನ್ನಿಟ್ಟುಕೊಂಡಿದ್ದರೆ, ಒಳಗಿನಿಂದ ಆಸೆಗಳು ಚಿಗುರೊಡೆಯುವುದು. ಹೊರಗಿನಿಂದ ಅದನ್ನು ಬೇಡವೆಂದುಕೊಂಡಿದ್ದರೆ ಮನಸಿನಂಗಳದಲ್ಲಿ ಒಂದು ದ್ವಂದ್ವ ಅಥವಾ ತಿಕ್ಕಾಟಕ್ಕೆ ಕಾರಣವಾಗಿ ಹೃದಯವನ್ನು

ಶೋಷಣೆ ಮಾಡುತ್ತದೆ. ಚಿಗುರುವ ಸಾಮರ್ಥ್ಯವಿರುವ ಬೀಜಗಳನ್ನು ಕಿತ್ತು ಹೊರಹಾಕದ ಹೊರತು ಈ ಹೃದಯ ಶೋಷಣೆ ನಿಲ್ಲದು. ಬಿಡದಿದ್ದರೂ ಬಿಟ್ಟಂತಿರಬೇಕು. ಇದೇ ರೀತಿ ಎಲ್ಲವನ್ನೂ ಕಟ್ಟಿಕೊಂಡು, ಯಾವುದನ್ನೂ ಸಮರ್ಪಕವಾಗಿ ಸರಿತೂಗಿಸಲು ಆಗದೆ, ಬಿಡಲೂ ಆಗದೆ ತಲೆನೋವನ್ನು ತಂದುಕೊಳ್ಳುವುದೂ ಬೇಡ. ಜಗತ್ತಿನಲ್ಲಿ ಇದ್ದಮೇಲೆ ಕಟ್ಟಿಕೊಳ್ಳದೆ ಇರಲು ಸಾಧ್ಯವಿಲ್ಲ. ಆದರೆ ಏನನ್ನು ಕಟ್ಟಿಕೊಳ್ಳಬೇಕು ಎಷ್ಟು ಕಟ್ಟಿಕೊಳ್ಳಬೇಕು ಎಂದು ಅರಿತು ಕಟ್ಟಿಕೊಂಡರೆ ನೋವು ಕಡಿಮೆಯಾಗುತ್ತದೆ. ಆದರೆ ಕಟ್ಟಿಕೊಂಡಿದ್ದರೂ ಬಿಟ್ಟಂತೆ ಇದ್ದರೆ ಮಾನ್ಯ ಗುಂಡಪ್ಪನವರು ಹೇಳುವ 'ಶಿರಃಪೀಡೆ' ಇರುವುದಿಲ್ಲ.

ಜಗತ್ತಿನ ಬದುಕಿಗೆ ಬಂದಾದಮೇಲೆ ಬದುಕು ಹಿತವಾಗಿರಬೇಕಾದರೆ ಆಸೆಗಳನ್ನು ಬಿಡಬೇಕು, ಆದರೆ ಬಿಡಲಾಗುವುದಿಲ್ಲ. ಲೋಕವ್ಯವಹಾರವನ್ನು ಕಟ್ಟಿಕೊಳ್ಳಬೇಕು ಆದರೆ ಸಹಿಸಲಾಗುವುದಿಲ್ಲ!! ಎಂದರೆ ಏನುಮಾಡಬೇಕು? ಎನ್ನುವುದಕ್ಕೆ ಡಿವಿಜಿಯವರು ಒಂದು ಸುಂದರ ಸಲಹೆಯನ್ನು ನೀಡುತ್ತಾರೆ. “ತೊಟ್ಟು ನಿರಹಂಕೃತಿಯ ಕವಚವನು ನೀಂ ಪೋರು' ಎಂದು 'ನಾನು ಮಾಡುತ್ತಿದ್ದೇನೆ, ನನಗಾಗಿ, ನನ್ನಿಂದ, ನಾನೇ ಎನ್ನುವ ಭಾವಗಳನ್ನು ತೊರೆದು ಅಹಂಕಾರ ರಹಿತವಾದ 'ನಿರಹಂಕಾರದ ಕವಚ' ವನ್ನು ತೊಟ್ಟು ಜಗತ್ತಿನ ಹೋರಾಟವನ್ನು ಎದುರಿಸಿದರೆ ಆಗ ನಮ್ಮನ್ನು ಕೊಯ್ಯುವ ಜಗತ್ತಿನ ಕತ್ತಿಗಳಾದ ನಾವು ಪಡುವ





ಆಸೆಗಳಿಂದಾಗಲೀ ಅಥವಾ ನಮ್ಮ ಲೋಕವ್ಯವಹಾರದಿಂದಾಗಲೀ ಹೃದಯಕ್ಕೆ ಪೀಡೆಯಾಗದು. ಎಲ್ಲದರಲ್ಲಿ ಇದ್ದೂ ಇಲ್ಲದಂತೆ ಸಂತೋಷವಾಗಿ ಎಲ್ಲವನ್ನೂ ಒಂದು 'ಸಾಕ್ಷಿ' ಎಂಬಂತೆ ನೋಡುತ್ತಾ, ಮಿತವಾಗಿ ಅನುಭವಿಸುತ್ತಾ, ನಿರ್ಮೋಹದ ನಿರ್ಮಮಕಾರದ ಜೀವನವನ್ನು ನಡೆಸಬಹುದು.

ನಿರ್ಮಮಕಾರದ, ನಿರ್ಮೋಹದ ಮತ್ತು ನಿರಹಂಕಾರದ ಸ್ಥಿತಿ ಬಹಳ ಉತ್ತಮವಾದ ಸ್ಥಿತಿ. ಪರತತ್ವಕ್ಕೆ ಬಹಳ ಹತ್ತಿರವಾದ ಸ್ಥಿತಿ. ಜಗತ್ತಿನ ಅಂಟನ್ನು ಬಿಡಿಸಿಕೊಂಡರೆ ಅಲ್ಲಿಗೆ ತಲುಪಬಹುದು. ಅಲ್ಲಿಗೆ ತಲುಪಿಬಿಟ್ಟರೆ ಮುಂದಿನ ಹಾದಿ ಮತ್ತು ಪ್ರಯಾಣ ಎರಡೂ ಸುಗಮವಾಗಿಬಿಡುತ್ತದೆ. ಹಿಂದೆ ಹೆಜ್ಜೆ ಇಡದಂತೆ ಮುನ್ನುಗ್ಗಬೇಕು. ಮನಸ್ಸು ಬುದ್ಧಿಗಳ

ನಿರಂತರ ತರಬೇತಿಯಿಂದ ಆ ಸ್ಥಿತಿಗೆ ತಲುಪುವ ಸಾಧನೆಯನ್ನು ಯಾರು ಬೇಕಾದರೂ ಮಾಡಬಹುದು. ಪ್ರಯತ್ನಪಡಬೇಕು ಅಷ್ಟೇ!

**ಮುಕ್ತಕ – 814**

**ನ್ಯಾಯಾಧಿಪತಿ ತನ್ನ ಮತಿ ಮನಸುಗಳನೆಲ್ಲ ।**

**ಸ್ವೀಯಲಾಭಸ್ಮರಣೆಯುಳಿದು ವಿವದಿಗಳಾ- ॥**

**ದಾಯನಿರ್ಣಯಕ್ಕೆ ಯೋಜಿಸುವಂತೆ, ನೀಂ ಜಗದ ।**

**ಶ್ರೇಯಸ್ಸಿಗುಜ್ಜುಗಿಸು – ಮಂಕುತಿಮ್ಮ ॥**

ಮನಸುಗಳನೆಲ್ಲ=ಮನಸುಗಳನು+ಎಲ್ಲ, ಸ್ವೀಯಲಾಭಸ್ಮರಣೆಯುಳಿದು=ಸ್ವೀಯ+ಲಾಭ+ಸ್ಕರಣೆ+ಉಳಿದು, ವಿವದಿಗಳಾದಾಯನಿರ್ಣಯಕೆ=ವಿವಧಿಗಳ+ಆದಾಯ+ನಿರ್ಣಯಕೆ,ಶ್ರೇಯಸ್ಸಿಗುಜ್ಜುಗಿಸು=ಶ್ರೇಯಸ್ಸಿಗೆ+ಉಜ್ಜುಗಿಸು ಸ್ವೀಯ ತನ್ನ, ಸ್ವಂತದ, ವಿವಧಿಗಳ=ವಿವಾದವನ್ನು ನ್ಯಾಯಾಲಯಕ್ಕೆ ತಂದವರು, ಉಜ್ಜಗಿಸು=ಉದ್ಯೋಗವನ್ನು ಅಥವಾ ಕರ್ಮವನ್ನು ಮಾಡು,

ನಿರ್ಮಮಕಾರದ, ನಿರ್ಮೋಹದ ಮತ್ತು ನಿರಹಂಕಾರದ ಸ್ಥಿತಿ ಬಹಳ ಉತ್ತಮವಾದ ಸ್ಥಿತಿ ಎಂದು ಹಿಂದಿನ ಮುಕ್ತಕದಲ್ಲಿ ಉಲ್ಲೇಖವಾಗಿದೆ. ಆದರೆ ಆ ಸ್ಥಿತಿಯನ್ನು ತಲುಪುವುದು ಹೇಗೆ ಎಂಬುದನ್ನು ಈ ಮುಕ್ತಕದಲ್ಲಿ ಉಲ್ಲೇಖಿಸುತ್ತಾ ಮಾನ್ಯ ಗುಂಡಪ್ಪನವರು, ನ್ಯಾಯಾಧಿಪತಿಯು ನ್ಯಾಯ ವಿತರಣೆ ಮಾಡುವಾಗ, ಹೇಗೆ ತನ್ನ ಸ್ವಂತ ಲಾಭವನ್ನು ಬದಿಗಿಟ್ಟು ತನ್ನ ಮನಸ್ಸು ಮತ್ತು ಬುದ್ಧಿಗಳನ್ನು, ಕೇವಲ ದಾವೆ ಹೂಡಿದವರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನಮಾಡಲು ಉಪಯೋಗಿಸುತ್ತಾನೋ ಹಾಗೆ, ಜಗತ್ತಿನಲ್ಲಿ ಜೀವಿಸುವಾಗ ನಿನ್ನ ಸ್ವಂತದ ಹಿತವನ್ನು ಬದಿಗಿಟ್ಟು ಜಗತ್ತಿನ ಹಿತಕ್ಕಾಗಿ ದುಡಿ, ಎಂದು ಸೂಚಿಸಿದ್ದಾರೆ.

ಹೇಗೆ ನ್ಯಾಯಾಧೀಶನಿಗೆ ಸ್ವಾರ್ಥದ ಬುದ್ಧಿಯಿದ್ದರೆ ನ್ಯಾಯ ವಿತರಣೆ ಸರಿಯಾಗಿ ಆಗಲಾರದೋ, ಹಾಗೆಯೇ ಬದುಕಿನಲ್ಲಿ ಸ್ವಂತದ ಲಾಭದ ಮೇಲೆ ದೃಷ್ಟಿಯಿಟ್ಟುಕೊಂಡು ಬದುಕುವವರು ಜಗತ್ತಿಗೆ ಏನನ್ನೂ ಕೊಡಲಾರರು. ಹಾಗೆಂದು ಲಾಭವಿಲ್ಲದೆ ಕೆಲಸ ಮಾಡಬೇಕು ಎಂದಲ್ಲ. ಪ್ರತಿಯೊಬ್ಬರಿಗೂ ಅವರವರದೇ ಅವಶ್ಯಕತೆಗಳಿರುತ್ತದೆ. ಅವುಗಳ ಪೂರೈಕೆಗೆ ಸಂಪಾದನೆ ಮಾಡಲೇಬೇಕು. ನ್ಯಾಯಾಧೀಶನಿಗೂ ಸಂಬಳ ಎನ್ನುವುದು ಇರುತ್ತದೆ ಅಲ್ಲವೇ? ಅವನು ತಾನು ನಿರ್ವಹಿಸುವ ಕೆಲಸದಲ್ಲಿ ತನ್ನ ಬುದ್ಧಿ ಮತ್ತು ಮನಸ್ಸುಗಳನ್ನು ಸಂಪೂರ್ಣವಾಗಿ, ತನ್ನೆದುರಿರುವ ಫಿರ್ಯಾದಿಗಳ, ಕಕ್ಷಿದಾರರ ನ್ಯಾಯಯುತವಾದ ಅಧಿಕಾರ ಮತ್ತು ಲಾಭಗಳನ್ನು ಕಾಪಾಡುವಂತೆ ನ್ಯಾಯವಿತರಣೆ ಮಾಡಿದರೆ ಅವನು ಲೋಕೋಪಯೋಗಮಾಡಿದಂತೆಯೇ ಅಲ್ಲವೇ?

ಆದೇ ರೀತಿ ನೀನೂ ಸಹ ಜಗತ್ತಿನ ಒಳಿತಿಗೆ ಅಥವಾ ಶ್ರೇಯಸ್ಸಿಗಾಗಿ “ಉಜ್ಜುಗಿಸು" ಎಂದರೆ ಕೆಲಸಮಾಡು ಎಂದು ಹೇಳಿದ್ದಾರೆ ಡಿವಿಜಿ. ಬದುಕಿನಲ್ಲಿ ನಮಗೆ ಸಂಸಾರವನ್ನು ನಿರ್ವಹಣೆಮಾಡುವ ದಾಯಿತ್ವವಿರುತ್ತದೆ. ಅದನ್ನು ಸರಿಯಾಗಿ ನಿರ್ವಹಿಸದೆ ಇದ್ದರೆ ಅದು ಧರ್ಮಲೋಪವಾಗುತ್ತದೆ. ಹಾಗೆ ಮಾಡುವುದು ಸಲ್ಲ. ಆದರೆ ನಮ್ಮ ಅವಶ್ಯಕತೆಗೆಷ್ಟು ಬೇಕೋ ಅಷ್ಟನ್ನು ಸಂಪಾದನೆ ಮಾಡಲೇಬೇಕು? ಸ್ವಾರ್ಥವಿರಬೇಕು. ಅದರ ಎಲ್ಲೆಯನ್ನು ಮೀರಿದರೆ ಅದು ದುರಾಸೆಯಾಗುತ್ತದೆ. ದುರಾಸೆ ಮತ್ತು ಅತಿಯಾಸೆಗಳು ವ್ಯಕ್ತಿಯ ಅಧೋಗತಿಗೆ ಮತ್ತು ಸಮಾಜದ ಅವನತಿಗೆ ಕಾರಣವಾಗುತ್ತದೆ. ಹಾಗಾಗಿಯೇ ಮಾನ್ಯ ಡಿವಿಜಿಯವರು "ನೀಂ ಜಗದ ಶ್ರೇಯಸ್ಸಿ ಗುಜ್ಜುಗಿಸು" ಎಂದು ಆದೇಶ ನೀಡಿದ್ದಾರೆ.

'ನಮ್ಮದನ್ನು ನಾವು ನೋಡಿಕೊಂಡರೆ ಸಾಲದೇ? " ಎಂದು ಕೇಳುವವರು ನಮಗೆ ಅಡಿಗಡಿಗೆ ಸಿಗುತ್ತಾರೆ. ಆದರೆ ಎಲ್ಲರಿಗೂ ಒಂದೇ ಸಮನಾದ ಕ್ಷಮತೆ ಇರುವುದಿಲ್ಲ. ಹಾಗೆ ಹೆಚ್ಚಿನ ಕ್ಷಮತೆ ಇರುವವರು, ಸಾಧ್ಯವಾದಷ್ಟೂ ಪರಹಿತ ಮತ್ತು ಪರೋಪಕಾರಕ್ಕೆ ತಮ್ಮ ಅಮಿತವಾದ ಶಕ್ತಿಯನ್ನು ಉಪಯೋಗಿಸಿ ಶ್ರಮಿಸಿದರೆ ಬಲಹೀನರಿಗೆ ಉಪಕಾರ ಮಾಡಿದಂತಾಗುತ್ತದೆ. ತಮ್ಮ ಅವಶ್ಯಕತೆಗಳಿಗೆ ಮಿತಿಯ ಗೆರೆಯನ್ನು ಎಲೆಯಲಾಗದೆ ಹಣವಂತರು ಹಣವಂತರಾಗುತ್ತಾ, ದರಿದ್ರರು ಮತ್ತಷ್ಟು ದಾರಿದ್ರವನ್ನು ಅಪ್ಪಿಕೊಳ್ಳುತ್ತಾ ಸಾಮಾಜಿಕ ಅಸಮತೆಗೆ ಕಾರಣವಾಗುತ್ತದೆ. ಅಂತಹ ಜಗತ್ತು ಶ್ರೇಯಸ್ಸಿನಿಂದ ಕೂಡಿರುವುದಿಲ್ಲ. ಮುಂಬರುವ ನಮ್ಮ ಜನಾಂಗಕ್ಕೆ ಒಂದು ಸುಂದರ ಭವಿಷ್ಯವನ್ನು ನಿರ್ಮಾಣಮಾಡಬೇಕಾದರೆ, ಇಂದು ಇರುವವರು ಜಗತ್ತಿನ ಶ್ರೇಯಸ್ಸಿಗೆ ಶ್ರಮಿಸಲೇ ಬೇಕು. ನಮ್ಮ ಅವಶ್ಯಕತೆಗಳನ್ನು ಮಿತವಾಗಿಟ್ಟುಕೊಂಡು ಅವುಗಳನ್ನು ಸಮರ್ಪಕವಾಗಿ ಪೂರೈಸಿಕೊಳ್ಳುತ್ತಾ, ನಮಗಿರುವ ಅಧಿಕ ಕ್ಷಮತೆ, ಜ್ಞಾನ, ಬುದ್ಧಿಗಳನ್ನು ಲೋಕೊಪಯೋಗಕ್ಕಾಗಿ ಉಪಯೋಗಿಸಬೇಕು. ಅಂತಹ ಪ್ರಯತ್ನದಿಂದ ಡಿವಿಜಿಯವರು ಹೇಳಿದ 'ಶ್ರೇಯಸ್ಸಿ' ನಿಂದ ಕೂಡಿದ ಜಗತ್ತನ್ನು ನೋಡಬಹುದು.

**ಮುಕ್ತಕ 815**

**ಪೌರುಷಾಶ್ವಕ್ಕಾಶೆ ಛಾಟಿ, ಭಯ ಕಡಿವಾಣ |**

**ಹಾರಾಟವದರದಾ ವೇಧೆಗಳ ನಡುವೆ ||**

**ಧೀರನೇರಿರೆ, ಹೊಡೆತ ಕಡಿತವಿಲ್ಲದೆ ಗುರಿಗೆ |**

**ಸಾರುವುದು ನೈಜದಿಂ - ಮಂಕುತಿಮ್ಮ ||**

ಪೌರುಷಾಶ್ವಕ್ಕಾಸೆ=ಪೌರುಷ+ಅಶ್ವಕ್ಕೆ+ಆಶೆ, ಹಾರಾಟವದರದಾ=ಹಾರಾಟವು+ಅದರದು+ಆ, ಧೀರನೇರಿರೆ=ಧೀರನು+ಏರಿ+ಇರೆ,ಪೌರುಷಾಶ್ವ=ಶಕ್ತಿಯಿಂದ ಕೂಡಿದ ಮನವೆಂಬ ಕುದುರೆ, ಛಾಟಿ=ಚಾವಟಿ, ವೇಧೆ=ವೇದನೆ, ಸಾರುವುದು=ಸಾಗುವುದು, ನೈಜದಿಂ = ಸಹಜತೆಯಿಂದ,

ಹುಮ್ಮಸ್ಸಿನಿಂದ ಶಕ್ತಿಯುತವಾಗಿ ಮುನ್ನುಗ್ಗುವ ಮನಸ್ಸೆಂಬ ಕುದುರೆಗೆ ಆಸೆಯೇ ಚಾವಟಿ ಮತ್ತು ಭಯವೇ ಕಡಿವಾಣ, ಬದುಕಿನಲ್ಲಿ ಬರುವ ಸುಖ ಸಂತೋಷಗಳು, ನೋವು ವೇದನೆಗಳ ನಡುವೆ ಇದರ ಹಾರಾಟ. ಆದರೆ ಧೀರನಾದವನು, ವಿವೇಕವಂತನಾದವನು ಆ ಕುದುರೆಯನ್ನು ಏರಿದರೆ, ಈ ಚಾವಟಿಯ ಹೊಡೆತ ಅಥವಾ ಕಡಿವಾಣದ ಹಿಡಿತಗಳಿಲ್ಲದೆ, ತನ್ನ ಗುರಿಯತ್ತ ಸಹಜವಾಗಿ ಸಾಗುವುದು ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸು, ಬುದ್ಧಿ ಮತ್ತು ದೇಹಗಳಿಗಿರುವ ಬಲವನ್ನು ಕಾರ್ಯೋನ್ಮುಖವನ್ನಾಗಿ ಮಾಡುವುದು ನಮ್ಮ ಮನಸ್ಸಿನಲ್ಲಿ ಉದ್ಭವವಾಗುವ ಆಸೆಗಳು. ಹಾಗಾಗಿ ಮನವೆಂಬ ಕುದುರೆಯನ್ನು ಓಡಿಸುವುದೇ ಈ ಆಸೆಯೆಂಬ ಚಾವಟಿ. ಆದರೆ ಅದನ್ನು ತಡೆಯುವುದು 'ಭಯ'. ಬಯಸಿದ ಫಲ ಸಿಗುತ್ತದೋ ಇಲ್ಲವೋ ಎನ್ನುವ ಭಯ. ಹೀಗೆ ಒಂದು ಕಡೆ ನಮ್ಮನ್ನು ಹತ್ತು ದಿಕ್ಕಿನಲ್ಲಿ ಓಡುವಂತೆ ಮಾಡುವ ಮನದಲ್ಲಿ ಬುಗ್ಗೆ ಬುಗ್ಗೆಯಾಗಿ ಮೇಲೇಳುವ ಆಸೆಗಳು ಮತ್ತು ಆ

ಆಸೆಗಳನ್ನು ಈಡೇರಿಸಿಕೊಳ್ಳಲು ನಾವು ಮಾಡುವ ಪ್ರಯತ್ನಗಳಿಗೆ ಕಡಿವಾಣವೆಂಬಂತೆ ನಮ್ಮ 'ಭಯ' ಇವೆರಡರ ನಡುವ ನಮ್ಮ ಜೀವನ. ಈ ಆಸೆಗಳು, ಅವುಗಳ ಪರಿಣಾಮಗಳು ನಮ್ಮ ದೇಹ ಮನಸ್ಸು ಬುದ್ಧಿಗಳ ಮೇಲೆ ಮಾಡುವ ಪರಿಣಾಮಗಳೇ ನಮ್ಮ ನೋವು, ವೇದನೆ, ದುಃಖ, ಸುಖ, ಆನಂದ ಮುಂತಾದವುಗಳು. ಹೀಗೆ ಸದಾಕಾಲ ನಮ್ಮ ಜೀವನ ಇವೆರಡರ ಹೊಡೆತಗಳ ನಡುವೆ ನುಜ್ಜುನೂರಾಗುತ್ತದೆ, ಅಲ್ಲವೇ? ಒಬ್ಬೊಬ್ಬರ ಆಸೆ ಬೇರೆ, ಒಬ್ಬೊಬ್ಬರ ಭಯ ಬೇರೆ ಮತ್ತು ಒಬ್ಬೊಬ್ಬರ ಅನುಭವ ಬೇರೆ.

`ಧೀರನೇರಿರೆ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಎಂದರೆ ಈ ಶಕ್ತಿಯುವಾದ, ಆಸೆಗಳಿಂದ ಪ್ರೇರೇಪಣೆ ಪಡೆಯುವ ಮತ್ತು ಭಯಗಳಿಂದ ಹಿಡಿತದಲ್ಲಿಡಲ್ಪಟ್ಟ ಕುದುರೆಯನ್ನು ಧೀರನಾದವನು ಏರಿದರೆ ಅವನು ಈ ಆಸೆ ಮತ್ತು ಭಯಗಳ ಹಿಡಿತದಿಂದ ಪಾರಾಗಿ, ಏಳುಬೀಳುಗಳಿಲ್ಲದೆ, ಸಹಜವಾಗಿ ಮುನ್ನಡೆದು ತನ್ನ ಗಮ್ಯವನ್ನು ಸೇರುತ್ತಾನೆ ಎಂದು ಅರ್ಥ. 'ಧೀರ'ನೆಂದರೆ ಇಲ್ಲಿ ಧೈರ್ಯವಂತ ಎಂದು ಮತ್ತು ವಿವೇಕವನ್ನು





ಧಾರಣೆಮಾಡಿದವನು, ಎಂದೂ ಹೇಳಬಹುದು. ವಿವೇಕವಂತನಾದವನು, ಆಸೆಯೆಂಬ ಚಾವಟಿಯ ಹೊಡೆತ ಮತ್ತು ಹಿಡಿತಕ್ಕೆ ಒಳಗಾಗದೆ, ಸೂಕ್ತವಾದ ಆಸೆಯನ್ನು ಪಡುತ್ತಾ ಧೈರ್ಯವನ್ನು ಧಾರಣೆಮಾಡಿ ಮುನ್ನಡೆಯುತ್ತಾನೆ ಮತ್ತು ವಿವೇಕನಾದವನು ಆಸೆಯನ್ನೇ ಪಡುವುದಿಲ್ಲ. ತಾನು ಮಾಡುವ ಕರ್ಮದಿಂದ, ಬಂದದ್ದನ್ನು ಭಗವದ್ದಸಾದವೆಂದು ಸ್ವೀಕರಿಸುತ್ತಾ ತೃಪ್ತಿಯಿಂದ ಬದುಕುತ್ತಾನೆ.

ಆಸೆಯನ್ನು ಬಿಟ್ಟಮೇಲೆ ನಿರಾಸೆಯಿರುವುದಿಲ್ಲ. ಪರತತ್ವವನ್ನು ನಂಬಿದಮೇಲೆ, ಅನ್ಯರನ್ನು ನಂಬುವ ಅವಶ್ಯಕತೆಯಿರುವುದಿಲ್ಲವಾದ್ದರಿಂದ ಭಯವಿರುವುದಿಲ್ಲ. ಆಸೆ ಬಿಡುವುದೆಂದರೆ, ಬದುಕಿನಲ್ಲಿ ಆಸೆಯನ್ನು ತೊರೆಯಬೇಕು ಎಂದರ್ಥವಲ್ಲ. ಆದರೆ ಆಸೆಗಂಟಬಾರದು. ಅಂಟಿದರೆ, ನಂಟು, ನಂಟಿನಿಂದ ಗಂಟಿನಾಸೆ. ಇದೊಂದು ತಳವಿಲ್ಲದ

ಪಾತ್ರೆ, ಎಷ್ಟು ಸುರಿದರೂ ತುಂಬುವುದೇ ಇಲ್ಲ. ಹಾಗಾಗಿ ಈ ಜಗತ್ತಿಗೆ ಅಂಟದೇ ಇರುವುದೇ 'ಧೀರರ' ಲಕ್ಷಣ. 'ವಿವೇಕ ಮತ್ತು ಧೈರ್ಯ'ಗಳಂತಹ ಎರಡು ಅಸ್ತ್ರಗಳನ್ನು ಧಾರಣೆಮಾಡಿ ಮುನ್ನಡೆದರೆ 'ಗುರಿಗೆ ಸಾರುವುದು ನೈಜದಿಂ ಎಂದು ಡಿವಿಜಿಯವರು ಹೇಳುವಂತೆ ನಮ್ಮ ಜೀವನ ತನ್ನ ಗುರಿಯನ್ನು ಮುಟ್ಟುತ್ತದೆ. ಇಂದಿನ ಅತ್ಯಾಕರ್ಷಣೆಯ ಬದುಕಿನಲ್ಲಿ ನಮ್ಮ ಪ್ರಯತ್ನ ಮತ್ತಷ್ಟು ತೀವ್ರವಾಗಬೇಕಿದೆ.

**ಮುಕ್ತಕ - 816**

**ಆರೋಗ್ಯಭಾಗ್ಯವನು ಮನಕೆ ತನುಗೆಂತಂತೆ |**
**ಹಾರಯಿಸುವೊಡೆ ಹಲವು ಸರಳ ನೀತಿಗಳ ||**
**ಧಾರಯಿಸು ನೆನಸಿನಲಿ ನುಡಿಯಲ್ಲಿ ನಡತೆಯಲಿ |**
**ಪಾರಾಗು ಸುಳಿಯಿಂದ- ಮಂಕುತಿಮ್ಮ ||**

ತನುಗೆಂತಂತೆ =ತನುಗೆ+ಎಂತೆ+ಅಂತೆ,

ಹಾರಯಿಸುವೊಡೆ + ಬಯಸುವುದಾದರೆ, ತನುಗೆ=ದೇಹಕ್ಕೆ, ಧಾರಯಿಸು=ಧರಿಸು,

ದೇಹಾರೋಗ್ಯವನ್ನು ಕಾಪಾಡಿಕೊಳ್ಳಲು ಕೆಲವು ಸರಳ ನೀತಿಗಳನ್ನು ಪಾಲಿಸುವಂತೆ, ಕೆಲವು ಸರಳ ಸೂತ್ರಗಳನ್ನು ಪಾಲಿಸುವುದರಿಂದ ಮನದ ಆರೋಗ್ಯವನ್ನೂ ಬದುಕಿನಲ್ಲಿ ಸುಳಿಯಂತಹ ಸ್ಥಿತಿಗಳಲ್ಲಿ ಸಿಲುಕಿಕೊಳ್ಳದೆ ಪಾರಾಗು ಎಂದು ಸೂಚನೆಯನ್ನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೇಹಾರೋಗ್ಯವನ್ನು ಕಾಪಾಡಿಕೊಳ್ಳಲು ನಮಗೆ ಬಹಳಷ್ಟು ಮಾರ್ಗಗಳಿವೆ. 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಕಿವಿಮಾತು ಎಲ್ಲರಿಗೂ ಗೊತ್ತಿರುವುದೇ!! ಆಹಾರವಾಗಿ, ಏನನ್ನು, ಎಷ್ಟನ್ನು, ಯಾವ ಸಮಯದಲ್ಲಿ, ಯಾವ ಮಿಶ್ರಣದಲ್ಲಿ ಸೇವಿಸಿದರೆ ಒಳ್ಳೆಯ ಆರೋಗ್ಯ ಇರುತ್ತದೆ ಎಂಬ ಹಲವಾರು ಸರಳ ನೀತಿಗಳು ಇವೆ. ಅವುಗಳನ್ನು ಪಾಲಿಸಿದರೆ ಮತ್ತು ನಿಯಮಿತ ವ್ಯಾಯಾಮವನ್ನು ಮಾಡಿದರೆ ದೇಹದ ಆರೋಗ್ಯ ಸುಸ್ಥಿತಿಯಲ್ಲಿರುತ್ತದೆ. ದೇಹದ

ಆರೋಗ್ಯ ಸುಸ್ಥಿತಿಯಲ್ಲಿರಬೇಕೆಂದು ಹೇಗೆ ನಾವು ಅಪೇಕ್ಷೆ ಪಡುತ್ತೇವೋ ಅದೇ ರೀತಿ ಮನದ ಆರೋಗ್ಯವೂ ಸುಸ್ಥಿತಿಯಲ್ಲಿರಬೇಕಲ್ಲವೇ? ದೇಹಾರೋಗ್ಯಕ್ಕೆ ಯಾವ ಸರಳ ನೀತಿ ಅಥವಾ ಸೂತ್ರಗಳನ್ನು ನಾವು ಅನುಸರಿಸುತ್ತೇವೋ, ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಲವು ಸರಳ ಸೂತ್ರಗಳನ್ನು ಪಾಲಿಸಬೇಕು ಎನ್ನುವುದು ಈ ಮುಕ್ತಕದ ಆಶಯ.

ಒಳಹೋಗುವ ಆಹಾರದ ಮೇಲೆ ಹೇಗೆ ನಿಯಂತ್ರಣ ಸಾಧಿಸಬೇಕೋ, ಹಾಗೆಯೇ ಮನದೊಳಕ್ಕೆ ನುಗ್ಗುವ ವಿಚಾರಗಳ ಒಳ ಹರಿವಿನ ಮೇಲೂ ನಿಯಂತ್ರಣವನ್ನು ಸಾಧಿಸಬೇಕು. ಅಂತಹ ವಿಚಾರಗಳ ಚರ್ವಿತಚರ್ವಣ ಮಂಥನವಾಗಬೇಕು. ಸುಗುಣ ಗ್ರಹಣವಾಗಬೇಕು, ಆ ಸುಗುಣ ಸ್ಥಾಯೀರೂಪದಲ್ಲಿ ಒಳಗೆ ಉಳಿಯಬೇಕು ಮತ್ತು ಅದು ನಮ್ಮ ಸ್ವಾಭಾವವಾಗಬೇಕು. ಹಾಗಾದಾಗ ಮನದ ಆರೋಗ್ಯವೂ ಸುಧಾರಿಸುತ್ತದೆ. ದೇಹಕ್ಕೆ ಆಹಾರ ಶಕ್ತಿ ನೀಡುವಂತೆ, ಮನಸ್ಸು ಬುದ್ಧಿಗಳಿಗೆ 'ಆಸೆ'ಗಳು ಶಕ್ತಿ ನೀಡುತ್ತವೆ. ಆಸೆಯೇ ಮನಸ್ಸಿಗೆ ಆಹಾರ. ಆಸೆಯಿಂದಲೇ ಮನಸ್ಸಿಗೆ ಶಕ್ತಿ. ಆದರೆ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು 'ಆಸೆ'ಯನ್ನು ಅರಿತು ಪಡಬೇಕು. ಆಸೆಗಳಲ್ಲಿ 'ಏನನ್ನು, ಎಷ್ಟನ್ನು, ಯಾವ ಸಮಯದಲ್ಲಿ' ಎಂದು ಅರಿತು ಆಸೆಪಟ್ಟರೆ ಅಂದು ನಮ್ಮ ಮನಸ್ಸನ್ನು ಕದಡದೆ, ಪ್ರಶಾಂತವಾಗಿಟ್ಟು ನಮ್ಮ ಮನಸ್ಸಿನ ಆರೋಗ್ಯವನ್ನು ಕಾಪಾಡುತ್ತದೆ. ಹಾಗಲ್ಲದೆ ಸಿಕ್ಕ ಸಿಕ್ಕ ಆಸೆಗಳನ್ನು ಒಳ ಹರಿಯ ಬಿಟ್ಟರೆ, ಅವುಗಳು ನಮ್ಮ ಮನಸ್ಸಿನಲ್ಲಿ ಕೋಪ, ದ್ವೇಷ, ನಿರಾಸೆ, ದುಃಖ, ಮಿತಿಯಿಲ್ಲದ ಅಂಟು, ಮತ್ತಷ್ಟರ ಬಯಕೆ, ಅಹಂಕಾರ, ಮದ ಮುಂತಾದ ರೋಗಕಾರಕ ಭಾವಗಳಿಗೆ ನಾಂದಿ ಹಾಡಿ ಮನಸ್ಸಿನ ಆರೋಗ್ಯವನ್ನು ಸಂಪೂರ್ಣ ಹಾಳುಮಾಡಿ, ನಮ್ಮನ್ನು ನಾಶಮಾಡುತ್ತದೆ.

"ಸಂಗಾತ್ ಸಂಜಾಯತೇ ಕಾಮ, ಕಾಮಾದ್ ಕ್ರೋಧೋಭಿಜಾಯತೆ, ಕ್ರೋಧಾತ್ಸವತಿ ಸಂಮೋಹಃ, ಸಮ್ಮೋಹಾತ್ ಬುದ್ಧಿನಾಶಃ, ಬುದ್ಧಿನಾಶಾತ್ ಪ್ರಣಶ್ಯತಿ" ಇದು ಗೀತೆಯ ವಾಕ್ಕು. ಮಾನಸಿಕ ಸಂತುಲನೆ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಲು, ಸರ್ವ ಕಾಲಕ್ಕೂ ಸರ್ವ ಪ್ರಾಣಿಗಳಿಗೂ ಅನ್ವಯವಾಗುವಂತಹ ಸರಳ ನೀತಿ, ಮಾರ್ಗಗಳ ಸಂದೇಶ. ಹಾಗಾಗಿ ನಾವು ಸತ್ಸಂಗಿಗಳಾದರೆ ನಮ್ಮೊಳಗೆ ಹರಿಯುವ ಆಸೆ ಮತ್ತು ನಮಗೆ ಆ ಆಸೆಯ ಮಿತಿ ಮತ್ತು ಪರಿಣಾಮಗಳ ಅರಿವಿದ್ದರೆ, ಆಗ ಈ ಆಸೆಗಳು ಸೃಷ್ಟಿಸುವ 'ಸುಳಿ' ಗಳಿಂದ ನಾವು ಪಾರಾಗಬಹುದು.

"ಅಭ್ಯಾಸೇನ ತು ಕೌಂತೇಯ" ಎಂಬ ಗೀತಾಚಾರ್ಯನ ಆದೇಶದಂತೆ ನಿರಂತರ ಅಭ್ಯಾಸದಿಂದ ಆಸೆಗಳ ಒಳಹರಿವಿನ ಮೇಲೆ ನಿಯಂತ್ರಣವನ್ನು ಸಾಧಿಸಿ ನಮ್ಮ ಮಾನಸಿಕ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಬಹುದು.





**ಮುಕ್ತಕ - 817**

**ಮರವ ನೀನರಿಯುವೊಡೆ ಬುಡವ ಕೀಳಲುಬೇಡ ।**
**ತರಿಯಬೇಡೆಲೆಕಡ್ಡಿಗಳ ಪರೀಕ್ಷಣಕೆ ॥**
**ಎರೆ ನೀರ, ಸುರಿ ಗೊಬ್ಬರವ, ಕೆದು ಪಾತಿಯನು ।**
**ನಿರಕಿಸುತ ತಳಿರಲರ – ಮಂಕುತಿಮ್ಮ ॥**

ನೀನರಿಯುವೊಡೆ=ನೀನು+ಅರಿಯುವ+ಒಡೆ, ತರಿಯಬೇಡೆಲೆಕಡ್ಡಿಗಳ-ತರಿಯಬೇಡ+ಎಲೆ+ಕಡ್ಡಿಗಳ, ತಳಿರಲರ=ತಳಿರ+ಅಲರ ತರಿಯಬೇಡ=ಕೀಳ ಬೇಡ, ನಿರಕಿಸುತ=ನಿರೀಕ್ಷಿಸುತ್ತಾ, ಎರೆ ನೀರ= ನೀರನ್ನು ಹಾಯಿಸು, ತಳಿರಲರ=ಚಿಗುರ ಗಾಳಿ.

ಒಂದು ಮರವನ್ನು ಅರಿಯಲು ಅದರ ಬುಡವನ್ನು ಕೀಳಬೇಡ, ಅದರ ಎಲೆ ಮತ್ತು ಕಡಿಗಳನ್ನು ಪರೀಕ್ಷಿಸಲೆಂದು ತರಿಯಬೇಡ. ಬದಲಾಗಿ ಅದಕ್ಕೆ ನೀರನ್ನು ಹಾಯಿಸು, ಅದರ ಪಾತಿಯನ್ನು ಕೆದಕಿ ಸ್ವಲ್ಪ ಗೊಬ್ಬರವನ್ನು ಕೊಟ್ಟು ಅದರಲ್ಲಿ ಚಿಗುರುವ ಎಲೆಗಳ ಮೇಲಿಂದ ಬೀಸುವ ತಂಪಾದ ಮಂದಮಾರುತವನ್ನು ನಿರೀಕ್ಷಿಸು, ಎಂದು ಹೇಳುತ್ತಾ ಈ ಜಗತ್ತೆಂಬ ಹೂದೋಟದಲ್ಲಿ ನಾವು ಹೇಗಿರಬೇಕು ಎನ್ನುವುದಕ್ಕೆ ಒಂದು ದೃಷ್ಟಾಂತದ ಮೂಲಕ ವಿವರಿಸಿದ್ದಾರೆ.

ಒಬ್ಬ ಸಸ್ಯ ವಿಜ್ಞಾನಿ ಸಸ್ಯಗಳನ್ನು ಅಧ್ಯಯನ ಮಾಡಲು ಅದರ ಬೇರು, ಎಲೆ, ಕಾಂಡ, ಕೊಂಬೆ, ಹೂವು, ಹಣ್ಣು ಮುಂತಾದವುಗಳನ್ನು ಕಿತ್ತು ಅವುಗಳನ್ನು ನಾನಾ ವಿಧವಾದ ಪ್ರಯೋಗಗಳಿಗೆ ಒಡ್ಡಿ ಅದರ ಅಮೂಲಾಗ್ರ

ಸಂಶೋಧನೆಯನ್ನು ಮಾಡಿ ಇದು ಹೀಗೆ, ಹೀಗಿದ್ದರೆ ಹಾಗೆ ಎನ್ನುವ ರೀತಿಯಲ್ಲಿ ವಿಶ್ಲೇಷಣೆ ಮಾಡುತ್ತಾನೆ. ಆದರೆ ಮಾನ್ಯ ಗುಂಡಪ್ಪನವರು ಮತ್ತೊಂದು ವಿಧಾನವನ್ನು ನಮಗೆ ತೋರುತ್ತಾ ಆ ಗಿಡದ ಬೇರು, ಎಲೆ, ಕೊಂಬೆ, ಕಾಂಡ ಇವುಗಳನ್ನು ಕೀಳದೆ ಆ ಗಿಡದ ಬುಡದ ಪಾತಿಯನ್ನು ಕೆದಕಿ ಗೊಬ್ಬರವನ್ನು ಹಾಕಿ ನೀರ ಹನಿಸಿದರೆ, ಅದು ಚಿಗುರಿ ಹೂ ಹಣ್ಣುಗಳನ್ನು ತಳೆದು ಮಂದ ಮಾರುತಕ್ಕೆ ಕಾರಣವಾಗುತ್ತದೆ. ಅದರ ಆನಂದವನ್ನು ಅನುಭವಿಸಬೇಕು ಎಂದಿದ್ದಾರೆ.

ಇದು ಆ ಜಗತ್ತೆಂಬ ಹೂದೋಟಕ್ಕೂ ಅನ್ವಯವಾಗುತ್ತದೆ. ಇಲ್ಲಿರುವ ಎಲ್ಲ ಮನುಷ್ಯರನ್ನೂ ಒಂದೊಂದು ಗಿಡ ಅಥವಾ ಮರವೆಂದು ಪರಿಗಣಿಸಿದರೆ ಪ್ರತಿಯೊಬ್ಬ ಮಾನವನಿಗೂ ಚಿಗುರುವ, ಬೆಳೆಯುವ, ಹೂವಂತೆ ಅರಳುವ, ಸುವಾಸನೆಯನ್ನು ಬೀರುವ, ಹಣ್ಣಿನಂತೆ ರುಚಿಯನ್ನು ತುಂಬಿಕೊಳ್ಳುವ, ತಾವೂ ನಲಿದು ಅನ್ಯರಿಗೂ ಸಂತೋಷವನ್ನು ಕೊಡಬಲ್ಲ ಗುಣಗಳಿವೆ. 'ವನಸುಮ' ಎನ್ನುವ ಒಂದು ಕವನದಲ್ಲಿ ಈ ಭಾವವನ್ನು ಬಹಳ ಸುಂದರವಾಗಿ ಬಣ್ಣಿಸಿದ್ದಾರೆ ಡಿವಿಜಿಯವರು. ಆ ದೇವರನ್ನು ವಿಫುಲಾಶ್ರಯವನೀವ ಸುಫಲ ಸುಮಭರಿತ “ಪಾದಪ'ದಂತೆ' ವಿಕಸಿಸುವಂತೆ ಮನವನು ಅನುಗೊಳಿಸು ಗುರುವೇ ಹೇ! ದೇವ" ಎಂದು ಬೇಡುತ್ತಾರೆ. ನಾವು ಹಾಗಾಗಬೇಕು. ನಾವು ಚಿಗುರಿ ಸಸಿಯಾಗಿ ಬೆಳೆಯಬೇಕು ಮತ್ತು ಅನ್ಯರ ಬೆಳವಣಿಗೆಗೆ ಪೂರಕವಾಗಿರಬೇಕು.



ಪರರನ್ನು ಕೆದಕಿ, ಟೀಕಿಸಿ, ನಿಂದಿಸಿ, ನೋಯಿಸಿ ನಮ್ಮ ಅಹಂಕಾರವನ್ನು ತಣಿಸಿಕೊಳ್ಳುವ ಪ್ರವೃತ್ತಿಯನ್ನು ತೊರೆದು, ನಮ್ಮಂತೆ ಎಲ್ಲರೂ' ಎಂದು ಭಾವಿಸಿ ಪ್ರತಿಯೊಬ್ಬರೂ ಅನ್ಯರ ಒಳಿತಿನಲ್ಲಿ ತಮ್ಮ ಒಳಿತನ್ನು ಕಂಡಾಗ ಈ ಜಗತ್ತಿನಲ್ಲಿ ಪ್ರೇಮಭಾವದ ಸುಗಂಧ ಹರಡುತ್ತದೆ, ಪರಸ್ಪರ ಪ್ರೀತಿಯ ರುಚಿ ತುಂಬಿಕೊಂಡು, ಸುರುಚಿ, ಸು-ಗಂಧ, ಸು-ವರ್ಣ, ಸು-ಭಾವಗಳಿಂದ ಕೂಡಿದ ಒಂದು ಸುಂದರ ಉದ್ಯಾನವನವಾಗುವುದರಲ್ಲಿ ಸಂದೇಹವೇ ಇಲ್ಲ.

ಅಹಂಕಾರದ, ದ್ವೇಷದ, ಸ್ವಾರ್ಥದ ಬೀಜಗಳನ್ನು ಬಿತ್ತದೆ, ಪ್ರೇಮದ, ವಿಶ್ವಾಸದ, ಪರಸ್ಪರತಾ ಭಾವಗಳ ಬೀಜಗಳನ್ನು ಬಿತ್ತಿ, ಪ್ರೀತಿ ವಿಶ್ವಾಸ, ಸಹಭಾವ ಮತ್ತು ಸೌಹಾರ್ದತೆಯ ನೀರು ಗೊಬ್ಬರಗಳನ್ನು ನೀಡಿ ಈ ಜಗದ್ರಕ್ಷದ ಪ್ರತಿಯೊಬ್ಬನನ್ನೂ ಬೆಳೆಸಿದರೆ ಈ ಜಗತ್ತಿನಂತಹ ಸುಂದರ ಹೂದೋಟ ಇನ್ನೊಂದು ಇರಲಿಕ್ಕೆ ಸಾಧ್ಯವಿಲ್ಲ. 'ಬೆಳೆ ಇದ್ದಲ್ಲಿ ಕಳೆ' ಇರುವಂತೆ ಸಮಾಜದಲ್ಲಿ ಹುಳಿ ಹಿಂಡುವ ಜನ ಇದ್ದೇ ಇರುತ್ತಾರೆ. ನಮ್ಮ ಪರಿಸರವನ್ನು ನಾವು

ಸುಂದರವಾಗಿಸುತ್ತಾ ಹೋದರೆ ಮಾನ್ಯ ಗುಂಡಪ್ಪನವರು ಹೇಳುವ 'ತಳಿರಲರು' ಅಂದರೆ ಮಂದ ಮಾರುತದ ಶಾಂತ ವಾತಾವರಣ ನಿರ್ಮಿಸಬಹುದು. ಇದು ಎಲ್ಲರ ಪ್ರಯತ್ನದಿಂದಲೇ ಸಾಧ್ಯ

**ಮುಕ್ತಕ – 818**

**ವನಜಂತುಗಳ ಸಸ್ಯಮೂಲಿಕಾಹಾರದಿಂ |**

**ಗುಣವನರಿತವರಾದಿವೈದ್ಯರೌಷಧಿಗಳ್ ||**

**ಒಣತರ್ಕಗಳಿಗೇನು? ಜೀವನದ ವಿವಿಧರಸ- |**

**ದನುಭವದಿ ತತ್ವವೆಲೊ - ಮಂಕುತಿಮ್ಮ ||**

ಸಸ್ಯಮೂಲಿಕಾಹಾರದಿಂ=ಸಸ್ಯ+ಮೂಲಿಕ+ಆಹಾರದಿಂ,

ಗುಣವನರಿತವರಾದಿವೈದ್ಯರೌಷಧಿಗಳ್=ಗುಣವನ್+ಅರಿತವ+ಆದಿ+ವೈದ್ಯರ್+ಔಷಧಿಗಳ್,

ವಿವಿಧರಸದನುಭವದಿ=ವಿವಿಧ+ರಸದ+ಅನುಭವದಿ

ವನಜಂತು=ಕಾಡುಪ್ರಾಣಿ, ಮೂಲಿಕ=ಬೇರುಗಳು, ಬೇರಿನ ಗಂಟುಗಳು,

ಈ ಜಗತ್ತಿನಲ್ಲಿ ವನ್ಯ ಮೃಗಗಳು ತಮ್ಮ ಅನಾರೋಗ್ಯದ ಕಾರಣವನ್ನು ತಾವೇ ಅರಿತು ತಮಗೆ ಬೇಕಾದ ಔಷಧೀಯ ಗಿಡ ಮೂಲಿಕೆಗಳನ್ನು ತಾವೇ ಕಂಡುಗೊಳ್ಳುವ ಗುಣವನ್ನು ಅನುಸರಿಸಿ ಮನುಕುಲದ ಆದಿ ವೈದ್ಯರುಗಳು ಔಷಧಿಗಳನ್ನು ಕಂಡುಕೊಂಡರು. ಹಾಗೆಯೇ, ಒಣತರ್ಕಮಾಡದೆ ಬದುಕಿನ ಅನುಭವದಿಂದ ಜೀವನದ ತತ್ವದ ರಸಾನುಭವವನ್ನು ಪಡೆಯಬೇಕು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಮ್ಮನ್ನು ತಾವು ನೋಡಿಕೊಳ್ಳುವುದರಲ್ಲಿ ಪ್ರಾಣಿಗಳಿಗೆ ಸ್ವಲ್ಪ ಸೂಕ್ಷ್ಮ ಬುದ್ಧಿ, ತಮಗೆ ಏನು ಬೇಕೋ ಅದನ್ನು

ಹುಡುಕಿ ಪಡೆದುಕೊಳ್ಳುವುದನ್ನು ಪ್ರಕೃತಿಯೇ ಅವುಗಳಿಗೆ ಕಲಿಸಿರುತ್ತದೆ. ಮನುಷ್ಯನಿಗೂ ಆ ಕ್ಷಮತೆ ಇತ್ತು ಒಂದು ಕಾಲಕ್ಕೆ. ಆದರೆ ಇವನು ಸಂಘಜೀವಿಯಾದ ನಂತರ, ಆ ಕ್ಷಮತೆ ಕ್ಷೀಣಿಸಿತು. ಎಲ್ಲವನ್ನೂ ಅನ್ಯರಿಂದ ಹೇಳಿಸಿಕೊಂಡು ಕಲಿಯುವ ವಿಧಾನ ಆರಂಭವಾಯಿತು. ಸುತ್ತು ಪರಿಸರವನ್ನು ಪರೀಕ್ಷಿಸಿ ನೋಡುವ, ಕಂಡದ್ದನ್ನು ಮಂಥನಮಾಡುವ, ಆ ಮಂಥನದಿಂದ ಅರಿತುಕೊಳ್ಳುವ ವಿಧಾನವನ್ನು ನಮ್ಮ ಇಂದಿನ ಮಾನವ ಮರೆತೇ ಹೋಗಿದ್ದಾನೆ. ಎಲ್ಲದಕ್ಕೂ ಒಂದು ತರ್ಕ, ಹೀಗೋ? ಹಾಗೋ? ಎಂದು ಕೇಳುವ, ತೋಚಿದ್ದನ್ನು ಓದುರುವ ತನಗೆ ತೋಚಿದ್ದೇ ಸರಿಯಂದು ಕುತರ್ಕ ಮಾಡುವ ವಿಧಾನವನ್ನು ಅಳವಡಿಸಿಕೊಂಡಿದ್ದಾನೆ. ಆದರದು ವ್ಯರ್ಥ!! ಇದನ್ನೇ ಮಾನ್ಯ ಗುಂಡಪ್ಪನವರು ಒಣತರ್ಕಗಳಿಗೇನು?" ಎಂದಿದ್ದಾರೆ.

ಶಿವ ಶರಣ 'ಸರ್ವಜ್ಞ ತರ್ಕ ತಾ ವಾದಕ್ಕೆ ಎನ್ನುತ್ತಾರೆ. ವಾದ ಮಾಡಲು ಮಾತ್ರ ತರ್ಕ ಉಪಯೋಗಕ್ಕೆ ಬರುತ್ತದೆ. ಸತ್ಯವರಿಯಲು ಮಥನವಾಗಬೇಕು. ಜಗತ್ತಿನಲ್ಲಿ ನಾವು ಕಾಣುವ ಕೇಳುವ ಎಲ್ಲವನ್ನೂ ಅನುಭವಕ್ಕೆ ತಂದುಕೊಂಡಾಗ ಮಾತ್ರ ಸತ್ಯದ ಅರಿವಾಗುತ್ತದೆ. ಪ್ರತಿಯೊಬ್ಬರ ಬದುಕಿನಲ್ಲೂ ಬರುವ ವಿಷಯಗಳು ಮತ್ತು ಆಗುವ ಘಟನೆಗಳಿಂದ ಕಲಿಯಲು ಬೇಕಾದಷ್ಟು ಸರುಕಿರುತ್ತದೆ, ಕಲಿಯಲಿಚ್ಚಿಸುವವರಿಗೆ, ಆ ವಿಷಯ ಮತ್ತು ಘಟನೆಗಳಿಂದ ಉಂಟಾಗುವ ರಸಾನುಭವವನ್ನು ಅಂತರಂಗಕ್ಕೆ ಇಳಿಸಿಕೊಂಡು ಅದನ್ನು ಅನುಭವಿಸಿದರೆ ಪ್ರತಿಯೊಂದರಲ್ಲೂ ನಡೆಯುವ ಪರತತ್ವದ ಲೀಲೆ ನಮಗೆ ಕಾಣುತ್ತದೆ. ಇದನ್ನೇ ಮಾನ್ಯ ಡಿವಿಜಿಯವರು "ಜೀವನದ ವಿವಿಧರಸದನುಭವದಿ ತತ್ವವೆ" ಎಂದಿದ್ದಾರೆ. ತತ್ವವನ್ನರಿಯಲು ಸತ್ವಬೇಕು. ಸತ್ವದ ಅನುಸಂಧಾನಕ್ಕೆ ಅನುಭವವೇ ಮಾರ್ಗ, ಒಣತರ್ಕವಲ್ಲ.

ಅತಿವೇಗದ ಓಟದ ಇಂದಿನ ಜೀವನದಲ್ಲಿ ಯಾರಿಗೂ ಯಾವುದನ್ನೂ ಸಂಪೂರ್ಣವಾಗಿ ನೋಡುವ, ನೋಡಿದ್ದನ್ನು ಒಳತೆಗೆದುಕೊಳ್ಳುವ, ತೆಗೆದುಕೊಂಡದ್ದನ್ನು ಅನುಭವಿಸುವ, ಆ ಅನುಭವದಿಂದ ರಸಾಸ್ವಾಧನೆ ಪಡೆಯುವ ವ್ಯವಧಾನವೇ ಇಲ್ಲ. 'ಸತ್ವ ಮತ್ತು ತತ್ವ' ಎಂದರೆ, ಹಾಗಂದರೇನು? ಎಂದು ಕೇಳುವ ದಿನಗಳಿವು. ಯಾರಲ್ಲೂ ಯಾವುದರ ಆಳಕ್ಕೂ ಇಳಿದು ಸತ್ಯಶೋಧನೆಯನ್ನು ಮಾಡಬೇಕು, ಅದರಿಂದ ತತ್ವವನ್ನರಿಯಬೇಕು, ಅರಿತ ತತ್ವದಿಂದ ಆತ್ಮೋದ್ಧಾರವಾಗಬೇಕು ಎನ್ನುವ ಇಚ್ಛೆ ಮತ್ತು ಪ್ರಯತ್ನ ಕಾಣುವುದೇ ಇಲ್ಲ. 'ತೆರೆ' ಯ ಮೇಲಿನ ಜೀವನ ನಮ್ಮನ್ನು ತತ್ವದ ಕಡಲಿನ ಆಳಕ್ಕೆ ಕೊಂಡುಹೋಗುವುದೇ ಇಲ್ಲ. ವಾಚಕರೆ ತತ್ವವನ್ನು ಅರಿಯಬೇಕು ಎನ್ನುವವರು ಅನುಭವಿಸಿ ಬದುಕಬೇಕು ಮತ್ತು ಬದುಕಿನಿಂದ ಅನುಭವದ ಸಾರವನ್ನು ಹೀರಬೇಕು. ಹಾಗಾದರೆ ಮಾತ್ರ ಆತ್ಮೋದ್ಧಾರ. ಒಣತರ್ಕದಿಂದಲ್ಲ.

**ಮುಕ್ತಕ – 819**

**ಕಡಿದೊಡೆ ಪರೀಕ್ಷೆಗುಳಿವುವು ಸತ್ತನಾರುಗಳು ।**

**ಕಡಿಯದಿರೆ ಮರದಿ ಪರಿಯುವುದು ಜೀವರಸ ॥**

**ಬಿಡುವಮ್ ಈ ಬಾಳ್ ಅದೇಕೆಂಬ ಚರ್ಚೆಯ; ನಾವು ।**

**ದುಡಿವಮ್ ಅದು ಪೆಂಪುಗೊಳೆ - ಮಂಕುತಿಮ್ಮ ॥**

ಪರೀಕ್ಷೆಗುಳಿವುವು=ಪರೀಕ್ಷೆಗೆ+ಉಳಿವುವು, ಕಡಿಯದಿರೆ+ಕಡಿಯದೇ+ಇರೆ, ಅದೇಕೆಂಬ=ಅದು+ಏಕೆಂಬ, ಕಡಿದೊಡೆ=ಕಡಿದರೆ, ಪರಿಯುವುದು-ಹರಿಯುವುದು, ಬಿಡುವಮ್=ಬಿಡಬೇಕು, ದುಡಿವಮ್=ದುಡಿಯಬೇಕು, ಪೆಂಪುಗೊಳೆ=ಉದ್ಧಾರವಾಗಲು, ಅಭಿವೃದ್ಧಿಗೊಳ್ಳಲು.

ಮುಕ್ತಕ 817ನ್ನು ಮುಂದುವರೆಸಿ ಮಾನ್ಯ ಗುಂಡಪ್ಪನವರು, ಮರದ ಕೊಂಬೆ ರೆಂಬೆಗಳನ್ನು ಕಡಿದರೆ ನಿನಗೆ ಸಿಗುವುದು ಕೇವಲ ಜೀವಕಳೆದುಕೊಂಡ ನಾರುಗಳು, ಬೇರುಗಳು. ಕಡಿಯದಿದ್ದರೆ ಅವುಗಳಲ್ಲಿ ಜೀವರಸ ಹರಿಯುವುದು. ಈ ಬಾಳೂ ಸಹ ಹೀಗೆಯೇ. ಇದು ಏಕೆ? ಏನು? ಹೀಗೇಕೆ? ಹಾಗೇಕಲ್ಲ? ಮುಂತಾದ ಚರ್ಚೆಗೆ ಎಡೆಕೊಡದೆ ಬದುಕನ್ನು ವೃದ್ಧಿಗೊಳಿಸುವ ಮತ್ತು ಅಭಿವೃದ್ಧಿಗೊಳಿಸುವ ಕೆಲಸದಲ್ಲಿ ತೊಡಗಿದರೆ ಒಳ್ಳೆಯದು, ಎಂದಿದ್ದಾರೆ ಈ ಮುಕ್ತಕದಲ್ಲಿ.

ತರ್ಕದಿಂದ ಕುತರ್ಕ, ಕುತರ್ಕದಿಂದ ವ್ಯಾಜ್ಯ, ವ್ಯಾಜ್ಯದಿಂದ ಮನಃಸ್ತಾಪವುಂಟಾಗಿ, ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ಸೇತುವೆ ಮುರಿದು ಬೀಳುತ್ತದೆ. ಪರಸ್ಪರತೆಯಿಂದ ಬಾಳಬೇಕಾದ ಜೀವನ ಕುಸಿಯುತ್ತದೆ ಮತ್ತು ಆತ್ಮ ಸೊರಗುತ್ತದೆ. ಬಾಳಿನಲ್ಲಿ ಎಲ್ಲವನ್ನೂ ತರ್ಕದ ದೃಷ್ಟಿಯಿಂದ ನೋಡದೆ ಸಹಜವಾಗಿ ಬದುಕಿದರೆ ಒಳ್ಳೆಯದು. ಆದರೆ ಒಂದು ವ್ಯಕ್ತಿ ತರ್ಕಕ್ಕೆ ಇಳಿಯಲು ಕಾರಣ ಕೇವಲ ಸ್ವಾರ್ಥ, ತಾನು ಚೆನ್ನಾಗಿರಬೇಕು, ಜಗತ್ತಿನ ಪ್ರತಿಯೊಂದು ವಸ್ತುವೂ, ವಿಷಯವೂ ಮತ್ತು ವ್ಯಕ್ತಿಯೂ ತನ್ನ ಸಂತೋಷಕ್ಕೆ ಪೂರಕವಾಗಿರಬೇಕು ಎನ್ನುವ 'ನಾನತ್ವವೇ

ಈ ತರ್ಕ ಕುತರ್ಕಗಳಿಗೆ ಮೂಲ. ಪರೀಕ್ಷೆ ಮಾಡಲೆಂದೇ ಆಗಲಿ ಒಂದು ಮರವನ್ನು ಕಡಿದರೆ ತಕ್ಷಣವೇ ಆ ಮರ ಸಾಯುತ್ತದೆ, ಅದರಲ್ಲಿನ ಜೀವರಸ ಬತ್ತಿ ಹೋಗುತ್ತದೆ. ಮತ್ತೆಂದೂ ಪೂರ್ವ ಸ್ಥಿತಿಗೆ ಬಾರದಂತೆ ನಾಶವಾಗುತ್ತದೆ. ಕಡಿಯದೇ ಇದ್ದರೆ, ಅದರೊಳಗೆ ಜೀವರಸ ಹರಿದು ಮತ್ತೆ ಚಿಗುರಿ, ಹೂತು, ಕಾಯಿ ಹಣ್ಣುಗಳನ್ನು ಹೊತ್ತು ಬದುಕಿಗೆ ಪೂರಕವಾಗಿ ನಿಲ್ಲುತ್ತದೆ.

ಇದೇ ರೀತಿ ಬಾಳಿನಲ್ಲಿ 'ಪರಸ್ಪರತೆಯ ಬಾಳಿಗೆ' ಪೂರಕವಾದ ಪ್ರೇಮ, ಪ್ರೀತಿ, ನಂಬಿಕೆ, ವಿಶ್ವಾಸಗಳ ಜೀವರಸವು ಸದಾ ಹರಿಯಬೇಕು ಎಂದರೆ, ತರ್ಕವನ್ನು ಬಿಡಬೇಕು. ತರ್ಕ ಬುದ್ಧಿಯ ಕೆಲಸ, ಆದರೆ ಸಹಯೋಗದ ಬಾಳಿಗೆ ಬುದ್ಧಿಗಿಂತ ಹೃದಯವೈಶಾಲ್ಯತೆಯ ಅವಶ್ಯಕತೆಯಿದೆ. ಮಾನ್ಯ ಗುಂಡಪ್ಪನವರು 'ಬಿಡುವಮ್ ಈ ಬಾಳ ಅದೇಕೆಂಬ ಚರ್ಚೆಯ; ನಾವು ದುಡಿವಮ್ ಅದು ಪೆಂಪುಗೊಳೆ ' ಎಂದು ಹೇಳುವಂತೆ ನಾವು ತರ್ಕವನ್ನು ಬಿಟ್ಟು ಪರಸ್ಪರತೆಯ ಬದುಕಿಗೆ ಪೂರಕವಾಗಿ ದುಡಿಯಬೇಕು. ಹಾಗಾದರೆ ಪ್ರತಿಯೊಬ್ಬರ ಬಾಳೂ ಸುಂದರವಾಗುತ್ತದೆ.

| |
|---|
| 17ಸಂ |

| | |
|---|---|
| ಕಗ್ಗರಸಧಾರೆ | ಮೂರನೆಯ ಭಾಗಷ್ಠ 82ಸಂ - |
| 824 | |

ಆದರೆ ಇಂದಿನ ಜನಜೀವನವನ್ನು ನೋಡಿದರೆ, ನಾವು ಪ್ರಾಣಿಗಳಿಗಿಂತ ಹೀನವಾಗಿ ಬದುಕುತ್ತಿದ್ದೇವೆ ಎನ್ನುವುದು ಅರಿವಾಗುತ್ತದೆ. ಪ್ರಾಣಿಗಳು ತಮಗೆ ಹಸಿವಾದಾಗ ಮಾತ್ರ ಅನ್ಯ ಪ್ರಾಣಿಗಳ ಮೇಲೆ ಆಕ್ರಮಣ ಮಾಡುತ್ತವೆ, ಆದರೆ ಮನುಷ್ಯನೋ.......... ಇವನ ಹಸಿವಿಗೆ ಪಾರವೇ ಇಲ್ಲ. ಎಲ್ಲವೂ ತನಗೆ, ತನಗಾಗಿ ಮತ್ತು ತನ್ನಿಂದ ಎನ್ನುವ ದುರ್ಭಾವದಿಂದ ತರ್ಕ, ಕುತರ್ಕ ಮಾಡುತ್ತಾ 'ಪಟ್ಟಿಗೆ ಮತ್ತೊಂದು ಪಟ್ಟನ್ನು ಹಾಕುತ್ತಾ ತನ್ನದಷ್ಟೇ ಅಲ್ಲ ಇತರರ ಬದುಕನ್ನೂ ಹಾಳುಗೆಡವುತ್ತಿದ್ದಾನೆ. ಅಂತಹ ಪ್ರವೃತ್ತಿಯನ್ನು ತೊರೆದು ತನ್ನಂತೆ ಪರರ ಬಗೆದೊಡೆ' ಎಂದು ಸರ್ವಜ್ಞ ಕವಿ ಹೇಳುವಂತೆ ಬಾಳಿದರೆ ಡಿವಿಜಿಯವರು 'ದುಡಿವಮ್ ಅದು ಪೆಂಪುಗೊಳೆ' ಎಂದು ಹೇಳುವಂತೆ, ಬದುಕನ್ನು ಸುಂದರವಾಗಿಸುವ ಕಿಂಚಿತ್ ಪ್ರಯತ್ನವನ್ನು ನಾವು ಮಾಡಬಹುದು.

**ಮುಕ್ತಕ – 82ಸಂ**

**ಜೀವನ ವ್ಯಾಪಾರ ಮೂವರೊಟ್ಟುವಿಚಾರ ।**

**ಭಾವಿಸೊಡೆ ನೀನು, ಜಗ, ಇನ್ನೊಂದದೃಷ್ಟ ॥**

**ಆವಗಂ ಮೂರನೆಯ ಭಾಗಸ್ಥನಿಚ್ಚೆ ಬಲ ।**

**ಈ ವಿವರವರಿಯೆ ಸುಖ – ಮಂಕುತಿಮ್ಮ ॥**

ಮೂವರೊಟ್ಟುವಿಚಾರ =ಮೂವರ+ಒಟ್ಟು+ವಿಚಾರ, ಇನ್ನೊಂದದೃಷ್ಟ=ಇನ್ನೊಂದು+ಅದೃಷ್ಟ,

ಭಾಗಸ್ಥನಿಚ್ಚೆ=ಭಾಗಸ್ಥನ+ಇಚ್ಛೆ, ವಿವರವರಿಯ=ವಿವರವ+ಅರಿಯೆ,

ಭಾವಿಸೊಡೆ=ಯೋಚಿಸಿದರೆ, ಆವಗಂ=ಯಾವಾಗಲೂ,

ಜಗತ್ತಿನ ಜೀವನದ ವ್ಯಾಪಾರದಲ್ಲಿ ಮೂರು ಜನರ ಒಟ್ಟು ವಿಚಾರ ಸಮ್ಮಿಳಿತವಾಗಿರುತ್ತದೆ. ಯೋಚಿಸಿ ನೋಡಿದರೆ ಒಂದು ನೀನು, ಎರಡನೆಯದು ಈ ಜಗತ್ತು ಮತ್ತು ಮೂರನೆಯದು ಆ ಕಾಣದ ಕೈ. ಆದರೆ ಆ ಕಾಣದ ಶಕ್ತಿಯ ಬಲ ಮತ್ತು ಪ್ರಭಾವವೇ ಅಧಿಕವಾಗಿರುತ್ತದೆ. ಈ ವಿವರಗಳನ್ನು ಅರಿತುಕೊಂಡರೆ ನೆಮ್ಮದಿಯಾಗಿರಬಹುದು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನ ಬದುಕಿನಲ್ಲಿ ನಾವು ಎಂದೂ ಒಬ್ಬಂಟಿಯಲ್ಲ ಅಥವಾ ಕೇವಲ ನಾವೊಬ್ಬರೇ ಅಲ್ಲ. ಆದರೆ ನಾನಿಲ್ಲದೆ ನನ್ನ ಬಾಳಿಲ್ಲ. ಹಾಗಾಗಿ 'ನಾನು' ನನ್ನ ಬದುಕಿನ ಒಂದು ಅಂಗ. ಈ 'ನಾನು' ಈ ಜಗತ್ತಿಲ್ಲದೇ ಬದುಕಲು ಸಾಧ್ಯವಿಲ್ಲ. ಈ ಜಗತ್ತು, ಈ ಪ್ರಕೃತಿ, ಈ ಪಂಚಭೂತಗಳು, ಈ ಗಿಡ ಮರಗಳು, ಈ ಪ್ರಾಣಿ ಪಕ್ಷಿಗಳು, ಈ ಕೀಟ ಸರೀಸೃಪಗಳು ಮತ್ತು ನಮ್ಮ ಸುತ್ತುಮುತ್ತಲಿನ ಜನರು, ಇವರೆಲ್ಲ ಇದ್ದರೆ ನಾನೂ ಬದುಕಬಹುದು. ಎಂದರೆ ನನ್ನ ಅಸ್ತಿತ್ವ ಕೇವಲ ನನ್ನಿಂದಲೇ ಆಗದೆ, ಈ ಜಗತ್ತಿನ ಪ್ರತಿಯೊಂದೂ ನನ್ನ ಜೀವನದ ಮೇಲೆ ಪ್ರಭಾವ ಬೀರುತ್ತದೆ ಎಂದರ್ಥ. ಆದರೆ ಈ ಜಗತ್ತನ್ನು ಆಗಮಾಡಿಸಿದ, ಈ ಜಗತ್ತಿನ ಪ್ರತಿಯೊಂದಕ್ಕೂ ಒಂದು ಸ್ಥಾನವನ್ನು ಇತ್ತು ಅದರ ಸಮತೋಲನವನ್ನು ಕಾಯುವ ಒಂದು ಅಗೋಚರ ಶಕ್ತಿಯೊಂದಿದೆಯಲ್ಲಾ ಅದನ್ನೇ ಗುಂಡಪ್ಪನವರು 'ಅದೃಷ್ಟ' ಎಂದಿದ್ದಾರೆ. ಅದೃಷ್ಟ ಎಂದರೆ ನಮ್ಮ ಕಣ್ಣಿಗೆ ಕಾಣದಿರುವುದು. ಅದಕ್ಕೆ ದೈವ, ಪರಮಾತ್ಮ ಪರತತ್ವ ಎನ್ನುವ ಬೇರೆ ಬೇರೆ ಹೆಸರುಗಳಿವೆ.

ನಮ್ಮ ಕಣ್ಣಿಗೆ ಕಾಣದೆ ಇದ್ದರೂ ತನ್ನ ಪ್ರಭಾವವನ್ನು ನಮ್ಮ ಮೇಲೆ ಬೀರುವ 'ಸೂರ್ಯನ ಶಾಖ' ದಂತೆ ಆ ಕಾಣದ ಶಕ್ತಿಯ ಪ್ರಭಾವಕ್ಕೆ ನಾವೆಲ್ಲರೂ ಒಳಗಾಗಿದ್ದೇವೆ.

ಹಾಗಾಗಿ ನಮ್ಮ ಬದುಕು 'ಮೂವರೊಟ್ಟುವಿಚಾರ'. ನಮ್ಮ ಆಗುಹೋಗುಗಳೆಲ್ಲಾ, ನಮ್ಮ ಇಚ್ಛೆ ಮತ್ತು ಪ್ರಯತ್ನ, ಈ ನಮ್ಮ ಇಚ್ಛೆಯ ಮೇಲೆ ಈ ಜಗದ ಪ್ರತಿಯೊಂದರ ಮತ್ತು ಪ್ರತಿಯೊಬ್ಬರ ಪ್ರಭಾವ ಮತ್ತು ನಮ್ಮಲ್ಲಿ ಇಚ್ಛಾಶಕ್ತಿ ಮತ್ತು ಪ್ರಯತ್ನಕ್ಕೆ ಶಕ್ತಿಯನ್ನು ನೀಡುವ ಮತ್ತು ಈ ಜಗತ್ತಿನ ಸಕಲವೂ ನಮ್ಮ ಮೇಲೆ ತಮ್ಮ ಪ್ರಭಾವ ಬೀರುವಂತೆ ಮಾಡುವ ಆ 'ಅಗೋಚರ ಶಕ್ತಿಯ ಮೇಲೆ ನಿರ್ಭರವಾಗಿರುತ್ತದೆ. ಆದರೆ ನಮ್ಮ ಜೀವನದಲ್ಲಿ ನಮ್ಮ ಪಾತ್ರವೆಷ್ಟು, ಇತರರ ಪಾತ್ರವೆಷ್ಟು ಮತ್ತು ಆ ದೈವದ ಪ್ರಭಾವವೆಷ್ಟು ಎಂದು ಕೂಲಂಕುಶವಾಗಿ ನೋಡಿದರೆ ಮಾನ್ಯ ಡಿವಿಜಿಯವರು "ಆವಗಂ ಮೂರನೆಯ ಭಾಗಸ್ಥನಿಚ್ಚೆ ಬಲ ಹೇಳುವಂತೆ, ಆ ಅಗೋಚರ ಶಕ್ತಿಯ, ಲೀಲೆಯ ಅಥವಾ ಆಟದ ಪ್ರಭಾವವೇ ಹೆಚ್ಚು ಎನಿಸುತ್ತದೆ.

ಏಕೆಂದರೆ ಅದು ಅನಂತ ಮತ್ತು ನಮ್ಮ ಈ ರೂಪಕ್ಕೆ ಒಂದು ಅಂತವಿದೆ. ನಾವು ಏನನ್ನೋ ಯೋಚಿಸಿ, ಯೋಜಿಸಿದರೂ ನಡೆಯುವುದು ಬೇರೆ ಏನೋ ಆದ್ದರಿಂದ ಆ ಅಗೋಚರಕ್ಕೆ ಅಧಿಕ ಬಲವೆಂದು ಒಪ್ಪಲೇ ಬೇಕು. ದೈವದ ಆಧಿಕ್ಯವನ್ನು ಅಂತರಂಗದಲ್ಲಿ ಒಪ್ಪಿದರೂ ನಮ್ಮ ಅಹಂಕಾರ ನಮ್ಮನ್ನು ಸದಾ ಕಾಲ 'ನಾನು ಮಾಡಿದೆ ಮಾಡುವೆ- ನನ್ನಿಂದಲೇ ನಾನೇ ಎನ್ನುವಂತಹ ಭಾವಗಳನ್ನು ಪ್ರದರ್ಶಿಸುವಂತೆ ಮಾಡುತ್ತಾ ನಮ್ಮ ಬದುಕನ್ನು ನರಕವಾಗಿಸುತ್ತದೆ. ಹಾಗಲ್ಲದೆ ಈ ಜಗನ್ನಾಟಕದ ಲೀಲಾ ವಿನೋದದಲ್ಲಿ 'ನಾನು' ಎಂಬುದು ತೀರ ಗೌಣ, ನಾನು ಕೇವಲ ಒಂದು ಉಪಕರಣ, ನನ್ನ ಪ್ರಯತ್ನವು ಉಂಟು, ಅನ್ಯರ ಪೂರಕತೆಯೂ ಉಂಟು. ಆದರೆ ಇದನ್ನೆಲ್ಲಾ ನಡೆಸುವ ದೈವದ ಬಲವೇ ಹೆಚ್ಚು. ನಾನು ಅದಕ್ಕೆ ಶರಣಾಗುತ್ತೇನೆ. "ಬಂದದ್ದೆಲ್ಲಾ ಬರಲಿ ಆ ಗೋವಿಂದನ ದಯೆ ಇರಲಿ" ಎಂದು ದಾಸರ ವಾಣಿಯನ್ನನುಸರಿಸಿ ಬದುಕಿದರೆ ಸಂತೋಷವಾಗಿ ತೃಪ್ತಿಯಿಂದ ಆನಂದದಿಂದ ಬದುಕಬಹುದು. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 821**

**ಏನೇನು ಹಾರಾಟ ಸುಖಕೆಂದು ಲೋಕದಲಿ! |**

**ತಾನಾಗಿ ಗಾಳಿವೊಲ್ ಬಂದ ಸುಖವೆ ಸುಖ ||**

**ನೀನೆ ಕೈ ಬೀಸಿಕೊಳೆ ನೋವು ಬೆವರುಗಳ ಫಲ।**

**ಮಾಣು ಮನದುಬ್ಬಸವ - ಮಂಕುತಿಮ್ಮ ॥**

ಮನದುಬ್ಬಸವ=ಮನದ+ಉಬ್ಬಸವ, ಮಾಣು = ಬಿಡು

ಈ ಲೋಕದಲ್ಲಿ ಸುಖವನ್ನು ಪಡೆಯಲು ಮನುಷ್ಯರು ಏನೆಲ್ಲ ರೀತಿಯ ಹಾರಾಟ ಮಾಡುತ್ತಾರೆ. ಆದರೆ ಪ್ರಯತ್ನಪೂರ್ವಕವಾಗಿ ಪಡೆದ ಸುಖ ಸುಖವಲ್ಲ, ತಾನಾಗೆ ಲಭ್ಯವಾದ ಸುಖವೇ ಸುಖ, ಗಾಳಿಯನ್ನು ನಾವೇ





ಬೀಸಿಕೊಂಡರೆ ಕೇವಲ ಕೈ ನೋವು, ಮೈ ಬೆವರುಗಳೇ ಫಲ. ಹಾಗಲ್ಲದೆ ತಾನೇ ಬೀಸುವ ಗಾಳಿ ಹಿತ ತರುತ್ತದೆ. ಹಾಗಾಗಿ ಸುಖ ಪಡೆಯಲು ನಮ್ಮ ಅತಿ ಪ್ರಯತ್ನವನ್ನು ಬಿಡಬೇಕು ಎನ್ನುವ ಸಂದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಜನಿಸಿದ ಪ್ರತಿಯೊಂದು ಜೀವಿಗೂ ತಾನು ಸುಖವಾಗಿರಬೇಕು ಎನ್ನುವುದೇ ಆಶಯ. ಸುಖ ಬೇಡದ ಯಾವುದೇ ಪ್ರಾಣಿ ಈ ಜಗತ್ತಿನಲ್ಲೇ ಇಲ್ಲ. ಮನುಷ್ಯ ತನ್ನ ವಿವೇಕದಿಂದ ಈ ಸುಖವನ್ನು ಪಡೆಯುವ ನಾನಾ ವಿಧಾನಗಳನ್ನು ಕಂಡುಕೊಂಡಿದ್ದಾನೆ. ಆದರೆ ಇವನಿಗೆ ನಿಜವಾದ ಸುಖವೇನೆಂದು ಅರಿವಿಲ್ಲ. ಯಾವುದರಲ್ಲಿ ಅಥವಾ ಯಾವುದರಿಂದ ನಿಜವಾದ ಸುಖ ಸಿಗುತ್ತದೆ ಎಂಬುದೂ ಗೊತ್ತಿಲ್ಲ. ಹಾಗಾಗಿ ಇವನು ವಿಷಯದಿಂದ ವಿಷಯಕ್ಕೆ, ವಸ್ತುವಿನಿಂದ ವಸ್ತುವಿಗೆ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ, ಸುಖವನ್ನು ಪಡೆಯಲು, ಅನುಭವಿಸಲು ಹಾರುತ್ತಾ ಇರುತ್ತಾನೆ.

ಪ್ರಯತ್ನಪೂರ್ವಕವಾಗಿ ಆ ಸುಖವನ್ನು ಪಡೆಯಲಿಚ್ಛಿಸುತ್ತಾನೆ. ಇವನಿಗೆ ಭೋಗಾಸಕ್ತಿಯೇ ಸುಖವೆನ್ನುವ ಭ್ರಮೆ. ಆದರೆ ಅದು ಶಾಶ್ವತ ಸುಖವನ್ನು ನೀಡುವುದಿಲ್ಲವಾದ್ದರಿಂದ ಇವನ ಹಾರಾಟ ಮತ್ತು ಪರದಾಟ ನಿರಂತರವಾಗಿ ಸಾಗಿರುತ್ತದೆ.

ಹಾಗಾದರೆ ಏನು ಮಾಡಬೇಕು? ಎಂದರೆ ಮಾನ್ಯ ಡಿವಿಜಿಯವರು ಒಂದು ಉಪಾಯವನ್ನು ಸೂಚಿಸಿದ್ದಾರೆ. ಈ ಸುಖಗಳ ಹಿಂದೆ ಓಡದೆ, ಬಂದದ್ದರಲ್ಲಿ ಸುಖವನ್ನು ಅನುಭವಿಸುವುದೇ ಉತ್ತಮವೆನ್ನುತ್ತಾರೆ. ಅದಕ್ಕೊಂದು ಉದಾಹರಣೆ ನೀಡುತ್ತಾ 'ಮನೆಯಲ್ಲಿ ಕೈ ಬೀಸಣಿಗೆ, ಫ್ಯಾನ್ ಎ.ಸಿ' ಎಲ್ಲಾ ಬಳಸಿ ಗಾಳಿ ಹಾಕಿಕೊಂಡರೂ ಅದೆಷ್ಟು ಗಾಳಿ ಬೀಸಿದರೂ ಹಿತವೆನಿಸುವುದಿಲ್ಲ ಅದೇ ಮನೆಯ ಕಿಟಕಿಗಳನ್ನು ತೆರೆದಿಟ್ಟಾಗ ಬೀಸುವ ಮಂದ ಮಾರುತದಿಂದ ಅಥವಾ ನಾವೇ ಹೊರಗೆ ಹೋಗಿ ಗಾಳಿಗೆ ಮೈಯೊಡ್ಡಿದಾಗ ಉಂಟಾಗುವ ಅನುಭವ ಹಿತಕರವಾಗಿರುತ್ತದೆ, ಅಲ್ಲವೇ? ಹಾಗೆ ತಾನೇ ತಾನಾಗಿ ಬರುವ ಸುಖವನ್ನು ಆನಂದಿಂದ ಅನುಭವಿಸುವುದು ಒಳ್ಳೆಯದು. ಅಲ್ಲದೆ ಆ ಸುಖವನ್ನು ಪಡೆಯಲು ಪ್ರಯತ್ನಮಾಡುವುದರಿಂದ, ಅದು ಬರೀ ಪರದಾಟವಾಗುತ್ತದೆ. ಕಲ್ಲ ಗುದ್ದಿ ಮೈ ನೋಯಿಸಿಕೊಂಡಂತೆ ಆಗುತ್ತದೆ.

ಸುಖ ಬೇಕಾದರೆ ಸುಖವನ್ನು ಅನುಭವಿಸುವ ಮನೋಭಾವ ಬೇಕು. ಎಷ್ಟೆಲ್ಲಾ ಪರದಾಡಿ ಹಾರಾಡಿ ಒದ್ದಾಡಿ ಪಡೆದ ವಸ್ತುಗಳಿಂದ ಸಂಪತ್ತು ಹೆಚ್ಚಬಹುದೇ ಹೊರತು ಸುಖ ಸಿಗುವುದಿಲ್ಲ. ಹಾಗಲ್ಲದೆ ಏನೂ ಇಲ್ಲದವನೂ ಸುಖದಿಂದಿರಬಹುದು. ಸುಖ ಎನ್ನುವುದು ಮನೋಭಾವಕ್ಕೆ ಸಂಬಂಧಪಟ್ಟ ವಿಷಯ. ಮತ್ತಷ್ಟು ಬೇಕು ಎಂದುಕೊಂಡರೆ ಪರದಾಟ, ಕಷ್ಟ, ನನಗೇನೂ ಬೇಡ, ಇರುವುದರಲ್ಲೇ ಅಥವಾ ಸಿಕ್ಕಷ್ಟರಲ್ಲೇ ತೃಪ್ತನಾದರೆ ಸುಖ. ವಸ್ತು, ವಿಷಯ ಅಥವಾ ವ್ಯಕ್ತಿಗಳಿಂದ ಸುಖ ಸಿಗುವುದಿಲ್ಲ. ಸಿಕ್ಕರೂ ಅದು ಕ್ಷಣಿಕವಾದ ಸುಖ, ಬಯಕೆಯಿಲ್ಲದ ಸ್ಥಿತಿಯೇ 'ಸುಖ'ವಾದ ಸ್ಥಿತಿ. ಜಗತ್ತಿನ ಸೆಳೆತಗಳಲ್ಲಿ ಸಿಲುಕಿಕೊಂಡ ನಮ್ಮಂತಹ ಹುಲುಮಾನವರು ಆ ಸ್ಥಿತಿಗೆ ತಲುಪುವುದು ಕಷ್ಟ. ಆದರೆ ಪ್ರಯತ್ನವನ್ನಂತೂ ಮಾಡಬಹುದಲ್ಲವೇ?

**ಮುಕ್ತಕ 822**

**ಆತುರತೆಯಿರದ ಸತತೋದ್ಯೋಗ ಸರ್ವಹಿತ ?**

**ಭೂತದಾವೇಶವಾತುರತೆಯಾತ್ಮಕ್ಕೆ ??**

**ಕಾತರನು ನೀನಾಗೆ ಮೂರನೆಯ ಸಹಭಾಗಿ ?**

**ಪ್ರೀತನಾಗುವನೇನೋ?-ಮಂಕುತಿಮ್ಮ**

ಆತುರತೆಯಿರದ=ಆತುರತೆ+ಇರದ, ಸತತೋದ್ಯೋಗ=ಸತತ+ಉದ್ಯೋಗ,

ಭೂತದಾವೇಶವಾತುರತೆಯಾತ್ಮಕ್ಕೆ=ಭೂತದ+ಆವೇಶವು+ಆತುರತೆ+ಆತ್ಮಕ್ಕೆ

'ಆತುರತೆ'ಯಿಲ್ಲದೆ ಸತತವಾಗಿ ಕಾರ್ಯನಿರತನಾಗಿದ್ದರೆ ಅದು ಸರ್ವರ ಹಿತಕ್ಕೆ ಕಾರಣವಾಗುತ್ತದೆ. ಹಾಗಲ್ಲದೆ ಆತುರತೆಯನ್ನು ತೋರಿದರೆ ಅದು ಆತ್ಮಕ್ಕೆ ಭೂತದಾವೇಶದಂತಾಗುತ್ತದೆ. ನೀನು ಕಾತರನಾಗಿ ಸದಾಕಾಲವಿದ್ದರೆ, ನಿನ್ನ ಎಲ್ಲ ಕಾರ್ಯಗಳಲ್ಲಿ ತನ್ನ ಪಾತ್ರವನ್ನೂ ವಹಿಸುವ ಆ ಮೂರನೆಯವನು ಸುಪ್ರೀತನಾಗುವನೇನೋ? ಎಂದು ಒಂದು ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ  ಗುಂಡಪ್ಪನವರು.

ಮನುಷ್ಯನ ಸುಖದ ಅರಸುವಿಕೆಯಲ್ಲಿ ಇವನಿಗೆ ಬಹಳ ಆತುರ. ಯಾವುದು ದಕ್ಕುವುದೋ ಯಾವುದು ಇಲ್ಲವೋ ಎನ್ನುವ ಅನಿಶ್ಚಿತತೆಯಲ್ಲಿ ನಾನಾ ದಿಕ್ಕುಗಳಿಗೆ ಇವನ ಆತುರದ ಓಟ ಮತ್ತು ನಾನಾ ರೀತಿಯ ಪರದಾಟ, ವಸ್ತು, ವಿಷಯ ಮತ್ತು ವ್ಯಕ್ತಿಗಳನ್ನು ಪಡೆಯಲು ಭೂತಹಿಡಿದಂತೆ ಇವನ ಆತುರ ಮತ್ತು ಪರದಾಟ. ಇದರಿಂದ ಸುಖವು ಸಿಗದೇ, ಓಡಾಡಿ, ಪರದಾಡಿ, ಕಡೆಗೆ ಸುಸ್ತಾಗಿ ಕೇವಲ 'ಆತ್ಮ' ಸೊರಗುತ್ತದೆ. ಈ ರೀತಿಯ ಆತುರತೆಯನ್ನು ತೋರದೆ ಶಾಂತವಾಗಿ ನಿರಂತರ ಕೃಷಿಯಿಂದ, ನಮಗೆ ಸಂದ ಕೆಲಸವನ್ನು ಫಲಾಪೇಕ್ಷೆಯಿದ್ದರೂ ಅದಕ್ಕೆ ಅಂಟಿಕೊಳ್ಳದೆ ಮಾಡಿದರೆ ನಮಗೆ ಮತ್ತು ನಮ್ಮ ಸುತ್ತಿ ಇರುವ ಸಮುದಾಯಕ್ಕೂ ಹಿತ ಎನ್ನುವ ಭಾವವನ್ನು ವ್ಯಕ್ತಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು

ನಮ್ಮ ಆಗುಹೋಗುಗಳೆಲ್ಲಾ 'ಮೂವರಾಟ' ಎಂದಿದ್ದಾರೆ ಹಿಂದಿನ ಮುಕ್ತಕದಲ್ಲಿ, ಆ 'ನಾನು-ಜಗತ್ತು-ಜಗನ್ನಿಯಾಮಕ' ಎಂಬ ಮೂವರಲ್ಲಿ ನಮ್ಮ ಮತ್ತು ಜಗತ್ತಿನ ಪ್ರಭಾವಕ್ಕೆ ಒಂದು ಮಿತಿಯಿದೆ ಮತ್ತು ಅದನ್ನು ಸ್ವಲ್ಪಮಟ್ಟಿಗೆ ಮಾತ್ರ ಅರಿಯಬಹುದು. ಆದರೆ ಆ 'ಮೂರನೆಯ ಸಹಭಾಗಿ' ಇದ್ದಾನಲ್ಲಾ ಅವನ ಪ್ರಭಾವಕ್ಕೆ ಮಿತಿಯೇ ಇಲ್ಲ ಮತ್ತು ಅವನ ಪ್ರಭಾವದ ವಿಧಾನ ಮತ್ತು ವ್ಯಾಪ್ತಿಯನ್ನು ಅರಿಯಲು ಸಾಧ್ಯವಿಲ್ಲ. ಆ ಶಕ್ತಿಗೆ ಶರಣಾಗಿ

ನಿರಪೇಕ್ಷೆಯಿಂದ ಮತ್ತು ನಿರ್ಮಮಕಾರದಿಂದ ನಮ್ಮ ಕೆಲಸಗಳನ್ನು ಕೇವಲ ಕರ್ತವ್ಯವೆಂದು ಭಾವಿಸಿ ಮಾಡಿದಾಗ ಮೂರನೆಯ ಸಹಭಾಗಿಯ ಒತ್ತಾಸೆಯೂ ನಮಗೆ ಸಿಗುತ್ತದೆ. ಹಾಗಲ್ಲದೆ 'ನಾನೇ' ಸಾಧಿಸಿಬಿಡುತ್ತೇನೆ ಎನ್ನುವ ಕಾತರತೆಯಿಂದ ಮುನ್ನುಗ್ಗಿದರೆ ಮೈ ಕೈ ನೋಯಿಸಿಕೊಳ್ಳುವುದು ಸ್ವಾಭಾವಿಕ.





ಇಂದಿನ ಬಹು ಪೈಪೋಟಿಯ ಯುಗದಲ್ಲಿ, ಸ್ವಪ್ರಯತ್ನಕ್ಕೆ ಅಧಿಕ ಒತ್ತಾಸೆಯನ್ನು ನೀಡುವ ಈ ಸಮಯದಲ್ಲಿ, ಕಾಣದ ಕೈಯಿನ ಪ್ರಭಾವವನ್ನು ಅರಿಯದ ಇಂದಿನ ದಿನದಲ್ಲಿ ಆತುರವೂ ಹೆಚ್ಚಾಗಿ ಬಹಳಷ್ಟು ಜನ ಮಾನಸಿಕ ಮತ್ತು ದೈಹಿಕ ಖಿನ್ನತೆಯನ್ನು ಅನುಭವಿಸುವುದನ್ನು ನಾವು ಕಾಣುತ್ತೇವಲ್ಲವೇ? ಮೊದಲಿಗೆ ಅಂತರಂಗದಲ್ಲಿ ಶಾಂತರಾಗಬೇಕು. ಒಳಗಿನ ಕಾತರತೆ ಕಡಿಮೆಯಾದರೆ, ಹೊರಗಿನ ಆತುರತೆ ಕಡಿಮೆಯಾಗುತ್ತದೆ. ಮನಸ್ಸು ಶಾಂತವಾಗುತ್ತದೆ. ಶಾಂತ ಮನಸ್ಸು ಸೂಕ್ತಾಸೂಕ್ತತೆಗಳನ್ನೂ ನಿಖರವಾಗಿ ಅರಿತು ವರ್ತಿಸುತ್ತಾದ್ದರಿಂದ ಅದರ ಕಾರ್ಯಗಳೆಲ್ಲಾ "ಸರ್ವಹಿತಾಭಿಮುಖ" ವಾಗಿರುತ್ತದೆ. ನಾವೂ ಸಹ ಪ್ರಯತ್ನವನ್ನು ಮಾಡಿದರೆ ಲೇಸು.

**ಮುಕ್ತಕ – 823**

**ಎಣಿಕೆಯೊಳಿತಾದೊಡೆಯುದೊಳಿತನಾಗಿಸದು ಹಟ |**
**ಮಣಿಕನಕ ಸಂಕೋಲೆ ತನುವ ಬಂಧಿಸದೇಂ ||**
**ತನಯನಿರಿದಸಿ ನಿನ್ನ ಮೈಯ ಹುಣ್ಣಾಗಿಸದೆ ? |**
**ಮನ ಸರ್ವಸಮವಿರಲಿ - ಮಂಕುತಿಮ್ಮ ||**

ಎಣಿಕೆಯೊಳಿತಾದೊಡೆಯುದೊಳಿತನಾಗಿಸದು=ಎಣಿಕೆ+ಒಳಿತಾದೊಡೆಯುಂ+ಒಳಿತನ್+ಆಗಿಸದು,

ತನಯನಿರಿದಸಿ=ತನಯನ್+ಇರಿದ+ಅಸಿ, ಹುಣ್ಣಾಗಿಸದೆ=ಹುಣ್ಣ+ಆಗಿಸದೆ

ಎಣಿಕೆ=ಮನದ ಲೆಕ್ಕಾಚಾರ, ಒಳಿತಾದೊಡೆಯುಂ=ಒಳ್ಳೆಯದಾದರೂ, ತನಯನ್=ಮಗನು, ಇರಿದ=ಚುಚ್ಚಿದ, ಅಸಿ=ಕತ್ತಿ,

ನಮ್ಮ ಆಲೋಚನೆ ಉತ್ತಮವಾದರೂ, ಉತ್ತಮ ಕಾರ್ಯವನ್ನೇ ಮಾಡಲು ನಮ್ಮ ಹಟ ನಮ್ಮನ್ನು ಬಿಡುವುದಿಲ್ಲ. ಬಂಗಾರ ಮತ್ತು ಮಣಿಗಳಿಂದ ಪೋಣಿಸಲ್ಪಟ್ಟ ಸಂಕೋಲೆಯಾದರೂ ಅದು ನಮ್ಮ ದೇಹವನ್ನು ಬಂಧಿಸುವುದಿಲ್ಲವೇ? ನಮ್ಮ ಮಗನೇ ಆದರೂ, ಅವನು ಕತ್ತಿಯಿಂದ ನಮ್ಮನ್ನು ಇರಿದರೆ ಮೈ ಹುಣ್ಣಾಗುವುದಿಲ್ಲವೇ? ಹಾಗಾಗಿ ಮನ ಸರ್ವಸಮವಿರಲಿ ಎಂದು ಒಂದು ಉತ್ತಮ ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸಿನಲ್ಲಿ ಬರುವ ವಿಚಾರಗಳಲ್ಲಿ ಇದು ಒಳ್ಳೆಯದು-ಇದು ಕೆಟ್ಟದ್ದು' ಎಂದು ನಮಗೆ ಸದಾಕಾಲ ತಿಳಿಸುವುದು ನಮ್ಮ 'ವಿವೇಕ'. ಈ ವಿವೇಕದ ಬಲದಿಂದ ಮನಸ್ಸಿನಲ್ಲಿ ಎಷ್ಟೋ ಒಳ್ಳೆಯ ವಿಚಾರಗಳು ಬರಬಹುದು. ಆದರೆ ನಮ್ಮ ಸ್ವಭಾವ ಈ ವಿವೇಕದ ಮೇಲೆ ಯಾವಾಗಲೂ ಸವಾರಿಮಾಡುತ್ತದೆ. ಇಂದ್ರಿಯ ಪ್ರಚೋದಿತವಾದ ಮನಸ್ಸು ವಿವೇಕದ ಮಾತನ್ನು ಕೇಳಲಿಚ್ಚಿಸುವುದಿಲ್ಲ. ಚಿನ್ನಕ್ಕೆ ಬಹಳ ಬೆಲೆಯುಂಟು. ಅದು 'ಆಪದ್ಧನ' ಎಂದು ಪರಿಗಣಿಸುವುದೂ ಉಂಟು. ಆದರೆ ಅದನ್ನು ಶೇಕರಿಸುವ ಆಸೆಯ ಮತ್ತು ಅತಿಯಾಸೆಯ ಸಂಕೋಲೆಯನ್ನು ನಮ್ಮ ಸುತ್ತ ಬಿಗಿದುಕೊಂಡರೆ ಅದು ನಮಗೆ ಖಂಡಿತ ಹಾನಿಯನ್ನುಂಟುಮಾಡುತ್ತದೆ. ಅದರ ಅರಿವೂ ನಮಗುಂಟು. ಆದರೂ ಅದರ ಶೇಖರಣೆಯ ಆಸೆಗೆ ಅಂತ್ಯವೇ ಇಲ್ಲ. ಅದುಂಟುಮಾಡುವ



ಹಾನಿಯಿಂದ ಪಾರಾಗಬೇಕಾದರೆ ಮನಸ್ಸು ಸರ್ವಸಮತೆಯಿಂದ ಇರಬೇಕು. ಎಂದರೆ 'ಮಣ್ಣು ಮತ್ತು ಹೊನ್ನು' ಎರಡನ್ನೂ ಸಮವಾಗಿ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು.

ಜಗತ್ತಿನಲ್ಲಿ ನಮ್ಮ ಮಕ್ಕಳು ನಮಗೆ ಬಹು ಪ್ರಿಯ. ಅವರೇನು ಮಾಡಿದರೂ ಇಷ್ಟಪಡುವ 'ಮಮಕಾರ' ನಮ್ಮದು. ಅವರು ತಪ್ಪು ಮಾಡಿದಾಗಲೂ ಅವರನ್ನು 'ಮಮಕಾರ' ತೊರೆದು ದಂಡಿಸದಿದ್ದರೆ ಅವರು ಮಾಡುವ

ದುಷ್ಕಾರ್ಯಗಳ ಪರಿಣಾಮಗಳು ನಮ್ಮನ್ನು ಕತ್ತಿಯಂತೆ ಇರಿದು ಘಾಸಿಗೊಳಿಸುತ್ತದೆ ಅಲ್ಲವೇ? ನಾವು ಅನ್ಯರನ್ನು ವಿಶ್ಲೇಷಿಸುವಾಗ ಸತ್ಯಾಸತ್ಯತೆಯನ್ನು ನ್ಯಾಯಾನ್ಯಾಯಗಳನ್ನು ನೋಡುವಂತೆ ನಮ್ಮ ಮಕ್ಕಳನ್ನೂ ನೋಡಬೇಕಾದರೆ ನಾವು ಮಮಕಾರವನ್ನು ತೊರೆಯಬೇಕು. ಅವರನ್ನು ನಿರ್ಮಮಕಾರದಿಂದ ಕಠಿಣತೆಯಿಂದ ತಿದ್ದಲು ನಮಗೆ ಮಾನಸಿಕ ದೃಢತೆ ಮತ್ತು ಸಮಭಾವ ಬೇಕು. ಅಂತಹ ಸಮಭಾವ ನಮ್ಮಲ್ಲಿ ಬರಬೇಕಾದರೆ 'ಮಮಕಾರ'ವನ್ನು ತೊರೆಯಬೇಕು.

ಪ್ರಾಪಂಚಿಕ ವಸ್ತು ವಿಷಯ ಮತ್ತು ವ್ಯಕ್ತಿಗಳ ಮೇಲಿನ ಮಮಕಾರ ಹೇಗೆ ಮನುಷ್ಯರನ್ನು ಅಧೋಗತಿಗೆ ತಳ್ಳುತ್ತದೆ ಎನ್ನುವುದಕ್ಕೆ ನಮ್ಮ ನಿತ್ಯ ಜೀವನದಲ್ಲಿ ಹೇರಳವಾಗಿ ದೃಷ್ಟಾಂತಗಳು ಸಿಗುತ್ತವೆ. ಅವುಗಳನ್ನು ಕಂಡಾಗ, 'ಒಳಿತಾವುದು-ಕೆಡುಕಾವುದು' ಎಂದು ನಮ್ಮ ಅರಿವಿಗೆ ಬಂದರೂ ಅದನ್ನು ಒಪ್ಪಿಕೊಳ್ಳುವುದು ಮತ್ತು ಅವುಗಳನ್ನು ನಮ್ಮ ಬದುಕಿಗೆ ಅಳವಡಿಸಿಕೊಳ್ಳುವುದು 'ಮಮಕಾರವನ್ನು ತೊರೆದರೆ ಮಾತ್ರ ಸಾಧ್ಯ ತೊರೆಯುವ ನಿರ್ಧಾರ, ಧೈರ್ಯ ಮತ್ತು ಪ್ರಕ್ರಿಯೆ ನಡೆದಾಗ ಮಾತ್ರ ನಾವು 'ಮನದ ಸರ್ವಸಮತೆ' ಯನ್ನು ಸಾಧಿಸಬಹುದು. ಬದುಕಿನಲ್ಲಿ ಸುಖ ಮತ್ತು ನೆಮ್ಮದಿಗಳು ಬೇಕಾದರೆ ಅಂತಹ ಸಾಧನೆಯನ್ನು ಮಾಡಬೇಕು.

**ಮುಕ್ತಕ – 824**

**ಗುರಿಯನೈದದೊಡೊಮ್ಮೆ ಮರಳಿ ನೀನುಜ್ಜುಗಿಸು ।**
**ಕರಯುಕ್ತಿ ಪೆರ್ಚೆಯೋ, ದೈವ ಕರುಣೆಯೋ ॥**
**ಕರುಮಋಣ ಸಂಧಿಸಿಯೋ ಕೈಗೂಡಬಹುದು ಗುರಿ ।**
**ಪರವೆಯಿಡದುಜ್ಜುಗಿಸು-ಮಂಕುತಿಮ್ಮ ॥**

ಗುರಿಯನೈದದೊಡೊಮ್ಮೆ=ಗುರಿಯನು+ಐದದೊಡೆ+ಒಮ್ಮೆ, ನೀನುಜ್ಜುಗಿಸು=ನೀನು+ಉಜ್ಜಗಿಸು,
ಪರವೆಯಿಡದುಜ್ಜುಗಿಸು=ಪರಿವೆ+ಇಡದೆ+ಉಜ್ಜುಗಿಸು
ಐದದೊಡೆ=ತಲುಪದಿದ್ದರೆ, ಉಜ್ಜುಗಿಸು+ಪ್ರಯತ್ನಪಡು, ಕರಯುಕ್ತಿ+ನಮ್ಮ ಪ್ರಯತ್ನ,
ಪೆರ್ಚೆಯೋ=ಅಧಿಕವಾಗಿಯೋ, ಕರುಮ+ಕರ್ಮ,

ನಿನ್ನ ಕೃಷಿಯಿಂದ ಆಸೆಪಟ್ಟ ಗುರಿ ತಲುಪಲಾಗದಿದ್ದರೆ ಮತ್ತೆ ಪ್ರಯತ್ನ ಮಾಡು, ನಮ್ಮ ಪ್ರಯತ್ನ ಮತ್ತು ನಿರಂತರ ಕೃಷಿಯಿಂದಲೋ, ಆ ದೈವದ ಕರುಣೆಯಿಂದಲೋ ಅಥವಾ ನಮ್ಮ ಪೂರ್ವ ಕರ್ಮದ ಫಲವೆಂಬಂತೆಯೋ,

ನಾವು ಹಿಡಿದ ಕೆಲಸ ಗುರಿ ತಲುಪಬಹುದು. ಆದರೆ ಇವಾವುದರ ಪರಿವೆಯೂ ಇಲ್ಲದೆ ನೀನು ನಿನ್ನ ಕೃಷಿಯನ್ನು ಮುಂದುವರೆಸು ಎಂದು ಬದುಕಿನಲ್ಲಿ ಆಸೆಪಟ್ಟ ಗುರಿಯನ್ನು ತಲುಪುವ ಸೂಕ್ತ ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಯಾವುದೇ ಕಾರ್ಯ ನೆರವೇರಬೇಕಾದರೆ ನಮ್ಮ ಕೃಷಿ, ಪೂರ್ವ ಪುಣ್ಯ, ಮತ್ತು ದೈವ ಕೃಪೆಯಿರಬೇಕು ಎನ್ನುವುದು ನಮ್ಮ ನಂಬಿಕೆ. ಆದರೆ ಇದರಲ್ಲಿ ನಮಗೆ ಎರಡು ವಿಷಯಗಳ ಜ್ಞಾನವಿರುವುದಿಲ್ಲ. ಒಂದು ನಮ್ಮ ಪೂರ್ವ ಸಂಚಿತ ಪುಣ್ಯ ಅಥವಾ ಪಾಪ, ಒಟ್ಟಾರೆ ಪೂರ್ವಕರ್ಮಫಲ ಮತ್ತು ಎರಡು, ದೈವಕೃಪೆ. ಆದರೆ ನಮಗೆ ನಮ್ಮ ಕೃಷಿ ಎಷ್ಟಿರಬೇಕು, ನಾವು ಎಷ್ಟನ್ನು ಮಾಡುತ್ತಿದ್ದೇವೆ, ಮತ್ತೆಷ್ಟು ಮಾಡಬೇಕು, ಅಷ್ಟನ್ನು ಮಾಡಲು ನಮ್ಮ ದೇಹ ಮತ್ತು ಮನೋಬಲವೆಷ್ಟಿದೆ, ಅದನ್ನು ವೃದ್ಧಿಪಡಿಸಿಕೊಳ್ಳುವುದು ಹೇಗೆ ಎಂಬುದನ್ನೆಲ್ಲಾ ನಾವು ಅರಿತುಕೊಳ್ಳಬಹುದಲ್ಲವೇ? ಹಿಂದೆ ನಾವು ಹೊತ್ತಿದ್ದ ಹಲವಾರು ಜನಗಳಲ್ಲಿ ನಾವು ಆರ್ಜಿಸಿದ ಮತ್ತು ಉಳಿಸಿಕೊಂಡ ಗುಣ ಅಥವಾ ಸ್ವಭಾವಗಳು ನಮ್ಮ ಇಂದಿನ ಜೀವನವನ್ನು ಸಾಕಷ್ಟು ಪ್ರಭಾವಿಸುತ್ತದೆ. ಏಕೆಂದರೆ ನಾವು ಇಂದೇನಾಗಿದ್ದೇವೋ, ಅದು ಹಿಂದಿನಿಂದ ರೂಪುಗೊಳ್ಳುತ್ತಾ, ಬದಲಾಗುತ್ತಾ, ಕಳೆದುಕೊಳ್ಳುತ್ತಾ, ಪಡೆದುಕೊಳ್ಳುತ್ತಾ, ಉಳಿಸಿಕೊಳ್ಳುತ್ತಾ ಬಂದು ಇಂದು ನಾವು ಏನೋ, ಅದಾಗಿ ನಿಂತಿದ್ದೇವೆ. ನಮಗೆ ಅದರ ಸಂಪೂರ್ಣ ಪರಿಚಯವಿಲ್ಲ.
ಜಗನ್ನಾಟಕವನ್ನು ಆಡಿಸುತ್ತಿರುವ ಆ ಸೂತ್ರಧಾರಿಯು ಆಯಾಯಾ ಸಮಯಕ್ಕೆ ಸರಿಯಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದಷ್ಟೇ ನಮ್ಮ ಕರ್ತವ್ಯ, ಏಕೆಂದರೆ ಅದು ಹೀಗೇಕೆ ಎಂದು ಪ್ರಶ್ನಿಸುವ ಅಧಿಕಾರ ಅಥವಾ ಯೋಗ್ಯತೆ ನಮಗಿಲ್ಲ. ಹೀಗೆ ನಮ್ಮ ಪೂರ್ವಕರ್ಮಫಲ ಅಥವಾ ಆ ದೈವಕೃಪೆ, ಎರಡರ ಪರಿಚಯವೂ ನಮಗಿಲ್ಲವಾದ್ದರಿಂದ ನಾವು ಅದರ ಬಗ್ಗೆ ಚಿಂತಿಸದೆ ನಮಗೆ ಸಂದ ಕೆಲಸವನ್ನು ಗುರಿ ಮುಟ್ಟುವವರೆಗೂ 'ಮರಳಿ ಯತ್ನವ ಮಾಡು' ಎಂದು ನಮ್ಮ ಹಿರಿಯರು ಹೇಳಿದಂತೆ, ಕೃಷಿ ಮಾಡುತ್ತಾ ಹೋಗಬೇಕು.ಇದನ್ನೇ ಮಾನ್ಯ ಡಿವಿಜಿಯವರು 'ಪರವೆಯಿಡದುಜ್ಜುಗಿಸು' ಎಂದಿದ್ದಾರೆ.

ನಾವು ಕೈಹಿಡಿದ ಕೆಲಸ ಕೈಗೂಡಬೇಕಾದರೆ ಮೇಲೆ ಹೇಳಿದ ನಮ್ಮ ಪೂರ್ವ ಕರ್ಮಫಲ, ದೈವಾನುಗ್ರಹ ಮತ್ತು ನಮ್ಮ ಕೃಷಿಯಿಂದಲೇ ಆಗಬೇಕು. ಯಾವುದನ್ನೂ ಗೌಣವಾಗಿ ನೋಡುವಹಾಗಿಲ್ಲ. ಮೊದಲ ಎರಡರ ಪರಿಚಯ ನಮಗಿಲ್ಲವಾದ್ದರಿಂದ, ನಮಗೆ ಗೊತ್ತಿರುವ ನಮ್ಮ ಕೃಷಿಯನ್ನು, ಮಿಕ್ಕೆರಡರ ಪರಿವೆಯಿಲ್ಲದೆ, ಮಾಡುತ್ತಾ ಹೋಗಬೇಕು ಎನ್ನುವುದೇ ಈ ಮುಕ್ತಕದ ಆಶಯ. ನಮ್ಮ ಪ್ರಯತ್ನವನ್ನು ನಾವು ಕರ್ತವ್ಯವೆಂಬಂತೆ ಮಾಡುತ್ತಾ ಹೋದರೆ, ನಮ್ಮ ಪೂರ್ವಕರ್ಮಫಲ ಮತ್ತು ಆ ದೈವ ಎರಡೂ ಬದಲಾಗುತ್ತಾ ನಮ್ಮ ಗುರಿಸಾಧನೆಗೆ ಪೂರಕವಾಗಿ ನಿಂತು ನಮ್ಮನ್ನು ದಡ ಮುಟ್ಟಿಸುತ್ತದೆ, ಎನ್ನುವುದೇ ನಂಬಿಕೆ'

ಹಾಗಾಗಿ " ಕರ್ಮಣ್ಯೇ ವಾ ಅಧಿಕಾರಸ್ತೇ……………..”





**ಮುಕ್ತಕ - 825**

**ಕಲೆಗಳಲ್ಲಿ ಪರಮಕಲೆ ಜೀವನದ ಲಲಿತ ಕಲೆ।**

**ಕಲಿಸಲದನಳವಲ್ಲ ಬಾಹ್ಯಬೋಧನೆಯಿಂದ ||**

**ಒಲಿದೊಲಿಸಿಕೊಳುವ ಲೌಕಿಕನಯದ ಸೊಗಸ ನೀಂ।**

**ತಿಳಿವುದೊಳಹದದಿಂದ - ಮಂಕುತಿಮ್ಮ ||**

ಕಲಿಸಲದನಳವಲ್ಲ =ಕಳಿಸಲ್+ಅದನ್ +ಅಳವಲ್ಲ, ಒಲಿದೊಲಿಸಿಕೊಳ್ಳುವ=ಒಲಿದು+ಒಲಿಸಿಕೊಳುವ,
ತಿಳಿವುದೊಳಹದದಿಂದ=ತಿಳಿವುದು+ಒಳಹದದಿಂದ. ಅಳವಲ್ಲ=ಸಾಧ್ಯವಲ್ಲ.

ಜಗತ್ತಿನಲ್ಲಿರುವ ಎಲ್ಲಾ ಕಲೆಗಳಲ್ಲಿ ಅತೀ ಉತ್ತಮವಾದ ಕಲೆ ಎಂದರೆ 'ಬದುಕುವ ಕಲೆ. ಇದನ್ನು ಹೊರ ಬೋಧನೆಯಿಂದ ಕಲಿಸಲು ಸಾಧ್ಯವಿಲ್ಲ. ನಾವು ಜಗತ್ತಿಗೆ ಒಲಿದು, ಜಗತ್ತನ್ನು ನಾವು ಒಲಿಸಿಕೊಳ್ಳುವುದೇ ಬದುಕಿನ ಸೊಗಸು. ಇದನ್ನು ನೀನು ನಿನ್ನ ಅಂತರಂಗದ ಮಂಥನದಿಂದ ಅರಿತುಕೋ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವಿಸುವುದು ಒಂದು ಕಲೆ. ಅದು ಜಗತ್ತಿನ 64 ಕಲೆಗಳಿಗಿಂತ ಅತ್ಯುತ್ತಮವಾದ ಕಲೆ. ಈ ಕಲೆ ಕರಗತವಾದರೆ ಅವನಷ್ಟು ಪರಮ ಸುಖಿ ಇನ್ನೊಬ್ಬನಿರಲಾರ. ಇದನ್ನು ಪರಮ ಕಲೆ ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಎಂದರೆ ಕಲೆಗಳಲ್ಲಿ ಅತ್ಯುನ್ನತ ಕಲೆ ಎಂದು ಅರ್ಥ. ಆದರೆ ಇದನ್ನು ಒಬ್ಬರು ಇನ್ನೊಬ್ಬರಿಗೆ ಕಲಿಸಲು ಸಾಧ್ಯವಿಲ್ಲ. ಅನುಭವದಿಂದ ಮಾತ್ರ ಕಲಿಯಲು ಸಾಧ್ಯ, ಬದುಕುವ ಕಲೆಯೆಂದರೆ, "ಹೇಗೆ ಬದುಕಬೇಕು? ಏನನ್ನು ಮತ್ತು ಎಷ್ಟನ್ನು ಮಾತಾಡಬೇಕು? ಕೇಳಿದ ಯಾವುದಕ್ಕೆ ಎಷ್ಟು ಮಹತ್ವವನ್ನು ನೀಡಬೇಕು? ಕಂಡದ್ದನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಅರ್ಥೈಸಿಕೊಂಡದ್ದನ್ನು ಹೇಗೆ ಜೀರ್ಣಿಸಿಕೊಳ್ಳಬೇಕು? ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಮತ್ತು ಸಿಕ್ಕ ಉತ್ತರಗಳನ್ನು ಬದುಕಿಗೆ ಹೇಗೆ ಅಳವಡಿಸಿಕೊಳ್ಳುವುದು ಎಂದು ಅರಿತುಕೊಳ್ಳುವುದೇ 'ಜೀವನದ ಕಲೆ

'ಹೇಳಿಕೊಟ್ಟ ಬುದ್ಧಿ ಮತ್ತು ಕಟ್ಟಿಕೊಟ್ಟ ಬುತ್ತಿ ಎಷ್ಟು ದಿವಸ ಬರುತ್ತದೆ' ಎನ್ನುವ ಗಾದೆಯೊಂದಿದೆ. ಹಾಗೆಯೇ ಅನುಭವದಿಂದಲೇ ಬದುಕುವುದನ್ನು ಹೇಳಿಕೊಟ್ಟು ಕಲಿಸಲಾಗುವುದಿಲ್ಲ. ಬದುಕಿನ ಬದುಕುವುದನ್ನು ಕಲಿಯಬೇಕು. ಕಷ್ಟ ಸುಖಗಳ, ನೋವು ನಲಿವುಗಳ ಅನುಭವದಿಂದ ಬದುಕಿನ ಸತ್ವವನ್ನು ಗ್ರಹಿಸಿ, ಅದರಿಂದ ಯಾವುದು ಸೂಕ್ತ, ಯಾವುದು ಸೂಕ್ತವಲ್ಲ ಎಂದು ವಿಶ್ಲೇಷಿಸಿ, ಸೂಕ್ತವಾದದ್ದನ್ನು ಅನುಸರಿಸುವ ಗುಣ ನಮ್ಮದಾದರೆ 'ಜೀವಿಸುವ ಕಲೆ' ನಮಗೆ ಒಲಿದಂತೆಯೇ ಅಲ್ಲವೇ? ಈ ಕಲೆಯನ್ನು ನಾವು ನಮ್ಮೊಳಗೇ ಒಲಿಸಿಕೊಂಡು, ಹಾಗೆ ಒಲಿದ ಕಲೆಯಿಂದ ಲೌಕಿಕ ಜಗತ್ತನ್ನು ನಮಗನುಗುಣವಾಗಿ ಒಲಿಸಿಕೊಳ್ಳುವುದೇ 'ಜೀವನದ ಕಲೆ' ಯ ಪರಮ ಗುರಿ.

ಇದು ಕೇವಲ ಬುದ್ಧಿಯ ಕೆಲಸವಲ್ಲ. ಇದು ಹೃದಯದ ಕೆಲಸ. ಇದು ಅಂತರಂಗದ ಕೆಲಸ. ಅನುಭವಗಳನ್ನು ಅಂತರಂಗದೊಳಕ್ಕೆ ಇಳಿಸಿಕೊಂಡು, ಬುದ್ಧಿ ಮತ್ತು ವಿವೇಕದ ಕಡೆಗೋಲಿಂದ ಮಂಥನ ಮಾಡಿ ಸತ್ವವೆಂಬ ಬೆಣ್ಣೆಯನ್ನು ತೆಗೆಯುವ ಕೆಲಸವಾಗಬೇಕು. ಇದನ್ನೇ ಮಾನ್ಯ ಗುಂಡಪ್ಪನವರು "ತಿಳಿವುದೊಳಹದದಿಂದ" ಎಂದಿದ್ದಾರೆ. ನಮ್ಮ ಮನಸ್ಸು ಆ ರೀತಿ 'ಹದ'ಗೊಂಡರೆ ತತ್ವದರ್ಶನವಾಗಿ ಬದುಕಿನಲ್ಲಿ ರಾಗದ್ವೇಷಗಳ, ಪ್ರೇಮಾನುರಾಗಗಳ ಎಲ್ಲೆಯನ್ನು ದಾಟಿ ನಿರ್ಮೋಹ ಮತ್ತು ನಿರ್ಮಮಕಾರದ ಭಾವ ನಮ್ಮಲ್ಲಿ ನೆಲೆ ನಿಲ್ಲುತ್ತದೆ. ಅದು ಆನಂದದ ಮತ್ತು ಸಂತೋಷದ ನೆಲೆ. ಅಂತಹ ನೆಲೆಯನ್ನು ಮುಟ್ಟುವುದೇ ಜೀವನದ ಪರಮೋಚ್ಚ ಗುರಿ.

**ಮುಕ್ತಕ – 826**

**ಸಂಗೀತಕಲೆಯೊಂದು,ಸಾಹಿತ್ಯಕಲೆಯೊಂದು |**

**ಅಂಗಾಂಗ ಭಾವ ರೂಪಣದ ಕಲೆಯೊಂದು ||**

**ಸಂಗಳಿಸಲೀ ಕಲೆಗಳನುನಯವು ಚರ್ಯೆಯಲಿ |**

**ಮಂಗಳೋನ್ನತ ಕಲೆಯೊ - ಮಂಕುತಿಮ್ಮ ||**

ಸಂಗಳಿಸಲೀ=ಸಂಗಳಿಸಲಿ +ಈ, ಕಲೆಗಳನುನಯವು=ಕಲೆಗಳ+ಅನುನಯವು

ಅಂಗಾಂಗಭಾವರೂಪಣದಕಲೆ= ನಾಟ್ಯ ಕಲೆ, ಸಂಗಳಿಸಲೀ=ಮಿಳಿತವಾಗಲಿ,

ಸಂಗೀತ, ಸಾಹಿತ್ಯ, ನಾಟ್ಯ ಮುಂತಾದವು ಒಂದೊಂದು ಕಲೆಗಳು, ನಮ್ಮ ಬದುಕನ್ನು ರೂಪಿಸುವ ನಮ್ಮ ಆಚಾರ ವಿಚಾರದಲ್ಲಿ ಈ ಕಲೆಗಳ ವಿಚಾರವು ಚರ್ಚೆಯಾದಲ್ಲಿ ಜೀವಿಸುವ ಕಲೆಯೂ ಅತ್ಯುತ್ತಮವಾಗುತ್ತದೆ ಎನ್ನುವ ವಿಚಾರವನ್ನು ನಮ್ಮ ಮುಂದೆ ಇಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಂಗೀತ ಒಂದು ಅದ್ಭುತ ಕಲೆ. ಶಾಸ್ತ್ರಬದ್ಧವಾದ ಸಂಗೀತಕ್ಕೆ ಭಾವವನ್ನು ತುಂಬುವಂತಹ ಸಾಹಿತ್ಯ ಮತ್ತು ಆ ಸಾಹಿತ್ಯವನ್ನು ಸಂಗೀತದಲ್ಲಿ ಪ್ರಸ್ತುತಿ, ತಾವೂ ಭಕ್ತಿಯಿಂದ, ತನ್ಮಯತೆಯಿಂದ ಸಂತೋಷಪಟ್ಟು ಇತರರನ್ನೂ ಸಂತೋಷಪಡಿಸುವ ಅದ್ಭುತ ಕಲೆ ಸಂಗೀತ ಕಲೆ. ದೇಹವನ್ನೇ ಒಂದು ಸಾಧನವಾಗಿ, ಮುದ್ರೆ, ಹಾವ, ಭಾವ, ನಾಟ್ಯ, ನಟನೆ ಮುಂತಾದವುಗಳನ್ನು ಅರ್ಥಪೂರ್ಣವಾಗಿ ಮತ್ತು ಭಕ್ತಿಪೂರ್ಣವಾಗಿ ಪ್ರದರ್ಶಿಸುವ ಕಲೆಯೇ ನಾಟ್ಯ ಕಲೆ. ಪರತತ್ವದಲ್ಲಿ ಭಕ್ತಿಯಿಲ್ಲದೆ ಈ ಕಲೆಗಳನ್ನು ಪ್ರದರ್ಶಿಸಲಾಗದು. ತನ್ನ ಅನುಭವ ಮತ್ತು ಅನಿಸಿಕೆ, ಕಣ್ಣಾರೆ ಕಂಡದ್ದು ಮತ್ತು ಕಲ್ಪಿಸಿಕೊಂಡು ತಾವು, ಕಾವ್ಯ, ಕವನ, ಕತೆ ಕಾದಂಬರಿ, ವಚನ, ಪದ್ಯ, ಮುಂತಾದವುಗಳ ರೂಪದಲ್ಲಿ ಬರೆಯುತ್ತಾ ಸಂತಸಪಡುವುದು ಸಾಹಿತ್ಯ ಸೃಷ್ಟಿಯ ಕಲೆ, ಈ ಎಲ್ಲ ಕಲೆಗಳೂ ಪ್ರತಿಪಾದಿಸುವುದು ಜಗತ್ತಿನ ವಿಷಯಗಳಿಗಿಂತ ಹೆಚ್ಚು ಪಾರಮಾರ್ಥಿಕ ವಿಷಯಗಳು. ಈ ಕಲೆಗಳನ್ನು ಅಭ್ಯಸಿಸುವವರು ಮತ್ತು ಅನುಸಂಧಾನ ಮಾಡುವವರು ಪರತತ್ವದ ಅನುಸಂಧಾನವನ್ನೇ ಮಾಡುತ್ತಿರುತ್ತಾರೆ.





ಜರ್ಮನಿಯ ಬರ್ಲಿನ್ ನಗರದಲ್ಲಿ ಒಂದು ಸಂಜೆ ಹದಿಮೂರು ವರ್ಷದ ಬಾಲಕ 'ಯಹೂದಿ ಮೆನುಹಿನ್' ನ ವಯೊಲಿನ್ ಕಚೇರಿ ಆಯೋಜಿಸಲಾಗಿತ್ತು. ಬಹಳ ಕಟ್ಟುನಿಟ್ಟಾದ ನಿಬಂಧನೆಗಳಿದ್ದ ಸಭಾಂಗಣ. ಇಂತಹುದೇ ದಿರಿಸ ಧರಿಸಬೇಕು, ಇಷ್ಟೇ ವೇಳೆಗೆ ಕೂರಬೇಕು, ಮಧ್ಯದಲ್ಲಿ ಮಾತನಾಡುವುದು ಅಥವಾ ಚಪ್ಪಾಳೆ ತಟ್ಟುವುದು ನಿಷಿದ್ಧ. ಹೀಗೆ ಆಯೋಜಿಸಿದ್ದ ಕಚೇರಿಯ ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲಾ ಕಟ್ಟುಪಾಡು, ನಿಬಂಧನೆಗಳನ್ನೂ ಉಲ್ಲಂಘಿಸಿ ವೇದಿಕೆಯ ಮೇಲಕ್ಕೆ ತೆರಳಿ ಆ ಹದಿಮೂರರ ಬಾಲಕನನ್ನು ತಬ್ಬಿ "ಆಹಾ! ಇಂದು ನಾನು 'ದೇವರಿದ್ದಾನೆಂದು' ನಂಬುತ್ತೇನೆ"

ಎಂದನಂತೆ ಓರ್ವ ವ್ಯಕ್ತಿ. ಆ ವ್ಯಕ್ತಿ ಬೇರೆಯಾರೂ ಆಗಿರದೆ ಸೃಷ್ಟಿಗೆ ವ್ಯಾಖ್ಯಾನವನ್ನು ಬರೆದ ವಿಜ್ಞಾನಿ 'ಆಲ್ಬರ್ಟ್ ಐನ್ ಸ್ಟೀನ್' ಆಗಿದ್ದನಂತೆ. ಇದು ಸಂಗೀತ, ನಾಟ್ಯ ಅಥವಾ ಸಾಹಿತ್ಯ ಕಲೆಗಳ ಮಹಿಮೆ, ಆ ಕಲೆಗಳ ವಿಚಾರವನ್ನು ಸಂಧಾನಮಾಡಿದರೆ ನಮ್ಮೊಳಗೂ ಉತ್ತರೋತ್ತರ (vertical) ಬೆಳವಣಿಗೆ ಬಂದು ಬದುಕುವ ಕಲೆಯನ್ನು ನಾವು ಸಮರ್ಪಕವಾಗಿ ಕಲಿತು ಉತ್ತಮ ಜೀವನವನ್ನು ಜೀವಿಸಲು ಸಾಧ್ಯ.

ಅಂತಹ ಸಂಗೀತವನ್ನೂ ಸಾಹಿತ್ಯವನ್ನೋ ನಾಟ್ಯಕಲೆಯನ್ನೋ ಓದಿ, ಕೇಳಿ, ನೋಡಿ ತನ್ಮಯ ಭಾವವನ್ನು ಹೊಂದಿ ಅದರೊಳಗಿನ ಸತ್ವವನ್ನು ಹೀರಿಕೊಂಡು ಆ ಸತ್ವದ ತತ್ವವನ್ನು ನಮ್ಮ ಮನಸ್ಸು ಬುದ್ಧಿ ಮತ್ತು ಸ್ವಭಾವಗಳ ಮೇಲೆ ಪ್ರಭಾವ ಬೀರಿ ನಮ್ಮ ಬದಲಾಯಿಸುವಂತೆ ಮಾಡಿಕೊಳ್ಳಬೇಕು. ಸುಮ್ಮನೆ ಕೇಳಿದರೆ, ಓದಿದರೆ ಅಥವಾ ನೋಡಿದರೆ ಏನೂ ಪ್ರಯೋಜನವಿಲ್ಲ. ಒಳಬರುವ ಸತ್ವವನ್ನು ಬರಮಾಡಿಕೊಂಡು ಸಂಗಳಿಸಲೀ ಕಲೆಗಳನುನಯವು ಚರ್ಯೆಯಲಿ" ಎಂದು ಗುಂಡಪ್ಪನವರು ಹೇಳುವಂತೆ ನಮ್ಮೊಳಗೇ ಅದರ ವಿಚಾರ ಚರ್ಚೆಯಾದರೆ ಒಳಿತಾಗುತ್ತದೆ, ಇಲ್ಲದಿದ್ದರೆ 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ' ಎಂದು ಸರ್ವಜ್ಞ ಕವಿ ಹೇಳುವಂತೆ ವ್ಯರ್ಥವಾಗುತ್ತದೆ. ಆದರೆ ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 827**

**ಲೋಕದಲಿ ಭಯವಿರಲಿ, ನಯವಿರಲಿ, ದಯೆಯಿರಲಿ |**
**ನೂಕುನುಗ್ಗುಗಳತ್ತ , ಸೋಂಕುರೋಗಗಳು ||**
**ಸಾಕಿ ಸಲಹುವರುಮ್ ಅತ್ತಲೆ ನಿನಗೆ, ನಿನ್ನೆಲ್ಲ |**
**ಲೋಕ ಮೂಲವು ನೋಡೋ - ಮಂಕುತಿಮ್ಮ ||**

ಸಾಕಿ ಸಲಹುವರುಮ್=ನಮ್ಮನ್ನು ಹಡೆದು ಬೆಳೆಸಿದವರು, ಅತ್ತಲೆ =ಹಾಗೆಯೇ

ಜೀವಿಸುವ ಕಲೆಯನ್ನು ಮುಂದುವರೆಸುತ್ತಾ, ಬದುಕುವಾಗ ಭಯವಿರಲಿ, ನಡವಳಿಕೆಯಲ್ಲಿ ನಯವಿರಲಿ ಮತ್ತು ಸೃಷ್ಟಿಯ ಮಿಕ್ಕೆಲ್ಲದರಲ್ಲಿ ದಯೆ ಇರಲಿ ಎಂದು ಹೇಳುತ್ತಾ, ಜನಸಂದಣಿಯಿಂದ ಮತ್ತು ಅವರಿಂದ ನಿನಗೆ ಅಂಟಬಹುದಾದ ರೋಗಗಳಿಂದ, ಅಷ್ಟೇಕೆ, ನಿನ್ನ ಸಾಕಿ ಸಲುಹಿದವರಿಂದಲೂ ಸಾಧ್ಯವಾದಷ್ಟು ದೂರವಿರು, ಗಮನವೆಲ್ಲ " ನೀನು ಎಲ್ಲಿಂದ ಬಂದೆ, ಏನು ತಂದೆ ಮತ್ತೆ ಮುಂದಕ್ಕೆ ಎಲ್ಲಿಗೆ ಮತ್ತು ಹೇಗೆ ಹೋಗಬೇಕು

ಎಂದು ಒಂದು ಎಚ್ಚರಿಕೆಯ ಮಾತನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಈ ಲೋಕದಲ್ಲಿ ನಾವಿರುವಾಗ ನಮ್ಮ ನಡವಳಿಕೆಯಿಂದ ಅನ್ಯರಿಗೆ ತೊಂದರೆಯಾದೀತೇನೋ ಎಂಬ ಭಯವಿರಬೇಕು. ಅಂತಹ ಸಾತ್ವಿಕ ಭಯವನ್ನು ನಾವು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಆ ಭಯವೇ ನಮ್ಮ ಬಹಳಷ್ಟು ಕೆಲಸಗಳಿಗೆ 'ಸನ್ಮಾರ್ಗದರ್ಶಿ'ಯಾಗುತ್ತದೆ. ಕೇವಲ ಭಯವಲ್ಲ 'ನಯ'ವೂ ಬೇಕು. ಏಕೆಂದರೆ ಈ ಜಗತ್ತೇ ಒಂದು ಕನ್ನಡಿಯಂತೆ. ನಾವು ಇತರರೊಡನೆ ನಯವನ್ನು ತೋರಿದರೆ ಇತರರಿಂದ ನಾವು ಅಪೇಕ್ಷಿಪಡುವ ನಯವು ನಮಗೆ ಸಿಕ್ಕಿತು. ನಾವು "ಒರಟಾ'ದರೆ ನಮಗೆ ದಕ್ಕುವುದು ಏನು ಎಂದು ಇಂದಿನ ಸಮಾಜದಲ್ಲಿ ಬಹುಶಃ ಎಲ್ಲರಿಗೂ ಗೊತ್ತಿದೆ. ಇನ್ನು ದಯೆ ಬೇಕು ಎಂದಿದ್ದಾರೆ. ಹೌದು ಎಲ್ಲರಿಗೂ ಸಮನಾದ ದೈಹಿಕಬಲ, ಆರ್ಥಿಕಬಲ ಮತ್ತು ಮಾನಸಿಕ ಬಲವಿರುವುದಿಲ್ಲ. ನಮಗಿಂತ ಬಲಹೀನರರನ್ನು ಕಂಡು ನಮ್ಮಲ್ಲಿ ಸದಾಕಾಲ ದಯೆಯ ಭಾವ ಬೇಕು. "ದಯೆಯೇ ಧರ್ಮದ ಮೂಲವಯ್ಯಾ"ಎಂದಿದ್ದಾರೆ ಮಾನ್ಯ ಜಗಜ್ಯೋತಿ ಬಸವಣ್ಣನವರು. ಮಾನವೀಯತೆಯೇ ಮಾನವನ ಮೂಲ ಧರ್ಮ, ಅ ಧರ್ಮದ ಪಾಲನೆಯಾಗಬೇಕಾದರೆ ಸೃಷ್ಟಿಯ ಸಕಲ ಪ್ರಾಣಿಗಳಲ್ಲೂ ನಮ್ಮ ಮನಸ್ಸಿನಲ್ಲಿ ದಯೆಯ ಭಾವವಿರಬೇಕು.

ಜಗತ್ತಿನಲ್ಲಿ ನಮ್ಮ ಸುತ್ತ ಬಹಳಷ್ಟು ಜನರಿರುತ್ತಾರೆ. ಪ್ರತಿಯೊಬ್ಬರದೂ ಬೇರೆ ಬೇರೆ ಮನೋಭಾವ, ಗುಂಪಿನಲ್ಲಿ ಇದ್ದಾಗ ಒಂದು ರೀತಿ ಮತ್ತು ಏಕಾಂತದಲ್ಲಿ ಒಂದು ರೀತಿ. ಗುಂಪಿನಲ್ಲಿ ಎಲ್ಲರೂ ಒಂದು ಉನ್ಮಾದದ ಸ್ಥಿತಿಯಲ್ಲಿರುತ್ತಾರೆ. ನಾವೂ ಸಹ ಗುಂಪಿನಲ್ಲಿ ಒಬ್ಬರಂತೆ ಬದುಕಿದರೆ ಆ ಉನ್ಮಾದ' ದ ಸೊಂಕುರೋಗ ನಮ್ಮನ್ನು ಅಂಟಿಕೊಂಡು ನಾವು ಬದುಕನ್ನು ಬದುಕದೆ, ಬದುಕಿನಲ್ಲಿ ಕೊಚ್ಚಿಕೊಂಡು ಹೋಗುತ್ತೇವೆ. ಇದು, ನಮ್ಮನ್ನು ಹೊತ್ತು, ಹೆತ್ತು, ಸಾಕಿ ಸಲುಹಿದವರಿಗೂ ಅನ್ವಯವಾಗುತ್ತದೆ. ಅವರಲ್ಲಿ ಪ್ರೀತಿ ಪ್ರೇಮವನ್ನು ಕೇವಲ ಕರ್ತವ್ಯದಂತೆ ನಡೆಸಿದರೆ, ನಾವು ನಮ್ಮ ಬದುಕಿನ ಗುರಿಯನ್ನು ಅರಿಯಬಹುದು ಮತ್ತು ಗುರಿ ಮುಟ್ಟಲು ಪ್ರಯತ್ನಿಸಲೂಬಹುದು. ಅವರ ಪ್ರೇಮ, ಪ್ರೀತಿ ಇತ್ಯಾದಿ ಭಾವಗಳ ಬಂಧನದಲ್ಲಿ ಸಿಲುಕಿಕೊಂಡರೆ, ಅದರಿಂದ ಬಿಡಿಸಿಕೊಂಡು ನಾವು ಬೆಳೆಯುವುದು ಕಷ್ಟವಾಗುತ್ತದೆ.

ನಿನ್ನೆಲ್ಲ ಲೋಕ ಮೂಲವು ನೋಡೊ'ಎಂದಿದ್ದಾರೆ ಮಾನ್ಯ ಡಿವಿಜಿಯವರು.ಪ್ರಸಿದ್ಧಗಾಯಕ ಡಾ. ಮಂಗಳಂಪಲ್ಲಿ ಬಾಲಮುರಳೀಕೃಷ್ಣ, 'ಮೂಲಮೆರುಗುಟೆ (ಎರುಗುಟ =ತಿಳಿಯುವುದು) ಮುರಳೀ ಗಾನಮು' ಎಂದು ಬಹಳ ಅರ್ಥಗರ್ಭಿತವಾಗಿ ಹೇಳಿದ್ದಾರೆ. ಮುರಳಿ ಎಂದರೆ ಕೊಳಲು. ನಮ್ಮ ದೇಹವೂ ಸಹ ನವರಂಧ್ರಗಳಿಂದಾದ ಒಂದು ಕೊಳಲು. ಈ ದೇಹದ ಸಹಾಯದಿಂದ, ನಾನು ಯಾರು?, ಎಲ್ಲಿಂದ ಬಂದೆ? ನನ್ನ ಸ್ವಭಾವವೇನು? ನನ್ನ ಮಟ್ಟವೇನು? ನನ್ನ ಮಟ್ಟವನ್ನು ಉತ್ತಮವಾಗಿಸಿಕೊಳ್ಳುವುದು ಹೇಗೆ? ಏನನ್ನಾಶ್ರಯಿಸಿದರೆ ನಾನು ಉತ್ತಮನಾಗುತ್ತೇನೆ? ಎನ್ನುವ ಪ್ರಶ್ನೆಗಳನ್ನು ನಮಗೆ ನಾವೇ ಹಾಕಿಕೊಂಡು, ಉತ್ತಮರಾಗಲು ಪ್ರಾಮಾಣಿಕ ಪ್ರಯತ್ನಮಾಡಿದರೆ, ಬದುಕು ಉತ್ತಮವಾಗಿ, ಸಾರ್ಥಕವಾಗುತ್ತದೆ. ಇದು ಜೀವನದ ಕಲೆಯನ್ನು ಅರಿತುಕೊಳ್ಳುವ ವಿಧಾನ. ಪ್ರಯತ್ನಪಟ್ಟರೆ ಎಲ್ಲರೂ ಉತ್ತಮಜೀವಿಗಳಾಗಬಹುದು.





**ಮುಕ್ತಕ - 828**

**ಕಳವಳವ ನೀಗಿಬಿಡು, ತಳಮಳವ ದೂರವಿಡು ।**

**ಕಳೆ, ತಳ್ಳು ಗಲಭೆ ಗಾಬರಿಯ ಮನದಿಂದ ॥**

**ಅಲೆದಾಡುತಿರೆ ದೀಪ ಕಣ್ಗೆ ಗುರಿ ತಪ್ಪುವುದು ।**

**ತಿಳಿತಿಳಿವು ಶಾಂತಿಯಲಿ - ಮಂಕುತಿಮ್ಮ ॥**

ಕಳವಳ+ಚಿಂತೆ, ತಳಮಳ=ಆತಂಕ, ತಿಳಿತಿಳಿವು=ತಿಳಿಯಾಗುವುದು

ಜೀವನದ ಕಲೆಯ ಪರಿಯನ್ನು ನಮಗರಿವಾಗಿಸಲು ತಿಳುವಳಿಕೆಯನ್ನು ನೀಡುತ್ತಾ, ಚಿಂತೆಯನ್ನು ಬಿಡು, ಆತಂಕವನ್ನು ದೂರತಳ್ಳು, ಗಾಬರಿಯನ್ನು ಕಡಿಮೆ ಮಾಡಿಕೋ ಮತ್ತು ಮನದಲ್ಲಿ ನಡೆಯುವ ಹೋರಾಟವನ್ನು ದೂರತಳ್ಳು, ಎಂದು ಹೇಳುತ್ತಾ ಒಂದು ಉದಾಹರಣೆಯನ್ನು ನೀಡಿ, ಬೆಳಕು ಒಂದೇ ಕಡೆ ಇದ್ದರೆ ಗುರಿಯನ್ನು ಸರಿಯಾಗಿ ನೋಡಬಹುದು, ಹಾಗಲ್ಲದೆ ಬೆಳಕು ಸರಿದಾಡುತ್ತಿದ್ದರೆ ಗುರಿಸಾಧನೆ ಸಾಧ್ಯವಿಲ್ಲ ಎಂದು ಮನಸ್ಸು ತಿಳಿಯಾಗಿದ್ದಲ್ಲಿ ಶಾಂತಿಯನ್ನು ಪಡೆಯಲು ಸಾಧ್ಯ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಚಿಂತೆಯನ್ನುವುದು ಒಂದು ಬೆಂಕಿಯಂತೆ, ಸುಡುತ್ತಲೇ ಇರುತ್ತದೆ. ನಮಗೆ ಇರುವ ಭಯಗಳನ್ನು ಎರಡು ಗುಂಪಿಗೆ ಸೇರಿಸಬಹುದು. ಒಂದು "ನಮ್ಮಲ್ಲಿರುವ ವಸ್ತು, ವಿಷಯ ಮತ್ತು ವ್ಯಕ್ತಿಗಳನ್ನು ಕಳೆದುಕೊಳ್ಳುವ ಭಯ ಮತ್ತು ಎರಡು ನಾವು ಬಯಸಿದ ವಸ್ತು, ವಿಷಯ ಮತ್ತು ವ್ಯಕ್ತಿ ನಮಗೆ ಸಿಗದೇ ಹೋಗುವುದೇನೋ" ಎನ್ನುವ ಭಯ. ಈ ಭಯವೇ ಚಿಂತೆಗೆ, ಕಳವಳಕ್ಕೆ, ಗೊಂದಲಕ್ಕೆ, ಗಾಬರಿಗೆ ಕಾರಣ. ಮನಸ್ಸು ಇವುಗಳಿಂದ ಪೀಡಿತವಾಗಿದ್ದರೆ, ಶಾಂತವಾಗಿ ಯಾವುದನ್ನೂ ಯೋಚಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅದನ್ನು ತಳ್ಳಬೇಕು, ಗುಡಿಸಿ ಹೊರಹಾಕಬೇಕು. ಮನಃಫಟಲವನ್ನು ಒರೆಸಿ ಶುದ್ಧ ಮಾಡಿಕೊಳ್ಳಬೇಕು. ಹಾಗಾದರೆ ಮಾತ್ರ ನಮ್ಮ ಬದುಕಿನ ಧ್ಯೆಯ ಅಥವಾ ಗುರಿಸಾಧನೆಗೆ ಒಂದು ಭೂಮಿಕೆಯನ್ನು ನಿರ್ಮಾಣಮಾಡಿಕೊಂಡ ಹಾಗಾಗುತ್ತದೆ.

ಈ ಚಿಂತೆ ಗಾಬರಿಗಳು ಮನವೆಂಬ ದೀಪವನ್ನು ಅಲುಗಾಡಿಸಿಬಿಡುತ್ತದೆ. ಹಾಗೆ ಸ್ಥಿರತೆ ಇಲ್ಲದೆ ಭಾವಗಳ ಹೊಯ್ದಾಟಕ್ಕೆ ಸಿಲುಕಿ ಅಲ್ಲಾಡುವ ಮನದಿಂದ ಏನನ್ನಾದರೂ ಸ್ಥಿರವಾಗಿ ಯೋಚಿಸಲು ಅಥವಾ ಯೋಜಿಸಲು ಸಾಧ್ಯವೇ ಇಲ್ಲ. ಅಂತಹ ಧೃಢ ಮತ್ತು ಸ್ಥಿರವಾದ ಯೋಚನೆ ಇಲ್ಲದೆ ಹೋದರೆ, ಅದು ಏನೇ ಆದರೂ, ನಮ್ಮ ಬದುಕಿನ ಗುರಿ ತಲುಪುವುದೆಂತು. ಹಾಗಾಗಿ ಭಯ ಮತ್ತು ತಳಮಳವನ್ನು ಬಿಡಬೇಕು. ಆದರೆ ಈ ಭಯ ಮತ್ತು ತಳಮಳಗಳು ನಮ್ಮೊಳಗೆ ಹೇಗೆ ಮತ್ತು ಏಕೆ ನುಗ್ಗುತ್ತವೆ ಎಂದು ಯೋಚಿಸಿದರೆ ಅದಕ್ಕೆ ಕಾರಣ ನಾವು ಈ ಜಗತ್ತಿನ ವಸ್ತು ವಿಷಯ ಮತ್ತು ವ್ಯಕ್ತಿಗಳಿಗೆ ಅಂಟಿರುವುದರಿಂದ, ನಮಗೆ ಇವುಗಳ ನಂಟನ್ನು ಬೆಸೆಯುವ ಅಂಟಿನಿಂದ ನಾವು ಮುಕ್ತರಾದರೆ, ಈ ನಂಟು ಉಂಟುಮಾಡುವ ಭಯದಿಂದಲೂ ಮುಕ್ತರಾಗಬಹುದು.

ಭಯದಿಂದ ಮುಕ್ತವಾದ ಮನಸ್ಸು ತನ್ನ ಅಲೆದಾಟ ನಿಲ್ಲಿಸಿ ಸ್ಥಿರವಾಗುತ್ತದೆ. ಸ್ಥಿರವಾದ ಮನಸ್ಸು ತಿಳಿಯಾಗಿ, ಮನಸ್ಸು ಶಾಂತಿಯನ್ನು ಪಡೆಯುತ್ತದೆ. ಒಮ್ಮೆ ಮನಸ್ಸು ಶಾಂತವಾದರೆ, ಸ್ಥಿರವಾದ ಆಲೋಚನೆಗಳು ನೆಲೆಗೊಂಡು ನಮ್ಮ ಕ್ರಿಯೆಯಲ್ಲೂ ಪಕ್ವತೆ ಸಿಗುತ್ತದೆ. ಅಂತಹ ಪಕ್ವತೆಯಿಂದ ಕಾರ್ಯ ಸಿದ್ಧಿಯಾಗುತ್ತದೆ. ಇದು ಮಾನ್ಯ ಗುಂಡಪ್ಪನವರು ನಮಗೆ ಸೂಚಿಸುವ ಜೀವನ ಕಲೆಯನ್ನು ಸಿದ್ಧಿಸಿಕೊಳ್ಳುವ ಮಾರ್ಗ. ಈ ಮಾರ್ಗದಲ್ಲಿ ನಡೆಯಬೇಕಾದರೆ, ಮೊದಲು ಅಲೆದಾಡುವ ಮನಸ್ಸನ್ನು ನಿಯಂತ್ರಿಸಿಕೊಳ್ಳಬೇಕು. ಅದು ಸುಮ್ಮನೆ ಸಿಗುವುದಿಲ್ಲ ಸಾಧಿಸಬೇಕು. ಅದಕ್ಕೆ ಬೇಕಾದ ಹಲವಾರು ಸಾಧನಗಳನ್ನು ನಮ್ಮ ಪೂರ್ವಜರು ನಮಗೆ ನೀಡಿದ್ದಾರೆ. ಯಾವುದೇ ಮಾರ್ಗವನ್ನು ತುಳಿದರೂ ಸಾಧನೆಯಿಂದ, ನಾವು ಗಮ್ಯ ಸೇರುವುದು ಖಂಡಿತ. ಪ್ರಯತ್ನಪಡಬೇಕು ಅಷ್ಟೇ!!!!

**ಮುಕ್ತಕ – 829**

**ಕೊಳದ ಜಲ ನಿನ್ನ ಮನ; ಲೋಗರದರೊಳಗಿಳಿಯೆ |**

**ತಳದ ಕಸ ತೇಲುತ್ತ ಬಗ್ಗಡವದಹುದು ||**

**ಕಲಕಲದ್ದದೆ ಕೊಂಚ ಬಿಟ್ಟಿದ್ದೊಡದು ಮರಳಿ |**

**ತಿಳಿಯಹುದು ಶಾಂತಿಯಲಿ-ಮಂಕುತಿಮ್ಮ ||**

ಲೋಗರದರೊಳಗಿಳಿಯೆ= ಲೋಗರು+ಅದರೊಳು+ಇಳಿಯೆ, ಬಗ್ಗಡವದಹುದು=ಬಗ್ಗಡವದು+ಅಹುದು,

ಕಲಕಲದ್ದದೆ=ಕಲಕದೆ+ಅದ್ದದೆ, ಬಿಟ್ಟಿದ್ದೊಡದು=ಬಿಟ್ಟು+ಇದ್ದೊಡೆ+ಅದು, ತಿಳಿಯಹುದು=ತಿಳಿ+ಅಹುದು

ಮನಸ್ಸೆಂಬುದು ಒಂದು ಸರೋವರ ಅಥವಾ ಕೊಳವಿದ್ದಂತೆ, ಲೋಕದ ವಿಚಾರಗಳು ಅದರೊಳಕ್ಕೆ ಬಿದ್ದರೆ ತಳಗೆ ಅಡಗಿದ್ದ ಕಸ ಕದಡಿ ಹೋಗುತ್ತದೆ ಮತ್ತು ಬಗ್ಗಡವಾಗುತ್ತದೆ. ಮತ್ತೆ ಸ್ವಲ್ಪ ಹೊತ್ತು ಕದಡದೆ ಕಲಕದೆ ಇದ್ದರೆ, ಮತ್ತೆ ತಿಳಿಯಾಗುವುದು ಎಂದು ಮಾನಸ ಸರೋವರದ ವಿಚಾರವನ್ನು ನಮಗೆ ಅರುಹಿದ್ದಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಒಚಿದು ಊರಿನಲ್ಲಿ ಒಂದು ಕೊಳವಿದ್ದರೆ, ಜನರು(ಲೋಗರು) ಅದರೊಳಗೆ ಬಟ್ಟೆ ಒಗೆಯುವುದು, ದನಕರುಗಳನ್ನು ತೊಳೆಯುವುದು, ವಾಹನಗಳನ್ನು ತೊಳೆಯುವುದು, ಪಾತ್ರೆಪಡಗ ಇತ್ಯಾದಿಗಳನ್ನು ತೊಳೆದು ಗಬ್ಬೆಬ್ಬಿಸುತ್ತಾರೆ, ಅಲ್ಲವೇ? ಹಾಗೆಯೇ ನಮ್ಮ ಮನಸ್ಸೆಂಬ ಸರೋವರವನ್ನೂ ಲೋಕದ ಜನರು ತಮ್ಮ ವಿಚಾರಗಳನ್ನು ತುಂಬಿ ಗಬ್ಬೆಬ್ಬಿಸುತ್ತಾರೆ. ನಮ್ಮ ಮನಸ್ಸಿಗೂ ಆ ಸರೋವರಕ್ಕೂ ವ್ಯತ್ಯಾಸವೇನೆಂದರೆ ಸರೋವರಕ್ಕೆ, ಜನರು ತುಂಬುವ ಹೊಲಸನ್ನು ತಡೆಯಲು ಶಕ್ತಿಯಿಲ್ಲ, ನಮಗೆ ಆ ಶಕ್ತಿಯಿದೆ. ನಮ್ಮ ಮನಸ್ಸಿನಲ್ಲಿ ಕಸದಂತೆ ಹಳೆಯ ನೆನಪುಗಳು, ವಿಚಾರಗಳು ಮತ್ತು ಘಟನೆಗಳು ತುಂಬಿಕೊಂಡಿರುತ್ತದೆ. ಯಾವುದೇ ರೀತಿಯಲ್ಲಿ ಅದನ್ನು ಬದಲಾಯಿಸಲು ಸಾಧ್ಯವಿಲ್ಲದಿದ್ದರೂ, ಅದು ನಮ್ಮನ್ನು ಕಾಡುತ್ತದೆ. ಹಾಗೆ ಕಾಡುವ ವಿಚಾರಗಳೇ, ತಿಳಿನೀರಿನ ಕೊಳದಂತಹ ನಮ್ಮ ಮನಸ್ಸಿನ ಸರೋವರದ ತಳದಲ್ಲಿ ಅಡಗಿರುವ ಕಸ, ಗಲೀಜು, 'ಲೋಗರದರೊಳಗಿಳಿಯೆ





ಎಂದರೆ, ನಮ್ಮ ಮನಸ್ಸಿನ ಮೇಲೆ ಲೋಕದ ಜನರ ಪ್ರಭಾವದಿಂದ ಜಗತ್ತಿನ ವಿಚಾರಗಳು ಮನದೊಳಗೆ ನುಗ್ಗಿದಾಗ ಒಳಗಿನ ವಿಚಾರಗಳು, ಕಸದಂತೆ ಮೇಲೆದ್ದು ನಮ್ಮ ಮನಸ್ಸನ್ನು ಕದಡಿಬಿಡುತ್ತದೆ.

ಅದನ್ನು ಕಲಕದೆ ಅಥವಾ ಅದ್ದದೆ ಬಿಟ್ಟರೆ ಮತ್ತೆ ಆ ಕಸವೆಲ್ಲಾ ನಿಧಾನವಾಗಿ ತಳಸೇರಿ ಆ ಕೊಳದ ನೀರು ಮತ್ತೆ ತಿಳಿಯಾಗುವಂತೆ ಮನಸ್ಸನ್ನೂ ತಿಳಿಯಾಗಿಸಬಹುದು ಎನ್ನುವ ಅರ್ಥದಲ್ಲಿ ಈ ಮುಕ್ತಕವನ್ನು ನಮಗೆ ನೀಡಿದ್ದಾರೆ ಮಾನ್ಯ ಡಿವಿಜಿಯವರು. ನಮ್ಮ ಮನಸ್ಸಿನಲ್ಲಿ ಬರುವ ವಿಚಾರಗಳಲ್ಲಿ ನಾವೇ ತುಂಬಿಕೊಳ್ಳುವಂತಹ ಹಲವು

ವಿಷಯಗಳು ಮತ್ತು ಅನ್ಯರು ನಮ್ಮ ಮನಸ್ಸಿನ ಪಾತ್ರೆಗೆ ತುಂಬುವುದು ಹಲವು ವಿಚಾರಗಳು. ನಮ್ಮ ಇಂದ್ರಿಯ ಲಾಲಸೆಯಿಂದ ನಾವೇ ನಮ್ಮೊಳಗೇ ಬರಮಾಡಿಕೊಳ್ಳುವ ಹೊಲಸೇ ಅಧಿಕ. ಆ ಇಂದ್ರಿಯ ಸಂಪರ್ಕವನ್ನು ಕಡಿಮೆ ಮಾಡಿಕೊಂಡರೆ ನಮ್ಮೊಳಕ್ಕೆ ನುಗ್ಗುವ ಹೊಲಸಿನ ಪ್ರಮಾಣವೂ ಕಡಿಮೆಯಾಗಿ ನಮ್ಮ ಮನಸ್ಸ ಕೊಳದ ನೀರಿನಂತೆ ತಿಳಿಯಾಗುತ್ತದೆ.

ಇರುವ ಹೊಲಸನ್ನು ಹೊರಹಾಕಲು ಮತ್ತು ಹೊಸ ಹೊಲಸು ಬರದಂತೆ ತಡೆಯಲು ನಮಗೆ ಸಂಪೂರ್ಣ ಸ್ವಾತಂತ್ರ ಮತ್ತು ಶಕ್ತಿ ಎರಡೂ ಇದೆ. ಮೊಟ್ಟಮೊದಲಿಗೆ ಯಾವು ಹೊಲಸು ಯಾವುದು ಹೊಲಸಲ್ಲ ಎಂದು ಅರಿತುಕೊಳ್ಳುವ ಕ್ಷಮತೆಯನ್ನು ಬೆಳೆಸಿಕೊಳ್ಳಬೇಕು. 'ಗುಣವನ್ನು' ಮಾತ್ರ ಗ್ರಹಿಸುವ ಪ್ರಯತ್ನ ನಮ್ಮದಾಗಬೇಕು. ಹಾಗಾದರೆ ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಳ್ಳಬಹುದು. ಜಗತ್ತಿನ ಅಂಟು ಮತ್ತು ನಂಟು ಅಧಿಕವಾದಷ್ಟೂ ಮನದೊಳಕ್ಕೆ ನುಗ್ಗುವ ಹೊಲಸು ಅಧಿಕವಾಗುತ್ತದೆ. ಹಾಗಾಗಿ ಇರುವುದನ್ನು ಹೊರತಳ್ಳಿ, ಬರುವುದನ್ನು ತಡೆದು ನಮ್ಮ ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಂಡರೆ ನಾವು ಊರ್ಧ್ವಮುಖವಾಗಿ ಬೆಳೆಯಲು ಮತ್ತು ಪರತತ್ವವನ್ನು ಅರಿಯಲು ಸಹಾಯವಾಗುತ್ತದೆ. ಪ್ರಯತ್ನದಿಂದ ಆ ಸ್ಥಿತಿಯನ್ನು ಸಾಧಿಸಬಹುದು.





**ಮುಕ್ತಕ - 83ಸಂ**

**ಕೊಳಕೆಂದು, ಹುಳುಕೆಂದು, ಹೇಸಿಗೆಯ ಹುಳುವೆಂದು |**

**ಇಳೆಯೊಳಾವುದರೊಳಮಸಹ್ಯಪಡಬೇಡ ||**

**ಬೆಲೆಯುಂಟು ಕೊಳೆಗಮೀ ಜೀವಸಾಮಗ್ರಿಯಲಿ |**

**ಕೊಳೆ ಶುಚಿಖ್ಯಾಪಕವೊ – ಮಂಕುತಿಮ್ಮ ||**

ಕೊಳಕೆಂದು=ಕೊಳಕು+ಎಂದು, ಹುಳುಕೆಂದು=ಹುಳುಕು+ಎಂದು, ಹುಳುವೆಂದು=ಹುಳು+ಎಂದು,

ಇಳೆಯೊಳಾವುದರೊಳಮಸಹ್ಯಪಡಬೇಡ=ಇಳೆಯೊಳ್+ಆವುದರೊಳುಂ+ಅಸಹ್ಯ+ಪಡಬೇಡ.

ಬೆಲೆಯುಂಟು=ಬೆಲೆ+ಉಂಟು, ಕೊಳೆಗಮೀ=ಕೊಳೆಗುಂ +ಈ ಖ್ಯಾಪಕ=ಜ್ಞಾಪಕ,

"ನಿನ್ನ ಮನಸ್ಸು ತಿಳಿಯಾಗಿರಿಸಿಕೊಳ್ಳಬೇಕು ಎಂದು ನಿನಗೆ ಬೇಡವಾದದ್ದೆಲ್ಲ ಕೊಳಕು, ಕುಲುಕು, ಹೇಸಿಗೆ, ಹುಳ ಎಂದು ಹೇಳುತ್ತಾ ಈ ಜಗತ್ತಿನಲ್ಲಿರುವಾವುದನ್ನೂ ಅಸಹ್ಯ ಪಟ್ಟುಕೊಳ್ಳಬೇಡ". ಜಗತ್ತಿನ ಜೀವನದ ಸಮಗ್ರತೆಯಲ್ಲಿ, ಸೃಷ್ಟಿಯ ಪ್ರತಿಯೊಂದು ವಸ್ತುವಿಗೂ ಒಂದು ಬೆಲೆಯುಂಟು. ಕೊಳೆ ನಮಗೆ ಶುಚಿಯನ್ನು ಜ್ಞಾಪಿಸುತ್ತಿರುತ್ತದೆ, ಎಂದು ಮಾನಸಿಕ ಸಮಭಾವದ ಮೂಲಕ ಶಾಂತಿಯನ್ನು ಸಾಧಿಸುವ ಪರಿಯನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಮಗೆಲ್ಲ ಅನ್ನವನು ನೀಡುವ 'ಬತ್ತದ ಗದ್ದೆ' ಯಲ್ಲಿ ಕೆಸರಿದ್ದರೆ ಮಾತ್ರ ಬತ್ತದ ತೆನೆ ನಮಗೆ ಸಿಗುತ್ತದೆ. ಕೆಸರು ಎಂದು ಅಸಹ್ಯಪಡಲಾಗುವುದೇ? ಹಾಗಲ್ಲದೆ “ಅಯ್ಯೋ ನಮಗೆ ಅನ್ನವನು ನೀಡುವ ಗದ್ದೆಯ ಕೆಸರು' ಎಂದು ಅದನ್ನು ಮೈಯೆಲ್ಲಾ ಬಳಿದುಕೊಳ್ಳಲಾಗುವುದೇ? ಎರಡೂ ಸರಿಯಲ್ಲ. ಪ್ರತಿಯೊಂದಕ್ಕೂ ಅವುಗಳದೇ ಆದ ಒಂದು ವಿಶಿಷ್ಟ ಸ್ಥಾನ ಮತ್ತು ಪ್ರಯೋಜನವಿರುತ್ತದೆ. ಅದನ್ನು ನಾವು ಮನಗಾಣಬೇಕು. ಏಕೆಂದರೆ ಈ ಜಗತ್ತಿನಲ್ಲಿರುವುದೆಲ್ಲಾ ಆ ಪರಮಾತ್ಮ ಸೃಷ್ಟಿ ಮತ್ತು ಅವನ ಸೃಷ್ಟಿಯ ಪ್ರತಿಯೊಂದೂ ಸಂಪೂರ್ಣ ಮತ್ತು ಪ್ರಯೋಜಕ, ಯಾವುದನ್ನೂ ಅತೀ ಉತ್ತಮವೆಂದೋ ಅಥವಾ ಅತೀ ನಿಕೃಷ್ಟವೆಂದೋ ಹೇಳುವಹಾಗಿಲ್ಲ.

ಕಾಡಿನಲ್ಲಿರುವ ಪ್ರಾಣಿಗಳನ್ನು, ಕೀಟ ಕ್ರಿಮಿಗಳನ್ನು, ಜೀವ ಜಂತುಗಳನ್ನು ನಾವು ಸಾಧುವೆಂದೋ ಅಥವಾ ಕ್ರೂರವೆಂದೋ ಪರಿಗಣಿಸುತ್ತೇವೆ. ಆದರೆ ಅವು ಕ್ರೂರವೂ ಅಲ್ಲ ಸಾಧುವೂ ಅಲ್ಲ. ಅವು ತಮ್ಮಿಷ್ಟಕ್ಕೆ ತಾವು ತಮಗೆ ಪ್ರಕೃತಿದತ್ತವಾದ ಗುಣಗಳಿಂದ ಜೀವಿಸುತ್ತವೆ. ಆದರೆ ನಾವು ನಮ್ಮ ಅನುಭವ, ಅನುಭಾವ, ಮತ್ತು ಪ್ರಯೋಜನಕ್ಕನುಗುಣವಾಗಿ ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನಿಟ್ಟು ಕಾಣುತ್ತೇವೆ. ನಾವು ನೋಡುವ ವಿಧಾನದಲ್ಲಿ ಬೇಧವುಂಟೇ ಹೊರತು ಅವುಗಳ ಗುಣಗಳಲ್ಲಲ್ಲ. ಇದನ್ನರಿತರೆ ನಾವು ಯಾವುದನ್ನೂ ಅಸಹ್ಯಪಟ್ಟುಕೊಳ್ಳುವ ಪ್ರಮೇಯವೇ ಬರುವುದಿಲ್ಲ, ಅಲ್ಲವೇ?

ಇಚಿತಹ ವಿಚಾರಗಳನ್ನೆಲ್ಲಾ ಯೋಚಿಸಲಾಗುವುದು ಕೇವಲ ಮನುಷ್ಯನಿಗೆ ಮಾತ್ರ. ಏಕೆಂದರೆ ಇವನು ಪ್ರಾಣಿಗಳಲ್ಲಿ ಉತ್ತಮ ಪ್ರಾಣಿಯಾಗಿ ಸೃಷ್ಟಿಸಲ್ಪಟ್ಟಿದ್ದಾನೆ. ಪರಮಾತ್ಮನ ಸೃಷ್ಟಿಯಲ್ಲಿ ಇವನು ಮಾತನಾಡುವ, ನಗುವ, ಜ್ಞಾನವನ್ನು ವೃದ್ಧಿ ಮಾಡಿಕೊಳ್ಳಬಲ್ಲ, ಮುಂತಾದ ಗುಣಗಳಿಂದ ಸೃಷ್ಟಿಸಲ್ಪಟ್ಟಿದ್ದರೂ, ತಾನು ಉತ್ತಮ ಎನ್ನುವ ಅಹಂಕಾರಕ್ಕೆ ಬಿದ್ದು ಮತ್ತೆಲ್ಲವನ್ನೂ ನಿಕೃಷ್ಟವಾಗಿ ನೋಡುವ, ತಾನು ಸ್ವಾಮಿ ಮಿಕ್ಕೆಲ್ಲವೂ ತನಗೆ ದಾಸರು, ತಾನು ಯಾವುದನ್ನು ಹೇಗೆ ಬೇಕಾದರೂ ನನ್ನ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳಬಲ್ಲೆ" ಎನ್ನುವಂತಹ ದುರ್ಭಾವಗಳಿಂದ ಜಗತ್ತನ್ನು ನೋಡುತ್ತಾನೆ. ಇದನ್ನು ತೊರೆದು 'ಆತ್ಮವತ್ ಸರ್ವಭೂತೇಷು" ಎನ್ನುವಂತಹ ಸಮಭಾವದಿಂದ ಬದುಕಿದರೆ, ಇವನ ಮತ್ತು ಸೃಷ್ಟಿಯ ಮಿಕ್ಕೆಲ್ಲದರ ಜೀವನವೂ ಶಾಂತ ಮತ್ತು ಸುಂದರವಾಗುತ್ತದೆ.

**ಮುಕ್ತಕ – 831**

**ತಳೆಯಲಾರನೆ ಬೊಮ್ಮ ಬೀಭತ್ಸರೂಪಗಳ ? |**
**ನಲಿಯಲಾರನೆ ತಿಪ್ಪೆರೊಚ್ಚು ನಾತದಲಿ? ||**
**ಮಲವೇನೋ ! ಹೊಲೆಯೇನೊ ! ಜೀವಸಂಬಂಧವಲ |**
**ಮಲಿನದಲ್ಲಿ ನೆನೆ ಶುಚಿಯ - ಮಂಕುತಿಮ್ಮ ||**

ತಳೆಯಲಾರನೆ=ಧರಿಸಲಾರನೆ, ಬೀಭತ್ಸ=ಭಯಂಕರ, ನಲಿಯಲಾರನೆ= ಆನಂದಿಸಲಾರನೆ,
ನಾತ=ದುರ್ವಾಸನೆ, ಮಲಿನ=ಕೊಳಕು

ಆ ಪರಬ್ರಹ್ಮನು ಭಯಂಕರವಾದ ರೂಪಗಳನ್ನು ಧರಿಸಲಾರನೆ? ಅವನು ಹೊಲಸು ನಾರುವ ತಿಪ್ಪೆಗುಂಡಿಯಲ್ಲೂ ಸಂತಸಿಸಲಾರನೆ? ಬದುಕಿನ ಸಂಬಂಧದಲ್ಲಿ ಮಲಿನವಾದದ್ದು, ಹೊಲಸಾದದ್ದು ಎಲ್ಲವೂ ಉಂಟು. ಮಲಿನತೆಯಲ್ಲಿ ಇದ್ದರೂ ಶುಚಿತ್ವವನ್ನು ನೀನು ಸದಾ ನೆನೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿರುವುದೆಲ್ಲವೂ ಆ ಪರಮಾತ್ಮನ ಅಭಿವ್ಯಕ್ತಿ ಎಂದಾದಮೇಲೆ ಇದು ಒಳಿತು, ಇದು ಕೆಡುಕು, ಇದು ಒಳ್ಳೆಯದು, ಇದು ಕೆಟ್ಟದ್ದು, ಇದು ಹೊಲಸು, ಇದು ಬಹಳ ಶುದ್ಧ ಎಂದು ಬೇಧಮಾಡಬಹುದೇ ನಾವು? 'ಸುಮ್ಮನೊಬ್ಬಂಟಿಯೆಂತಿಹುದು?ಬೇಸರವಹುದು, ಹೊಮ್ಮುವೆನು ಕೋಟಿರೂಪದಲಿ ನಾನೆಂದು ಬೊಮ್ಮನೆಳಸಿದನಂತೆ"(ಮುಕ್ತಕ-74) ಎಂದು ತನ್ನ ಸಂಕಲ್ಪದಿಂದ, ತನ್ನಿಂದಲೇ ಜಗತ್ತನ್ನು ಸೃಷ್ಟಿಸಿ, ಹಾಗೆ ಸೃಷ್ಟಿಸಿದ ಎಲ್ಲದರೊಳಕ್ಕೂ ತಾನು 'ಅಣುಚೇತನ'ದ ರೂಪದಲ್ಲಿ ಸೇರಿ, ತಾನೇ ಎಲ್ಲವೂ ಆಗಿ ಅನುಭವಿಸುತ್ತಾ ಆನಂದಪಡುತ್ತಿರುವ ಆ ಪರಬ್ರಹ್ಮ. ಆದರೆ ಮಾಯೆಯ ಕಾರಣದಿಂದ 'ನಾವು ಅಥವಾ ನಾನು' ಎನ್ನುವ ಭಾವ ನಮ್ಮೊಳಗೆ ಬಂದು ನಾವು ಸಕಲದಲ್ಲೂ ಆ ಪರಬ್ರಹ್ಮನ ಇರುವನ್ನು ಕಾಣಲು ಆಶಕ್ತರಾಗಿದ್ದೇವೆ.





ಘಮಘಮಿಸುವ ಮಲ್ಲಿಗೆಯ ಸುಗಂಧದಲ್ಲಿ, ದುರ್ನಾತ ಬೀರುವ ಪ್ರಾಣಿ, ಪಕ್ಷಿ ಮತ್ತು ಗಿಡ ಮರ ಹೂಗಳಲ್ಲಿಯೂ ಇರುವುದು ಒಬ್ಬನೇ ಪರಬ್ರಹ್ಮ. ಈ ಜಗತ್ತೆಲ್ಲವೂ ಆ ಪರಮಾತ್ಮನ ಅಭಿವ್ಯಕ್ತಿಯೆಂದಾದಮೇಲೆ ಇದು ಸರಿ, ಇದು ತಪ್ಪು, ಇದು ಚೆನ್ನ, ಇದು ಚೆನ್ನವಿಲ್ಲ, ಇದು ಶುದ್ಧ ಮತ್ತು ಮತ್ತೊಂದು ಅಶುದ್ಧ ಅಥವಾ ಗಲೀಜು ಎಂದು ನಾವು ಪರಿಗಣಿಸಿದರೆ, ಆ ಪರಬ್ರಹ್ಮನ 'ಎಣಿಸಿಕೆಯನ್ನೇ' ಪ್ರಶ್ನಿಸಿ ಧಿಕ್ಕರಿಸಿದಂತೆ ಅಲ್ಲವೇ? ಪ್ರಾಜ್ಞರಾದವರಿಗೆ ಅದು ಸಲ್ಲ. ಹಾಗಾಗಿ ಇರುವುದೆಲ್ಲವನ್ನೂ, ಅವುಗಳು ಹೇಗಿವೆಯೋ ಹಾಗೆಯೇ ಒಪ್ಪಿಕೊಳ್ಳುವುದು ಸರಿಯಾಗುತ್ತದೆ.

“ಎಲ್ಲವೂ ಪರಬ್ರಹ್ಮನಿಂದಾಗಿದೆ' ಎಂದು ಲೌಕಿಕ ಬದುಕಿನಲ್ಲಿನ ಜೀವನದಲ್ಲಿ ಒಪ್ಪಿಕೊಂಡರೂ ನಮ್ಮ ಮನಸ್ಸು, ಬುದ್ಧಿ, ದೇಹಗಳಿಗೆ ಯಾವುದು ಹಿತವೋ ಅದನ್ನು ಪಡೆಯುವ ಸ್ವಭಾವ ಎಲ್ಲರಿಗೂ ಇರುತ್ತದೆ ಮತ್ತು ಇರಬೇಕು. ಆದರೆ ಎಲ್ಲ ವಸ್ತುಗಳ ಪ್ರಯೋಜನವನ್ನೂ ಕಾಣಬೇಕು. ಉದಾ: 'ಗೋಮಯ' ಎಂದರೆ ಸಗಣಿಯನ್ನು ಬೆಳೆ ಬೆಳೆಯುವ ಗೊಬ್ಬರವನ್ನಾಗಿಸುತ್ತಾರೆ, ಸುಟ್ಟು ನೊಸಲಿಗೆ ವಿಭೂತಿಯನ್ನಾಗಿಸುತ್ತಾರೆ, ಅದನ್ನು ಹಾಗೆಯೆ ಕಾಲಲ್ಲಿ ತುಳಿದರೆ ಅಸಹ್ಯ ಪಟ್ಟುಕೊಳ್ಳುತ್ತಾರೆ. ಎಂದರೆ ಪ್ರತಿಯೊಂದು ವಸ್ತುವಿಗೂ ಅದರದರದೇ ಆದಂತಹ ಒಂದು ಸ್ಥಾನವಿರುತ್ತದೆ. ಅವು ಆ ಸ್ಥಾನದಲ್ಲಿದ್ದರೇನೇ ಒಳಿತು. ಹಾಗೆಯೇ ಜಗತ್ತಿನಲ್ಲಿ ಇರುವ ಎಲ್ಲ ಹೊಲಸುಗಳ ನಡುವೆ ನಾವಿದ್ದರೂ, ಅವುಗಳನ್ನು ಕಂಡು ಅಸಹ್ಯ ಪಟ್ಟುಕೊಳ್ಳದೆ, ನಾವು ಶುಚಿಯಾದದ್ದನ್ನೇ ಆಯ್ದುಕೊಳ್ಳೋಣ, ಆಲೋಚಿಸೋಣ ಮತ್ತು ಆಚರಿಸೋಣ. ಹಾಗಾದರೆ ಈ ಮುಕ್ತಕದ ಆಶಯವನ್ನು ಗೌರವಿಸಿದಂತಾಗುತ್ತದೆ.

**ಮುಕ್ತಕ – 832**

**ಗುಡಿಯ ಪೂಜೆಯೊ, ಕಥೆಯೊ, ಸೊಗಸುನೋಟವೊ, ಹಾಡೊ ।**
**ಬಡವರಿಂಗುಪಕೃತಿಯೊ, ಆವುದೊ ಮನದ ॥**
**ಬಡಿದಾಟವನು ನಿಲಿಸಿ ನೆಮ್ಮದಿಯನೀವೊಡದೆ ।**
**ಬಿಡುಗಡೆಯೂ ಜೀವಕ್ಕೆ – ಮಂಕುತಿಮ್ಮ ॥**

ಬಡವರಿಂಗುಪಕೃತಿಯೊ=ಬಡವರಿಂಗೆ+ಉಪಕೃತಿಯೊ, ನೆಮ್ಮದಿಯನೀವೊಡದೆ=ನೆಮ್ಮದಿಯನು+ಈವೊಡೆ+ಅದೆ
ಉಪಕೃತಿ=ಉಪಕಾರ,

ಗುಡಿಯ ಪೂಜೆಯಿಂದಲೋ, ಪುರಾಣ ಪುಣ್ಯ ಕಥಾ ಶ್ರವಣದಿಂದಲೋ, ಮೈ ಮರೆತು ಸೊಗಸಾದ ಪ್ರಕೃತಿಯ ನೋಟವನ್ನು ನೋಡುವುದರಲ್ಲಿಯೋ, ದಯಾ ಭಾವದಿಂದ ದೀನರಿಗುಪಕಾರವನ್ನು ಮಾಡುವುದರಿಂದಲೋ, ಹೀಗೆ ಯಾವುದಾದರೂ ರೀತಿಯಲ್ಲಿ ಮನಸ್ಸಿನ ಚಂಚಲ ಬಡಿದಾಟವನ್ನು ನಿಲ್ಲಿಸಿ ನೆಮ್ಮದಿಯನ್ನು ಪಡೆಯಬಹುದಾದರೆ, ಅದೇ 'ಜೀವ' ಕ್ಕೆ ಮುಕ್ತಿ ಅಥವಾ ಬಂಧನದಿಂದ ಬಿಡುಗಡೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನ್ಸಸಿನ ಶಾಂತಿಯನ್ನು ಪಡೆಯಬೇಕೆಂದು ಪ್ರತಿಯೊಬ್ಬ ಮನುಷ್ಯನಿಗೂ ಆಸೆ. ಅದಕ್ಕೆ ಹತ್ತು ಹಲವಾರು ಮಾರ್ಗಗಳು, ಯಾರಿಗೆ ಯಾವ ದಾರಿ ಬೇಕೋ ಆ ದಾರಿಯಲ್ಲಿ ಹೋಗಲು ಸಂಪೂರ್ಣ ಸ್ವಾತ್ರಂತ್ರ್ಯ. ಹಲವರಿಗೆ ಪ್ರತಿನಿತ್ಯ ಸ್ನಾನ, ಸಂಧ್ಯಾವಂದನೆ, ಆರಾಧನೆ, ಜಪ, ತಪಗಳಿಂದ ಮಾನಸಿಕ ಶಾಂತಿ, ಹಲವರಿಗೆ ಕಥೆಯನ್ನು ಕೇಳುವುದೋ, ಓದುವುದೋ, ಹೇಳುವುದೋ ಮಾಡುತ್ತಾ ತಮ್ಮ ಮನಸ್ಸಿನ ದುಗುಡ ದುಮ್ಮಾನಗಳನ್ನು ಮರೆಯುವ ಅಭ್ಯಾಸ. ಕೆಲವರಿಗೆ ಪ್ರಕೃತಿಯ ಸೊಬಗನ್ನು ಆಸ್ವಾದಿಸುತ್ತಾ ಆ ಪ್ರಕೃತಿಯ ಸೊಗಸನ್ನು ಮನದೊಳಗೆ ಅನುಸಂಧಾನ ಮಾಡುತ್ತಾ ಮನಸ್ಸಿನಲ್ಲೇ ಉಲ್ಲಾಸವನ್ನು ಅನುಭವಿಸುವ ವಿಧಾನ. ಕೆಲವರಿಗೆ ಸಂಗೀತವನ್ನು ಕೇಳುತ್ತಾ ಅಂತರಂಗದಲ್ಲಿ ಆನಂದವನ್ನು ಅನುಭವಿಸುವ ಕಲೆ. ಮತ್ತೂ ಕೆಲವರಿಗೆ ಪರರ ನೋವನ್ನು ಕಡಿಮೆಯಾಗಿಸುವ ಕರುಣೆಯಿಂದ ಅವರಿಗೆ ಸಹಾಯಮಾಡುತ್ತಾ ಆನಂದಿಸುವ ಪರಿ.

ಹಾದಿ ಯಾವುದಾದರೇನು, ಅನ್ಯರ ಆನಂದವನ್ನು ಕಸಿಯದೆ ನಮ್ಮ ಮನಸ್ಸಿಗೆ ಆನಂದ ಸಿಕ್ಕರೆ ಸರಿಯಲ್ಲವೇ? ಮೇಲೆ ಉಲ್ಲೇಖಿಸಿದ ಮತ್ತು ಮತ್ತೂ ಹತ್ತು ಹಲವಾರು ವಿಧಾನಗಳಿಂದ ಮನುಷ್ಯ ತನ್ನ ತನವನ್ನು ಮರೆತು ಮತ್ತು ತೊರೆದು, ಅವನ ಮನಸ್ಸಂತೋಷಕ್ಕೆ ಕಾರಣವಾದ ವಸ್ತುವಿನಲ್ಲಿ ಲೀನವಾಗುತ್ತಾನೆ. ಅಂತಹ ತಲ್ಲೀನತೆಯಲ್ಲಿ ಅವನು 'ತಾನು, ತನದು, ತನ್ನವರು, ತನಗೆ, ತನ್ನವರಿಗಾಗಿ' ಎನ್ನುವಂತಹ 'ಮಮಕಾರ' ದ ಭಾವಗಳನ್ನು ತೊರೆದು ನಿಷ್ಕಳಂಕನಾಗಿರುತ್ತಾನೆ. ಅಂತಹ ಸ್ಥಿತಿಯಲ್ಲಿ ಸಿಗುವುದೇ ನಿಜವಾದ ಮಾನಸಿಕ ಆನಂದ. ತನ್ಮಯತೆ ಬೇಕು, ತಲ್ಲೀನತೆ ಬೇಕು. ಯಾವುದೇ ಹಾದಿಯಲ್ಲಿದ್ದರೂ ತಲ್ಲೀನತೆ ಇಲ್ಲದಿದ್ದರೆ ಮಾನ್ಯ 'ಡಿವಿಜಿ' ಯವರು ಹೇಳುವ 'ನೆಮ್ಮದಿ' ಸಿಗುವುದೇ ಇಲ್ಲ.

ಇಚಿದು ನಿಜವಾದ ಸಂತೋಷವೇನೆಂದೇ ನಾವು ಮರೆಯುತ್ತಿದ್ದೇವೆ. ಇಂದ್ರಿಯ ಸುಖವೇ ಸಂತೋಷವೆಂದು ಬಗೆದಿದ್ದೇವೆ. ಯಾವುದರಲ್ಲೂ ಒಂದು ಆಳವಾದ ಆಸಕ್ತಿ, ಅಭ್ಯಾಸ, ಅಧ್ಯಯನ ಮತ್ತು ಆನಂದದ ಅನುಭವವೇ ಇಲ್ಲ. ಎಲ್ಲವೂ ಹೊರಗಿನ ತಳುಕು. ಎಲ್ಲಿಯೂ ಆನಂದ ಅಥವಾ ಸುಖ ಸಿಗದೆ, ಅದರ ನಿರಂತರ ಹುಡುಕಾಟ. ಒಳಗೆ ಇರುವುದನ್ನು ಮನಗಾಣದೆ ಅದಕ್ಕಾಗಿ ಎಲ್ಲೆಲ್ಲೋ ವ್ಯರ್ಥ ಹುಡುಕಾಟ. ಮಾಡುವ ಯಾವುದೇ ಕೆಲಸವಾಗಲಿ ತಲ್ಲೀನತೆಯನ್ನು ತಂದುಕೊಂಡರೆ ಆನಂದವನ್ನು ಪಡೆಯಬಹುದು. ಮನಸ್ಸಿನ ಹುಚ್ಚು ಹಾರಾಟ ಮತ್ತು ಹೋರಾಟಗಳನ್ನು ನಿಲ್ಲಿಸಿದರೆ ತಲ್ಲೀನತೆ ದೊರಕಿ ಆನಂದವನ್ನು ಪಡೆದರೆ 'ಜೀವ' ಪ್ರಾಪಂಚಿಕ ಬಂಧನಗಳಿಂದ

ಮುಕ್ತನಾಗುವುದರಲ್ಲಿ ಸಂದೇಹವೇ ಇಲ್ಲ. 'ಮುಕ್ತಿ' ಎಂದರೆ 'ಬಂಧನ'ದ ಭಾವದಿಂದ ಬಿಡುಗಡೆ. ಬೇಕೆನ್ನುವವರು ಪ್ರಯತ್ನಿಸಿದರೆ ಲಭ್ಯ.





**ಮುಕ್ತಕ – 833**

**ನಗುನಗುವ ಕಣ್ಗಳಿಗೆ ಹೊಗೆಯನೂದಲು ಬೇಡ |**

**ಜಗವ ಸುಡುಗಾಡೆನುವ ಕಟುತಪಸು ಬೇಡ ||**

**ಮಗುವು ತಾಯ್ತುಂದೆಕಣ್ಮುಂದೆ ನಡೆವಂತೆ ನಡೆ |**

**ಮಿಗೆ ಚಿಂತೆ ತಲೆಹರಟೆ - ಮಂಕುತಿಮ್ಮ ||**

ಹೊಗೆಯನೂದಲು=ಹೊಗೆಯನು+ಊದಲು, ಸುಡುಗಾಡೆನುವ=ಸುಡುಗಾಡು+ಎನುವ,

ತಾಯ್ತುಂದೆಕಣ್ಮುಂದೆ=ತಾಯಿ+ತಂದೆ+ಕಣ್ಣ+ಮುಂದೆ, ಕಟುತಪಸು=ಹಠ, ಮಿಗೆ ಚಿಂತೆ= ಮಿಕ್ಕೆಲ್ಲ ಯೋಚನೆ

ನಗುನಗುತಾ ಇರುವ ಕಣ್ಣುಗಳಿಗೆ ಹೊಗೆಯನೂದ ಬೇಡ. ಈ ಜಗತ್ತು ಒಂದು ಸುಡುಗಾಡು, ಇದೇಕೆ ಬೇಕು ಎನ್ನುವ ಹಠವೂ ಬೇಡ. ಸಹಜವಾಗಿ ತಂದೆ ತಾಯಿಗಳ ಮುಂದೆ ನಡೆದು ನಲಿದಾಡುವ ಮಗುವಂತೆ ಜೀವಿಸು. ಮಿಕ್ಕೆಲ್ಲಾ ವಿಚಾರಗಳೂ ಕೇವಲ 'ತಲೆಹರಟೆ " ಎಂದು ಬಾಳುವ ರೀತಿಯ ಬಗ್ಗೆ ಒಂದು ಕಿವಿಮಾತನ್ನು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವು ಬದುಕುವಾಗ ನಮ್ಮ ಸುತ್ತ ಆನಂದವಾಗಿ ನಗುನಗುತ್ತಾ ಇರುವ ಜನರನು ಕಾಣುತ್ತೇವೆ. ನಲಿದಾಡುವ ನಯನಗಳಿಗೆ ಹೊಗೆಯನೂದಿದರೆ, ಕಣ್ಣುರಿಯಾಗುತ್ತದೆ, ಕಣ್ಣಲ್ಲಿ ನೀರು ಬರುತ್ತದೆ ಮತ್ತು ಅದರಿಂದ ಬಹಳ ತೊಂದರೆಯಾಗುತ್ತದೆ. ಹಾಗೆಯೇ ನಗುನಗುತ್ತ ಬಾಳುವವರಿಗೆ, ಕೋಪ, ದ್ವೇಷ, ಅಸೂಯೆ ಮುಂತಾದ ಉರಿಗಳ ಹೊಗೆಯನ್ನು ಊದಿದರೆ, ಅವರಿಗೆ ತೊಂದರೆಯಾಗುತ್ತದೆ. ಮತ್ತೊಬ್ಬರಿಗೆ ಕಷ್ಟವನ್ನು ಕೊಟ್ಟು ತಾವು

ಆನಂದಪಡುವವರು ದುಷ್ಟ ಜನರು. ಇದನ್ನು ಅವರು ತಮ್ಮ ಸ್ವಾರ್ಥ ಸಾಧನೆಗೋ, ದ್ವೇಷ ಸಾಧನೆಗೋ, ಉನ್ಮತ್ತ ಅಹಂಕಾರದ ತಣಿವಿಗೋ, ಮಾಡುತ್ತಾರೆ. ಮತ್ತೊಬ್ಬರಿಗೆ ಸಂತೋಷ ಅಥವಾ ಆನಂದವನ್ನು ಕೊಡಲಾಗದಿದ್ದರೂ, ಅನ್ಯರ ಆನಂದವನ್ನು ಕಸಿಯುವ ಕೆಲಸ ಮಾಡಬಾರದು. ತೆಲುಗಿನಲ್ಲಿ ಒಂದು ಗಾದೆ ಮಾತಿದೆ "ಚೆಡಪಕುರಾ, ಚೆಡೇವು'ಎಂದು, ಎಚೆದರೆ 'ಕೆಡಿಸಬೇಡ ಕೆಡುವೆ' ಎಂದು ಹಾಗಾಗಿ ಮತ್ತೊಬ್ಬರ ಸಂತೋಷವನ್ನು ಕೆಡಿಸುವ ಕಾರ್ಯ ಮಾಡಬಾರದು. ಏಕೆಂದರೆ ಅದರ ಪರಿಣಾಮ ನಮ್ಮನ್ನು ಮುಂದಕ್ಕೆಂದಾದರೂ ಕಾಡಿಯೇ ಕಾಡುತ್ತದೆ

ಕೆಲವರಿಗೆ ಕಷ್ಟಗಳು ಬಂದಾಗ, 'ಥ! ಈ ಜಗತ್ತಿನ ಬದುಕು ಹಾಳು, ಸುಡುಗಾಡು ಜೀವನ' ಎಂದು ಹಳಿಯುವ ಅಭ್ಯಾಸವಿರುತ್ತದೆ. 'ಕೈಲಾಗದವನು ಮೈಯಲ್ಲಾ ಪರಚಿಕೊಂಡ' ಎನ್ನುವಂತೆ, ತಮ್ಮ ಕಷ್ಟಗಳಿಗೆ ಇಡೀ ಜಗತ್ತನ್ನೇ ಬಯ್ಯುವುದು, ಹಳಿಯುವುದು ಮಾಡಬಾರದು. ಏಕೆಂದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಪೂರ್ವ ಕರ್ಮಗಳನ್ನು ಅನುಭವಿಸಲೇಬೇಕೆಂಬ ನಿಯಮವನ್ನು ಒಪ್ಪುವುದಾದರೆ, ಜಗವನ್ನು ಹಳಿಯುವ ಅಭ್ಯಾಸವನ್ನು ಬಿಡಬೇಕು. ಒಂದು ಮಗು ತನ್ನ ತಂದೆತಾಯಂದಿರ ಮುಂದೆ 'ಸ್ವತಂತ್ರ'ದಿಂದ ಓಡಾಡುತ್ತಿರುತ್ತದೆ, ಆಟವಾಡುತ್ತಿರುತ್ತದೆ. ಅದಕ್ಕೆ





ತನ್ನನ್ನು ಆಪತ್ತಿನಿಂದ ರಕ್ಷಿಸಲು ತನ್ನ ಹೆತ್ತವರು ಇದ್ದಾರೆ ಎನ್ನುವ ದೃಢ ನಂಬಿಕೆಯಿರುತ್ತದೆ. ಹಾಗೆಯೇ ಈ ಜಗತ್ತಿನಲ್ಲಿ ಜೀವಿಸುವ ನಾವು, ಪರಮಾತ್ಮನ ಸೃಷ್ಟಿಯಾದ ನಾವು, ನಮ್ಮನ್ನು ಕಾಯುವವನು ಪರಮಾತ್ಮನಿದ್ದಾನೆ ಎಂಬ ದೃಢ ನಂಬಿಕೆಯಿಂದ ಬದುಕಿದರೆ, ನಮ್ಮ ಪರಿಸ್ಥಿತಿಗೆ ಅನ್ಯರನ್ನೋ ಅಥವಾ ನಾವು ಜೀವಿಸುವ ಜಗತ್ತನ್ನೋ, ನಿಂದಿಸುವ ಅವಶ್ಯಕತೆಯೇ ಬರುವುದಿಲ್ಲ.

ನಾವು ಬಯಸಿದ್ದೆಲ್ಲಾ ನಮಗೆ ಸಿಗುವ ಹಾಗಿದ್ದಿದ್ದರೆ ಅಥವಾ ನಾವು ಅಂದುಕೊಂಡದ್ದು ಅಂದುಕೊಂಡಂತೆ ನಡೆದುಬಿಟ್ಟರೆ ನಮ್ಮನ್ನು ಹಿಡಿಯುವವರಾರು? ಹಾಗಲ್ಲದೆ ನಮ್ಮ ಆಸೆ ಅಥವಾ ಆಶಯಕ್ಕೆ ಭಿನ್ನವಾಗೋ ಅಥವಾ

ವಿರುದ್ಧವಾಗೋ ಎಲ್ಲವೂ ನಡೆಯುವಾಗ 'ನಡೆಸುವಾತ ಬೇರೆ ಅವನ ಇಚ್ಛೆ ಯಾರು ಬಲ್ಲರು?' ಎನ್ನುವ ತತ್ವವನ್ನು ಅರಿತು, ಮಾನ್ಯ ಗುಂಡಪ್ಪನವರು 'ಮಿಗೆ ಚಿಂತೆ ತಲೆಹರಟೆ' ಎನ್ನುವಂತೆ ವಿನಾಕಾರಣ ಅನಾವಶ್ಯಕವಾಗಿ ಮಾತನಾಡದೆ, ಆಗುವುದೇನೋ ಆಗಲಿ ಎಂದು ನಾವು, ಮಗು ತನ್ನ ಹೆತ್ತವರ ನಂಬಿದಂತೆ, ಆ ಪರಮಾತ್ಮನನ್ನು ನಂಬಿ ಬದುಕಿದರೆ, ಅನ್ಯರ ಸುಖಕ್ಕೆ ಧಕ್ಕೆ ತರದಂತೆ ಜೀವಿಸಿ, ನಾವೂ ಸುಖವಾಗಿರಬಹುದು. ಇದಕ್ಕೆ ಒಂದು ಪರಿಶುದ್ಧ ಜೀವನದ, ಶುದ್ಧ ಮೌಲ್ಯಾಧಾರಿತ ಮನೋಭಾವ ಬೇಕು. ಅಂತಹ ಮನೋಭಾವ ನಮ್ಮದಾದರೆ, ಅದೇ ಸಾರ್ಥಕ ಜೀವನದ ಹಾದಿ.

**ಮುಕ್ತಕ – 834**

**ಹೀಗೊ ಹಾಗೂ ಹೇಗೊ ಜನುಮಕಥೆ ಮುಗಿಯುವುದು |**
**ಈಗಲೋ ಆಗಲೋ ಎಂದೋ ಮುಗಿಯುವುದು ||**
**ಸಾಗಿಮುಗಿವುದು; ಮುಗಿದು ಮರೆವುದದೆ ನರಸುಕೃತ |**
**ಭೂಗತಸ್ಥಿತಿ ಮುಕುತಿ – ಮಂಕುತಿಮ್ಮ ||**

ಮರೆವುದದೆ=ಮರೆವುದು+ಅದೆ, ನರಸುಕೃತ=ನರ+ಸುಕೃತ, ಸುಕೃತ=ಪುಣ್ಯ, ಭೂಗತ=ಭೂಮಿಯಲ್ಲಿ ಒಂದಾಗುವುದು.

ಹಾಗೋ ಹೇಗೋ, ಒಂದು ರೀತಿಯಲ್ಲಿ ಹುಟ್ಟಿದವರೆಲ್ಲರ ಜನ್ಮದ ಕಥೆ ಮುಗಿಯುತ್ತದೆ. ಈಗಲೇ ಆಗಬಹುದು, ಯಾವಾಗಲೋ ಅಥವಾ ಇನ್ಯಾವಾಗಲೋ ಆಗಬಹುದು. ಅಂತೂ ಇಂತೂ ಬದುಕು ಸಾಗಿ ಖಂಡಿತವಾಗಿಯೂ ಮುಗಿಯುತ್ತದೆ, ಮುಗಿದು ಈ ಜಗತ್ತು ಆ ವ್ಯಕ್ತಿಯನ್ನು ಮರೆಯುತ್ತದೆ. ಹಾಗೆ ಮರೆತುಹೋಗುವುದೇ ಮನುಷ್ಯ ಪಡೆದುಕೊಂಡು ಬಂದಂತಹ ಪುಣ್ಯ, ಮಣ್ಣಲ್ಲಿ ಮಣ್ಣಾಗಿಹೋಗುವುದೂ ಸಹ ಒಂದು ರೀತಿಯ ಮುಕ್ತಿಯೇ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ,

ಹುಟ್ಟಿದವರಾರೂ ಈ ಜಗತ್ತಿನಲ್ಲಿ ಶಾಶ್ವತವಾಗಿ ಇರಲಾಗದು. ಎಲ್ಲರಿಗೂ ಒಂದು ಆಯಸ್ಸು ಎಂದು ನಿಗಧಿತವಾಗಿರುತ್ತದೆ. ಅವರವರ ನಿಗದಿತ ಸಮಯಕ್ಕೆ ಎಲ್ಲರೂ ಹೊರಡಬೇಕು, ಎಲ್ಲವನ್ನೂ ಬಿಟ್ಟು ಹೊರಡಬೇಕು. ಹುಟ್ಟಿದಾರಭ್ಯ ಸಾವಿನ ತನಕ ಬದುಕು ಸಾಗುತ್ತದೆ. ಒಬ್ಬೊಬ್ಬರ ಬದುಕು ಒಂದೊಂದು ರೀತಿ.

19ಸಂ

ಕಗ್ಗರಸಧಾರೆ ಮೃತ್ಯುಭಯ 834 - 838

ಕೆಲವರದು ಹೀಗೆ, ಹಲವರದು ಹಾಗೆ ಮತ್ತೆ ಕೆಲವರದು ಹೇಗೋ ಒಂದು ರೀತಿಯಲ್ಲಿ ಎಂದೋ ಒಂದು ದಿನ ಮುಗಿಯುತ್ತದೆ. ಹಾಗೆ ಮುಗಿದ ಜನ್ಮದ ವೃತ್ತಾಂತವನ್ನು ಜನ ಕಾಲಾನುಕಾಲಕ್ಕೆ ಮರೆಯುತ್ತಾರೆ. ಹಾಗೆ ಮರೆಯುವುದೇ ಒಳ್ಳೆಯದು, ಪುಣ್ಯ ಎನ್ನುತ್ತಾರೆ ಡಿವಿಜಿಯವರು. ಬದುಕು ಮುಗಿದನಂತರ ದೇಹ ಮಣ್ಣಿನಲ್ಲಿ ಸೇರುವುದೂ ಸಹ ದೇಹಕ್ಕೆ ಸಿಗುವ, ಒಂದು ರೀತಿಯ ಮುಕ್ತಿ, ಅಲ್ಲವೇ?

ಒಬ್ಬೊಬ್ಬರದು ಒಂದೊಂದು ರೀತಿಯ ಬದುಕು. ಅದಕ್ಕೆ ಹಲವಾರು ಕಾರಣಗಳು, ಪೂರ್ವಕರ್ಮ ಅಥವಾ ಪೂರ್ವಪುಣ್ಯ, ಪ್ರಸ್ತುತ ಬದುಕಿನ ಗಳಿಕೆಗಳು, ಪ್ರಯತ್ನಗಳು ಮತ್ತು ಪೂರಕವಾದ ಸಾಧನಗಳು ಎಲ್ಲಾ ಸೇರಿ ಒಂದು ವ್ಯಕ್ತಿಯ ಜೀವನವನ್ನು ರೂಪಿಸುತ್ತದೆ. ಪ್ರತಿಯೊಬ್ಬರ ಪೂರ್ವಕರ್ಮ, ಸುಕೃತ, ಪ್ರಸ್ತುತ ಬದುಕಿನ ಪ್ರಯತ್ನಗಳು, ಸಿಗುವ ಅವಕಾಶಗಳು ಮತ್ತು ಅವನ್ನು ಬದುಕಿಗೆ ಪೂರಕವಾಗಿ ಉಪಯೋಗಿಸಿಕೊಳ್ಳುವ ಅವನ ಪ್ರಯತ್ನಗಳು ಭಿನ್ನ ಭಿನ್ನವಾಗಿರುತ್ತದೆಯಾದ್ದರಿಂದ, ಪ್ರತಿಯೊಬ್ಬರ ಜೀವನವೂ ಭಿನ್ನ ಭಿನ್ನ. ಅಷ್ಟೊಂದು ವೈವಿಧ್ಯತೆಯಿದ್ದರೂ ಪ್ರತಿಯೊಬ್ಬರ ಬದುಕೂ ಸಾವಿನಲ್ಲೇ ಪರ್ಯವಸಾನಗೊಳ್ಳುತ್ತದೆ.

ಹಾಗೆ ಅವಸಾನಗೊಂಡ ವ್ಯಕ್ತಿಯನ್ನು ಜಗತ್ತು ಮರೆತುಹೋಗುತ್ತದೆ. ಅವರವರ ಬದುಕಿನ ಚರಿತ್ರೆಯನ್ನಾಧರಿಸಿ, ಕೆಲವರನ್ನು ಶೀಘ್ರವಾಗಿ, ಕೆಲವರನ್ನು ನಿಧಾನವಾಗಿ ಕೆಲವರನ್ನು ಧೀರ್ಘಕಾಲದ ನಂತರವಾಗಿಯಾದರೂ, ಜಗತ್ತು ಖಂಡಿತ ಮರೆತುಹೋಗುತ್ತದೆ. ಎಂತೆಂತಹಾ ಮಹಾಮಹಿಮಾನ್ವಿತರೇ ಇಂದು ಜಗತ್ತಿನಲ್ಲಿ ಹೇಳಲು ಹೆಸರಿಲ್ಲದೆ ಸರಿದು ಹೋಗಿದ್ದಾರೆ ಅಲ್ಲವೇ? ಜಗತ್ತಿಗೆ ಉಪಕಾರ ಮಾಡಿದವರೂ ಸಹ "ಉಪಕರಿಸಿದವರು ಇಂತಹವರು ಎಂದು ಜಗದ ನೆನಪಲ್ಲಿ ಉಳಿಯದೆ ಮರೆಯಾಗಿ ಹೋಗುವುದು ಬಹಳ ಒಳ್ಳೆಯದು. ಏಕೆಂದರೆ ಜಗದ ಅಭಿಮಾನದ ಭಾರದಿಂದಲೂ ಮುಕ್ತರಾಗುವುದು ಒಳ್ಳೆಯದೇ ಅಲ್ಲವೇ?

ಮಣ್ಣಿಂದ ಆದಂತ ಈ ನಮ್ಮ ಕಾಯ ಮಣ್ಣಿಗೆ ಸೇರುವುದು ಒಂದು ರೀತಿ ಈ ದೇಹಕ್ಕೆ ಮುಕ್ತಿಯೇ ಅಲ್ಲವೇ ? ಮಣ್ಣಿಂದ ಪಡೆದ ದೇಹವನ್ನು ಮಣ್ಣಿಗೆ ಸಮರ್ಪಿಸಿ ಮಣ್ಣಿನ ಋಣವನ್ನು ತೀರಿಸಿ ಋಣ ಮುಕ್ತರಾಗುತ್ತೇವೆ ನಾವೆಲ್ಲಾ !!!!!

**ಮುಕ್ತಕ - 835**

**ಮೃತ್ಯುವಿಂ ಭಯವೇಕೆ? ದೇಶಾಂತರಕ್ಕೊಯ್ವ ।**

**ಮಿತ್ರನಾತಂ; ಚಿತ್ರ ಹೊಸದಿರ್ಪುದಲ್ಲಿ ॥**

**ಸಾತ್ವಿಕದಿ ಬಾಳ್ದವಂಗೆತ್ತಲೇಂ ಭಯವಿಹುದು? ।**

**ಸತ್ರ ಹೊಸದಿಹುದು - ಮಂಕುತಿಮ್ಮ ॥**

ದೇಶಾಂತರಕ್ಕೊಯ್ವ = ದೇಶಾಂತರಕ್ಕೆ+ಒಯ್ವ , ಮಿತ್ರನಾತಂ=ಮಿತ್ರನು+ಆತಂ, ಹೊಸದಿರ್ಪುದಲ್ಲಿ
ಹೊಸದು+ಇರ್ಪುದು+ಅಲ್ಲಿ, ಬಾಳವಂಗೆತ್ತಲೇಂ=ಬಾಳವಂಗೆ+ಎತ್ತಲೇಂ, ಹೊಸದಿಹುದು=ಹೊಸದು+ಇಹುದು
ಒಯ್ಯ=ಕೊಂಡುಹೋಗುವ, ಇರ್ಪುದು=ಇರುವುದು, ಬಾಳ್ದವಂಗೆತ್ತಲೇಂ=ಬಾಳಿದವನಿಗೆ ಎಲ್ಲಾದರೇನು,
ಸತ್ರ = ಛತ್ರ,

ಸಾವಿನ ಭಯವೇಕೆ? ಈ ಸಾವು ಎಂಬುದು ನಮ್ಮನ್ನು ಹೊಸ ಹೊಸ ಪ್ರದೇಶಗಳನ್ನು ತೋರಿಸುವ, ನಮ್ಮ ಮಿತ್ರ ಹೊಸ ಸ್ಥಳದಲ್ಲಿ ಹೊಸ ಚಿತ್ರವಿರುತ್ತದೆ. ಈ ಜನ್ಮದಲ್ಲಿ ಸಾತ್ವಿಕನಾಗಿ ಬಾಳಿದವನಿಗೆ, ಮುಂದಿನ ಬಾಳು ಇನ್ನಷ್ಟು ಸುಂದರವಾಗಿರುತ್ತದೆಂಬ ಭಾವದಿಂದ, ಮೃತ್ಯುವಿನ ಭಯವಿರಬೇಕಾಗಿಲ್ಲ. ಅಲ್ಲಿ ಎಲ್ಲವೂ ಹೊಸದಾಗಿರುತ್ತದೆ, ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಾವು ಎಂದರೆ ನಮ್ಮ ಎಲ್ಲಕ್ಕೂ ನಮ್ಮ ಮಟ್ಟಿಗೆ ಒಂದು ಶಾಶ್ವತ ಅಂತ್ಯ ಎನ್ನುವುದು ಸಾಮಾನ್ಯಾಭಿಪ್ರಾಯ, ಅಲ್ಲವೇ? ಸ್ವಲ್ಪ ಭಿನ್ನವಾಗಿ ಯೋಚಿಸಿದರೆ, ನಮಗೆ ಅರಿವಾಗುತ್ತದೆ. ಒಬ್ಬ ವ್ಯಕ್ತಿ ಸತ್ತು ಹೋದ ಎನ್ನುತ್ತೇವೆ. ವ್ಯಕ್ತಿಯ ದೇಹ ನಮ್ಮ ಮುಂದೆ ಇದ್ದಾಗ್ಯೂ 'ಹೋದ' ಎನ್ನುತ್ತೇವೆ. ಆದರೆ ಹೋದದ್ದು ಏನು? ಆ ವ್ಯಕ್ತಿಯ ದೇಹವನ್ನು ಧಾರಣೆ ಮಾಡಿದ್ದ 'ಚೇತನ'. ಅದು 'ಸದ್' ವಸ್ತು. ಹಾಗಾಗಿ ಅದು ದೇಹವನ್ನು ಬಿಟ್ಟು ಹೊರಟಾಗ 'ಸತ್ತು ಹೋದ', ಎಂದರೆ

'ಅವನಲ್ಲಿದ್ದ ಸತ್ ವಸ್ತು ದೇಹವನ್ನು ತೊರೆದು ಹೊರಟು ಹೋಯಿತು' ಎಂದು ಅರ್ಥ. ಮೃತ್ಯುವು ಬಂದು ಈ ಸತ್ ವಸ್ತುವನ್ನು ಇಲ್ಲಿಂದ ದೂರ ಬೇರೆಲ್ಲಿಗೋ ಕೊಂಡು ಹೋಗುತ್ತದೆ. ಹಾಗಾಗಿ ನಮಗೆ ಮೃತ್ಯು 'ಒಳ್ಳೆಯ' ಮಿತ್ರ

"ಇದಂ ಶರೀರಂ ಪರಿಣಾಮ ಪೇಷಲಂ ಪತತ್ಯವಶ್ಯಂ ಶ್ಥಥ ಸಂಧಿ ಜರ್ಝರಮ್" ಎನ್ನುತ್ತಾರೆ ಶ್ರೀ ಕುಲಶೇಖರ ಆಳ್ವಾರರು 'ಮುಕುಂದಮಾಲಾ' ಸ್ತೋತ್ರದಲ್ಲಿ, ಹಾಗಾಗಿ ಮೃತ್ಯುವು ಅನಿವಾರ್ಯ. ಈ ಜನ್ಮವನ್ನು ತಳೆದು, ಬೆಳೆದು, ವಿಧಿಲಿಖಿತವನ್ನೆಲ್ಲ ಅನುಭವಿಸಿ, ಶರೀರ ಕುಂದಿ, ಸೊರಗಿ ಹೋಗುವಾಗ, ಚೇತನವನ್ನು ಬೇರೆಡೆಗೆ ಕೊಂಡೊಯ್ದು, ಈ ಕೃಶವಾದ ದೇಹದಿಂದ ಚೇತನಕ್ಕೆ ಬಿಡುಗಡೆ ನೀಡಿ ಉಪಕರಿಸುತ್ತದೆ, ಮೃತ್ಯು. ಹಾಗಾಗಿ ಅದು ನಮಗೆ ಒಳ್ಳೆಯ ಮಿತ್ರ. ಅಷ್ಟೇ ಅಲ್ಲ, ಅದು ನಮ್ಮನ್ನು ಬೇರೆಡೆಗೆ ಕರೆದುಕೊಂಡು ಹೋಗುತ್ತದೆ. ಅಲ್ಲಿ ಮತ್ತೊಂದು ಹೊಸ ದೇಹದಲ್ಲಿ ಚೈತನ್ಯ ಉತ್ಸಾಹವನ್ನು ತುಂಬಿಕೊಳ್ಳುತ್ತದೆ. ಹೊಸ ಪರಿಸರ, ಹೊಸ ತಂದೆ ತಾಯಿಗಳು, ಹೊಸ ಅಣ್ಣ(ಕ) ತಮ್ಮಂದಿ(ತಂಗಿಯ)ರು, ಹೊಸ ಭಾಷೆ ಮತ್ತು ಹಿಂದಿನ ದೇಹದ ಸಂಪರ್ಕದಲ್ಲಿ ನಡೆದ ಎಲ್ಲ





ವಿಧ್ಯಮಾನಗಳ ಸಂಪೂರ್ಣ ವಿಸ್ಮೃತಿ. ಮತ್ತೆ ಹೊಸ ಜೀವನವನ್ನು ನಡೆಸಲು ಅನುವು ಮಾಡಿಕೊಡುವ ಈ ಮೃತ್ಯುವು ನಮಗೆ ಖಂಡಿತ ಒಳ್ಳೆಯ ಸ್ನೇಹಿತನೇ ಅಲ್ಲವೇ? ಹಾಗಾಗಿ ಮೃತ್ಯುವನ್ನು ಕೆಟ್ಟದ್ದೆಂದೊ, ಅಶುಭವೆಂದೂ ತಿಳಿಯುವುದು ಪ್ರಾಕೃತ ಭಾವ. ಹುಟ್ಟು ಸಾವುಗಳು ಆತ್ಮದ ನಿರಂತರ ಪ್ರಯಾಣದ ಅನಿವಾರ್ಯ ಮಜಲುಗಳಷ್ಟೆ.

ಇಚೆದಿನ ಬದುಕಿನಲ್ಲಿ ಸತ್ವವನ್ನು ಬೆಳೆಸಿಕೊಂಡು ಮಾನ್ಯ ಗುಂಡಪ್ಪನವರು "ಸಾತ್ವಿಕದಿ ಬಾಳ್ದವಂಗೆ" ಎಂದು ಹೇಳುವಂತೆ, ಸಾತ್ವಿಕ ಜೀವನ ನಡೆಸಿದರೆ, ಮುಂದಿನ ಪ್ರಯಾಣದಲ್ಲಿ ಹೊತ್ತು ಹೋಗಬೇಕಾದ ಪೂರ್ವಕರ್ಮಗಳ ಹೊರೆ ಕಡಿಮೆಯಾಗುತ್ತದೆ. ಹಾಗೆ ಹೊರೆ ಕಡಿಮೆಯಾದ ಪ್ರಯಾಣ ಸುಖಕರವಾಗಿರುತ್ತದೆ. ನಾವು ರೈಲುಪ್ರಯಾಣ

ಮಾಡುವಾಗ " less luggage more comfort" ಎನ್ನುವ ಫಲಕಗಳನ್ನು ನೋಡುತ್ತೇವೆ. ಇದು 'ಜೀವ' ನ ನಿರಂತರ ಪ್ರಯಾಣಕ್ಕೂ ಅನ್ವಯವಲ್ಲವೇ? ಸತ್ವವನ್ನು ತುಂಬಿಕೊಂಡವಂಗೆ ಮೃತ್ಯುಭಯವಿರುವುದಿಲ್ಲ. ಅಸತ್ತನ್ನು ಬಿಟ್ಟು ಸತ್ತನ್ನು ಬೆಳೆಸಿಕೊಂಡರೆ, ಮೃತ್ಯುವಿನ ಭಯವನ್ನು ನೀಗಿಕೊಂಡು, ನಮ್ಮ ಮುಂದಿನ ಪ್ರಯಾಣ ಸುಖಕರವಾಗುವುದರಲ್ಲಿ ಸಂದೇಹವೇ ಇಲ್ಲ.

**ಮುಕ್ತಕ – 836**

**ಬಹುರಹಸ್ಯವೊ ಸೃಷ್ಟಿ, ಬಹುರಹಸ್ಯವೊ ಜೀವ |**
**ಅಹುದದಲ್ಲವಿದೆಂಬ ವಾದ ಬರಿ ಹರಟೆ ||**
**ಗುಹೆಯೊಳಿಹುದೆಲ್ಲ ತತ್ವಗಳ ತತ್ವದ ಮೂಲ |**
**ಬಹಿರಂತ ರಹಸ್ಯ - ಮಂಕುತಿಮ್ಮ ||**

ಅಹುದದಲ್ಲವಿದೆಂಬ= ಅಹುದು+ಅದು+ಅಲ್ಲವು+ಇದೆಂಬ, ಗುಹೆಯೊಳಿಹುದೆಲ್ಲ=ಗುಹೆಯೊಳು+ಇಹುದು+ಎಲ್ಲ ಬಹಿರಂತ=ಒಳಹೊರಗು,

ಸೃಷ್ಟಿ ಬಹಳ ರಹಸ್ಯ. ಜೀವವೂ ಬಹಳ ರಹಸ್ಯದಿಂದ ಕೂಡಿದೆ. ಇದು ಹೌದು, ಅದು ಆಲ್ಲ, ಇದು ಇರಬಹುದು ಅಥವಾ ಅದೂ ಇರಬಹುದು ಎಂಬ ವಿಚಾರಗಳು ಕೇವಲ ವ್ಯರ್ಥ ಮಾತುಗಳು, ಒಳಹೊರಗುಗಳ ರಹಸ್ಯದ ಮೂಲವೇ ನಮ್ಮ ಅಂತರಂಗದ ಒಳಪದರಗಳಲ್ಲಿ ಅಡಗಿದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೃಷ್ಟಿಯನ್ನು ಕುರಿತು, ಇದು ಹೇಗಾಯಿತು? ಎಂದಾಯಿತು? ಇದೋ? ಅದೋ? ಇದುವೇ ಸರಿ. ಅಲ್ಲ ಅದು ಸರಿ, ಅಲ್ಲಲ್ಲ ಎರಡೂ ಸರಿಯಿರಬಹುದು ಅಥವಾ ಯಾವುದೂ ಸರಿಯಿಲ್ಲವೋ? ಏನೋ ಎಲ್ಲವೂ ಬಹಳ ವಿಚಿತ್ರ, ಅರ್ಥವಾಗುವುದೇ ಇಲ್ಲ !! ಮುಂತಾದ ಆಲೋಚನೆಗಳು ಮನುಷ್ಯನ ತಲೆಯಲ್ಲಿ ಆದಿಯಿಂದ ಬರುತ್ತಲೇ ಇವೆ ಮತ್ತು ಅವು ಇಂದಿಗೂ ಸಮರ್ಪಕವಾಗಿ ಉತ್ತರಗಳನ್ನು ಕಂಡುಕೊಂಡಿಲ್ಲ. 15.2 ಕೋಟಿ ಕಿಲೋಮೀಟರ್

ದೂರದಲ್ಲಿರುವ ಸೂರ್ಯನಲ್ಲಿ ನಡೆಯುವ 'ಉರಿಯುವಿಕೆ'ಯಿಂದ ಉಂಟಾಗುವ ಬೆಳಕು ಮತ್ತು ಶಾಖಗಳು ಈ ಭೂಮಿಯ ಅಸ್ಥಿತ್ವಕ್ಕೆ ಕಾರಣವಾದರೆ, ಆ ಬೆಳಕು ಮತ್ತು ಶಾಖವನ್ನು ಭೂಮಿಯ ತನಕ ತಲುಪಿಸುವ ಶಕ್ತಿ ಅದಾವುದು? ಹೀಗೆ ಹಲವು ಹಳೆಯ ಪ್ರಶ್ನೆಗಳು, ಕೆಲವು ಉತ್ತರಸಿಗದ ಪ್ರಶ್ನೆಗಳು ಮತ್ತು ಬಹಳಷ್ಟು ಹೊಸ ಹೊಸ ಪ್ರಶ್ನೆಗಳು, ನಮ್ಮ ಬದುಕಿನ ಹಂತ ಹಂತದಲ್ಲೂ ಈ ರೀತಿಯ ಪ್ರಶ್ನೆಗಳು ನಮ್ಮನ್ನು ಕಾಡುತ್ತಲೇ ಇರುತ್ತವೆ ಅಲ್ಲವೇ? ಹಾಗಾಗಿ ಸೃಷ್ಟಿ ಬಹು ರಹಸ್ಯ' !!!. ಹಾಗಾಗಿ ಇದನ್ನು ಕುರಿತು ನಾವು 'ಮಾತನಾಡುವುದೆಲ್ಲಾ' ಕೇವಲ 'ವ್ಯರ್ಥ ಹರಟೆ' ಎನ್ನುತ್ತಾರೆ ಡಿವಿಜಿ.

ಇನ್ನು ಕೋಟಿ ಕೋಟಿ ಪ್ರಭೇದದ ಕ್ರಿಮಿ, ಕೀಟ, ಪಕ್ಷಿ, ಜಲಚರ, ಪ್ರಾಣಿಗಳ ಮತ್ತು ಅಷ್ಟೇ ವೈವಿಧ್ಯಮಯವಾದ ಗಿಡ ಮರಗಳು, ಹೂ ಹಣ್ಣುಗಳು ಚಿತ್ರ ವಿಚಿತ್ರವಾದ ಸುಗಂಧಗಳು ಕೂಡಿದ ಸೃಷ್ಟಿಗೆ ಕಾರಣವೇನು? ಕಾರಕನಾರು? ಈ ಎಲ್ಲಾ ರೂಪಗಳನ್ನೂ ಧರಿಸಿರುವ 'ಜೀವ' ಎಂದು ಕರೆಯಲ್ಪಡುವ ಆ ಅಣುಚೇತನದ ಸ್ವರೂಪವೇನು? ಅದು ತನ್ನ ಪೂರ್ವಕರ್ಮಕ್ಕನುಸಾರವಾಗಿ ಅನುಸಾರವಾಗಿ ಬೇರೆ ಬೇರೆ ರೂಪಗಳನ್ನು ಧರಿಸುತ್ತದೆ ಎಂದರೆ, ಆ 'ಜೀವ' ಮೊಟ್ಟಮೊದಲಿಗೆ ದೇಹವನ್ನು ಧಾರಣೆಮಾಡಿದ್ದು ಎಂದು ಮತ್ತು ಯಾವ ಕಾರಣಕ್ಕಾಗಿ? ತನ್ನ ಪೂರ್ವಕರ್ಮ ಶೇಷವನ್ನೆಲ್ಲಾ ಸಂಪೂರ್ಣವಾಗಿ, ನಿಃಶೇಷವಾಗಿ ಕಳೆದುಕೊಂಡಮೇಲೆ ಆ 'ಜೀವ' ಎಲ್ಲಿಗೆ ಸೇರುತ್ತದೆ, ಹಾಗೆ ಎಲ್ಲ ಜೀವಗಳೂ ಮುಕ್ತಿಯನ್ನು ಪಡೆದುಬಿಟ್ಟರೆ ಈ ಜಗತ್ತಿನ ಗತಿಯೇನು? ಈ 'ಬೃಹತ್ ಚೇತನ- ಅಣುಚೇತನ ಮತ್ತು ಜಡ' ಗಳ ಪರಸ್ಪರ ಸಂಬಂಧದ ಸ್ವರೂಪವೇನು? ಎಂದು ನಿಚ್ಚಳವಾಗಿ ಇಂದಿಗೂ ಯಾರಿಗೂ ಸ್ಪಷ್ಟವಾಗಿಲ್ಲ. ಬೇಕಾದಷ್ಟು ಜನ ಅದಕ್ಕೆ ವ್ಯಾಖ್ಯಾನಮಾಡಿದ್ದರೂ, ಅದು ಅವರಿಗೆ ತೋಚಿದ ವಿಚಾರವಷ್ಟೇ!!! ಭಾರತೀಯ ಸಂಸ್ಕೃತಿಯ ವೇದ-ಉಪನಿಷತ್ತುಗಳು ಸಾಕಷ್ಟು ಮಟ್ಟಿಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದರೂ, ಅದನ್ನು ಅರ್ಥಮಾಡಿಕೊಳ್ಳಲು ನಮ್ಮ ಮಾನವ ವಿಫಲನಾಗಿದ್ದಾನೆ ಎನ್ನುವುದಕ್ಕೆ, ಅವನಿಗೆ ಇಂದಿಗೂ ಸಂದೇಹಗಳಿವೆ ಎನ್ನುವುದೇ ಸಾಕ್ಷಿ.

'ಗುಹೆ' ಎಂದರೆ ಮನಸ್ಸಿನ 'ಅಂತರಂಗಾಂತರಂಗ', ಅಲ್ಲಿ ಹೊಕ್ಕು ನೋಡಿದರೆ ನಮಗೆ ಈ ಜಗತ್ತತ್ವದ ಎಲ್ಲ ರಹಸ್ಯಗಳೂ ಬಿಡಿಸಿಕೊಳ್ಳುತ್ತವೆ. ನಾವು ತೀರ ಅಂತರ್ಮುಖಿಗಳಾಗಬೇಕು, ಹೊರಗಿನ ಸಂಪರ್ಕವನ್ನು ಕಡಿದುಕೊಂಡು ಒಳ ಮನಸ್ಸಿನಲ್ಲಿ ಅನುಸಂಧಾನಮಾಡಬೇಕು. ಇಂದಿನ ಸೆಳೆತಗಳ ಬದುಕಿನಲ್ಲಿ ಅದು ಕಷ್ಟಸಾಧ್ಯ. ಆದರೂ ಪ್ರಯತ್ನಪಟ್ಟರೆ ಆಗ ನಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಆ ಪ್ರಶ್ನೆಯ ಮೂಲದಲ್ಲಿಯೇ ಸಿಗುತ್ತದೆ ಎನ್ನುವುದು ಈ

ಮುಕ್ತಕದ ಹೂರಣ. ಹೊರಗೆ ಇದ್ದು, ಒಳಗಿಳಿಯಬೇಕು. ಹೊರಗಿರುವುದು ಭಿನ್ನತೆ ಮತ್ತು ಆ ಭಿನ್ನತೆಯ ಮೂಲವಾದ 'ಒಳಗಿರುವುದು ಏಕತೆ, ಭಿನ್ನತೆಯಿದ್ದರೆ ಸಂದೇಹ ಮತ್ತು ಪ್ರಶ್ನೆಗಳು. ಅದೇ 'ಏಕತೆ' ಯಲ್ಲಿದ್ದರೆ ಪರಿಪೂರ್ಣತೆ ಮತ್ತು ಸ್ಪಷ್ಟ. ಹಾಗೆ ಭಿನ್ನತೆಯಿಂದ ಏಕತೆಗೆ ಹೋಗುವುದೇ ಸಾಧನೆ. ಅಂತಹ ಸಾಧನೆ ನಿರಂತರವಾಗಿ ನಮ್ಮದಾದರೆ, ಎಂದೋ ಒಂದು ದಿನ ನಮಗೂ ಉತ್ತರಗಳು ಸಿಗಬಹುದು





**ಮುಕ್ತಕ 837**

**ಎತ್ತೆತ್ತ ನೋಡಲುಂ ಗುಪ್ತಭೂತಗಳಯ್ಯ ।**

**ಕತ್ತಲೆಯೊಳಾಡುತಿಹ ದೆವ್ವಗಳ ಸುಳಿವು ॥**

**ಮುತ್ತಿ ಮುಸುಕಿಹುದು ಜೀವನ ರಹಸ್ಯವದೊಂದು ।**

**ಬೆತ್ತಲೆಯದಹುದೆಂತು? – ಮಂಕುತಿಮ್ಮ ॥**

ಕತ್ತಲೆಯೊಳಾಡುತಿಹ=ಕತ್ತಲೆಯೋಳು+ಆಡುತಿಹ, ಬೆತ್ತಲೆಯದಹುದೆಂತು=ಬೆತ್ತಲೆ+ಅದು+ಅಹುದು+ಎಂತು.

"ಎಲ್ಲಿ ನೋಡಿದರಲ್ಲಿ ಬಚ್ಚಿಟ್ಟುಕೊಂಡಿರುವ ಭೂತಗಳು, ಕತ್ತಲೆಯಲ್ಲಿ ಓಡಾಡುತಿಹ ದೆವ್ವಗಳು. 'ಜೀವ' ವನ್ನು ರಹಸ್ಯವೊಂದು ಮುಸುಕಿದಂತಿದೆ. ಮುಸುಕು ತೊಲಗಿ ನಮಗೆ ಆ ರಹಸ್ಯ ತೋರುವುದು ಹೇಗೆ?" ಎನ್ನುತ್ತಾ ಒಂದು ಅದ್ಭುತ ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೃಷ್ಟಿಯು ಎಷ್ಟು ರಹಸ್ಯವೋ ಅಷ್ಟೇ ರಹಸ್ಯ ಈ ಸೃಷ್ಟಿಯ ಒಂದು ಮುಖ್ಯ ಅಂಗವಾದ 'ಜೀವ'. ಈ ಜೀವವೂ ತನ್ನ ರಹಸ್ಯವನ್ನು ಬಿಟ್ಟುಕೊಡಲೊಲ್ಲದು. ಇದರ ರಹಸ್ಯದ ಸುತ್ತ ಹೆಣೆದಿರುವ ಸಾವಿರಾರು ಸಿದ್ಧಾಂತಗಳು, ಸಂಪ್ರದಾಯಗಳು, ಆಚಾರಗಳು ಮತ್ತು ಅವುಗಳನ್ನು ಪುಷ್ಟಿಕರಿಸುವ ಕಥೆಗಳು. ಒಂದು ಕಥೆಗೆ ಮತ್ತೊಂದು ತೀರ ವಿರುದ್ಧ.'ನಂಬುವುದು ಯಾವುದನ್ನು ? ಯಾವುದನ್ನು ನಂಬಿದರೆ ತನಗೆ ಶ್ರೇಯಸ್ಸು? ಎಂದು ಮನುಷ್ಯನಿಗೆ ಸದಾ ಗೊಂದಲ. ಒಂದು ನಂಬಿಕೆ ಹುಸಿ ಎನ್ನಿಸಿದರೆ ಮತ್ತೊಂದು ನಂಬಿಕೆಗೆ ಹಾರಲು ಬೇಕಾದ ಮಾನಸಿಕ ಸಿದ್ಧತೆ ಮತ್ತು

ಧೈರ್ಯ ಸಾಲದು. ಪರಿಪೂರ್ಣ ಸತ್ಯವನ್ನು ಕಂಡುಕೊಂಡು, ಅದನ್ನೇ ಭದ್ರವಾಗಿ ಹಿಡಿದು ಮುನ್ನಡೆಯಬೇಕಾದ ಮಾನಸಿಕ ಸಿದ್ಧತೆಗೆ, ನಮ್ಮ ನಂಬಿಕೆ, ಭಾವನೆ, ಊಹೆ, ಹೆದರಿಕೆ, ಭಯ ಎನ್ನುವ ಭೂತಗಳು ಮತ್ತು ದೆವ್ವಗಳು ಒಡ್ಡುವ 'ಅಡ್ಡಿ' ಗಳು ನೂರಾರು .

ಅಲ್ಲಿ ಏನೂ ಇಲ್ಲದಿದ್ದರೂ ಏನೋ ಇದೆ ಎಂದೋ ಅಥವಾ ಏನೂ ಆಗದಿದ್ದರೂ ಏನೋ ಆಗಿಬಿಡುತ್ತದೆ ಎಂದು ಭ್ರಮಿಸುವುದೇ 'ಭೂತ ಅಥವಾ ದೆವ್ವ'. ಈ ಭೂತ ದೆವ್ವಗಳು ನಮ್ಮೊಳಗೇ ಇದ್ದು ನಮ್ಮ ಸತ್ಯದೆಡೆಗಿನ ಪ್ರಯಾಣಕ್ಕೆ ಅಡ್ಡಿಯಾಗಿ ನಿಂತಿವೆ. ಆದರೆ ಅವುಗಳು ನಮ್ಮನ್ನು ಅರಿವಿನೆಡೆಯ ನಮ್ಮ ಹೆಜ್ಜೆಗಳನ್ನು ತಡೆಯುವ ಭೂತ ಅಥವಾ ದೆವ್ವಗಳೆಂದು ನಮಗೆ ಅರಿವಾಗುವುದೇ ಇಲ್ಲ. ಅವುಗಳು ನಮ್ಮನ್ನು ಕತ್ತಲೆ, ಎಂದರೆ ಅಜ್ಞಾನದಲ್ಲಿಯೇ ಮುಳುಗಿಸಿಬಿಡುತ್ತವೆ. ಅಜ್ಞಾನದಿಂದ ನಾವು ಜೀವದ ರಹಸ್ಯಗಳನ್ನು ಅರಿಯಲಾಗುವುದೇ ಇಲ್ಲ. ಅದು
"ಬೆತ್ತಲೆಯದಹುದೆಂತು?" ಎಂದು 'ಜೀವ' ತನ್ನ ಸ್ವರೂಪವನ್ನು ತೋರುವುದು 'ಹೇಗೆ ಮತ್ತು ಎಂದು' ಎನ್ನುವ ಪ್ರಶ್ನೆ ಆತ್ಮಜ್ಞಾನಾಸಕ್ತರಾದ ಜಿಜ್ಞಾಸುಗಳಿಗೆ ಖಂಡಿತ ಕಾಡುತ್ತದೆ.

ಬಹಳ ಕ್ಲಿಷ್ಟವಾದ ಸಮಸ್ಯೆ!!! ಏನು ಮಾಡುವುದು? ನಮ್ಮೊಳಗೇ ಇರುವ ಭೂತ ಪಿಶಾಚಿ, ದೆವ್ವಗಳನ್ನು ನಾವೇ ಹಿಡಿದುಕೊಂಡಿದ್ದೇವೆ, ಹಾಗಾಗಿ ಅವನ್ನು ನಾವೇ ಬಿಡಬೇಕು. ಒಂದನ್ನು ಬಿಡಲು ಮತ್ತೊಂದನ್ನು ಹಿಡಿಯಬೇಕು.



ಹಾಗಾಗಿ ನಮ್ಮ ಅಂತರಂಗದಲ್ಲಿ, ಈ ಸೃಷ್ಟಿಯಲ್ಲಿನ 'ಬೃಹತ್ ಚೇತನ, ಅಣುಚೇತನ ಮತ್ತು ಜಡ' ಗಳ ಪರಸ್ಪರ ಸಂಬಂಧವನ್ನು ಮತ್ತು ಆ ಸಂಬಂಧದ ಸೂಕ್ಷ್ಮ ಸ್ವರೂಪವನ್ನು ಕುರಿತು ಮಂಥನ ಮಾಡುತ್ತಾ ಇದ್ದರೆ, ಒಳಗಿಂದ ನಾವು ಧೈರ್ಯ ತುಂಬಿಕೊಂಡು ಗಟ್ಟಿಯಾದರೆ, ಭಯವನ್ನು ನೀಗಿಕೊಂಡರೆ, ನಮ್ಮನ್ನು ತಡೆಯುವ ಮತ್ತು ಕಾಡುವ 'ಭೂತ ಮತ್ತು ದೆವ್ವ' ದ ಹಿಡಿತದಿಂದ ಹೊರಬರುವ ಪ್ರಯತ್ನವನ್ನು ಮಾಡಿದಂತಾಗುತ್ತದೆ.

**ಮುಕ್ತಕ – 838**

**ಮುಸುಕಿಹುದು ಹುಟ್ಟಳಿವುಗಳ ಕಾರಣವ ಮಬ್ಬು |**

**ಮಸುಕಿನಲಿ ಹುದುಗಿಹವು ಮೋಹಮೂಲಗಳು ||**

**ನಿಶಿ ಮುಚ್ಚಿಹುದು ದಿನಪಚಂದಿರರ ಹುಟ್ಟೆಡೆಯ |**

**ಮಿಸುಕುವ ರಹಸ್ಯ ನೀಂ – ಮಂಕುತಿಮ್ಮ ||**

ಮುಸುಕಿಹುದು=ಮುಸುಕಿ+ಇಹುದು, ಹುಟ್ಟಳಿವುಗಳ=ಹುಟ್ಟು+ಅಳಿವುಗಳ, ಹುದುಗಿಹವು=ಹುದುಗಿ+ಇಹವು, ಮಬ್ಬು=ಕಾರ್ಮೋಡ, ನಿಶಿ=ಕಗ್ಗತ್ತಲು, ದಿನಪ=ಸೂರ್ಯ, ಚಂದಿರ=ಚಂದ್ರ, ಹುಟ್ಟೆಡೆಯ=ಹುಟ್ಟುವ ಸ್ಥಳ, ಮಿಸುಕುವ=ಸ್ಪಂದಿಸುವ

ಹುಟ್ಟು ಸಾವುಗಳ ಕಾರಣಗಳು ನಿಚ್ಚಳವಾಗಿಲ್ಲದೆ ಕವಿಯಲ್ಪಟ್ಟಿವೆ. ಈ ಜಗತ್ತಿನ ಮೇಲೆ ಮೋಹದ ಕಾರಣವೂ ಸಹ ಕವಿಯಲ್ಪಟ್ಟಿದೆ. ಸೂರ್ಯ ಚಂದ್ರರ ಉಗಮಸ್ಥಾನದ ಜ್ಞಾನವೂ ನಮಗಿಲ್ಲ. ಹಾಗೆಯೇ ನೀನೂ ಸಹ ಇವುಗಳಿಗೆಲ್ಲಾ ಸ್ಪಂದಿಸುವ ಒಂದು ರಹಸ್ಯವೇ, ಎಂದು ಸೃಷ್ಟಿಯ ರಹಸ್ಯಗಳ ಬಗ್ಗೆ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪನವರು.

ನಾವು ಎಷ್ಟುಬಾರಿ ಹುಟ್ಟಿದ್ದೇವೆ ಅಥವಾ ಎಷ್ಟು ಬಾರಿ ಸತ್ತಿದ್ದೇವೆ ಎನ್ನುವ ಲೆಕ್ಕ ನಮಗೆ ಗೊತ್ತೇ ಇಲ್ಲ. ಭಾರತೀಯ ಭಕ್ತಿ ಪರಂಪರೆಯಲ್ಲಿ ದಾಸರು 184 ಲಕ್ಷಬಾರಿ' ಬೇರೆ ಬೇರೆ ಜನ್ಮಗಳನ್ನು ತಳೆದು ನಂತರ ಮನುಷ್ಯ ಜನ್ಮ ಎಂದು ಹೇಳಿದ್ದಾರೆ. ಕಂಡವರಾರು? ಹಾಗಾಗಿ ಅದು ಮಬ್ಬು ಅಥವಾ ರಹಸ್ಯ. ಪ್ರತೀ ಜೀವಿಯೂ ತನ್ನ ಪೂರ್ವ ಕರ್ಮಾನುಸಾರ ಜನ್ಮ ತಳೆಯುತ್ತಾನೆ ಎನ್ನುವ ಸಿದ್ಧಾಂತವನ್ನು ಅನುಸರಿಸಿದರೆ, ಹಾಗೆ "ಮೊದಲ ಜನ್ಮಕ್ಕೆ ಕಾರಣವಾದ ಮೊದಲ ಕರ್ಮ" ಎಂದು ಮತ್ತು ಹೇಗೆ ಆಯಿತು, ಎನ್ನುವುದೂ ನಮಗೆ ಅರಿವಾಗುವುದೇ ಇಲ್ಲ. ಹಾಗಾಗಿ ಅದೂ ಸಹ ರಹಸ್ಯ, ನಿಗೂಢ.

ಜನ್ಮವನ್ನು ಹೇಗೋ ಪಡೆದುಕೊಳ್ಳುತ್ತೇವೆ, ಆದರೆ ಈ ಜಗತ್ತಿನ ವ್ಯಾಮೋಹಕ್ಕೆ ನಾವು ಹೇಗೆ ಬಲಿಯಾಗುತ್ತೇವೆ? ಎಂದರೆ ಅದೂ ಅರ್ಥವಾಗುವುದಿಲ್ಲ. ವಸ್ತು ವಿಷಯ ಮತ್ತು ವ್ಯಕ್ತಿಗಳೊಡನೆ ಜೀವನವನ್ನು ಸಾಗಿಸಬೇಕು. ಆದರೆ ಆ ವಸ್ತು ವಿಷಯ ಅಥವಾ ವ್ಯಕ್ತಿಗಳಿಗೆ ಅಂಟಿಕೊಳ್ಳುವಂತಹ ವ್ಯಾಮೋಹವು ನಮ್ಮ ಮನಸ್ಸಿನಲ್ಲಿ ಹೇಗೆ ಉಂಟಾಗುತ್ತದೆ ಎನ್ನುವುದೂ ಸಹ ರಹಸ್ಯ ಮತ್ತು ನಿಗೂಢ, ಅಲ್ಲವೇ? ಕೆಲ ವಸ್ತು, ವಿಷಯ ವ್ಯಕ್ತಿಗಳು ನಮಗೆ

ಅಧಿಕವಾಗಿ ಏಕೆ ಇಷ್ಟವಾಗುತ್ತಾರೆ? ಕೆಲವು ಏಕೆ ಇಷ್ಟವಾಗುವುದಿಲ್ಲ ಎನ್ನುವುದಕ್ಕೆ ಕಾರಣವನ್ನು ಹುಡುಕಿದರೆ ಅದೂ ಸಹ ಗೋಚರವಾಗುವುದಿಲ್ಲ, ಅದು ಪೂರ್ವ ಜನ್ಮದ ವಾಸನೆಗಳಿಂದ ಕರ್ಮ ಶೇಷದಿಂದ ಹಾಗಾಗುತ್ತದೆ ಎಂದು ಹೇಳಿ, ಅದನ್ನು ವಿಧಿ ನಿಯಮ ಎಂದು ಹೇಳುತ್ತಾರೆ. ಆದರೆ ಆ ಪೂರ್ವ ಜನ್ಮದ ವಾಸನೆಗಳೋ ಅಥವಾ ವಿಧಿ ನಿಯಮವೋ ನಮಗೆ ಪೂರ್ವಿಭಾವಿಯಾಗಿ ಅರಿವಾಗುವುದೇ ಇಲ್ಲವಲ್ಲ. ಹಾಗಾಗಿ ಅದೂ ಸಹ ರಹಸ್ಯ ಮತ್ತು ನಿಗೂಢ.

ಹೀಗೆ ಸಕಲ ನಿಗೂಡತೆಗಳ ನಡುವೆ ಬದುಕ ಬೇಕಾದ ಅನಿವಾರ್ಯತೆಯಲ್ಲಿ ನಮ್ಮ ಜೀವನ, ಯಾವುದೂ ಸ್ಪಷ್ಟವಲ್ಲದ ಬದುಕು. ಕ್ಷಣಕ್ಷಣಕ್ಕೂ ಬದಲಾಗುವ ನಮ್ಮ ಮನಸ್ಸಿನ ಭಾವಗಳಿಗೆ ಏನು ಕಾರಣ ಎಂದು ಅರಿಯಲಾಗದೆ ತೊಳಲಾಡುವ ಪರಿಸ್ಥಿತಿ. ಅಂತೆಯೇ ಆ ಮನಸ್ಸಿನ ಭಾವನೆಗಳಿಗನುಗುಣವಾಗಿ ನಾವು ಮಾಡುವ ಕೆಲಸ ಕಾರ್ಯಗಳ ಕಾರಣ ಮತ್ತು ಅದಕ್ಕೆ ಸಿಗುವ ಫಲ ಇವಾವುದರ ಬಗ್ಗೆಯೂ ನಮಗೆ ಸ್ಪಷ್ಟವಾದ ತಿಳುವಳಿಕೆಯಿಲ್ಲವಾದ್ದರಿಂದ, ನಮ್ಮ ಅಸ್ತಿತ್ವವೂ ರಹಸ್ಯ ಮತ್ತು ನಿಗೂಢ. ನಮ್ಮ ಬಾಳೇ ಒಂದು ರಹಸ್ಯ. ಇಂತಹ ಜೀವನವನ್ನು ನಡೆಸುವ ನಾವು, ನಮಗರಿವಿಲ್ಲದಂತೆಯೇ ನಮ್ಮ ಪ್ರಮೇಯವಿಲ್ಲದೆಯೇ ಇಲ್ಲಿನ ವಿಷಯಗಳಿಗೆ ಅಂಟಿಕೊಂಡಿದ್ದೇವೆ. ಇದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು ಮತ್ತು ಹೊಸ ಹೊಸ ಅಂಟುಗಳ ಬಂಧನಕ್ಕೆ ಸಿಲುಕಿಕೊಳ್ಳದೆ ಬದುಕಲಾದರೆ ಅದೇ ಒಂದು ಸಾಧನೆ.

**ಮುಕ್ತಕ – 839**

**ಆವ ಗಾಳಿಯದಾವ ಧೂಳ್ಕಣವ ಪೊತ್ತಿಹುದೊ! |**
**ಆವ ಧೂಳಿನೊಳಾವ ಚೈತನ್ಯಕಣವೊ! ||**
**ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ |**
**ಭಾವಿಸಾ ಸೂತ್ರಗಳ - ಮಂಕುತಿಮ್ಮ ||**

ಗಾಳಿಯದಾವ-ಗಾಳಿಯು+ಅದಾವ, ಧೂಳಣವ=ಧೂಳ್+ಕಣವ,
ಹೊತ್ತಿಹುದೊ=ಸೊತ್ತು+ಇಹುದೋ,ಧೂಳಿನೊಳಾವ=ಧೂಳಿನೊಳು +ಆವ,
ಜೀವವಿಂತಜ್ಞಾತ=ಜೀವವು+ಇಂತು+ಅಜ್ಞಾತ, ಭಾವಿಸಾ=ಭಾವಿಸು+ಆ
ಪೊತ್ತು=ಹೊತ್ತು, ಧರಿಸಿ, ಇಂತೂ=ಹೀಗೆ, ಅಜ್ಞಾತ-ಗೊತ್ತಿಲ್ಲದ,

ಯಾವ ಗಾಳಿಯು ಯಾವ ಧೂಳಿನ ಕಣವನ್ನು ಹೊತ್ತು ತರುತ್ತದೋ, ಯಾವ ಧೂಳಿನ ಕಣದಲ್ಲಿ ಯಾವ ಚೈತನ್ಯವು ಅಡಗಿದೆಯೊ!!!! ಜೀವವೂ ಸಹ ಹೀಗೆಯೇ ಯಾವುದೋ ಒಂದು ಅಜ್ಞಾತ ಶಕ್ತಿಯ ಕೈಯಲ್ಲಿನ ಸೂತ್ರದ ಆಟಕ್ಕೆ ಬೊಂಬೆಯಂತೆ ಕುಣಿಯುತ್ತದೆ. ಆ ಸೂತ್ರಗಳನ್ನು ಭಾವಿಸು ಎಂದು ಹೇಳುತ್ತಾ ಪರಮ ಚೈತನ್ಯವು ಹೇಗೆ ಇಡೀ ಜಗತ್ತನ್ನು ನಡೆಸುತ್ತಿದ್ದರೂ, ತನ್ನ ಕ್ರಿಯೆಯನ್ನು ಸ್ಪಷ್ಟವಾಗಿ ತೋರಗೊಡದೆ ನಿಗೂಢವಾಗಿಟ್ಟಿರುವ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.





ಬೀಸುವ ಗಾಳಿ ಕಣ್ಣಿಗೆ ಕಾಣುವುದಿಲ್ಲ. ಹಾಗೆ ಬೀಸುವಾಗ ಹೊತ್ತು ತರುವ ದೂಳ ಕಣಗಳು ಯಾವುದೂ ನಮಗೆ ಗೋಚರವಾಗುವುದಿಲ್ಲ. ಅಕಸ್ಮಾತ್ ಯಾವುದಾದರೂ ವಿಧಾನದಲ್ಲಿ ಅದನ್ನು ಕಂಡರೂ ಅದರೊಳಗೆ ನಮ್ಮ ಕಣ್ಣಿಗೆ ಚೈತನ್ಯದ ಕಣವಾವುದು, ನಿಸ್ತೇಜ ಕಣವಾವುದು ಎಂದು ಗೊತ್ತಾಗುವುದೇ ಇಲ್ಲ!!! ಅಲ್ಲವೇ? ಉದಾಹರಣೆಗೆ ನಾವು ಉಸಿರಾಡಲು ಎಳೆದುಕೊಳ್ಳುವುದು ಗಾಳಿ, ಆ ಗಾಳಿಯಲ್ಲಿನ 'ಆಮ್ಲಜನಕ' ವೇ ನಮಗೆ ಪ್ರಾಣ 'ಧಾರಕ'. ಆದರೆ ಆ ಗಾಳಿಯಲ್ಲಿ ಆಮ್ಲಜನಕ ಎಲ್ಲಿದೆ ಎಂದು ನಮಗೆ ಗೊತ್ತಾಗುವುದಿಲ್ಲ ಅಲ್ಲವೇ ? ಹಾಗೆಯೇ ಗಾಳಿಯಲ್ಲಿರುವ ಬೇರೆ ಬೇರೆ ಕಣಗಳು ಯಾವುವು ಎಂದೂ ಸಹ ನಮಗೆ ಅರಿವಾಗುವುದಿಲ್ಲ.

ಇದೇ ರೀತಿ ಸೂರ್ಯನ ಬೆಳಕು ಭೂಮಿಯನ್ನು ತಲುಪುವಾಗ ಮಧ್ಯದಲ್ಲಿರುವ ಸ್ಥರಗಳಲ್ಲಿನ ವಾತಾವರಣದ ಕಣಗಳ ಮೂಲಕ ಹರಿಹಾಯ್ದು, ಅವುಗಳ ಗುಣಗಳನ್ನು ತನ್ನ ಬೆಳಕು ಮತ್ತು ಶಾಖದೊಳಕ್ಕೆ ಸೇರಿಸಿಕೊಂಡು ಭೂಮಿಗೆ

ತಲುಪಿಸುತ್ತದೆ. ಅಂತ ಶಾಖದಿಂದ, ಭೂಮಿಗೆ ಯಾವ ಕಣದಿಂದ ಯಾವ ಗುಣವು, ಯಾವ ಪ್ರಮಾಣದಲ್ಲಿ ಬಂದಿತು ಎಂದು ಹೇಳಲು ಸಾಧ್ಯವೇ ಇಲ್ಲ. ಹಾಗೆಯೇ, ಸಮುದ್ರದಲ್ಲಿನ 'ಉಪ್ಪು ನೀರ'ನ್ನೂ ಸಹ ತನ್ನ ಶಾಖದಿಂದ ಗಗನಕ್ಕೆ ಸೆಳೆದು ಮತ್ತೆ ಭೂಮಿಯ ಮೇಲೆ 'ಸಿಹಿನೀರಿ' ನ ಮಳೆಗೆರೆವಂತೆ ಮಾಡುವುದೂ ಸಹ ಸೂರ್ಯನ ಬೆಳಕು ಮತ್ತು ಶಾಖವೇ ಅಲ್ಲವೇ? ಈ ಯಾವ ಪ್ರಕ್ರಿಯೆಗಳೂ ನಮಗೆ ಕಾಣದಿದ್ದರೂ, ಈ ಜಗತ್ತಿನ ಪ್ರತೀ ಪ್ರಾಣಿಯೂ ಆ ಪ್ರಕ್ರಿಯೆಯಿಂದ ಪ್ರಭಾವಿತರಲ್ಲವೇ? ಹೀಗೆ ನಡೆಯುವುದರ ಕಾರಣ ನಮಗೆ ಗೊತ್ತಿಲ್ಲದಿದ್ದರೂ, ಪರತತ್ವದ ನಿಯಮ ಒಂದು ಸೂತ್ರಾನುಸಾರ ವ್ಯವಸ್ಥಿತವಾಗಿ ನಡೆಯುತ್ತಿರುತ್ತದೆ.

ಈ ರೀತಿಯ ವ್ಯವಸ್ಥೆಯಲ್ಲಿ ಒಂದು ಸೂತ್ರದಲ್ಲಿ ಎಲ್ಲವನ್ನೂ ಪೋಣಿಸಿದಂತೆ ಇರುವ ಈ ಜಗತ್ತಿನಲ್ಲಿ 'ಜೀವ' ನದೂ ಸಹ ಒಂದು ರಹಸ್ಯ ಅಸ್ತಿತ್ವ ಜೀವವು ಒಂದು ದೇಹದೊಳಕ್ಕೆ ಎಲ್ಲಿಂದ ಬರುತ್ತದೆ, ಹೇಗೆ ಬರುತ್ತದೆ, ಎಂದು ಬರುತ್ತದೆ, ಹೇಗೆ ಜೀವಿಸುತ್ತದೆ, ಏನನ್ನು ಪಡೆದುಕೊಳ್ಳುತ್ತದೆ, ಏನನ್ನು ಕೊಡುತ್ತದೆ, ಏನನ್ನು ಉಳಿಸಿಕೊಳ್ಳುತ್ತದೆ, ಮುಂದಿನ ಪ್ರಯಾಣಕ್ಕೆ ಹೇಗೆ ಸನ್ನದ್ಧಾಗುತ್ತದೆ, ಎಂದು ಹೊರಡುತ್ತದೆ, ಎಲ್ಲಿಗೆ ಹೊರಡುತ್ತದೆ ಎಂಬ ವಿವರಗಳನ್ನೆಲ್ಲಾ ನಾವು ಅರಿಯಲು ಮತ್ತು ಅರ್ಥಮಾಡಿಕೊಳ್ಳಲೂ ಸಾಧ್ಯವಿಲ್ಲ. ನಿಖರವಾಗಿ ಯಾರಿಗೂ ಗೊತ್ತಿಲ್ಲಾವಾದ್ದರಿಂದ ಇದು ರಹಸ್ಯ ಮತ್ತು ನಿಗೂಢ. ಆದರೆ ಇದು ಪರಮಾತ್ಮನ ಸೂತ್ರದಾಟದಲ್ಲಿ ಇರುವುದರಿಂದ 'ಭಾವಿಸಾ ಆ ಸೂತ್ರಗಳ' ಎಂದು ಡಿವಿಜಿಯವರು ಹೇಳುವಂತೆ ಆ ಸೂತ್ರಗಳನ್ನು ಅನುಸಂಧಾನಮಾಡಿ ಅದನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಬೇಕು.

ಏಕೆಂದರೆ 'ಪರತತ್ವ ವನು ಅರಿತುಕೊಳ್ಳುವ ಪ್ರಯತ್ನದಲ್ಲಿ 'ನಾನತ್ವ'ವನ್ನು ಹೋಗಲಾಡಿಸಿಕೊಳ್ಳಬಹುದು.





**ಮುಕ್ತಕ - 84ಸಂ**

**ಭುಕ್ತಿ ನಿನಗೆಲ್ಲಿಯದು? ಭತ್ತ ತಾನೆಲ್ಲಿಯದು? |**

**ಎತ್ತಲಿನ ಗೊಬ್ಬರವೋ? ಎತ್ತಲಿನ ನೀರೋ? ||**

**ಭಾಕ್ತವಾರಾರ ದುಡಿತದಿನೊ ನಿನಗಾಗಿಹುದು |**

**ಗುಪ್ತಗಾಮಿನಿಯೊ ಋಣ - ಮಂಕುತಿಮ್ಮ ||**

ನಿನಗೆಲ್ಲಿಯದು=ನಿನಗೆ+ಎಲ್ಲಿಯದು, ತಾನೆಲ್ಲಿಯದು=ತಾನು+ಎಲ್ಲಿಯದು, ಭಾಕ್ತವಾರಾರ=ಭಾಕ್ತವು+ಆರಾರ, ನಿನಗಾಗಿಹುದು+ನಿನಗೆ+ಆಗಿಹುದು,

ಭುಕ್ತಿ =ಊಟ, ಆಹಾರ, ಭಾಕ್ತ=ಊಟ, ಗುಪ್ತ=ರಹಸ್ಯ, ಗಾಮಿನಿಯೊ=ಚಲಿಸುವುದು.

ನೀನುಣ್ಣುವ ಆಹಾರ ನಿನಗೆಲ್ಲಿಂದ ಸಿಕ್ಕಿತು? ಆ ಆಹಾರದಲ್ಲಿನ ಅನ್ನದ ಅಕ್ಕಿಯ ಬತ್ತ ಎಲ್ಲಿಂದ ಬಂದಿತೋ? ಆ ಬತ್ತವ ಬೆಳೆಯಲು ಹಾಕಿದ ಗೊಬ್ಬರವೆಲ್ಲಿಯದೋ? ಮತ್ತು ಆ ಬೆಳೆಗೆ ಹನಿಸಿದ ನೀರು ಎಲ್ಲಿಯದೋ? ಆ ಬೆಳೆಯನ್ನು ಬೆಳೆಸಲು ಯಾರ್ಯಾರ ಶ್ರಮ ಸೇರಿದೆಯೋ? ಇವ್ಯಾವುದೂ ನಮಗೆ ತಿಳಿಯುವುದಿಲ್ಲ ಮತ್ತು ಅರ್ಥವೂ ಆಗುವುದಿಲ್ಲ. ಇದೆಲ್ಲ ನಾವು ಪಡೆದುಕೊಂಡು ಬಂದಂತಹ, ಆದರೆ ಅಭೇದನೀಯ ರಹಸ್ಯ ಋಣ' ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ದಾನೆ ದಾನೆ ಪೆ ಲಿಖಾ ಹೈ ಖಾನೆವಾಲೆ ಕಾ ನಾಮ್' ಎನ್ನುವುದು ಒಂದು ಹಿಂದೀ ಭಾಷೆಯ ನಾಣ್ಣುಡಿ. ಅಂಗಡಿಗೆ ಹೋಗಿ ಅಕ್ಕಿಯನ್ನು ತಂದು ಅನ್ನವನ್ನು ಮಾಡಿ ತಿಂದು ತೇಗಿಬಿಡುತ್ತೇವೆ. ನಾವೆಂದಾದರೂ ಆ ಅನ್ನದ ಅಗುಳಿನ ಮೂಲವನ್ನು ಅರಿಯಲು ಪ್ರಯತ್ನಿಸುತ್ತೇವೆಯೇ? ಇಲ್ಲ, ಅಲ್ಲವೇ? ಕಾರಣವಿಷ್ಟೇ ಆ ಅಕ್ಕಿಯ ಕಾಳನ್ನು ಧರಿಸಿದ ಭತ್ತ ಯಾವ ಭೂಮಿಯಲ್ಲಿ ಬೆಳೆಯಿತೋ, ಆ ಬೆಳೆಗೆ ಯಾವ ನೀರು ಹರಿಯಿತೋ, ಆ ಭೂಮಿಗೆ ಯಾವ ಗೊಬ್ಬರವನ್ನು ಬಳಸಿದರೋ ಅಥವಾ ಅದನ್ನು ಬೆಳೆಯಲು ಯಾರು ತಮ್ಮ ಬೆವರನ್ನು ಹರಿಸಿದರೋ ತಿಳಿಯಲು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ ನಾವು ಕೊಳ್ಳುವ ಅಕ್ಕಿಯ ಒಂದು ಹಿಡಿಯಲ್ಲಿ ಅದೆಷ್ಟು ಬೇರೆ ಬೇರೆ ತೆನೆಗಳ, ಬೇರೆ ಬೇರೆ ಭೂಮಿಗಳ ಕಾಳುಗಳುಂಟೋ, ಅಷ್ಟೂ ಭೂಮಿಯ ಸಾರ ನಮ್ಮಗೆ ಸಿಗುತ್ತದೆ. ಸಿಗುತ್ತದೆ ಎಂದರೆ ನಾವು ಅದಕ್ಕೆ ಭಾಜನರು ಎಂದು ಅರ್ಥ. ನಮಗೆ ಅದು ಸಿಗಬೇಕಿತ್ತು, ಸಿಕ್ಕಿತು. ಇದನ್ನೇ 'ಋಣ' ಎನ್ನುವುದು.

A slip between the cup and the lip ಎನ್ನುವ ಮಾತೂ ಇದೆಯಲ್ಲ. ಅದರಂತೆ ಎಷ್ಟೋ ಭಾರಿ ನಾವು ಪಡೆಯಬೇಕೆಂದು ಪ್ರಯತ್ನಪಟ್ಟರೂ ಸಫಲತೆಯ ಕಡೆಯ ಹಂತದಲ್ಲಿ ಆ ಫಲ ನಮ್ಮ ಕೈಜಾರಿ ಹೋಗುವ ಸಂದರ್ಭಗಳನ್ನು ನಮ್ಮ ಜೀವನದಲ್ಲಿ ನಾವು ಕಂಡಿಲ್ಲವೇ? ಆಗ ನಾವು 'ಅಯ್ಯೋ ನಮಗೆ ಋಣವಿರಲಿಲ್ಲ' ಎಂದುಕೊಂಡು

ಸಮಾಧಾನ ಪಟ್ಟುಕೊಳ್ಳುತ್ತೇವಲ್ಲವೇ, ನಾವು ಕೊಡುವುದು ಮತ್ತು ಪಡೆದುಕೊಳ್ಳುವುದೆಲ್ಲವೂ ಈ 'ಋಣ' ದ ಕಾರಣದಿಂದಲೇ, ಯಾರಿಂದಲೋ ನಮಗೆ ಊಟ, ಪ್ರೀತಿ, ಕರುಣೆ, ಅನುಕಂಪ ಸಿಗುತ್ತದೆ ಮತ್ತು ನಾವು ಬೇರೆ ಯಾರಿಗೋ, ಅದನ್ನೆಲ್ಲಾ ನೀಡುತ್ತೇವೆ. ಯಾರ್ಯಾರು ನಮಗೆ





ಋಣಪಟ್ಟಿದ್ದಾರೆ ಮತ್ತು ನಾವು ಯಾರ್ಯಾರಿಗೆ ಋಣಪಟ್ಟಿದ್ದೇವೆ ಎಂದು ಹೇಳುವುದು ಕಷ್ಟವಷ್ಟೇ ಅಲ್ಲ ಅಸಾಧ್ಯ. ಇದೊಂದು ಸುಳಿ, ಈ ಸುಳಿಯಲ್ಲಿ ನಮ್ಮ ಹುಟ್ಟು, ಬದುಕು ಮತ್ತು ಸಾವು'

ನಾವು ಹುಟ್ಟುವ ಭೂಮಿ, ನಮ್ಮ ತಂದೆ ತಾಯಿಯರು, ಅಕ್ಕ, ಅಣ್ಣ, ತಮ್ಮ, ತಂಗಿಯರು, ಬಂಧುಗಳು, ಆಗಾಗ ಬಂದು ಕೆಲಕಾಲವೋ ಅಥವಾ ಧೀರ್ಘಕಾಲವೋ ನಮ್ಮ ಸ್ನೇಹವನ್ನು ಹಂಚಿಕೊಂಡು ಮತ್ತು ನಮಗೆ ತಮ್ಮ ಸ್ನೇಹದ ರುಚಿಯನ್ನು ತೋರಿಸುವ ಮಿತ್ರರು, ನಮಗೆ ಸಿಗುವ, ನಾವು ತಿನ್ನುವ, ನಾವು ಪರರಿಗೆ ನೀಡುವ ಆಹಾರ ಎಲ್ಲವೂ ಈ 'ಋಣ'ದ ಸುಳಿಯಲ್ಲೇ ಸುತ್ತುತ್ತದೆ. ಅಷ್ಟೇ ಅಲ್ಲ ಮಿತ್ರರೇ, ನಾವು ಹುಟ್ಟಿನಿಂದ ಸಾವಿನ ತನಕ, ಎಂದರೆ ನಮ್ಮ ಬದುಕಿನುದ್ದಕ್ಕೂ ತೆಗೆದುಕೊಳ್ಳುವ ನಮ್ಮ ಉಸಿರೂ ಸಹ, ನಮ್ಮ ಮತ್ತು ಈ ಭೂಮಿಯ 'ಋಣ' ವಿರುವ ತನಕ 'ಇಷ್ಟೇ' ಎಂದು ನಿಗದಿತವಾಗಿರುತ್ತದೆ. ನಮಗೆ ಬದುಕಿನ ಅಂಟು ಇರುವ ತನಕ ಆ ಋಣದಿಂದ ನಾವು ಮುಕ್ತರಾಗಲು ಸಾಧ್ಯವೇ ಇಲ್ಲ. ಈ ಋಣದ ಲೆಕ್ಕಾಚಾರ ನಮಗೆ ಅರ್ಥವಾಗುವುದಿಲ್ಲವಾದ್ದರಿಂದ ಮಾನ್ಯ ಗುಂಡಪ್ಪನವರು ಇದನ್ನು

'ಗುಪ್ತಗಾಮಿನಿ'ಯೆಂದು ಹೇಳಿದ್ದಾರೆ. ನಾವೆಲ್ಲಾ ಈ ಅರ್ಥವಾಗದ ಋಣಗಳ ಸಂಕೋಲೆಗಳಲ್ಲಿ ಬಂಧಿತರಾಗಿದ್ದೇವೆ. ಅದನ್ನು ಅರಿತುಕೊಳ್ಳದೆ 'ನಾನು " ಎನ್ನುವ ಭಾವವಿಟ್ಟುಕೊಂಡಿದ್ದರೆ ಅದು ಕೇವಲ ಅಜ್ಞಾನವಷ್ಟೆ.

**ಮುಕ್ತಕ – 841**

**ನಿನ್ನೆಂಜಲಗುಳಾವ ಕಾಲುವೆಯ ಸೇರುವುದೊ!|**

**ಮಣ್ಣಾವುದದರಿಂದ ಗರ್ಭವತಿಯಹುದೊ! ||**

**ಅನ್ನವದರಿಂದಾರ್ಗೊ! ಲೋಕಕವರಿಂದೇನೊ! |**

**ಬಣ್ಣಿಸುವರಾರದನು? – ಮಂಕುತಿಮ್ಮ ||**

ನಿನ್ನೆಂಜಲಗುಳಾವ=ನಿನ್ನ+ಎಂಜಲ+ಅಗುಳು+ಆವ, ಮಣ್ಣಾವುದದರಿಂದೆ=ಮಣ್ಣು+ಆವುದು+ಅದರಿಂದೆ, ಅನ್ನವದರಿಂದಾರ್ಗೊ=ಅನ್ನವು+ಅದರಿಂದ+ಆರ್ಗೊ, ಲೋಕಕವರಿಂದೇನೊ ಲೋಕಕೆ+ಅವರಿಂದ+ಏನೊ, ಬಣ್ಣಿಸುವರಾರದನು=ಬಣ್ಣಿಸುವರು+ಆರು+ಅದನು ಆರ್ಗೊ=ಯಾರಿಗೋ,

ನೀನುಂಡು ಕೈ ತೊಳೆವ ನೀರು ಯಾವ ಕಾಲುವೆಯ ಸೇರುವುದೋ? ಆ ಕಾಲುವೆಯ ನೀರು ಯಾವ ಭೂಮಿಯನ್ನು ತಣಿಸುವುದೋ? ಹಾಗೆ ತಣಿದ ಯಾವ ಭೂಮಿ ಪೈರ ತಳೆಯುವುದೋ? ಆ ಪೈರಿಂದಾಗುವ ಕಾಳಿನ ಆಹಾರ ಯಾರ ಉದರವ ಸೇರುವುದೋ? ಆ ಕಾಳ ತಿಂದವರಿಂದ ಲೋಕಕ್ಕೇನು ಮಾಡುವರೋ? ಎಂಬ ಪ್ರಶ್ನೆಗಳಿಗೆ ನಮಗೆ ಎಂದಿಗೂ ಉತ್ತರ ಸಿಗಲಾರದು ಎಂದು ಜಗತ್ತಿನಲ್ಲಿ ನಡೆಯುವ ವಿಧ್ಯಮಾನಗಳ ನಿಗೂಢತೆಯನ್ನು ಬಣ್ಣಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಈ ಜಗತ್ತಿನ ವಿಧ್ಯಮಾನವೇ ಹೀಗೆ, ಯಾವುದೋ ನಿಚ್ಚಳ ಅಥವಾ ಸ್ಪಷ್ಟವಲ್ಲ. ನಮಗೆ ಕಾಣುವುದು ಯಾವುದರ ಮೂಲ ಸ್ವರೂಪವೂ ನಮಗೆ ಅರಿವಾಗುವುದೇ ಇಲ್ಲ. ಕಂಡದ್ದನ್ನು ನಂಬುವುದೇ ನಮಗಿರುವ ಪರ್ಯಾಯ.

ಮೂಲವನ್ನು ಹುಡುಕುತ್ತಾ ಹೋದರೆ ಜಗತ್ಸೃಷ್ಟಿಯ ವಿಚಿತ್ರಗಳು ನಮಗೆ ಗೋಚರಿಸುತ್ತಾವಾದರೂ ಅದರ ಮೂಲವನ್ನು ಅರಿಯಲು ಸಾಧ್ಯವೇ ಇಲ್ಲ. ಉದಾ: ಕಡಲ ಯಾವ ಜಲ ಬಿಂದು ಆವಿಯಾಗಿ ಗಗನಕ್ಕೇರಿ ಬೇರೆ ಯಾವ ಆವಿಯೊಡನೆ ಸೇರಿ ಮತ್ತೆ ಜಲ ಬಿಂದುವಾಗಿ ಮತ್ತು ಅಂತಹ ಯಾವ ಅನ್ಯ ಜಲಬಿಂದುಗಳೊಡನೆ ಸೇರಿ ಮಳೆಯಾಗಿ ಧರೆಗಿಳಿದು ತೊರೆಯಾಗಿ ನದಿಯಾಗಿ ಹರಿದು ಮತ್ತೆ ಕಡಲನ್ನು ಎಂದು ಸೇರುತ್ತದೆ ಎಂದು ಹೇಳಲು ಸಾಧ್ಯವೇ? ಇದು ರಹಸ್ಯ ಮತ್ತು ನಿಗೂಢ.

ಹಾಗೆ ಹರಿವ ಯಾವ ನೀರ ಹನಿಗಳ ಸಿಂಚನದಿಂದ ಭೂಮಿ ತಣಿದು, ತನ್ನೊಡಲಿನಲ್ಲಿರುವ ಬೀಜಗಳನ್ನು ಮೊಳೆಯುವಂತೆ ಮಾಡಿ ಧಾನ್ಯವಾಗುತ್ತದೆ ಮತ್ತು ಆ ಧಾನ್ಯವು ಯಾರ ಉದರವನ್ನು ಸೇರುತ್ತದೆ ಮತ್ತು ಆ ಧಾನ್ಯವನ್ನು ತಿಂದ ಯಾರ ಮನಸ್ಸು ಹೇಗೆ ಕೆಲಸಮಾಡುತ್ತದೆ ಮತ್ತು ಅವರಿಂದ ಲೋಕಕ್ಕೆ ಎಂತಹ ಉಪಕಾರವೋ ಅಥವಾ ಅಪಕಾರವಾಗುತ್ತದೆ ಎಂದು ಹೇಳಲು ಸಾಧ್ಯವೇ ಇಲ್ಲ ಅಲ್ಲವೇ?

ಜಗತ್ತಿನ ಮೇಲಿರುವ ಎಲ್ಲ ವಿಷಯಗಳೂ ಹೀಗೆಯೇ. ಮೇಲುನೋಟಕ್ಕೆ ಕಾಣುವುದು, ಮೂಲ ಸ್ವರೂಪದಲ್ಲಿ ಭಿನ್ನವಾಗೇ ಇರುತ್ತದೆ. ಹೊರಗೆ ಕಾಣುವುದನ್ನು ನೋಡಬಹುದು ಆದರೆ ಅದ ಮೂಲವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ಪರತತ್ವದ ವಿಚಾರದಲ್ಲೂ ಹೀಗೆಯೇ!! ಅದರ ಸೃಷ್ಟಿಯಲ್ಲಿ ನಡೆಯುವ ವಿದ್ಯಮಾನದಲ್ಲಿದ್ದು ನಾವು ಅದರ ಫಲಾನುಭವಿಗಳಾಗಬಹುದು. ಆದರೆ ಅದರ ಕ್ರಿಯೆಯನ್ನು ಕಾಣುವುದಾಗಲೀ ಅಥವಾ ಅರ್ಥಮಾಡಿಕೊಳ್ಳುವುದಾಗಲೀ ಸಾಧ್ಯವಿಲ್ಲ. ಪ್ರಯತ್ನ ಪಟ್ಟವರೂ ಇದ್ದಾರೆ. ಆದರೆ ಅವರಿಗೆ ಸಿಕ್ಕ ಸಫಲತೆ ಬಹಳ ಕಡಿಮೆ. ಹಾಗಾಗಿ ಮಾನ್ಯ ಗುಂಡಪ್ಪನವರು 'ಬಣ್ಣಿಸುವರಾರದನು?' ಎಂದರು. ನಾವೂ ಸಹ ಅದನ್ನು ಅರಿಯುವ ಪ್ರಯತ್ನವನ್ನು ಮಾಡಿದರೆ ಸೃಷ್ಟಿಯ ಅಗಾಧತೆಯು ಅರ್ಥವಾಗಿ, ನಾವೆಷ್ಟು ಗೌಣ ಎಂದು ಅರಿವಾಗಿ ನಮ್ಮ ಅಹಂಕಾರ ಕಡಿಮೆಯಾಗುವ ಸಾಧ್ಯತೆಗಳು ಹೆಚ್ಚುತ್ತವೆ.

ಮುಕ್ತಕ 842

ಆವ ನೆಲದಲಿ ಮೇದೋ, ಆವ ನೀರನು ಕುಡಿದೊ ।

ಆವು ಹಾಲ್ಗರೆವುದದನಾರು ಕುಡಿಯುವನೋ ! ॥

ಆವ ಬಲವದರಿನೊಗೆದೇಂಗೆಯ್ಯುವುದೋ ಜಗಕೆ ।

ಭಾವಿಸಾ ಋಣಗತಿಯ - ಮಂಕುತಿಮ್ಮ ॥

ಹಾಲ್ಗರೆವುದದನಾರು=ಹಾಲ+ಗರೆವುದು+ಅದನು+ಆರು, ಬಲವದರಿನೊಗೆದೇಂಗೆಯುವುದೊ

ಬಲವು+ಅದರಿನ್+ಒಗೆದು+ಏಂಗೆಯುವುದೋ, ಭಾವಿಸಾ=ಭಾವಿಸು+ಆ,

ಆವು=ಹಸು, ಗರೆವುದು=ಕರೆವುದು, ಒಗೆದು=ಉಂಟಾಗಿ, ಗೆಯ್ಯುವುದೊ=ಮಾಡಿಸುವುದೊ

ಯಾವುದೋ ನೆಲದಲ್ಲಿ ಬೆಳೆದ ಹುಲ್ಲನ್ನು ತಿಂದು ಯಾವುದೋ ಕೆರೆಯ ಅಥವಾ ತೊರೆಯ ನೀರನ್ನು ಕುಡಿದು ಒಂದು ಹಸು ಹಾಲನ್ನು ನೀಡುತ್ತದೆ. ಆ ಹಾಲನ್ನು ಯಾರು ಕುಡಿಯುವರೋ ಮತ್ತು ಹಾಗೆ ಕುಡಿದವರಿಂದ ಎಂತಹ ಕಾರ್ಯವಾಗುತ್ತದೆಯೊ ಮತ್ತು ಆ ಕಾರ್ಯದಿಂದ ಈ ಜಗತ್ತಿಗೆ ಏನುಪಯೋಗವೋ ಕಂಡವರಾರು? ಇದು ಋಣಗತಿ, ಇದನ್ನು ಭಾವಿಸು ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಬೆದು ಹಸು ಮೇಯಲು ಹೋದಾಗ, ಬಯಲಲ್ಲಿರುವ ಹುಲ್ಲಿನಲ್ಲಿ ಯಾವ ಹುಲ್ಲಿಗೆ ಬಾಯಿ ಹಾಕುತ್ತದೆಯೋ ಯಾರಿಗೆ ಗೊತ್ತು. ಬೇರೆ ಬೇರೆ ಗಿಡದಲ್ಲಿ ಬೆಳೆದ ಹುಲ್ಲನ್ನು ತಿಂದು, ಎಲ್ಲಿಯದೋ ನೀರನ್ನು ಕುಡಿದು, ಹಾಲನ್ನು ನೀಡುತ್ತದೆ. ಆ ಹುಲ್ಲಿನ, ಆ ನೀರಿನ ಮತ್ತು ಆ ಹಸುವಿನ ಯಾವ ಯಾವ ಗುಣಗಳು ಆ ಹಾಲಲ್ಲಿ ಸೇರಿರುತ್ತದೆಯೋ ಮತ್ತು ಅದನ್ನು ಕುಡಿಯುವವರಗೆ ಎಂತಹ ಶಕ್ತಿಯನ್ನು ನೀಡುತ್ತದೆಯೋ ಮತ್ತು ಅಂತಹ ಶಕ್ತಿಯನ್ನು ಪಡೆದವರಿಂದ ಈ ಜಗತ್ತಿನಲ್ಲಿ ಯಾವ ಕೆಲಸವಾಗುತ್ತದೆ ಮತ್ತು ಆ ಕೆಲಸದಿಂದ ಜಗಕ್ಕೆ ಏನು ಉಪಕಾರವಾಗುತ್ತದೆ ಎಂದು ಹೇಳಲು ಸಾಧ್ಯವೇ ಇಲ್ಲ ಅಲ್ಲವೇ? ಇದು ಎಲ್ಲಾ ವಿದ್ಯಮಾನಗಳ ವಿಧಾನ. ಇದನ್ನು ಎಷ್ಟು ಕೆದಕಿ ನೋಡಿದರೂ ಅದರ ಮೂಲ ಮತ್ತು ಗೂಢತೆ ಅರ್ಥವಾಗುವುದೇ ಇಲ್ಲ. ಒಂದಕ್ಕೊಂದು ಋಣಪಟ್ಟಿರುವುದರಿಂದ ಹಾಗೆ ಆಗುತ್ತದೆ ಎಂದು ಭಾವಿಸಬೇಕು.

ಇದು ಕೇವಲ ಹಸುವಿನ ಹಾಲೇ ಅಲ್ಲ, ಜಗತ್ತಿನ ಸಕಲವೂ, ಎಂದರೆ ನಮ್ಮ ಹುಟ್ಟು, ಬದುಕು, ಜೀವಿಸುವ ನೆಲ, ಒಂದೆಡೆಯಿಂದ ಮತ್ತೊಂದೆಡೆಗೆ ಬದಲಿ ಮತ್ತು ಅಂತ್ಯಕ್ಕೊಂದು ಸಾವು, ಎಲ್ಲವೂ ಈ ಋಣದ ವೃತ್ತದಲ್ಲೇ

ಸುತ್ತುತ್ತಿರುತ್ತದೆ. ಇದರಿಂದ ಹೊರಬಂದರೆ 'ಮುಕ್ತಿ' ಎನ್ನುವುದು. ಎಂದರೆ ನಾವೆಲ್ಲಾ ಈ ಋಣದ ಸುಳಿಯಿಂದ ಬಂಧಿತರಾಗಿದ್ದೇವೆ. ಈ ಋಣಗಳನ್ನು ತೀರಿಸಿ ಅಥವಾ ಅದರಿಂದ ಹೊರಬಂದರೆ, ಬಂಧನದಿಂದ ಹೊರಬಂದು ಮುಕ್ತರಾಗಬಹುದು. ಆದರೆ ನಮ್ಮ ಇಂದ್ರಿಯ ಪ್ರೇರಿತವಾದ ಎಲ್ಲ ಕ್ರಿಯೆಗಳೂ ನಮ್ಮನ್ನು ಈ ಋಣದ ವೃತ್ತದೊಳಕ್ಕೆ





'ಮತ್ತಷ್ಟು ತಳ್ಳುತ್ತದೆ, ಗಟ್ಟಿಯಾಗಿ ಬಂಧಿಸಿಡುತ್ತದೆ. ಎಲ್ಲಿಯತನಕ ನಮ್ಮ ಜೀವನ ಇಂದ್ರಿಯ ಸಂಬಂಧಿತವೋ ಅಲ್ಲಿಯ ತನಕ ನಮಗೆ ಈ 'ಋಣ' ದಿಂದ ಮುಕ್ತಿಯಿಲ್ಲ.

"ಭಾವಿಸಾ ಋಣಗತಿಯ" ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಏಕೆ ಭಾವಿಸಬೇಕು? ಎಂದರೆ, ಮನುಷ್ಯನಿಗೆ ಅಂತರಂಗದ ಔನ್ನತ್ಯವನ್ನು ಪಡೆಯಬೇಕಾದರೆ, ಅವನು ಬಂಧನದಿಂದ ಬಿಡುಗಡೆ ಹೊಂದಬೇಕು, ಇವನನ್ನು ಬಂಧನಗಳಿಗೆ ಸಿಲುಕಿಸುವುದೇ ಇಂದ್ರಿಯಾನುಭವ. ಹೀಗೆ ಪಡೆದ ಇಂದ್ರಿಯಾನುಭವ ನಮಗೆ ಋಣದ ರೂಪದಲ್ಲಿ ಅಂಟಿಕೊಳ್ಳುತ್ತದೆ. ಆ ಋಣವನ್ನು ತೀರಿಸಲು ಮತ್ತಷ್ಟು ಕ್ರಿಯೆ ಅಥವಾ ಕರ್ಮದಿಂದ ಮತ್ತಷ್ಟು ಋಣವನ್ನು ಹೆಚ್ಚಿಸಿಕೊಂಡು, ಅಂಟಿಸಿಕೊಳ್ಳುವುದು. ಗೂಟಕ್ಕೆ ಕಟ್ಟಿದ ದನದಂತೆ ಅಲ್ಲೇ ಸುತ್ತುತ್ತಿರುವುದು. ಈ ಬಂಧನಗಳಿಂದ ಹೊರಬರುವ ಅನೇಕ ವಿಧಾನಗಳನ್ನು ನಮಗೆ ನಮ್ಮ ಗುರು ಹಿರಿಯರು ತೋರಿದ್ದಾರೆ. ಮುಕ್ತಿ ಬೇಕೆನ್ನುವವರು ಅವುಗಳನ್ನು ತೀವ್ರವಾಗಿ ಅಭ್ಯಾಸಮಾಡಿದರೆ, ಇಂದ್ರಿಯ ಲಾಲಸೆ ಕಡಿಮೆಯಾಗಿ, ಋಣಭಾರವೂ ಕರಗಿ, ಎಂದೋ ಒಂದು ದಿನ ನಾವೂ ಸಹ ಅದರಿಂದ ಮುಕ್ತರಾಗಬಹುದು. ಹಾಗಾಗಿ ಋಣದ ಮೂಲ, ಸ್ವರೂಪ ಮತ್ತು ಸ್ವಭಾವವನ್ನು ಅರಿತು, ಭಾವಿಸಬೇಕು. ಅರಿತರೆ ಮಾತ್ರ ಮುಕ್ತಿ ಇಲ್ಲದಿದ್ದರೆ ಇಲ್ಲ.

**ಮುಕ್ತಕ – 843**

**ಸೇರಿರ್ಪುವುಸಿರುಸಿರುಗಳೊಳೆಷ್ಟೋ ಜೀವಾಣು ।**

**ಹಾರುತಿಹುವೆಷ್ಟೋ ಚೇತನ ಧೂಳುಕಣದೊಳ್ ॥**

**ಪ್ರಾರಬ್ಧಗತಿಯ ನಿಶ್ಚಯದಿ ತಿಳಿವವರಿಲ್ಲ ।**

**ಆ ರಹಸ್ಯಕ್ಕೆರಗೆ! – ಮಂಕುತಿಮ್ಮ ॥**

ಸೇರಿರ್ಪುವುಸಿರುಸಿರುಗಳೊಳೆಷ್ಟೋ = ಸೇರಿ+ಇರ್ಪುವು+ಉಸಿರು+ಉಸಿರುಗಳೊಳು+ಎಷ್ಟೋ,

ಹಾರುತಿಹುವೆಷ್ಟೋ=ಹಾರುತ+ಇಹವು+ಎಷ್ಟೊ, ರಹಸ್ಯಕ್ಕೆರಗೊ=ರಹಸ್ಯಕ್ಕೆ+ಎರಗೊ

ಇರ್ಪುವು=ಇರುವುವು, ಪ್ರಾರಬ್ಧ=ಹಿಂದಿನಿಂದ ಪಡೆದುಕೊಂಡು ಬಂದ,

ನಾವು ಎಳೆದುಕೊಳ್ಳುವ ಪ್ರತೀ ಉಸಿರಿನಲ್ಲೂ ಬಹಳಷ್ಟು ಜೀವಾಣುಗಳು ಸೇರಿರುತ್ತವೆ. ನಮ್ಮ ಸುತ್ತಲಿನ ಧೂಳಲ್ಲಿ ಚೈತನ್ಯದ ಅದೆಷ್ಟು ಕಣಗಳಿವೆಯೋ!! ಯಾವುದು, ಹೇಗೆ, ಎಲ್ಲಿಂದ ಬಂದು ನಮ್ಮೊಳಕ್ಕೆ ಸೇರಿಕೊಳ್ಳುತ್ತದೆ ಎಂದು ಖಂಡಿತವಾಗಿ ಯಾರಿಂದಲೂ ಹೇಳಲಾಗುವುದಿಲ್ಲ. ಇದೊಂದು ರಹಸ್ಯ ಮತ್ತು ಆ ರಹಸ್ಯಕ್ಕೆ ನಮಿಸು ಎಂದು ಉಲ್ಲೇಖಮಾಡಿದ್ದಾರೆ. ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಉಸಿರಾಡುವ ಗಾಳಿಯಲ್ಲಿ ಅದೆಷ್ಟು ಅಣುಮಾತ್ರದ ಜೀವಾಣುಗಳೋ, ನಮ್ಮ ಸುತ್ತಲಿನ ಗಾಳಿಯ ಧೂಳಿನಲ್ಲಿ ಅದೆಷ್ಟು ಚೈತನ್ಯದ ಕಣಗಳೋ, ಯಾರಿಗೂ ಕಂಡುಹಿಡಿಯಲು ಸಾಧ್ಯವಿಲ್ಲ. ಅವು ಎಲ್ಲಿಂದ ಬರುತ್ತವೆ, ಯಾವುದು ನಮ್ಮ ಉಸುರಿನೊಂದಿಗೆ ನಮ್ಮ ಒಳಗೆ ಹೋಗುತ್ತವೆ, ಅಲ್ಲಿ ಅವು ಯಾವ ರೀತಿ ನಮ್ಮ

ಆರೋಗ್ಯದಮೇಲೆ ಪ್ರಭಾವ ಬೀರುತ್ತವೆ ಎನ್ನುವುದು ಪರಮ ರಹಸ್ಯ. ನಮ್ಮೊಳಗೇ ರೋಗಕಾರಕ ಮತ್ತು ರೋಗ ನಿರೋಧಕ ಜೀವಾಣುಗಳು ಕೋಟಿಗಟ್ಟಲೆ ಇವೆ ಎನ್ನುತ್ತಾರೆ ವಿಜ್ಞಾನಿಗಳು. ಅವು ನಮ್ಮ ದೇಹದ ಒಳಪದರಗಳಲ್ಲಿ ಕುಳಿತು ಪರಸ್ಪರ ಕಾದಾಡುತ್ತಿರುತ್ತವೆ. ಯಾವುದರ ಕೈ, ಮೇಲಾದರೆ, ಹಾಗೆ ನಮ್ಮ ಅರೋಗ್ಯ ನಮ್ಮ ಬದುಕುವು ಶೈಲಿಯಂತೆ ಅವುಗಳ ಪರಿಮಾಣ (ratio) ಬದಲಾಗುತ್ತಾ ಹೋಗುತ್ತದೆ.

ಅದೇ ರೀತಿ ನಾವು ನೋಡುವ, ಕೇಳುವ ಮತ್ತು ನಮ್ಮ ಪ್ರಮೇಯವೇ ಇಲ್ಲದೆ ನಮ್ಮ ಗಮನಕ್ಕೆ ಬರುವ ವಿಚಾರಗಳೂ ಸಹ ನಮ್ಮೊಳಕ್ಕೆ ನುಗ್ಗುವ ಜೀವಾಣುಗಳಂತೆಯೇ, ನಮ್ಮೊಳಕ್ಕೆ ನುಗ್ಗಿ ತಮ್ಮ ಪ್ರಭಾವವನ್ನು ಬೀರುತ್ತವೆ. ಕೆಲವು ನಮ್ಮ ಒಳಿತಿಗೆ ಪೂರಕವಾಗಿ, ಕೆಲವು ಮಾರಕವಾಗಿ. ಆದರೆ ನಮ್ಮ ಒಳಕ್ಕೆ ನುಗ್ಗಿದ ಯಾವ ವಿಚಾರ ನಮ್ಮ ಮೇಲೆ ಎಂತಹ ಪ್ರಭಾವ ಬೀರುತ್ತದೆ ಮತ್ತು ಆ ಪ್ರಭಾವದ ಪರಿಣಾಮ ನಮ್ಮ ಮೇಲೆ ಎಷ್ಟು ಗಾಢ ಮತ್ತು ಧೀರ್ಘಕಾಲಕ್ಕೆ ಆಗುತ್ತದೆ ಎನ್ನುವುದನ್ನು ಹೇಳಲು ಸಾಧ್ಯವಿಲ್ಲ. ಇದು ಬಹಳ ರಹಸ್ಯ ಮತ್ತು ನಿಗೂಢ. ಎಂದೋ ನಡೆದ ಘಟನೆಗಳು ಬಹಳ ಕಾಲದವರೆಗೆ ನಮ್ಮೊಳಗೇ ಇದ್ದು ನಮ್ಮ ಮೇಲೆ ಪ್ರಭಾವ ಬೀರತ್ತಲಿರಬಹುದು.

ಈ ಚೈತನ್ಯದಾಯಕವಾದ ಜೀವಾಣುಗಳನ್ನು ಹೇಗೆ ಬೆಳೆಸಿಕೊಳ್ಳಬೇಕು ಮತ್ತು ರೋಗಕಾರಕ ರೋಗಾಣುಗಳ ನಿವಾರಣೆ ಹೇಗೆ ಮಾಡಿಕೊಳ್ಳಬೇಕು ಎಂದು ನಾವು ಪ್ರಯತ್ನ ಪಡುತ್ತೇವೆಯೋ ಅದೇ ರೀತಿ ನಮ್ಮ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ನಮ್ಮೊಳಗೆ ನುಗ್ಗುವ ಆಲೋಚನೆಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ನಮಗೆ ಯಾವುದು ಒಳಿತೋ ಅದನ್ನು ಉಳಿಸಿಕೊಂಡು ಮಾರಕವಾದದ್ದನ್ನು ಹೊರತಳ್ಳುವ ಪ್ರಯತ್ನವನ್ನು ಮಾಡಬೇಕು. "ಪ್ರಾರಬ್ಧಗತಿಯ ನಿಶ್ಚಯದಿ ತಿಳಿವವರಿಲ್ಲ" ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ ನಮಗೆ ನಮ್ಮ ದೇಹ ಮನಸ್ಸು ಬುದ್ದಿಗಳೊಳಕ್ಕೆ ನುಗ್ಗುವ ಚೈತನ್ಯ ಕಣಗಳು, ಕೀಟಾಣುಗಳು, ರೋಗಾಣುಗಳು, ವಿಷಯಗಳು, ವಿಚಾರಗಳು ಎಲ್ಲವೂ ನಮ್ಮ ಪ್ರಾರಬ್ಧ ಕರ್ಮದನುಸಾರವಾಗಿ ಬರುತ್ತದೆ. ಪ್ರಾರಬ್ಧವನ್ನು ಅನುಭವಿಸಿಯೇ ತೀರಬೇಕು. ಏಕೆಂದರೆ ಅದನ್ನು ನಾವೇ ಆರ್ಜಿಸಿದ ಆಸ್ತಿ. ಅದನ್ನು ನಾವೇ ಅನುಭವಿಸಿ ಕರಗಿಸಬೇಕು. ಈ ಎಲ್ಲವೂ ರಹಸ್ಯವಾಗಿ, ನಮ್ಮ ಪ್ರಮೆಯವಿಲ್ಲದೆ ನಡೆದರೂ ನಮ್ಮ ಮೇಲೆ ಖಂಡಿತ ಪ್ರಭಾವ ಬೀರುತ್ತಾದ್ದರಿಂದ "ಆ ರಹಸ್ಯಕ್ಕೆರಗೊ" ಎಂದು ಡಿವಿಜಿಯವರು ಹೇಳುವಂತೆ ಆ ರಹಸ್ಯಕ್ಕೆ ನಮಸ್ಕರಿಸಿ ಶರಣಾಗುವುದೇ ಒಳಿತು.

**ಮುಕ್ತಕ 844**

**ಬೀಳಿಸದಿರೆ ನಿನ್ನ ನೆರಳನಿತರರ ಮೇಲೆ ।**

**ಬಾಳಿಕೊಳುಗವರು ತಂತಮ್ಮ ಬೆಳಕಿನಲಿ ॥**

**ಮೇಲುಬೀಳುಗಳಾರ್ಗದಂತೂ ನೀನೇನರಿವೆ? ।**

**ತಾಳದಿರು ಗುರುತನವ – ಮಂಕುತಿಮ್ಮ ॥**

ಬೀಳಿಸದಿರೆಲೊ=ಬೀಳಿಸದೆ+ಇರು, ನೆರಳನಿತರರ=ನೆರಳನು+ಇತರರ,

ಮೇಲುಬೀಳುಗಳಾರ್ಗದೆಂತೊ=ಮೇಲು+ಬೀಳುಗಳು+ಆರಿಗೆ+ಅದು+ಎಂತೋ,

ನೀನೇನರಿವೆ=ನೀನು+ಏನ್+ಅರಿವೆ, ತಾಳದಿರು=ತಾಳದೆ ಇರು

ನಿನ್ನ ನೆರಳಿನ ಛಾಯೆಯನ್ನು ಇತರರ ಮೇಲೆ ಬೀಳಿಸದೆ ಇರು. ಅವರು ತಮ್ಮದೇ ಬೆಳಕಿನಲ್ಲಿ ಬಾಳಿಕೊಳ್ಳಲಿ. ಯಾರಿಗೆ ಯಾವುದು ಮೇಲು ಅಥವಾ ಕೀಳು ಎನ್ನುವುದನ್ನು ನೀನು ಏನು ಅರಿತುಕೊಂಡಿದ್ದೀಯೆ? ನೀನು ಗುರು ಪದವಿಯನ್ನು ತಾಳದೆ ಇರು ಎಂದು ಒಂದು ಸೂಕ್ತ ಬುದ್ಧಿವಾದವನ್ನು ನಮಗೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ನನಗೆ ಎಲ್ಲಾ ಗೊತ್ತು, ನಾ ಹೇಳಿದಂತೆ ಕೇಳು, ನಾ ಹೇಳಿದಂತೆ ಕೇಳಿದರೆ ನಿನಗೆ ಒಳಿತಾಗುತ್ತದೆ, ಇಲ್ಲದಿದ್ದರೆ ಹಾಳಾಗಿಹೋಗ್ತಿಯಾ" ಎಂದು ಹೇಳುವವರನ್ನು ನಾವು ಬಹಳಷ್ಟು ಜನರನ್ನು ನೋಡುತ್ತೇವೆ ಅಲ್ಲವೇ? ಇದು ಅಜ್ಞಾನದ ಪರಮಾವಧಿ. ಇದು “ಅಂಧ ಆತ್ಮಾಭಿಮಾನ' ದ ವಿಷಯ. ಯಾರಿಗೂ ಎಲ್ಲವೂ ಗೊತ್ತಿರುವುದಿಲ್ಲ. ಆದರೂ ನಮಗೆಲ್ಲಾ ಗೊತ್ತು ಎನ್ನುವ ರೀತಿಯಲ್ಲಿ ಬೀಗುತ್ತಿರುತ್ತಾರೆ ಕೆಲವರು. ನಾಲ್ಕು ಜನ ಇವರನ್ನು 'ಭೇಷ್' ಎನ್ನಬೇಕು, ಹೊಗಳಬೇಕು ಹಾಗಾದರೆ ಇವರ 'ಅಹಂಕಾರ' ತಣಿಯುತ್ತದೆ. ಇದು ತಪ್ಪು. ಹಾಗೆ ಮಾಡಬೇಡ ಎಂದು ಆದೇಶ ನೀಡಿದ್ದಾರೆ ಮಾನ್ಯ ಡಿವಿಜಿಯವರು.

ಏಕೆಂದರೆ ಪ್ರತಿಯೊಬ್ಬರಿಗೂ ಅವರವರದೇ ಆದ ತಿಳುವಳಿಕೆ, ಜ್ಞಾನ, ಬುದ್ಧಿಶಕ್ತಿ ಮತ್ತು ಕಾರ್ಯಕ್ಷಮತೆಯಿರುತ್ತದೆ. ಅದರ ಬಲದಿಂದ ಅವರು ಸ್ವಯಂ ಪ್ರಕಾಶಿತರಾಗಿ ಬೆಳಗುತ್ತಾರೆ. ನಮಗೆ ನಮ್ಮ ಬುದ್ಧಿಬಲದ, ಯೋಗ್ಯತೆಯ ಮತ್ತು ಕ್ಷಮತೆಯ ಸಂಪೂರ್ಣ ಅರಿವೇ ಇರುವುದಿಲ್ಲ. ನಮಗೆ ಹಿತವಾವುದು ಎಂದು ನಮಗೆ

ಗೊತ್ತಿಲ್ಲದಿರುವಾಗ, ಮತ್ತೊಬ್ಬರಿಗೆ ಹಿತಭೋದನೆ ಎಷ್ಟು ಸೂಕ್ತ? ಮತ್ತೊಬ್ಬರ ತಿಳುವಳಿಕೆ, ಜ್ಞಾನ, ಬುದ್ಧಿಶಕ್ತಿ ಮತ್ತು ಕಾರ್ಯಕ್ಷಮತೆಗಳನ್ನು ಅರಿಯದೆ ಮತ್ತೊಬ್ಬರಿಗೆ ಬುದ್ಧಿಹೇಳುವ ದುಷ್ಟತನವೇಕೆ? ಅಹಂಕಾರದ ಮತ್ತು ಅಧಿಕಾರದ ಮದದಿಂದ ಮೆರೆಯುವ ಇಂತಹ ವ್ಯಕ್ತಿಗಳನ್ನು ನಾವು ಎಲ್ಲೆಲ್ಲೂ ಕಾಣುತ್ತಿರುತ್ತೇವೆ ಅಲ್ಲವೇ? ಆದ್ದರಿಂದ, ನೀನು ನಿನ್ನ ಪ್ರಭಾವವನ್ನು ಬೇರೆಯವರ ಮೇಲೆ ಬೀರದಿರು, ಅವರನ್ನು ತಮ್ಮ ಸ್ವಂತ ಕ್ಷಮತೆಯಿಂದ "ಅರಳಲು ಬಿಡು" ಎಂದು ಒಂದು ಸ್ಪಷ್ಟ ಆದೇಶವನ್ನು ನೀಡಿದ್ದಾರೆ ಡಿವಿಜಿಯವರು.

2ಸ೦5

| ಕಗ್ಗರಸಧಾರೆ | ಗುರುಪದವಿ ಬೇಡ 844 : 849 |
|---|---|

'ತಾಳದಿರು ಗುರುತನವ' ಎಂದೂ ಹೇಳಿದ್ದಾರೆ. ಇದನ್ನು ಜುಜಚಿಛಿಣುಛಿ ಟಿಚಿಣಣಡಿಜಿ, ಎಂದರೆ 'ನೀತಿಬೋಧಕ ' ಪ್ರವೃತ್ತಿ ಎನ್ನುತ್ತಾರೆ. ನಮ್ಮ ಸುತ್ತಲಿನ ಬಹಳಷ್ಟು ಜನರಲ್ಲಿ ಅಂತಹ ಸ್ವಭಾವವನ್ನು ನಾನು ಕಾಣಬಹುದು. ಅದೊಂದು ಮಾನಸಿಕ ರೋಗ, ಸದಾಕಾಲ ಯಾರಿಗಾದರೂ ಏನನ್ನಾದರೂ ಹೇಳುತ್ತಿರುವ, ಅಥವಾ ಅನ್ಯರನ್ನು ತಿದ್ದುತ್ತಿರುವ ಸ್ವಭಾವ. ಇದನ್ನು ಬಿಡಬೇಕು. ಕಾರಣ, ಅಂತಹ ಸ್ವಭಾವ ನಮಗಿದ್ದರೆ ನಾವು ನಮ್ಮಷ್ಟಕ್ಕೆ 'ನಾವು ಪರಿಪೂರ್ಣರು' ಎಂಬ ದುರ್ಭಾವ ಮತ್ತು ಅಹಂಕಾರದಿಂದ ಮುಂದೆ ಕಲಿಯುವ ಮತ್ತು ಬೆಳೆಯುವ ಪ್ರಯತ್ನವನ್ನೇ ಮಾಡುವುದಿಲ್ಲ. ಯಾರೂ ಪರಿಪೂರ್ಣರಲ್ಲದೆಯೂ ಮತ್ತು ಎಲ್ಲರಿಗೂ ಸದಾ ಕಾಲಾ ಕಲಿಯುವ ಅವಶ್ಯಕತೆಯಿರುವುದರಿಂದ ಅಂತಹ ನೀತಿಬೋಧಕ ಸ್ವಭಾವವನ್ನು ಬಿಟ್ಟರೆ ಮುಂದಿನ ಕಲಿಕೆ ಸಾಧ್ಯ.

**ಮುಕ್ತಕ - 845**

**ಪೆರತೊಂದು ಬಾಳ ನೀನಾಳ್ವ  ಸಾಹಸವೇಕೆ ? |**

**ಹೊರೆ ಸಾಲದೇ ನಿನಗೆ, ಪೆರರ್ಗೆ ಹೊಣೆವೋಗೆ? ||**

**ಮರದಿ ನನೆ ನೈಜದಿಂದರಳೆ ಸೊಗವೆಲ್ಲರ್ಗೆ |**

**ಸೆರೆಮನೆಯ ಸೇಮವೇಂ? – ಮಂಕುತಿಮ್ಮ ||**

ಪೆರತೊಂದು=ಪೆರತು+ಒಂದು ಪೆರತು=ಪರರಿಗೆ ಸೇರಿದ, ನೀನಾಳ್ವ=ನೀನು+ಆಳ್ವ,
ನೈಜದಿಂದರಳೆ=ನಿಜದಿಂದ+ಅರಳೆ, ಸೊಗವೆಲ್ಲರ್ಗೆ=ಸೊಗವು+ಎಲ್ಲರ್ಗೆ,
ಪೆರರ್ಗೆ=ಪರರಿಗೆ, ನನೆ=ಮೊಗ್ಗು, ಸೇಮ=ಕ್ಷೇಮ,

ಬೇರೊಬ್ಬರ ಬದುಕನ್ನು ಆಳುವ ಆಸೆ ಮತ್ತು ಸಾಹಸ ನಿನಗೇಕೆ? ನೀನು ಹೊತ್ತು ತಂದಿರುವ ನಿನ್ನ ಜೀವನದ ಹೊರೆ ನಿನಗೆ ಸಾಲದೇ? ಅನ್ಯರಿಗೆ ಹೊರೆಯಾಗುವಂತಹ ನಿನ್ನ ಸಲಹೆ ಸಂದೇಶಗಳು ಅವರಿಗೇಕೆ? ಮರದಲ್ಲಿನ ಮೊಗ್ಗು ಸಹಜವಾಗಿ ಅರಳಿದರೆ ಅದು ಸೊಗಸು. ನಿರ್ಬಂಧದಲ್ಲಿ ನಡೆಸುವ ಸೆರೆಮನೆಯ ವಾಸ ಕ್ಷೇಮವೇ? ಎಂದು ಪ್ರಶ್ನಿಸುತ್ತಾ ಅನ್ಯರ ಜೀವನದಲ್ಲಿ ಹಸ್ತಕ್ಷೇಪ ಮಾಡದಿರುವುದು ಸೂಕ್ತವೆನ್ನುವ ಸಂದೇಶವನ್ನು ನಮಗೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅನಾವಶ್ಯಕವಾಗಿ ಮತ್ತೊಬ್ಬರ ಜೀವನದಲ್ಲಿ ತಲೆಯಿಟ್ಟು, ಅವರಿಗೆ ಬೇಕಿಲ್ಲದಿದ್ದರೂ, ಸಲಹೆಗಳನ್ನು ನೀಡುವುದು ಮತ್ತು ಅವರನ್ನು ತಮ್ಮ ಸಲಹೆಗಳನ್ನು ಪಾಲಿಸಲು ನಿರ್ಬಂಧಿಸುವುದು ಸರಿಯಲ್ಲ. ನಾವು ಕೊಡುವ ಸಲಹೆಗಳು ಅವರ ಸಮಸ್ಯೆಗೆ ಸಮಸ್ಯೆಗೆ ಮತ್ತು ಆ ಸಮಸ್ಯೆಯನ್ನು ಪರಿಹರಿಸಬೇಕಾದ ಅವರ ಮನೋಭಾವಕ್ಕೆ ಸೂಕ್ತವಾಗಿಲ್ಲದಿರಬಹುದು. ಸಲಹೆ ನೀಡುವುದೇ ತಪ್ಪಾದಾಗ, ಅದನ್ನು ಪಾಲಿಸಲು ನಿರ್ಬಂಧಿಸುವುದು ಕೇವಲ





ಅಹಂಕಾರ ಪೂರಿತ ಉದ್ಧಟತನ. ಅದರಿಂದ ಅನ್ಯರಿಗೆ ನೋವಾಗುತ್ತದೆ. ಕೆಲವು ವೇಳೆ ಅನ್ಯರಿಗೆ ಉಪಕಾರವಾಗಲಿ ಎನ್ನುವ ಸದುದ್ದೇಶದಿಂದಲೇ ನಾವು ಸಲಹೆ ನೀಡಿದರೂ ಅದು ಅವರಿಗೆ ಹೊರೆಯಾಗಬಹುದು ಅಥವಾ ಅವರ ದುಃಖಕ್ಕೆ ಕಾರಣವಾಗಬಹುದು.

ಪ್ರತಿಯೊಬ್ಬರಿಗೂ ಅವರವರದೇ ಆದಂತಹ ಜೀವನವಿರುತ್ತದೆ. ಅವರು ಹೊತ್ತು ತಂದಂತಹ ಕರ್ಮ ಸಂಚಯನವಿರುತ್ತದೆ. ಅದನ್ನು ತೀರಿಸಲೇ ಬಹಳ ಶ್ರಮಪಡಬೇಕಾಗುತ್ತದೆ. ಹಾಗಿರುವಾಗ ಅನ್ಯರ ಹೊರೆಯನ್ನು ಹೊರಲು ಸಾಧ್ಯವೇ? ಅಂತಹ ಪ್ರಯತ್ನವನ್ನು ಪಟ್ಟರೆ ಮತ್ತಷ್ಟು 'ಕರ್ಮ' ಸಂಚಯನವಾದಂತೆ ಆಗುತ್ತದೆ. ಹಾಗಾಗಿ ಅನಾವಶ್ಯಕವಾಗಿ ಮತ್ತೊಬ್ಬರ ಜೀವನದಲ್ಲಿ ಹಸ್ತಕ್ಷೇಪ ಸಲ್ಲ. ಅವರನ್ನು ಸಹಜವಾಗಿ ಅವರ ಜೀವನವನ್ನು ಬದುಕಲು, ಅವರವರ ಕರ್ಮವನ್ನು ಮಾಡಲು ಬಿಟ್ಟರೆ ಅವರಿಗೆ ಉಪಕಾರಮಾಡಿದಂತೆಯೇ, ಅಲ್ಲವೇ? ಗಿಡದಲ್ಲಿ ಮೂಡಿದ ಮೊಗ್ಗನ್ನು ಬಲವಂತದಿಂದ ಅರಳಿಸುವುದಕ್ಕಿಂತ, ಅದನ್ನು ಸಹಜವಾಗಿ ಅರಳಲು ಬಿಟ್ಟರೆ ಸೊಗಸಲ್ಲವೇ?

ಸೆರೆಮನೆಯಲ್ಲಿರುವಾತ, ಸೆರೆಮನೆಯ ಅಧಿಕಾರಿಗಳ ಸುರಕ್ಷತೆಯಲ್ಲಿದ್ದರೂ, ಬಂಧನದಲ್ಲಿರುವುದರಿಂದ ಆ ವಾಸ ಹಿತವೆನಿಸುವುದಿಲ್ಲ ಅಲ್ಲವೇ? ಹಾಗೆ ನಮಗೆ ಯಾವುದಾದರೂ ರೀತಿಯ ಬಂಧನದ ಬದುಕು ಅಸಹನೀಯವಾಗುತ್ತದೆ. ಮನಸ್ಸು ಮುಕ್ತವಾಗಿರಲು ಬಯಸುತ್ತದೆ. ನಮ್ಮನ್ನು ಬಂಧನಕ್ಕೊಳಗಾಗಿಸುವ ಯಾವುದೇ ರೀತಿಯ ಸಹಾಯ ಅಥವಾ ಸಲಹೆಗಳನ್ನು ಯಾರಿದಲೂ ಪಡೆಯುಲು ಮನಸ್ಸು ಒಪ್ಪುವುದಿಲ್ಲ. ಹಾಗೆ ಒಪ್ಪದಿದ್ದರೆ ಮಾತ್ರ ಸ್ವತಂತ್ರವಾಗಿ ಬದುಕಲು ಸಾಧ್ಯ. ಹಾಗಾದರೆ ಪರರಿಗುಪಕಾರ ಮಾಡಬಾರದೆ? ಅಥವಾ ಜಗತ್ತಿನಲ್ಲಿ ಯಾರಿಂದಲೂ ಉಪಕಾರವನ್ನು ಪಡೆಯದೆ ಬದುಕಲು ಸಾಧ್ಯವೇ? ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಉತ್ತರವಾಗಿ "ಪರರಿಗೆ ಹಿಂಸೆಯಾಗುವಂತ ಅಥವಾ ಹೊರೆಯಾಗುವಂತಹ ಉಪಕಾರವನ್ನು ಮಾಡುವುದಾಗಲೀ ಅಥವಾ ನಮ್ಮನ್ನು ದಾಕ್ಷಿಣ್ಯದ ಬಂಧನಕ್ಕೆ ಒಳಪಡಿಸುವ ಅಥವಾ ನಮಗೆ ಹೊರೆ ಅಥವಾ ಹಿಂಸೆಯಾಗುವಂತಹ ಉಪಕಾರವನ್ನು ಪಡೆಯುವುದಾಗಲೀ ಮಾಡದೆ ಇದ್ದರೆ, ನಿರಾಳವಾದ ಬದುಕ ಬದುಕಬಹುದು. ಇದೂ ಸಹ ಸಾರ್ಥಕ ಬದುಕನ್ನು ಬದುಕುವ ಮತ್ತೊಂದು ವಿಧಾನ, ಸಾಧ್ಯವಾದಷ್ಟು ಮಟ್ಟಿಗೆ ಅಂತಹ ಜೀವನವನ್ನು ನಡೆಸಿದರೆ ಮನಸ್ಸಿಗೆ ಸುಖ.



| ಕಗ್ಗರಸಧಾರೆ | ಗುರುಪದವಿ ಬೇಡ 844 - 849 |
| --- | --- |

ಮುಕ್ತಕ — 846

ಮರಣದಿಂ ಮುಂದೇನು? ಪ್ರೇತವೋ? ಭೂತವೋ? |

ಪರಲೋಕವೋ?ಪುನರ್ಜನ್ಮವೋ? ಅದೇನೋ ! ||
ತಿರುಗಿ ಬಂದವರಿಲ್ಲ, ವರದಿ ತಂದವರಿಲ್ಲ |
ಧರೆಯ ಬಾಳ್ಗದರಿನೇಂ - ಮಂಕುತಿಮ್ಮ ||

ಬಾಳ್ಗದರಿನೇಂ=ಬಾಳ್ಗ +ಅದರಿನ್+ಏಂ

ಮರಣದ ನಂತರವೇನು? ನಾವು ಪ್ರೇತವಾಗುತ್ತೇವೇಯೋ, ಭೂತವಾಗುತ್ತೇವೆಯೋ, ಪರಲೋಕಕ್ಕೆ, ಸೇರುತ್ತೇವೆಯೋ ಅಥವಾ ಮತ್ತೆ ಜನ್ಮಪಡೆದುಕೊಳ್ಳುತ್ತೇವೆಯೋ, ಅದೇನೋ ಗೊತ್ತಿಲ್ಲ. ಏಕೆಂದರೆ ಮರಣಹೊಂದಿದವರಾರೂ ಹಿಂತಿರುಗಿ ಬಂದಿಲ್ಲ ಮತ್ತು ನಮಗೆ ಯಾವ ರೀತಿಯ ವರದಿಯನ್ನೂ ನೀಡಿಲ್ಲ. ವಿಷಯಗಳನ್ನು ತಿಳಿದುಕೊಳ್ಳುವುದರಿಂದ, ಇಲ್ಲಿನ ಬದುಕು, ಯಾವ ರೀತಿಯಿಂದಲೂ ಬದಲಾಗುವುದಿಲ್ಲ. ಹಾಗಾಗಿ ಅದರ ಬಗ್ಗೆ ಚಿಂತಿಸುವುದು ಬೇಡ ಎನ್ನುವ ಸಂದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮರಣವೊಂದು ರಹಸ್ಯ ಏಕೆಂದರೆ ದೇಹ, ಮನಸ್ಸು, ಬುದ್ಧಿ ಮತ್ತು ಚೇತನಗಳು ಒಟ್ಟಿಗೆ ಸೇರಿ ಆಗಿರುವುದು ನಮ್ಮ ಅಸ್ತಿತ್ವ, ಅವುಗಳೆಲ್ಲಾ ತಮ್ಮ ಸ್ವಸ್ಥಾನ ಸೇರುವುದರಲ್ಲಿ ನಮ್ಮ ಅಂತ್ಯವಾಗುತ್ತದೆ. ನಮ್ಮಲ್ಲಿರುವ ಸದ್ವಸ್ತು ಆತ್ಮ'. ಇದು ಅಣುಚೇತನ. ಇದು ಅನಾದಿ, ಅನಂತ. ನಮ್ಮ ಈ ರೂಪದ ಅಸ್ತಿತ್ವ ಅಂತ್ಯವಾದರೂ 'ಆತ್ಮ'ಕ್ಕೆ ಅಂತ್ಯವಿಲ್ಲ ಎನ್ನುವುದು ಸನಾತನದ ನಂಬಿಕೆ. ಆದರೆ ಆ ಆತ್ಮ ಈ ದೇಹವನ್ನು ಬಿಟ್ಟು ಹೊರಟಾಗ ಎಲ್ಲಿಗೆ ಹೋಗುತ್ತದೆ ಎಂದು ನಮಗೆ ಗೊತ್ತಿಲ್ಲ. ಅದು ಪ್ರೇತವಾಗಿ ಇಲ್ಲಿಯೇ ಸುತ್ತುತ್ತಿರುತ್ತದೆಯೋ ಅಥವಾ ಈ ಜಗತ್ತಿನ ವಾಸನೆಯನ್ನು ಬಿಡಲಾಗದೆ ಭೂತವಾಗುತ್ತದೆಯೋ ಅಥವಾ ನಮ್ಮ ಭೂಮಿಯಂತಹ ಬೇರೆ ಯಾವುದಾದರೂ ಲೋಕದಲ್ಲಿ ಬೇರೆ ರೂಪ ಧರಿಸಿ ಜನ್ಮ ತಳೆಯುವುದೋ ಅಥವಾ ಮತ್ತೆ ಇದೇ ಭೂಮಿಯಲ್ಲಿ ಪುನರ್ಜನ್ಮ ತಳೆಯುವುದೋ, ಯಾರಿಗೂ ಗೊತ್ತಿಲ್ಲ. ಏಕೆಂದರೆ ಹೋದ ಆತ್ಮ ಹಿಂತಿರುಗಿ ಬಂದು 'ನಾನು ಇಂತಹ ಕಡೆಗೆ ಹೋಗಿ ಬಂದೆ ಎಂದು ಯಾರಿಗೂ ಹೇಳಿಲ್ಲ ಮತ್ತು ಅದು ಸಾಧ್ಯವೂ ಇಲ್ಲ.

ಹಾಗಾಗಿ ನಾವು ಯಾವುದನ್ನು ಅರಿಯಲಾಗುವುದಿಲ್ಲವೋ ಅಥವಾ ಯಾವುದರ ಬಗ್ಗೆ ಬೇರೆಯವರು ಎಷ್ಟು ವ್ಯಾಖ್ಯಾನಮಾಡಿದರೂ, ಪ್ರಮಾಣದ ಕೊರತೆಯಿಂದ ನಮಗೆ ನಂಬಿಕೆ ಬರುವುದಿಲ್ಲವೋ ಅಂತಹ ವಿಚಾರಗಳನ್ನು ಬಿಟ್ಟು ಕೇವಲ ಇಲ್ಲಿನ ಮತ್ತು ಇಂದಿನ ಬದುಕನ್ನು ಬದುಕಬೇಕು ಎನ್ನುವುದೇ ಮಾನ್ಯ ಗುಂಡಪ್ಪನವರ ಅಭಿಪ್ರಾಯ. ಏಕೆಂದರೆ ಮೃತ್ಯುವಿನ ನಂತರ ನಾವು ಏನಾಗುತ್ತೇವೆ ಎಂಬ ವಿಷಯಕ್ಕೆ ಸಾವಿರಾರು ರೀತಿಯ ವ್ಯಾಖ್ಯಾನಗಳಿವೆ. ಅವು ಕೇವಲ ವ್ಯಾಖ್ಯಾನಗಳೇ ಹೊರತು ಅವಕ್ಕೆ ಪ್ರಮಾಣಗಳಿಲ್ಲ. ನಮಗೆ ಗೊತ್ತಿಲ್ಲದ

2ಸ೦೪

ಕಗ್ಗರಸಧಾರೆ ಗುರುಪದವಿ ಬೇಡ 844 - 849

'ವಿಷಯವನ್ನು ನಂಬುವುದನ್ನೇ 'ಮೂಢನಂಬಿಕೆ' ಎನ್ನುವುದು ಸಾಮಾನ್ಯ ಅಭಿಪ್ರಾಯ, ಹಾಗಾದರೆ ನಮ್ಮ ಸನಾತನದಲ್ಲಿ ಬರುವ ಸ್ವರ್ಗ ನರಕಗಳ, ಪಿತೃಲೋಕಗಳ, ಪಾಪ ಪುಣ್ಯಗಳ ಮತ್ತು ಮೃತ್ಯುವಿನ ನಂತರ ಆತ್ಮದ ಪ್ರಯಾಣದ ವಿಷಯಗಳೆಲ್ಲಾ 'ಅಸತ್ಯವೇ?' ಎನ್ನುವ ಪ್ರಶ್ನೆ ನಮ್ಮ ಮನಸ್ಸುಗಳಲ್ಲಿ ಉದ್ಭವಿಸಬಹುದು.

ಅದನ್ನು ಅಸತ್ಯ ಎಂದು ಹೇಳಲು ಆಗುವುದಿಲ್ಲ. ಏಕೆಂದರೆ ಆ ವಿಚಾರಗಳೆಲ್ಲಾ ನಮ್ಮ ಋಷಿಮುನಿಗಳು ತಮ್ಮ ಧೀರ್ಘಕಾಲದ ತಪಸ್ಸಿನಿಂದ ಕಂಡುಕೊಂಡು ವಿಚಾರಗಳು. ಅವರ ಶಕ್ತಿ ನಮಗಿಲ್ಲ, ಅವರಂತೆ ತಪಸ್ಸನ್ನು ನಾವು ಮಾಡಲಾಗುವುದಿಲ್ಲ. ಹಾಗಾಗಿ ನಮಗೆ ಆ ವಿಚಾರಗಳ ಕಲ್ಪನೆಯನ್ನೂ ಮಾಡಲಾಗುವುದಿಲ್ಲ. ನಮ್ಮ ವಿಚಾರದ ಪರಿಧಿಯೊಳಕ್ಕೆ ಯಾವುದು ಬರುವುದಿಲ್ಲವೋ ಅದನ್ನೆಲ್ಲಾ 'ಅಸತ್ಯ' ಎಂದು ಹೇಳಲಾಗುವುದಿಲ್ಲ. ಇಂದು, ಇಲ್ಲಿ, ಈ ಬದುಕಿನಲ್ಲಿ ನಮ್ಮ ನಡವಳಿಕೆಯಿಂದ ಮುಂದೆ ಉತ್ತಮಲೋಕಗಳು ಸಿಗುತ್ತದೆ ಎನ್ನುವುದು ನಮ್ಮ ಸನಾತನದ ಸಿದ್ಧಾಂತ. ಆದರೆ ಮಾನ್ಯ ಗುಂಡಪ್ಪನವರು ಹೇಳುವಂತೆ ಅಲ್ಲಿಗೆ ಹೋಗಿಬಂದರಾರೂ ಇಲ್ಲ ಮತ್ತು ಅಲ್ಲಿನ ವಿಚಾರಗಳನ್ನು ನಮಗೆ ಹೇಳಿದವರಾರೂ ಇಲ್ಲವಾದ್ದರಿಂದ 'ಮೃತ್ಯು'ವಿನ ನಂತರದ ವಿಚಾರಗಳು ಇಂದಿನ ಬದುಕಿನ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎನ್ನುವುದು ಪರಮ ಸತ್ಯ . ಆದರೆ ಇಂದಿನ ಬದುಕಿನಲ್ಲಿ ನಾವು 'ಸರಿ' ಯಾಗಿದ್ದರೆ ಈಗಿರುವ ಜೀವನ ಖಂಡಿತ ಉತ್ತಮವಾಗಿರುವುದೆಂದು ಹೇಳಬಹುದು, ಅಲ್ಲವೇ?

**ಮುಕ್ತಕ - 847**

**ನೆಲದ ಬೇಸಾಯ ತಾನೊಳ್ಳಿತಾಗಿರೆ ನಿನಗೆ |**

**ಫಲವದೆಂತಹುದೆಂಬ ಶಂಕೆಗೆಡೆಯುಂಟೆ? ||**

**ಒಳಿತರೊಳೆ ನೀಂ ಬಾಳು: ಪರವದೆಂತಿರ್ದೊಡೇಂ? |**

**ಇಳೆಯೆ ಬಾಗಿಲು ಪರಕೆ – ಮಂಕುತಿಮ್ಮ ||**

ತಾನೊಳ್ಳಿತಾಗಿರೆ=ತಾನ್+ಒಳ್ಳಿತು+ಆಗಿರೆ, ಫಲವದೆಂತಹುದೆಂಬ=ಫಲವು+ಅದು+ಎಂತು+ಅಹುದು+ಎಂಬ,

ಶಂಕೆಗೆಡೆಯುಂಟೆ=ಶಂಕೆಗೆ+ಎಡೆ +ಉಂಟೆ, ಒಳಿತರೊಳೆ=ಒಳಿತರ್+ಒಳೆ,

ಪರವದೆಂತಿರ್ದೊಡೇಂ=ಪರವು+ಅದು+ಎಂತು+ಇರ್ದೊಡೆ +ಏಂ

ಶಂಕೆ=ಅನುಮಾನ, ಎಡೆ=ಸ್ಥಾನ, ಇಳೆಯೆ=ಭೂಮಿಯ, ಪರವು=ನಂತರದ, ಮೇಲಿನ

ಹೇಗೆ, ರೈತ ತನ್ನ ನೆಲದ ಬೇಸಾಯವನ್ನು ಸೂಕ್ತ ರೀತಿಯಲ್ಲಿ ಮಾಡಿದ್ದರೆ ಫಸಲು ಹೇಗೆ ಬರುತ್ತದೋ? ' ಎನ್ನುವ ಅನುಮಾನ ಪಡಬೇಕಾಗಿಲ್ಲವೋ, ಅದೇ ರೀತಿ ಒಳ್ಳೆಯತನದಿಂದ ಬಾಳಿದರೆ ಬದುಕಿನ ನಂತರ ಎಂತಹ ಫಲಗಳು ಸಿಗುತ್ತವೆಯೋ ಎಂದು ಚಿಂತಿಸುವ ಅಗತ್ಯವೇ ಇಲ್ಲ, ಏಕೆಂದರೆ ಈ ಭೂಮಿಯ ಜೀವನವೇ ಪರಕ್ಕೆ ಬಾಗಿಲು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.





ಸರಿಯಾದ ಸಮಯಕ್ಕೆ ಉತ್ತು, ನೆಲವನ್ನು ಹದಮಾಡಿ, ಸರಿಯಾದ ಬಿತ್ತನೆಯ ಬೀಜಗಳನ್ನು ಆಯ್ಕೆ ಮಾಡಿ ಬಿತ್ತನೆಯನ್ನು ಮಾಡಿ, ಆ ಬೆಳೆಯ ಅವಶ್ಯಕತೆಯಂತೆ ನೀರನ್ನು ಹನಿಸುತ್ತಾ, ಕಳೆಯನ್ನು ಕೀಳುತ್ತಾ, ಪೈರನ್ನು ಹಸನಾಗಿಟ್ಟುಕೊಂಡರೆ, ಒಳ್ಳೆಯ ಫಸಲು ಕೈಗೆ ಸಿಗುವುದರಲ್ಲಿ ಸಂದೇಹವೇ ಇಲ್ಲ ಅಲ್ಲವೇ?. "ಇಳೆಯೆ ಬಾಗಿಲು ಪರಕೆ' ಎಂದು ಹೇಳುತ್ತಾ, ವೇದೋಪನಿಷತ್ತುಗಳು, ಪುರಾಣಗಳು, ಜಗತ್ತಿನ ಎಲ್ಲಾ ನೀತಿಕತೆಗಳು ಪ್ರತಿಪಾದಿಸುವ ಒಂದು

ಅದ್ಭುತವಾದಂತಹ ತತ್ವವನ್ನು ಕೇವಲ ಮೂರು ಪದಗಳಲ್ಲಿ ಅಡಗಿಸಿಟ್ಟಿದ್ದಾರೆ, ಡಿವಿಜಿಯವರು. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' ಎಂಬಂತೆ.

ಬದುಕನ್ನು ಒಂದು ವ್ಯವಸಾಯಕ್ಕೆ ಹೋಲಿಸಿದರೆ, ಮನಸ್ಸು ಬುದ್ಧಿ ಮತ್ತು ದೇಹಗಳೇ, ಕ್ಷೇತ್ರ ಎಂದರೆ ಭೂಮಿ ಅಥವಾ ನೆಲ. ಕಲಿಕೆಯೇ ಬೀಜ, ವಿದ್ಯಾಭ್ಯಾಸವೇ ವ್ಯವಸಾಯ, ನಿರಂತರ ಸಂಸ್ಕರಣವೇ ಕೃಷಿ, ಸಂಸ್ಕಾರವೇ ಫಲ. ದೇಹವನ್ನು ಸುಸ್ಥಿತಿಯಲ್ಲಿಡಲು ಸೂಕ್ತಾಹಾರ, ವ್ಯಾಯಾಮ ಮತ್ತು ಶಿಸ್ತುಗಳೆಂಬ ಬಿತ್ತನೆ, ಮನಸ್ಸಿನ ಸುಸ್ಥಿತಿಗೆ ಸಂಗ, ಸ್ನೇಹ, ಓದು ವಿದ್ಯಾಭ್ಯಾಸಗಳೇ ಬಿತ್ತನೆ. ಬುದ್ಧಿಗೆ, ದೇಹ ಮತ್ತು ಮನಸ್ಸಿನಲ್ಲಿ ಬಂದು ಸಂಸ್ಕರಣಗೊಂಡಂತಹ ಆಚಾರ ವಿಚಾರಗಳೇ ಸ್ಥಿರವಾಗಿ ಮೊಳಕೆಯೊಡೆದು ಫಲನೀಡುವಂತಹ ಬಿತ್ತನೆ. ಹೀಗೆ ದೇಹ ಮನಸ್ಸು ಮತ್ತು ಬುದ್ಧಿಗಳಿಗೆ ನೀಡುವ ಬಿತ್ತನೆ, ಪೋಷಣೆ ಸರಿಯಾಗಿದ್ದರೆ ಇಲ್ಲಿನ ಜೀವನ ಸುಂದರವಾಗಿರುವುದಲ್ಲಿ ಸಂದೇಹವೇ ಇಲ್ಲ. ಇಲ್ಲಿ ತಂದಂತಹ ಸಂಸ್ಕಾರಗಳನ್ನು ಮತ್ತಷ್ಟು ಸಂಸ್ಕರಿಸಿಕೊಂಡು, ಒಳಬರಮಾಡಿಕೊಳ್ಳುವ ವಿಚಾರಗಳನ್ನು ಸೂಕ್ಷ್ಮವಾಗಿ ಆಯ್ದುಕೊಂಡು, ಹೊಲದಲ್ಲಿ ಕಳೆಯನ್ನು ಕೀಳುವಹಾಗೆ, ನಮ್ಮೊಳಕ್ಕೆ ಬರುವ ಹೊಲಸನ್ನೆಲ್ಲಾ ತಡೆದೋ ಅಥವಾ ತೊಳೆದೋ ಇಲ್ಲವಾಗಿಸಿಕೊಂಡರೆ ನಮ್ಮ ಜೀವನದ ಫಸಲೂ ಉತ್ತಮವಾಗಿರುತ್ತದೆ.

ದುರಾಸೆ, ದುರಾಚಾರ, ದುರ್ಬುದ್ಧಿಗಳಂತಹ ಕಳೆಯ ಬೀಜಗಳು ನಮ್ಮೊಳಕ್ಕೆ ನುಗ್ಗದಂತೆ ತಡೆದು, ಸದಾಚಾರ, ಸದ್ಬುದ್ಧಿ ಮತ್ತು ಸತ್ಸಂಗಗಳಂತಹ ಒಳ್ಳೆಯ ಬೀಜಗಳನ್ನು ನೆಟ್ಟು ಪೋಷಿಸಿ ಆರೈಕೆ ಮಾಡಿದರೆ ಜೀವನ 'ಸಫಲ'ಮಯವಾಗುತ್ತದೆ. ಇಂದಿನ ಬದುಕಿನಲ್ಲಿ ನಾವು 'ಸಂಸ್ಕಾರ'ಗಳ ರೂಪದಲ್ಲಿ ತಂದದ್ದನ್ನು ಸಂಸ್ಕರಿಸಿಕೊಂಡು, ಮತ್ತಷ್ಟು ಒಳ್ಳೆಯದನ್ನು ಅದಕ್ಕೆ ಸೇರಿಸಿಕೊಂಡು ಕಡೆಗೆ ಕೇವಲ 'ಸತ್' ನ್ನೇ ಉಳಿಸಿಕೊಂಡರೆ, ಅವುಗಳ ಬಲದಿಂದ, ನಮ್ಮ ನಂಬಿಕೆಯ 'ಮುಂದಿನ ಜನ್ಮದಲ್ಲಿನ ಜೀವನ ಉತ್ತಮವಾಗಿರುವುದರಲ್ಲಿ ಸಂದೇಹವೇ ಇಲ್ಲ. ನಾವು ಜಗತ್ತಿನಲ್ಲಿ ಕಾಣುವ ವೈವಿಧ್ಯಮಯ ಮತ್ತು ವಿಚಿತ್ರವಾದ ಸ್ಥಿತಿಗೆ ಈ ಕೃಷಿಯೇ ಕಾರಣ. ವ್ಯಕ್ತಿಗಳ ಕೃಷಿ ಸರಿಯಿದ್ದರೆ ಸಮಾಜದ ಕೃಷಿ ಸರಿಯಾಗಿ ಇಡೀ ಸಮಾಜವೇ ಉತ್ತಮವಾಗುವ ಸಾಧ್ಯತೆ ಇದೆ. ಇಂದಿನ ಪರಿಸ್ಥಿತಿಯಲ್ಲಿ ಅಂತಹ ಕೃಷಿಯ ತೀವ್ರವಾದ ಅವಶ್ಯಕತೆ ಇದೆ ಎಂದರೆ ತಪ್ಪಾಗಲಾರದು ಹಾಗಾಗಿ 'ಮುಂದಿನದ್ದನ್ನು ಯೋಚಿಸದೆ 'ಇಂದಿನದ್ದನ್ನು ಸೂಕ್ತರೀತಿಯಲ್ಲಿ ಕಾಪಾಡಿಕೊಂಡರೆ ಮಾನ್ಯ ಗುಂಡಪ್ಪನವರು ಹೇಳುವಂತೆ, ಇಳೆಯ ಬದುಕು ಪರದ ಬದುಕಿಗೆ ಸೂಕ್ತ ಬಾಗಿಲಾಗುವುದರಲ್ಲಿ ಸಂದೇಹವೇ ಇಲ್ಲ.

ಮುಕ್ತಕ - 848

ಸ್ಥಿರ ಹಿಮಾಚಲ ಬೊಮ್ಮ, ಚರ ಜಾಹ್ನವಿಯೆ ಮಾಯೆ ।
ಪರಸತ್ತ್ವಘನದ ವಿದ್ರವರೂಪ ವಿಶ್ವ ॥
ಪರಮಾರ್ಥಕೊಂದಕ್ಷಿ ವ್ಯವಹಾರಕಿನ್ನೊಂದು ।
ಎರಡುಮೊಂದಾಂತರ್ಯ - ಮಂಕುತಿಮ್ಮ ॥

ಪರಮಾರ್ಥಕೊಂದಕ್ಷಿ=ಪರಮಾರ್ಥಕೆ+ಒಂದು+ಅಕ್ಷಿ, ವ್ಯವಹಾರಕಿನೊಂದು=ವ್ಯವಹಾರಕೆ+ಇನ್ನೊಂದು,
ಎರಡುಮೊಂದಾಂತರ್ಯ=ಎರಡುಂ+ಒಂದು+ಆಂತರ್ಯ

ಆಚಲವಾದಂತಹ ಹಿಮಾಲಯ ಪರ್ವತದಂತೆ ಪರಬ್ರಹ್ಮ ವಸ್ತುವು. ಜಗತ್ತಿನ ಮಾಯೆಯೇ ಆ ಹಿಮಾಲಯ ಪರ್ವತದಿಂದ ಹೊರಡುವ ಜಾಹ್ನವಿ, ಎಂದರೆ ಗಂಗಾನದಿಯಂತೆ, ಹಾಗೆಯೇ ಪರಸತ್ವ ಎನ್ನುವುದು ಘನರೂಪವಾದರೆ, ಈ ವಿಶ್ವ ಆ ಪರಸತ್ವದ ದ್ರವ ರೂಪ. ಪರಮಾರ್ಥವನ್ನು ನೋಡುವ ಮತ್ತು ಜಗತ್ತಿನ ವ್ಯವಹಾರವನ್ನು ನೋಡುವ ನಮ್ಮ ದೃಷ್ಟಿ ಬೇರೆಬೇರೆಯಾದರೂ ಎರಡರೊಳಗಿರುವ ಅಂತರಂಗದ ಸತ್ವ ಒಂದೇ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಅದು ಬೇರೆಯಲ್ಲ ಇದು ಬೇರೆಯಲ್ಲ. ಅದೇ ಇದು, ಆದರೆ ರೂಪ ಬೇರೆ. ಭಿನ್ನತೆಯನ್ನು ಕಾಣುವ ನಮ್ಮ ಪ್ರವೃತ್ತಿ ಹೊರಗಿನ ರೂಪವನ್ನು ಮಾತ್ರ ಕಂಡು ಅದು ಬೇರೆ ಇದು ಬೇರೆ ಎನ್ನುವ ಭ್ರಮೆಗೊಳಗಾಗುತ್ತದೆ. ಆ ಭ್ರಮೆಯೇ ಮಾಯೆ. ಮಹಾ ಸ್ಫೋಟದ ಸಿದ್ಧಾಂತ ಮತ್ತು ವೇದಗಳಲ್ಲಿಯೂ ಸಹ ಉಲ್ಲೇಖಗೊಂಡಿರುವ ವಿಷಯವೇನೆಂದರೆ, ಮಾನ್ಯ ಗುಂಡಪ್ಪನವರು ' ಮುಕ್ತಕ - 74' ರಲ್ಲಿ ' ಸುಮ್ಮನೊಬ್ಬಂಟಿಯೆಂತಿಹುದು, ಬೇಸರವಹುದು, ಹೊಮ್ಮುವೆನು ಕೋಟಿರೂಪದಲಿ ನಾನೆಂದು, ಬೊಮ್ಮನೆಳಸಿದನಂತೆ, ಆ ಏಳಸಿಕೆಯೇ ಮಾಯೆ, ನಮ್ಮಿರವು ಮಾಯೆಯಲಿ' ಎಂದು ಹೇಳುವಂತೆ, ಹೇಗೆ ಒಂದು ಬೀಜದಲ್ಲಿರುವ ಆ ಮೊಳೆಯುವ ಕಣ ತನ್ನ ಒಡಲಿನಿಂದಲೇ, ಮೊಳಕೆ, ಸಸಿ, ಗಿಡ, ಮರ, ಹೆಮ್ಮರ, ಎಲೆ, ಹೂವು, ಕಾಯಿ, ಹಣ್ಣು ಮುಂತಾದಾಗಿ ತನ್ನನ್ನು ತಾನು ವಿಸ್ತರಿಸಿಕೊಳ್ಳುತ್ತದೆಯೋ ಹಾಗೆಯೇ ಆ ಪರಬ್ರಹ್ಮ ವಸ್ತುವು ತನ್ನೊಡಲಿಂದಲೇ ಎಲ್ಲವನ್ನೂ ಹೊಮ್ಮಿಸಿ ಈ ಜಗತ್ತನ್ನು ಸೃಷ್ಟಿಸಿದೆ.

ಪರತತ್ವ ಅಥವಾ ಪರಬ್ರಹ್ಮ ಅದಲ. ಆದರೆ ಸೃಷ್ಟಿ ಸದಾಕಾಲ ಚಲಿಸುತ್ತಾ ಬದಲಾಗುತ್ತಾ, ಹಳತಾಗುತ್ತಾ, ಹೊಸತನ್ನು ತನ್ನೊಳಗಿಂದಲೇ ಸೃಷ್ಟಿಸಿಕೊಳ್ಳುತ್ತಾ, ಎಲ್ಲವೂ ಹೊಸದೆಂಬಂತೆ ಕಾಣುತ್ತಿರುತ್ತದೆ. ಆದರೆ ಇಲ್ಲಿ ಯಾವುದೂ ಹೊಸದಲ್ಲ, ಮಾತ್ರ ರೂಪಬದಲಾವಣೆಯಷ್ಟೆ. ಎಲ್ಲದರೊಳಗಿನ ಅಂತಃಸತ್ವ ಮೂಲದಲ್ಲಿ ಹೇಗಿತ್ತೋ ಹಾಗೆಯೇ ಇದೆ. ಹೊಸದೆಂಬಂತೆ ಕಾಣುತ್ತದೆ. ಅದು ಕೇವಲ ನಮ್ಮ ಭ್ರಮೆ, ಎಷ್ಟು ರೂಪಗಳನ್ನು ಧರಿಸಿದರೂ ಒಳಗಿರುವ ಅಂತಃಸತ್ವ ಮಾತ್ರ ಬದಲಾಗದೆ ಒಂದೇ ರೀತಿಯಲ್ಲಿರುತ್ತದೆ ಎನ್ನುವುದನ್ನು ನಾವು ಮನಗಾಣಬೇಕು. ಹಾಗಾಗಿ ಇಲ್ಲಿ ಒಳಗಿನ ಸತ್ವ ಮತ್ತು ಹೊರಗಿನ ರೂಪ, ಎರಡು ನಮಗೆ ಭಿನ್ನವಾಗಿ ಕಾಣುತ್ತದೆ.





ಪರಮಾರ್ಥ ಅಥವಾ ಪರಸತ್ವ ಒಂದೇ ರೀತಿಯಲ್ಲಿದ್ದು ಅದು ಲೋಕವ್ಯವಹಾರದಲ್ಲಿ ಪ್ರಕಟಗೊಳ್ಳುವ ರೂಪಗಳು ಬೇರೆಬೇರೆಯಾಗಿರುತ್ತವೆ. ಪರತತ್ವ ಬದಲಾಗುವುದಿಲ್ಲ ಹಾಗಾಗಿ ನಿತ್ಯ ಆದ್ದರಿಂದ ಸತ್ಯ. ಆದರೆ ಅದರ ರೂಪ ಲೋಕವ್ಯವಹಾರದಲ್ಲಿ ಬದಲಾಗುತ್ತದೆಯಾದ್ದರಿಂದ, ನಿತ್ಯವಲ್ಲ ಆದ್ದರಿಂದ ಸತ್ಯವಲ್ಲ, ಮಾಯೆ. ಇವೆರಡನ್ನೂ ನಾವು ನೋಡುವ ರೀತಿಯು ಬೇರೆಬೇರೆಯಾಗಿರಬೇಕು. ಹೊರಗಿನ ಲೋಕವ್ಯವಹಾರದ ಮೇಲೆ ಪರತತ್ವದ ಪ್ರಭಾವ ಆಗಬಹುದು, ಆದರೆ ಲೋಕವ್ಯವಹಾರದ ಪ್ರಭಾವ ಅಂತರಂಗದ ಪರತತ್ವದ ಮೇಲೆ ಆಗಬಾರದು. ಹಾಗೆ ನಾವು ಇವೆರಡನ್ನೂ ನೋಡುವುದಕ್ಕೆ ಬೇರೆ ಬೇರೆ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಬೇಕು.(ಇಲ್ಲಿ ವಾಚಕರು ದಯಮಾಡಿ ಮುಕ್ತಕ 7ಸಂಸಂ ನ್ನು ಮತ್ತೊಮ್ಮೆ ನೋಡಿ) ಇವೆರಡರ ನಡುವೆ ಇರುವ ತೆಳುವಾದ ಪರದೆ, ಪರತತ್ವ ಮತ್ತು ಮಾಯೆ ಎರಡೂ ಬೇರೆ ಬೇರೆ ಎನ್ನುವ ಭಾವಕ್ಕೆ ಎಡೆ ಮಾಡಿದರೂ ಅಂತಃಸತ್ವದಲ್ಲಿ ಎರಡೂ ಒಂದೇ, ಎರಡಕ್ಕೂ ಒಂದೇ ಮೂಲ ಮತ್ತು ಒಂದೇ ಗಮ್ಯ ಎಂದು ಅರಿತರೆ ಆಗ ನಾವು ಪರತತ್ವದ ನಿಜಸ್ವರೂಪವನ್ನು ಅರಿತಂತಾಗುತ್ತದೆ.

**ಮುಕ್ತಕ – 849**

**ಒಮ್ಮನಸಿನಿಂದ ನೀನೀ ತತ್ವವಂ ಗ್ರಹಿಸು ।**

**ಬ್ರಹ್ಮಲೀಲೆಗೆ ಗೊತ್ತುಗುರಿ ಲೆಕ್ಕವಿಲ್ಲ ॥**

**ಸುಮ್ಮನಿರು ನಿನ್ನ ಪಾಡನು ಪಡುತ ತುಟಿ ಬಿಗಿದು |**

**ನೆಮ್ಮದಿಗೆ ದಾರಿಯಿದು - ಮಂಕುತಿಮ್ಮ ||**

ಒಮ್ಮನಸಿನಿಂದ =ಒಂದೇ ಮನಸ್ಸಿನಿಂದ

ಏಕಾಗ್ರ ಮನಸ್ಸಿನಿಂದ ನೀನು ಈ ತತ್ವವನ್ನು ಗ್ರಹಿಸು, ಪರಮಾತ್ಮನ ಲೀಲಾವಿನೋದಕ್ಕೆ ಮಿತಿಯಿಲ್ಲ, ಗೊತ್ತು ಗುರಿಯಿಲ್ಲ. ನಿನಗೆ ಸಂದ ಪಾಡನ್ನು ಪಡುತ್ತ ಮೌನವಾಗಿ, ಸುಮ್ಮನೆ, ಶಾಂತವಾಗಿರು. ನೆಮ್ಮದಿಯ ಬದುಕಿಗೆ ಇದೇ ದಾರಿ, ಎಂಬ ಸಂದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಲೋಕವ್ಯವಹಾರಕ್ಕೆ ಕಾರಣವಾದ, ಆದರೆ ಅದರಿಂದ ಭಿನ್ನವಾದ 'ಪರತತ್ವ'ವನ್ನು ಏಕಾಗ್ರ ಮನಸ್ಸಿನಿಂದ ಧಾರಣೆ ಮಾಡಿ ಅದರ ಸಾರವನ್ನು ಗ್ರಹಿಸಬೇಕೆಂಬುದು ಈ ಮುಕ್ತಕದ ಆಶಯ. ಈ ಜಗತ್ತಿನ ವ್ಯವಹಾರವನ್ನು ಆ ಪರಮಾತ್ಮನ ಲೀಲಾ ವಿನೋದವೆಂದು ಹೇಳಿದ್ದಾರೆ ನಮ್ಮ ಋಷಿಮುನಿಗಳು. ಅದು ಅನೂಹ್ಯ, ಅನಂತ, ಅಸೀಮ. ಹಾಗಾಗಿ ಅದರ ಅಗಲ-ಆಳಗಳು,ವಿನ್ಯಾಸ-ವಿಸ್ತಾರಗಳು ಅರ್ಥವಾಗುವುದೇ ಇಲ್ಲ. ಅದು ಹೇಗೆ ನಡೆಯುತ್ತದೆ, ಏಕೆ ನಡೆಯುತ್ತದೆ, ಅದರ ಆದಿಯೆಂದು, ಅಂತ್ಯವೆಂದು, ಇದಕ್ಕೆ ಕಾರಣವೇನು, ಕಾರಕರಾರು, ಇಂದು ನಡೆಯುತ್ತಿರುವುದು ಮುಂದೆ ಏನಾಗುತ್ತದೆ ಎಂಬ ಸಾವಿರಾರು ಪ್ರಶ್ನೆಗಳು ಉತ್ತರ ಸಿಗದೆ ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಅದಕ್ಕೇ ಮಾನ್ಯ ಗುಂಡಪ್ಪನವರು ಇದನ್ನು " ಬ್ರಹ್ಮಲೀಲೆಗೆ ಗೊತ್ತುಗುರಿ, ಲೆಕ್ಕವಿಲ್ಲ " ಎಂದಿದ್ದಾರೆ.





ಉಳಿದುಬಿಡುತ್ತವೆ. ಹಾಗಾಗಿ ಅದನ್ನು ಅರಿತುಕೊಳ್ಳಲು ತೀವ್ರತಮ ಪ್ರಯತ್ನವನ್ನು ಪಡದೆ, ಪರಮಾತ್ಮನೇ ತನ್ನ ಇಚ್ಚೆಯಂತೆ ಜಗತ್ತನ್ನು ಸೃಷ್ಟಿಸಿದ್ದಾನೆ. ತನಗೆ ಹೇಗೆ ಬೇಕೋ ಹಾಗೆ ನಡೆಸಿಕೊಳ್ಳುತ್ತಾನೆ, ಅವನ ವಿಧಾನವನ್ನು

ಅರಿಯಲು ಸಾಧ್ಯವಿಲ್ಲ ಮತ್ತು ನಾನೂ ಸಹ ಅವನ ವಿನ್ಯಾಸದ ಒಂದು ಬಿಂದು ಎಂದು ಅರಿತು ಒಪ್ಪಿಕೊಂಡು ದೃಢವಾಗಿ ನಂಬಬೇಕು. ನಮಗೆ ಪರ್ಯಾಯ ಮಾರ್ಗವೇನೂ ಇಲ್ಲದಿರುವಾಗ 'ಮೌನವಾಗಿ' ಬಂದ ಪಾಡನ್ನು ಅನುಭವಿಸುತ್ತಾ, ತರ್ಕ, ವಿತರ್ಕ ಮತ್ತು ಕುತರ್ಕಗಳಲ್ಲಿ ಸಮಯವನ್ನು ವ್ಯರ್ಥಮಾಡದೇ 'ತುಟಿ ಬಿಗಿಹಿಡಿದು ಬದುಕಿದರೆ ನೆಮ್ಮದಿ ಎನ್ನುತ್ತಾರೆ ಡಿವಿಜಿಯವರು. ಆದರೆ ನಮಗಿರುವ 'ನಾನು' ಎನ್ನುವ ಭಾವ ನಮ್ಮನ್ನು 'ಪರತತ್ವವನ್ನು ಸಂಪೂರ್ಣವಾಗಿ ಧಾರಣೆ ಮಾಡಲು ಬಿಡುವುದಿಲ್ಲ. 'ನಾನು ಎಂಬುದ ಬಿಟ್ಟು ಜ್ಞಾನಿಗಳೊಡಗೂಡಿ ಏನೆಲ್ಲಕೆ ದೇವ ಪ್ರೇರಣೆಯೆಂದು' ಎಂದು ಬದುಕುವಂತೆ ಪೂಜ್ಯ ಪುರಂದರದಾಸರು ಬಹಳ ಸೂಕ್ತವಾಗಿ ಸೂಚಿಸಿದ್ದಾರೆ.

ನಮಗೆ ಜೀವನದಲ್ಲಿ ಆನಂದ ಬೇಕು. ನಾವು ಮಾಡುವ ಪ್ರತೀ ಕೆಲಸದಲ್ಲೂ ನಾವು ಆನಂದವನ್ನು ಹುಡುಕುತ್ತೇವೆ. ಆದರೆ ನಮಗೆ ಸಿಗುವ ಫಲಗಳ ವಿಶ್ಲೇಷಣೆಯನ್ನು ಮಾಡುತ್ತಾ ಅದರ ಬಗ್ಗೆ ತರ್ಕಮಾಡುತ್ತಾ ಹೋದರೆ ನಿಜವಾದ ಆನಂದದಿಂದ ನಾವು ವಂಚಿತರಾಗುತ್ತೇವೆ. ಹಾಗಾಗಿ ಪರತತ್ವದ ವಿನ್ಯಾಸಕ್ಕೆ ಶರಣಾಗಿ ಸಂದ ಬದುಕನ್ನು ಕೊರಗು ಚಿಂತೆಗಳಿಲ್ಲದೆ ಬದುಕುವುದೇ ಆನಂದಕ್ಕೆ ನಿಜವಾದ ಮಾರ್ಗವೆನ್ನುವುದು ಈ ಮುಕ್ತಕದ ಹೂರಣ.

**ಮುಕ್ತಕ – 85ಸಂ**

**ನೃತ್ಯವೋ ಬ್ರಹ್ಮನಟರಾಜನದು ಜಗವೆಲ್ಲ।**

**ಪ್ರತ್ಯೇಕ ಜೀವದಶೆಯವನಂಗಭಂಗಿ ॥**

**ಸತ್ಯಸತ್ವಜ್ವಾಲೆ ವಿಶ್ವಮಾಯಾಲೀಲೆ।**

**ಪ್ರತ್ಯಗಾತ್ಮನು ನೀನು - ಮಂಕುತಿಮ್ಮ ॥**

ಜೀವದಶೆಯವನಂಗಭಂಗಿ=ಜೀವದಶೆ+ಅವನ+ಅಂಗಭಂಗಿ, ಪ್ರತ್ಯಗಾತ್ಮನು=ಪ್ರತ್ಯಗ್+ಆತ್ಮನು

ಪ್ರತ್ಯಗ್=ವಿಸ್ತೃತ, ವಿಸ್ತರಿಸಿದ.

ಈ ಜಗತ್ತೆಲ್ಲ, ಆ ಪರಬ್ರಹ್ಮನ ನಾಟ್ಯವಿದ್ದಂತೆ. ಇಲ್ಲಿರುವ ಜೀವಿಗಳೆಲ್ಲವೂ ಅವನ ಆ ನಾಟ್ಯದ ಬೇರೆಬೇರೆ ವಿಧದ ಭಂಗಿಗಳು. ಶುದ್ಧಸತ್ವದ ಆ ಬೆಂಕಿಯೇ ಈ ವಿಶ್ವದಲ್ಲಿ ಮಾಯಾಲೀಲೆಯನ್ನು ತೋರುತ್ತಿದೆ. ನೀನು ಕೇವಲ ಆ ಪರಬ್ರಹ್ಮ ವಸ್ತುವಿನ ವಿಸ್ತೃತ ರೂಪವಷ್ಟೆ, ಎಂದು ಒಂದು ಗಹನವಾದ ತತ್ವವನ್ನು ಪ್ರತಿಪಾದಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಒಬ್ಬ ನಾಟ್ಯ ಕಲಾವಿದ ಬೇರೆ ಉಪಕರಣಗಳ ಸಹಾಯವಿಲ್ಲದೆ ತನ್ನ ದೇಹದ ಅಂಗಾಂಗ ಚಲನೆಯಿಂದಲೇ ಹಲವಾರು ಭಂಗಿಗಳಲ್ಲಿ ತನ್ನ ಭಾವವನ್ನು ಬಿತ್ತರಿಸುವಂತೆ, ಆ ಪರಮಾತ್ಮ ತತ್ವವೂ ಸಹ ತನ್ನೊಳಗಿಂದಲೇ ಇಡೀ ಜಗತ್ತನ್ನು ಸೃಷ್ಟಿಸಿ, ತಾನು ಅದರೊಳಕ್ಕೆ ಚೈತನ್ಯದ ರೂಪದಲ್ಲಿ ಪ್ರವೇಶಿಸಿ, ಈ ಜಗವೆಂಬ ನಾಟಕವನ್ನು





ಆಡುತ್ತಿದ್ದಾನೆ ಮತ್ತು ನಲಿಯುತ್ತಿದ್ದಾನೆ. ಹಾಗಾಗಿ ಇದು ಅವನ/ಅದರ ಲೀಲಾವಿನೋದವೆಂದು ಕರೆಯಲ್ಪಟ್ಟಿದೆ. ಜಡವನ್ನು ತನ್ನೊಳಗಿಂದಲೇ ಸೃಷ್ಟಿಸಿ, ತಾನು ಚೇತನದ ರೂಪದಲ್ಲಿ ಆ ಜಡವನ್ನು ಧರಿಸಿ ಈ ಜಗತ್ತಿನ ಸಕಲವನ್ನೂ ಅನುಭವಿಸಿ ಆನಂದಿಸುತ್ತಿದ್ದಾನೆ/ದೆ ಎನ್ನುವುದು ಸನಾತನದ ಸಿದ್ಧಾಂತ. ಹಾಗಾಗಿ ಈ ಜಗತ್ತಿನ ಬೇರೆ ಬೇರೆ ರೂಪಗಳು, ಆ ಪರತತ್ವದಿಂದ ಸಂಪೂರ್ಣವಾಗಿ ಆವೃತವಾಗಿದೆ. "ಇಡೀ ಸೃಷ್ಟಿಯಲ್ಲಿ ಪರತತ್ವದ್ದಲ್ಲದ್ದು ಪರತತ್ವವಲ್ಲದ್ದು ಇಲ್ಲವೇ ಇಲ್ಲ" ಎನ್ನುವುದು ಪರಮ ಸತ್ಯ.

ತಾನು ಬಹುವಾಗಿ ಪ್ರಕಟಗೊಳ್ಳಬೇಕು ಎನ್ನುವ 'ಸ್ವ-ಇಚ್ಛೆ' ಯಿಂದ 'ವಸ್ತು' (matter) ವನ್ನು ಸೃಷ್ಟಿಸಿ ಆ ವಸ್ತುಗಳೊಳಗೆ ಚೇತನದ ರೂಪವಾಗಿ ತಾನೇ ಸೇರಿಕೊಂಡು, ಎಲ್ಲ ರೂಪಗಳಲ್ಲೂ ಸಿಗುವ ಆನಂದವನ್ನು ತಾನೇ ಅನುಭವಿಸುತ್ತಾ ಆನಂದದಿಂದಿದ್ದಾನೆ ಆ ಪರಮಾತ್ಮ ಎನ್ನುವದು ನಮ್ಮ ಸನಾತನದ ನಂಬಿಕೆ. 'ಈಶಾವಾಸ್ಯಮಿದಂ ಸರ್ವಂ ಯಂಚಿತ್ ಜಗತ್ಯಾಂ ಜಗತ್' ಎಚಿದು, ಈಶಾವಾಸ್ಯೋಪನಿಷತ್ತು ಇದನ್ನು ಪುಷ್ಟಿಕರಿಸುತ್ತದೆ. ಹೀಗೆ ಯಾವುದು ಸೃಷ್ಟಿಸಿತೋ ಅದನ್ನು ಪರಮಾತ್ಮನೆಂದೂ, ಅದು ಯಾವುದನ್ನು ಸೃಷ್ಟಿಸಿತೋ ಅದನ್ನು ಕೋಟ್ಯಾಂತರ

ರೂಪಗಳನ್ನೊಳಗೊಂಡ ಜಗತ್ ಎಂದೂ, ಸೃಷ್ಟಿಸಿದ ಅವನು, ಈ ಜಗತ್ತಿನ ಆ ಕೋಟ್ಯಾಂತರ ರೂಪಗಳಲ್ಲಿ ಸೇರಿಕೊಂಡನಲ್ಲಾ, ಅದನ್ನು ಆತ್ಮವೆಂದೂ ಕರೆಯಲ್ಪಟ್ಟಿದೆ. ಒಂದು ಬೃಹತ್ ಆತ್ಮ ಮಿಕ್ಕೆಲ್ಲವೂ ಪ್ರತ್ಯಗಾತ್ಮಗಳು. ಎಂದರೆ ನಾವೆಲ್ಲಾ ಪ್ರತ್ಯಗಾತ್ಮಗಳು. ಹಾಗಾದರೆ ನಮ್ಮ ಅಸ್ತಿತ್ವಕ್ಕೆ ಹೆಸರೇನು? ಎಂದರೆ, ನಮ್ಮ ಅಸ್ತಿತ್ವಕ್ಕೆ ಕೇವಲ 'ಅಹಂಕಾರ' ವೆನ್ನುವ ಹೆಸರಿಡಬಹುದು.

'ನಾನು' ಎನ್ನುವ ಭಾವ ಮಾತ್ರ ನಮ್ಮ ಅಸ್ತಿತ್ವದ ಕುರುಹು. ಆ ನಾನು ಎನ್ನುವದನ್ನು ತೊರೆದರೆ ಪ್ರತ್ಯಗಾತ್ಮ ಮತ್ತು ಪರಮಾತ್ಮನಲ್ಲಿ ಭೇಧವಿರುವುದಿಲ್ಲ. ಉದಾ: ಒಂದು ದೊಡ್ಡ ಕೊಡ. ಕೊಡದ ತುಂಬಾ ನೀರು. ಆ ನೀರನ್ನು ಕೊಡದ ನೀರು ಎನ್ನುತ್ತಾರೆ. ಒಂದು ಲೋಟವನ್ನು ತೆಗೆದುಕೊಂಡು ಆ ಕೊಡದಿಂದ ನೀರನ್ನು ಬಗ್ಗಿಸಿ, ಲೋಟದೊಳಕ್ಕೆ ತುಂಬಿಕೊಂಡರೆ, ಆಗ ಅದು 'ಲೋಟದ ನೀರಾ'ಗುತ್ತದೆ, ಅಲ್ಲವೇ? ಮತ್ತೆ ಆ ನೀರನ್ನು ಕೊಡದೊಳಕ್ಕೆ ಸುರಿದರೆ ಆ ಲೋಟದಲ್ಲಿದ್ದ ನೀರು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಮತ್ತೆ ಕೊಡದ ನೀರಾಗುತ್ತದೆ. ಇದೇ ರೀತಿ, ನಮ್ಮ ರೂಪದೊಂದಿಗೆ ನಮ್ಮನ್ನು ನಾವು ಗುರುತಿಸಿಕೊಳ್ಳುವತನಕ 'ನಾವು' ಎನ್ನುವ ಭಾವವಿರುತ್ತದೆ. ರೂಪವನ್ನು ಮೀರಿ ನಮ್ಮನ್ನು ನಾವು ಗುರ್ತಿಸಿಕೊಂಡಾಗ ಆ ಜಗನ್ನಾಟಕ ಸೂತ್ರಧಾರಿಯ ಲೀಲಾವಿನೋದದಲ್ಲಿ ನಾವೂ ಬೆರೆತು ಪರಮಾತ್ಮನಾದ ಅವನು ಎಂತಹ ಆನಂದವನ್ನು ಅನುಭವಿಸುತ್ತಾನೋ ಅದನ್ನೇ ಪ್ರತ್ಯಗಾತ್ಮಗಳಾದ ನಾವೂ ಅನುಭವಿಸಬಹುದು.





ಮುಕ್ತಕ - 851

ಕಣ್ಣೆರೆದು ನೋಡು, ಚಿತ್ಸತ್ವಮೂರ್ತಿಯ ನೃತ್ಯ |
ಕಣ್ಮುಚ್ಚಿ ನೋಡು, ನಿಶ್ಚಲ ಶುದ್ಧ ಸತ್ವ |
ಉನ್ಮುಖನು ನೀನೆರಡು ಜಗಕಮಿರುತಿರಲಾಗ
ಹೃನ್ಮಧ್ಯದಲಿ ಶಾಂತಿ - ಮಂಕುತಿಮ್ಮ ||

ಕಣ್ಣೆರೆದು=ಕಣ್ಣ+ತೆರೆದು, ಚಿತ್ಸತ್ವಮೂರ್ತಿಯ=ಚಿತ್+ಸತ್ವ+ಮೂರ್ತಿಯ, ಕಣ್ಮುಚ್ಚಿ=ಕಣ್ಣ+ಮುಚ್ಚಿ,

ಜಗಕಮಿರುತಿರಲಾಗ=ಜಗಕಂ+ಇರುತಿರಲ್+ಆಗ

ಹೃನ್ಮಧ್ಯದಲಿ ಹೃದಯದ ಮಧ್ಯದಲ್ಲಿ

ಕಣ್ಣನ್ನು ತೆರೆದು ನೋಡಿದರೆ ಪರತತ್ವದ ಪ್ರತಿ ನಿತ್ಯ ಬದಲಾಗುವ ಕೋಟಿ ಕೋಟಿ ರೂಪದ ಸುಂದರ ನೃತ್ಯ ಲೀಲಾವಿನೋದ. ಕಣ್ಮುಚ್ಚಿ ನೋಡಿದರೆ ಇಡೀ ಜಗತ್ತನ್ನು ಆವರಿಸಿಕೊಂಡು ಆಳುವ ಶುದ್ಧ ಮತ್ತು ನಿಶ್ಚಲ ಪರತತ್ವದ ದರ್ಶನ . ಹೀಗೆ ನೀನು ಎರಡೂ ಸ್ಥಿತಿಗಳನ್ನು ಸಮಭಾವದಿಂದ ನೋಡಿದರೆ ಮನಸ್ಸಿನಂತರಾಳದಲ್ಲಿ ಶಾಂತಿ ನೆಲೆಸುತ್ತದೆ ಎನ್ನುವುದೇ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಹೂರಣ.

ನಾವು ಹೊರ ಪ್ರಪಂಚದಲ್ಲಿ ಕಣ್ಣಿಟ್ಟು ನೋಡಿದರೆ ನಮಗೆ ಕಾಣುವುದು ಚಿತ್ರ ವಿಚಿತ್ರವಾದ ಹಲವಾರು ರೂಪಗಳು, ಮಾನವರ, ಪ್ರಾಣಿಗಳ, ಕೀಟಗಳ, ಸರೀಸೃಪಗಳ, ಪಕ್ಷಿಗಳ, ಜಲಚರಗಳ, ಗಿಡಮರಗಳ, ಕೋಟಿ ಕೋಟಿ ಪ್ರಬೇಧಗಳ ಚಿತ್ರವಿಚಿತ್ರವಾದ ರೂಪಗಳು, ಆಕಾರಗಳು, ಬಣ್ಣಗಳು, ವಿನ್ಯಾಸಗಳು, ಮೈಮೇಲಿನ ಚಿತ್ತಾರಗಳು, ಸುಗಂಧಗಳು, ದುರ್ಗಂಧಗಳು, ರುಚಿಗಳು. ಇವುಗಳನ್ನೇ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ' ಗಳೆನ್ನುತ್ತಾರೆ. ಆದರೆ ಈ 'ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ' ಗಳನ್ನೂ ಪ್ರಕಟಿಸಲು ಬೆಳಗಲು ಅಥವಾ ಆಸ್ವಾಧಿಸಲು, ಬೆಳಕಿನಂತೆ, ಒಂದು ಚೈತನ್ಯವು ಬೇಕು. ಆ ಚೈತನ್ಯವೇ, ಅಚಲವಾದ ಪರಮಾತ್ಮನ, ಚರರೂಪವಾದ ಪ್ರತ್ಯಗಾತ್ಮ ಅಥವಾ ಆತ್ಮ

“ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ' ಗಳ ಸಂಪರ್ಕದಿಂದ ಜಗತ್ತನ್ನು ಕಣ್ಣುಬಿಟ್ಟು ನೋಡುವಾಗ ನಮಗೆ ಕಾಣುವುದು ಆ ಪರತತ್ವದ ವಿಸ್ತೃತ ರೂಪ ಮತ್ತು ಅವಗಳ ಮೂಲಕ ಅವುಗಳ ಸಕಲ ಗುಣಗಳೂ ನಮ್ಮ ಇಂದ್ರಿಯಗಳ ಮೂಲಕ ನಮ್ಮೊಳಕ್ಕೆ ನುಗ್ಗಿ ತಮ್ಮ ಪ್ರಭಾವನ್ನು ನಮ್ಮ ಮೇಲೆ ಬೀರಿ ನಮ್ಮನ್ನು ಜಗತ್ತಿನ ಬದುಕಿಗೆ ಪ್ರೇರೇಪಿಸುತ್ತಾ ಇರುತ್ತದೆ. ಆದರೆ ಕಣ್ಮುಚ್ಚಿ ಕುಳಿತು ಅಂತರಂಗದ ಚಕ್ಷುವಿನಿಂದ ಮನಸ್ಸಿನಲ್ಲಿ ಜಗತ್ತನ್ನು, ಜಗತ್ಕರ್ತೃವಾದ ಪರತತ್ವವನ್ನು ನೋಡಲು ಪ್ರಯತ್ನಪಟ್ಟರೆ, ಆಗ ಜಗತ್ತಿನೊಂದಿಗೆ ಸಂಪರ್ಕವನ್ನು ಕಡಿದುಕೊಂಡು ಜಗತ್ಕಾರಕನೊಂದಿಗೆ ಸಂಪರ್ಕ ಕಲ್ಪಿಸಿಕೊಂಡು ಅಂತರ್ಯದ ಶಾಂತಿಯನ್ನು ಪಡೆಯಬಹುದು.

ಸಕಲ ಚರಾಚರಗಳಲ್ಲಿರುವ ಪರತತ್ವವು ಭಿನ್ನ ಭಿನ್ನ ರೂಪ, ಆಕಾರ, ಬಣ್ಣ ಮತ್ತು ಗುಣಗಳಿಂದ ಪ್ರಕಾಶಿಸುತ್ತಿರುವುದನ್ನು ನಾವು ಕಾಣುತ್ತೇವೆ. ಆದರೆ ಭೌತಿಕ ಕಣ್ಣುಗಳಿಂದ ಕಂಡಾಗ ಅಚಲವಾದ ಪರತತ್ವ ಕಾಣದೆ ಅದರ ವಿಸ್ತೃತರೂಪ ಕಾಣುತ್ತದೆ ಮತ್ತು ಮಾಯೆ ನಮ್ಮನ್ನು, ಆ ರೂಪ ಮತ್ತು ಆ ರೂಪದ ಗುಣಗಳನ್ನು ಕಾಣುವಂತೆ ಮಾಡಿ ಮೋಹಗೊಳಿಸುತ್ತದೆ. ಆದರೆ ಅಂತಃಚಕ್ಷುವಿನಿಂದ ಅದನ್ನು ಕಾಣಲು ಪ್ರಯತ್ನ ಪಟ್ಟರೆ ನಮಗೆ ಪರತತ್ವದ ಸಮಗ್ರತೆ ಕಾಣುತ್ತದೆ. ಆ ಸಮಗ್ರತೆಯನ್ನು ಅನುಸಂಧಾನಮಾಡಿದರೆ, ಮಾನ್ಯ ಗುಂಡಪ್ಪನವರು 'ಹೃನ್ಮಧ್ಯದಲಿ ಶಾಂತಿ' ಎಂದು ಹೇಳುವಂತೆ, ಮನಸ್ಸಿಗೆ ಶಾಂತಿ ಸಿಗುತ್ತದೆ. ಹೊರನೋಟದಲ್ಲಿ ಮತ್ತು ಒಳನೋಟದಲ್ಲೂ ಆ ಪರತತ್ವದ ಲೀಲಾ ವಿನೋದವನ್ನು ಕಾಣುವ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ – 852**

**ನವನವ ಪ್ರಶ್ನೆಗಳು, ನವನವ ಪರೀಕ್ಷೆಗಳು |**
**ದಿವಸಾಬ್ದಯುಗ ಚಕ್ರ ತಿರುತಿರುಗಿದಂತೆ ||**
**ಪ್ರವಹಿಪ್ಪುವದರಂತೆ ಪೌರುಷ ಹಿತಪ್ರಜ್ಞೆ |**
**ಅವಿರತದ ಚೈತನ್ಯ - ಮಂಕುತಿಮ್ಮ ||**

ದಿವಸಾಬಯುಗ=ದಿವಸ+ಅಬ್ದ +ಯುಗ, ಪ್ರವಹಿಪ್ಪುವದರಂತೆ =ಪ್ರವಿಹಿಸುವ+ಅದರಂತೆ,
ನವ ನವ = ಹೊಸ ಹೊಸ, ಅಬ್ದ=ವರುಷ, ಪ್ರವಹಿಸುವ=ಹರಿಯುವ, ಅವಿರತ=ಬಿಡುವಿಲ್ಲದ.

ದಿನ, ವರುಷ ಯುಗಗಳು ಕಳೆದಂತೆ ಮನುಷ್ಯನ ಮನಸ್ಸಿನಲ್ಲಿ ಹೊಸ ಹೊಸ ಪ್ರಶ್ನೆಗಳು ಉದ್ಭವಿಸುತ್ತವೆ ಮತ್ತು ಅವನು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾನೆ. ಹೀಗೆ ಆತ್ಮಹಿತವನ್ನು

ವೃದ್ಧಿಗೊಳಿಸಿಕೊಳ್ಳಲು, ಆ ಪರತತ್ವದ ಚೈತನ್ಯ ನಿರಂತರ ಕೃಷಿ ಮಾಡುತ್ತಲೇ ಇರುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

ಈ ಜಗತ್ತಿನಲ್ಲಿ ಮನುಷ್ಯನ ಉಗಮವಾದಂದಿನಿಂದ ತನ್ನ ಜೀವನವನ್ನು ಉತ್ತಮಗೊಳಿಸಲು ಇವನ ಪ್ರಯತ್ನ ಅವ್ಯಾಹತವಾಗಿ ಸಾಗಿದೆ. ಈ ಭೂಮಿಯಮೇಲೆ ಎಂದು ಮನುಷ್ಯಪ್ರಾಣಿಯ ಆವಿರ್ಭಾವವಾಯಿತೋ ನಮಗೆ ಗೊತ್ತಿಲ್ಲ. ಈ ಜಗತ್ತಿನಲ್ಲಿ ನಮ್ಮ ಭೂಮಿಯಲ್ಲದೆ ಅನ್ಯ ಭೂಮಿಗಳೆಷ್ಟಿವೆಯೋ ನಮಗೆ ಗೊತ್ತಿಲ್ಲ. ಆ ಭೂಮಿಗಳಮೇಲೆ ಎಂದಿನಿಂದ ಮಾನವ ಪ್ರಾಣಿಯಿದೆಯೋ ಮತ್ತು ಅದು ವಿಕಾಸದ ಯಾವ ಸ್ಥರದಲ್ಲಿ ಇದೆಯೋ ನಮಗೆ ಗೊತ್ತಿಲ್ಲ. ಆದರೆ ಒಂದು ಮಾತ್ರ ಸತ್ಯ ಶಬ್ದ ಸ್ಪರ್ಶ ರೂಪ ರಸ ಗಂಧ' ಗಳನ್ನು ತನ್ನ ಇಂದ್ರಿಯಗಳ ಮೂಲಕ ತನ್ನೊಳಕ್ಕೆ ಸೇರಿಸಿಕೊಳ್ಳುತ್ತಾ, ಅವುಗಳನ್ನು ಒಳಗೆ ಮಂಥನಮಾಡುತ್ತಾ, ಅವುಗಳನ್ನು ಅರಿತುಕೊಳ್ಳುತ್ತಾ, ಅವುಗಳಿಂದ ಈ ಜಗತ್ತಿನ ಜೀವನಕ್ಕೆ ಬೇಕಾದದ್ದನ್ನು ಪಡೆದುಕೊಳ್ಳುತ್ತಾ, ಹಾಗೆ ಪಡೆದುಕೊಂಡದ್ದನ್ನು ತನ್ನ ಬುದ್ಧಿಶಕ್ತಿಯಿಂದ ಬದಲಾಯಿಸಿಕೊಳ್ಳುತ್ತಾ, ತನ್ನ ಬದುಕನ್ನು ಉತ್ತಮಗೊಳಿಸಿಕೊಳ್ಳಲು ಮಾನವ ಮಾಡುವ ಪ್ರಯತ್ನವೂ ಸಹ ಅವನಷ್ಟೇ ಪುರಾತನ. ಇದು ಆತ್ಮ ಶಕ್ತಿಯ ಕೆಲಸ. 'ಆತ್ಮ' ತನ್ನ ಹಿತಕ್ಕಾಗಿ ತಾನು ಮಾಡಿಕೊಳ್ಳುವ ಪ್ರಯತ್ನ.

216

ಕಗ್ಗರಸಧಾರೆ ವಿಶ್ವ ನರ್ತನ 85ಸಂ - 853

ಇಲ್ಲಿ ನಾವು ಅರಿಯಬೇಕಿರುವುದೇನೆಂದರೆ, ಗುಂಡಪ್ಪನವರು ಒಂದು ಪದ ಪ್ರಯೋಗವನ್ನು ಮಾಡಿದ್ದಾರೆ, 'ಪೌರುಷ ಹಿತಪ್ರಜ್ಞೆ' ಎಂದು ಇಲ್ಲಿ 'ಪೌರುಷ'ವೆಂದರೆ, ಪ್ರಾಣಿಗಳ ದೇಹವನ್ನು ಧಾರಣೆ ಮಾಡಿರುವ, ಆ ಪರಮಾತ್ಮ ಶಕ್ತಿಯೇ ಪೌರುಷ ಶಕ್ತಿ, ಅದೇ ಆತ್ಮ ಶಕ್ತಿ. ಆ ಆತ್ಮಶಕ್ತಿ ತನ್ನ ಹಿತವನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ 'ಪ್ರವಹಿಸುದರಂತೆ, ಅವಿರತದ ಚೈತನ್ಯ' ಎನ್ನುವಂತೆ ನಿರಂತರ, ಅವ್ಯಾಹತ ಅಥವಾ ಸದಾಕಾಲ ಪ್ರಯತ್ನವನ್ನು ಮಾಡುತ್ತಲೇ ಇರುತ್ತದೆ. ಇಂದು ನಮ್ಮ ಮುಂದಿರುವ ನಮ್ಮ ಸನಾತನದ ಜ್ಞಾನ ಭಂಡಾರ ಮತ್ತು ಈ ಜಗತ್ತಿನಲ್ಲಿರುವ ಸಕಲ ಜ್ಞಾನದ ವಿಸ್ಕೃತ ಪ್ರಸ್ತುತಿಯೇನಿದೆಯೋ ಅದೆಲ್ಲವೂ ಅಂತಹ ಪ್ರಯತ್ನದ ಫಲವೇ!!!!! ಈ ಉತ್ತಮತೆಯ ಪ್ರಯತ್ನ ಅಂದಿನಿಂದ ನಡೆಯುತ್ತಿದೆ ಮತ್ತು ಇಂದೂ ಮುಂದುವರೆದಿದೆ ಮತ್ತು ಅದು ಎಂದೆಂದಿಗೂ ನಡೆಯುತ್ತಲೇ

ಇರುತ್ತದೆ. ಅದರ ಕಾರಣದಿಂದಲೇ ಕೇವಲ ಐದು ಸಾವಿರ ವರ್ಷಗಳ ಹಿಂದಿನ ಜನ ಜೀವನಕ್ಕೂ ಇಂದಿನ ಜನಜೀವನಕ್ಕೂ ಒಂದು ಸಾಸಿವೆ ಕಾಳಿಗೂ, ಹಿಮಾಲಯಪರ್ವತಕ್ಕೂ ಇರುವಷ್ಟು ಅಂತರ ಅಲ್ಲವೇ?

ಅಚೆದರೆ, ಆ ಪರಮಾತ್ಮ ಶಕ್ತಿ, ಆತ್ಮರೂಪದಲ್ಲಿ ಜೀವಿಗಳ ರೂಪವನ್ನು ಧಾರಣೆಮಾಡಿ, ಆ ರೂಪದ ತನ್ನ ಜೀವನ ಸುಖಮಯವಾಗಿರುವುದಕ್ಕೆ ತನಗೆ ಏನು ಬೇಕೋ ಅದನ್ನು ತಾನು ಸೃಷ್ಟಿಸಿಕೊಂಡು, ಹಾಗೆ ತಾನೇ ಸೃಷ್ಟಿಸಿಕೊಂಡದ್ದನ್ನು ಮತ್ತಷ್ಟು ಉತ್ತಮಗೊಳಿಸಿಕೊಳ್ಳುತ್ತಾ ಇದೆ. ಹಾಗಿದ್ದಮೇಲೆ ಎಲ್ಲವೂ ಸುಖಮಯವಾಗಿ ಮತ್ತು ಆನಂದ ಮಯವಾಗಿರಬೇಕಿತ್ತಲ್ಲವೇ?ಎಂದರೆ ಹೌದು. ಆದರೆ ಪ್ರಾಣಿಗಳಿಗೆ ಅಹಂಕಾರವೆನ್ನುವುದೊಂದೆಯಲ್ಲಾ, ಅದು ಮನುಷ್ಯನನ್ನು ಇದನ್ನು 'ನಾನು' ಮಾಡುತ್ತಿದ್ದೇನೆ ಎನ್ನುವ ಭಾವವನ್ನು ತುಂಬಿಬಿಡುತ್ತದೆ. ಇದರಿಂದ ಇವನ ಲೌಕಿಕ ಜೀವನ ಕಷ್ಟಮಯವಾಗಿಬಿಡುತ್ತದೆ. ಅದರಲ್ಲೂ ಮನುಷ್ಯ ಪ್ರಾಣಿಯಲ್ಲಿ, ಅವನ ದೇಹರಚನೆಗನುಗುಣವಾಗಿ, 'ಅಹಂಕಾರ' ಸ್ವಲ್ಪ ಅಧಿಕವಾಗೇ ಇರುವುದರಿಂದ, ಅವನ ಸಮಸ್ಯೆಗಳೂ ಅಷ್ಟೇ ಅಧಿಕವಾಗಿವೆ. ಅಹಂಕಾರವನ್ನು ತೊರೆದರೆ ಹೊರಗಿನ ಜೀವನ ಮತ್ತು ಒಳಗಿನ ಸಂತೋಷ ಎರಡೂ ಅಧಿಕವಾಗುವುದರಲ್ಲಿ ಸಂದೇಹವೇ ಇಲ್ಲ





**ಮುಕ್ತಕ 853**

**ಸಾರ್ವಲೌಕಿಕಸೌಖ್ಯ ನೆಲೆಸುವನ್ನೆಗಮಿಳೆಯೊ- |**

**ಳೊರ್ವನುಂ ಸುಖಿಯಲ್ತು, ದಿಟದಿ, ಪೂರ್ಣದಲಿ ||**

**ಒರ್ವನುಬ್ಬಸದ ಬಿಸಿ ವಿಷವಾಯುವಾಗಿ ತಾ- |**

**ನುರ್ವರೆಯ ಮುಸುಕೀತು – ಮಂಕುತಿಮ್ಮ ||**

ನೆಲೆಸುವನ್ನೆಗಮಿಳೆಯೊಳೊರ್ವನುಂ=ನೆಲೆಸುವ+ಎನ್ನೆಗಂ+ಇಳೆಯೊಳು+ಓರ್ವನು,

ಓರ್ವನುಬ್ಬಸದ=ಒರ್ವನ+ಉಬ್ಬಸದ, ತಾನುರ್ವರೆಯ=ತಾನು+ಉರ್ವರೆಯ

ಇಳೆ=ಭೂಮಿ, ದಿಟದಿ=ಸತ್ಯವಾಗಿ, ಉರ್ವರೆಯ+ಭೂಮಿಯ

ಈ ಭೂಮಿಯ ಮೇಲೆ ಸರ್ವಜನರ ಸುಖ ನೆಲೆಗೊಳ್ಳುವ ತನಕ ಎಲ್ಲರೂ ಸುಖಿಗಳು ಎಂದು ಹೇಳಲು ಆಗುವುದಿಲ್ಲ. ಇಲ್ಲಿ ಎಲ್ಲರೂ ಸರ್ವ ಕಾಲಕ್ಕೂ ಸುಖಿಗಳಲ್ಲ ಎನ್ನುವುದು ಸತ್ಯ. ಏಕೆಂದರೆ ಯಾರೋ ಒಬ್ಬನ ಉಬ್ಬಸದ ಉಸಿರು ವಿಷಗಾಳಿಯಾಗಿ ಈ ಜಗತ್ತನ್ನೇ ಆವರಿಸಿಕೊಳ್ಳಬಹುದು ಎಂದು ಹೇಳುತ್ತಾ ಜಗತ್ತಿನ ಮನುಷ್ಯನ ಬದುಕಿನ ಒಂದು ಆಯಾಮವನ್ನು ನಮಗೆ ತೋರಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಸುತ್ತುಮುತ್ತಲಿನ ಜನರಲ್ಲಿ "ನಾನು ಸಂಪೂರ್ಣ ಸುಖವಾಗಿದ್ದೇನೆ " ಎಂದು ಹೇಳುವವರು ಬಹಳ ವಿರಳ. ಏಕೆಂದರೆ ಯಾರಿಗೂ ಸುಖದ ಸತ್ಯವಾದ ಕಲ್ಪನೆಯೇ ಇಲ್ಲವೆನಿಸುತ್ತದೆ. ಸಂತೋಷವೆಂದರೇನು? ಆ ಸಂತೋಷ ಎಲ್ಲಿ, ಹೇಗೆ ಮತ್ತು ಯಾವುದರಿಂದ ಸಿಗುತ್ತದೆ ಎಂದು ಯಾರಿಗೂ ನಿಖರವಾಗಿ ಅರಿವಿರುವುದಿಲ್ಲ. ಹಾಗಾಗಿ ಎಲ್ಲೋ ಜಗತ್ತಿನ ಯಾವುದೋ ಮೂಲೆಯಲ್ಲಿ ಯಾರಾದರೂ ದುಃಖಪಡುತ್ತಾ, ಸಂಕಟಪಡುತ್ತಾ ಇರುತ್ತಾರೆ. ಅಂತಹ ಸ್ಥಿತಿಯಲ್ಲಿ ಇಲ್ಲಿ ಎಲ್ಲರೂ ಸುಖಿಗಳು ಎಂದು ಹೇಳಲಾಗದು.

ಮಾತ್ರವಲ್ಲ, ಈ ಜಗತ್ತಿನಲ್ಲಿ ಒಬ್ಬರ ಯೋಚನೆ ಮತ್ತೊಬ್ಬರನ್ನು ಭಾದಿಸುತ್ತಿರುತ್ತದೆ. ಮತ್ತೊಬ್ಬರನ್ನು ಭಾದಿಸುವ ನಮ್ಮ ಆಲೋಚನೆಗಳೇ ಮಾನ್ಯ ಗುಂಡಪ್ಪನವರು ಹೇಳುವ 'ಓರ್ವನುಬ್ಬಸದ ಬಿಸಿ ವಿಷವಾಯು'. ಅದರ ಪ್ರಭಾವದ ತೀವ್ರತೆ ಆ ವ್ಯಕ್ತಿಯ ಕ್ಷಮತೆಯ ಮೇಲೆ ಆಧಾರಪಟ್ಟಿದೆ. ಒಬ್ಬ ಸಾಮಾನ್ಯ ವ್ಯಕ್ತಿಯ ದುರಾಲೋಚನೆಗಳು ಕೇವಲ ಅವನನ್ನು ಭಾದಿಸಬಹುದು ಅಥವಾ ಅವನ ತೀರಾ ಹತ್ತಿರದ ಜನರಿಗೆ ತೊಂದರೆ ಕೊಡಬಹುದು. ಆದರೆ ಒಬ್ಬಾ ಪ್ರಭಾವೀ ವ್ಯಕ್ತಿಯ ದುರಾಲೋಚನೆ ಅಧಿಕ ಪ್ರಮಾಣದ ಹಾನಿಯನ್ನು ಮಾಡಿ, ಬಹಳಷ್ಟು ಜನರನ್ನು ತೊಂದರೆಗೀಡುಮಾಡಬಹುದು. ಅಂತಹವರಿರುವ ತನಕ ಈ ಜಗತ್ತಿನಲ್ಲಿ ಎಲ್ಲರೂ ಸುಖವಾಗಿರಲು ಹೇಗೆ ಸಾಧ್ಯ?.

ಮನುಷ್ಯನ ಈ ಭೂಮಿಯ ಜೀವನದ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮಗೆ ಹೇರಳವಾದ

ಉದಾಹರಣೆಗಳು ಸಿಗುತ್ತವೆ. ಒಬ್ಬ 'ರಾವಣ'ನ ದುರಾಲೋಚನೆಗೆ ಎಷ್ಟು ಜನ ಬಲಿ, ಒಬ್ಬ 'ದುರ್ಯೋದನನ ಅಹಂಕಾರದಿಂದ ಎಷ್ಟು ಜನರ ಹತ್ಯೆ, ಒಬ್ಬ ಸಿಕಿಂಧರ'ನ ಭೂಮಿಯಾಸೆಗೆ ಎಷ್ಟು ಜನರ ಮಾರಣ ಹೋಮ, ಒಬ್ಬ ಹಿಟ್ಲರನ ಹುಚ್ಚು ಮಹತ್ವಾಕಾಂಕ್ಷೆಯಿಂದ ಇಡೀ ಜಗತ್ತಿಗೆ ನಡುಕ, ಒಬ್ಬ "ಒಸಾಮಾ' ನ ಹುಚ್ಚಿಗೆ ಲಕ್ಷಾಂತರ ಮುಗ್ಧರ ಬಲಿ, ಹೀಗೆ ಇತಿಹಾಸದ ಹೆಜ್ಜೆ ಹೆಜ್ಜೆಗೂ ನಮಗೆ ಅಂತಹ ಜನರು ಸಿಗುತ್ತಾರೆ. ಇದು ಎಲ್ಲೆಡೆಯಲ್ಲೂ ಎಲ್ಲ ಪ್ರದೇಶಗಳಲ್ಲೂ ಸಿಗುತ್ತಾರೆ. ಅಂತಹವರಿರುವ ತನಕ ಜಗತ್ತಿನ ಜನರೆಲ್ಲರೂ ನಿರಾಳವಾಗಿರಲು ಹೇಗೆ ಸಾಧ್ಯ? ಎನ್ನುವಂತಹ ಮಹತ್ತರ ಪ್ರಶ್ನೆಯೇ ಈ ಮುಕ್ತಕದ ಹೂರಣ." ಅಂತಹವರಿಗೆ ಸರ್ವೇ ಜನಾಃ ಸುಖಿ 'ನೋ (no) ಭವಂತು" ಎನ್ನುವುದೇ ಮೂಲ ಮಂತ್ರ. ನಮ್ಮ ಸನಾತನದ 'ಸರ್ವೇ ಸುಖಿನಃ ಸಂತು, ಸರ್ವೇ ಸಂತು ನಿರಾಮಯಾ' ಎನ್ನುವಂತಹ ಉದಾತ್ತ ಆಲೋಚನೆಗಳಿಂದ ಮಾತ್ರ ಜಗತ್ತಿನಲ್ಲಿ ಶಾಂತಿ ಸುಖಗಳನ್ನು ನೆಲೆಸಲು ಸಾದ್ಯವೆಂದರೆ ಅತಿಶಯೋಕ್ತಿಯಾಗಲಾರದು

**ಮುಕ್ತಕ – 854**

**ಸರ್ವಹಿತವೊಂದುಂಟೆ? ಅದಕ್ಕೆ ಪಥ ನಮಗುಂಟೆ? |**

**ನಿರ್ವಾಹಸಾಧನಗಳೆತ್ತೆ? ಗುರುವೆತ್ತ ? ||**

**ಪೂರ್ವವನು ನೆಟ್ಟಗಿಪ ನರಕೃತಿಯಿನಾಗದೇನ್ |**

**ಅರ್ವಾಚಿಯಲಿ ಸೊಟ್ಟು? - ಮಂಕುತಿಮ್ಮ ||**

ಸರ್ವಹಿತವೊಂದುಂಟೆ?=ಸರ್ವ+ಹಿತವು+ಒಂದುಂಟೆ?, ನಮಗುಂಟೆ=ನಮಗೆ+ಉಂಟೆ?,

ನಿರ್ವಾಹಸಾಧನಗಳೆತ್ತ=ನಿರ್ವಾಹ+ಸಾಧನಗಳು+ಎತ್ತ? ಗುರುವೆತ್ತ=ಗುರುವು+ಎತ್ತ?,

ನರಕೃತಿಯಿನಾಗದೇನ್=ನರ+ಕೃತಿಯನ್+ಆಗದೇನ್,

ಪಥ =ಹಾದಿ, ದಾರಿ, ನಿರ್ವಾಹಸಾಧನ=ಕೆಲಸದ ಉಪಕರಣಗಳು, ನೆಟ್ಟಗಿಪ=ಸರಿಪಡಿಸುವ, ಅರ್ವಾಚಿಯಲಿ =ಭವಿಷ್ಯದ ಬದುಕು

ಈ ಜಗತ್ತಿನಲ್ಲಿ ಎಲ್ಲರಿಗೂ ಹಿತವಾದುದು ಎನ್ನುವುದು ಉಂಟೆ? ಇದ್ದರೆ ಅದನ್ನು ಸಾಧಿಸುವ ಹಾದಿ ಯಾವುದು? ಅದನ್ನು ಸಾಧಿಸಲು ನಮಗಿರುವ ಉಪಕರಣಗಳಾವುವು? ನಮಗದನ್ನು ಕಲಿಸುವ ಗುರುವು ಯಾರು? ತಮ್ಮ

ಪೂರ್ವವನ್ನು ಸರಿಪಡಿಸಿಕೊಳ್ಳಲು ಮನುಷ್ಯರ ಈಗಿನ ಕರ್ಮಗಳಿಂದ ಸಾಧ್ಯವಿಲ್ಲವೇ? ಹಾಗೆ ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿ ಭವಿಷ್ಯದ ಬದುಕು ಸೊಟ್ಟಗಾಗುವುದಿಲ್ಲವೇನು? ಎನ್ನುವ ಪ್ರಶ್ನೆಗಳನ್ನು ಕೇಳುತ್ತಾ, ಕೆಲವು ವಿಚಾರಗಳ ಮಂಥನಕ್ಕೆ ನಮಗೆ ಆಹ್ವಾನವಿತ್ತಂತೆ ಇದೆ, ಮಾನ್ಯ ಗುಂಡಪ್ಪನವರ ಈ ಮುಕ್ತಕ.

ಜಗತ್ತಿನ ಎಲ್ಲರೂ ಸಮಾನ ರೀತಿಯಲ್ಲಿ ಸುಖದಿಂದ ಇರಲು ಸಾಧ್ಯವೇ ಎಂದು ಯೋಚಿಸಿದರೆ ಉತ್ತರ ಸಿಗುವುದಿಲ್ಲ. ಸಾಧ್ಯವಿಲ್ಲ ಎಂದೇ ಎನಿಸುತ್ತದೆ. ಏಕೆಂದರೆ, ಪ್ರತಿಯೊಬ್ಬರ ಸುಖದ ಪರಿಕಲ್ಪನೆಯೇ ಬೇರೆ ಮತ್ತು ಅದನ್ನು ಸಾಧಿಸಲು ಉಪಯೋಗಿಸುವ ಸಾಧನಗಳೇ ಬೇರೆ ಬೇರೆ. ಇದು ನಮ್ಮೆಲ್ಲರಿಗೂ ಗೊತ್ತಿರುವ ವಿಚಾರವೇ





ಅಲ್ಲವೇ? ಸಮಾನ ಸುಖವನ್ನು ಸಾಧಿಸುವ ಆಸೆಯೂ ಇಲ್ಲ, ಹಾದಿಯೂ ಗೊತ್ತಿಲ್ಲ ಮತ್ತು ಅದನ್ನು ನಮಗೆ ಹೇಳಿಕೊಡುವವರಾರೂ ಇಲ್ಲ. ಇಂದಿನ ಸ್ವಾರ್ಥಪೂರಿತ ಸಾಮಾಜಿಕ ಸ್ಥಿತಿಯಲ್ಲಿ 'ಸರ್ವಹಿತ' ಎನ್ನುವುದು ಒಂದು ಹುಚ್ಚುತನವೇ ಅಲ್ಲವೇ? ಅದು ಸಾಧ್ಯವೂ ಇಲ್ಲ.

ಮತ್ತೊಂದು ವಿಚಾರವೆಂದರೆ, ಪ್ರತಿಯೊಬ್ಬರ ಸುಖ ದುಃಖವೂ ಅವರವರ ಪೂರ್ವ ಕರ್ಮಾನುಸಾರವಾಗಿರುತ್ತದೆ ಎನ್ನುವುದನ್ನು ಒಪ್ಪುವುದಾದರೆ, ಪ್ರತಿಯೋಬ್ಬಾರ ಪೂರ್ವಕರ್ಮವೂ ಭಿನ್ನಭಿನ್ನವಾಗಿರುವುದರಿಂದ ಅವರ ಈಗಿನ ಸುಖದ ಪ್ರಮಾಣ ಮತ್ತು ಪರಿಮಾಣವೂ ಬೇರೆಬೇರೆಯಾಗಿರುತ್ತದೆ. ಆ ಪೂರ್ವ ಕರ್ಮವನ್ನು ಸರಿಪಡಿಸಲು ಸಾಧ್ಯವಿಲ್ಲವೇ? ಎಂದರೆ ನಮ್ಮ ಪೂರ್ವಜ ಜ್ಞಾನಿಗಳು ನಮಗೆ ಅದರ ಹಲವಾರು ದಾರಿಗಳನ್ನು ತೋರಿದ್ದಾರೆ. ನಮ್ಮ ವೇದೋಕ್ತಿಗಳು, ಪುರಾಣಗಳು, ನೀತಿಕಥೆಗಳು ಮುಂತಾದವುಗಳು, ನಮ್ಮ ಪೂರ್ವಕರ್ಮವನ್ನು ಅನುಭವಿಸುತ್ತಾ ಅದನ್ನು ತೊಳೆದು ಮತ್ತು ತೊಡೆದುಕೊಳ್ಳುವ ಮಾರ್ಗವನ್ನು ನೀಡಿದ್ದಾರೆ. ಅದನ್ನು ಅನುಸರಿಸಿದರೆ 'ಪ್ರಸ್ತುತ'ವನ್ನು ಸರಿಪಡಿಸಿಕೊಳ್ಳುತ್ತಾ ' ಅರ್ವಾಚಿ' ಎಂದರೆ 'ಭವಿಷ್ಯ' ರೂಪಿಸಿಕೊಳ್ಳಬಹುದು. ಇಂದಿನ ಬದುಕಿನ ಸೊಟ್ಟ, ನೆಟ್ಟಗಾಗದ ಹೊರತು ಭವಿಷ್ಯದ ಜೀವನ ನೆಟ್ಟಗಾಗುವುದು ಸಾಧ್ಯವೇ ಇಲ್ಲ, ಅಲ್ಲವೇ?

ನಮ್ಮ ಸನಾತನದಲ್ಲಿ 'ಸರ್ವೇ ಜನಾಃ ಸುಖಿನೋ ಭವಂತು' ಎನ್ನುವ ಅತ್ಯದ್ಭುತ ಉಕ್ತಿಯನ್ನು ನೀಡಿದ್ದಾರೆ ನಮ್ಮ ಋಷಿಮುನಿಗಳು. ಅವರಿಗೆ ಸತ್ಯವಾಗಲೂ ಸರ್ವಹಿತದ ಮತ್ತು ಸರ್ವ ಸುಖದ ಕಲ್ಪನೆ, ಮಾರ್ಗ ಮತ್ತು ಅದಕ್ಕೆ ಬೇಕಾದ ಸಾಧನ ಅಥವಾ ಉಪಕರಣಗಳ ಪೂರ್ಣ ಪರಿಚಯವಿತ್ತು. ಅದನ್ನೇ ಅವರು 'ಜಗದುಪಕಾರಕ್ಕಾಗಿ ನೀಡಿದ್ದಾರೆ. 'ಸ್ವಹಿತ'ವನ್ನು ತ್ಯಜಿಸಿ 'ಸರ್ವಹಿತ' ವನ್ನು ಸಾಧಿಸುವ ಬುದ್ಧಿ ಸಕಲ ಜನರಿಗೂ ಬರಬೇಕು, ಹಾಗಾದರೆ 'ಸರ್ವರ ಹಿತ ಮತ್ತು ಸರ್ವರ ಸುಖ' ವನ್ನು ಸಾಧಿಸಬಹುದು. ಪ್ರಸ್ತುತ ಪರಿಸ್ಥಿತಿ ತೀವ್ರವಾಗಿ ಬದಲಾಗಬೇಕು. ಒಂದು ಬಿರುಗಾಳಿಯಂತಹ ಬದಲಾವಣೆ ಬಂದರೆ ಮಾತ್ರ ಅದು ಸಾಧ್ಯ.

22ಸಂ

| ಕಗ್ಗರಸಧಾರೆ | ಲೋಕ ಪ್ರಗತಿ 854-858 |
|---|---|

ಮುಕ್ತಕ - 855

ಸುಲಭವೇನಲ್ಲ, ನರಲೋಕಹಿತನಿರ್ಧಾರ ।

ಬಲಕೆ ನೋಳ್ವರ್ ಕೆಲರು, ಕೆಲರಡಕೆ ನೋಳ್ವರ್ ॥

ವಿಲವಿಲನೆ ಚಪಲಿಸುವ ಮನುಜಸ್ವಭಾವದಲಿ ।

ನೆಲೆಗೊತ್ತು ಹಿತಕೆಲ್ಲಿ - ಮಂಕುತಿಮ್ಮ ॥

ಕೆಲರೆಡಕೆ =ಕೆಲರು+ಎಡಕೆ ಕೆಲರು=ಕೆಲವರು, ನೋಳ್ವರ್=ನೋಡುವರು, ನೆಲೆ=ತಾಣ, ಗೊತ್ತು=ಹಾದಿ

ಲೋಕದಲ್ಲಿ ಸರ್ವರ ಹಿತವನ್ನು ನಿರ್ಧರಿಸುವುದು ಸುಲಭವೇನಲ್ಲ. ಏಕೆಂದರೆ ಚಪಲತೆಯಿಂದ ಕೂಡಿದ ಚಂಚಲ ಮನಸ್ಸಿನ ಮನುಷ್ಯರಲ್ಲಿ ಕೆಲವರು ಬಲಕ್ಕೆ ನೋಡಿದರೆ ಕೆಲವರು ಎಡಕ್ಕೆ ನೋಡುತ್ತಾರೆ. ಹಾಗಿರುವಾಗ ಆ ಹಿತವನ್ನು ಸಾಧಿಸಲು ನೆಲೆಯೂ ಇಲ್ಲ ಹಾದಿಯೂ ಕಾಣುವುದಿಲ್ಲ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ಎಲ್ಲ ಜನರ ಏಕರೂಪ ಸೌಖ್ಯವನ್ನು ಸಾಧಿಸುವುದು ಸಾಧ್ಯವೇ ಇಲ್ಲ. ಏಕೆಂದರೆ ಪ್ರತಿಯೊಬ್ಬರ ವಿಚಾರ, ಮನೋಭಾವ, ಅವಶ್ಯಕತೆಗಳು ಮತ್ತು ಸುಖದ ಪರಿಕಲ್ಪನೆಯೇ ಭಿನ್ನ ಭಿನ್ನ, ಹಾಗಾಗಿ ಎಲ್ಲರಿಗೂ ಹೊಂದುವಂತಹ ಸುಖದ ಅಥವಾ ಹಿತದ ಒಂದು ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ ಅಲ್ಲವೇ? ಜಗತ್ತಿನ ಮನುಷ್ಯರೆಲ್ಲರಿಗೂ ಇರುವುದು ಒಂದೇ ಧ್ಯೇಯ, ಸುಖವಾಗಿರುವುದು. ಹೆಚ್ಚು ಜನ ತಮ್ಮ ಸ್ವಂತ ಸುಖದ ಚಿಂತೆಯಲ್ಲೇ ಇರುತ್ತಾರೆ. ಕೇವಲ ಕೆಲವರು ಮಾತ್ರ ತಮ್ಮ ಹಿತದ ಜೊತೆಗೆ ಅನ್ಯರ ಹಿತವನ್ನು ಚಿಂತಿಸುತ್ತಾರೆ. ಮತ್ತೂ ಕೆಲವು ಮಹನೀಯರಿದ್ದಾರೆ ಸ್ವಹಿತವನ್ನು ತೊರೆದು ಕೇವಲ ಲೋಕಹಿತವನ್ನೇ ಯೋಚಿಸಿ, ಅದರ ಸಾಧನೆಗೆ ಕಾರ್ಯೋನ್ಮುಖರಾಗುವ ಜನ. ಅಂತಹವರು ವಂದನೀಯರು. ಆದರೆ ಎಲ್ಲರ ಸುಖವನ್ನೂ ಒಂದೇ ರೀತಿಯಲ್ಲಿ ಒಂದೇ ಬಾರಿಗೆ ಸಾಧಿಸಲಾಗದು, ಏಕೆಂದರೆ ಮಾನ್ಯ ಶ್ರೀ ಡಿವಿಜಿಯವರು ಹೇಳುವಂತೆ ಒಬ್ಬರು ಬಲಕ್ಕೆ ನೋಡಿದರೆ ಮತ್ತೊಬ್ಬರು ಎಡಕ್ಕೆ ನೋಡುವರು. ಪ್ರತಿಯೊಬ್ಬರ ಅವಶ್ಯಕತೆ ಮತ್ತು ಅದನ್ನು ಸಾಧಿಸಲು ಬಳಸುವ ಸಾಧನಗಳ ಭಿನ್ನತೆಯಿಂದ ಸುಖ ಸಾಧನೆಯಲ್ಲೂ ಭಿನ್ನತೆ ಇದೆ.

ಪರಹಿತವನ್ನು ಸಾಧಿಸಲು ತ್ಯಾಗಮಾಡಬೇಕಾಗುತ್ತದೆ. ಸ್ವಹಿತದ ತ್ಯಾಗಮಾಡಬೇಕಾಗುತ್ತದೆ. ಅಂತಹ ಕೆಲಸವನ್ನು ನಮ್ಮ ಪೂರ್ವಜರಲ್ಲಿ ಹಲವರು ಮಾಡಿದ್ದರಿಂದಲೇ ಇಂದು ನಮಗೆ ಸುಖದ ಅನುಭವವಾಗುತ್ತಿದೆ. ಅಂತಹವರು 'ಋಷಿತುಲ್ಯರು'. ನಮ್ಮ ಋಷಿಗಳು ಏನು ಹೇಳಿದ್ದಾರೆಂದು ನೋಡಿ, ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಾ, ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿತ್ ದುಃಖಮಾಧ್ವವೇತ್ ' ಎಂದರೆ ಎಲ್ಲರೂ ಸುಖವಾಗಿರಲಿ, ಎಲ್ಲರೂ ನಿರಾಳವಾಗಿರಲಿ, ಎಲ್ಲರೂ ಎಲ್ಲೆಲ್ಲೂ ಒಳ್ಳೆಯದನ್ನೇ ಕಾಣುವಂತಾಗಲಿ, ಎಲ್ಲಿಯೂ

ದುಃಖವಿಲ್ಲದೆ ಇರಲಿ, ಎಂಬಂತಹ ಮಾತುಗಳನ್ನು ಕೇವಲ ನಮ್ಮ ಭಾರತೀಯ ಸನಾತನದ ಮಹೋನ್ನತ ಋಷಿಗಳು ಮಾತ್ರ ಹೇಳಲು ಸಾಧ್ಯ. ಇಂತಹ ವಿಚಾರಗಳು ನಮ್ಮ ಸಂಸ್ಕಾರ ಮತ್ತು ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿ ಅನೂಚಾನವಾಗಿ ಬಂದಿದೆ.

ದುರಂತವೆಂದರೆ ಈಗ್ಗೆ ಒಂದು ಶತಮಾನದಿಂದೀಚೆಗೆ, ಅಭಿವೃದ್ಧಿಯ ಮತ್ತು ಪಾಶ್ಚಾತ್ಯ ವಿದ್ಯಾಭ್ಯಾಸಕ್ರಮದ ಹೆಸರಿನಲ್ಲಿ ನಮ್ಮ ಸಮಾಜದ ಪುರಾತನ ಮತ್ತು ಉದ್ದಾತ್ತ ಮೌಲ್ಯಗಳನ್ನೆಲ್ಲಾ ನಾವು ತೂರಿಬಿಟ್ಟು ಕೇವಲ ಸ್ವಾರ್ಥ ಸಾಧನೆಗೆ ಬಲಿಯಾಗಿದ್ದೇವೆ. ಮಾತ್ರವಲ್ಲ 'ಸುಖ-ಹಿತ-ನೆಮ್ಮದಿ-ನಿರಾಳ' ಎನ್ನುವ ಪದಗಳ ಅರ್ಥವನ್ನು ನಾವು ಸಂಪೂರ್ಣ ಬದಲಾಯಿಸಿ, ಇಂದ್ರಿಯ ಸುಖವನ್ನೇ ಸುಖವೆಂದುಕೊಂಡು, ಸ್ವಾರ್ಥಸಾಧನೆಯೇ ಧ್ಯೇಯವಾಗಿ, ಅನ್ಯರ ನೆಮ್ಮದಿಯನ್ನು ಹಾಳುಮಾಡುವುದೇ ಗುರಿಯಾಗಿ, ನಿರಾಳವಾಗಿರುವುದನ್ನು ಸಂಪೂರ್ಣವಾಗಿ ತೊರೆದು ನಮ್ಮ ಜೀವನವನ್ನು ನರಕವನ್ನಾಗಿಸಿಕೊಂಡು, ನಾವು ಬಯಸಿದ ಸುಖವನ್ನು ಪಡೆಯುವುದಕ್ಕಾಗಿ ಅನ್ಯರ ಬದುಕನ್ನೂ ನರಕವಾಗಿಸಲು ಸಿದ್ಧರಿದ್ದೇವೆ. ಇನ್ನು ಮಾನ್ಯ ಡಿವಿಜಿಯವರು ಹೇಳುವ ಸರ್ವಸುಖ, ಲೋಕಹಿತ ಎನ್ನುವುದು ಮರೇಚಿಕೆಯಾಗೇ ಉಳಿಯುತ್ತದೆ. ಅಲ್ಲವೇ? ಎಲ್ಲರೂ ಏಕಮುಖವಾಗಿ ಸ್ವಾರ್ಥವನ್ನು ತೊರೆದು ಪರಹಿತವನ್ನೇ ಬಯಸಿದರೆ ಅವರ ಕನಸಿನ ಸ್ಥಿತಿ ಸಾಧ್ಯವಾಗಬಹುದು.

**ಮುಕ್ತಕ – 856**

**ರಾಮಕಾರ್ಮುಕ,ಕೃಷ್ಣಯುಕ್ತಿ,ಗೌತಮಕರುಣೆ |**

**ಭೂಮಿಭಾರವನಿಳುಸೆ ಸಾಲದಾಗಿರಲು ||**

**ಸಾಮಾನ್ಯರೆನಿತು ತಾಂ ಪೆಣಗಿದೊಡಮೇನಹುದು? |**

**ಕ್ಷೇಮವೆಂದುಂ ಮೃಗ - ಮಂಕುತಿಮ್ಮ ||**

ಭೂಮಿಭಾರವನಿಳುಸೆ=ಭೂಮಿ+ಭಾರವನು+ಇಳಿಸೆ, ಸಾಲದಾಗಿರಲು=ಸಾಲದು+ಆಗಿರಲು,

ಸಾಮಾನ್ಯರೆನಿತು=ಸಾಮಾನ್ಯರು+ಎನಿತು, ಪೆಣಗಿದೊಡಮೇನಹುದು=ಪೆಣಗಿದೊಡೆಮ್+ಏನು+ಅಹುದು.

ಕ್ಷೇಮವೆಂದುಂ ಕ್ಷೇಮವು+ಎಂದುಂ

ಕಾರ್ಮುಕ,= ಧನುಸ್ಸು, ಬಿಲ್ಲು, ಪೆಣಗಿದೊಡೆಮ್=ಹೆಣಗಿದರೆ, ಮೃಗ್ಯ=ಮರೀಚಿಕೆ, ಬಿಸಿಲ್ಗುದುರೆ.

ರಾಮನ ಬಿಲ್ಲು, ಕೃಷ್ಣನ ಯುಕ್ತಿ, ಗೌತಮನ ಕಾರುಣ್ಯಗಳು ಈ ಭೂ ಭಾರವನ್ನಿಳಿಸಲು ಸಾಲದಾಗಿರಲು ಸಾಮಾನ್ಯ ಮನುಷ್ಯರು ಎಷ್ಟು ಹೆಣಗಾಡಿದರೇನು? ಜಗತ್ತಿನ ಕ್ಷೇಮವನ್ನು ಸಾಧಿಸಲಾಗುವುದೇ? ಸರ್ವ ಜನರ, ಸಮನಾದ ಕ್ಷೇಮವೆಂದೂ, ಕೈಗೆಟುಕದ ಮರೀಚಿಕೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅಧರ್ಮವನ್ನು ನಿಗ್ರಹಿಸಿ, ಧರ್ಮವನ್ನು ಸ್ಥಾಪಿಸಲು ಪರಮಾತ್ಮನೇ ಅವತಾರವೆತ್ತುತ್ತಾನೆ ಎನ್ನುವುದು ನಮ್ಮ ಪುರಾಣಗಳಲ್ಲಿ, ಗೀತೆಯಲ್ಲಿ ಹೇಳಲ್ಪಟ್ಟಿದೆ. 'ಅಭ್ಯುತ್ಥಾನಮಧರ್ಮಸ್ಯ" ಎಂದರೆ ಧರ್ಮದ ಉತ್ಥಾನ ಮಾಡಿ





ಅಧರ್ಮಿಗಳು ಧರ್ಮವನ್ನು ಪಾಲಿಸುವಂತೆ ಮಾಡುವುದು, ಎಂದರೆ ಅವರ ಪರಿವರ್ತನೆ ಮಾಡುವುದು ಎನ್ನುವ ಅರ್ಥ ಬರುತ್ತದೆ ಅಲ್ಲವೇ? ಆದರೆ ನೋಡಿ ರಾಮನ ಅವತಾರದಲ್ಲಿ, ಮಾರೀಚ, ಸುಭಾಹು, ಖರ, ಧೂಷಣ, ರಾವಣ, ಕುಂಭಕರ್ಣ ಮತ್ತು ಕೃಷ್ಣಾವತಾರದಲ್ಲಿ, ಜರಾಸಂದ, ಭೀಷ್ಮ, ದ್ರೋಣ, ಕರ್ಣ ಧುರ್ಯೋಧನ ಮುಂತಾದ ಅಧರ್ಮವನ್ನು ಸಮರ್ಥಿಸಿದವರನ್ನೆಲ್ಲಾ ದೈಹಿಕವಾಗಿ ವಿಸರ್ಜಿಸಿಯೇ ಧರ್ಮ ಸ್ಥಾಪನೆ ಮಾಡಬೇಕಾಯಿತು. ಸಾಕ್ಷಾತ್ ಪೂರ್ಣಾವತಾರಿಯಾದ ಶ್ರೀ ಕೃಷ್ಣ, ಕುರುಕ್ಷೇತ್ರ ಯುದ್ಧವನ್ನು ನಿಲ್ಲಿಸುವ ಸಲುವಾಗಿ ನಡೆಸಿದ 'ಸಂಧಾನ' ದಲ್ಲಿ ಪರಿಪರಿಯಾಗಿ ಯುದ್ಧದ ಪರಿಣಾಮಗಳನ್ನು ವಿವರಿಸಿದರೂ, ದುರ್ಯೋಧನನ ಮನಸ್ಸನ್ನು ಪರಿವರ್ತಿಸಲು ಸಾಧ್ಯವಾಗಲಿಲ್ಲ ಅಲ್ಲವೇ? ಹಾಗಾಗಿದ್ದಿದ್ದರೆ ಅದು ಕೃಷ್ಣನ ಜಯವಾಗುತ್ತಿತ್ತು ಎನ್ನುವುದು ಕೆಲವರ ಅಭಿಪ್ರಾಯ.

ಅವರುಗಳ ಮನಃಪರಿವರ್ತನೆ ಮಾಡಲಾಗಿದ್ದಿದ್ದರೆ, ಅದು ಸಾಧನೆಯಾಗುತ್ತಿತ್ತು. ಆದ್ದರಿಂದ ಮಾನ್ಯ ಗುಂಡಪ್ಪನವರು ರಾಮನ ಬಿಲ್ಲು, ಕೃಷ್ಣನ ಯುಕ್ತಿ, ಗೌತಮನ ಕಾರುಣ್ಯಗಳು 'ಭೂಮಿಭಾರವನಿಳುಸೆ ಸಾಲದಾಗಿರಲು' ಎಂದು ಹೇಳುತ್ತಾ ಅತಿ ಪರಾಕ್ರಮಿಯಾದ ರಾಮನ ಬಿಲ್ಲುಬಾಣಗಳು, ಮಹಾನ್ ತಂತ್ರಗಾರನಾದ ಕೃಷ್ಣನ ಯುಕ್ತಿಗಳು, ಕರುಣೆಯೇ ಮೂರ್ತವೆತ್ತ ಗೌತಮ ಬುದ್ಧನ 'ಅಹಿಂಸಾ' ಭೋಧನೆಗಳು ಸಾಲದಾಗಿರಲು "ಹುಲುಮಾನವರಾದ ನಾವು ಅದನ್ನು ಸಾಧಿಸಲು ಹೇಗೆ ಸಾಧ್ಯ?" ಎನ್ನುತ್ತಾರೆ. ಈ ಸರ್ವಜನ ಕ್ಷೇಮವು ಸದಾ ಮರೀಚಿಕೆಯಾಗಿಯೇ ಉಳಿದಿದೆ. ಪ್ರಾಪಂಚಿಕ ವಿಷಯಗಳಲ್ಲಿ ಏಕಮುಖ ಅಪೇಕ್ಷೆ ಬರಲು ಸಾಧ್ಯವೇ ಇಲ್ಲ. 'ಪಂಚಭೂತ'ಗಳಿಂದ ಆಗಿ, ಕೂಡಿ, ಪ್ರೇರಿತವಾಗಿ ನಡೆದುಕೊಂಡು ಹೋಗುತ್ತಿರುವುದೇ ಪ್ರಪಂಚ' ಈ ಪಂಚಭೂತಗಳಿಂದ ಪ್ರೇರಿತವಾದ ಪ್ರಪಂಚ ಕೋಟಿ ಕೋಟಿ ವಿಧಗಳಲ್ಲಿ ವ್ಯಕ್ತವಾಗಿರುವುದರಿಂದ, ಇಲ್ಲಿರುವ ಪ್ರತೀ ಜೀವಿಯ ಅಪೇಕ್ಷೆ ಮತ್ತು ಆಲೋಚನೆಯೂ ಅಷ್ಟೇ ವಿಧವಾಗಿರುವುದರಿಂದ 'ಒಂದೇ ರೀತಿಯ ಸುಖದ ಸ್ಥಿತಿ ಇರಲು ಸಾಧ್ಯವೇ ಇಲ್ಲ.

ಪರಮಾತ್ಮನೇ ಕೋಟ್ಯಾಂತರ ರೂಪಗಳಲ್ಲಿ ಪ್ರಕಟಗೊಂಡು, ಅಷ್ಟೂ ರೂಪಗಳಲ್ಲಿ ತನ್ನದೇ ರೀತಿಯಲ್ಲಿ ಈ ಜಗತ್ತಿನಲ್ಲಿ ತನ್ನ ಲೀಲೆಯನ್ನು ನಡೆಸುತ್ತಿರುವಾಗ, ಸರ್ವಜನರ 'ಏಕರೂಪ' ಸುಖ ಅಥವಾ ಕ್ಷೇಮವನ್ನು ನಾವು ಕಾಣಲು ಸಾಧ್ಯವೇ ಇಲ್ಲ ಅಲ್ಲವೇ? ಹಾಗಾಗಿ ಅಂತಹ ಸ್ಥಿತಿಯನ್ನು ಅಪೇಕ್ಷೆ ಪಟ್ಟರೆ ಅದು ನಮಗೆ ಸಿಗದೇ 'ಕ್ಷೇಮವೆಂದುಂ ಮೃಗ್ಯ' ಎಂದು ಡಿವಿಜಿ ಯವರು ಹೇಳುವಂತೆ ಅಂತಹ ಸ್ಥಿತಿ ಒಂದು ಮರೀಚಿಕೆಯಾಗಿಯೇ ಉಳಿಯುತ್ತದೆ. ಎಲ್ಲರಿಗೂ ಸಮನಾದ ಸುಖ, ಸಂತೋಷ, ಕ್ಷೇಮವಿಲ್ಲದಿದ್ದರೂ, ಪ್ರತಿಯೊಬ್ಬರೂ ಮತ್ತೊಬ್ಬರಿಂದ ಏನನ್ನೂ ಬಯಸದೆ, ಸಾಧ್ಯವಾದಷ್ಟು ಪರಸ್ಪರ ಉಪಕಾರಿಗಳಾಗಿ ಬದುಕಿದರೆ ಅದೇ ನಮಗೆ ಒಂದು ಬೃಹತ್ ಸಾಧನೆಯಾಗುತ್ತದೆ ಅಲ್ಲವೇ?





**ಮುಕ್ತಕ - 857**

**ಸತತಮಾರ್ಗಣೆ, ಸಿದ್ಧಿಯಂತಿರಲಿ, ಮಾರ್ಗಣೆಯೆ ।**
**ಗತಿ ಮನುಜಲೋಕಕ್ಕೆ ಜಗದ ಜೀವವನು ॥**
**ಕೃತಕಾಮರೆಲ್ಲರಾದೊಡೆ ಕೃತ್ಯವುಳಿಯದೊಡೆ ।**
**ಕಥೆ ಮುಗಿಯುವುದಲ ಜಗಕೆ ? ಮಂಕುತಿಮ್ಮ ॥**

ಸಿದ್ಧಿಯಂತಿರಲಿ=ಸಿದ್ಧಿಯು+ಅಂತಿರಲಿ, ಕೃತಕಾಮರೆಲ್ಲರಾದೊಡೆ=ಕೃತ+ಕಾಮರು+ಎಲ್ಲರು+ಆದೊಡೆ , ಕೃತ್ಯವುಳಿಯದೊಡೆ=ಕೃತ್ಯವು+ಉಳಿಯದೊಡೆ, ಮುಗಿಯುವುದಲ=ಮುಗಿಯುವುದು+ಅಲ.

ಸತತಮಾರ್ಗಣೆ=ನಿರಂತರ ಹುಡುಕಾಟ, ಸಿದ್ಧಿಯು=ಸಾಧನೆ, ಕೃತಕಾಮ=ಆಸೆಗಳನ್ನು ಸಂಪೂರ್ಣವಾಗಿ ಪೂರೈಸಿಕೊಂಡವ, ಕೃತ್ಯ=ಕೆಲಸ,

ಮನುಜ ಲೋಕದಲ್ಲಿ, 'ಸರ್ವಹಿತ ಅಥವಾ ಸರ್ವಸುಖ' ವನ್ನು ಸಾಧಿಸುವ ವಿಚಾರವನ್ನು ಮುಂದುವರೆಸುತ್ತಾ, ಅದನ್ನು ಸಾಧಿಸುವುದಿರಲಿ, ಅದರ ನಿರಂತರ ಹುಡುಕಾಟವೇ ಮನುಜ ಲೋಕಕ್ಕೆ ಉಳಿದಿರುವ ಗತಿ. ಏಕೆಂದರೆ, ಎಲ್ಲರೂ ತಮಗೆ ಬೇಕಾದುದೆಲ್ಲ ಸಿಕ್ಕಿದೆ. ಮತ್ತೇನೂ ಆಸೆಯಿಲ್ಲ, ಹಾಗಾಗಿ ನಮಗಿನ್ನೇನೂ ಮಾಡಲು ಉಳಿದಿಲ್ಲ ಎಂದು ಯೋಚಿಸಿಬಿಟ್ಟರೆ, ಜಗತ್ತಿನ ಕಥೆಯೇ ಮುಗಿದು ಹೋಗುವುದಲ್ಲ. ಹಾಗಾಗಿ ನಾವು ಬಯಸುವ 'ಸರ್ವಹಿತ ಅಥವಾ ಸರ್ವಸುಖ' ದ ಸ್ಥಿತಿ ಈ ಜಗತ್ತಿನಲ್ಲಿ ಬರುವುದೇ ಇಲ್ಲ ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯನ ಹೃದಯದಲ್ಲಿ ಉದ್ಭವವಾಗುವ ಆಸೆ ಆಕಾಂಕ್ಷೆಗಳೇ, ಇವನನ್ನು ಕಾರ್ಯೋನ್ಮುಖನನ್ನಾಗಿಸುತ್ತದೆ. ಇವನಲ್ಲಿ ಆಸೆಯಿರುವ ತನಕ ಈ ಜಗದ್ವ್ಯಾಪಾರ ನಡೆಯುತ್ತಲೇ ಇರುತ್ತದೆ. ನಿಮಿಷ ನಿಮಿಷಕ್ಕೆ ಬದಲಾಗುವ ಮತ್ತು ಒಂದು ಪೂರೈಸಿದರೆ ಮತ್ತೊಂದನ್ನು ಆಸೆಪಡುವ ಮನುಷ್ಯನ ಮನೋ ಪ್ರವೃತ್ತಿ ಹೀಗಿರುವ ತನಕ ಈ ಜಗನ್ನಾಟಕ ನಡೆಯುತ್ತಲೇ ಇರುತ್ತದೆ, ಅಲ್ಲವೇ? ಆ ಪರಮಾತ್ಮನು ತನ್ನೊಳಗಿಂದಲೇ ಈ ಜಗತ್ತನ್ನು ವೈವಿಧ್ಯಮಯವಾಗಿ ಸೃಷ್ಟಿಸಿ, ಪ್ರತಿ ಜೀವಿಯ ಮನಸ್ಸಿನಲ್ಲಿ ಆಸೆಯನ್ನಿಟ್ಟು, ಆ ಆಸೆಗಳನ್ನು ಪೂರೈಸಿಕೊಳ್ಳಲು ಸಾಧನಗಳನ್ನೂ ಕೊಟ್ಟು, ಒಂದು ಆಸೆ ಪೂರೈಸಿಕೊಂಡರೆ ಮತ್ತೊಂದನ್ನು ಮನಸ್ಸಿನಲ್ಲಿ ಉದ್ಭವವಾಗುವಂತಹ ಗುಣಗಳನ್ನು ಇಟ್ಟು, ಆ ಆಸೆಗಳನ್ನು ಪೂರೈಸಿಕೊಳ್ಳಲು ಮನುಷ್ಯರು ನಡೆಸುವ ಪ್ರಯತ್ನ, ಹೋರಾಟ ಮತ್ತು ಅದರಿಂದ ಅವರುಗಳು ಪಡೆದುಕೊಳ್ಳುವ ಸಂತೋಷ, ನೋವು, ದುಃಖಗಳ ಭಾವಗಳನ್ನೆಲ್ಲಾ ತನ್ನ ಜಗನ್ನಾಟಕದ 'ಅಂಕ'ಗಳನ್ನಾಗಿಸಿಕೊಂಡು, ಮನುಜಲೋಕದ ಬಾಳಿನ ನಾಟಕ ಅವ್ಯಾಹತವಾಗಿ ನಡೆಯುವಂತೆ ನೋಡಿ ಕೊಂಡು, ತನ್ನ ಲೀಲಾವಿನೋದವನ್ನು ಮೆರೆದಿದ್ದಾನೆ. ಇದು ಸನಾತನದ ಸಿದ್ಧಾಂತ.

ಒಂದು ವೇಳೆ ಜಗತ್ತಿನ ಜನರೆಲ್ಲಾ ತಮ್ಮ ತಮ್ಮ ಆಸೆಗಳನ್ನು ಪೂರೈಸಿಕೊಂಡುಬಿಟ್ಟು ಮತ್ತೆ ಯಾವ ಆಸೆಯೂ ಇಲ್ಲದೆ ಇದ್ದು ಬಿಟ್ಟರೆ, ಇವರ ಪ್ರಯತ್ನಗಳೆಲ್ಲಾ ನಿಂತುಹೋಗಿ, ಜಗತ್ತಿನ ವ್ಯಾಪಾರವೇ ನಿಂತುಹೋದರೆ, ಪರಮಾತ್ಮನ ಈ ಜಗನ್ನಾಟಕವೇ ನಿಂತು ಹೋಗುತ್ತದೆ, ಅಲ್ಲವೇ? ಮನುಷ್ಯನ ಮನಸ್ಸಿನಲ್ಲಿ ಆಸೆಯ ಬುಗ್ಗೆ ಬತ್ತಿ ಹೋದರೆ ಎಂತಹ ಸ್ಥಿತಿ ಬರುವುದೆನ್ನುವುದನ್ನು ಊಹಿಸಲೂ ಸಾಧ್ಯವಿಲ್ಲ. ಎಲ್ಲವೂ ಸ್ಥಬ್ಧ. ಯಾವ ಹೊಸ ಆಲೋಚನೆಯೂ ಇಲ್ಲದೆ, ಯಾವ ಹೊಸ ಆವಿಶ್ಕಾರವೂ ನಡೆಯದೆ, ಜಗತ್ತು ಎಲ್ಲಿರುತ್ತದೆಯೋ ಅಲ್ಲೇ ಇದ್ದು, ಕಾಲಕಳೆದಂತೆ ಎಲ್ಲರ ಅಳಿವಿನೊಂದಿಗೆ ಜಗತ್ತೂ ಅಳಿದುಹೋಗುತ್ತದೆ ಅಲ್ಲವೇ? ಅದು ಹಾಗೆ ಆಗಬಾರದೆಂದೇ ಮನುಷ್ಯನ ಮನಸ್ಸಿನಲ್ಲಿ ಆಸೆಯ ಬುಗ್ಗೆ ಸದಾ ಪುಟಿಯುತ್ತಿರುವಂತೆ ನಿಯಮಿಸಿದ್ದಾನೆ. ಆ ಸೃಷ್ಟಿ ಕರ್ತ, ಇದರಿಂದಲೇ ಅಲ್ಲವೇ, ಮನುಷ್ಯನ ಬದುಕಿನಲ್ಲೂ ನಿರಂತರ ಬದಲಾವಣೆ,

ಹೀಗಿರುವಾಗ ಜಗತ್ತಿನ ಜನರೆಲ್ಲರಿಗೂ ಸಮಾನವಾದ 'ಸುಖ ಮತ್ತು ಆನಂದದ' ಸ್ಥಿತಿ ಬರಲು ಸಾಧ್ಯವೇ ಇಲ್ಲ ಅಲ್ಲವೇ? ಇಂತಹ ಸ್ಥಿತಿಯಲ್ಲಿ, ನಾವು ನಮಗೆ ಹಿತವಾಗುವ ಆಸೆಯನ್ನು ಪಡುವುದು ಸಹಜ. ಅನ್ಯರಿಗೆ ಅಹಿತವಾಗದಂತೆ ನಮ್ಮ ಆಸೆಗಳನ್ನು ಪೂರೈಸಿಕೊಂಡರೆ, ಅದು ಸಂಸ್ಕಾರ. ತಮ್ಮ ಹಿತವನ್ನೂ ಸಾಧಿಸುತ್ತಾ ಅನ್ಯರ ಹಿತವನ್ನೂ ಬಯಸಿ ಸಾಧಿಸಿದರೆ ಅದು ಸಾಧನೆ. ತಮ್ಮ ಹಿತವನ್ನು ಬದಿಗೊತ್ತಿ ಪರರ ಹಿತವನ್ನು ಸಾಧಿಸುವುದು, ತ್ಯಾಗ. ಹೀಗೆ ಯಾವುದಾದರೊಂದು ಮಾರ್ಗವನ್ನು ಅನುಸರಿಸಿ, ಈ ಜಗನ್ನಾಟಕದಲ್ಲಿನ ನಮ್ಮ ಪಾತ್ರವನ್ನು ನಿರ್ವಹಿಸುವುದು, ಸಾರ್ಥಕಬದುಕಿಗೆ ಹಾದಿ. ಎಲ್ಲರೂ ಪ್ರಯತ್ನಿಸಬಹುದು.

**ಮುಕ್ತಕ – 858**

**ಪ್ರಿಯಹಿತಗಳನ್ವೇಷೆಯಿಂ ಕರ್ಮಪರಿಪೋಷೆ ।**

**ಕ್ರಿಯೆಯ ಪಾರಂಪರ್ಯ ಜನ್ಮಾಂತರೀಯ ॥**

**ನಿಯತವಿಂತು ಜಗತ್ಪ್ರವರ್ಧನೆಗೆ ನರತೃಷ್ಣ ।**

**ಜಯ ಪೂರ್ಣವೆಂದದಕೆ – ಮಂಕುತಿಮ್ಮ ॥**

ಪ್ರಿಯಹಿತಗಳನ್ವೇಷೆಯಿಂ=ಪ್ರಿಯ+ಹಿತಗಳ ಅನ್ವೇಷೆಯಿಂ, ನಿಯತವಿಂತು=ನಿಯತವು+ಇಂದು, ಜಗತ್ಪ್ರವರ್ಧನೆಗೆ=ಜಗತ್+ಪ್ರವರ್ಧನೆಗೆ, ಪೂರ್ಣವೆಂದದಕೆ=ಪೂರ್ಣವು+ಎಂದು+ಅದಕೆ.
ಪರಿಪೋಷೆ=ಪರಿಪೋಷಣೆ, ಕ್ರಿಯೆಯ=ಕೆಲಸದ, ನಿಯತವು=ವಿಧಿ, ಪ್ರವರ್ಧನೆ=ಪ್ರಗತಿಪೂರಿತ ವರ್ಧನೆ, ನರತೃಷ್ಣೆ=ಮನುಷ್ಯನ ಬಯಕೆ,

ತನಗೆ ಪ್ರಿಯ ಮತ್ತು ಹಿತವಾದದ್ದನ್ನು ಹುಡುಕುವ ಮನುಷ್ಯನ ಕರ್ಮಗಳ ನಿರಂತರ ಪೋಷಣೆ, ಪರಂಪರಾನುಗತವಾಗಿ, ಜನ್ಮಜನ್ಮಾಂತರಗಳಿಂದ ನಡೆಯುತ್ತಿದೆ. ವಿಧಿ ಅಥವಾ ವಿಧಾತ ತನ್ನ ಈ ಜಗತ್ತಿನ ವರ್ಧನೆಗಾಗಿಯೇ ನರನ ಮನಸ್ಸಿನಲ್ಲಿ ಬಯಕೆಗಳನ್ನು ಹುಟ್ಟಿಸುತ್ತದೆ(ತ್ತಾನೆ). ಈ ಬಯಕೆಗಳು ಮತ್ತು ಅವುಗಳ





ಪೂರೈಕೆಗೆ ನಡೆಯುವ ಪ್ರಯತ್ನಗಳು ಅವ್ಯಾಹತವಾಗಿ ನಡೆಯುತ್ತಿರುವುದರಿಂದ, 'ಅವನಿಗೆ ಸಂಪೂರ್ಣ ಜಯ ಎಂದು ಸಿಗುವುದೋ' ಎಂದು ಒಂದು ಅದ್ಭುತ ವಿಚಾರವನ್ನು ನಮ್ಮ ಮುಂದೆ ಇಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇದೊಂದು ಕೊನೆಯಿಲ್ಲದ ಹುಡುಕಾಟ. ಸಂಪೂರ್ಣ ಸಂತೋಷದ ಸ್ಥಿತಿ, ಆನಂದದ ತುರೀಯಾವಸ್ಥೆ, ಮತ್ತೆ ಯಾವ ಅನ್ಯ ಬಯಕೆಗಳೂ ಉಂಟಾಗದಂತಹ, ಒಂದು ಸಂಪೂರ್ಣ ತೃಪ್ತಿಯ ನೆಲೆ ಮನುಷ್ಯನಿಗೆ ಎಂದೆಂದಿಗೂ ಸಿಗುವುದಿಲ್ಲ ಎನ್ನುವುದು ಇಲ್ಲಿನ ಸಾರಾಂಶ. ಅಂತಹ ಒಂದು ನೆಲೆ ಸಿಕ್ಕಿಬಿಟ್ಟರೆ ಮುಂದಿನ ಯಾವ ವೃದ್ಧಿಯೂ ನಡೆಯದೆ ಜಗತ್ತು ಸ್ತಬ್ಧವಾಗಿಬಿಡುತ್ತದಲ್ಲ, ಆದ್ದರಿಂದ ವಿಧಿಯೇ, ಮನುಷ್ಯನ ಮನಸ್ಸಿನಲ್ಲಿ ಸದಾ ಹೊಸತನ್ನು ಹುಡುಕುವ

ಮತ್ತು ಆ ಹೊಸತರಿಂದ ತನ್ನ ಸ್ಥಿತಿಯನ್ನು ಮತ್ತಷ್ಟು ಅಭಿವೃದ್ಧಿಸಿಕೊಳ್ಳುವಂತಹ ಆಸೆಯನ್ನು ಮತ್ತು ಅದಕ್ಕೆ ಪೂರಕವಾದ ಗುಣವನ್ನು ಇಟ್ಟಿದ್ದಾನೆ.

ಮನುಷ್ಯನ, ಈ ಜಗತ್ತಿನ ಜೀವನದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಸಹಸ್ರಾರು ವರ್ಷಗಳ ಹಿಂದೆ ಎರಡು ಕಲ್ಲುಗಳ ತಿಕ್ಕುವುದರಿಂದ 'ಬೆಂಕಿ'ಯನ್ನು ಸೃಷ್ಟಿಸಿದ, 'ಗಾಲಿ' ಯನ್ನು ಕಂಡುಹಿಡಿದ ಮನುಷ್ಯನ ಸಂತತಿಯೇ ಇಂದಿಗೂ ಇನ್ನೂ ಹೊಸಹೊಸತನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡುತ್ತಾ, ತನ್ನ ಈ ಜಗತ್ತಿನ ಜೀವನವನ್ನು ಮತ್ತಷ್ಟು ಸುಖಮಯಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ಇದೆ ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು 'ಕ್ರಿಯೆಯ ಪಾರಂಪರ್ಯ ಜನ್ಮಾಂತರೀಯ' ಎಂದು ಹೇಳಿ ಈ ಹೊಸತನ್ನು ಕಂಡುಹಿಡಿಯುವ ಕ್ರಿಯೆ ಜನ್ಮ ಜನ್ಮಾಂತರದಿಂದ, ಪರಂಪರಾನುಗತವಾಗಿ ನಡೆದು ಬಂದಿದೆ ಎನ್ನುತ್ತಾರೆ.

ಜೀವನದಲ್ಲಿ ಅಭಿವೃದ್ಧಿ ಎಂದರೆ ಮನುಷ್ಯನ ಜೀವನ ಮತ್ತು ಸಕಲ ಜೀವರಾಶಿಗಳ ಜೀವನ ನಿರಾಮಯವಾಗುವುದು, ಎಂದರೆ ಶಾಂತವಾಗಿ ನಡೆಯುವುದು. ಪ್ರಸ್ತುತ ಪರಿಸ್ಥಿತಿಯನ್ನು ನೋಡಿದರೆ, ನಮ್ಮ ಪೂರ್ವಜರು ನಮಗಾಗಿ ಮತ್ತು ನಮ್ಮ ಸುಖ, ಶಾಂತಿ ಮತ್ತು ಹಿತಕ್ಕಾಗಿ ಆವಿಷ್ಕರಿಸಿದ ಸಕಲವನ್ನೂ ನಾವು ಮೂಲೆಗೆ ತಳ್ಳಿ, 'ಹೊಸತನ್ನೇನೋ ಕಂಡುಹಿಡಿದ್ದಿದ್ದೇವೆ' ಎಂದು ಬೀಗುತ್ತಾ ಮನುಷ್ಯನ ಅಹಂಕಾರವನ್ನು ತಣಿಸುವ ಮತ್ತು ಮನುಷ್ಯನನ್ನು ಅಧೋಗತಿಗೆ ಕೊಂಡುಹೋಗುವ ಎಲ್ಲಾ ಸಾಧನಗಳನ್ನೂ ಕಂಡುಹಿಡಿದಿದ್ದೇವೆ. ಇದು ಖಂಡಿತ ಪ್ರಗತಿಯಲ್ಲ, ಇದು ಅಧೋಗತಿ. ಇದರ ಅರಿವುಂಟಾಗಿ ಮತ್ತೆ ಸಕಲರಿಗೂ ಹಿತವನ್ನುಂಟು ಮಾಡುವ ಮಾರ್ಗದಲ್ಲಿ ನಡೆದರೆ ಇಂದಿನ 'ಕ್ಲೀಷೆ ಮತ್ತು ಸಂಕಟ' ದಿಂದ ಕೂಡಿದ ಜೀವನ ಬದಲಾಗಿ ಶಾಂತಿ ನೆಮ್ಮದಿಗಳು ನೆಲೆಸಬಹುದು.





**ಮುಕ್ತಕ - 859**

**ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ |**

**ವಿಕೃತಿಗೊಳಿಸುವನವನು ಆಕೆಯಂಗಗಳ ||**

**ಭೂಕೃಷಿಕ ರಸತಂತ್ರಿ ಶಿಲ್ಪಿ ವಾಹನಯಂತ್ರಿ |**

**ವ್ಯಾಕೃತಿಸರೇನವಳ? - ಮಂಕುತಿಮ್ಮ ||**

ಪ್ರಕೃತಿಯನವರತ=ಪ್ರಕೃತಿಯು+ಅನವರತ, ತಿದ್ದುತಿರುವಂತೆ=ತಿದ್ದುತ+ಇರುವಂತೆ,

ವಿಕೃತಿಗೊಳಿಸುವನವನುಮ್=ವಿಕೃತಿಗೊಳಿಸುವನು+ಅವನು, ಆಕೆಯಂಗಗಳ=ಆಕೆಯ+ಅಂಗಗಳ,

ವ್ಯಾಕೃತಿಸರೇನವಳ=ವ್ಯಾಕೃತಿಸರೇನು+ಅವಳ.

ಅನವರತ=ನಿರಂತರವಾಗಿ, ವಿಕೃತಿಗೊಳಿಸು=ವಿರೂಪಗೊಳಿಸು ಅಥವಾ ಹಾಳುಮಾಡು,

ವ್ಯಾಕೃತಿಸು=ವಿಕೃತಗೊಳಿಸು(ಹಾಳುಮಾಡು)

ಪ್ರಕೃತಿ ನಿರಂತರವಾಗಿ ಮನುಷ್ಯನನ್ನು ತಿದ್ದುತ್ತಿರುವಂತೆಯೇ, ಮನುಷ್ಯ ಪ್ರಕೃತಿಯನ್ನು ವಿರೂಪಗೊಳಿಸುತ್ತಾನೆ. ಭೂಮಿಯನ್ನು ಕೃಷಿ ಮಾಡುವವನು, ಭೂ ಗರ್ಭದಿಂದ ರಾಸಾಯನಿಕಗಳನ್ನು, ಅದಿರುಗಳನ್ನು ಶೋಧಿಸುವವನು, ಲೋಹ ಮತ್ತು ಕಲ್ಲುಗಳಿಂದ ಶಿಲ್ಪಗಳನ್ನು ಮಾಡುವವನು, ತನ್ನ ಯಾತ್ರೆಗಾಗಿ ವಾಹನಗಳನ್ನು ತಯಾರುಮಾಡುವವನು ಎಲ್ಲರೂ ಈ ಪ್ರಕೃತಿಯನ್ನು ವಿಕೃತ ಗೊಳಿಸುವುದಿಲ್ಲವೇನು? ಎಂದು ಮನುಷ್ಯ ಮತ್ತು ಪ್ರಕೃತಿಯ ನಡುವಿನ ಪರಸ್ಪರ ಸಂಬಂಧವನ್ನು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರಕೃತಿಯ ಅಂಗಗಳಾದ, ಗಾಳಿ, ನೀರು, ನೆಲ, ಬೆಟ್ಟ, ಗುಡ್ಡ, ಗಿಡ, ಮರ, ಪ್ರಾಣಿ, ಪಕ್ಷಿ ಹೀಗೆ ಎಲ್ಲವನ್ನೂ ಮನುಷ್ಯ ತನ್ನ ಉಪಯೋಗಕ್ಕಾಗಿಯೇ ಸೃಷ್ಟಿಸಲ್ಪಟ್ಟಿದೆ ಎನ್ನುವಂತೆ, ಎಲ್ಲವನ್ನೂ ತನಗೆ ಹೇಗೆ ಬೇಕೋ ಹಾಗೆ ಉಪಯೋಗಿಸುತ್ತಾನೆ. ದುರಂತವೆಂದರೆ, ಕೇವಲ ಉಪಯೋಗಿಸಿದರೆ ಅದು ಒಳ್ಳೆಯದು, ಆದರೆ ಮನುಷ್ಯ ಇದನ್ನು ದುರುಪಯೋಗಿಸುತ್ತಿದ್ದಾನೆ. ಇವನ ಆಸೆಗೆ ಸಕಲವೂ ಪ್ರಕೃತಿಯಲ್ಲಿದೆ ಆದರೆ ಇವನ ದುರಾಸೆಗೆ ಯಾವುದೂ ಸಾಲದು ಇದನ್ನೇ ಮಾನ್ಯ ಗುಂಡಪ್ಪನವರು, 'ವಿಕೃತಿಗೊಳಿಸುವನವನು ಆಕೆಯಂಗಗಳ ಎಂದಿದ್ದಾರೆ. ಕೃಷಿಕರು ಭೂಮಿಯನ್ನು ಅಗೆದು ಬೆಳೆ ಬೆಳೆಯುವುದು ಸಹಜ ಆದರೆ ಅಧಿಕ ಬೆಳೆಗಾಗಿ, ಭೂಮಿಗೆ ವಿಷವನ್ನು ಉಣಿಸುವುದು 'ವಿಕೃತ' ಕೃತ್ಯ. ಇದೇ ರೀತಿ ಭೂಮಿಯನ್ನು ಅಗೆದು ಅದರೊಳಗಿನ ಖನಿಜಗಳನ್ನು ಅವಶ್ಯಕತೆಗಿಂತ ಅಧಿಕವಾಗಿ ತೆಗೆದು ದುಂದು ಮಾಡಿದರೆ ಅದು ಅತ್ಯಾಚಾರವೇ ಅಲ್ಲವೇ? ಇದು ಗಿಡ ಮರಗಳಿಗೆ, ಪ್ರಾಣಿ ಪಕ್ಷಿಗಳಿಗೆ, ಗಾಳಿ ನೀರುಗಳಿಗೆ, ಹೀಗೆ ಪ್ರಕೃತಿಯ ಎಲ್ಲಕ್ಕೂ ಅನ್ವಯವಾಗುತ್ತದೆ.

ಆದರೆ ಪ್ರಕೃತಿ ಮಾನವನಿಗಿಂತ ಹೆಚ್ಚು ಶಕ್ತಿಶಾಲಿ. ಅದು ತನ್ನ ಶಕ್ತಿಯನ್ನು ಬಹಳಷ್ಟು ಬಾರಿ, ಬರ, ಕ್ಷಾಮ, ಅತೀವೃಷ್ಟಿ, ಅನಾವೃಷ್ಟಿ, ಭೂಕಂಪನ, ಪ್ರವಾಹ, ಅಗ್ನಿಪರ್ವತಗಳ ಮೂಲಕ ತೋರಿದ್ದರೂ, ಮಾನವನಿಗೆ ಬುದ್ದಿ





ಬರುವುದೇ ಇಲ್ಲ. ಆದರೆ ಇವನನ್ನು ತಿದ್ದಲು ಪ್ರಕೃತಿ ಸದಾ ಪ್ರಯತ್ನಪಡುತ್ತಲೇ ಇರುತ್ತದೆ. ಸಹಜವಾಗಿರುವ ಪ್ರಕೃತಿಯೊಂದಿಗೆ 'ಸಹಜ' ರೀತಿಯಲ್ಲಿ ಮನುಷ್ಯ ಬದುಕಲು ಕಲಿಯುವ ತನಕ ತಿದ್ದುತ್ತಲೇ ಇರುತ್ತದೆ. ಈ ತಿದ್ದುವಿಕೆ ನಿರಂತರ ಮತ್ತು ಅನವರತ.

ಸೃಷ್ಟಿಯಲ್ಲಿನ ಬೇರೆ ಎಲ್ಲವೂ ಸಹಜತೆಯಿಂದ ಬಾಳುತ್ತಿವೆ. ಆದರೆ ವಿಕಸಿತ ಪ್ರಾಣಿಯಾದ 'ಮನುಷ್ಯ' ಮಾತ್ರ ಸಹಜತೆಯನ್ನು ಬಿಟ್ಟು ಪ್ರಕೃತಿಯನ್ನು, 'ವಿಕೃತ'ಗೊಳಿಸಿ ತನ್ನ ವಿಕೃತ ಮತ್ತು ಅಸಹಜ ಬಾಳಿಗೆ ಪ್ರಕೃತಿಯನ್ನು ದುರುಪಯೋಗಿಸುತ್ತಲೇ ಇದ್ದಾನೆ. ವಿಜ್ಞಾನದ ಆವಿಷ್ಕಾರಗಳು ಅಧಿಕವಾದಂತೆ ಪ್ರಕೃತಿಯಮೇಲೆ ಮಾನವನ ವ್ಯಭಿಚಾರವೂ ಅತಿಯಾಗುತ್ತಿದೆ. ಇದನ್ನು ನಾವು ಪ್ರಗತಿ ಎನ್ನಬಹುದೇ? ಮಾನ್ಯ ಗುಂಡಪ್ಪನವರು ಅಂದು ನಮ್ಮ ಮುಂದೆ ಇರಿಸಿರುವ ಈ ವಿಚಾರವನ್ನು ನಾವು ಇಂದು 'ಹೆಚ್ಚು ಸೂಕ್ತ' ವೆಂದು ಪರಿಗಣಿಸಿ ಆಲೋಚಿಸಬೇಕಾದ ಅವಶ್ಯಕತೆ ಇದೆ ಅಲ್ಲವೇ?

**ಮುಕ್ತಕ – 86ಸಂ**

**ಸೃಷ್ಟಿಚೋದನೆಗಳಿಂ ನರನೊಳಿಷ್ಟಗಳುದಯ- |**
**ವಿಷ್ಟಸಿದ್ಧಿಗೆ ಯಂತ್ರತಂತ್ರಗಳ ಯುಕ್ತಿ ||**
**ತ್ವಷ್ಟೃ ಕುಶಲದೆ ಸೃಷ್ಟಿವಿಕೃತಿ; ಇಂತನ್ಯೋನ್ಯ |**
**ಸ್ಪೃಷ್ಟರ್ ಪ್ರಕೃತಿ ನರರು - ಮಂಕುತಿಮ್ಮ ||**

ನರನೊಳಿಷ್ಟಗಳುದಯವಿಷ್ಟಸಿದ್ಧಿಗೆ=ನರನೊಳು+ಇಷ್ಟಗಳು+ಉದಯವು+ಇಷ್ಟ+ಸಿದ್ಧಿಗೆ, ಇಂತನ್ಯೋನ್ಯ ಇಂತ+ಅನ್ಯೋನ್ಯ ಚೋದನೆ=ಪ್ರಚೋದನೆ, ಇಂಬು, ಯುಕ್ತಿ = ಉಪಾಯ,ತ್ವಷ್ಟ=ಸೃಷ್ಟಿಕರ್ತ, ವಿಕೃತಿ=ವಿಕಾರ, ಸ್ರಷ್ಟ=ಸೃಷ್ಟಿಸಲ್ಪಟ್ಟಿರುವವರು

ಮನುಷ್ಯನ ಮನಸ್ಸಿನಲ್ಲಿ ಉದ್ಭವವಾಗುವ ಆಸೆಗಳು ಸೃಷ್ಟಿಯ ಪ್ರೇರಣೆ ಮತ್ತು ಪ್ರಚೋದನೆಯಿಂದಲೇ ಆಗುತ್ತದೆ. ಹಾಗೆ ಉದ್ಭವವಾದ ಅವನ ಇಷ್ಟಗಳನ್ನು ಪೂರೈಸಿಕೊಳ್ಳಲು ಸಾಧನಗಳನ್ನೂ ಪ್ರಕೃತಿಯೇ ನಿರ್ಮಿಸಿದೆ. ಆ ಸಾಧನಗಳನ್ನು ಉಪಯೋಗಿಸಿಕೊಂಡು ಮನುಷ್ಯ, ತಂತ್ರ ಮತ್ತು ಯುಕ್ತಿಗಳಿಂದ ತನ್ನ ಇಷ್ಟಗಳನ್ನು ಪೂರೈಸಿಕೊಳ್ಳುತ್ತಾನೆ. ಹೀಗೆ ಸೃಷ್ಟಿಕರ್ತನ ಕುಶಲತೆಯಿಂದಲೇ ಮಾನವನ ಮೂಲಕ ಸೃಷ್ಟಿ ವಿಕೃತಗೊಳ್ಳುತ್ತದೆ. ಹೀಗೆ ಪ್ರಕೃತಿ ಮತ್ತು ಮಾನವರ ಸಂಬಂಧ ಅನ್ನೋನ್ಯವಾಗಿದೆ. ಎಂದು ಮನುಷ್ಯ ಮತ್ತು ಪ್ರಕೃತಿಯ ಸಂಬಂಧವನ್ನು ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಿಸಿದ್ದಾರೆ .

ಪ್ರಕೃತಿಯಿಂದಲೇ ಸೃಷ್ಟಿಸಲ್ಪಟ್ಟ ಮಾನವನು ಪ್ರಕೃತಿಯಲ್ಲೇ ಬದುಕುತ್ತಾನೆ. ಪ್ರಕೃತಿಯಲ್ಲಿ ಜೀವಿಸುವ ಮನುಷ್ಯನ ಮನಸ್ಸಿನಲ್ಲಿ ಪ್ರಕೃತಿ ಸಹಜವಾದ ಬಯಕೆಗಳು ಹುಟ್ಟುತ್ತವೆ. ಹಾಗೆ ಉದ್ಭವವಾದ ಆಸೆಗಳನ್ನು ಪೂರೈಸಿಕೊಳ್ಳಲು ಮನುಷ್ಯ ಆ ಪ್ರಕೃತಿಯ ಮೇಲೆಯೇ ಆಧಾರಪಡದೆ ಬೇರೆ ದಾರಿಯೇ ಇಲ್ಲ. ಹೀಗೆ ತನ್ನ ಆಸೆಗಳನ್ನು



ಪೂರೈಸಿಕೊಳ್ಳಲು ಇವನು ಮಾಡುವ ಪ್ರಯತ್ನದಲ್ಲಿ ಮನುಷ್ಯ ಧಾರಾಳವಾಗಿ ಪ್ರಕೃತಿಯನ್ನು ಬಳಸುತ್ತಾನೆ. ಭೂಮಿಯ ಮೇಲಿನ ಗಾಳಿ, ನೀರು ಮತ್ತು ಪರಿಸರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತದೆ. ಭೂಮಿಯ ಒಳಗಿನ ಲೋಹಗಳು, ರಾಸಾಯನಿಕಗಳು, ಅಂತರ್ಜಲ ಮುಂತಾದವುಗಳು ಇವನ ಹೆಚ್ಚುವರಿ ಬಯಕೆಗಳನ್ನು ಪೂರೈಸುತ್ತದೆ.

ಪ್ರಕೃತಿಯಿಂದ ಸೃಷ್ಟಿಸಲ್ಪಟ್ಟ ಕೋಟ್ಯಾಂತರ ಪ್ರಭೇದಗಳಲ್ಲಿ ತಾನೂ ಒಂದು' ಎಂದು ಸಹಜವಾಗಿ ಬದುಕುವುದನ್ನು ಬಿಟ್ಟು, ಭೂಮಿಯನ್ನು ಅನಾವಶ್ಯಕವಾಗಿ ಅಗೆದು, ಮರಗಳನ್ನು ಕಡಿದು, ಪ್ರಗತಿಯ ಹೆಸರಿನಲ್ಲಿ ಗಾಳಿ ಮತ್ತು ನೀರನ್ನು ಕಲುಷಿತಗೊಳಿಸಿ, ತನಗಿಂತ ಬಲಹೀನ ಪ್ರಾಣಿಗಳನ್ನು ಕೊಂದು ತಿಂದು ತೇಗಿ, ತನಗಿಂತ ಬಲವಂತ

ಪ್ರಾಣಿಗಳನ್ನು ಕುತಂತ್ರದಿಂದ ಸೆರೆಹಿಡಿದು, ಪಳಗಿಸಿ ತನಗೆ ಗುಲಾಮನಾಗಿಸಿಕೊಂಡು, ಹೀಗೆ ತನ್ನಲ್ಲಿ ಹುಟ್ಟುವ ಚಿತ್ರವಿಚಿತ್ರವಾದ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ, ಮಾನ್ಯ ಗುಂಡಪ್ಪನವರು 'ತ್ವಷ್ಟೃ ಕುಶಲದೆ ಸೃಷ್ಟಿವಿಕೃತಿ' ಎಂದು ಹೇಳುವಂತೆ ಸೃಷ್ಟಿಯ ಸಕಲವನ್ನೂ ವಿಕೃತಗೊಳಿಸುತ್ತಾನೆ. ತನ್ನ ತಂತ್ರ ಮತ್ತು ಕುತಂತ್ರದಿಂದ, ತನ್ನ ಕಾಲಬುಡದ ಮಣ್ಣನ್ನು ತಾನೇ ಅಗೆದು ತನ್ನ ಅವನತಿಗೆ 'ಹಳ್ಳವನ್ನು ತಾನೇ ತೋಡಿಕೊಂಡು ನಾಶವಾಗುತ್ತಾನೆ.

ಆದರೆ ಪ್ರಕೃತಿ ತನ್ನ ಸೃಷ್ಟಿಯ ಎಲ್ಲಕ್ಕಿಂತ ಬಲಶಾಲಿಯಾದ್ದರಿಂದ, ತನ್ನ ಮೇಲೆ ಎಷ್ಟೇ ಪ್ರಹಾರವಾದರೂ ತನ್ನನ್ನು ತಾನು ರಕ್ಷಿಸಿಕೊಂಡು ಮತ್ತೆ ಮತ್ತೆ ಜಗತ್ತಿನ ಸಕಲರಿಗೂ ಉಪಯೋಗಕ್ಕೆ ಬರುವ ಕ್ಷಮತೆಯನ್ನು ಹೊಂದಿದೆ. ಈ ರೀತಿ ಪ್ರಕೃತಿ ಮತ್ತು ಆ ಪ್ರಕೃತಿ ಸೃಷ್ಟಿಸಿದ ಎಲ್ಲದರ ನಡುವಿನ ಪರಸ್ಪರ ಅಸ್ತಿತ್ವವೇ ಈ ಜಗತ್ತು. ನಾವು ಈ ಪ್ರಕೃತಿಯ ಸೃಷ್ಟಿಯಲ್ಲಿ ಏನಾಗಿದ್ದೇವೆ ಎಂದು ಯೋಚಿಸಿ ಅದರ ಉಳಿವಿನಲ್ಲಿ ನಮ್ಮ ಉಳಿವನ್ನೂ ಕಾಯ್ದುಕೊಳ್ಳುವುದೇ, ಜಾಣತನವಲ್ಲವೇ ?





ಮುಕ್ತಕ 861

ದಿವ್ಯಚರಿತಂಗಳ ಪ್ರತ್ಯುಕ್ತಿ ನರಚರಿತೆ |
ಕಾವ್ಯವಿಜ್ಞಾನಗಳ್ ನಿಗಮಾನುಸರಗಳ್ ||
ನವ್ಯ ಸಂಪದವಾರ್ಷಸಂಪದುದ್ಧೃತವಿಂತು |
ಸವ್ಯಕ್ಷೇಪಗಳುಭಯ - ಮಂಕುತಿಮ್ಮ ||

ಪ್ರತ್ಯುಕ್ತಿ=ಪ್ರತಿ+ಉಕ್ತಿ,ನವ್ಯಸಂಪದವಾರ್ಷಸಂಪದುದ್ಧೃತವಿಂತು=ನವ್ಯ+ಸಂಪದವು+ಆರ್ಷ+ಸಂಪತ್+ಉದ್ಧೃತವು +ಇಂತು, ಸವ್ಯಕ್ಷೇಪಗಳುಭಯ=ಸವ್ಯ+ಅಪೇಕ್ಷೆಗಳು+ಉಭಯ)

ಪ್ರತ್ಯುಕ್ತಿ=ಪ್ರತಿಬಿಂಬ, ನಿಗಮ=ವೇದಗಳು, ಆರ್ಷ=ಋಷಿಮುನಿಗಳ ಜೀವನಶೈಲಿ, ಉದ್ವೃತ=ಬೆಳವಣಿಗೆ, ಸವ್ಯಕ್ಷೇಪ=ಆಧುನಿಕ ಮತ್ತು ಪುರಾತನ

ಇಂದಿನ ಮನುಷ್ಯರ ಜೀವನ ಹಿಂದಿನ ದಿವ್ಯಪುರುಷರ ಮಹೋನ್ನತವಾದ ನಡವಳಿಕೆಯ ಪ್ರತಿಬಿಂಬದಂತಿದೆ. ಇಂದಿನ ಕಾವ್ಯ ಮೀಮಾಂಸೆಗಳು ನಿಗಮವನ್ನು ಅನುಸರಿಸಿಯೇ ಬರೆಯಲ್ಪಟ್ಟಿದೆ. ಇಂದಿನ ಸಕಲ ಸಂಪತ್ತೂ ಋಷಿಮುನಿಗಳು ಮತ್ತು ನಮ್ಮ ಪೂರ್ವಜರ ಬದುಕಿನ ಮೇಲೆ ಸಮಗ್ರವಾಗಿ ಬೆಳೆದು ನಿಂತಿದೆ. ಹೀಗೆ ನವೀನ ಮತ್ತು ಪುರಾತನಗಳೆರಡೂ ಪರಸ್ಪರಾಧಾರಪಟ್ಟಿವೆ ಎಂದು ಜಗತ್ತಿನಲ್ಲಿ ಬದಲಾಗುತ್ತಿರುವ ಸ್ಥಿತಿಯನ್ನು, ಮಾನ್ಯ ಗುಂಡಪ್ಪನವರು ವಿಶ್ಲೇಷಿಸಿದ್ದಾರೆ, ಈ ಮುಕ್ತಕದಲ್ಲಿ.

ನಮ್ಮ ಹಿಂದಿನವರ ಜೀವನ ಶೈಲಿ ಮತ್ತು ಅವರು ಅನುಸರಿಸಿದ, ಜೀವನದ ಉನ್ನತ ಮೌಲ್ಯಗಳು ನಮಗೆ ಇಂದಿಗೂ ನಮ್ಮ ಜೀವನಕ್ಕೆ ಪ್ರೇರಕವಾಗಿದೆ. ಅಷ್ಟೇ ಅಲ್ಲ ಅವರ ಬದುಕು ಇಂದು ನಮ್ಮ ಜೀವನದ ಶೈಲಿಯಲ್ಲೂ ಪ್ರತಿಬಿಂಬಿಸುತ್ತದೆ. ರೂಪ ಮತ್ತು ಸ್ವರೂಪ ಬದಲಾಗಿರಬಹುದು ಆದರೆ ತಳಹದಿ, ಅಡಿಪಾಯ ಅದೇ!!!!. ಉದಾಃ ಬರೆದಿಡಲ್ಪಟ್ಟ ಮಾನವನ ಚರಿತ್ರೆಯಲ್ಲಿ ಇವನು ಸೃಷ್ಟಿಸಿದ ಕಾವ್ಯ, ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ ಮುಂತಾದವುಗಳು ಎಲ್ಲವೂ ನಮ್ಮ ಭಾರತೀಯ ಸನಾತನದ 'ವೇದ'ಗಳಲ್ಲಿ ಪ್ರತಿಪಾದಿಸಿರುವ ತತ್ವಗಳನ್ನೇ ಒಳಗೊಂಡಿವೆ. ಆ ವೇದಗಳು ಇಂದು ಬರೆದದ್ದಲ್ಲ. ಸಾವಿರಾರು ವರ್ಷಗಳ ಚರಿತ್ರೆಯಿರುವ 'ವೇದ'ಗಳ ಆಧಾರದಮೇಲೆಯೇ ಇಂದಿನ ಜೀವಶೈಲಿಯೂ ವಿಕಸಿತಗೊಂಡಿದೆ ಎನ್ನುವುದು ಇಂದಿನ ಹಲವರು ಒಪ್ಪದಿದ್ದರೂ) 'ಪರಮ ಸತ್ಯ'.

ಇಲ್ಲಿ ಯಾವುದೂ ಹೊಸತಲ್ಲ. ಎಲ್ಲವೂ ಅನಾದಿಕಾಲದಿಂದ ಇರುವುದು. ಆದರೆ ಅಂದು ಇದ್ದಹಾಗೆ ಇಂದು ಇಲ್ಲ, ಎಲ್ಲವೂ ಬದಲಾಗಿದೆ. ಆಡುವ ಭಾಷೆ, ಮಾಡುವ ಊಟ, ಉಡುವ ಬಟ್ಟೆ, ಪರಸ್ಪರ ಸಂಬಂಧಗಳು, ಎಲ್ಲವೂ ಬದಲಾಗಿವೆ. ಅಂದಿನವರು ಇಂದು ಬಂದು ನೋಡಿದರೆ, ಯಾವುದೋ ಬೇರೆಯೇ ಲೋಕದಲ್ಲಿದ್ದೇವೆನ್ನುವ ಭಾವ ಅವರಿಗೆ ಬರಬಹುದು, ಅಷ್ಟು ಬದಲಾಗಿದೆ. ಆದರೆ ಇದ್ದದ್ದು ಬದಲಾಗಿದೆ, ಅಷ್ಟೇ. ಹೊಸತೇನೂ

ಉದ್ಭವವಾಗಿಲ್ಲ. ಕೇವಲ, ಸ್ವಭಾವದ, ಮತ್ತು ವಿಧಾನದ ರೂಪ ಬದಲಾವಣೆಯಾಗಿದೆ. ಅದೇ ಭೂಮಿ, ಅದೇ ಆಕಾಶ, ಅದೇ ಸೂರ್ಯ, ಅದೇ ಗಾಳಿ, ಅದೇ ನೀರು. ಈ ಬದಲಾವಣೆ ಸಹಜವಾಗಿ, ಕಾಲಾನುಕಾಲಕ್ಕೆ ಆಗಿರುವ ಬದಲಾವಣೆ. ಎಷ್ಟೇ ಬದಲಾದರೂ ಮೂಲ ಒಂದೇ. ಒಂದು ಶಿಶು, ಬಾಲಕನಾಗಿ, ಯುವಕನಾಗಿ ವಯಸ್ಕನಾಗಿ ಮತ್ತು ವೃದ್ಧನಾಗಿ ರೂಪಾಂತರಗೊಳ್ಳುತ್ತಾ ಹೋಗುತ್ತಾನೆಯೇ ಹೊರತು ವ್ಯಕ್ತಿ ಬದಲಾಗುವುದಿಲ್ಲವಲ್ಲ ಹಾಗೆಯೇ!!!!

ಹಾಗಾಗಿ ಹಳತಿನ ಅಥವಾ ಪುರಾತನದ ಆಧಾರದ ಮೇಲೆಯೇ ಇಂದಿನ ಅಥವಾ ನವೀನತೆ ವಿಕಾಸವಾಗಬೇಕು ಮತ್ತು ಬೆಳೆಯಬೇಕು. ಹಾಗೆ ಬೆಳೆಯುವಾಗ, ಕೆಲವು ಅರ್ಥವಿಲ್ಲದ ಅನಾವಶ್ಯಕ ಮತ್ತು ಚಿತ್ರವಿಚಿತ್ರವಾದ ಆಚಾರ ವಿಚಾರಗಳು ನಮ್ಮ ಜೀವನ ಶೈಲಿಯಲ್ಲಿ ನುಸುಳಿ ಬರಬಹುದು. ನಾವು ನಮ್ಮ ಅನುಭವದಿಂದ ಅವುಗಳನ್ನು ನಿವಾರಿಸುತ್ತಾ ಹಿಂದಿನವರ ಜೀವನಶೈಲಿಯಲ್ಲಿನ ಸತ್ವವನ್ನು ಮೂಲಾಧಾರವಾಗಿಟ್ಟುಕೊಂಡು, ಇಂದಿನ ಜೀವನವನ್ನು ರೂಪಿಸಿಕೊಂಡಲ್ಲಿ ನಮ್ಮ ಬಾಳು ಹೆಚ್ಚು ಸತ್ವಯುತವಾಗಿ ವಿಕಾಸವಾಗುತ್ತದೆ ಮತ್ತು ನಮ್ಮ ಮುಂದಿನ ಪೀಳಿಗೆಗೆ ಒಂದು ಅರ್ಥಯುತವಾದ ಜೀವನ ವಿಧಾನವನ್ನು ರೂಪಿಸಿಕೊಟ್ಟಂತಾಗುತ್ತದೆ. ನಾವು ಹಾಗೆ ಮಾಡಲಾದರೆ ನಮ್ಮ ಜೀವನವೂ ಸಾರ್ಥಕವೆನಿಸಿಕೊಳ್ಳಬಹುದು

**ಮುಕ್ತಕ – 862**

**ಇರುವುದರೊಳಾದನಿತು ಸೊಗವ ಪಡೆವೊಡೆ ಲೋಗರ್ |**
**ಅರಿಗೆ ಮೊದಲ್ ಇಹಕ್ಕೆ ಪರದಾವರಣವಿಹುದನ್ ||**
**ಪರಮಾರ್ಥಗಣಿತದಿಂದಿಹದರ್ಥಗಳನೆಣಿಸೆ |**
**ಸರಿ ಲೋಕಬಾಂಧವ್ಯ - ಮಂಕುತಿಮ್ಮ ||**

ಇರುವುದರೊಳಾದನಿತು=ಇರುವುದರ+ಒಳು+ಆದ+ಇನಿತು, ಪರದಾವರಣವಿಹುದಮ್ =ಪರದ+ಆವರಣವು+ಇಹುದನ್, ಪರಮಾರ್ಥಗಣಿತದಿಂದಿಹದರ್ಥಗಳನೆಣಿಸೆ=ಪರಮಾರ್ಥ+ಗಣಿತದಿಂದ+ಇಹದ+ಅರ್ಥಗಳನು+ಎಣಿಸೆ
ಸೊಗವ=ಆನಂದವನ್ನು, ಲೋಗ= ಲೋಕದ ಜನರು, ಅರಿಗೆ =ಅರಿತರೆ, ಇಹಕೆ =ಈ ಜಗತ್ತಿನ ಬದುಕು, ಪರ=ಈ ಜಗತ್ತನ್ನು ನಿರ್ಮಿಸಿ ಹೊತ್ತಿರುವ ಶಕ್ತಿ,

ಇರುವುದರಲ್ಲಿ ಆದಷ್ಟು ಆನಂದವನ್ನು ಪಡೆಯಲು ಮೊದಲು, ಇಹಕ್ಕೆ ಎಚೆದರೆ, ಪ್ರಪಂಚವನ್ನು ಆವರಿಸಿಕೊಂಡಿರುವ ಪರವನ್ನು ಅರಿಯುವುದು ಅವಶ್ಯಕ. ಪರಮಾರ್ಥದ ಲೆಕ್ಕಾಚಾರಗಳಿಂದ ನಮ್ಮ ಈ ಜಗತ್ತಿನ ಬಾಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಪಟ್ಟರೆ, ನಮ್ಮ ಮತ್ತು ಈ ಲೋಕದ ಭಾಂಧವ್ಯದ ಸ್ವರೂಪ ನಮಗೆ ಅರ್ಥವಾಗುತ್ತದೆ ಎಂದು ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

| 231 |
|---|

| ಕಗ್ಗರಸಧಾರೆ | ಪ್ರಕೃತಿ ಮನುಷ್ಯರನ್ಯೋನ್ಯ 859 - 862 |
|---|---|

ನಮ್ಮ ಈ ಜಗತ್ತಿನ ಬದುಕಿನಲ್ಲಿ, ನಮಗೆ ಸಿಕ್ಕಷ್ಟರಲ್ಲಿ ಆನಂದಪಡಬೇಕಾದರೆ, ಬದುಕಿನ ಮೂಲ ಆಧಾರವನ್ನು ಸ್ವಲ್ಪವಾದರೂ ಅರಿಯಬೇಕು. ಇಲ್ಲದಿದ್ದರೆ ಹೆಜ್ಜೆಹೆಜ್ಜೆಗೂ ವಿಸ್ಮಯಗಳನ್ನು ತೋರುವ ಬದುಕಿನ ತಿರುವುಗಳು ನಮ್ಮನ್ನು ತೀರ ಮಾನಸಿಕ ಸಂಘರ್ಷಕ್ಕೆ ಗುರಿಪಡಿಸುತ್ತದೆ. ನಮಗೆ ಬಯಸಿದಿದ್ದರೂ ಏನೋ ಸಿಕ್ಕಿದೆ ಎಂದರೆ ಅದಕ್ಕೊಂದು ಕಾರಣವಿರುತ್ತದೆ.ಹಾಗೆಯೇ ನಾವು ಬಯಸಿದ್ದು ಸಿಗಲಿಲ್ಲವೆಂದರೆ ಅದಕ್ಕೊಂದು ಕಾರಣವಿರುತ್ತದೆ. ಆ ಕಾರಣಗಳನ್ನು ನಮಗೆ ಅರಿಯಲು ಸಾಧ್ಯವಿಲ್ಲ. ಆದರೆ ಆ ಘಟನೆಗಳ ಹಿಂದೆ ಪರತ್ವದ ಶಕ್ತಿ ಸದಾ ಕಾರ್ಯಪ್ರವೃತ್ತವಾಗಿದೆ ಎಂದು ಅರಿಯಬೇಕು.

ನಾವು ಉಸಿರಾಡುವ ಗಾಳಿ, ಬೀಳುವ ಮಳೆ, ಹರಿಯುವ ನೀರು, ಬೆಳೆಯುವ ಬೆಳೆ, ಇವ್ಯಾವುದೂ ನಮ್ಮ ಪ್ರಮೆಯವಿಲ್ಲದೆಯೇ ನಡೆಯುತ್ತದೆ ಅಲ್ಲವೇ? ಹಾಗೆ ನಡೆಯುವ ಕಾರ್ಯಗಳಿಗೆ ಕಾರಣವೇನು ಮತ್ತು ಕಾರಕನಾರು ಎಂದು ಸೂಕ್ಷ್ಮವಾಗಿ ಅವಲೋಕಿಸಿದರೆ ಮಾನ್ಯ ಗುಂಡಪ್ಪನವರು ಇಹ ಪರದಾವರಣವಿಹುದನ್ `ಎಂದು ಹೇಳುವಂತೆ ಆ ಪರತತ್ವದ ಲೀಲೆಯನ್ನು ನಾವು ಮನಗಾಣಬಹುದು. ನಮ್ಮ ಕಾರ್ಯ ಕ್ಷಮತೆಗೆ ಒಂದು ಮಿತಿಯಿದೆ. ಆದರೆ ಪರತತ್ವದ ಕ್ಷಮತೆಗೆ ಮಿತಿಯೇ ಇಲ್ಲ ಅಥವಾ ಅದನ್ನು ನಾವು ಕಾಣಲಾಗುವುದಿಲ್ಲ. ಹಾಗಾಗಿ ನಮ್ಮ ಮತಿಯ ಮಿತವಾದ ಜ್ಞಾನದಿಂದ ಆ ಪರತ್ವವನ್ನು ಅಳೆಯುವುದು ಸರಿಯಲ್ಲ. ನಮ್ಮ ಬದುಕು ಅಥವಾ ಜೀವನ ನಮ್ಮ ಕ್ಷಮತೆಗಿಂತ ಪರತ್ವದ ಕ್ಷಮತೆಯ ಮೇಲೆಯೇ ಹೆಚ್ಚು ಆಧಾರ ಪಟ್ಟಿರುವುದರಿಂದ ನಾವು ನಮ್ಮ ಜೀವನವನ್ನು ಆ ಪರತತ್ವದ 'ಆವರಣ' ದಲ್ಲೇ ಕಳೆಯಬೇಕು, ಅನ್ಯ ದಾರಿಯಿಲ್ಲ ಎಂದು ಮನಗಂಡಾಗ, ಬದುಕಿನಲ್ಲಿ ಆನಂದವನ್ನು ಪಡೆಯಬಹುದು.

ಹಾಗಲ್ಲದೆ 'ನಾನೇ' ಎಲ್ಲವನ್ನೂ ಮಾಡಿಕೊಳ್ಳುತ್ತೇನೆ, ಅಷ್ಟೇ ಅಲ್ಲದೆ ನನ್ನೊಡನೆ ನಡೆಯುವುದೆಲ್ಲವೂ 'ನಾನು' ರೂಪಿಸಿಕೊಂಡಂತೆ ಅಥವಾ ಹಾಗೆ ನಡೆದದ್ದು ಕೇವಲ 'ಕಾಕತಾಳೀಯ' ಎಂದು ಮಂಡಿಸಿದರೆ ಅದು 'ಅಹಂ'ಕಾರದ ಮಾತಾಗುತ್ತದೆ. ಆ ಅಹಂಕಾರದ ಸ್ಥಿತಿಯಲ್ಲಿ, ನಮಗರಿವಿಲ್ಲದೆಯೇ ಸಂಕಷ್ಟಗಳು ಬಂದಾಗ ನಮ್ಮನ್ನು ಸಂತೈಸಲು ಇಲ್ಲಿನ ಯಾವ ಲೆಕ್ಕಾಚಾರವೂ ಕೆಲಸಕ್ಕೆ ಬಾರದೆ, ಬಹಳ ಹಿಂಸೆ ಅನುಭವಿಸಬೇಕಾಗುತ್ತದೆ. ಹಾಗಾಗಿ ನಮ್ಮ ಬದುಕು ಪರತತ್ವದ ಒಂದು ಆವರಣದಡಿಯಲ್ಲಿದೆ ಎಂದು ಅರಿತುಕೊಂಡರೆ ಮತ್ತು ನಂಬಿದರೆ 'ಕಷ್ಟಕಾಲ'ದಲ್ಲಿ ಒರಗಿಕೊಳ್ಳಲು ಒಂದು ಆಧಾರ ಸಿಗುತ್ತದೆ. ಅಂತಹ ಆಧಾರದಿಂದ ಕೋಟೆಯಲ್ಲೂ ಆನಂದವನ್ನು ಪಡೆಯುವ ಪ್ರಯತ್ನವನ್ನು ಮಾಡಬಹುದು. ಆಗ ಮಾನ್ಯ ಡಿವಿಜಿಯವರು ಹೇಳುವ ನಮ್ಮ ಲೋಕಬಾಂಧವ್ಯ' ಸರಿಯಾಗುವುದು.





**ಮುಕ್ತಕ - 863**

**ಮುದಿಕುರುಡಿ ಹೊಂಗೆಯನು 'ಬಾದಾಮಿ, ಕೋ' ಯೆನುತ |**

**ಪದುಳದಿಂ ಮೊಮ್ಮಂಗೆ ಕೊಡಲು ಸಿಹಿಯಹುದೆ? ||**

**ಹೃದಯವೊಳಿತಾದೊಡೇಂ? ತಿಳಿವಿಹುದೆ? ಜಾಣಿಹುದೆ? |**

**ಸುಧೆ ಬಂತೆ ಸುಲಭದಲಿ? - ಮಂಕುತಿಮ್ಮ ||**

ಸಿಹಿಯಹುದೆ=ಸಿಹಿ+ಅಹುದೆ, ಹೃದಯವೊಳಿತಾದೊಡೇಂ=ಹೃದಯ+ಒಳಿತು+ಆದೊಡೆ+ಏಂ,

ತಿಳಿವಿಹುದೆ=ತಿಳಿವು+ಇಹುದೆ, ಜಾಣಿಹುದೆ=ಜಾಣ+ಇಹುದೆ.

ಪದುಳದಿಂ=ಅಕ್ಕರೆ ಪ್ರೀತಿಯಿಂದ, ಸುಧೆ =ಅಮೃತ

ಮುದುಕಿಯಾದ ಕುರುಡಿ ಮೊಮ್ಮಗನ ಮೇಲೆ ಪ್ರೀತಿ ಮತ್ತು ಅಕ್ಕರೆಯಿಂದ "ಬಾದಾಮಿಯನ್ನು ತೆಗೆದುಕೋ" ಎಂದು ಹೊಂಗೆಯ ಬೀಜವನ್ನು ಕೊಟ್ಟರೆ ಆ ಹೊಂಗೆಯ ಬೀಜ ಬಾದಾಮಿಯಂತೆ ಸಿಹಿಯಾಗಿರಲು ಸಾಧ್ಯವೇ? ಮನಸ್ಸು ಒಳ್ಳೆಯದಾದರೇನು, ಅಂತಹ ಮನಸ್ಸಿನಿಂದ ಕಾರ್ಯಮಾಡುವಾಗ ಅರಿವು ಮತ್ತು ಜಾಣತನವಿಲ್ಲದಿದ್ದರೆ, ಪ್ರಯೋಜನವಿಲ್ಲ. ಸಮುದ್ರ ಮಂಥನದಲ್ಲಿ ಕಡೆಗೆ ಬಂದದ್ದು ಅಮೃತವೇ ಆದರೂ ಅದು ಸುಲಭಕ್ಕೆ ಬಂತೇ? ಎಂದು, ಸರ್ವಕಾಲಕ್ಕೂ ಸೂಕ್ತವಾದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಮುಕ್ತಕದಲ್ಲಿ.

ನಮಗೆ ಪ್ರೀತಿಯಿರಬಹುದು, ಆದರೆ ಮತ್ತೊಬ್ಬರಿಗೆ ಏನನ್ನಾದರೂ ನೀಡುವಾಗ ಅಕ್ಕರೆಯಿಂದ ನೀಡಿದರೂ, ಅದು ಒಳ್ಳೆಯದೇ? ಸರಿಯಾದದ್ದೇ? ಎಂದು ಅರಿಯದೆ ಕೊಟ್ಟರೆ ಅದರಿಂದ ಪಡೆದುಕೊಂಡವರಿಗೆ ಪ್ರಯೋಜನವಾಗದೆ, ತೊಂದರೆಯೂ ಆಗಬಹುದು. ಹಾಗಾಗಿ ನೀಡುವಾಗ, ನಾವು ಏನನ್ನು ನೀಡುತ್ತಿದ್ದೇವೆಂಬ ಅರಿವು ಮತ್ತು ನೀಡುವ ಜಾಣತನ ಎರಡೂ ಇರಬೇಕು ಎನ್ನುವುದು ಈ ಮುಕ್ತಕದ ಆಂತರ್ಯ, ಇಲ್ಲಿ ಮುದುಕಿಗೆ ಕೊಡಬೇಕೆಂದು ಆಸೆ. ಆದರೆ, ಆ ಮುದುಕಿ ಹೃದಯದಿಂದ ಮತ್ತು ಪ್ರೀತಿಯಿಂದ ಕೊಟ್ಟರೂ ತಾನು ಏನನ್ನು ಕೊಡುತ್ತಿದ್ದೇನೆಂಬ ಅರಿವು ಮತ್ತು ಸರಿಯಾದದ್ದನ್ನೇ ಕೊಡಬೇಕೆಂಬ ಜಾಣತನವೂ ಇಲ್ಲ. ಹಾಗಾಗಿ ಹೃದಯದ ಭಾವ ಕೃತಿಯಲ್ಲಿ ತೋರ್ಪಡಲಿಲ್ಲ. ಹೀಗೆ ಕೊಡುವವನ ಹೃದಯವಂತಿಕೆಗೆ ಮತ್ತು ಪಡೆಯುವವನ ತೃಪ್ತಿಗಾಗಿ ಬಹಳ ಶ್ರಮಪಡಬೇಕು.
ಇದಕ್ಕೆ ಒಂದು ಉದಾಹರಣೆಯನ್ನು ಉಲ್ಲೇಖಿಸುತ್ತಾರೆ ಮಾನ್ಯ ಗುಂಡಪ್ಪನವರು. ಅಮೃತಕ್ಕಾಗಿ ನಡೆದ ಸಮುದ್ರಮಂಥನದಲ್ಲಿ ದೇವತೆಗಳು ಮತ್ತು ಅಸುರರು ಬಹಳಷ್ಟು ಕಷ್ಟಪಟ್ಟರು. ಮಂದರಪರ್ವತದ ಕುಸಿತ, ಹಾಲಾಹಲದ ಉಪಟಳ ಹೀಗೆ ಬಹಳಷ್ಟು ಕಷ್ಟಗಳನ್ನು ಅನುಭವಿಸದಮೇಲೆಯೇ ಅಲ್ಲವೇ ಅಮೃತ ಸಿಕ್ಕಿದ್ದು, ಹೀಗೆ ಅಮೃತದಂತಹ ಸ್ಥಿತಿ ಅಥವಾ ಫಲ ಬೇಕಾದರೆ ಕಷ್ಟಗಳನ್ನು ಅನುಭವಿಸಬೇಕು.





ಕೊಡುವವರಿಗೆ ಜಾಣತನವಿರಬೇಕು ಮತ್ತು ಅರಿವಿರಬೇಕು ಎನ್ನುವ ವಿಚಾರವನ್ನು 'ತೈತ್ತರೀಯ ಉಪನಿಷತ್' ನ 'ಶೀಕ್ಷಾವಲ್ಲಿ' ಯಲ್ಲಿ 'ಶ್ರದ್ಧಯಾ ದೇಯಂ ಅಶ್ರದ್ಧಯಾ ಅದೇಯಂ, ಶ್ರೀಯಾ ದೇಯಂ, ಹ್ರಿಯಾ ದೇಯಂ, ಭಿಯಾ ದೇಯಂ, ಸಂವಿದಾ ದೇಯಂ' ಎಂದು ಹೇಳುತ್ತಾ ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಕೊಡಬಾರದು,

ಹೃದಯದಿಂದ ಕೊಡಬೇಕು, ಒಳ್ಳೆಯದನ್ನೇ ಕೊಡಬೇಕು, ಹೆದರಿಕೆಯಿಂದ ಕೊಡಬೇಕು. ಸಮಗ್ರವಾಗಿ ಕೊಡಬೇಕು ಎಂದು ಹೇಳಿ ಹಾಗೆ ಏನನ್ನು, ಎಷ್ಟನ್ನು, ಯಾವ ಸಮಯದಲ್ಲಿ, ಹೇಗೆ, ಯಾರಿಗೆ ಕೊಡಬೇಕು ಎನ್ನುವುದರಲ್ಲಿ ಸಂದೇಹಗಳಿದ್ದರೆ ಅರಿತವರಲ್ಲಿ ಕೇಳಿ ತಿಳಿದುಕೋ ಎನ್ನುತ್ತದೆ. ಶ್ರದ್ದೆಯಿಂದ ಅರಿತು ಕೊಟ್ಟರೆ ಕೊಡುವವರಿಗೆ ಮತ್ತು ಪಡೆದುಕೊಳ್ಳುವವರಿಗೆ, ಇಬ್ಬರಿಗೂ ತೃಪ್ತಿಯ ಭಾವ ಬರುತ್ತದೆ.

**ಮುಕ್ತಕ – 864**

**ಜಗದ ಸೊಗದರಸಿಕೆಯ ಫಲ, ನೋಡು, ಬರಿ ಕಲಹ ।**

**ಮೃಗಗಳಾವೇಶಗೊಳಲಪ್ಪುದಿನ್ನೇನು ? ||**

**ಮುಗಿಯುವುದು ಕಾಳ್ಗಿಚ್ಚು ವನ ಬೂದಿಯಾದಂದು ।**

**ಹಗೆತನವುಮಂತು ಬಿಡು - ಮಂಕುತಿಮ್ಮ ||**

ಸೊಗದರಸಿಕೆಯ=ಸೊಗದ+ಅರಸಿಕೆಯ,ಮೃಗಗಳಾವೇಶಗೊಳಲಪ್ಪುದಿನ್ನೇನು=ಮೃಗಗಳು+ಆವೇಶಗೊಳಲು+ಅಪ್ಪುದು+ ಇನ್ನೇನು, ಬೂದಿಯಾದಂದು=ಬೂದಿ+ಆದಂದು, ಹಗೆತನವುಮಂತು=ಹಗೆತನವು+ಅಂತು.
ಸೊಗದ=ಸೊಗಸಿನ, ಅಪ್ಪುದು=ಆಗುವುದು.ಕಾಳ್ಗಿಚ್ಚು= ಕಾಡಿನ ಬೆಂಕಿ, ಹಗೆತನ= ವೈರ ಅಥವಾ ದ್ವೇಷ,

ಜಗತ್ತಿನಲ್ಲಿನ ಜೀವನದಲ್ಲಿ, ಸುಖ, ಸಂತೋಷ, ಆನಂದ ಮುಂತಾದವುಗಳ ಹುಡುಕುವಿಕೆಯಿಂದ ಕೇವಲ ಕಲಹ, ಜಗಳಗಳು ಉಂಟಾಗಿವೆ. ಪಾಶವೀ ಪ್ರವೃತ್ತಿಯಿಂದ ಮತ್ತೇನನ್ನು ತಾನೇ ಸಾಧಿಸಲು ಸಾಧ್ಯ? ಕಾಡಿನಲ್ಲಿನ ಬೆಂಕಿ ಕಾಡನ್ನು ಸಂಪೂರ್ಣ ಸುಟ್ಟು ಬೂದಿಯಾಗಿಸದ ಹೊರತು ತಣ್ಣಗಾಗುವುದಿಲ್ಲ. ಹಾಗಾಗಿ ಆನಂದದಿಂದ ಇರಬೇಕಾದರೆ ಹಗೆತನವನ್ನು ಬಿಡು ಎಂದು ಆದೇಶಮಾಡಿದ್ದಾರೆ ಗುಂಡಪ್ಪನವರು ಮುಕ್ತಕದಲ್ಲಿ.

ಮನುಷ್ಯನ ಭೂಮಿಯಮೇಲಿನ ಜೀವನದ ಚರಿತ್ರೆಯುದ್ದಕ್ಕೂ ಸುಖದ ಅಥವಾ ಆನಂದದ ಹುಡುಕುವಿಕೆಯ ಚಿತ್ರಣ ಹೇರಳವಾಗಿ ಸಿಗುತ್ತದೆ. ಸಂಪತ್ತಿನಿಂದ ಆನಂದ, ಅಧಿಕಾರದಿಂದ ಆನಂದ, ಹಿಂಸೆಯಿಂದ ಆನಂದ, ವಸ್ತುಗಳಿಂದ ಆನಂದ, ವಿಷಯಗಳಿಂದ ಆನಂದ, ವ್ಯಕ್ತಿಗಳಿಂದ ಆನಂದ ಹೀಗೆ ಅವನ ದೃಷ್ಟಿಯ ಪರಿಧಿಯಲ್ಲಿ ಬರುವ ಪ್ರತಿಯೊಂದರಿಂದಲೂ ಆನಂದವನ್ನು ಪಡೆಯುವ ಪ್ರಯತ್ನ ಮತ್ತು ಹೋರಾಟ ನಡೆಸಿದ್ದಾನೆ. ಈ ಹೋರಾಟದಲ್ಲಿ ಮನುಷ್ಯ, ದ್ವೇಷ, ಶೋಧ, ಮತ್ಸರ, ವೈಮನಸ್ಯ, ಮುಂತಾದ 'ಬೆಂಕಿಗೆ' ಸಮಾನವಾದ ಭಾವಗಳನ್ನು ಮನಸ್ಸಿನಲ್ಲಿ

ಬೆಳೆಸಿಕೊಂಡು ಸುಡುತ್ತಿದ್ದಾನೆ. ಈ ಸುಡುವಿಕೆ, ಕಾಳಿಚ್ಚು ಹೇಗೆ ಇಡೀ ಕಾಡನ್ನು ಸುಟ್ಟು ಭಸ್ಮವಾಗುವತನಕ ಸುಡುವುದೋ, ಹಾಗೆಯೇ ವ್ಯಕ್ತಿಯ ಅಂತವಾಗುವವರೆಗೆ ಸುಡುತ್ತಲೇ ಇರುತ್ತದೆ. ಹೀಗೆ ವಸ್ತು,





ವ್ಯಕ್ತಿ ಮತ್ತು ವಿಷಯಗಳಿಂದ ಸುಖ ಅಥವಾ ಆನಂದ ಸಿಗುತ್ತದೆ ಎನ್ನುವುದು ಕೇವಲ ಭ್ರಮೆ. ಈ ಭ್ರಮೆ ಮಾನವರ ಸುಂದರ ಬದುಕಿಗೆ ಮಾರಕವಾಗಿ, ಬದುಕೇ ನರಕವಾಗಿ ಕಾಣುತ್ತದೆ.

ಸಂಗಾತ್ ಸಂಜಾಯತೇ ಕಾಮಃ, ಕಾಮಾತ್ ಕ್ರೋಧೋಭಿಜಾಯತೆ............ ಬುದ್ಧಿನಾಶಾತ್ ಪ್ರಣಶ್ಯತಿ" ಎನ್ನುತ್ತಾನೆ ಗೀತಾಚಾರ್ಯ. ಹಾಗಾಗಿ ವಸ್ತು ವಿಷಯ ಮತ್ತು ವ್ಯಕ್ತಿಗಳ ಸಾಂಗತ್ಯದಿಂದಲೇ ಪಡೆಯಬೇಕೆಂಬ ಬಯಕೆಯುಂಟಾಗಿ ಮತ್ತು ಆ ಬಯಕೆಯಿಂದಲೇ, ಕ್ರೋಧ ಮುಂತಾದ ಮಾರಕ ಭಾವಗಳು ಮನಸ್ಸಿನಲ್ಲಿ ಹುಟ್ಟಿ ನಮ್ಮನ್ನು ಸುಡುತ್ತದೆ. ಇಲ್ಲಿ ಪಶುತ್ವವುಂಟಾಗಿ, ಡಿವಿಜಿಯವರು 'ಮೃಗಗಳಾವೇಶಗೊಳಲಷ್ಟುದಿನ್ನೇನು' ಎಂದು ಕೇಳಿದಂತೆ ಕೇವಲ ಪಶುತ್ತವೆ ಹೊರಬರುತ್ತದೆ. ಮಾನವೀಯತೆ ಪೆಟ್ಟು ತಿನ್ನುತ್ತದೆ. ಇದರಿಂದ ಹೊರಗೆ ಬರುವುದು ಹೇಗೆ? ಎಂದರೆ 'ಬಯಸಿ, ಕೇಳಿ ಪಡೆಯುವುದಕ್ಕಿಂತ ಬಯಸದೆ ಬಂದದ್ದನ್ನು ಸ್ವೀಕರಿಸಿ, ಆನಂದ ಪಡುವುದು ಲೇಸು' . ಸುಖ ಅಥವಾ ಆನಂದ ಎನ್ನುವುದು ವಸ್ತು ವಿಷಯ ಅಥವಾ ವ್ಯಕ್ತಿಗಳಲ್ಲಿ ಇರುವುದಿಲ್ಲ. ಸುಖ ಅಥವಾ ಆನಂದ ಎನ್ನುವುದು, ಕೇವಲ ಒಂದು ಮನೋಭಾವ. ಅಂತಹ ಮನೋಭಾವವನ್ನಿಟ್ಟುಕೊಂಡು ಏನಿರಲಿ ಬಿಡಲಿ ಸುಖದಿಂದ ಇರಬಹುದು.

ಇದು ತೃಪ್ತ ಭಾವ. ನಮ್ಮ ಪ್ರಯತ್ನ 'ಫಲಾಪೇಕ್ಷಾ' ರಹಿತವಾಗಿದ್ದರೆ, ಬಂದದ್ದನ್ನು ಬಂದಹಾಗೆ ಅಥವಾ ಸಿಕ್ಕಿದ್ದಷ್ಟು ಅನುಭವಿಸುವ ತೃಪ್ತಭಾವ ಮತ್ತು ಗುಣ ನಮ್ಮಲ್ಲಿ ಬರುತ್ತದೆ. ಅಂತಹ ಮನೋಭಾವ ಬಂದರೆ ಧ ನಮ್ಮಿಂದ ದೂರ ಉಳಿಯುತ್ತದೆ. ಹಗೆತನ ನಮ್ಮ ಮನಸ್ಸಿನಿಂದ ಮಾಯವಾಗಿಬಿಡುತ್ತದೆ. ಬದುಕು ಶಾಂತವಾಗುತ್ತದೆ. ಇದು ಕೇವಲ ಅನುಭವ ವೇದ್ಯ. ಹಾಗಾಗಿ ಪ್ರತಿಯೊಬ್ಬರೂ ಇಂತಹ ಸ್ಥಿತಿಯನ್ನು ಅನುಭವಿಸಿದಾಗ, ನಿಜವಾದ 'ಆನಂದ ಮತ್ತು ಸುಖ' ದ ಅನುಭವವಾಗುತ್ತದೆ.

**ಮುಕ್ತಕ - 865**

**ಉರಿಯಾರಿ ಮಳೆಗೆರೆಯೆ ಮರಳಿ ಸಸಿಯೇಳುವುದು |**

**ಮೆರುಗನೊಂದುವುದು ಪೊನ್ ಪುಟ ಕಾದ ಬಳಿಕ ||**

**ನರಜೀವವಂತು ಶುಚಿಯಹುದು ದುಃಖಾಶ್ರುವಿಂ |**

**ತರುವಾಯ ಪುನರುದಯ - ಮಂಕುತಿಮ್ಮ ||**

ಉರಿಯಾರಿ=ಉರಿಯು+ಆರಿ, ಮೆರುಗನೊಂದುವುದು=ಮೆರುಗನು+ಒಂದುವುದು ಶುಚಿಯಹುದು=ಶುಚಿ+ಅಹುದು, ಪುನರುದಯ=ಪುನರ್+ಉದಯಒಂದುವುದು=ಹೊಂದುವುದು ಪೊನ್= ಹೊನ್ನು ಚಿನ್ನ, ಅಹುದು=ಆಗುವುದು, ದುಃಖಾಶು=ಕಣ್ಣೀರು.

ಹಾಗೆ ಮನುಷ್ಯ -ಮನುಷ್ಯರ ನಡುವಿನ ಪಾಶವೀ ಪ್ರವೃತ್ತಿಯಿಂದ ಉಂಟಾದ ಹಗೆತನದಿಂದ, 'ಸರ್ವನಾಶ'ವಾದರೂ, 'ಶಾಶ್ವತನಾಶ'ವಾಗದೆ, ಬಿಸಿಲಿನ ದಗೆಗೆ ಉರಿದುಹೋದ ಇಳೆಯ ಸಸಿಗಳೆಲ್ಲಾ, ಬೇಸಿಗೆ

ಕಳೆದು, ಮಳೆ ಬೀಳಲು ಮತ್ತೆ ಚಿಗುರುವಂತೆ, ಅಧಿಕ ಶಾಖದಲ್ಲಿ ಕಾಯಿಸಲ್ಪಟ್ಟ ಹೊನ್ನು ಮತ್ತೆ ಅಧಿಕ ಮೆರುಗಿನಿಂದ ಥಳಥಳಿಯುವಂತೆ, ತನ್ನ ಅಹಂಕಾರದ ಬೇಗೆಯಲ್ಲಿ ಬೆಂದ ಮಾನವ ಜೀವಿ, ಪಶ್ಚಾತ್ತಾಪದ ಕಣ್ಣೀರಿನಿಂದ, ಹಗುರಾಗಿ, ಶುದ್ಧನಾಗಿ ಮತ್ತೆ ಹೊಸತನವನ್ನು ತನ್ನ ಜೀವನದಲ್ಲಿ ತುಂಬಿಕೊಳ್ಳುತ್ತಾನೆ ಎಂದು ಉಲ್ಲೇಖಿಸಿದ್ದಾರೆ ಸನ್ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಸರ್ವನಾಶ ಮೂರು ಕಾರಣಗಳಿಂದಾಗಬಹುದು. ತನ್ನದೇ ಅಹಂಕಾರದ ಬೇಗೆಯಲ್ಲಿ ಉರಿದು ಬೂದಿಯಾಗಿ ಅಥವಾ ಅನ್ಯರ ದುಷ್ಟತನಪೂರಿತವಾದ ದಬ್ಬಾಳಿಕೆಗೆ ಬಲಿಯಾಗಿ ಅಥವಾ ಪ್ರಕೃತಿಯ ವಿಕೋಪಕ್ಕೆ ಸಿಲುಕಿ ನಾಶವಾಗಬಹುದು ಮತ್ತು ಈ ಮೂರೂ ಕಾರಣಗಳು ಒಟ್ಟಿಗೆ ಸೇರಿಯೂ ನಾಶಕ್ಕೆ ನಾಂದಿ ಹಾಡಬಹುದು. ಮಾನವನ ಈ ಧರೆಯ ಬದುಕಿನ ಇತಿಹಾಸದಲ್ಲಿ ಅಂತಹ ಪ್ರಸಂಗಗಳನ್ನು ನಾವು ಹಲವಾರು ಕಂಡಿದ್ದೇವೆ. ಆದರೆ ಮನುಷ್ಯನ ಅಂದಿನ ಸ್ಥಿತಿಗೆ ಹೋಲಿಸಿದರೆ, ಅವನು ಇಂದು ಮತ್ತಷ್ಟು ಬೆಳೆದಿದ್ದಾನೆ, ಅವನು ಬದುಕುವ ರೀತಿ ಉತ್ತಮವಾಗಿದೆ ಎಂದರೆ, ಅದಕ್ಕೆ ಡಿವಿಜಿಯವರು 'ತರುವಾಯ ಪುನರುದಯ' ಎಂದು ಹೇಳಿದಂತೆ, ಮತ್ತೆ ಎದ್ದು ನಿಲ್ಲುವುದೇ ಕಾರಣವಲ್ಲವೇ?

'ನರಜೀವವಂತು ಶುಚಿಯಹುದು ದುಃಖಾಶ್ರುವಿಂ' ಎಂದರೆ ಮನುಷ್ಯ ತನ್ನ ಕಷ್ಟಕಾಲದಲ್ಲಿ ಸುರಿಸುವ ಕಣ್ಣೀರಿನಿಂದ ತೊಳೆಯಲ್ಪಟ್ಟು ಪರಿಶುದ್ಧನಾಗಿ ಆತ್ಮವಿಶ್ವಾಸದಿಂದ ಪುನಃ ಜೀವಿಸಲು ಉಪಕ್ರಮಿಸುತ್ತಾನೆ ಎಂದರ್ಥ. ತನ್ನ ಅಹಂಕಾರದಿಂದ ತಾನು ಮಾಡಿದ ತಪ್ಪಿನ ಅರಿವಾಗಿ 'ಪಶ್ಚಾತ್ತಾಪ' ದಿಂದ ಕಣ್ಣೀರ ಸುರಿಸಬಹುದು. ತಾಳ್ಮೆಯಿಂದ, ದುಷ್ಟರಿಗೆ ಸುಸ್ತಾಗುವವರೆಗೆ, ಅನ್ಯರ ದುಷ್ಟತನವನ್ನು ಸಹಿಸಿ ತಡೆದುಕೊಂಡು, ಕರಡುಗಟ್ಟಿದ್ದ ದುಃಖವೆಲ್ಲಾ ಕಣ್ಣೀರಾಗಿ ಹರಿಯಬಹುದು, ಸಹಜವಾಗಿ ಪ್ರಕೃತಿಯ ವಿಕೋಪದಿಂದ ನಡೆದ ಘಟನೆಯ ತೀವ್ರತೆಯು ಕಡಿಮೆಯಾಗಿ ನಾವು ಅನುಭವಿಸಿದ ನೋವೆಲ್ಲಾ ಕಣ್ಣೀರಾಗಿ ಹರಿಯಬಹುದು.

ಕಾರಣವೇನೇ ಆಗಲಿ ಕರುಡುಗಟ್ಟಿದ ನೋವೆಲ್ಲಾ ಕಣ್ಣೀರಾಗಿ ಹರಿದು, ಸಂಪೂರ್ಣ ಮಳೆಗೆರೆದ ಆಕಾಶದಂತೆ ನಮ್ಮ ಮನಸ್ಸು ನಿರ್ಮಲವಾದರೆ, ಮತ್ತೆ ಹೊಸ ಉತ್ಸಾಹವನ್ನು ತುಂಬಿಕೊಂಡು, ಚೈತನ್ಯಭರಿತವಾಗಿ ಬದುಕನ್ನು ನವೀನ ರೀತಿಯಲ್ಲಿ ಮುನ್ನಡೆಸಲು ಸಾಧ್ಯವಾಗುತ್ತದೆ. ಜಪಾನಿನ 'ಹಿರೋಶಿಮಾ-ನಾಗಸಾಕಿ' ಪಟ್ಟಣಗಳ ಜನರೇ, ಇದಕ್ಕೆ ನಮಗೆ ಸಿಗುವ ಇತ್ತೀಚಿನ ನಿದರ್ಶನ. ಆತ್ಮವಿಶ್ವಾಸವಿದ್ದರೆ ಅತೀ ವಿಷಮ ಸ್ಥಿತಿಯಿಂದಲೂ, ಎದ್ದು ಮೈಗೊಡವಿಕೊಂಡು ಮುನ್ನಡೆಯಲು ಸಾಧ್ಯ. 'ಧೈರ್ಯಂ ಸರ್ವತ್ರ ಸಾಧನಂ' ಎಂದು ನಮ್ಮ ಪೂರ್ವಜರು, ಜ್ಞಾನಿಗಳು ಹೇಳಿಲ್ಲವೇ?

ಮುಕ್ತಕ -866

ಆತುಮದ ಸಂಸ್ಕೃತಿಗೆ ದೈಹಿಕಸಮಾಧಾನ ।

ಭೌತವಿಜ್ಞಾನದಾ ರಾಷ್ಟ್ರ ಸಂಸ್ಥೆಗಳು ॥

ನೂತನ ವಿವೇಕ ಪ್ರಯೋಗಗಳಿನಾದೀತು ।

ಭೂಸಂಪದ ಜಗಕೆ-ಮಂಕುತಿಮ್ಮ ॥

ವಿವೇಕಪ್ರಯೋಗಗಳಿನಾದೀತು=ವಿವೇಕ+ಪ್ರಯೋಗಗಳಿನ್+ಆದೀತು ಆತುಮದ=ಆತ್ಮದ,

ಆತ್ಮದ ಸುಸ್ಥಿತಿಗೆ ದೇಹ ಸಮಾಧಾನವಾಗಿರಬೇಕು. ಭೌತಿಕ ವಿಜ್ಞಾನದ ಪ್ರಯೋಗಗಳಿಂದ, ಹೊಸ ಹೊಸ ಸಾಧನಗಳನ್ನು ಕಂಡುಹಿಡಿಯುತ್ತಾ ರಾಷ್ಟ್ರಗಳು ಮತ್ತು ಆ ರಾಷ್ಟ್ರಗಳಲ್ಲಿನ ಸಂಸ್ಥೆಗಳು ಸಂಪತ್ತನ್ನು ಸೃಷ್ಟಿಸಿ ಜನರ ಸುಖಸಾಧನಗಳಾಗಿಸುತ್ತಾರೆ ಎಂದು, ಜಗತ್ತಿನಲ್ಲಿ ಮನುಷ್ಯನ 'ಸುಖಸಾಧನಗಳ ಹುಡುಕುವಿಕೆಯ ಮತ್ತೊಂದು ಆಯಾಮವನ್ನು ಪರಿಚಯಿಸಿದ್ದಾರೆ ಮಾನ್ಯ ಗುಂಡಪ್ಪನವರು ಮುಕ್ತಕದಲ್ಲಿ.

'ಜಗದ ಸೊಗದರಸಿಕೆಯ ಫಲ' (ಮುಕ್ತಕ-864) ಎಂದು ಹೇಳಿ ಮನುಷ್ಯ ತನ್ನ ಸುಖಕ್ಕೆ ಬೇಕಾದ ಸಾಧನಗಳನ್ನು ಕಂಡುಹಿಡಿಯುವ ನಿರಂತರ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾನೆ. ಎಂದಿದ್ದಾರೆ ಮಾನ್ಯ ಡಿವಿಜಿಯವರು. ಹಳೆಯ ಸಾಧನಗಳಿಗೆ ಹೊಸಹೊಸ ಆಯಾಮಗಳನ್ನು ನೀಡುವುದು, ಹೊಸ ಹೊಸ ಸುಖ ಸಾಧನಗಳನ್ನು ಆವಿಷ್ಕರಿಸುವುದು ಮಾನವನ ಇತಿಹಾಸದಲ್ಲಿ ಸದಾ ನಡೆದೇ ಇದೆ. ಇಂದು ನಾವು ಕಾಣುವ ನಮ್ಮ ಅನುಕೂಲಕ್ಕಾಗುವ ಎಷ್ಟೋ ಸಾಧನಗಳ ಕಲ್ಪನೆಯೇ ನಮ್ಮ ಹಿಂದಿನ ತಲೆಮಾರಿನವರಿಗೆ ಇರಲಿಲ್ಲ. ಇಂದಿರುವುದು ಇನ್ನು ಸ್ವಲ್ಪ ಕಾಲದ ನಂತರ ಮತ್ಯಾವುದೋ ಹೊಸದಕ್ಕೆ ದಾರಿ ಮಾಡಿಕೊಡುತ್ತದೆ, ಅಲ್ಲವೇ?

ಹೀಗೆ ನಿರಂತರವಾಗಿ ನಡೆಯುವ ಹೊಸ ಹೊಸ ಆವಿಷ್ಕಾರಗಳ ಪ್ರಯೋಗಗಳು ಜಗತ್ತಿನಲ್ಲಿ ಹೊಸ ಹೊಸ ವಸ್ತುಗಳನ್ನು ಸೃಷ್ಟಿಸಿ, ಜನರ ಸುಖಕ್ಕೆ, ಅನುಕೂಲಕ್ಕೆ ಒದಗುತ್ತದೆ ಮತ್ತು ಜಗತ್ತಿನ ಸಂಪತ್ತನ್ನು ಹೆಚ್ಚಿಸುತ್ತದೆ. ಚಕ್ರ

ಮತ್ತು ಬೆಂಕಿಯನ್ನು ಆವಿಷ್ಕರಿಸಿದ ಮಾನವ, ಇಂದು ತನ್ನ ಸುಖಕ್ಕೆ ಏನೆಲ್ಲಾ ಕಂಡುಹಿಡಿದುಕೊಂಡಿದ್ದಾನೆ ಎಂದು ನೋಡಿದರೆ, ಅವನ ಕ್ಷಮತೆಗೆ ಮತ್ತು ನಿರಂತರ ಪ್ರಯೋಗತ್ವಕ್ಕೆ ತಲೆಬಾಗಬೇಕೆನಿಸುತ್ತದೆ. ಮಾನವನ ಇಂತಹ ಪ್ರಯತ್ನದಲ್ಲಿ ಇವನು ಕೇವಲ 'ಪಡೆದು' ಕೊಂಡಿದ್ದಾನೋ ಅಥವಾ ಇಂತಹ ಏನನ್ನಾದರೂ 'ಕಳೆದು' ಕೊಂಡಿದ್ದನೋ ಎಂದು ನೋಡಿದರೆ, ಇವನು ಪಡೆದುಕೊಂಡದ್ದೂ ಉಂಟು ಕಳೆದುಕೊಂಡದ್ದೂ ಉಂಟು. ಸುಲಭವಾಗಿ, ತ್ವರಿತಗತಿಯಲ್ಲಿ, ಮೈಕೈಗಳಿಗೆ ನೋವಾಗದಹಾಗೆ ಕೆಲಸವನ್ನು ಮಾಡುವ ಸಾಧನಗಳನ್ನು ಕಂಡುಹಿಡಿದ್ದಿದ್ದರೂ, ಮರೀಚಿಕೆಯಂತಹ ಮತ್ತಷ್ಟು 'ಸುಖ'ದ ಬೆನ್ನಟ್ಟಿ ಅತೃಪ್ತಿ, ಅಸಮಾಧಾನ, ಖಿನ್ನತೆ ಮುಂತಾದವುಗಳನ್ನು ತುಂಬಿಕೊಂಡು ಮನದ ತನ್ಮೂಲಕ ಮನಸ್ಸು ಮತ್ತು ದೇಹದ ಆರೋಗ್ಯವನ್ನು ಕಳೆದುಕೊಂಡಿದ್ದಾನೆ.





'ಆತುಮದ ಸಂಸ್ಕೃತಿಗೆ ದೈಹಿಕಸಮಾಧಾನ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು, ಮನಸ್ಸು, ಬುದ್ಧಿ, ದೇಹ ಮತ್ತು ಆತ್ಮದಿಂದಾದ ನಮ್ಮ ಅಸ್ತಿತ್ವದಲ್ಲಿ ಆತ್ಮ ಸಮಾಧಾನಕ್ಕೆ ದೇಹದ ಸಮಾಧಾನ ಅಗತ್ಯ ಎನ್ನುತ್ತಾರೆ, ಡಿವಿಜಿ. ಮನಸ್ಸನ್ನು ಸಮಾಧಾನಪಡಿಸಿದರೆ, ಬುದ್ಧಿಯು ಶಾಂತವಾಗಿ, ದೇಹದ ಬಯಕೆಗಳು ತಣಿದು, ಆತ್ಮ ಶಾಂತವಾಗುತ್ತದೆ ಎಂದು ಅರ್ಥ. ಆತ್ಮದ ಸಮಾಧಾನಕ್ಕೆ ಅಗತ್ಯವಾದ ಅನೇಕ ಸಾಧನಗಳನ್ನು ನಮ್ಮ ಋಷಿ ಮುನಿಗಳು ಮತ್ತು ನಮ್ಮ ಪೂರ್ವಜರು ನಮಗೆ ಬಳುವಳಿಯಾಗಿ ನೀಡಿದ್ದಾರೆ. ಆದರೆ ಇಂದು ನಮಗೆ ನಿಜವಾದ ಸುಖವೇನೆಂದೇ ಗೊತ್ತಿಲ್ಲ, ದೈಹಿಕ ತೃಪ್ತಿಯೇ ಆತ್ಮದ ತೃಪ್ತಿ ಎನ್ನುವ ಭ್ರಮೆಯಲ್ಲಿ ನಾವೆಲ್ಲಾ ಇದ್ದೇವೆ. ಇಂದ್ರಿಯಗಳ ವಾಂಛೆಯನ್ನು ತಣಿಸುವ ದೈಹಿಕ ಸುಖಕ್ಕಿಂತ ಮನಸ್ಸು, ಬುದ್ಧಿ, ದೇಹಗಳನ್ನು ಏಕಕಾಲಕ್ಕೆ ತಣಿಸುವ ಆತ್ಮ ಸುಖವೇ ಸತ್ಯ, ನಿತ್ಯ ಮತ್ತು ಶಾಶ್ವತವೆನ್ನುವ ಜ್ಞಾನ ಬರುವ ತನಕ ಈ ಕ್ಲಿಷ್ಟತೆಯಿಂದ ಕೂಡಿದ ಬದುಕಿಗೆ ಪರಿಹಾರವೇ ಇಲ್ಲ. ದೇಹಕ್ಕೆ 'ಇನ್ನು ಸಾಕು' ಎನ್ನುವಭಾವ ಬಂದ ತಕ್ಷಣವೇ ಆತ್ಮದ ಸುಖ ಆರಂಭವಾಗುತ್ತದೆ.

**ಮುಕ್ತಕ – 867**

**ಯತನ ಕರ್ತವ್ಯವದು, ನಮಗೆ ವಿದ್ಯಾಭ್ಯಾಸ ।**

**ಹಿತಪರಿಜ್ಞಾನ ಯತ್ನಾನುಭವ ಫಲಿತ ||**

**ಸತತಯತ್ನದಿನಾತ್ಮಶಕ್ತಿ ಪರಿವರ್ಧಿಪುದು |**

**ಯತನ ಜೀವನಶಿಕ್ಷೆ - ಮಂಕುತಿಮ್ಮ ||**

ಕರ್ತವ್ಯವದು=ಕರ್ತವ್ಯವು+ಅದು, ಯತ್ನಾನುಭವ=ಯತ್ನ+ಅನುಭವ,
ಸತತಯತ್ನದಿನಾತ್ಮಶಕ್ತಿ=ಸತತ+ಯತ್ನದಿನ್+ಆತ್ಮ+ಶಕ್ತಿ, ಯತನ=ಯತ್ನ, ಫಲಿತ=ಪ್ರಯೋಜನ, ಸತತ=ನಿರಂತರ

ಪ್ರಯತ್ನಪಡುವುದು ಕರ್ತವ್ಯ. ನಮಗೆ ಅದೊಂದು ಕಲಿಕೆಯ ಮಾರ್ಗ. ಹಿತವಾದ ಪರಿಜ್ಞಾನದ ವೃದ್ಧಿಯೇ, ಪ್ರಯತ್ನದ ಅನುಭವದಿಂದ ಸಿಗುವ ಫಲಿತ. ಬದುಕಿನಲ್ಲಿ ಸತತವಾದ ಪ್ರಯತ್ನದಿಂದ ಆತ್ಮಶಕ್ತಿಯ ವೃದ್ಧಿಯಾಗುವುದು. ಸತತವಾಗಿ ಪ್ರಯತ್ನವನ್ನು ಪಡುವುದೇ ಜೀವನದಲ್ಲಿ ಶಿಕ್ಷೆಯಂತೆ, ಎನ್ನುತ್ತಾರೆ ಡಿವಿಜಿಯವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ, ಬದುಕನ್ನು ಮತ್ತಷ್ಟು ಹಸನಾಗಿಸಿಕೊಳ್ಳಲು, ಸುಖಮಯವಾಗಿಸಿಕೊಳ್ಳಲು ಅಥವಾ ಅಭಿವೃದ್ಧಿ ಗೊಳಿಸಿಕೊಳ್ಳಲು ಮಾಡುವ ಪ್ರಯತ್ನವೇ ನಮಗೆ ಜೀವನದಲ್ಲಿ ಸಿಗುವ ವಿದ್ಯಾಭ್ಯಾಸ, ಯುಕ್ತಾಯುಕ್ತತೆಯನ್ನು ಅರಿತು ಸರಿಯಾದ ಕೆಲಸವನ್ನು ಮಾಡುವ ಮತ್ತು ಮಾಡುವ ಕೆಲಸವನ್ನು ಸರಿಯಾಗಿ ಮಾಡುವ ಪರಿಜ್ಞಾನವನ್ನು ಪಡೆಯುವುದೇ ನಮ್ಮ ಪ್ರಯತ್ನದ ಪ್ರಯೋಜನ. ನಿರಂತರವಾಗಿ ಮಾಡುವ ಪ್ರಯತ್ನದಿಂದ ಆತ್ಮ ಶಕ್ತಿ ಹೆಚ್ಚಿ ಅಭಿವೃದ್ಧಿಗೊಳ್ಳುತ್ತದೆ.





ಅದು ಯಾವುದೇ ಕ್ಷೇತ್ರವಾಗಿರಬಹುದು, ಸಂಗೀತ, ಸಾಹಿತ್ಯ , ಕಲೆ, ವಿಜ್ಞಾನ, ಹೀಗೆ ಯಾವುದೇ ಕ್ಷೇತ್ರದಲ್ಲಿದ್ದರೂ ನಾವು ಮಾಡುವ ಕೆಲಸವನ್ನು ತನಗಿಂತ ಉತ್ತಮವಾಗಿ ಯಾರೂ ಮಾಡಬಾರದು ಎನ್ನುವಂತಹ ಹಠವನ್ನು ಮನಸ್ಸಿನಲ್ಲಿಟ್ಟುಕೊಂಡರೆ, ಆಗ ಅದೊಂದು ತಪಸ್ಸಾಗುತ್ತದೆ. ಏಕಾಗ್ರತೆಯಿಂದ ಹಿಡಿದ ಕೆಲಸವನ್ನು

ಮಾಡುವುದೇ ತಪಸ್ಸು. ಇಂದು ನಾವು ಕಾಣುವಂತಹ ಎಲ್ಲಾ ರಂಗದ ಪ್ರಗತಿಯೂ, ತಪಸ್ವಿಗಳಂತಹ ವ್ಯಕ್ತಿಗಳು ಸಾಧಿಸಿದ ಫಲವೇ ಅಲ್ಲವೇ ?

ಇಂದೂ ಆ ರೀತಿಯ ವ್ಯಕ್ತಿಗಳು ನಮ್ಮ ಸುತ್ತಮುತ್ತ ಇದ್ದಾರೆ. ಅವರುಗಳು ಎಲೆಮರೆಕಾಯಿಗಳಂತೆ ಇರುತ್ತಾರೆ 'ತಾನೆಲೆಯ ಪಿನಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು' ಎಂದು ಗುಂಡಪ್ಪನವರೇ ತಮ್ಮ 'ವನಸುಮ' ಎನ್ನುವ ಕವನದಲ್ಲಿ ಬರೆದಂತೆ, ಅಂತಹ ವ್ಯಕ್ತಿಗಳು ಸದ್ದುಗದ್ದಲವಿಲ್ಲದೆ ತಮ್ಮ ಸಾಧನೆಯಲ್ಲಿ ಮುಳುಗಿರುತ್ತಾರೆ. ಹತ್ತು ಹಲವಾರು ವಿಷಯಗಳಲ್ಲಿ ಅವರ ಚಿತ್ತ ಹರಿದು ಹಂಚಿಹೋಗದೆ ಒಂದೇ ವಿಷಯದಲ್ಲಿ ಏಕಾಗ್ರತೆಯನ್ನು ಪಡೆಯುತ್ತಾದ್ದರಿಂದ ಅವರ 'ಆತ್ಮ ವಿಕಾಸವಾಗುತ್ತದೆ. ಇದುವೇ ಜೀವನದಲ್ಲಿ ನಮಗೆ ಸಿಗುವ ಮತ್ತು ಸಿಗಬೇಕಾದ ಶಿಕ್ಷಣ. ಇಂದಿನ ಆಕರ್ಷಣೆಯುಕ್ತ, ಪೈಪೋಟಭರಿತ ಮತ್ತು ಆಡಂಬರಯುಕ್ತ ಪೊಳ್ಳು ಜೀವನ ಶೈಲಿಯಲ್ಲೂ ಅಂತಹ ಸಾಧನೆ ನಮ್ಮದಾದರೆ, ನಮ್ಮ ಜೀವನವೂ ಸಾರ್ಥಕವಾದಂತೆಯೇ ಅಲ್ಲವೇ?

**ಮುಕ್ತಕ – 868**

**ಅರೆದಿನದ ನಮ್ಮ ಯತ್ನದಿನದೇನೆನ್ನದಿರು ।**
**ಕಿರಿದುಮೊಡಗೂಡಿರಲು ಸಿರಿಯಹುದು ಬಾಳ್ಗೆ ॥**
**ಪರಿಪೋಷಿಸದೆ ನಿನ್ನೊಡಲ ದಾರಿಮರದ ಫಲ? ।**
**ಕಿರಿಜಾಜಿ ಸೊಗಕುಡದೆ - ಮಂಕುತಿಮ್ಮ ॥**

ಯತ್ನದಿನದೇನೆನ್ನದಿರು=ಯತ್ನದಿನ್+ಅದೇನು+ಎನ್ನದೆ+ಇರು, ಕಿರಿದುಮೊಡಗೂಡಿರಲು=ಕಿರಿದುಂ+ಒಡಗೂಡಿ+ಇರಲು, ಸಿರಿಯಹುದು=ಸಿರಿ+ಅಹುದು, ನಿನ್ನೊಡಲ-ನಿನ್ನ+ಒಡಲ, ಅರೆದಿನದ=ಅರ್ಧ ದಿನದ

'ನಮ್ಮದು ಅಲ್ಪ ಪ್ರಯತ್ನ, ಇದರಿಂದ ಏನಾಗಬಹುದು ಮಹಾ' ಎನ್ನುವ ಭಾವ ಬೇಡ. ಏಕೆಂದರೆ ಚಿಕ್ಕ ಚಿಕ್ಕ ಸಾಧನೆಗಳಿಂದಲೇ ಬಾಳು ಸಂವೃದ್ಧವಾಗುತ್ತದೆ. "ಸಾಲುಮರಗಳು ನಮಗೆ ನೆರಳನ್ನು ನೀಡುವುದಿಲ್ಲವೇ? ಜಾಜಿಯ ಹೂವು ಸಣ್ಣದಾದರೂ ಸುಗಂಧವನ್ನು ನೀಡುವುದಿಲ್ಲವೇ?' ಎಂದು ಜಗತ್ತಿನಲ್ಲಿ ನಮ್ಮ ಕಿಂಚಿತ್ ಕೃತಿಯಿಂದಲೂ ಬಾಳಿಗೆ ಒಂದು ಅರ್ಥವನ್ನು ಕಂಡುಕೊಳ್ಳಬಹುದು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರ ಪ್ರಯತ್ನಕ್ಕೂ ಒಂದು ಮಿತಿಯಿರುತ್ತದೆ. ಅಮಿತ ಪ್ರಯತ್ನದ ಆಸೆ ಪಡುವುದು ತಪ್ಪಲ್ಲ. ಆದರೆ 'ನಾ ಮಾಡುವ ಪ್ರಯತ್ನದಿಂದ ಏನೂ ಪ್ರಯೋಜನವಿಲ್ಲ' ಎನ್ನುವ ಹತಾಶೆಯ ಭಾವ ಕೂಡದು. ಏಕೆಂದರೆ ಅಂತಹ ಭಾವ ನಮ್ಮನ್ನು ಕುಗ್ಗಿಸುತ್ತದೆ, ನಮ್ಮಲ್ಲಿ ನಿರಾಶೆಯನ್ನು ತುಂಬುತ್ತದೆ, ನಮಗಿರುವ ಕಿಂಚಿತ್ ಪ್ರತಿಭೆಯನ್ನೂ ಕುಂಠಿತ ಗೊಳಿಸುತ್ತದೆ. ವ್ಯಕ್ತಿ ಸಾಧನೆಗೆ ಮಿತಿಯಿದ್ದರೆ, ಸಮಷ್ಠಿ ಸಾಧನೆಯಿಂದ ಅಂತಹ ಮಿತಸಾಧನೆಗಳು ಹಲವಾರು ಕೂಡಿದಾಗ ಗುಂಡಪ್ಪನವರು ಹೇಳುವ ಹಾಗೆ "ಕಿರಿದುಮ್ ಒಡಗೂಡಿರಲು ಸಿರಿಯಹುದು ಬಾಳ್" ಆಗುತ್ತದೆ. ಹಾಗಾಗಿ ನಮ್ಮ ಮಿತಿಗಳಲ್ಲೇ ನಮ್ಮ ಪ್ರಯತ್ನವನ್ನು ಮುಂದುವರೆಸಬೇಕು ಎನ್ನುವುದು ಈ ಮುಕ್ತಕದ ಆಶಯ.

ಈ ವಿಚಾರವನ್ನು ಹೇಳುವಾಗ 'ಸಾಲುಮರದ ತಿಮ್ಮಕ್ಕನ ಹೆಸರು ಉಲ್ಲೇಖನೀಯ. ನೂರು ತುಂಬಿದ ಈ ವೃದ್ಧೆ ಯಾರ ಬೆಂಬಲವೂ ಇಲ್ಲದೆ, ಸ್ವ-ಇಚ್ಚೆಯಿಂದ ಪ್ರತಿನಿತ್ಯ ಒಂದು ಗಿಡವನ್ನು ನೆಟ್ಟು ಗಿಡವನ್ನು ನೆಟ್ಟು, ಬಾವಿಯಿಂದ ನೀರ ಸೇದಿ ಅವುಗಳಿಗೆ ಹನಿಸುತ್ತಾ, ತನ್ನ ಮಕ್ಕಳಂತೆ ಕಾಪಾಡಿದ ಫಲ ಸ್ವರೂಪವೇ ಇಂದು ಆ ರಸ್ತೆಯಲ್ಲಿ ಹೋದರೆ ಮಾನ್ಯ ಗುಂಡಪ್ಪನವರು 'ಸಿರಿಯಹುದು ಬಾಳ್ವೆ' ಎಂದು ಹೇಳಿದಂತೆ ನಿಜವಾಗಿಯೂ ಬಾಳು ಸಿರಿಯಾಗಿದೆ. ಕಿಂಚಿತ್ ಪ್ರಯತ್ನವಾದರೂ 'ಛಲ ಬಿಡದೆ ಮಾಡಿದ್ದರಿಂದ ಅದೊಂದು 'ತಪಸ್ಸಿನಂತಹ' ಸಾಧನೆಯಾಯಿತು. ಸಣ್ಣ ಹೂವಾದರೂ ತನ್ನ ಸುಗಂಧವನ್ನು ಎಲ್ಲೆಡೆ ಪಸರಿಸುವ 'ಜಾಜಿ' ಹೂವಿನದೂ ಒಂದು ಸಾಧನೆಯೇ ಅಲ್ಲವೇ. 'ಹೂವು ಇರುವುದು, ಹುಟ್ಟಿರುವುದು ಹಾಗೆ', ಎಂದರೆ ಸುಗಂಧವನ್ನು ಸೂಸುವುದು ಅದರ ಸ್ವಭಾವ ಮತ್ತು ಧರ್ಮ, ನಾವು ಪ್ರಯತ್ನಪೂರ್ವಕವಾಗಿ ಸಾಧಿಸಿ ಜಗದ ಸೊಗವನ್ನು ಹೆಚ್ಚಿಸಲು ಪ್ರಯತ್ನ ಪಡಬಹುದು.

ಕೀಳುರಿಮೆ, ಅಹಂಕಾರ, ಸೋಮಾರಿತನ, ಕುತ ಬುದ್ಧಿಗಳನ್ನು ತೊರೆದು ನಮ್ಮ ಕೈಲಿ ಎಷ್ಟಾದರೆ ಅಷ್ಟನ್ನು ಸಿಸ್ಪೃಹತೆಯಿಂದ, ನಿಸ್ವಾರ್ಥದಿಂದ, ನಿರ್ಭಯದಿಂದ, ನಿರಪೇಕ್ಷೆಯಿಂದ, ನಿರಂತರವಾಗಿ ಕರ್ಮ ಮಾಡುತ್ತಾ ಹೋದರೆ, ಅದು ಒಂದು ದಿನ ಅದು 'ಸಾಧನೆ'ಯರೂಪದಲ್ಲಿ ಹೊರಹೊಮ್ಮಿ 'ಜಗದ ಸೊಗವನ್ನು' ಹೆಚ್ಚಿಸುವುದರಲ್ಲಿ ಸಂದೇಹವೇ ಇಲ್ಲ.

**ಮುಕ್ತಕ – 869**

**ಮಾರ್ಗಣೆಯೆ ಮುಖ್ಯ; ಲಭ್ಯದ ಮಾತದಂತಿರಲಿ |**

**ಸ್ವರ್ಗವನು ಭುವಿಗಿಳಿಸಬಲ್ಲವನದಾರು ? ||**

**ಅರ್ಗಲ ವಿಹೀನ ಸರ್ವಾರ್ಥ ಸಹಭಾಗಿತೆಯೆ |**

**ಅರ್ಘಾರ್ಹ ತತ್ವವೆಯೊ - ಮಂಕುತಿಮ್ಮ ||**

ಮಾತದಂತಿರಲಿ=ಮಾತು+ಅದು+ಅಂತಿರಲಿ, ಭುವಿಗಿಳಿಸಬಲ್ಲವನದಾರು=ಭುವಿಗೆ+ಇಳಿಸಬಲ್ಲವನು +ಅದು+ಯಾರು? ಮಾರ್ಗಣೆ =ಹುಡುಕಾಟ, ಭುವಿ=ಭೂಮಿ, ಅರ್ಗಲ ವಿಹೀನ+ ಅಡೆ-ತಡೆಯಿಲ್ಲದ, ಅರ್ಘಾರ್ಹ=ಅತ್ಯುತ್ತಮ.

ಎಲ್ಲರೂ ಎಲ್ಲಾ ಕಾಲಕ್ಕೂ ಸುಖದ ಸಾಧನಗಳನ್ನು ಹುಡುಕುವುದೇ ಮುಖ್ಯ. ಅದರಿಂದ ಏನು ಸಿಕ್ಕಿತು ಅಥವಾ ಇಲ್ಲ ಎನ್ನುವ ಮಾತು ಒತ್ತಟ್ಟಿಗಿರಲಿ. ಎಲ್ಲಾ ಸುಖಗಳ ತಾಣವಾದ ಸ್ವರ್ಗವನು ಈ ಭೂಮಿಯಮೇಲೆ ತರಬಲ್ಲವನು ಯಾರು? ಜಗತ್ತಿನಲ್ಲಿರುವ ಸುಖಸಾಧನಗಳನ್ನು, ಅಬಾಧಿತವಾಗಿ ಅಡೆತಡೆಯಿಲ್ಲದೆ ಸಮಾನವಾಗಿ ಎಲ್ಲರೂ ಹಂಚಿಕೊಂಡು ಬಾಳುವುದೇ ಅತ್ಯುತ್ತಮ ತತ್ವ ಎನ್ನುತ್ತಾರೆ, ಸನ್ಮಾನ್ಯ ಗುಂಡಪ್ಪನವರು.

ಅನಾದಿ ಕಾಲದಿಂದಲೂ ಮಾನವರು ಜಗತ್ತಿನಾದ್ಯಂತ, ತಮ್ಮ ಸುಖಸಾಧನಗಳನ್ನು ಹುಡುಕುತ್ತಲೇ ಇದ್ದಾರೆ. ಅವರು ಹುಡುಕುವ ವಸ್ತು ಅವರಿಗೆ ಸಿಕ್ಕಿಲ್ಲವೆಂದಲ್ಲ. ಆದರೆ ಮನುಷ್ಯನಿಗೆ ಮತ್ತಷ್ಟರಾಸೆಯಿಂದ ತೃಪ್ತಿ ಸಿಕ್ಕುವುದಿಲ್ಲ. ಹಾಗೆ ಇವನು ಬಯಸಿದ ಸಕಲವೂ ಬಯಸಿದಾಕ್ಷಣ ಸಿಕ್ಕಿಬಿಟ್ಟರೆ ಇವನನ್ನು ಹಿಡಿದು ನಿಲ್ಲಿಸುವರಾರು ? ಹಾಗಾಗಿ ಇವನ ಹುಡುಕಾಟ ನಿರಂತರ, ಭೂಮಿಯಮೇಲಿನ ಸುಖಗಳೆಲ್ಲವನ್ನೂ ತಂದುಕೊಟ್ಟು ಈ ಭೂಮಿಯನ್ನು ಸ್ವರ್ಗದಂತೆ ಮಾಡುವವರು ಯಾರೂ ಬಂದಿಲ್ಲ, ಬರುವುದೂ ಇಲ್ಲ. ಏಕೆಂದರೆ ಮನುಷ್ಯನ ಆಸೆಗಳಿಗೆ ಕೊನೆಯೇ ಇಲ್ಲ.

ಮನುಷ್ಯ ಬಯಸಿದ ಸುಖ ಸಾಧನಗಳು ಸಿಕ್ಕಿಲ್ಲವೇ? ಎಂದರೆ, ಸಿಕ್ಕಿವೆ ಆದರೆ ಅವು ಸಂಪೂರ್ಣ ತೃಪ್ತಿಯನ್ನು ಕೊಟ್ಟಿಲ್ಲ. ಆದರೆ ಸಿಕ್ಕ ಸುಖಗಳನ್ನು ಮತ್ತು ಆ ಸುಖದ ಸಾಧನಗಳನ್ನು ಎಲ್ಲರಿಗೂ ತಲುಪುವಂತೆ ಮಾಡಿ ಎಲ್ಲರಿಗೂ ಆ ಸುಖದಲ್ಲಿ ಸಹಭಾಗಿತ್ವವನ್ನು ನೀಡುವಂತಹ ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳುವುದು ಅತ್ಯುತ್ತಮ ವಿಚಾರ. ಆದರೆ ಅದು ಸಾಧ್ಯವೇ? ಬುದ್ಧಿಶಕ್ತಿಯ, ಜ್ಞಾನದ, ಸಂಸ್ಕಾರಗಳ 'ಅಸಮತೆ'ಯಿಂದಲೇ ಹುಟ್ಟಿರುವ ಜಗತ್ತಿನ ಜನರು 'ಸಮಾನ' ವಾಗಿ ಯೋಚಿಸುವುದು ಸಾಧ್ಯವೇ? ನಾವು ಕನಸು ಕಾಣಬಹುದು. ಹಾಗಾಗುವುದು ಒಂದು ಅದ್ಭುತ ತತ್ವ ಎನ್ನುತ್ತಾರೆ.

ಆದರೆ ಪೈಪೋಟಿಯಿಂದ ಕೂಡಿದ ಈ ಜಗತ್ತಿನಲ್ಲಿ, ಸ್ವಾರ್ಥವೇ ಮೂಲ ಸ್ವಾಭಾವವಾಗಿರುವಾಗ, 'ಹಂಚಿಕೊಂಡು' ಬಾಳುವ ವಿಚಾರ ಹಿಂದಿಗಿಂತ ಇಂದು ಬಹಳ ದೂರಾಗಿದೆ. ನಮ್ಮ ಬಾಳು ಈ ಜಗತ್ತಿನಲ್ಲಿ ಶಾಶ್ವತವಲ್ಲ ಎಂದು ಅರಿತಿದ್ದರೂ, ಮನುಷ್ಯ ತಾನು ಈ ಜಗತ್ತಿನಲ್ಲಿ ಶಾಶ್ವತವಾಗಿ ಇರುತ್ತೇನೆ ಎನ್ನುವಂತೆ ಸ್ವಾರ್ಥನಾಗಿ, ಹಂಚಿಕೊಂಡು ಬಾಳುವುದನ್ನು ಬಹಳ ಹಿಂದೆಯೇ ಮರೆತು ಹೋಗಿದ್ದಾನೆ. ಈ ವಿಚಾರವನ್ನು ನಾವು ನಮ್ಮ ಮನಸ್ಸುಗಳಲ್ಲಿ ತಂದುಕೊಂಡು 'ಹಂಚಿಕೊಂಡು ಬಾಳುವ ಸಂಸ್ಕಾರಗಳನ್ನು ಬೆಳೆಸಿಕೊಳ್ಳಲಾದರೆ, ನಮ್ಮದು ವಿಶಾಲ ಮನೋಭಾವವಾಗಿ ಜೀವೋನ್ನತಿಯಡೆಗೆ ಹೆಜ್ಜೆಯಿಟ್ಟಂತಾಗುತ್ತದೆ. ವಿಶಾಲ ಮನೋಭಾವವಾಗಿ ಜೀವೋನ್ನತಿಯಡೆಗೆ ಹೆಜ್ಜೆಯಿಟ್ಟಂತಾಗುತ್ತದೆ. ಮನೋಭಾವವಾಗಿ, ಜೀವೋನ್ನತಿಯಡೆಗೆ ಹೆಜ್ಜೆಯಿಟ್ಟಂತಾಗುತ್ತದೆ. ಮನೋಭಾವವಾಗಿ ಜೀವೋನ್ನತಿಯಡೆಗೆ ಹೆಜ್ಜೆಯಿಟ್ಟಂತಾಗುತ್ತದೆ.





**ಮುಕ್ತಕ – 87ಸಂ**

**ದಿವಿಜಸುಧೆ ಬರಿಮಧುವೋ; ಹುಳಿಯುಪ್ಪುಮಿಶ್ರಿತವೋ? |**

**ಅವನಿಯುಣಿಸಿನಲಿ ಷಡ್ರಸ ತಪ್ಪದಿಹುದು ||**

**ಲವಲೇಶಮಾನುಮಿರದಿರೆ ಕಯ್ಪು ಜೀವನದಿ |**

**ಪವಳಿಸಿರನೇ ನರನು - ಮಂಕುತಿಮ್ಮ ||**

ಹುಳುಯುಪ್ಪುಮಿಶ್ರಿತವೋ=ಹುಳಿ +ಉಪ್ಪು+ಮಿಶ್ರಿತವೋ? ಅವನಿಯುಣಿಸಿನಲಿ=ಅವನಿಯ+ಉಣಿಸಿನಲಿ,
ತಪ್ಪದಿಹುದು=ತಪ್ಪದೆ +ಇಹುದು, ಲವಲೇಶಮಾನುಮಿರದಿರೆ=ಲವಲೇಶಂ+ಆನು+ಇರದೆ +ಇರೆ,
ಪವಳಿಸಿರನೇ=ಪವಳಿಸಿ+ಇರನೇ
ದಿವಿಜಸುಧೆ=ದೇವಲೋಕದ ಅಮೃತ, ಮಧು-ಜೇನಿನಂತೆ ಸಿಹಿ, ಅವನಿ=ಭೂಮಿ, ಷಡ್ರಸ=ಆರು ರಸಗಳು,
ಲವಲೇಶ=ಸ್ವಲ್ಪವಾದರೂ, ಕಲ್ಲು=ಕಹಿ, ಪವಳಿಸಿ=ಮಲಗಿ

ದೇವಲೋಕದ ಅಮೃತ ಬರೀ ಸಿಹಿಯೋ ಹುಳಿಯುಪ್ಪು ಮಿಶ್ರಿತವೋ?, ಗೊತ್ತಿಲ್ಲ. ಆದರೆ ಭೂಮಿಯ ಆಹಾರದಲ್ಲಿ ಷಡ್ರಸಗಳು ತಪ್ಪದೆ ಇರುವುದು. ಬದುಕಿನ ಅನುಭವದಲ್ಲಿ ಎಲ್ಲವೂ ಸವಿಯಾಗಿ ಸ್ವಲ್ಪವಾದರೂ ಕಹಿ ಇರದೇ ಇದ್ದರೆ, ಮನುಷ್ಯ ಸದಾ ಮಲಗಿ ನಿದ್ರಿಸದೆ ಇರುವುದ್ದಿಲ್ಲವೇ? ಎಂದು ಪ್ರಶ್ನಿಸುತ್ತಾ ಮಿಶ್ರ ಅನುಭವಗಳ ಸೂಕ್ತತೆಯನ್ನು ಮತ್ತು ಅವಶ್ಯಕತೆಯನ್ನೂ ಸಹ ಅರುಹಿದ್ದಾರೆ ಮಾನ್ಯ ಗುಂಡಪ್ಪನವರುಈ ಮುಕ್ತಕದಲ್ಲಿ.

ದೇವಲೋಕದ ಅಮೃತವನ್ನು ಜಗತ್ತಿನ ಜನ ಕಂಡಿಲ್ಲ. ಕುಡಿದಿಲ್ಲ. ಹಾಗಾಗಿ ಅದು ಕೇವಲ ಸಿಹಿಯೋ ಅಥವಾ ಉಪ್ಪು-ಹುಳಿ ಮಿಶ್ರಿತವೋ ನಮಗೆ ಗೊತ್ತಿಲ್ಲಾ. ಆದರೆ ಜಗತ್ತಿನಲ್ಲಿನ ಮಾನವರ ಆಹಾರ ಮಾತ್ರ, ಉಪ್ಪು, ಹುಳಿ, ಖಾರ, ಸಿಹಿ, ಕಹಿ ಮತ್ತು ಒಗಚುಗಳೆಂಬ ಷಡ್ರಸಗಳಿಂದ ಖಂಡಿತ ಕೂಡಿದೆ. ಅದೇ ರೀತಿ ಸ್ವರ್ಗದಲ್ಲಿನ ಬಾಳು ಕೇವಲ ಸಂತೋಷ ಮತ್ತು ಆನಂದದಿಂದ ಕೊಡಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಅಲ್ಲಿಗೆ ಹೋಗಿ ಹಿಂತಿರುಗಿ ಬಂದವರಿಲ್ಲ, ವರದಿ ತಂದವರಿಲ್ಲ.

ಆದರೆ ಭೂಲೋಕದ ಬದುಕು ಮಾತ್ರ ಸಿಹಿ-ಕಹಿ-ಖಾರ ಮುಂತಾದ ಅನುಭವಗಳಿಂದಲೇ ಕೂಡಿದೆ. ಸದಾಕಾಲ ಒಂದೇ ರೀತಿಯ ಅನುಭವಗಳ ಜೀವನ ಯಾರದೂ ಇರಲಿಕ್ಕೆ ಸಾಧ್ಯವಿಲ್ಲ. ಮನುಷ್ಯ ಮಾತ್ರ ಸದಾ ಕಾಲ ಆನಂದವಾಗಿರಬೇಕು ಎಂದು ಅಪೇಕ್ಷೆ ಪಡುತ್ತಾನೆ. ಆ ಆನಂದದ ಸ್ಥಿತಿಗೆ ಮಿಕ್ಕೆಲ್ಲಾ ರೀತಿಯ ಅನುಭವಗಳನ್ನು ಪಡೆದೇ ತಲುಪಬೇಕು. ಕೇವಲ ಸಿಹಿಯನ್ನೇ ತಿನ್ನುತ್ತಿದ್ದರೆ, ಸ್ವಲ್ಪ ಸಮಯದ ನಂತರ ಅದೂ ಸಹ ಅಸಹನೀಯವಾಗಿ 'ಎಗಟು' ಆಗುತ್ತದೆ. ಸಿಹಿಯನ್ನು ಆಸ್ವಾಧಿಸಬೇಕಾದರೆ, ಕಹಿಯೋ ಅಥವಾ ಖಾರವೋ ಪಕ್ಕದಲ್ಲಿರಬೇಕಲ್ಲವೇ? ಹಾಗೆಯೇ ಸುಖದ ಅನುಭವವಾಗಬೇಕಾದರೆ ಕಷ್ಟವನ್ನೂ ಅನುಭವಿಸಿದಾಗ, ಸುಖದ ಅನುಭವ ಸೂಕ್ತವಾಗಿ ಆಗುತ್ತದೆ.

ಪಕ್ಕದಲ್ಲಿರಬೇಕಲ್ಲವೇ? ಹಾಗೆಯೇ ಸುಖದ ಅನುಭವವಾಗಬೇಕಾದರೆ ಕಷ್ಟವನ್ನು ಅನುಭವಿಸಬೇಕು. ಕಷ್ಟವನ್ನು ಅನುಭವಿಸಿದರೆ ಮಾತ್ರ ಸುಖದ ಅನುಭವ ಸೂಕ್ತವಾಗಿ ಆಗುತ್ತದೆ. ಅಷ್ಟೇ ಅಲ್ಲ ಸದಾ ಸುಖವನ್ನು ಅನುಭವಿಸುವವನಿಗೆ, ಕಷ್ಟದ ಅನುಭವವಿಲ್ಲದೆ ಇದ್ದರೆ, ಮನಸ್ಸಿನಲ್ಲಿ 'ಅಹಂಕಾರ, ಸಂಕುಚಿತತೆ ಮತ್ತು ಮದ' ದ, 'ನಿಷ್ಕ್ರಿಯತೆ'ಯ ಭಾವಗಳು ಬರಬಹುದು. ಕಷ್ಟಗಳನ್ನು ಅನುಭವಿಸುವಾಗ, ದೈನ್ಯತೆ, ಕ್ರಿಯಾಶೀಲತೆ, ಸಹನೆ, ಮಾನಸಿಕ ವೈಶಾಲ್ಯ ಮತ್ತು ತೃಪ್ತಿಯಂತಹ ಭಾವಗಳು ಮನದಲ್ಲಿ ಏರ್ಪಟ್ಟು, ಸುಖ ಬಂದರೂ ಅದನ್ನು ಸಮಭಾವದಿಂದ ಅನುಭವಿಸುವ ಮತ್ತು ತನಗೆ ಸಂದ ಸುಖವನ್ನು ಹತ್ತು ಜನರಲ್ಲಿ ಹಂಚಿಕೊಳ್ಳುವ, ಮಾನೋಭೂಮಿಕೆ ನೆಲೆಗೊಂಡು 'ವಿಶಾಲಾತ್ಮತೆಯುಂಟಾಗಿ, ಬದುಕನ್ನು ಸಾರ್ಥಕವಾಗಿ ಬದುಕಲು ಸಾಧ್ಯವಾಗುತ್ತದೆ. ಅಂತಹ ಅನುಭವ ನಮ್ಮದಾದರೆ ನಮ್ಮ ಜೀವನವೂ ಧನ್ಯತೆಯಿಂದ ತುಂಬುತ್ತದೆ ಅಲ್ಲವೇ?

**ಮುಕ್ತಕ - 871**

**ಆರಿಗಾವುದು ತಕ್ಕುದಾರಿಗಾವುದು ದಕ್ಕ ।**
**ದೀ ರಹಸ್ಯದಿನಾದ ಸಾಹ್ಯವುಪಕಾರ ॥**
**ತಾರತಮ್ಯವಿವೇಕವರಿಯದಾ ಸಂಸ್ಕಾರ ।**
**ಪ್ರೇರಕವೋ ಚೌರ್ಯಕ್ಕೆ - ಮಂಕುತಿಮ್ಮ ॥**

ಆರಿಗಾವುದು=ಆರಿಗೆ+ಆವುದು, ತಕ್ಕುದಾರಿಗಾವುದು-ತಕ್ಕುದು+ಆರಿಗೆ+ಆವುದು, ದಕ್ಕದೀ=ದಕ್ಕದು+ಈ,
ರಹಸ್ಯದಿನಾದ=ರಹಸ್ಯದಿನ್+ಆದ, ಸಾಹ್ಯವುಪಕಾರ=ಸಾಹ್ಯ+ಉಪಕಾರ,
ತಾರತಮ್ಯವಿವೇಕವರಿಯದಾ=ತಾರತಮ್ಯ+ವಿವೇಕವ+ಅರಿಯದಾ, ಚೌರ್ಯ=ಕಳ್ಳತನ

ಯಾರು ಯಾರಿಗೆ ಏನು ತಕ್ಕುದ್ದೋ ಅವರವರಿಗೆ ಅದು ದಕ್ಕುತ್ತದೆ. ಆದರೆ ಯಾರಿಗೆ ಏನು ಸೂಕ್ತವಾದದ್ದು ಮತ್ತು ಯಾರಿಗೆ ಏನು ದಕ್ಕುತ್ತದೆ ಎನ್ನುವುದು ರಹಸ್ಯವಾಗಿರುವುದು. ಆ ರಹಸ್ಯವನ್ನು ಅರಿತರೆ ನಮಗೆ

ಉಪಕಾರವಾಗುತ್ತದೆ. ನಾವು ಬಯಸಿದ್ದು ಮತ್ತು ನಾವು ಪಡೆದಿದ್ದರ ನಡುವಿನ ಅಂತರವನ್ನು ಅರಿತರೆ ಸಂಸ್ಕಾರ ಬೆಳೆಯುತ್ತದೆ. ಹಾಗೆ ಅರಿಲಾಗದಿದ್ದರೆ, ನಮಗೆ ಸಿಗದ ವಸ್ತುವನ್ನು ಪಡೆಯಲು ಕಳ್ಳತನಮಾಡಲು ನಮ್ಮನ್ನು ಪ್ರೇರೇಪಿಸುತ್ತದೆ, ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ನಾವು ಬಯಸುವುದೇನೋ!! ಆದರೆ ನಮಗೆ ದಕ್ಕುವುದು ಮತ್ತೇನೋ!! ನಾವು ಬಯಸಿದ್ದು ಸೂಕ್ತವೋ ಅಲ್ಲವೋ ಅಥವಾ ನಾವು ಬಯಸಿದ್ದನ್ನು ಪಡೆದುಕೊಳ್ಳಲು ನಮಗೆ ಯೋಗ್ಯತೆ ಇದೆಯೋ ಇಲ್ಲವೋ ಎಂದು ನಮಗೆ ಅರಿಯಲಾಗುವುದೇ ಇಲ್ಲ, ಅಲ್ಲವೇ? 'ದೃಷ್ಯಮಾಣೆ ಭವೇತ್ ಪ್ರೀತಿಃ ಹಾಗಾಗಿ ಕಂಡದ್ದನ್ನೆಲ್ಲಾ ಬಯಸುವ ಜಾಯಮಾನ ನಮ್ಮದು. ಬಯಕೆಗಳನ್ನು ಇಡೇರಿಸಿಕೊಳ್ಳಲು ನಮ್ಮ ಪ್ರಯತ್ನದ ಕೊರತೆ ಇರಬಹುದು ಅಥವಾ ನಾವು ನಮ್ಮ ಯೋಗ್ಯತೆಗೆ ಮೀರಿದ್ದನ್ನು ಬಯಸಿರಬಹುದು ಅಥವಾ ಯೋಗ್ಯತೆಯೂ ಇದ್ದು



ಪ್ರಯತ್ನವೂ ಸರಿಯಾಗಿದ್ದರೂ ನಮಗದು ಸಿಗದಿದ್ದಾಗ, ಆ 'ಮೂರನೆಯವನಾಟಕ್ಕೆ ತಲೆಬಾಗುವುದ ಬಿಟ್ಟು ಬೇರೆ ದಾರಿಯಿಲ್ಲ ಎಂದು ಅರಿತುಕೊಂಡು ನಮ್ಮನ್ನು ನಾವು ಸಮಾಧಾನಪಡಿಸಿಕೊಳ್ಳಬೇಕು.

ಪ್ರತಿಯೊಬ್ಬರಿಗೂ ಯಾವ ಯಾವ ಸಮಯಕ್ಕೆ ಏನೇನು, ಎಷ್ಟೆಷ್ಟು ಸಿಗಬೇಕೋ ಅದು ಸಿಕ್ಕೇ ಸಿಗುತ್ತದೆ, ಎನ್ನುವುದು ನಮ್ಮ ಸಿದ್ಧಾಂತ, ಕೆಲವರಿಗೆ ಅಧಿಕ, ಕೆಲವರಿಗೆ ಕಡಿಮೆ. ಕೆಲವರಿಗೆ ಕೆಲಕಾಲಕ್ಕೆ ಕಡಿಮೆ ಕೆಲಕಾಲಕ್ಕೆ ಅಧಿಕ, ಕೆಲವರಿಗೆ ಜೀವನದುದ್ದಕ್ಕೂ ಬವಣೆ, ಕಾರ್ಪಣ್ಯ, ಕಷ್ಟ ಮತ್ತು ದಾರಿದ್ರ್ಯ. ಕೆಲವರಿಗೆ ಇಡೀ ಜೀವನ ಸುಖದ ಸುಪ್ಪತ್ತಿಗೆ. ಏಕೆ ಹೀಗೆ ? ಈ ತಾರತಮ್ಯಕ್ಕೆ ಕಾರಣವೇನು? ಎಂದು ಯೋಚಿಸಿದರೆ, ಅದು ನಮಗೆ ಅರ್ಥವಾಗದ ರಹಸ್ಯ. ಇದನ್ನು ಅರಿಯುವುದೇ ಸಂಸ್ಕಾರ, ಈ ರಹಸ್ಯ ಅರ್ಥವಾಗದಿದ್ದರೆ, ನಾವು ಬಯಸಿದ್ದು ನಮಗೆ ಸಿಗದಿದ್ದಾಗ ಅದನ್ನು ಹೇಗಾದರೂ ಪಡೆದುಕೊಳ್ಳುವ ಪ್ರಯತ್ನದಲ್ಲಿ, ಅದನ್ನು ಅನ್ಯರಿಂದ 'ಕಸಿದುಕೊಳ್ಳು' ವಂತಹ ಬುದ್ಧಿಯೂ ಬರಬಹುದು, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಒಂದು ವಸ್ತು(ವಿಷಯ ಮತ್ತು ವ್ಯಕ್ತಿ)ವನ್ನು ನಾವು ಬಯಸಿದಾಗ, ಅದು ನಮಗೆ ಬೇಕೆ ಎಂದು ಮೊದಲು ನಿಶ್ಚಯವಾಗಬೇಕು. ಹೌದಾದರೆ ಅದನ್ನು ಪಡೆಯುವ ಪ್ರಾಮಾಣಿಕ ಪ್ರಯತ್ನವನ್ನು ಪಡಬೇಕು. ಸಿಕ್ಕರೆ ಸಿಕ್ಕಪ್ಪರಲ್ಲಿ

ತೃಪ್ತರಾಗಿ ಅಹಂಕಾರಪಡದೆ ಸಂತೋಷಪಡಬೇಕು. ಸಿಗದಿದ್ದರೆ ನಮಗದರ 'ಪ್ರಾಪ್ತಿಯಿಲ್ಲ' ಎಂದು ಅರಿತು ಸುಮ್ಮನಿರುವುದೇ ಒಳ್ಳೆಯದು. ಹಾಗೆ ಸಿಗದಿದ್ದದ್ದನ್ನು ಕುರಿತು ಚಿಂತೆಮಾಡುವುದೋ, ಮತ್ತೆ ಮತ್ತೆ ವ್ಯರ್ಥ ಪ್ರಯತ್ನ ಮಾಡುವುದೋ ಅಥವಾ ಸಿಕ್ಕವರ ಕಂಡು ಮತ್ಸರದಿಂದ ಕರುಬುವುದೋ ಅಥವಾ ಅವರಿಂದ ಕಸಿದುಕೊಳ್ಳುವ ಪ್ರಯತ್ನವನ್ನು ಮಾಡುವುದೋ ಅಥವಾ ಎಂದಾದರೂ ಹಿಂತಿರುಗಿಕೊಡಲೇಬೇಕಾದ ಋಣವನ್ನು ಕಟ್ಟಿಕೊಳ್ಳಲು 'ಎರವಲು ಪಡೆದುಕೊಳ್ಳುವುದೋ ಮಾಡಿದರೆ ಅದು ಸುಖವನ್ನೂ ನೀಡುವುದಿಲ್ಲ ಸಂತೋಷವನ್ನೂ ತರುವುದಿಲ್ಲ. ಹಾಗಾಗಿ ನಮ್ಮ ಪ್ರಯತ್ನದಿಂದ ನಮಗೆ ಸಿಕ್ಕಿದ್ದನ್ನು ಆ ಪರಮಾತ್ಮನ ಪ್ರಸಾದವೆಂದು ಅರಿತು ತೃಪ್ತಿಯಿಂದಿರುವುದೇ, ಸುಖ ಸಂತೋಷ ಮತ್ತು ಆನಂದಕ್ಕೆ ದಾರಿ.





**ಮುಕ್ತಕ - 872**

**ಗುಡಿಸಲೇನೊಣಹುಲ್ಲು ಕಡ್ಡಿ ಮಣ್ಣನ್ನು ತಲಿ ।**
**ಬಡವನಲಿ ಕೊರತೆಗಳ ನೆಡುವುದರಿದಲ್ಲ ॥**
**ಕೆಡಿಸಿದಾ ಗುಡಿಸಿಲಿನ ನೆಮ್ಮದಿಯ ಮತ್ತೆಂತು ।**
**ಕೊಡಲಹುದವಂಗೆ ನೀಂ - ಮಂಕುತಿಮ್ಮ ॥**

ಗುಡಿಸಲೇನೊಣಹುಲ್ಲು=ಗುಡಿಸಲೇನು+ಒಣಹುಲ್ಲು, ಮಣ್ಣೆನ್ನುತಲಿ=ಮಣ್ಣು+ಎನ್ನುತಲಿ,
ನೆಡುವುದರಿದಲ್ಲ=ನೆಡುವುದು+ಅರಿದು+ಅಲ್ಲ, ಕೊಡಲಹುದವಂಗೆ=ಕಡಲು+ಅಹುದು+ಅವಂಗೆ
ಅರಿದು=ಸರಿ,ಸೂಕ್ತ, ಅವಂಗೆ=ಅವನಿಗೆ

ಗುಡಿಸಲನ್ನು ಅದೇನು ಮಹಾ!!! ಒಣಹುಲ್ಲಿನಿಂದ, ಕಡ್ಡಿ ಮಣ್ಣಿನಿಂದ' ಕಟ್ಟಿರುವುದು ಎಂದು ತಾತ್ಸಾರದಿಂದ ಅದರಲ್ಲಿ ವಾಸಿಸುವ ಬಡವನನ್ನು ಹೀನಾಯವಾಗಿ ಕಂಡು ಆ ಗುಡಿಸಲನ್ನು ಕೆಡವಿ ಕೆಡಿಸಿದರೆ, ಆ ಗುಡಿಸಿಲಿನಲ್ಲೇ

ಅವನಿಗೆ ಸಿಗುತ್ತಿದ್ದ ನೆಮ್ಮದಿಯನ್ನು, ಮತ್ತ್ಯಾವುದರಿಂದಲಾದರೂ, ಅವನಿಗೆ ಕೊಡಲಾಗುತ್ತದೆಯೇ? ಎಂದು, ಅವರವರ ಸುಖ ಸಾಧನ ಅವರವರಿಗೆ ಸೂಕ್ತ ಎನ್ನುವಂತಹ ಸೂತ್ರವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ ಆನಂದಪಡುತ್ತಾರೆ. ಪ್ರತಿಯೊಬ್ಬರಿಗೂ ಆ ಆನಂದದ ಸಾಧನಗಳು ಅವರವರದೇ ಆಗಿರುತ್ತದೆ. ಅದನ್ನು ಕಂಡು ನಾವು ಕುಹಕವಾಡುವುದೋ, ಅವಹೇಳನಕಾರಿಯಾಗಿ ವರ್ತಿಸುವುದೋ ಮಾಡಿದರೆ ಅದು ನಮ್ಮ ಕು-ಸಂಸ್ಕಾರವನ್ನು ತೋರುತ್ತದೆ. ಒಬ್ಬ ಒಂದು ಮಣ್ಣಿನಿಂದ ಕಟ್ಟಿದ ಮತ್ತು ಹುಲ್ಲು ಮತ್ತು ಗರಿಗಳಿಂದ ಹೊದಿಸಿದ ಮೇಲ್ಛಾವಣಿಯ ಒಂದು ಗುಡಿಸಿಲಲ್ಲಿ ವಾಸಿಸುತ್ತಾ, ತೃಪ್ತಿಯಿಂದ ಆನಂದದಿಂದಿದ್ದಾನೆ ಎಂದಿಟ್ಟುಕೊಳ್ಳಿ, 'ಈ ಮಣ್ಣಿನ ಗುಡಿಸಿಲೇಕೆ' ಎಂದು ಅದನ್ನು ಕೆಡವಿಸಿ, ಅವನನ್ನು ಅರಮನೆಯ ಸುಪ್ಪತ್ತಿಗೆಯ ಮೇಲೆ ಮಲಗಿಸಿದರೂ ಅವನಿಗೆ ಆ ಗುಡಿಸಿಲಲ್ಲಿ ಸಿಕ್ಕ ಆನಂದ ಅಥವಾ ತೃಪ್ತಿ ಸಿಕ್ಕೀತೆ? ಖಂಡಿತ ಸಾಧ್ಯವಿಲ್ಲ.

ಹಾಗೆ ಅವನಿಗೆ, ಅವನದಲ್ಲದ ಸುಖದ ಸಾಧನಗಳನ್ನು ತೋರಿ ಅವನನ್ನು ದಾರಿತಪ್ಪಿಸಿದಂತಾಗುತ್ತದೆ ಮತ್ತು ಮತ್ತೊಬ್ಬರ ಮೇಲೆ ಆಧಾರಪಡುವಂತಹ ಸ್ಥಿತಿಗೆ ಅವನನ್ನು ತಳ್ಳಿ ಅವನನ್ನು ದಯನೀಯವಾದ ಸ್ಥಿತಿಗೆ ತಳ್ಳಿದಂತಾಗುತ್ತದೆ. ಅದು ಸರಿಯಲ್ಲವಾದ್ದಾರಿಂದ, ನಾವು ಮತ್ತೊಬ್ಬರ ವಿಷಯದಲ್ಲಿ ಹಸ್ತಕ್ಷೇಪ ಮಾಡದೆ ಅವರವರಿಗೆ ಏನು ದಕ್ಕಿದೆಯೋ ಮತ್ತು ಯಾರ್ಯಾರು ಯಾವುದರಲ್ಲಿ ತೃಪ್ತಿಯಿಂದ ಆನಂದಪಡುತ್ತಿದ್ದಾರೋ ಅವರನ್ನು ಅವರಷ್ಟಕ್ಕೆ ಬಿಟ್ಟರೆ ಸೊಗಸು. ಹಾಗೆ ಅವರು ಬಯಸಿದ್ದನ್ನು ಅವರು ಬಯಸಿದ ಹಾಗೆ, ಯಾವ ನಿಬಂಧನೆಗಳು ಅಥವಾ ಲೇಪನಗಳಿಲ್ಲದೆ, ನಾವು ಕೊಟ್ಟು ಅದರಿಂದ ಅವರು ಸಂತೋಷಪಡುವುದಾದರೆ ಒಳ್ಳೆಯದು. ಆದರೆ ಅಂತಹ ಸ್ಥಿತಿ ಬಹಳ ವಿರಳವಾಗಿ ಸಿಗುತ್ತದೆ.





ಅನ್ಯರ ವಿಚಾರವನ್ನು ಮತ್ತು ಅವರ ಅಭಿಪ್ರಾಯಗಳನ್ನು ಗೌರವಿಸುವುದು ಮತ್ತು ಅನ್ಯರ ವಿಷಯದಲ್ಲಿ ಅನಾವಶ್ಯಕವಾಗಿ ಮೂಗ ತೂರಿಸದಿರುವುದು ಒಳ್ಳೆಯ ಸಂಸ್ಕಾರದ ಲಕ್ಷಣಗಳು. ಅದನ್ನು ಬೆಳೆಸಿಕೊಳ್ಳಬೇಕಾದರೆ ದೃಢವಾದ ಮನಸ್ಸು ಮತ್ತು ಸತ್ಪಯತ್ನ ಬೇಕು. ನಾವು ಅಂತಹ ಪ್ರಯತ್ನವನ್ನು ಮಾಡಲಾದರೆ ಮತ್ತು ಅಂತಹ

ಸಂಸ್ಕಾರಗಳನ್ನು ಬೆಳೆಸಿಕೊಳ್ಳಲಾದರೆ ನಮ್ಮ ಮತ್ತು ಪರರ ಪರಸ್ಪರ ಸಂಬಂಧಗಳು ಗಟ್ಟಿಯಾಗಿ ಬಹಳ ಕಾಲ ನಿಲ್ಲುತ್ತವೆ. ಇಲ್ಲದಿದ್ದರೆ ರಾಗ-ದ್ವೇಷಗಳ, ಕೋಪಾಸೂಯೆಗಳ ಲೇಪನವನ್ನು ಬಳಿದುಕೊಂಡು ಕುಸಿಯುತ್ತದೆ.
ಹಾಗಾಗಿ ನಾವು ಜಾಗರೂಕರಾಗಿರಬೇಕು.

**ಮುಕ್ತಕ – 873**

**ಬಳಲಿ ನೆಲದಲಿ ಮಲಗಿ ಮೈಮರೆತು ನಿದ್ರಿಪನ |**

**ಕುಲುಕಿ ಹಾಸಿಗೆಯನರಸೆನುವುದುಪಕೃತಿಯೆ? ||**

**ಒಳಿತನೆಸಗುವೆನೆಂದು ನೆಮ್ಮದಿಯ ನುಂಗದಿರು |**

**ಸುಲಭವಲ್ಲೊಳಿತೆಸೆಗೆ - ಮಂಕುತಿಮ್ಮ ||**

ಹಾಸಿಗೆಯನರಸೆನುವುದುಪಕೃತಿಯೆ= ಹಾಸಿಗೆಯನು+ಅರಸೆನುವುದು+ಉಪಕೃತಿಯೇ?, ಒಳಿತನೆಸಗುವೆನೆಂದು =ಒಳಿತನು+ಎಸಗುವೆನು+ಎಂದು, ಸುಲಭವಲ್ಲೊಳಿತೆಸೆಗೆ=ಸುಲಭವಲ್ಲ+ಒಳಿತನು+ಎಸಗೆ,
ಬಳಲಿ=ಸುಸ್ತಾಗಿ, ನಿದ್ರಿಪನ=ಮಲಗಿರುವವನ, ಕುಲುಕಿ=ಅಲುಗಾಡಿಸಿ, ಅರಸು=ಹುಡುಕು, ಉಪಕೃತಿಯೆ=ಉಪಕಾರವೆ, ಎಸಗುವೆನು=ಮಾಡುವೆನು,

ಯಾರೋ ಒಬ್ಬ ದುಡಿದು ಸುಸ್ತಾಗಿ, ನೆಲದಮೇಲೆ ಮಲಗಿ ನಿದ್ರಿಸುತ್ತಿರುವವನನ್ನು ಅಲುಗಾಡಿಸಿ, ಎಬ್ಬಿಸಿ, ಹಾಸಿಗೆಯನ್ನು ಹುಡುಕಿಕೊಂಡು ಮಲಗಿಕೋ ಎಂದು ಹೇಳುವುದು ಉಪಕಾರವೇನು? ಉಪಕಾರಮಾಡುವೆ ಎಂದು ಪರರ ನೆಮ್ಮದಿಯನ್ನು ಕಸಿಯಬೇಡ. ಮತ್ತೊಬ್ಬರಿಗೆ ಒಳಿತನ್ನು ಮಾಡುವುದು ಅಷ್ಟು ಸುಲಭವಲ್ಲ ಎಂದು ಪರರಿಗುಪಕರಿಸುವ ಪರಿಯನ್ನು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಬ್ಬ ಆರಾಮಾಗಿ ನೆಲದಲ್ಲಿ ಕಾಲ ಮೇಲೆ ಕಾಲ ಹಾಕಿಕೊಂಡು ಮಲಗಿದ್ದನಂತೆ. ಮತ್ಯಾರೋ ಒಬ್ಬ ಬಂದು ಅವನನ್ನು 'ಎದ್ದೇಳು, ಚುರುಕಾಗು, ಕೆಲಸಮಾಡು, ಅಭಿವೃದ್ಧಿ ಹೊಂದು, ಸಕಲ ಭಾಗ್ಯಗಳನ್ನೂ ಸಂಪಾದಿಸು, ಸ್ಥಿತಿವಂತನಾಗು, ಎಂದು ಉಪದೇಶ ಮಾಡಿದನಂತೆ. ಅದಕ್ಕವನು "ಹಾಗೆಲ್ಲಾ ಮಾಡಿದೇ ಎಂದಿಟ್ಟುಕೊಳ್ಳಿ, ಮುಂದಕ್ಕೆ?" ಎಂಬ ಪ್ರಶ್ನೆ ಕೇಳಿದಾಗ, 'ಮುಂದಕ್ಕೆ, ಆರಾಮಾಗಿ ಕಾಲಮೇಲೆ ಕಾಲ ಹಾಕಿಕೊಂಡು, ಮಲಗಿ ಆನಂದವಾಗಿರಬಹುದು"

ಎಂದನಂತೆ. "ಅಲ್ಲಾ, ನಾ ಈಗಾಗಲೇ ಆ ಸ್ಥಿತಿಯಲ್ಲಿದ್ದೇನೆ, ನಿಮ್ಮ ದಾರಿ ನೀವು ನೋಡ್ಕೊಳ್ಳಿ' ಎಂದನಂತೆ ನಮ್ಮ ಭೂಪತಿ. ಹೀಗೆ ಪುಗಸಟ್ಟೆ ಸಲಹೆಗಳನ್ನು ಕೊಡುವವರು ನಮಗೆ ಬಹಳ ಜನ ಸಿಗುತ್ತಾರೆ. ಏಕೆಂದರೆ ಈ ಜಗತ್ತಿನಲ್ಲಿ ಅತೀ ಸುಲಭವಾದ ಕೆಲಸಗಳೆಂದರೆ ' ಅನ್ಯರಿಗೆ ಸಲಹೆ ನೀಡುವುದು ಮತ್ತು ಮತ್ತೊಬ್ಬರು ಮಾಡಿದ ಕೆಲಸದಲ್ಲಿ ಹುಳುಕ ಹುಡುಕುವುದು.





ತೈತ್ತರೀಯೋಪನಿಷತ್ತು ತನ್ನ 'ಶೀಕ್ಷಾವಲ್ಲಿ'ಯಲ್ಲಿ 'ಭಿಯಾ ದೇಯಂ' ಎನ್ನುತ್ತದೆ. ಯಾರಿಗಾದರೂ ಏನನ್ನಾದರೂ ಕೊಡುವಾಗ 'ಭಯ' ದಿಂದ ಕೊಡು ಎಂದಿದೆ. ಭಯವೇತಕ್ಕೆ ಎಂದರೆ, ನಾವು ಕೊಟ್ಟ ವಸ್ತು ಅಥವಾ ವಿಷಯ ಅವರಿಗೆ ಉಪಯೋಗಕ್ಕೆ ಬರುತ್ತದೋ ಅಥವಾ ಅದರಿಂದ ಅವರಿಗೆ ಏನಾದರೂ ತೊಂದರೆಯಾಗುತ್ತದೆಯೋ ಇಲ್ಲವೋ ಎಂಬ ಭಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೊಡಬೇಕು ಎನ್ನುತ್ತದೆ. ಹಾಗೆ ನಮ್ಮ ಮನಸ್ಸಿನಲ್ಲಿ ಭಯವಿಟ್ಟುಕೊಂಡರೆ, ಆಗ ನಾವು ಕೊಡುವುದು ಸೂಕ್ತವಾಗಿ, ಉಪಯುಕ್ತವಾಗಿ, ಅನುಕೂಲವಾಗಿರುತ್ತದೆ. ಹಾಗಾಗಿ ಪರರಿಗೆ ಉಪಕಾರ ಮಾಡದಿದ್ದರೂ ಪರವಾಗಿಲ್ಲ, ಅಪಕಾರವನ್ನೆಸಗಬಾರದು ಎನ್ನುವುದು ನಮ್ಮ ಸಂಸ್ಕೃತಿ.

ಆದರೆ ಮಾನ್ಯ ಗುಂಡಪ್ಪನವರು 'ಸುಲಭವಲ್ಲೊಳಿತೆಸೆಗೆ' ಎಂದು ಹೇಳಿ ಪರರಿಗುಪಕರಿಸುವುದು ಅಷ್ಟು ಸುಲಭವಲ್ಲ, ಎಂದಿದ್ದಾರೆ. ಅನ್ಯರ ಅವಶ್ಯಕತೆಗಳನ್ನು ಅರಿಯುವುದು ಬಹಳ ಕಷ್ಟ. ಅದು ಏನೋ ಇದ್ದರೆ ನಾವು ಮನನ್ನೋ, ಊಹಿಸಿ, ಭಾವಿಸಿ ಕೊಟ್ಟಾಗ, ಎಡವಟ್ಟಾಗುತ್ತದೆ. ನಿಷ್ಪ್ರಯೋಜಕ ವಸ್ತು ಅಥವಾ ಸಲಹೆಯನ್ನು ನೀಡಿ ಅನ್ಯರಿಗೆ ಉಪಕರಿಸದೆ, ಹಲಬಾರಿ ತೊಂದರೆಯನ್ನೇ ಮಾಡಿದಂತಾಗುತ್ತದೆ. ನಮ್ಮ ಉದ್ದೇಶ 'ಶುದ್ಧ'ವಾಗಿದ್ದರೂ, ಅನ್ಯರಿಗೆ ಬೇಕಾದ ವಸ್ತು ಅಥವಾ ವಿಷಯ, ಬೇಕಾದ ಸಮಯದಲ್ಲಿ, ಬೇಕಾದ ಪ್ರಮಾಣದಲ್ಲಿ ಕೊಡುವುದರಲ್ಲಿ ನಾವು

ಸೋಲುತ್ತೇವೆ. ಹಾಗಾಗಿ ಅನ್ಯರಿಗೆ ಉಪಕಾರ ಮಾಡುವುದು ಸುಲಭವಲ್ಲ. ಉಪಕಾರ ಮಾಡಬೇಕೆಂದು ಶುದ್ಧಮನಸಿದ್ದರೂ ಹಾಗೆ ಮಾಡುವಾಗ ಬಹಳ ಜಾಗರೂಕರಾಗಿರಬೇಕು. ನಾವು ಅನ್ಯರಿಗೆ ಸೂಕ್ತ ಉಪಕಾರ ಮಾಡಲಾಗದಿದ್ದರೆ, ಅವರ ಪಾಡಿಗೆ ಅವರನ್ನು ಅವರ ಕರ್ಮಕ್ಕೆ ಅವರನ್ನು ಬಿಟ್ಟು, ಶುದ್ಧಮನಸ್ಸಿನಿಂದ ಅವರಿಗೆ ಶುಭವಾಗಲೆಂದು ಹಾರೈಸಿದರೆ, ಅವರಿಗೆ ಒಳಿತನ್ನು ಮಾಡಿದಂತೆಯೇ!!!

**ಮುಕ್ತಕ – 874**

**ಮಡಿಕೆಯನ್ನು ಬಡಿದು ಹೊನ್ ಕೊಡವ ತೋರುವ ಸಖನೆ |**
**ಪಡೆದಿಹೆಯ ರಹದಾರಿಯನು ಹೊನ್ನ ಗಣಿಗೆ ? ||**
**ಒಡಲಿಗೊಗ್ಗಿದ ನೀರ ಚೆಲ್ಲಿದೊಡದೇಂ ಪಾಲ |**
**ಕುಡಿವ ಸಂತಸಕಣೆಯೆ? - ಮಂಕುತಿಮ್ಮ ||**

ಒಡಲಿಗೊಗ್ಗಿದ=ಒಡಲಿಗೆ+ಒಗ್ಗಿದ, ಸಂತಸಕಣೆಯೆ=ಸಂತಸಕೆ+ಎಣೆಯೆ,
ರಹದಾರಿ=ಅನುಮತಿ, ಹೊನ್ನ=ಬಂಗಾರದ

ಮಣ್ಣಿನ ಮಡಿಕೆಯನ್ನು ಒಡೆದುಹಾಕಿ, “ಓ!! ನಿನಗೆ ಬಂಗಾರದ ಮಡಿಕೆಯನ್ನು ಕೊಡುವೆ' ಎಂದು ಹೇಳಲು ಬಂಗಾರದ ಗಣಿ ನಿನ್ನ ಬಳಿ ಇದೆಯೇನು? ದೇಹಕ್ಕೆ ಒಗ್ಗಿದ ನೀರನ್ನು ಚೆಲ್ಲಿ ಹಾಲನ್ನು ಕೊಟ್ಟರೂ ನೀರನ್ನು ಕುಡಿವ ಸಂತಸಕ್ಕೆ ಅದು ಸಮವೇನು? ಎಂದು ಸಂತಸದ ಮತ್ತು ತೃಪ್ತಿಯ ಸ್ವರೂಪದ ವಿಚಾರವನ್ನು ನಮ್ಮಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು.

ಮಣ್ಣಿನ ಮಡಿಕೆಯಲ್ಲಿ ನೀರನ್ನು ಕುಡಿಯುವವನು ಬಡವನಾದರೂ, ಅವನಿಗೆ ತೃಪ್ತಿಯಿರುತ್ತದೆ. ಅವನ ಮಡಿಕೆಯನ್ನು ಒಡೆದು ಹಾಕಿ ಅವನಿಗೆ ಬಂಗಾರದ ಕೊಡವನ್ನು ಕೊಟ್ಟರೂ, ಮಡಿಕೆಯಲ್ಲಿ ನೀರನ್ನು ಕುಡಿದ ತೃಪ್ತಿ ಅವನಿಗೆ ಸಿಗದಿರಬಹುದು. ಮಾತ್ರವಲ್ಲ, ಮಣ್ಣಿನ ಮಡಿಕೆಗೆ ಬದಲಾಗಿ ಹೊನ್ನಿನ ಪಾತ್ರೆಯನ್ನು ತೆಗೆದುಕೊಳ್ಳಲು ಅವನ ಸ್ವಾಭಿಮಾನ ತಡೆಯುತ್ತದೆ, ತನ್ನ ಬಡತನವನ್ನು ಹೀಗಳೆದ ಭಾವ ಅವನಲ್ಲಿ ಮೂಡುತ್ತದೆ, ತನ್ನ ಬಡತನದ ಕೊರತೆಗಳು ಅವನನ್ನು ಕಾಡಲು ಮೊದಲಾಗುತ್ತದೆ ಮತ್ತು ತನ್ನ ಬದುಕಿನ ಸ್ವಾತಂತ್ರವನ್ನು ಯಾರೋ ಕಸಿದಂತಾಗುತ್ತದೆ. ಹಾಗಾಗಿ ಹಾಗೆ ಮಾಡುವುದು ಸೂಕ್ತವಲ್ಲ. ಈ ಜಗತ್ತಿನಲ್ಲಿ ಎಷ್ಟೋ ಜನರು ಹಾಗೆ ಬಡತನದಿಂದ ಇದ್ದರೂ ಸ್ವಾಭಿಮಾನವನ್ನು ಬಿಡದೆ ಇದ್ದಾರೆ. ಅವರೆಲ್ಲರ ಬಡತನವನ್ನು ನೀಗಲು ನಿನ್ನ ಬಳಿ ಚಿನ್ನದ ಗಣಿಯೇ ಇದೆಯೇನು? ಎನ್ನುವುದು ಮಾನ್ಯ ಗುಂಡಪ್ಪನವರ, ಸೂಕ್ತ ಪ್ರಶ್ನೆ!!!

ಪರಾವಲಂಬನೆಗೊಳಗಾಗದೆ, ಸ್ವಾಭಿಮಾನಕ್ಕೆ ಧಕ್ಕೆ ಬಾರದಂತೆ ಯಾರಿಗೆ ಏನು ತೃಪ್ತಿ ನೀಡುತ್ತದೋ ಅದನ್ನವರು ಅನುಭವಿಸುವ ಸಂಪೂರ್ಣ ಸ್ವಾತಂತ್ರ ಪರಮಾತ್ಮನೇ ಎಲ್ಲರಿಗೂ ಕರುಣಿಸಿದ್ದಾನೆ. ಅದನ್ನು ಕಸಿಯಲು ಯಾರಿಗೂ ಅಧಿಕಾರವಿಲ್ಲ . ಹಾಗಾಗಿ ಮತ್ತೊಬ್ಬರ ಬದುಕಿನಲ್ಲಿ ನಮ್ಮ ಹಸ್ತಕ್ಷೇಪ ಸಲ್ಲ. ಚಾಪೆಯಮೇಲೆ ಮಲಗಿ ಸುಖ ನಿದ್ರಯನ್ನು ಆನಂದದಿಂದ ಅನುಭವಿಸುವವರನ್ನು ನಾವು ನೋಡಿದ್ದೇವೆ ಮತ್ತು ಮೆತ್ತನೆಯ ಸುಪ್ಪತ್ತಿಗೆಯ ಮೇಲೆ ಮಲಗಿಯೂ ಸಹ ನಿದ್ರೆಯಿಲ್ಲದೆ ತೊಳಲಾಡುವವರನ್ನೂ ಸಹ ನಾವು ಕಂಡಿಲ್ಲವೇ? ಹಾಗಾಗಿ ಆನಂದವಾಗಿರುವುದಕ್ಕೆ ವಸ್ತುವಿಗಿಂತ ಮನಃಸ್ಥಿತಿಯೇ ಬಹಳ ಮುಖ್ಯ.

ಯಾರಿಗೆ ಯಾವುದು ಒಗ್ಗಿದೆಯೋ ಅವರು ಅದರಲ್ಲಿ ಸಂತೋಷ ಪಡುತ್ತಾರೆ. ಅವರ ಸಂತೋಷಕ್ಕೆ, ಸ್ವಾಭಿಮಾನಕ್ಕೆ ಅಡ್ಡಿಯಾಗದಂತೆ ಅವರಿಗೆ ಉಪಕಾರ ಮಾಡಿ ಅವರ ಸಂತೋಷವನ್ನು ಹೆಚ್ಚಿಸಲು ಪ್ರಯತ್ನಪಡಬಹುದು. ಅವರ ಸುಖಕ್ಕೆ ಭಂಗವಾಗುವಂತಹ ಯಾವುದೇ ಕೆಲಸ ನಾವು ಮಾಡದೆ ಇದ್ದರೆ ಅದೇ ಅವರಿಗೆ ಮಾಡಿದ ದೊಡ್ಡ ಉಪಕಾರವಾಗುತ್ತದೆ

**ಮುಕ್ತಕ – 875**

**ಬಲುಹಳೆಯ ಲೋಕವಿದು, ಬಲುಪುರಾತನಲೋಕ |**

**ಬೆಳೆದಿರ್ಪುದಿದು ಕೋಟಿರಸಗಳನುಪೀರ್ದು ||**

**ಸುಲಭವಲ್ಲಿದರ ಸ್ವಭಾವವನು ಮಾರ್ಪಡಿಸೆ |**

**ಸಲದಾತುರೆಯದಕೆ - ಮಂಕುತಿಮ್ಮ ||**

ಬೆಳೆದಿರ್ಪುದಿದು=ಬೆಳೆದು+ಇರ್ಪುದು+ಇದು, ಸುಲಭವಲ್ಲಿದರ=ಸುಲಭವಲ್ಲ+ಇದರ,

ಸಲದಾತುರೆಯದಕೆ=ಸಲದು+ಆತುರೆ+ಅದಕೆ

ಪೀರ್ದು=ಹೀರಿ, ಮಾರ್ಪಡಿಸೆ=ಬದಲಾಯಿಸಲು, ಸಲದು= ಸಲ್ಲದು, ಆತುರೆ=ಆತುರ.

ಈ ಲೋಕ ಬಹಳ ಹಳೆಯದು, ಪುರಾತನವಾದದ್ದು. ಇದು ಅಂದಿನಿಂದ ಇಂದಿನವರೆಗೆ ಕೋಟಿ ಕೋಟಿ ರಸಗಳನ್ನು ಹೀರಿಕೊಂಡು ಬದಲಾಗಿದೆ. ಅದರ ಸ್ವಭಾವವನ್ನು ಸುಲಭದಲ್ಲಿ ಬದಲಾಯಿಸಲು ಸಾಧ್ಯವಿಲ್ಲ ಮತ್ತು ಅದನ್ನು ಬದಲಾಯಿಸಲು ಆತುರಪಡುವುದು ಸರಿಯಲ್ಲ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಈ ಜಗತ್ತು ಎಂದು ಶುರುವಾಯಿತೋ ಮತ್ತು ಎಂದು ಅಂತ್ಯವಾಗುವುದೋ ಯಾರಿಗೂ ಗೊತ್ತಿಲ್ಲ. ಹಾಗಾಗಿ ಇದು ಅನಾದಿ ಮತ್ತು ಅನಂತ. ಆದರೆ ಅಂದು ಇದ್ದ ಹಾಗೆ ಇಂದು ಇಲ್ಲ ಮತ್ತು ಇಂದು ಇರುವ ಹಾಗೆ ಮುಂದೆ ಇರುವುದಿಲ್ಲ. ಏಕೆಂದರೆ ಅಂದಿನಿಂದ ಇಂದಿನವರೆಗೆ ಬಂದು ಹೋದ ಎಲ್ಲ ಜೀವಿಗಳ ಬದಲಾಗುವ ಭಾವರಸವನ್ನು ಹೀರುತ್ತಾ, ಆ ಭಾವವನ್ನು ತನ್ನ ಸ್ವಭಾವವಾಗಿಸಿಕೊಳ್ಳುತ್ತಾ, ತಾನೂ ಬದಲಾಗುತ್ತಾ ಇಂದಿನ ಸ್ಥಿತಿಗೆ ಬಂದಿದೆ. ಇದನ್ನು ಯಾರೂ ಆತುರದಿಂದ ಬದಲಾಯಿಸಲು ಸುಲಭ ಸಾಧ್ಯವಲ್ಲ. ಹಾಗೆ ಆತುರಪಡುವುದೂ ಸರಿಯಲ್ಲ. ಇದನ್ನೇ ಮಾನ್ಯ ಡಿವಿಜಿಯವರು 'ಸಲದಾತುರೆಯದಕೆ' ಎಂದಿದ್ದಾರೆ.

ಹೊಸತನ್ನು ಹುಡುಕುವ ಸ್ವಭಾವದ ಮನುಷ್ಯನ ಭಾವಗಳ ರಸವು, ಈ ಲೋಕಜೀವನದ ಅಂತರಂಗಕ್ಕೆ ಇಳಿದು, ಆ ರಸಗಳ ಪ್ರಭಾವದಿಂದ ಇದು ಬದಲಾಗಿದೆ ಮತ್ತು ಬದಲಾಗುತ್ತಾ ಇದೆ. ಈ ಬದಲಾವಣೆ ಕಾಲಕ್ರಮೇಣ

ಮತ್ತು ಸ್ವಾಭಾವಿಕವಾಗಿ ಆಗಿದೆ. ಆದ್ದರಿಂದಲೇ ಒಂದುಕಾಲಕ್ಕೆ ಕಾಡಿನಲ್ಲಿ ಅಲೆಮಾರಿಯಾಗಿದ್ದ ಮನುಷ್ಯನ ಜೀವನ, ಇಂದು ಬಹಳಷ್ಟು ಬದಲಾಗಿದೆ. ಇದಕ್ಕೆ ಕಾರಣ ಇವನ ಮನದಲ್ಲಿ ಉಂಟಾಗುವ ಮತ್ತು ನಿರಂತರ ಬದಲಾಗುವ ಭಾವ. ಅಂದಿನಿಂದ ಇಂದಿನವರೆಗೆ ತನ್ನ ಬದುಕನ್ನು ಉತ್ತಮವಾಗಿಸಿಕೊಳ್ಳುವ ಇವನ ನಿರಂತರ ಪ್ರಯತ್ನದಿಂದಲೇ, ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ, ಹೀಗೆ ತನ್ನ ಬದುಕಿನ ಮೇಲೆ ಪ್ರಭಾವ ಬೀರುವ ಪ್ರತೀ ಕ್ಷೇತ್ರದಲ್ಲೂ ಬದಲಾವಣೆಯನ್ನು ಕಾಣುತ್ತೇವೆ ಅಲ್ಲವೇ?





ಆದರೆ ಈ ಬದಲಾವಣೆಗಳು ಇವನ ಜೀವನವನ್ನು ಉತ್ತಮಗೊಳಿಸಿದೆಯೇ ಅಥವಾ ಇವನನ್ನು ಅಧೋಗತಿಗೆ ತಳ್ಳಿದೆಯೇ ಎಂದು ಯೋಚನೆ ಮಾಡಿದರೆ, ಸುಲಭವಾಗಿ ಉತ್ತರ ಸಿಗುವುದಿಲ್ಲ. ಏಕೆಂದರೆ ಇವನ ಸುಖ ಸಾಧನಗಳು ಹೆಚ್ಚಿದಂತೆ ಬದುಕಿನ ಮೌಲ್ಯಗಳು ಕುಸಿಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದನ್ನು ಬೆಳವಣಿಗೆ ಅಥವಾ ಅವನತಿ ಎಂದು ಹೇಗೆ ಹೇಳುವುದು. ಇದನ್ನು ಕಂಡು 'ಅಯ್ಯೋ!! ಇದು ಸರಿಯಲ್ಲ. ಇದು ಬದಲಾಗಬೇಕು' ಎನ್ನುವ ಭಾವ ನಮ್ಮಲ್ಲಿ ಬಂದರೂ, ಬದಲಾಯಿಸಲು ಆತುರಪಡುವುದು ಸರಿಯಲ್ಲ. ಇದು ಕಾಲಕ್ರಮೇಣ ಬದಲಾಗಬೇಕೇ ಹೊರತು ಆತುರದಲ್ಲಿ ಬದಲಾಯಿಸಲು ಆಗುವುದಿಲ್ಲ. ನಿರಂತರವಾದ ಕಾಲಪ್ರವಾಹದಲ್ಲಿ ಕೊಚ್ಚಿಹೋಗುವ ನಾವು, ಸಾಧ್ಯವಾದಷ್ಟು ಸಕಾರಾತ್ಮಕ ಕೊಡುಗೆಯನ್ನು ನೀಡತ್ತಾ ಸಾಗಬೇಕು.

**ಮುಕ್ತಕ – 876**

**ಸಿಂಧುವನು ಹಿಮಗಿರಿಗೆ ಹಿಂದಿರುಗಿ ಬೇರೊಂದು ।**

**ಚೆಂದದಲ್ಲಿ ಪರಿದು ಬಾರೆಂದಾಣತಿಪೆಯಾ**

**ಸಂದರ್ಭವಿಡಿದು ಜನಚೈತನ್ಯ ಪರಿದಿಹುದು ।**

**ಅಂಧಗತಿಯಲ್ಲವದು – ಮಂಕುತಿಮ್ಮ ||**

ಬಾರೆಂದಾಣತಿಪೆಯಾ=ಬಾರೆಂದು+ಆಣತಿಪೆಯಾ, ಪರಿದಿಹುದು=ಪರಿದು+ಇಹುದು, ಅಂಧಗತಿಯಲ್ಲವದು=ಅಂಧ+ಗತಿಯಲ್ಲವು+ಅದು, ಪರಿದು=ಹರಿದು, ಆಣತಿಪೆಯಾ=ಆಜ್ಞೆಮಾಡುತ್ತೀಯಾ

ಹಿಮಾಲಯದಿಂದ ಹರಿದು ಬರುವ ಸಿಂಧೂ ನದಿಯನ್ನು 'ಹಿಮಾಲಯಕ್ಕೆ ಹಿಂದಕ್ಕೆ ಹೋಗಿ ಬೇರೆಯ ರೀತಿಯ ವೈಯ್ಯಾರದಿಂದ ಹರಿದು ಬಾ' ಎಂದು ಹೇಳಲಾಗುತ್ತದೆಯೇ? ಭೂಮಿಯ ಮೇಲ್ಮೈ, ಇಳಿಜಾರು ಹೇಗಿದೆಯೋ ಅದರಂತೆ ಸಹಜವಾಗಿ ಹರಿದು ಬರುತ್ತಿದೆ, ಸಿಂಧು. ಇದೇ ರೀತಿ ಕಾಲವನ್ನುಸರಿಸಿ ಸಂಧರ್ಭಕ್ಕನುಸಾರವಾಗಿ ಜನರ ಜೀವನದ ಗತಿ ಸಾಗುತ್ತದೆ. ಜನರ ಜೀವನದ ಗತಿ ಕುರುಡುಗತಿ ಅಲ್ಲ, ಎಂದು ಬದುಕು ಎಷ್ಟು ಸಹಜವಾಗಿ ಮುಂದೆ ಹೋಗುತ್ತದೆ ಎನ್ನುವುದಕ್ಕೆ ಒಂದು ಉಪಮೆಯ ಸಹಿತ ವಿವರಿಸಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇದೇ ರೀತಿ, ಹಿಂದಿನಿಂದ ನಡೆದು ಬಂದದ್ದನ್ನು ಇದು ಸರಿಯಿಲ್ಲ' ಎಂದು ಮತ್ತೊಮ್ಮೆ ಪುನರಾವರ್ತನೆ ಮಾಡಲು ಸಾಧ್ಯವಿಲ್ಲ. ಅದು ಸರಿಯೋ ಅಲ್ಲವೋ, ನಡೆದು ಬಂದಿದೆ ಮತ್ತು ಹಾಗೆ ಬಂದಿರುವುದಕ್ಕೆ ಅಂದಿನ ಸಂದರ್ಭಗಳು ಮತ್ತು ಅಂದಿನ ಮನುಷ್ಯರ ಮನೋಭಾವವೇ ಕಾರಣ. ಅದೇ ರೀತಿ ಇಂದಿನ ವಿಷಯಗಳು ಮತ್ತು ವಿಚಾರಗಳು, ಹಿಂದಿನಿಂದ ನಡೆದು ಬಂದದ್ದರೊಂದಿಗೆ ಬೆರೆತು ಬದಲಾಗಿ ಕಾಣುತ್ತಿದೆ. ಅಂದಿಗೆ ಅಂದಿನದು ಸರಿ ಮತ್ತು ಇಂದಿಗೆ ಇಂದಿನದು ಸರಿ ಎನ್ನುವ ಮನೋಭಾವ ಬಂದರೆ, ನಾವು ಇಂದಿನ





ಸಂದರ್ಭಕ್ಕನುಸಾರವಾಗಿ ಸಮಯಕ್ಕೆ ಹೊಂದಿಕೊಂಡು ಬಾಳಬಹುದು. ಇಲ್ಲದಿದ್ದರೆ ಪ್ರತಿ ನಿತ್ಯದ ತಿಕ್ಕಾಟ ತಪ್ಪಿದ್ದಲ್ಲ.

“ನಮ್ಮ ಕಾಲದಲ್ಲಿ ಹೀಗಿರಲಿಲ್ಲ, ಈಗೆಲ್ಲಾ ಹದಗೆಟ್ಟುಹೋಗಿದೆ' ಎಂದು ಹೇಳುವ ಬಹಳಷ್ಟು ಜನರನ್ನು ನಾವು ನಮ್ಮ ಸುತ್ತ ಮುತ್ತ ನೋಡುತ್ತೇವೆ. ಹಾಗೆ ಹೇಳುವುದು ಅವರ ಮನೋಭಾವದ ದೋಷವಲ್ಲದೆ ಮತ್ತೇನೂ ಅಲ್ಲ. ಏಕೆಂದರೆ ಹಾಗೆ ಹೇಳುವವರು ಕಾಲದೊಂದಿಗೆ ಮುನ್ನಡೆಯದೆ, ಎಲ್ಲೋ ಒಂದು ಕಡೆ ನಿಂತುಬಿಟ್ಟಿದ್ದಾರೆ (stuck in time). ಅವರ ಮನೋಭಾವ ಮತ್ತು ಕಾಲದ ಹೊಂದಾಣಿಕೆಯ ಕೊರತೆಯಿಂದ ಅವರಿಗೆ ಹಾಗನ್ನಿಸುತ್ತದೆ. ಅವರೂ ಸಹ ಕಾಲಪ್ರವಾಹದೊಂದಿಗೆ ಸಮನ್ವಯ ಮಾಡಿಕೊಂಡರೆ, ಸಂತೋಷವಾಗಿ ಮುನ್ನಡೆಯಬಹುದು.

ಜಗತ್ತಿನ ಜನ ಜೀವನ ಹೀಗೆ, ಹಳತನ್ನು ಬದಲಾಯಿಸುತ್ತಾ, ಹೊಸತನ್ನು ನೀಡುತ್ತಾ ಬದಲಾದ ಸ್ಥಿತಿಗೆ ಹೊಂದಿಕೊಳ್ಳುವ ಎಲ್ಲಾ ಅವಕಾಶಗಳನ್ನು ನಮಗೆ ನೀಡುತ್ತದೆ. ಅದರೊಂದಿಗೆ ಹೊಂದಿಕೊಳ್ಳದೆ 'ನಾನು ಇರುವಲ್ಲೇ ಇರುತ್ತೇನೆ' ಎನ್ನುವವರಿಗೆ ಹಿಂಸೆ ತಪ್ಪಿದ್ದಲ್ಲ. ನಾವು ಮುಂದೆ ಸಾಗಬೇಕು, ಮೂಲಭೂತ ಮೌಲ್ಯಗಳನ್ನು ತೊರೆಯದೆ, ಬದಲಾಗುವ ಎಲ್ಲದರೊಂದಿಗೆ ನಾವೂ ಬದಲಾಗುತ್ತಾ, ಆನಂದದಿಂದ ಸಾಗೋಣ ಎನ್ನುವ ಮನೋಭಾವ ಬೆಳೆಸಿಕೊಳ್ಳಬೇಕು. ಬದುಕು 'ಹರಿವ ನದಿ' ಯಂತಾದರೆ ಆನಂದವಾಗಿ ಸಾಗಬಹುದು. ನಿಂತ ನೀರಿನಂತಾದರೆ ಕೊಳೆತು ನಾರುವುದು ಖಂಡಿತ. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 877**

**ಮತಿವಂತರಿದ್ದರಲ ನಮ್ಮ ಹಿಂದೆಯುಮಿಲ್ಲಿ ।**

**ಹಿತಚಿಂತಕರು ಜನಕೆ, ಕೃತಪರಿಶ್ರಮರು ॥**

**ಅತಿವೈದ್ಯದಿಂದ ಹೊಸರುಜಿನಕೆಡೆಯಾದೀತೋ ।**

**ಮಿತಿಯಿಂ ನವೀಕರಣ - ಮಂಕುತಿಮ್ಮ ॥**

ಮತಿವಂತರಿದ್ದರಲ=ಮತಿವಂತರು+ಇದ್ದರು+ಎಲ, ಹಿಂದೆಯುಮಿಲ್ಲಿ=ಹಿಂದೆಯುಂ+ಇಲ್ಲಿ,

ಹೊಸರುಜಿನಕೆಡೆಯಾದೀತೋ=ಹೊಸ+ರುಜಿನಕೆ+ಎಡೆಯಾದೀತೋ

ಮತಿವಂತರು=ಬುದ್ಧಿವಂತರು, ಕೃತಪರಿಶ್ರಮರು=ದುಡಿದವರು, ರುಜಿನ=ರೋಗ, ನವೀಕರಣ=ಹೊಸತನದನ್ವೇಷಣೆ

ಈ ಭೂಮಿಯಲ್ಲಿ ನಮಗಿಂತ ಹಿಂದೆ ಬುದ್ಧಿವಂತರು ಇದ್ದರಲ್ಲವೇ? ಸರ್ವ ಜನರ ಹಿತದ ಬಗ್ಗೆ ಚಿಂತೆಮಾಡುವವರು ಇದ್ದರಲ್ಲವೇ? ಜಗತ್ತಿನ ಒಳಿತಿಗಾಗಿ ದುಡಿದವರು ಇದ್ದರಲ್ಲವೇ? ಅತಿಯಾದ ವೈದ್ಯದಿಂದ ಹೊಸರೋಗಕ್ಕೆ ಎಡೆ ಮಾಡಿಕೊಟ್ಟಂತೆ, ಇರುವುದನ್ನು ಅತಿಯಾಗಿ, ತೀವ್ರತೆಯಿಂದ ಬದಲಿಸಿದೆ, ಮಿತಿಯಿಂದ

ನವೀನತೆಯನ್ನು ಕಂಡುಕೊಳ್ಳಬೇಕು ಎಂದು ಒಂದು ಸೂಚನೆ ಮತ್ತು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಭೂಮಿಯ ಮೇಲೆ ಈ ಹಿಂದ ಬಂದು ಹೋದಂತಹ ಮಾನವರ ಬುದ್ಧಿವಂತಿಕೆಯಿಂದಲೇ, ಅಂದಿನ ಸ್ಥಿತಿ ಇಂದಿನವರೆಗೆ ಬದಲಾಗುತ್ತಾ ಬಂದು, ಇಂದಿನ ಹಂತ ತಲುಪಿದೆ ಮತ್ತು ಈ ಬದಲಾವಣೆ ನಿರಂತರವಾಗಿ ಸಹವಾಗಿ ಸಾಗುತ್ತಲೇ ಇದೆ. ಅಂತಹ ಬುದ್ಧಿವಂತರ ಸರ್ವ ಹಿತಕ್ಕಾಗಿಯ ಚಿಂತನೆ, ಆ ಚಿಂತನೆಯನ್ನು ಕೃತಿಯಲ್ಲಿ ಇಳಿಸಲು ಅವರುಗಳ ನಿಸ್ವಾರ್ಥ ಪರಿಶ್ರಮದಿಂದ ಮಾನವರ ಜೀವನದಲ್ಲಿ ಸುಖ ಮತ್ತು ಸಂತೋಷಗಳನ್ನು ಪಡೆಯಲು ಹಲವಾರು ಸಾಧನಗಳು ಮತ್ತು ಬದುಕುವ ವಿಧಾನಗಳ ಆವಿಷ್ಕಾರವಾಯಿತಲ್ಲವೇ? ಆದರೆ ಈ ಎಲ್ಲಾ ಆವಿಷ್ಕಾರಗಳೂ ಮನುಷ್ಯರಿಗೆ ಎಷ್ಟು ಒಳಿತಾಗಿಸಿದೆ ಮತ್ತು ಅವರ ಮನೋಭಾವವನ್ನು ಎಷ್ಟರಮಟ್ಟಿಗೆ ಸಕಾರಾತ್ಮಕವಾಗಿ ಬೆಳೆಸಲಾಗಿದೆ ಎನ್ನುವ ಪ್ರಶ್ನೆ, ಚಿಂತನೆಗೆ ಗ್ರಾಸವಾಗುತ್ತದೆ.

ಇದ್ದದ್ದನ್ನು ಬದಲಾಯಿಸುವ ಮನುಷ್ಯನ ಈ ಪ್ರಯತ್ನದಲ್ಲಿ ಹಳತನ್ನು ತೊಲಗಿಸಿ, ಹೊಸತನ್ನು ಸೃಷ್ಟಿಸಿದಾಗ ಆ ಹೊಸತು ಕೇವಲ ಒಳಿತನ್ನೇ ಮಾಡುವುದಿಲ್ಲ, ಕೆಡುಕನ್ನೂ ಮಾಡುತ್ತದೆ ಎನ್ನುವ ಸಂದೇಹವೇ "ಅತಿವೈದ್ಯದಿಂದ ಹೊಸರುಜಿನಕೆಡೆಯಾದೀತೋ" ಎನ್ನುವಂತೆ ಹೇಳಲ್ಪಟ್ಟಿದೆ. ಮಾನವರು ಸಾಧಿಸಿದ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಆವಿಷ್ಕಾರಗಳು ಮತ್ತು ಅದರಿಂದಾದ ಪ್ರಗತಿ, ಕತ್ತಿಯ ಎರಡೂ ಬದಿಯ ಅಲುಗಿದ್ದಂತೆ. ಎರಡೂ ಕಡೆ ತನ್ನ ಪ್ರಭಾವವನ್ನು ತೋರುತ್ತದೆ. ಒಂದು ಕಡೆ ಒಳಿತನ್ನು ಮಾಡಿದರೆ, ಮತ್ತೊಂದೆಡೆ ಅದನ್ನೇ ಕೆಡುಕಿಗೂ ಬಳಸುವ ಅವಕಾಶವನ್ನೂ ನೀಡುತ್ತದೆ. ಹಾಗಾಗಿ ಬದಲಾದ ಸ್ಥಿತಿಯನ್ನು ಬಹಳ ಜಾಗರೂಕತೆಯಿಂದ ಬಳಸಬೇಕು. ಇಲ್ಲದಿದ್ದರೆ ತೊಂದರೆ ತಪ್ಪಿದ್ದಲ್ಲ.

ಅದಕ್ಕಾಗಿಯೇ ಮಾನ್ಯ ಗುಂಡಪ್ಪನವರು 'ಮಿತಿಯಿಂ ನವೀಕರಣ' ಎಂದಿದ್ದಾರೆ. ಹಳತದರಲ್ಲಿನ ಕೆಡುಕನ್ನು ನಿವಾರಿಸುತ್ತಾ, ಒಳಿತನ್ನೇ ಆಧಾರವಾಗಿಟ್ಟುಕೊಂಡು, ಅದನ್ನು ಸುಧಾರಿಸುತ್ತಾ ಬದುಕಿನ ಸಾಧನಗಳಿಗೆ ಆತುರವಿಲ್ಲದೆ,

ಹೊಸ ಹೊಸ ಆಯಾಮಗಳನ್ನು ಕಂಡುಕೊಳ್ಳುವುದೇ ಜಾಣತನ. ಹಾಗಾಗಿ ಹೊಸತರ ಶೋಧದಲ್ಲಿ ಮಿತಿಯಿರಬೇಕು. ಅತಿ ಸರ್ವತ್ರ ವರ್ಜಯೇತ್' ಎನ್ನುವಂತೆ ಮಿತಿಗಳನ್ನು ಅರಿತು ಬಾಳಿದರೆ ಒಳಿತು.





**ಮುಕ್ತಕ 878**

**ಒಡೆಯದಿರು ತಳಹದಿಯ ಸರಿಪಡಿಪೆನದನೆಂದು |**

**ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ ? ||**

**ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವದು ಸರಿಯೇ? |**

**ದುಡುಕದಿರು ತಿದ್ದಿಕೆಗೆ – ಮಂಕುತಿಮ್ಮ ||**

ಒಡೆಯದಿರು=ಒಡೆಯದೆ+ಇರು, ಸರಿಪಡಿಪನದನೆಂದು=ಸರಿಪಡಿಸುವ+ಅದನು+ಎಂದು,

ಕಟ್ಟಲರಿತವನೇಂ=ಕಟ್ಟಲು+ಅರಿತವನೇಂ, ದುಡುಕದಿರು=ದುಡುಕದೆ+ಇರು

ತಳಹದಿ=ಅಡಿಪಾಯ, ಮೂಲಾಧಾರ, ದುಡುಕು=ಆತುರ, ತಿದ್ದಿಕೆಗೆ=ತಿದ್ದುವಿಕೆಗೆ

ಇರುವುದನ್ನು ಸರಿಪಡಿಸುವ ಭರಾಟೆಯಲ್ಲಿ ಅದರ ಅಡಿಪಾಯವನ್ನು ಅಲುಗಾಡಿಸಬೇಡ. ನಿನಗೆ ಮತ್ತೆ ಅದನ್ನು ಹಾಗೆಯೇ ಕಟ್ಟಲು ಗೊತ್ತಿದೆಯೇನು? ಒಂದು ಗಿಡವ ಸರಿಯಾಗಿ ಬೆಳೆಸಲು ಅದರ ಬೇರುಗಳನ್ನೇ ಕೀಳುವುದು

ಸರಿಯೇ? ಹಾಗಾಗಿ ಇರುವುದನ್ನು ತಿದ್ದಲು ಆತುರ ಪಡಬೇಡ ಎಂದು ಒಂದು ಸೂಕ್ತ ಹಿತವಚನವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತನ್ನ ಸುಖದ ಸಾಧನಗಳನ್ನು ಹೊಸದಾಗಿ ಸೃಷ್ಟಿಸುವುದು ಮತ್ತು ಇರುವುದನ್ನು ಸುಧಾರಿಸುವುದು ಮನುಷ್ಯನ ಜೀವನದಲ್ಲಿ ನಿರಂತರವಾಗಿ ನಡೆದೇ ಇದೆ ಅಲ್ಲವೇ? ಇರುವ ವಸ್ತುಗಳನ್ನೇ ಬೇರೆ ರೀತಿಯಲ್ಲಿ ಹೊಂದಿಸಿಕೊಂಡು ಮತ್ತು ಅದಕ್ಕೆ ಹೊಸ ಆಯಾಮವನ್ನು ಕೊಡುವುದು ಅಥವಾ ಇರುವುದರ ಜೊತೆಗೆ ಮತ್ತಷ್ಟನ್ನು ಜೋಡಿಸಿ ಹೊಸ ರೂಪ ಕೊಡುವುದು ಸಾಧ್ಯ. ಆದರೆ ಮೂಲ ವಸ್ತುವನ್ನೇ ನಾಶಮಾಡಿ ಹೊಸತನ್ನು ಕಂಡುಕೊಳ್ಳಲು ಸಾಧ್ಯವೇ? ಎಂದರೆ, ಖಂಡಿತ ಸಾಧ್ಯವಿಲ್ಲ.

ನಮ್ಮ ಬದುಕಿಗೆ ಆಧಾರವಾದ, ನಮ್ಮ ಪುರಾತನರು ಹಾಕಿಕೊಟ್ಟ ಜೀವನ ಶೈಲಿ, ಮೌಲ್ಯಗಳು, ಸಂಸ್ಕೃತಿ, ಸಂಸ್ಕಾರಗಳು, ಜ್ಞಾನದ ಹಲವು ಪ್ರಕಾರಗಳು, ಇವುಗಳೇ ನಮ್ಮ ಅಂದಿನ ಮತ್ತು ಇಂದಿನ ಬದುಕಿಗೆ ಅಡಿಪಾಯ. ಏಕೆಂದರೆ ಅವು ಮೂಲಭೂತ ಸತ್ಯಗಳು. ಅವುಗಳನ್ನು ಅಲುಗಾಡಿಸಿದರೆ ನಮ್ಮ ಇಡೀ ಅಸ್ತಿತ್ವವೇ ಅಲುಗಾಡಿ, ನಾವು ಖಂಡಿತ ಪತನವಾಗುತ್ತೇವೆ. ಅವಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ಜೀವನ ಶೈಲಿಗೆ ನಾವು ಹೊಸ ಹೊಸ ಆಯಾಮಗಳನ್ನು ಹಾಕಿಕೊಂಡು ಜೀವಿಸುತ್ತಿದ್ದೇವಲ್ಲ, ಹಾಗಿದ್ದರೆ ಒಳಿತು. ಬದುಕಿನ ಹೊರ ರೂಪ ಬದಲಾಗುತ್ತಿದ್ದರೂ ಅದಕ್ಕಾಧಾರವಾದ ನಮ್ಮ ಮೂಲ ಸಂಸ್ಕೃತಿ ಸಂಸ್ಕಾರಗಳು ಭದ್ರವಾಗಿರುತ್ತದೆ.

ಒಂದು ಭದ್ರವಾಗಿ ಬೇರೂರಿದ ಗಿಡದ ಕೊಂಬೆ-ರೆಂಬೆಗಳನ್ನು ಕತ್ತರಿಸಿದಾಗ, ಹೊಸ ಚಿಗುರು ಮೂಡುತ್ತದೆ, ಮತ್ತೆ ಆ ಮರ ಹೂ ಹಣ್ಣುಗಳಿಂದ ನಳನಳಿಸುತ್ತದೆ. ಅದನ್ನು ಬಿಟ್ಟು ಆ ಗಿಡವನ್ನು ಸರಿಮಾಡುತ್ತೇನೆ ಎಂದು ಅದರ

'ಬೇರನ್ನೇ ಭೂಮಿಯಿಂದ ತೆಗೆದುಬಿಟ್ಟರೆ, ಆ ಮರ ಸಾಯುತ್ತದೆ ಮತ್ತು ಮತ್ತೆಂದೂ ಚಿಗುರುವುದೇ ಇಲ್ಲ. ಹಾಗೆಯೇ ನಾವು ಈ ಜಗತ್ತಿನಲ್ಲಿ ಏನನ್ನೇ ಬದಲಾಯಿಸಬೇಕು ಎಂದು ಯೋಚಿಸಿದರೂ ಆತುರಪಡದೆ, ಅದರ ಮೂಲವನ್ನು ಅಲುಗಾಡಿಸದೆ. ಆ ಮೂಲದ ಆಧಾರದ ಮೇಲೆಯೇ ಮಾರ್ಪಾಡುಗಳನ್ನು ಮಾಡಿಕೊಂಡರೆ, ಮಾಡಿಕೊಂಡ ಮಾರ್ಪಾಡು ಸಹನೀಯವಾಗಿ ಮತ್ತು ಸುಂದರವಾಗಿರುತ್ತದೆ. ಹಾಗಾಗಿ, ಏನನ್ನೇ ಬದಲಿಸಲು ಹೋದರು ಬಹಳ ಜಾಗರೂಕತೆಯಿಂದ ಆಲೋಚನೆ ಮಾಡಿ ಮಾಡಬೇಕೆಂಬುದು, ನಮಗೆ ಮಾನ್ಯ ಗುಂಡಪ್ಪನವರು ಕೊಟ್ಟಿರುವ ಹಿತವಚನ.

**ಮುಕ್ತಕ – 879**

**ಮೃಗಶೇಷವಿರುವನಕ ಜಗಳ ತಪ್ಪದು ಜಗದಿ |**
**ಹಗೆಗೆ ಕೊಲದವರು ಹಸಿವಿಂದ ಕೊಂದಾರು ||**
**ಟಗರುಜೂಜೋ ಸಭೆಯ ರಗಳೆಯೋ ಕುಸ್ತಿಯೋ |**
**ಸೊಗ ಜಗಕೆ ರಣರಂಗ - ಮಂಕುತಿಮ್ಮ ||**

ಮೃಗಶೇಷವಿರುವನಕ=ಮೃಗ+ಶೇಷವು+ಇರುವನಕ,
ಹಗೆಗೆ=ದ್ವೇಷಕ್ಕೆ, ಕೊಲದವರು=ಕೊಲ್ಲದವರು, ಸೊಗ=ಸೊಗಸು

ಮನುಷ್ಯನಲ್ಲಿ ಮೃಗಾಂಶದ ಶೇಷವಿರುವತನಕ ಈ ಜಗತ್ತಿನಲ್ಲಿ ಜಗಳ ತಪ್ಪುವುದಿಲ್ಲ. ದ್ವೇಷಕ್ಕೆ ಕೊಲ್ಲದಿದ್ದರೂ, ಹಸಿವಿನಿಂದ ಕೊಂದಾರು. ಇವರಿಗೆ ಒಟ್ಟಾರೆ ಜಗಳ ಅಥವಾ ಕಲಹದಲ್ಲಿ ಆಸಕ್ತಿ, ತಾವು ಜಗಳವಾಡದಿದ್ದರೂ, ಅದು ಟಗರುಗಳ ಹೋರಾಟದ ಜೂಜಾಗಲೀ, ಒಂದು ಸಭೆಯಲ್ಲಿ ನಡೆಯುವ ರಗಳೆಯ ಜಗಳವಾಗಲೀ ಅಥವಾ ಅಖಾಡದಲ್ಲಿ ಮಲ್ಲರ ನಡುವೆ ನಡೆಯುವ ಕುಸ್ತಿಯ ಪಂದ್ಯವಾಗಲೀ, ಅನ್ಯರು ಆಡುವ ಜಗಳವನ್ನಾದರೂ ನೋಡಿ ಸಂತಸಪಡುವ ಪ್ರವೃತ್ತಿ ಮನುಷ್ಯನದು, ಎಂದು ಮಾನವರಲ್ಲಿನ ಮೃಗತ್ವದ ಗುಣಗಳನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯರೂ ಸಹ ಈ ಭೂಮಿಯ ಮೇಲೆ ಒಂದು ಕಾಲಕ್ಕೆ ಪ್ರಾಣಿಗಳಂತೆಯೇ ಜೀವಿಸಿದವರಲ್ಲವೇ? ಹೊಟ್ಟೆಹೊರೆಯುವುದು, ತನ್ನ ರಕ್ಷಣೆ ಮಾಡಿಕೊಳ್ಳುವುದು ಮತ್ತು ಸಂತತಿಯನ್ನು ಬೆಳೆಸುವುದು ಮಾತ್ರ ಇವರ ಕಾರ್ಯಗಳಾಗಿದ್ದವು. ಕಾಲಕ್ರಮೇಣ ತನ್ನ ಬದುಕನ್ನು ಉತ್ತಮಗೊಳಿಸಿಕೊಳ್ಳುವ ಇವನ ಪ್ರಯತ್ನದಲ್ಲಿ, ಇವನು ಹೊಸ

ಹೊಸ ಸಾಧನಗಳನ್ನು ಕಂಡುಕೊಳ್ಳುತ್ತಾ ಇಂದಿನವರೆಗೆ ಬಂದಿದ್ದಾನೆ. ಆದರೆ ಇವನ ಮೂಲಗುಣ ಇನ್ನೂ ಸ್ವಲ್ಪ ಶೇಷವಾಗಿ ಉಳಿದಿದೆ. ಅದೇ ಪೈಪೋಟಿ. ಈ ಪೈಪೋಟಿಯ ಕಾರಣ ಇವನು ಕಾದಾಡುತ್ತಾನೆ ಅಥವಾ ಜಗಳವಾಡುತ್ತಾನೆ. ತನ್ನ ಅಧಿಕಾರವನ್ನು, ಆಧಿಕ್ಯವನ್ನು ಅಥವಾ ಆಧಿಪತ್ಯವನ್ನು ಸ್ಥಾಪಿಸಲು ಇವನು ಸದಾ ನಿರತ. ಹಾಗಾಗಿ ಇವನು ಕಲಹ ಪ್ರಿಯ.





ಇವನ ಈ ಕಲಹ ಪ್ರಿಯತೆಯ ಕಾರಣದಿಂದ, ಸಣ್ಣಪುಟ್ಟ ಜಗಳಗಳಿಂದ ಹಿಡಿದು ಮಹಾ ಮಹಾ ಯುದ್ಧಗಳೇ ನಡೆದ ದೃಷ್ಟಾಂತಗಳು ನಮಗೆ ಮಾನವನ ಚರಿತ್ರೆಯಲ್ಲಿ ಹೇರಳವಾಗಿ ಸಿಗುತ್ತದೆ. ಈ ಕಾಲು ಕೆರೆದು ಜಗಳವಾಡುವುದು 'ಪಶುಗುಣ'. ಇದು ಇವನಲ್ಲಿ ಇನ್ನೂ ಶೇಷವಾಗಿ ಉಳಿದಿರುವುದರಿಂದ ಈ ಜಗಳಗಳು ಮತ್ತು ಕಲಹಗಳು ನಡೆಯುತ್ತವೆ. ಮನುಷ್ಯನಲ್ಲಿ ಅರಿವು ಮೂಡಿದಂತೆ ಸಂಸ್ಕಾರಗಳು ಹೆಚ್ಚಾದಂತೆ, ಈ ರೀತಿಯಲ್ಲಿ ಜಗಳವಾಡುವುದು ಮತ್ತು ಈ ರೀತಿಯ ಜಗಳ, ಕಲಹ ಮತ್ತು ಯುದ್ಧಗಳಿಂದ ಅನ್ಯರಿಗೆ ಹಾನಿ ಮತ್ತು ನಷ್ಟವನ್ನುಂಟುಮಾಡುವುದು ಒಳ್ಳೆಯ ಸಂಸ್ಕಾರವಲ್ಲ ಮತ್ತು ಶಾಂತಿಯುತವಾಗಿ ಬಾಳಿದರೆ ಹೆಚ್ಚು ಸುಖ ಎಂದು ಹೇಳುವ ಭೋಧಕರು, ಅಚಿತಹ ನೀತಿಗಳನ್ನು ಸಾರುವ ಗ್ರಂಥಗಳು ನಮ್ಮಲ್ಲಿ ಹೇರಳವಾಗಿದ್ದರೂ ಮತ್ತು ಅಂತಹ ಅರಿವು ನಮ್ಮಲ್ಲಿ ಇದ್ದರೂ, ನಾವು ಜಗಳವಾಡುತ್ತೇವೆ. ಇದಕ್ಕೆ ಕಾರಣ ಮೂಲವಾಗಿ, 'ನಾನು ಸರಿ ಮತ್ತು ನಾನೇ ಸರಿ' ಎನ್ನುವ ಅಹಂಕಾರದ ಭಾವ ಮತ್ತು ಅನ್ಯರು ಸರಿಯಿಲ್ಲ' ಎನ್ನುವ ತಾತ್ಸಾರದ ಭಾವ.

ನಾವು ಜಗಳವಾಡದಿದ್ದರೂ ಅನ್ಯರು ಆಡುವ ಜಗಳವನ್ನು ನೋಡಿ ಆನಂದಿಸುವ 'ಪಾಶವೀ' ಪ್ರವೃತ್ತಿಯೂ ನಮ್ಮಲ್ಲಿ ಇದೆ. ಬೀದಿಯಲ್ಲೋ, ಮನೆಯ ಅಕ್ಕಪಕ್ಕದಲ್ಲೋ ನಡೆಯುವ ಜಗಳವನ್ನು, ನಾವು ನೋಡುವ ಸಿನಿಮಾದಲ್ಲೋ ಅಥವಾ ಯಾವುದಾದರೂ ಟಿ. ವಿ. ಧಾರಾವಾಹಿಯಲ್ಲೋ ನಡೆಯುವ ಕಲಹವನ್ನು ನಾವು ಕುತೂಹಲದಿಂದ ನೋಡಿ ಅನಂದಿಸುವುದಿಲ್ಲವೇನು? ಜಗಳ ಅಥವಾ ಕಲಹವಾಡುವುದು ಇವನ ಗುಣ. ಆದರೆ ತನಗೆ ಜಗಳವಾಡಲು ಶಕ್ತಿ ಅಥವಾ ಅವಕಾಶ ಸಿಗದಿದ್ದರೆ ಅನ್ಯರು ಆಡುವ ಜಗಳವನ್ನೇ ನೋಡಿ ಆನಂದಿಸುವುದು, ಮಾನ್ಯ ಗುಂಡಪ್ಪನವರು, 'ಮೃಗಶೇಷ' ಎಂದು ಹೇಳಿದಂತೆ ಪಶುತ್ವ ಮನುಷ್ಯನಲ್ಲಿರುವುದರಿಂದ, ಆ ಪಶುತ್ವದ ಆಸೆಗಳನ್ನು ತಣಿಸಲು ಮತ್ತು ತೃಪ್ತಿಹೊಂದಲು ಈ ಕಲಹ ಮತ್ತು ಜಗಳಗಳು. 'ಸೊಗ ಜಗಕೆ ರಣರಂಗ' ಎಂದು ಡಿವಿಜಿಯವರು ಹೇಳಿದಂತೆ ಈ ಜಗತ್ತಿನಲ್ಲಿರುವ ಜನರಲ್ಲಿ ಆ ಪಾಶವೀ ಪ್ರವೃತ್ತಿಯ ಶೇಷವಿರುವತನಕ, ಮನರಂಜನೆಯನ್ನು ನೀಡುತ್ತದೆ. ಮನುಷ್ಯನಲ್ಲಿ, ಎಂದು ಈ ಮೃಗ ಶೇಷ ನಶಿಸುತ್ತದೋ ಅಂದು ಜಗತ್ತಿನ ಎಲ್ಲಾ ಕಲ್ಲಹಗಳೂ ನಿಲ್ಲುತ್ತವೆ. ಆದರೆ ಇಂದಿನ ಜಗತ್ತನ್ನು ನೋಡಿದರೆ, ಅಂತಹ ಸ್ಥಿತಿ ಎಂದಿಗೂ ಬರುವುದೇ ಇಲ್ಲವೇನೋ ಎಂದು ಅನಿಸುತ್ತದೆ.





**ಮುಕ್ತಕ 88ಸಂ**

**ತನ್ನಯ ಮನೋರಥಂಗಳ ಚಕ್ರವೇಗದಿನೆ !**
**ತನ್ನ ಮಣಿಹಾರಗಳ ಸಿಕ್ಕು ಬಿಗಿತದಿನೇ ||**
**ತನ್ನ ಸಂಕಲ್ಪ ವಿಪರೀತದಿನೆ ಮಾನವನ |**
**ಬೆನ್ನು ಮುರಿದೀತೇನೊ - ಮಂಕುತಿಮ್ಮ ||**

ಮನೋರಥ- ಮನಸ್ಸೆಂಬ, ನಿರಂತರ ಓಡುವ ಗಾಡಿ, ಮಣಿಹಾರ=ಮುತ್ತುರತ್ನಗಳ ಹಾರ. ಸಂಕಲ್ಪ =ಇಚ್ಛೆ, ವಿಪರೀತದಿನೆ = ಅತಿಯಿಂದ

ಸಾಧ್ಯಾಸಾಧ್ಯತೆಗಳ ವಿವೇಚನೆ ಇಲ್ಲದೆ, ಅತಿವೇಗವಾಗಿ ಓಡುವ ನಮ್ಮ ಮನಸ್ಸು, ಅತೀ ಉತ್ತಮವಾದ ಇಚ್ಛೆಗಳನ್ನೇ ಹಾರಗಳಂತೆ ತೊಟ್ಟು, ನಮ್ಮ ಕ್ಷಮತೆಗೂ ಮೀರಿದ ಮತ್ತು ವಿಪರೀತವಾದ ಕೆಲಸವನ್ನು ಸಾಧಿಸಲು ಪ್ರಯತ್ನಪಡುವ ನಾವು, ಆ ವಿಪರೀತ ಪ್ರಯತ್ನದಿಂದಲೇ ಪತನವಾಗುವ ಸಾಧ್ಯತೆ ಇದೆ, ಎನ್ನುವ ವಿಚಾರವನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಮನಸ್ಸಿನ ಯೋಚನೆಯ ವೇಗ ಅಧಿಕ. ಕ್ಷಣಾರ್ಧದಲ್ಲಿ ನೂರು ಮಾರು ದೂರ ಯೋಚನೆ ಮಾಡುವ ಕ್ಷಮತೆ ಮನಸ್ಸಿಗೆ ಇದೆ. ಆದರೆ ನಮ್ಮ ಮನಸ್ಸಿನ ಆಲೋಚನೆಯನ್ನು ಕಾರ್ಯಗತಗೊಳಿಸುವ ನಮ್ಮ 'ದೇಹ'ದ ವೇಗ, ಒಂದು 'ಮಾರೂ' ಇಲ್ಲ. ಹಾಗಾಗಿ ನಮ್ಮ ಯೋಚನೆ ಮತ್ತು ಕೆಲಸಗಳ ನಡುವೆ ಅಗಾಧ ಅಂತರ. ಮನಸ್ಸು ಬೇಗ ಬೇಗ ಮುಂದೆ ಓಡುತ್ತದೆ. ಕಲ್ಪನಾಲೋಕದಲ್ಲಿ ಅದರ ಚಕ್ರಗಳು ವೇಗವಾಗಿ ಓಡುತ್ತವೆ. ಹಾಗೆ ಓಡುವಾಗ ಬಹಳ ಉದಾತ್ತವಾದ ಮತ್ತು ಉನ್ನತವಾದ ಧ್ಯೆಯಗಳನ್ನು ಸಾಧಿಸುವ ಹುಚ್ಚು ಆಲೋಚನೆಗಳನ್ನು ತನ್ನ ಸುತ್ತ ಸುತ್ತಿಕೊಂಡು ಓಡುತ್ತದೆ.

ನಮ್ಮ ಮನಸ್ಸು ಜಗತ್ತನ್ನು ಬದಲಿಸುವ ಮತ್ತು ಪ್ರಗತಿಯನ್ನು ಕಾಣುವ ಸಲುವಾಗಿ ಯೋಜನೆಗಳನ್ನು ಹಾಕುವುದು. ಆದರೆ ಮನಸ್ಸಿನ ವೇಗದಲ್ಲಿ ಬದಲಾವಣೆ ಆಗುವುದೇ ಇಲ್ಲ. ಮನಸ್ಸಿನ ಆಲೋಚನೆ ವಾಸ್ತವವಾಗಿ ಆಗಬೇಕಾದರೆ, ಅದಕ್ಕೆ ಪೂರಕವಾಗಿ ಹತ್ತು ಹಲವಾರು ವಿಷಯಗಳ ಸಹಕಾರ ಬೇಕಾಗುತ್ತದೆ. ಯಾವುದೂ ಮನಸ್ಸಿನ ಯೋಚನೆಯಷ್ಟು ವೇಗವಾಗಿ ಬದಲಾಗುವುದಿಲ್ಲವಾದ್ದರಿಂದ, ನಾವು ಮಾಡಿದ ಸಂಕಲ್ಪಗಳು ಬಹಳ ವಿಪರೀತವಾಯಿತೇನೋ ಎಂದು ಅನ್ನಿಸಿ, ಮನಸ್ಸು ಕುಗ್ಗಿ, ಸೊರಗುತ್ತದೆ. ಹಾಗೆ ಆಗುವುದಕ್ಕೆ ಮನಸ್ಸಿನ ವಿಪರೀತ ಆಲೋಚನೆಯೇ ಕಾರಣ. ಅಣುಶಕ್ತಿಯನ್ನು ಕಂಡುಕೊಂಡ ಮಾನವ ಅದರ ದುರುಪಯೋಗವನ್ನು ತಡೆಯಲಿಕ್ಕಾಯಿತೇ?

ಆದ್ದರಿಂದ, ನಾವು ಅತಿಯಾಗಿ ಯೋಚಿಸುವುದು (thinking) ಮತ್ತು ಯೋಜಿಸುವುದನ್ನು (planning) ಬಿಟ್ಟು, ಬದಲಾವಣೆಯನ್ನು ಅತಿ ಶೀಘ್ರವಾಗಿ ತರಬೇಕೆಂಬ ಆತುರದ ತುಡಿತವಿಲ್ಲದೇ ಇರಬೇಕು.

ಸಮಾಧಾನವಾಗಿ ನಿರಂತರ ಕೃಷಿಯಿಂದಲೇ ಬದಲಾವಣೆಯನ್ನು ಅಥವಾ ಸುಧಾರಣೆಯನ್ನು ತರಬಹುದು ಎಂದು ನಂಬಿ ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಿರಬೇಕು. ಹಾಗೆ ಕಾರ್ಯರೂಪಕ್ಕೆ ತಂದದ್ದು ಸೂಕ್ತ ಫಲಿತಾಂಶವನ್ನು ನೀಡುವಂತಿರಬೇಕು. ಹಾಗಾದಾಗ ಮನಸ್ಸಿನ 'ಯೋಜನೆ ಮತ್ತು ಕಾರ್ಯರೂಪ' ಗಳಲ್ಲಿ ಒಂದು ಸಮನ್ವಯವನ್ನು ಕಂಡುಕೊಂಡು ಸಮಾಧಾನವಾಗಿರಬಹುದು. ಹಾಗಲ್ಲದೆ ನಮ್ಮ ಅತಿ ತುಡಿತದ ಮನಸ್ಸಿಗೆ ಕಡಿವಾಣ ಹಾಕದೆ ಇದ್ದರೆ, ಮಾನ್ಯ ಗುಂಡಪ್ಪನವರು ಹೇಳುವ ಹಾಗೆ ನಮ್ಮ ಬೆನ್ನು ಮುರಿದೀತು. ಜೋಪಾನವಾಗಿರಬೇಕು.

**ಮುಕ್ತಕ – 881**

**ಮಿತಿಯನರಿತಾಶೆ, ಸಮುಚಿತವ ಮರೆಯದ ಯತ್ನ ।**
**ತಿತಿಕ್ಷೆ ಕಷ್ಟಾಂಶದಪರಿಹಾರ್ಯತೆಗೆ ॥**
**ಮೃತಿಯೆ ಜೀವನಕಥೆಯ ಕೊನೆಯಲ್ಲವೆಂಬರಿವು ।**
**ಹಿತಗಳಿವು ನರಕುಲಕೆ – ಮಂಕುತಿಮ್ಮ ॥**

ಮಿತಿಯನರಿತಾಶೆ=ಮಿತಿಯನು+ಅರಿತ+ಆಶೆ, ಕಷ್ಟಾಂಶದ ಪರಿಹಾರ್ಯತೆಗೆ=ಕಷ್ಟಾಂಶದ+ಅಪರಿಹಾರ್ಯತೆಗೆ, ಕೊನೆಯಲ್ಲವೆಂಬರಿವು=ಕೊನೆ+ಅಲ್ಲ+ಎಂಬ+ಅರಿವು, ಹಿತಗಳಿವು=ಹಿತಗಳಿವು.
ಸಮುಚಿತ ಔಚಿತ್ಯದಿಂದ ಕೂಡಿದ, ತಿತಿಕ್ಷೆ=ತಾಳ್ಮೆ, ಅಪರಿಹಾರ್ಯ=ಪರಿಹಾರವಾಗದ, ಮೃತಿಯೆ=ಮರಣವೆ, ನರಕುಲಕೆ=ಮನುಜ ಕುಲಕೆ.

ನಮ್ಮ ಮಿತಿಗಳನ್ನು ಅರಿತು ಆಸೆಪಡುವುದು, ಸೂಕ್ತತೆಯನ್ನು ಮರೆಯದ ಪ್ರಯತ್ನ, ಕಷ್ಟಗಳು ಪರಿಹಾರವಾಗದಿದ್ದರೆ, ಅದನ್ನು ತಡೆದುಕೊಳ್ಳುವ ತಾಳ್ಮೆ ಮರಣವೇ ನಮ್ಮ ಜೀವನದ ಕಥೆಗೆ ಅಂತ್ಯವಲ್ಲ ಎಂಬ ಅರಿವು ಇದ್ದರೆ, ಅಂತಹ ಅರಿವು ಮಾನವ ಕುಲಕ್ಕೆ ಹಿತವನ್ನುಂಟು ಮಾಡುತ್ತದೆ ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆಸೆಪಡುವುದು ತಪ್ಪಲ್ಲ. ಆದರೆ, ನಾವು ಆಸೆಯ ಮಿತಿಯನ್ನರಿತಿರಬೇಕು. ಮನುಷ್ಯನ ಜೀವನದ ಸುಧಾರಣೆಗೆ ಈ ಆಸೆಯೇ ಕೀಲಕ. ಆದರೆ ಎಷ್ಟು ಆಸೆ ಪಡಬೇಕು, ಏನನ್ನು ಆಸೆಪಡಬೇಕು ಮತ್ತು ಒಂದು ಆಸೆಯನ್ನು ಪಡಲು ಸೂಕ್ತ ಸಮಯವಾವುದು, ಎನ್ನುವ ಅರಿವಿದ್ದು ಆಸೆಪಟ್ಟರೆ, ಆಗ ಅದು ಮಾನ್ಯ ಗುಂಡಪ್ಪನವರು ಹೇಳುವ 'ಸಮುಚಿತತೆಯ ಯತ್ನ'ವಾಗುತ್ತದೆ. ಮುನ್ನಡೆಯಲು ಒಂದೊಂದೇ ಹೆಜ್ಜೆಯನ್ನು ಮುಂದಿಡಬೇಕು. ಒಂದೇ ಬಾರಿಗೆ ಹತ್ತು ಹೆಜ್ಜೆಗಳನ್ನು

ಹಾರಿಬಿಡುತ್ತೇನೆ ಎಂದರೆ, ಬಿದ್ದು, ಪೆಟ್ಟು ಮಾಡಿಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ಹಿತವಾದ ಮತ್ತು ಮಿತವಾದ ಆಸೆಪಡುವುದು ಉಚಿತ.





ಒಚಿದು ಆಸೆಯನ್ನು ಪಟ್ಟು ಅದನ್ನು ಸಾಕಾರಮಾಡಿಕೊಳ್ಳುವ ಪ್ರಯತ್ನದಲ್ಲಿ ಹಲವಾರು ತೊಡಕುಗಳು ಬರಬಹುದು. ಕೆಲವು ನಿವಾರಣೆಯಾಗಬಹುದು ಮತ್ತು ಕೆಲವು ಪರಿಹಾರವಾಗದೆ ಹೋಗಬಹುದು. ಹಾಗೆ ಪರಿಹಾರವಾಗದೆ ಹೋಗುವ ತೊಡಕುಗಳು 'ಕಷ್ಟ'ದ ರೂಪದಲ್ಲಿ ನಮ್ಮನ್ನು ಪೀಡಿಸುತ್ತದೆ. ಅಂತಹ ಪೀಡನೆಯನ್ನು ತಿತಿಕ್ಷೆ' ಎಂದರೆ, ಸ್ಥೈರಣೆ ಅಥವಾ ತಾಳ್ಮೆಯಿಂದ ಸಹಿಸಿಕೊಳ್ಳಬೇಕು, ಎನ್ನುವುದು ಡಿವಿಜಿಯವರ ಸಲಹೆ. ಒಂದು ಕಷ್ಟದ ಪರಿಸ್ಥಿತಿ ನಮ್ಮ ಮರಣದಿಂದ ಅಂತ್ಯವಾಗುತ್ತದೆ ಎಂದು ತಿಳಿಯಬಾರದು. ಹೀಗೆ ಬರುವ ಕಷ್ಟಗಳು ಮತ್ತು ಆ ಕಷ್ಟಗಳಿಂದ ನಮ್ಮಲ್ಲಿ ಆಗುವ ಬದಲಾವಣೆಗಳು ಮತ್ತು ಸುಧಾರಣೆಗಳು, ಜನ್ಮಜನ್ಮಾಂತರದಲ್ಲಿ ಆಗುವ ಸಂಸ್ಕರಣದ ಹಂತಗಳು, ಎಂದು ಅರಿಯಬೇಕು.

ನಮ್ಮ ಹಿಂದಿನವರ ಪ್ರಯತ್ನಗಳಿಂದ ನಮ್ಮ ಇಂದಿನ ಜೀವನ ಸುಧಾರಿತ ರೀತಿಯಲ್ಲಿದೆ. ನಮ್ಮ ಹಿಂದಿನವರು ತಮ್ಮ ಜೀವನದ ಮಾರ್ಗದಲ್ಲಿ, ನಡೆದುಬಂದ ಹಾದಿ ಮತ್ತು ಅವರ ಅನುಭವಗಳು ನಮಗೆ ದಾರಿದೀಪವಾಗಬೇಕು.

ಅವರ ಅನುಭವಗಳ ಮತ್ತು ನಮ್ಮ ಸ್ವತಂತ್ರ ಬುದ್ಧಿಶಕ್ತಿಯಿಂದಾಗುವ ಪ್ರಯತ್ನದಿಂದ ನಮ್ಮ ಇಂದಿನ ಜೀವನ ಸುಧಾರಣೆಯಾಗಿ, ಮುಂದಿನವರ ಬದುಕು ಸುಗಮವಾಗುವಂತಾಗಬೇಕು. ಹಾಗಾದರೆ ಅದು ಮನುಕುಲಕ್ಕೆ ಹಿತ ಎಂದು ಹೇಳುತ್ತಾರೆ ಮಾನ್ಯ ಡಿವಿಜಿಯವರು. ಅಂತಹ ಮಾರ್ಗವನ್ನು ನಾವೂ ಅನುಸರಿಸಿ, ನಮ್ಮ ಜೀವನವನ್ನು ಸುಧಾರಿಸಿಕೊಳ್ಳಲು ಮತ್ತು ಮುಂದಿನ ಜನಾಂಗದ ಜೀವನ ಸುಗಮವಾಗಿಸುವ ಪ್ರಯತ್ನವನ್ನು, ಮಾಡಿದರೆ ನಮ್ಮ ಇಂದಿನ ಜೀವ ಸಾರ್ಥಕವಾಗುತ್ತದೆ.

**ಮುಕ್ತಕ – 882**

**ಸರ್ವಾರ್ಥ ಸಹಭಾಗಿತೆಗೆ ರಾಷ್ಟ್ರ ಕುಲ ವರ್ಗ।**
**ಸರ್ವದಣು ತಾನೆನುತ್ತೋರೊರ್ವ ಮನುಜನ್॥**
**ಸರ್ವಜೀವ ಸಂವೃದ್ಧಿಗನುಗೂಡಿ ದುಡಿಯುತಿರೆ।**
**ಪರ್ವವಂದಿಳೆಗೆಲವೊ – ಮಂಕುತಿಮ್ಮ॥**

ಸರ್ವದು=ಸರ್ವದ+ಅಣು, ತಾನೆನುತ್ತೋರೊರ್ವ=ತಾನು+ಎನುತ್ತ+ಓರೋರ್ವ,
ಸಂವೃದ್ಧಿಗನುಗೂಡಿ=ಸಂವೃದ್ಧಿಗೆ+ಅನುಗೂಡಿ, ಪರ್ವವಂದಿಳೆಗೆಲವೊ=ಪರ್ವದಿನವು+ಅಂದು+ಇಳೆಗೆ+ಎಲವೊ
ಸರ್ವಾರ್ಥ=ಸಕಲರ ಉಪಯೋಗ, ಓರೋರ್ವ=ಒಬ್ಬಬ್ಬನೂ, ಅನುಗೂಡಿ=ಆನುಕೂಲಿಕವಾಗಿ,
ಪರ್ವ=ಬದಲಾವಣೆ,

ರಾಷ್ಟ್ರ, ಕುಲ, ವರ್ಗ ಇತ್ಯಾದಿ ವಿಭಾಗಗಳು, ಮಾನವರು ಸಹಜೀವನವನ್ನು ಮಾಡಲು ಅನುಕೂಲವಾಗುವಂತೆ ಇವೆ. ಪ್ರತಿಯೊಬ್ಬ ಮನುಷ್ಯನೂ, ತಾನು ಸರ್ವದಲ್ಲಿ 'ಅಣು'ಮಾತ್ರ ಎಂದು ಬಗೆದು, ಸರ್ವರ ಜೀವನದ ಸಂವೃದ್ಧಿಗೆ ಕೃಷಿಮಾಡಿದ ದಿನ, ಈ ಜಗತ್ತಿಗೆ 'ಪರ್ವ'ದಿನ ಅಥವಾ ಸಂಭ್ರಮದ ದಿನ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಮಾಡುವ ಕೆಲಸ ಮತ್ತು ಅದರ ಫಲ, ಕೇವಲ ನಮಗಾಗಿಯೇ, ಎನ್ನುವ 'ಸ್ವಾರ್ಥ' ಭಾವನೆಯನ್ನು ತೊರೆದು, ಸಕಲರ ಒಳಿತಿಗಾಗಿ ಕೃಷಿ ಮಾಡುವುದು ಒಳ್ಳೆಯದು, ಎನ್ನುವುದೇ ಈ ಮುಕ್ತಕದ ಹೂರಣ. ನಮ್ಮ ಆರ್ಷ್ಯ ಸಂಸ್ಕೃತಿಯಾದ ಸನಾತನದ 'ಸಹನಾವವತು ಸಹನೌಭುನಕ್ತು' ಮತ್ತು 'ಸರ್ವೇ ಸುಖಿನಃ ಸಂತು, ಸರ್ವೇ ಸಂತು ನಿರಾಮಯಾಃ, ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿತ್ ದುಃಖಮಾಗ್ಯವೇತ್' ಎಂಬಂತಹ ನೂರಾರು ಸೂಕ್ತಗಳು ಇಂತಹ ಭಾವವನ್ನೇ ವ್ಯಕ್ತಪಡಿಸುತ್ತದೆ. ಈ ಜಗತ್ತು ಆ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿದೆ. ಈ ಸೃಷ್ಟಿಯಲ್ಲಿರುವ ಕೋಟ್ಯಾಂತರ ಜೀವರಾಶಿಗಳಲ್ಲಿ ನಾನೂ ಸಹ ಒಂದು. ಇಡೀ ಬ್ರಹ್ಮಾಂಡದಲ್ಲಿ ನಾನು ಕೇವಲ ಒಂದು ಅಣು ಎನ್ನುವ ಸತ್ಯವನ್ನರಿತು, ಆ ಸತ್ಯವನ್ನು ನಮ್ಮ ಅಂತರಂಗದೊಳಕ್ಕೆ ಬಟ್ಟಿ ಇಳಿಸಿಕೊಂಡು, ನಮ್ಮ ಸ್ವಭಾವವನ್ನು ಮಾರ್ಪಾಡುಮಾಡಿಕೊಂಡು, ಸ್ವಾರ್ಥ ಸಾಧನೆಯನ್ನು ಬಿಟ್ಟು, ಸಕಲರ ಒಳಿತಿಗಾಗಿ, ಸಕಲರ ಸಂತೋಷ ಅಥವಾ ಹಿತಕ್ಕಾಗಿ, ನಾವು, ಎಂದರೆ ಈ ಜಗತ್ತಿನ ಎಲ್ಲರೂ ಕೃಷಿ ಮಾಡಿದರೆ, ಅಂದು ಇಡೀ ಜಗತ್ತೇ, ಸಕಲ ಜೀವರಾಶಿಗಳಿಗೂ ಜೀವಿಸಲು ಒಂದು ಸುಂದರ ತಾಣವಾಗುತ್ತದೆ ಅಲ್ಲವೇ?

ಹಾಗಲ್ಲದೆ ಸದಾ ಕಾಲ, 'ನಾನು, ನನ್ನದು, ನನಗೆ' ಎನ್ನುವ 'ನಾನತ್ವ'ದ ಭಾವಗಳನ್ನು ವ್ಯಕ್ತಪಡಿಸುತ್ತಾ, ಅಗಾಧವಾದ ಸೃಷ್ಟಿಯಲ್ಲಿ ತಾನೂ ಒಂದು ಎನ್ನುವುದನ್ನು ಮರೆತು, "ಈ ಜಗತ್ತಿನಲ್ಲಿ ಸೃಷ್ಟಿಯಾಗಿರುವುದೆಲ್ಲಾ ನನ್ನ ಸುಖ ಮತ್ತು ಆನಂದಕ್ಕೆ, ಆ ಪರಮಾತ್ಮ ಕೊಟ್ಟ ಕೊಡುಗೆ'ಎನ್ನುವಂತಹ ದುರ್ಭಾವವನ್ನು ಬೆಳೆಸಿಕೊಂಡು ಬದುಕುತ್ತಿರುವ ಇಂದಿನ ಮನುಷ್ಯರನ್ನು ನೋಡಿದರೆ ಮಾನ್ಯ ಗುಂಡಪ್ಪನವರ ಆಶಯ ಸಾಕಾರವಾಗುವುದು ದೂರದ ಮಾತು ಎನ್ನಿಸುತ್ತದೆ.

ಸಕಲರ ಒಳಿತನ್ನು ಬಯಸಿ ಅದಕ್ಕಾಗಿ ಶ್ರಮಿಸುವ ಜನರಿಲ್ಲ ಎಂದಲ್ಲ, ಇದ್ದಾರೆ. ಆದರೆ ತೀರ ಕಡಿಮೆ. ಬಹುಶಃ ಇಂದು ನಾವು ನಮ್ಮ ಸಮಾಜದಲ್ಲಿ ಅಲ್ಪಸ್ವಲ್ಪ ಸಾರ್ವಜನಿಕ ಹಿತವನ್ನು ಕಾಣುತ್ತಿದ್ದೇವೆ ಎಂದರೆ, ಅಂಥವರ ನಿಸ್ವಾರ್ಥ ಪರಿಶ್ರಮದಿಂದಲೇ, ಅಲ್ಲವೇ? ಅಂತಹವರ ಸಂಖ್ಯೆ ಅಧಿಕವಾಗಿ, ಜಗವೆಲ್ಲ ಅಂತಹವರೇ ತುಂಬಿದರೆ ಈ ಜಗತ್ತು ಮತ್ತು ಇಲ್ಲಿನ ಜೀವನ 'ಮಾ ಕಶ್ಚಿತ್ ದುಃಖಮಾಗ್ಯವೇತ್' ಎನ್ನುವ ಉಕ್ತಿಯ ಆಶಯದಂತೆ, ಎಲ್ಲಿಯೂ ದುಃಖವಿಲ್ಲದ ಸ್ಥಿತಿ ಏರ್ಪಟ್ಟು 'ಪರ್ವವಂದಿಳೆಗೆ' ಎಂದು ಗುಂಡಪ್ಪನವರು ಹೇಳುವಂತೆ ಈ ಭುವಿಗೆ ಸ್ವರ್ಗವೇ ಇಳಿದುಬಂದು ಪ್ರತಿನಿತ್ಯವೂ ಹಬ್ಬದ ವಾತಾವರಣವು ಉಂಟಾಗಬಹುದು.

**ಮುಕ್ತಕ-883**

**ಕಾಯಕಿಂತಾತ್ಮ ಪಿರಿದೆಂದು ಜನವರಿತಂದು ।**

**ಸ್ವೀಯೇಚ್ಛೆಯಿಂದ ಸಮಾಧಾನ ಕೆಡದಂದು ॥**

**ದಾಯ ಸಮ ಸಂಸೃಷ್ಟಿ ಭೂಭಾಗ್ಯವಾದಂದು ।**

**ಶ್ರೇಯ ನೆರೆವುದು ಜಗಕೆ – ಮಂಕುತಿಮ್ಮ ॥**

ಕಾಯಕಿಂತಾತ್ಮ=ಕಾಯಕಿಂತ+ಆತ್ಮ, ಪಿರಿದೆಂದು=ಪಿರಿದು+ಎಂದು, ಜನವರಿತಂದು+ಜನ+ಅರಿತಂದು, ಕೆಡದಂದು=ಕೆಡದ+ಅಂದು, ಭೂಭಾಗ್ಯವಾದಂದು=ಭೂಭಾಗವಾದ ಅಂದು,
ಕಾಯ=ದೇಹ, ಪಿರಿದು=ಹಿರಿದು, ದೊಡ್ಡದು, ಸ್ತ್ರೀಯೇಚೆ-ಸ್ವಚ್ಛ, ದಾಯ ಸಮ ಸಂಸೃಷ್ಟಿ= ಎಲ್ಲರಲ್ಲೂ ಸಮನಾಗಿ ಹಂಚಿಕೊಳ್ಳುವುದು, ಶ್ರೇಯ=ಶ್ರೇಯಸ್ಸು, ನೆರೆವುದು=ತುಂಬುವುದು.

ದೇಹಕ್ಕಿಂತ, ಆತ್ಮ ದೊಡ್ಡದೆಂದು ಜನರು ಅರಿತಂದು, ತಮ್ಮ 'ಸ್ವ-ಇಚ್ಛೆ' ಯಿಂದಲೇ ನಮ್ಮ ಮಾನಸಿಕ ಸಮಾಧಾನ ಹಾಳಾಗದೆ ಇರುವಂದು, ಈ ಜಗತ್ತಿನಲ್ಲಿ ದೊರೆಯುವ ಸಕಲ ಸೌಭಾಗ್ಯಗಳನ್ನು ಸಮುದಾಯದಲ್ಲಿ ಸಮನಾಗಿ ವಿತರಣೆಯಾದರೆ, ಆಗ ಈ ಜಗತ್ತಿನಲ್ಲಿ ಶ್ರೇಯಸ್ಸು ಉಂಟಾಗುತ್ತದೆ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ನಾಶವಾಗುವ ದೇಹಕ್ಕಿಂತ ಅವಿನಾಶಿಯಾದ ಆತ್ಮದ ಹರಹು ಬಹಳ ದೊಡ್ಡದು. ಕೇವಲ ಒಂದು ಜನ್ಮಕ್ಕೆ ಸೀಮಿತವಾದ ಈ ದೇಹ ಮತ್ತು ಜನ್ಮಜನ್ಮಾಂತರದಲ್ಲಿ ಈ ರೀತಿಯ ಹಲವಾರು ದೇಹಗಳನ್ನು ಮತ್ತು ರೂಪಗಳನ್ನು ಹೊತ್ತು, ಸಂಸ್ಕರಣಗೊಳ್ಳುವ 'ಆತ್ಮ'ದ ಅನುಭವ, ದೇಹದ ಅನುಭವಕ್ಕಿಂತ ದೊಡ್ಡದು. ಆತ್ಮಕ್ಕೆ, ತನ್ನ ಗಮ್ಯವನ್ನು ಸೇರಲು, ಈ ಮನಸ್ಸು, ಬುದ್ಧಿ ಮತ್ತು ದೇಹಗಳು ಕೇವಲ ಉಪಕರಣಗಳು. ಹಾಗಾಗಿ ಆತ್ಮದ ವಿಸ್ತಾರ, ದೇಹದ

ಅಸ್ಥಿತ್ವಕ್ಕಿಂತ ಬಹಳ ದೊಡ್ಡದು ಎಂದು ಅರಿಯಬೇಕು. ಸಕಲ ಜೀವ ರಾಶಿಗಳಲ್ಲಿ ಇರುವ ಆತ್ಮವೊಂದೇ ಎಂದು 'ಜಗದಾತ್ಮ ಭಾವ ಎಲ್ಲ ಜನರಲ್ಲಿ ಬಂದಾಗ ಭೇಧ ಅಳಿಸಿ ಸಕಲರ ಸುಖದಲ್ಲಿ ತನ್ನ ಸುಖವನ್ನು ಕಾಣುವ ವಿಶಾಲಭಾವ ನಮ್ಮಲ್ಲಿ ಮೂಡುತ್ತದೆ.

'ನಾನು' ಎಂಬುದು ಗಾಢವಾಗಿ ನಮ್ಮ ಮನಸ್ಸು-ಬುದ್ಧಿಗಳಲ್ಲಿ ಬೇರೂರಿದ್ದರೆ, ನಮ್ಮ ಎಲ್ಲ ಕೆಲಸಗಳು ಮತ್ತು ಆ ಕೆಲಸಗಳ ಫಲವು ಕೇವಲ ನಮಗಾಗಿಯೇ ಆಗಿರುತ್ತದೆ. 'ನಾನು' ಮಾಡಿದ್ದೇ ಸರಿ, ಯಾರೂ ನನ್ನನ್ನು ಪ್ರಶ್ನಿಸುವಂತಿಲ್ಲ ಮತ್ತು ವಿಮರ್ಶಿಸುವಂತಿಲ್ಲ, ಎನ್ನುವ ಸ್ವೇಚ್ಚಾ ಮನೋಭಾವವಿದ್ದರೆ, ಅನ್ಯರ ನೋವನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ಅಂತಹ ಸ್ಥಿತಿಯಲ್ಲಿ ಸಾಮೂಹಿಕ ಒಳಿತು ಕಡೆಗಣಿಸಲ್ಪಟ್ಟು, ಸಮಾಧಾನದ ಸ್ಥಿತಿಯಿರದೆ, ಸಮಾಜದಲ್ಲಿ ಶಾಂತಿ ಮತ್ತು ಸುಖಗಳು ಕದಡಿ, ಕೆಡುತ್ತವೆ.





ಹಾಗಾಗಿ, ನಮ್ಮಲ್ಲಿ 'ಜಗದಾತ್ಮ ಭಾವ ಮೂಡಿದರೆ, ಸಮಾಜದಲ್ಲಿ ನಾವು ಅನುನಯದಿಂದ ಬಾಳಲಾದರೆ, ನಾವು ತೃಪ್ತಿಯಿಂದ ಇದ್ದು, ನಮಗೆ ಸಿಕ್ಕ ಸದುಪಾಯಗಳನ್ನು ಸಮಾಜದ ಸಂತೋಷಕ್ಕೆ ಬಳಸಲಾದರೆ, ನಾವೂ ಸಂತಸದಿಂದ ಇದ್ದು, ಅನ್ಯರಿಗೂ ಆ ಸಂತಸವನ್ನು ಸಮನಾಗಿ ಹಂಚಿ, ಇಡೀ ಸಮಾಜವೇ ಸಮಾನವಾದ ಸುಖ ಶಾಂತಿಗಳಿಂದ ಇರುವಂತೆ ನೋಡಿಕೊಳ್ಳಬಹುದು. ಆಗ ಮಾನ್ಯ ಗುಂಡಪ್ಪನವರು ಹೇಳುವ 'ಶ್ರೇಯ ನೆರೆವುದು ಜಗಕೆ' ಎನ್ನುವ ಸ್ಥಿತಿ ಉಂಟಾಗುತ್ತದೆ. ಹಾಗಲ್ಲದೆ "ನಾನಾಯಿತು, ನನ್ನ ಸುಖವಾಯಿತು, ಪ್ರತಿಯೊಬ್ಬರೂ ಅವರವರ ಕರ್ಮವನ್ನು ಅನುಭವಿಸುತ್ತಾರೆ, ನನಗೆ ಸಂದ ಸುಖವನ್ನು ನಾನು ಅನುಭವಿಸುತ್ತೇನೆ, ನಾನೇಕೆ ಹಂಚಿಕೊಳ್ಳಲಿ" ಎನ್ನುವಂತಹ ಸಂಕುಚಿತ ಮನೋಭಾವವಿರುವ ತನಕ, ಈ ಜಗತ್ತಿಗೆ ಸಮಾನವಾದ ಶ್ರೇಯಸ್ಸು ನೆರೆಯುವುದು, ಸಾಧ್ಯವೇ ಇಲ್ಲ. ನಮ್ಮ ಮನಸ್ಸು ಹೇಗಿದೆ ಎಂದು ಅರಿತು, ಅದನ್ನು 'ಸರ್ವರ ಶ್ರೇಯಸ್ಸಿ' ಗೆ ಯೋಚಿಸುವಂತೆ ಸಿದ್ಧಪಡಿಸಿಕೊಳ್ಳಲು ನಮಗೆ ಸಾಧ್ಯವಾದರೆ, ನಾವು ಬದುಕಿನಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳಬಹುದು.

**ಮುಕ್ತಕ – 884**

**ವಸ್ತು ವಿಜ್ಞಾನದಿಂ ಜೀವನಸಂವೃದ್ಧಿ ಮಿಗೆ।**

**ವಿಸ್ತರಿಸೆ ವಿಶ್ವೈಕ್ಯಭಾವ ಜನಮನದೊಳ್ ॥**

**ದೃಷ್ಟಲೋಕದ ಬೆಡಗದೃಷ್ಟವನು ಮರಸದಿರೆ।**

**ಸ್ವಸ್ತಿ ಲೋಕಕ್ಕೆಲ್ಲ – ಮಂಕುತಿಮ್ಮ ॥**

ಬೆಡಗದೃಷ್ಟವನು=ಬೆಡಗು+ಅದೃಷ್ಟವನು, ಮರಸದಿರೆ=ಮರಸದೆ+ಇರೆ

ದೃಷ್ಟಲೋಕ = ಕಾಣುವ ಜಗತ್ತು, ಅದೃಷ್ಟವನು= ಕಾಣದ್ದನ್ನು, ಮರಸದೆ=ಮರೆಯಿಸದೆ

ಜಗತ್ತಿನಲ್ಲಿರುವ ವಸ್ತುಗಳ ಕುರಿತಾದಂತಹ ವಿಜ್ಞಾನದ ವಿಷಯದಲ್ಲಿ ಹೆಚ್ಚು ಸಂಶೋಧನೆಯಿಂದ ಜನಜೀವನ ಸುಧಾರಿಸುತ್ತದೆ ಮತ್ತು ಜಗತ್ತಿನ ಜನರು ಪರಸ್ಪರ ಹತ್ತಿರವಾಗಿ ಒಂದು ವಿಶ್ವೈಕ್ಯಭಾವ ಉಂಟಾಗುತ್ತದೆ. ಆದರೆ ಕಣ್ಣಿಗೆ ಕಾಣುವ ಈ ಜಗತ್ತಿನ ಬೆಡಗು, ಎಂದರೆ ಮಾಯೆ, ಈ ಜಗತ್ತನ್ನು ಮತ್ತು ಈ ಜಗತ್ತಿನ ಮಾಯೆಯನ್ನು ಸೃಷ್ಟಿಸಿದ, ಆದರೂ ಕಣ್ಣಿಗೆ ಕಾಣದ, ಆ ಪರಮ ಶಕ್ತಿಯ ವಿಸ್ಮರಣೆಯುಂಟಾಗದಿದ್ದರೆ ಲೋಕದಲ್ಲಿ ಸ್ವಸ್ತಿ, ಎಂದರೆ ಜನಜೀವನದಲ್ಲಿ ಸ್ವಾಸ್ಥ್ಯ (ಆರೋಗ್ಯ) ಉಂಟಾಗುತ್ತದೆ ಎಂದು, ಜಗತ್ತು ಮತ್ತು ಜಗನ್ನಿಯಾಮಕನ ನಡುವೆ ಸಮನ್ವಯವನ್ನು ಕಂಡುಕೊಳ್ಳಬೇಕಾದ ಅವಶ್ಯಕತೆಯನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಚಿದು ವಿಜ್ಞಾನದಲ್ಲಿ ಆಗಿರುವ ಪ್ರಗತಿಯು, ಜಗತ್ತಿನ ಎಲ್ಲರನ್ನೂ ಬಹಳ ಹತ್ತಿರವಾಗಿಸಿದೆ, ಎಂದರೆ ಇಂದು ಪರಸ್ಪರ ಸಂಪರ್ಕದ ಸಾಧನಗಳಲ್ಲಿ ಆಗಿರುವ ಪ್ರಗತಿಯಿಂದ, ದೇಶ-ವಿದೇಶಗಳಲ್ಲಿರುವ ಜನರು ಕ್ಷಣಾರ್ಧದಲ್ಲಿ ಪರಸ್ಪರ ಸಂಪರ್ಕಕ್ಕೆ ಬರುವ ಹಾಗಾಗಿದೆ. ಇಂದಿನ ಪ್ರಯಾಣ ಸುಲಭವಾಗುತ್ತಿದೆ. ಇಂದಿನ ಸುಖ ಮತ್ತು





ಸೌಲಭ್ಯದ ಸಾಧನಗಳಿಂದ ಮನುಷ್ಯನ ಜೀವನ ಸುಖಮಯವಾಗುತ್ತಿದೆ. ಆದರೆ ಸಂಪರ್ಕ ಸಾಧನಗಳಲ್ಲಿ ಅಭಿವೃದ್ಧಿಯಾದರೂ, ಹೃದಯದಿಂದ ಮನುಷ್ಯರು ಪರಸ್ಪರ ದೂರವಾಗುತ್ತಿದ್ದಾರೆಯೇ? ಸುಖ ಮತ್ತು ಸೌಲಭ್ಯದ ಸಾಧನಗಳಿಂದ, ಮನುಷ್ಯನ ಜೀವನ ಸುಖಮಯವಾಗುತ್ತಿದ್ದರೂ, 'ಆನಂದ'ವಾಗಿದ್ದಾನೆಯೇ? ಎನ್ನುವ ಪ್ರಶ್ನೆಗಳು

ಸಹಜವಾಗಿ ಉದ್ಭವವಾಗುತ್ತಿವೆ. ವಿಜ್ಞಾನದ ಪ್ರಗತಿಯಿಂದ ಆಗಿರುವ ಸುಖದ ಪ್ರಗತಿ ಮನುಷ್ಯನನ್ನು 'ಸ್ವಾರ್ಥಿ'ಯನ್ನಾಗಿಸಿದೆ. ಹೆಚ್ಚು ಹೆಚ್ಚು ಸುಖದ ಹುಡುಕಾಟದಲ್ಲಿ ಇವನು ಇರುವ ಸುಖವನ್ನು 'ಆನಂದ' ದಿಂದ ಅನುಭವಿಸುವುದನ್ನು ಮರೆತುಹೋಗಿದ್ದಾನೆ.

ಇದಕ್ಕೆ ಕಾರಣವೇನೆಂದರೆ, ಇವನು ಈ ಜಗತ್ತಿನಲ್ಲಿ ಮುಳುಗಿ, ಜಗತ್ಕಾರಕನನ್ನು ಮತ್ತು ಅವನ ಲೀಲಾವಿನೋದವನ್ನು ಕಾಣಲು ಅಸಮರ್ಥನಾಗಿದ್ದಾನೆ. ತಾನು ಈ ಜಗತ್ತಿನಲ್ಲಿ ಶಾಶ್ವತ ಎನ್ನುವಂತೆ ವರ್ತಿಸುತ್ತಿದ್ದಾನೆ. ಜಗತ್ತಿನೊಂದಿಗೆ ಸಂಪರ್ಕವನ್ನು ಸುಲಭಗೊಳಿಸಿಕೊಳ್ಳುತ್ತಾ ಪರತತ್ವದೊಂದಿಗಿನ ಸಂಪರ್ಕವನ್ನು ಕಡಿದುಕೊಂಡಿದ್ದಾನೆ(a clear disconnect with the divinity).'ಪರ'ವಿದ್ದರೆ ಮಾತ್ರ 'ಇಹ ಇಲ್ಲದಿದ್ದರೆ ಇಲ್ಲ ಎನ್ನುವ ಸತ್ಯವನ್ನು ಮರೆತಿದ್ದಾನೆ. 'ದೃಷ್ಟ' ಎಂದರೆ ಕಣ್ಣಿಗೆ ಕಾಣುವುದು ಮಾತ್ರ ಸತ್ಯ, ಹಾಗಾಗಿ ಈ ಜಗತ್ತೇ ಸತ್ಯ, ಈ ಜಗತ್ತಿನ ವಸ್ತುಗಳೇ ಸತ್ಯವಾಗಿ ನಮಗೆ ಸುಖವನ್ನು ನೀಡಬಲ್ಲವು, ಎನ್ನುವ ಭ್ರಮೆಯಲ್ಲಿ ಈ ಜಗತ್ತನ್ನು ಮತ್ತು ಮನುಷ್ಯನ ಎಲ್ಲಾ ಸುಖಸಾಧನಗಳನ್ನೂ ಸೃಷ್ಟಿಸಿದ, ಆದರೂ ಕಣ್ಣಿಗೆ ಕಾಣದ, ಎಂದರೆ 'ಅದೃಷ್ಟ' ವಾದ ಆ ಪರತತ್ವವನ್ನು ಅರಿಲಾಗದೆ ಸಂಪೂರ್ಣ 'ಭ್ರಮೆ' ಯಲ್ಲಿದ್ದಾನೆ.

ಈ ಭ್ರಮೆಯಿಂದ ಇವನು ಹೊರಬಂದು, ಆ ಪರತತ್ವದ ಅಸ್ತಿತ್ವವನ್ನು ಮತ್ತು ಅದರ ಮಹಿಮೆಯನ್ನು ಎಂದು ಅರಿಯುತ್ತಾನೋ ಮತ್ತು ಅಶಾಶ್ವತವಾದ, ಆದರೂ ಸತ್ಯವೆಂದು ಒಂದು ರೀತಿಯ ಭ್ರಮೆಯನ್ನು ಸೃಷ್ಟಿಸುವ ಈ ಜಗತ್ತಿನ ಇವನ ಸುಖಸಾಧನಗಳಿಗೆ ಅಂಟಿಕೊಳ್ಳದೆ, ಇಲ್ಲಿನ ಜೀವನದಲ್ಲಿ ಇವೆರೆಡರ ಪಾತ್ರವನ್ನು ಸರಿಯಾಗಿ ಅರಿತುಕೊಂಡು, ಇವೆರಡರ ನಡುವೆ ಒಂದು ಸೂಕ್ತ ಸಮನ್ವಯವನ್ನು ಮಾಡಿಕೊಂಡರೆ, ಆಗ ಮಾನ್ಯ ಗುಂಡಪ್ಪನವರು 'ಸ್ವಸ್ತಿ ಲೋಕಕ್ಕೆಲ್ಲ' ಎಂದು ಹೇಳುವಂತೆ, ಈ ಜಗತ್ತಿನಲ್ಲಿ ನಿಜವಾದ ಸುಖ ಶಾಂತಿ ಮತ್ತು ಆನಂದಗಳು ನೆಲೆಗೊಳ್ಳುತ್ತವೆ. ಪ್ರತಿಯೊಬ್ಬರೂ ಅಂತಹ ಸಮಭಾವಕ್ಕೆ ಮತ್ತು ಸಮನ್ವಯಕ್ಕೆ ಪ್ರಯತ್ನಿಸಬೇಕು.

**ಮುಕ್ತಕ-885**

**ಜಾನಪದ ಶಿಷ್ಟಿಯಲಿ, ಸಂಪತ್ಸಮಷ್ಟಿಯಲಿ ।**

**ಜ್ಞಾನಸಂಧಾನದಲಿ, ಮೌಲ್ಯ ಗಣನೆಯಲಿ ॥**

**ಮಾನವತೆ ಮಾನುಷ್ಯ ಧಾರ್ಮಿಕತೆಯೆದ್ದು ನಿಲೆ ।**

**ಆನಂದ ಧರೆಗಂದು - ಮಂಕುತಿಮ್ಮ ॥**

ಸಂಪತ್ಸಮಷ್ಟಿಯಲಿ=ಸಂಪತ್+ಸಮಷ್ಟಿಯಲಿ,ಧಾರ್ಮಿಕತೆಯೆದ್ದು=ಧಾರ್ಮಿಕತೆಯು+ಎದ್ದು,ಧರೆಗಂದು=ಧರೆಗೆ ಅಂದು.
ಶಿಷ್ಟಿ=ಶಿಸ್ತು.

ಜನಪದದಲ್ಲಿ ಶಿಸ್ತನ್ನು ಪಾಲಿಸುವುದರಲ್ಲಿ, ಸಮುಷ್ಟಿಯ ಸಂಪತ್ತನ್ನು ಅನುಭವಿಸುವುದರಲ್ಲಿ, ಜ್ಞಾನದ ಅನುಸಂಧಾನದಲಿ, ಮೌಲಗಳ ಲೆಕ್ಕಾಚಾರದಲ್ಲಿ, ಮಾನವತೆಯೇ ಧರ್ಮವಾಗಿ, ಈ ಭುವಿಯಲ್ಲಿ ಸ್ಥಿರವಾಗಿ ಬೇರೂರಿದಾಗ, ಈ ಭುವಿಗೆ ಅಂದೇ ಆನಂದದ ದಿನ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಸಜ್ಜನರು ಸರ್ವದಾ ಒಳ್ಳೆಯದನ್ನೇ ಆಲೋಚಿಸುತ್ತಾರೆ ಎನ್ನುವುದಕ್ಕೆ ಈ ಮುಕ್ತಕ ಒಂದು ನಿದರ್ಶನ. ಜನರ ನಡುವೆ ಪರಸ್ಪರ ಶಿಸ್ತು ಮತ್ತು ಸಂಯಮಗಳ ಪಾಲನೆಯಿಂದ, ಒಬ್ಬರು ಮತ್ತೊಬ್ಬರ ಕುರಿತು ದೂರುವುದಾಗಲೀ, ಬೇಸರಿಸುವುದಾಗಲೀ ಅಥವಾ ಕೋಪಗೊಳ್ಳುವುದಾಗಲೀ ಇರುವುದಿಲ್ಲ, ಅಲ್ಲವೇ ? ಆಗ ಒಬ್ಬರು ಮತ್ತೊಬ್ಬರ ಕಷ್ಟಗಳನ್ನು ಹಂಚಿಕೊಳ್ಳುತ್ತಾ ಮತ್ತು ತಾವು ಪಡೆದ ಸುಖವನ್ನು ಬೇರೆಯವರಿಗೂ ಹಂಚುವ ಸ್ಥಿತಿಯನ್ನು ಕಾಣಬಹುದು. ಅದು ಜಗತ್ತಿಗೆ ಆನಂದದ ಸ್ಥಿತಿ.

ಜಗತ್ತಿನ ಸಂಪತ್ತೆಲ್ಲವೂ ಎಲ್ಲರ ಅನುಭವಕ್ಕಾಗಿ ಇರುವುದು, ಎಲ್ಲರಿಗೂ ಅದನ್ನು ಅನುಭವಿಸುವ ಸಮಾನ ಅವಕಾಶವಿದೆ, ಎನ್ನುವ ಭಾವ ಬಂದರೆ, ಸ್ವಾರ್ಥ ಕಡಿಮೆಯಾಗಿ, ಜಗಳ, ವ್ಯಾಜ್ಯ, ಕೋರ್ಟು, ಕಚೇರಿ ಮುಂತಾದವುಗಳು ಇಲ್ಲದೆ, ಮನುಷ್ಯರ ಸಹಬಾಳ್ವೆಗೆ ಪೂರಕವಾದ ಸೌಹಾರ್ಧತೆ ನೆಲೆಯೂರುವುದು. ಅದೇ ರೀತಿ 'ಪರಮಾತ್ಮ'ನಿಂದ ಸಂದ ಜ್ಞಾನ ಭಂಡಾರವು ಸಕಲರ ಸ್ವತ್ತು, ಇದನ್ನು ಪಡೆದುಕೊಳ್ಳಲಿಕ್ಕೆ, ಆಸೆ, ಆಸ್ಥೆ ಮತ್ತು ಶ್ರದ್ಧಾಪೂರ್ವಕವಾದ ಪ್ರಯತ್ನವಿದ್ದರೆ ಸಾಕು, ಎನ್ನುವ ಭಾವ ನಮ್ಮಲ್ಲಿ ಇದ್ದರೆ, ಆಗ ಜಾತಿ, ಧರ್ಮ, ಕುಲ, ಮತ ಮುಂತಾದವುಗಳ ಆಧಾರದಮೇಲೆ ಉಂಟಾಗಿರುವ ಸಾಮಾಜಿಕ ಬೇಧಭಾವಗಳು ನಶಿಸುವ ಸಾಧ್ಯತೆ ಇರುತ್ತದೆ . ಸಾಮಾಜಿಕ ಜೀವನಕ್ಕೆ ಉನ್ನತ ಮೌಲ್ಯಗಳಿದ್ದರೆ ಸಾಕು ಮತ್ತು ಆ ಮೌಲ್ಯಗಳ ಆಧಾರದ ಮೇಲೆಯೇ ಎಲ್ಲರ ಬದುಕು

ಆಧಾರಪಟ್ಟಿರಬೇಕು ಎನ್ನುವಂತಹ ವಿಚಾರ ಗಟ್ಟಿಯಾದರೆ ನಮ್ಮ ಜೀವನ ಎಷ್ಟೊಂದು ಸುಂದರವಾಗಿ ಸರಾಗವಾಗಿ ನಡೆಯುತ್ತದೆ ಅಲ್ಲವೇ?





ಹೀಗೆ ಮೇಲೆ ಹೇಳಿದ ಎಲ್ಲ ವಿಚಾರಗಳೂ ಸಾಕಾರವಾಗಬೇಕಾದರೆ, ಮಾನವರಲ್ಲಿ ಮೂಲತಃ "ಮಾನವೀಯತೆಯ ಧರ್ಮ' ನೆಲೆಯೂರಬೇಕು. ಮಾನವರು, ಭಾಷೆ, ಧರ್ಮ, ಕುಲ, ವರ್ಣ ಮತ್ತು ಬಣ್ಣದ ಆಧಾರದಮೇಲೆ ಗುಂಪು ಗುಂಪುಗಳಾಗಿ ಪರಸ್ಪರ ಕಾದಾಡದೆ, ಬದುಕುವುದೇ ಮಾನವೀಯತೆ. ಜಗತ್ತಿನ ಪ್ರತೀ ವಸ್ತುವಿಗೂ, ಅದರದೇ ಆದಂತಹ ಒಂದು ಧರ್ಮ(ಧರ್ಮವೆಂದರೆ ಮೂಲ ಸ್ವಭಾವ)ವಿರುವ ಹಾಗೆ, ಮನುಷ್ಯನಿಗಿರುವುದು ಒಂದೇ ಧರ್ಮ, ಅದೇ 'ಮಾನವೀಯತೆ' ಅಂತಹ ಮಾನವೀಯತೆಯೇ ಎಲ್ಲರ ಧರ್ಮವೂ ಆಗಿಬಿಟ್ಟರೆ, ಅಂದೇ ಈ ಜಗತ್ತಿಗೆ 'ಹಬ್ಬದ ದಿನ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಅಂತಹ ದಿನ ಬರುವುದು ಎಂದೋ, ನಮಗಾರಿಗೂ ಊಹಿಸಲೂ ಸಾಧ್ಯವಿಲ್ಲ. ಆದರೂ ಅಂತಹ ಒಂದು ದಿನ ಬಂದೀತೆಂದು, ಆಶಾಭಾವನೆಯನ್ನು ನಾವು ಇಟ್ಟುಕೊಳ್ಳಬಹುದಲ್ಲವೇ?

**ಮುಕ್ತಕ – 886**

**ಅಶ್ವತ್ಥವಿಲ್ಲಿ ಬಾಡಿದೊಡೇನು? ಚಿಗುರಲ್ಲಿ, |**

**ನಶ್ವರತೆ ವಿಟಪ ಪರ್ಣಂಗಳಲ್ಲಿ ಮಾತ್ರ ||**

**ಶಾಶ್ವತತೆ ರುಂಡಮೂಲದಲಿ, ಪರಿಚರಿಸದನು !**

**ವಿಶ್ವಪ್ರಗತಿಯಂತು - ಮಂಕುತಿಮ್ಮ ||**

ಅಶ್ವತ್ಥವಿಲ್ಲಿ=ಅಶ್ವತ್ಥವು+ಇಲ್ಲಿ, ಬಾಡಿದೊಡೇನು=ಬಾಡಿದೊಡೆ+ಏನು, ಚಿಗುರಲ್ಲಿ=ಚಿಗುರು+ಅಲ್ಲಿ, ಪರಿಚರಿಸದನು=ಪರಿಚರಿಸು+ಅದನು, ವಿಶ್ವಪ್ರಗತಿಯಂತು=ವಿಶ್ವ+ಪ್ರಗತಿಯು+ಅಂತು

ನಶ್ವರತೆ=ಅಶಾಶ್ವತೆ, ವಿಟಪ=ಕೊಂಬೆ, ಪರ್ಣ=ಎಲೆ, ಪರಿಚರಿಸು=ಪೋಷಿಸು, ರುಂಡಮೂಲದಲಿ ಕಾಂಡ ಮತ್ತು ಬೇರಿನಲ್ಲಿ

ಅಶ್ವತ್ಥ ವೃಕ್ಷವು, ಒಂದುಕಡೆ ಬಾಡಿದರೆ ಮತ್ತೊಂದು ಕಡೆ ಚಿಗುರುವುದು. ಹಾಗೆ ಬಾಡುವುದು, ಕೇವಲ ಕೊಂಬೆಗಳು ಮತ್ತು ಅದರ ಎಲೆಗಳು ಮಾತ್ರ, ಆದರೆ, ಅದರ ಕಾಂಡ ಮತ್ತು ಬೇರುಗಳು ಶಾಶ್ವತವಾಗಿರುತ್ತವೆ. ಹಾಗಾಗಿ ಅದನ್ನು ಉಪಚರಿಸಿದರೆ, ಆ ಮರವು ಹೇಗೆ ಶಾಶ್ವತವಾಗಿರುವುದೋ, ಹಾಗೆಯೇ ಒಂದು ಕಡೆ ಹಳತಾಗಿ ನಾಶವಾಗುತ್ತಿದ್ದರೆ, ಮತ್ತೊಂದು ಕಡೆ ಬೆಳೆಯುತ್ತಿರುವ ಈ ಜಗದ್ವೃಕ್ಷವನ್ನೂ, ಉಪಚರಿಸಿದರೆ, ಈ ವಿಶ್ವದ ಪ್ರಗತಿಯೂ ಸಹ ಇರುತ್ತದೆ ಎಂದು ಜಗತ್ತಿನ ಜೀವನದ ಮತ್ತು ಅದರ ಪ್ರಗತಿಯ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು.

"ಒಚಿದು ಕಡೆ ಚಿಗುರುತಲಿ, ಒಂದು ಕಡೆ ಬಾಡುತಲಿ........ ಎಂದೆಂದುಮಶ್ವತ್ಥ' (ಮುಕ್ತಕ 562) ಮತ್ತು ನಾವದರ ಕಡ್ಡಿಯೆಲೆ, ಚಿಗುರುವೆವು, ಬಾಡುವೆವು ಸಾವು ಮರಕೇನಿಲ್ಲ" (ಮುಕ್ತಕ 561) ಎಂದು ಹೇಳುತ್ತಾ ಮಾನ್ಯ ಗುಂಡಪ್ಪನವರು, ಈ ಜಗತ್ತನ್ನು ಮತ್ತು ಇಲ್ಲಿನ ಬದುಕಿನ ಪ್ರಗತಿಯನ್ನು, ಅಶ್ವತ್ಥ ವೃಕ್ಷಕ್ಕೆ ಹೋಲಿಸಿದ್ದಾರೆ. ಆ ಮರದಲ್ಲಿ ಒಂದು ಕಡೆ ಕೆಲವು ಕೊಂಬೆಗಳು ಒಣಗಿ ಅದರಲ್ಲಿನ ಎಲೆಗಳು ಬಾಡಿದರೆ, ಮತ್ತೊಂದು ಕಡೆ ಹೊಸ

ಚಿಗುರನ್ನು ತಳೆದು, ಆ ಮರದ ಸೊಬಗನ್ನು ಸದಾ ಕಾಪಾಡುತ್ತದೆ. ಆದರೆ, ಅದರ ಕಾಂಡ ಮತ್ತು ಬೇರುಗಳು ಶಾಶ್ವತವಾಗಿ ಆ ಮರಕ್ಕೆ ಆಧಾರವಾಗಿ ದೃಢವಾಗಿ ನಿಂತಿರುತ್ತದೆ, ಅಲ್ಲವೇ? ಇದೇ ರೀತಿ ಈ ಜಗತ್ತೂ ಸಹ. ಎಂದು ಶುರುವಾಯಿತೋ ನಮಗೆ ಗೊತ್ತಿಲ್ಲ. ಆದರೆ ಅಂದಿನಿಂದ ಇಂದಿನವರೆಗೂ,ಪ್ರತಿ ನಿತ್ಯ ಹೊಸತನವನ್ನು ತೋರುತ್ತಿದ್ದರೂ ತನ್ನ ಮೂಲಸ್ವರೂಪವನ್ನು ದೃಢವಾಗಿ ಕಾಪಾಡಿಕೊಂಡಿದೆ.

ಹುಟ್ಟು-ಸಾವುಗಳ ನಿರಂತರ ಚಕ್ರ, ಹೊಸ ಹೊಸಬರು ಬರಬೇಕು, ಬೆಳೆಯಬೇಕು, ಇಳೆಯ ಬದುಕಿನಲ್ಲಿ ತಮ್ಮ ಪಾತ್ರವಹಿಸಬೇಕು, ಏನ್ನನ್ನಾದರೂ ಕೊಟ್ಟು ಮತ್ತು ಪಡೆದು, ಕಾಲ ಬಂದಾಗ ಇಲ್ಲಿಂದ ನಿರ್ಗಮಿಸುತ್ತಾ, ಹೊಸಬರಿಗೆ ತಾವು ಮಾಡಿಕೊಡಬೇಕು. ಇದೆಲ್ಲವೂ ಆನಾದಿ-ಅನಂತವಾದ ಈ ಜಗದ್ವೃಕ್ಷದಲ್ಲೇ ನಡೆಯಬೇಕು. ಬಂದವರೆಲ್ಲಾ ತಮ್ಮ ಕೊಡುಗೆಯನ್ನು ಕೊಟ್ಟು ಹೋಗುವುದರಿಂದ, ಈ ಜಗತ್ತಿನಲ್ಲಿ ನಿರಂತರ ಪ್ರಗತಿ. ಆ ಪ್ರಗತಿಗೆ ಆಧಾರವಾದದ್ದು ತನ್ನ ಮೂಲಸ್ವರೂಪವನ್ನು ಎಂದೂ ಬದಲಾಯಿಸದ, ಮತ್ತು ಮೇಯಲ್ಲಿ ಹೊಸತನವನ್ನು ತೋರುವ ಇಲ್ಲಿನ ಮೂಲಭೂತ ಮೌಲ್ಯಗಳಾದ ಸತ್ಯ, ಧರ್ಮ, ಜ್ಞಾನ, ವಿಜ್ಞಾನ, ಮಾನವೀಯತೆ, ಸಂಸ್ಕೃತಿ, ಸಂಸ್ಕಾರ, ಸಾಹಿತ್ಯ, ಕಲೆ ಮುಂತಾದವುಗಳು.

ಸಂಗೀತದ ಪ್ರಕಾರಗಳು ನಿರಂತರವಾಗಿ ಬದಲಾಗುತ್ತಾ ಇದ್ದರೂ, ಸಂಗೀತಕ್ಕೆ ಆಧಾರವಾದ 'ಸಪ್ತಸ್ವರಗಳು' ಎಂದೂ ಬದಲಾಗದಂತೆ ಇರುತ್ತದೆ ಅಲ್ಲವೇ? ಅದೇ ರೀತಿ ಜಗತ್ತಿನಲ್ಲಿ ಹೊಸ ಹೊಸ ಜನರು ಬರುತ್ತಿರಬೇಕು, ಹಳಬರು ಇಲ್ಲಿಂದ ಹೊರಡುತ್ತಲೇ ಇರಬೇಕು, ಬಂದವರು ಈ ಜಗತ್ತಿನ ಸುಖಸಾಧನಗಳನ್ನು ಅಭಿವೃದ್ಧಿಪಡಿಸಲು ನಿರಂತರ ಕೃಷಿ ಮಾಡುತ್ತಲೇ ಇರಬೇಕು ಮತ್ತು ಅವರ ಕೃಷಿಯಿಂದ ಜಗತ್ತಿನ ಪ್ರಗತಿಯಾಗುತ್ತಲೇ ಇರಬೇಕು. ಇದು ಜಗತ್ತಿನ ನಿಯಮ. ಈ ನಿಯಮವನ್ನು ವಿಧಿಸಿರುವ ಸೃಷ್ಟಿಕರ್ತ, ತಾನು ವಿಧಿಸಿದ ನಿಯಮಪಾಲನೆಗೆ ಬೇಕಾದ ಎಲ್ಲಾ ಕ್ರಮವನ್ನೂ ತೆಗೆದುಕೊಂಡಿದ್ದಾನೆ. ಅದನ್ನು ಪಾಲಿಸದವರಿಗೆ ಶಿಕ್ಷೆಯನ್ನೂ ನೀಡುತ್ತಾನೆ. ಮಾನ್ಯ ಗುಂಡಪ್ಪನವರು 'ಪರಿಚರಿಸದನು' ಎಂದು ಹೇಳುವಂತೆ, ನಾವು ಇಲ್ಲಿರುವಾಗ ಆ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಿದರೆ, ನಮ್ಮ ಪಾತ್ರವನ್ನು ಚೊಕ್ಕವಾಗಿ ನಿರ್ವಹಿಸಿದರೆ, ಜಗತ್ತಿನ ಪ್ರಗತಿಯಲ್ಲಿ ನಮ್ಮ ಪಾತ್ರವನ್ನು ಸೂಕ್ತವಾಗಿ ನಿರ್ವಹಿಸಿದ ತೃಪ್ತಿ ಮತ್ತು ಸಂತೋಷಗಳು ನಮ್ಮದಾಗುತ್ತದೆ, ಅಲ್ಲವೇ?

**ಮುಕ್ತಕ – 887**

**ಪರಿಪೂರ್ಣಸುಖವನೆಳಸುವನು ತನ್ನೊಳಗಡೆಗೆ |**

**ತಿರುಗಿಸಲಿ ತನ್ನ ದೃಷ್ಟಿಯನು ನಿರ್ಮಲದಿಂ ||**

**ನಿರತಿಶಯ ಸುಖವಲ್ಲಿ, ವಿಶ್ವಾತ್ಮವೀಕ್ಷೆಯಲಿ |**

**ಪರಸತ್ವಶಾಂತಿಯಲಿ – ಮಂಕುತಿಮ್ಮ ||**

ಪರಿಪೂರ್ಣಸುಖವನೆಳಸುವನು=ಪರಿಪೂರ್ಣ+ಸುಖವನು+ಎಳಸುವನು, ತನ್ನೊಳಗಡೆಗೆ= ತನ್ನ+ಒಳಗಡೆಗೆ ಎಳಸುವನು=ಅರಸುವವನು-ಹುಡುಕುವವನು, ನಿರ್ಮಲದಿಂ=ಕಲ ರಹಿತವಾಗಿ, ನಿರತಿಶಯ=ಅಲೌಕಿಕ,

ಪರಿಪೂರ್ಣ ಸುಖವನ್ನು ಅರಸುವವನು ಮನಸ್ಸಿನಲ್ಲಿ ಕಶಲರಹಿತನಾಗಿ, ಅಂತರ್ಮುಖಿಯಾದಾಗ ಅವನಿಗೆ ಅಲ್ಲಿ, ವಿಶ್ವಾತ್ಮಭಾವದಿಂದ, ಬೇಧಗಳು ನಶಿಸಿ, ಪರತತ್ವದ ಶಾಂತಿಯಲ್ಲಿ, ಅಲೌಕಿಕ ಆನಂದದ ಅನುಭವವಾಗುತ್ತದೆ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಪರಿಪೂರ್ಣ ಸುಖ'ವೆಂದರೆ ಏನು? ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಹರಿದಾಡುವ ಮನಸ್ಸು ನಮ್ಮದು. ಯಾವುದು ನಿಜವಾದ ಸುಖ ಅಥವಾ ಆನಂದವೆಂದು ಅರಿಯುವುದೇ ದೊಡ್ಡ ಸಾಧನೆ. ಆ ಸಾದನೆಯ ಸ್ವರೂಪವನ್ನು ತಿಳಿಸುತ್ತಾ, ಮೊದಲು ಮನಸ್ಸು ಸ್ಥಿರವಾಗಬೇಕು, ನಂತರ ಆ ಮನದಲ್ಲಿರುವ ಎಲ್ಲಾ ಹೊಲಸನ್ನೂ ಗುಡಿಸಿ ದೂರ ಬಿಸಾಕಬೇಕು, ಬಹಿರಂಗಾಭಿಮುಖವಾದ ಮನಸ್ಸನ್ನು ಅಂತರಂಗದ ಕಡೆಗೆ ತಿರುಗಿಸಬೇಕು, ಅಲ್ಲಿ ದೃಢವಾಗಿ ನಿಲ್ಲಬೇಕು. ಹಾಗೆ ನಿಂತ ಮನಸ್ಸು, ಹೃದಯದ ಮಧ್ಯದಲ್ಲಿ 'ವಿಧ್ಯುಲ್ಲೇಖೇವ ಭಾಸ್ವರಾ' (ಮಹಾನಾರಾಯಣ-ನಾರಾಯಣ ಸೂಕ್ತ) ಎಂದರೆ 'ಮಿಂಚಗೆರೆ' ಯನ್ನು ಕಾಣಬೇಕು ಅದನ್ನೇ ನೋಡುತ್ತಾ ಇಡೀ ಜಗತ್ತಿನಲ್ಲಿರುವುದು ಒಂದೇ ಚೇತನ, ಅದು ಕೋಟಿ ಕೋಟಿ ರೂಪಗಳನ್ನು ಧರಿಸಿದೆ ಎಂದು, ವಿಶ್ವಾತ್ಮಭಾವವನ್ನು ಧಾರಣೆ ಮಾಡಿ, ಆ ಸ್ಥಿತಿಯಲ್ಲಿ ದೃಢವಾಗಿ ನಿಂತರೆ, ನಿಜವಾದ ಆನಂದ ಖಂಡಿತ ಸಿಗುತ್ತದೆ. ಅಂತಹ ಆನಂದದ ಸ್ಥಿತಿಯಲ್ಲಿ ಅಹಂಕಾರವಳಿದು, ಎಲ್ಲರಲ್ಲೂ ತನ್ನನ್ನು ಮತ್ತು ತನ್ನಲ್ಲಿ ಎಲ್ಲರನ್ನೂ ಕಾಣುವಂತಾಗುತ್ತದೆ. ಅದೇ ಲೋಕಾತ್ಮ ಅಥವಾ ವಿಶ್ವಾತ್ಮ ಭಾವ.

ಕಣ್ಣನ್ನು ತೆರೆದು ನೋಡಿದರೆ ಕಾಣುವುದು ಈ ಜಗತ್ತು. ಈ ಜಗತ್ತಿನಲ್ಲಿ ಸಾವಿರಾರು ರೂಪಗಳಿಂದ ಕೂಡಿದ ಭೇಧವಿದೆ. ಕಣ್ಣು ಮುಚ್ಚಿದರೆ ರೂಪಗಳ ಭೇಧ ಕರಗುತ್ತದೆ. ಮನಸ್ಸು ಇನ್ನೂ ಅದನ್ನು ನೋಡುತ್ತಿದ್ದರೆ, ಭೇಧವಳಿಯದೆ ಶಾಂತವಾಗುವುದಿಲ್ಲ. ಮನಸ್ಸು ಶಾಂತವಾಗಬೇಕಾದರೆ ಮನಸ್ಸು ಬಾಹ್ಯವನ್ನು ತೊರೆದು ಅಂತರಂಗಕ್ಕೆ ಬಂದು ಸ್ಥಿರವಾಗಿ ನಿಲ್ಲಬೇಕು. ಹಾಗೆ ನಿಂತಾಗ, ವಿಶ್ವಾತ್ಮಭಾವವುಂಟಾಗಿ ಅರಿಷಡ್ವರ್ಗಗಳ ಸೋಂಕಿಲ್ಲದೆ, ಭೇಧಗಳೆಲ್ಲಾ ನಶಿಸಿ ಮನಸ್ಸು ಶಾಂತವಾಗುತ್ತದೆ. ಭಗವದ್ಗೀತೆಯಲ್ಲಿ ( ಅಧ್ಯಾಯ -12 ಶ್ಲೋಕ -8) ಭಗವಾನ್ ಶ್ರೀ ಕೃಷ್ಣ "ಮಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ನಿವಸಿಷ್ಯಸಿ ಮಯ್ಯೇವ ಅತ





"ಊರ್ಧ್ವಂ ನ ಸಂಶಯ" ಎನ್ನುತ್ತಾನೆ. ಜಗತ್ತನ್ನು ಬಿಟ್ಟು ಜಗತ್ಕಾರಕನಲ್ಲಿ ಮನವನಿಟ್ಟರೆ, ದೇಹ ಶಾಂತವಾಗಿ, ಮನಸ್ಸು ತನ್ನ ಅಲೆದಾಟವನ್ನು ನಿಲ್ಲಿಸಿ, ಬುದ್ಧಿ ಅವನಲ್ಲಿ ಸ್ಥಿರಗೊಂಡಾಗ ದಶೇಂದ್ರಿಯಗಳ ಕೆಲಸ ನಿಂತು, ದೇಹ ಮನಸ್ಸು ಬುದ್ಧಿಗಳು ಶಾಂತವಾಗಿ 'ಆತ್ಮ'ದಲ್ಲಿ ನೆಲೆನಿಂತಾಗ' ಆನಂದ ನಮ್ಮದಾಗುತ್ತದೆ.

ಮನಸ್ಸು ಬುದ್ಧಿ ದೇಹಗಳು ಆತ್ಮನ ಸೇವಕರು. ಆತ್ಮ ತನ್ನ ಗಮ್ಯವನ್ನು ಸೇರಲು ಬೇಕಾದ ಮಾರ್ಗವನ್ನು ಸುಗಮವಾಗಿಸುವ ಸೇವಕರು. ಅವರು ಎಲ್ಲಿಯತನಕ 'ಅಹಂಕಾರ'ವನ್ನು ತಣಿಸಲು ದುಡಿಯುವರೋ ಅಲ್ಲಿಯ ತನಕ ಆತ್ಮ ಸೊರಗಿಯೇ ಇರುತ್ತದೆ. ನಮ್ಮಲ್ಲಿ ಅಹಂಕಾರ ನಶಿಸಿದರೆ, ಈ ಮೂವರೂ ಸೇವಕರು 'ಆತ್ಮ'ನ ಸೇವೆಯಲ್ಲಿದ್ದರೆ, ಆತ್ಮ ತನ್ನ ಗಮ್ಯವಾದ ವಿಶ್ವಾತ್ಮನಲ್ಲಿ ಸೇರಿ ಆನಂದವನ್ನು ಅನುಭವಿಸುತ್ತದೆ. ಇದನ್ನೇ ಗುಂಡಪ್ಪನವರು ನಿರತಿಶಯ ಸುಖ'ವೆಂದರು. ಆದರಿಂದಲೇ ಕೃಷ್ಣ ಅತ ಊರ್ಧ್ವಂ ನ ಸಂಶಯ' ಎಂದು ಹೇಳಿ ಆತ್ಮ ಔನ್ನತ್ಯಕ್ಕೆ ಖಂಡಿತ ಹೋಗುತ್ತದೆ. ಇದರಲ್ಲಿ ಸಂಶಯವಿಲ್ಲ, ಎನ್ನುತ್ತಾನೆ. ನಾವೂ ಸಹ ಅಂತರ್ಮುಖಿಗಳಾಗಿ, ಶಾಂತರಾಗಿ ಏಕಾತ್ಮಭಾವದಲ್ಲಿ ನಿಂತು 'ನಿಜಾನಂದ'ವನ್ನು ಅನುಭವಿಸಲಾದರೆ, ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – 888**

**ವ್ಯಕ್ತಿಮಾತ್ರದ ವಿಭವ ವಿಶ್ವಾತ್ಮಾನುಭವ |**

**ಮುಕ್ತಿ ಸುಖವಾಂತರಿಕವದು ನಿರವಧಿಸುಖ ||**

**ಭಾಕ್ತ ಪ್ರಪಂಚಸುಖವೆಂತಪರಿಮಿತವಹುದು |**

**ರಿಕ್ತಸುಖ ಬಾಹ್ಯಸುಖ - ಮಂಕುತಿಮ್ಮ ||**

ಸುಖವಾಂತರಿಕದು-ಸುಖವು+ಆಂತರಿಕದು,

ಪ್ರಪಂಚಸುಖವೆಂತಪರಿಮಿತವಹುದು-ಪ್ರಪಂಚ+ಸುಖವು+ಎಂತು+ಅಪರಿಮಿತವು+ಅಹುದು

ನಿರವಧಿಸುಖ=ನಿರಂತರ ಸುಖ, ಭಾಕ್ತ=ಆಧಾರಿತ, ಆಶ್ರಿತ (dependent), ರಿಕ್ತಸುಖ=ಕೀಳುಮಟ್ಟದ್ದು.

ವಿಶ್ವಾತ್ಮಾನುಭವ ಎನ್ನುವುದು ವ್ಯಕ್ತಿಗತವಾದ ಅನುಭವ. ನಿರಂತರವಾದ ಆ ಆನಂದದ ಸ್ಥಿತಿ, ಕೇವಲ ಆಂತರಿಕ ಭಾವ. ಈ ಸ್ಥಿತಿ ಮುಕ್ತ ಸ್ಥಿತಿ. ಆದರೆ ಬಾಹ್ಯ ಪ್ರಪಂಚದ ವಿಷಯಗಳ ಮೇಲೆ ಅಧಾರಪಟ್ಟಿರುವ ಸುಖ, ಅಪರಿಮಿತ ಸುಖವಾಗಲು ಹೇಗೆ ಸಾಧ್ಯ? ಹಾಗೆ ಬಾಹ್ಯ ವಸ್ತು, ವಿಷಯ ಮತ್ತು ವ್ಯಕ್ತಿಗಳ ಮೇಲೆ ಆಧಾರಪಟ್ಟಿರುವ ಸುಖ ಕೇವಲ ತಾತ್ಕಾಲಿಕ ಮತ್ತು ಕೀಳುಮಟ್ಟದ ಸುಖ, ಎಂದು ಅಂತರಂಗದ ಅನುಭವದ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪರತತ್ವವನ್ನು ಅನುಸಂಧಾನ ಮಾಡಲು ಮನಸ್ಸು ಮತ್ತು ಬುದ್ಧಿಗಳನ್ನು ಅಂತರ್ಮುಖಿಯಾಗಿಸಿದರೆ, ಬಾಹ್ಯ

ಸಂಪರ್ಕ ಕಡಿದು, ಸ್ವತಂತ್ರವಾಗುತ್ತದೆ. ಮನಸ್ಸನ್ನು ಏಕಾಗ್ರಗೊಳಿಸಿ, ಜಗತ್ತಿಗೆ ಸಂಬಂಧಿಸಿದ ನಮ್ಮ ಬುದ್ಧಿವಂತಿಕೆಯನ್ನು ಬದಿಗಿರಿಸಿದರೆ, ಆಗ ಸಿಗುವುದು, ಸಕಲ ಬಂಧನಗಳಿಂದ ಮುಕ್ತವಾದ ಮತ್ತು ನಿರಂತರವಾದ ಸುಖ ಮತ್ತು ಆನಂದ. ಇದು ಪ್ರತೀ ವ್ಯಕ್ತಿಯೂ ತನ್ನ ಪ್ರಯತ್ನದಿಂದ ತನ್ನ ಅನುಭವವನ್ನು ತನ್ನದೇ ಅಂತರಂಗದಲ್ಲಿ ಪಡೆಯುವ ಅನುಭವ. ಮತ್ತೊಬ್ಬರ ಅನುಭವವನ್ನು ಯಾರೂ ನಕಲು ಮಾಡಲಾಗದು ಮತ್ತು ಮತ್ತೊಬ್ಬರ ಅನುಭವ ನಮ್ಮದಾಗದು.

ಜಗತ್ತಿನ ವಸ್ತು, ವಿಷಯ ಮತ್ತು ವ್ಯಕ್ತಿಗಳಿಂದ ಸಿಗುವ ಅನುಭವ 'ಪರಾವಲಂಬಿ' ಅನುಭವ. ಆ ವಸ್ತು, ವ್ಯಕ್ತಿ ಮತ್ತು ವಿಷಯಗಳ ಸಂಸರ್ಗದಲ್ಲಿದ್ದರೆ ಮಾತ್ರ ದೊರೆಯುವ ಸುಖದ ಅನುಭವ. ಅವುಗಳು ತಮ್ಮ ರೂಪವನ್ನು ಬದಲಾಯಿಸುತ್ತಿರುತ್ತವೆ. ಆದ್ದರಿಂದ, ಅದರಿಂದ ಸಿಗುವ ಸುಖದ ಅನುಭವವೂ ಬದಲಾಗುತ್ತಿರುತ್ತದೆ. ಕೆಲವೇಳೆ ಅದು ನಮ್ಮ ದುಃಖಕ್ಕೂ ಕಾರಣವಾಗಬಹುದು. ಹಾಗಾಗಿ ಬಾಹ್ಯ ವಸ್ತುಗಳಿಂದ ಸಿಗುವ ಸುಖ ಉತ್ತಮವಾಗಿಯೂ, ನಿರಂತರವಾಗಿಯೂ ಇರಲು ಸಾಧ್ಯವಿಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಹಾಗಾಗಿ ನಮಗೆ, ಶುದ್ಧವಾದ, ಉತ್ತಮವಾದ ಮತ್ತು ಶಾಶ್ವತವಾದ ಸುಖ ಬೇಕಾದರೆ ಬಾಹ್ಯ ಪ್ರಪಂಚದೊಂದಿಗೆ ನಮಗಿರುವ ಅಂಟನ್ನು ತೊಳೆದು, ತೊಡೆದು, ನಿವಾರಿಸಿಕೊಂಡರೆ, ನಾವು ಅಂತರ್ಮುಖಿಗಳಾಗಿ, ಪರಿಶುದ್ಧ, ಅತ್ಯುತ್ತಮ ಮತ್ತು ನಿರಂತರವಾದ ಆನಂದದ ಸ್ಥಿತಿಯಲ್ಲಿ 'ವಿಶ್ವಾತ್ಮಾನುಭವ' ಮತ್ತು ತನ್ಮೂಲಕ 'ಪರಮಾತ್ಮಾನುಭವ'ವನ್ನು ಪಡೆಯಬಹುದು. ಇದೊಂದು ಪ್ರಕ್ರಿಯೆ. ಕೆಳಮಟ್ಟದ ಮತ್ತು ಅಶಾಶ್ವತವಾದ ಒಂದನ್ನು ಪ್ರಯತ್ನಪೂರ್ವಕವಾಗಿ ಬಿಡಿಸಿಕೊಂಡು, ಉತ್ತಮವಾದ ಮತ್ತು ಶಾಶ್ವತವಾದ ಮತ್ತೊಂದನ್ನು ಪಡೆದುಕೊಳ್ಳುವ ಮತ್ತು ಅದರಿಂದ ಆನಂದವನ್ನು ಪಡೆಯುವ ಪ್ರಕ್ರಿಯೆ. ಸತ್ಪ್ರಯತ್ನದಿಂದ ಎಲ್ಲರೂ ಆ ಸ್ಥಿತಿಯ ಅನುಭವವನ್ನು ಪಡೆಯಬಹುದು.

**ಮುಕ್ತಕ-889**

**ಭ್ರಾಂತಿಯೋ ಸಂಪೂರ್ಣ ಸುಖದಾಶೆ ಬಾಹ್ಯದಲಿ ।**
**ಸಾಂತ ಲೋಕದ ಸೌಖ್ಯ, ಖಂಡಖಂಡವದು ॥**
**ಸ್ವಾಂತಕೃಷಿಯಿಂ ಬ್ರಹ್ಮವೀಕ್ಷೆ ಲಭಿಸಿರ್ದೊಡೇ - ।**
**ಕಾಂತ ಪೂರ್ಣಾನಂದ – ಮಂಕುತಿಮ್ಮ ॥**

ಸುಖದಾಶೆ=ಸುಖದ+ಆಶೆ, ಲಭಿಸಿರ್ದೊಡೇಕಾಂತ=ಲಭಿಸಿ+ಇರ್ದೊಡೆ+ಏಕಾಂತ, ಪೂರ್ಣಾನಂದ=ಪೂರ್ಣ+ಆನಂದ, ಸ್ವಾಂತ=ಸ್ವಂತ, ಕೃಷಿಯಿಂ=ಪ್ರಯತ್ನದಿಂದ, ಖಂಡಖಂಡವದು=ತುಂಡುತುಂಡಾದದ್ದು, ವೀಕ್ಷೆ=ಕಾಣುವುದು,

ಬಾಹ್ಯ ಬದುಕಿನಲ್ಲಿ ನಮಗೆ ಸಂಪೂರ್ಣ ಅಥವಾ ಪರಿಪೂರ್ಣ ಸುಖ ಸಿಗುತ್ತದೆ ಎನ್ನುವುದು 'ಭ್ರಮೆ', ಏಕೆಂದರೆ ಬಾಹ್ಯ ಸುಖಗಳೆಲ್ಲಾ ತುಂಡು ತುಂಡಾದದ್ದು. ಸ್ವಂತ ಪ್ರಯತ್ನದಿಂದ ಪರಬ್ರಹ್ಮವಸ್ತುವನ್ನು ನೋಡಲಾದರೆ ಅದು





ನಮಗೆ ಸಿಗುವ ಪೂರ್ಣಾನಂದ, ಎಂದು ಸಂಪೂರ್ಣ ಆನಂದದ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಈ ಜಗತ್ತನ್ನು ಅನುಭವಿಸುವುದು ನಮ್ಮ ಇಂದ್ರಿಯಗಳ ಮೂಲಕ. ನಮ್ಮ ಇಂದ್ರಿಯಗಳ ಕ್ಷಮತೆಗೆ ಒಂದು ಮಿತಿ ಇದೆ. ಹಾಗಾಗಿ ಅವುಗಳ ಮೂಲಕ ಆಗುವ ನಮ್ಮ ಅನುಭವಕ್ಕೂ ಒಂದು ಮಿತಿ ಇರುತ್ತದೆ. ಅವುಗಳ ಮೂಲಕ ನಮಗೆ ಸಿಗುವ ಸುಖವೂ ಸಹ, ಮಿತ, ತಾತ್ಕಾಲಿಕ ಮತ್ತು ಅಪರಿಪೂರ್ಣ. 'ಈ ದೇಹ, ಮನಸ್ಸು, ಬುದ್ಧಿಗಳು, ಇಂದ್ರಿಯ ಸಂಪರ್ಕವಿಲ್ಲದೆ ಇರಲು ಸಾಧ್ಯವೇ?' ಎಂದರೆ, ಸಾಧ್ಯವೇ ಇಲ್ಲ ಎನ್ನಬಹುದು. ಎಲ್ಲಿಯತನಕ ಈ ಮನಸ್ಸು, ಬುದ್ಧಿ ಮತ್ತು ದೇಹಗಳು ಇಂದ್ರಿಯಗಳ ಮೂಲಕ ಈ ಜಗತ್ತಿಗೆ ಅಂಟಿಕೊಂಡಿರುತ್ತದೆಯೋ ಅಲ್ಲಿಯ ತನಕ ಅದಕ್ಕೆ ಸಿಗುವ ಸುಖವೂ ಸಹ ಮಿತ, ತಾತ್ಕಾಲಿಕ ಮತ್ತು ಅಪರಿಪೂರ್ಣ, ಅಲ್ಲವೇ? ಇದು ಜಗತ್ತಿಗೆ ನಾವು ಅಂಟಿಕೊಂಡಿರುವಂತಹ ಸ್ಥಿತಿ. ಈ ಸ್ಥಿತಿಯಲ್ಲಿ 'ಸಂಪೂರ್ಣ ಅಥವಾ ಪರಿಪೂರ್ಣ ಸುಖ' ಸಾಧ್ಯವೇ ಇಲ್ಲ.

ಇದಕ್ಕೆ ಪರಿಹಾರವೇನೆಂದರೆ, ನಮ್ಮ ಗಮನವನ್ನು ಜಗತ್ತಿನ ವಿಷಯಗಳಿಂದ ಬಿಡಿಸಿಕೊಂಡು, ಅಂತರ್ಮುಖಿಗಳಾಗಿ, ಆತ್ಮನ ಮೂಲಕ ಪರಮಾತ್ಮನೆಡೆಗೆ ತಿರುಗಿಸಬೇಕು. ನಮ್ಮೊಳಗಿರುವ ಚೈತನ್ಯವನ್ನು

ಕಾಣಬೇಕು.ಈ ಜಗತ್ತಿನ ಸಕಲ ಚರಾಚರಗಳಲ್ಲಿರುವುದೇ ಈ ಚೇತನವೆಂದು 'ಜಗದಾತ್ಮ ತತ್ವ'ವನ್ನು ನಂಬಬೇಕು. ಧೃಡ ನಂಬಿಕೆಯಿಂದ ನಮ್ಮ ಪ್ರಯತ್ನ ತೀವ್ರ ಮತ್ತು ಧೃಢವಾಗಿಸಿ, ನಾವು ಅದರಲ್ಲಿ ಸಂಪೂರ್ಣ ಮುಳುಗಿ ಅದನ್ನೇ ವಿಸ್ತರಿಸುತ್ತಾ ಹೋದಾಗ ನಮಗೆ 'ಬ್ರಹ್ಮವೀಕ್ಷೆ ' ಎಂದು ಗುಂಡಪ್ಪನವರು ಹೇಳುವಂತೆ, ಬೃಹತನದ ದರುಶನವಾಗುತ್ತದೆ. ಆ ಸ್ಥಿತಿಯಲ್ಲಿ ನಮಗೆ ಸಿಗುವುದೇ ನಿಜ ಮತ್ತು ಸ್ಥಿರವಾದ ಆನಂದ. ನಾವು ನಮ್ಮದೇ ಹೃದಯದಲ್ಲಿ, ನಮ್ಮ ಪ್ರಯತ್ನದಿಂದಲೇ ಕಂಡುಕೊಂಡಂತಹ ಆನಂದ. ಅನಂತವಾದ ಮತ್ತು ಸ್ವತಂತ್ರವಾದ
ಆನಂದ.

ಅಚಿತಹ ಆನಂದದ ಸ್ಥಿತಿಯನ್ನು, ಕಲ್ಪಿಸಿಕೊಂಡು, ಆ ಸ್ಥಿತಿಗೆ ತಲುಪಲು ಇಚ್ಚೆಪಟ್ಟು, ಅದಕ್ಕೆ ಬೇಕಾದ ಕೃಷಿ, ಎಂದರೆ ಪ್ರಯತ್ನವನ್ನು ಮಾಡಿ, ನಮ್ಮ ಆ ಪ್ರಯತ್ನವು ತೀವ್ರತಮವಾಗಿ ನಡೆದಾಗ, ನಮಗೆ ಸಿಗುವ ಆನಂದ, ಬೇರೆ ಯಾವುದೇ ವಸ್ತು, ವಿಷಯ ಅಥವಾ ವ್ಯಕ್ತಿಗಳ ಮೇಲೆ ಆಧಾರಿತವಲ್ಲದೆ, 'ನಮ್ಮದೇ' ಆಗಿ, ನಮಗೆ ನಿಜವಾದ ಆನಂದವನ್ನು ನೀಡುತ್ತದೆ. ಆದರೆ ಇದು ಪ್ರತಿಯೊಬ್ಬರಿಗೂ ಅವರವರದೇ ಅನುಭವಕ್ಕೆ ಬರಬೇಕಾದ ವಿಷಯ. ಬೇರೆ ಯಾರೂ ಹೇಳಿಕೊಡಲಾಗದ ಅಥವಾ ಅನ್ಯರಿಂದ ಎರವಲಾಗಿ ಪಡೆಯಲಾಗದ ವಿಷಯ. ಅಂತಹ ಆನಂದದ ಅನುಭವವನ್ನು ಪಡೆಯಬೇಕಾದರೆ, ನಾವು ನಮ್ಮ ಪ್ರಯತ್ನ ಪಡಬೇಕು. ನಾವೂ ಸಹ ಅಂತಹ ಪ್ರಯತ್ನವನ್ನು ಮಾಡಲಾದರೆ, ನಮ್ಮದೂ ಸಹ ಸಾರ್ಥಕ ಜೀವನವಾಗಬಹುದು





**ಮುಕ್ತಕ-89ಸಂ**

**ನಶ್ವರಾಕೃತಿ ನಾಮಮಯ ವಿಶ್ವವಾರ್ಧಿಯಿದು |**

**ಶಾಶ್ವತಬ್ರಹ್ಮದುಚ್ಛ್ವಾಸ ಘನಬಿಂದು ||**

**ಪ್ರಶ್ವಸಿತದಲೆಗಳನೆ ಪಿಡಿದು ಗುರಿಯರಿತೀಜೆ |**

**ವಿಶ್ವಮೂಲಾಪ್ತಿಯಲ - ಮಂಕುತಿಮ್ಮ |**

ನಶ್ವರಾಕೃತಿ =ನಶ್ವರ+ಆಕೃತಿ, ವಿಶ್ವವಾರ್ಧಿಯಿದು= ವಿಶ್ವ+ವಾರ್ಧಿ+ಇದು, ಪ್ರಶ್ವಸಿತದಲೆಗಳನೆ=ಪ್ರಶ್ವಸಿತದ+ಅಲೆಗಳನೆ, ಗುರಿಯರಿತೀಜೆ=ಗುರಿ+ಅರಿತು+ಈಜೆ, ವಿಶ್ವಮೂಲಾಪ್ತಿಯಲ=ವಿಶ್ವ+ಮೂಲ+ಅಪ್ತಿ+ಎಲ

ನಶ್ವರ=ಅಶಾಶ್ವತ, ನಾಶವಾಗುವ. ವಾರ್ಧಿ=ಕಡಲು, ಸಮುದ್ರ, ಪ್ರಶ್ವಸಿತದ= ಉಸಿರಾಟದ.

ಒಂದು ಶಾಶ್ವತ ಘನಬಿಂದುವಾದ ಆ ಪರಮಾತ್ಮನ ಉಸಿರಾಟದ ಉಚ್ಛಾಸ, ನಿಶ್ವಾಸಗಳಂತಿರುವ ಮತ್ತು ಕಾಲಗತಿಯಲ್ಲಿ ಹೇಳ ಹೆಸರಿಲ್ಲದಂತೆಯೇ ಕಳೆದುಹೋಗುವ, ನಮ್ಮ ರೂಪ ಮತ್ತು ನಾಮಗಳಿಂದಲೇ ತುಂಬಿರುವುದು ಈ ಜಗತ್ತೆಂಬ ಕಡಲು. ಸಮುದ್ರದ ಉಸಿರಾಟದ ಉಚ್ಛಾಸ ನಿಶ್ವಾಸದಂತಿರುವ, ಅದರ ಅಲೆಗಳನ್ನು ಹಿಡಿದು, ಎಂದರೆ ಗಮನಿಸಿದರೆ, ಅದರ ಮೂಲವಾದ ಕಡಲು ದೊರೆಯುವಂತೆ, ಈ ವಿಶ್ವದಲ್ಲಿರುವ, ನಮ್ಮ ರೂಪ ಮತ್ತು ನಾಮಗಳ ಮೂಲಕವೇ ವಿಶ್ವದ ಮೂಲವಾದ ಆ ಪರಮಾತ್ಮನನ್ನು ಅರಿತು, ಪಡೆಯಬಹುದು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿಗೆ ಇರುವುದು ಒಂದೇ ಒಂದು ಮೂಲ. ಅದೇ ಪರತತ್ವ ಅಥವಾ ಪರಮಾತ್ಮ, ಅವನ ಉಚ್ಛಾಸ ನಿಶ್ವಾಸಗಳೇ, ಮೊದಲು 'ಓಂ' ಕಾರವಾಗಿ ಹೊರಟು, ಅದರಿಂದ 'ವೇದ'ಗಳು ಮತ್ತು ಆ ವೇದಗಳಿಂದಲೇ ಸೃಷ್ಟಿಯಾದದ್ದು, ಈ ಜಗತ್ತು ಎಂದು ನಮ್ಮ ಸನಾತನದ ನಂಬಿಕೆ. “ಓಂ' ಕಾರದ ತರಂಗಗಳಿಂದ ಆದದ್ದೇ ಈ ಇಡೀ ಸೃಷ್ಟಿ ಸೃಷ್ಟಿಯಲ್ಲಿರುವುದು ರೂಪಗಳು ಮತ್ತು ಆ ರೂಪಗಳಿಗೊಂದು ಹೆಸರು. ಆದರೆ ಈ ರೂಪ ಮತ್ತು ನಾಮಗಳಾವುದೂ ಶಾಶ್ವತವಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು 'ನಶ್ವರಾಕೃತಿ ನಾಮಮಯ' ಎಂದರು. ಆದರೆ ಈ ರೂಪ ಮತ್ತು ನಾಮಗಳಿಲ್ಲದೆ ಜಗತ್ತಿಲ್ಲದಿದ್ದರೂ, ಈ ರೂಪ ಮತ್ತು ನಾಮಗಳು ಶಾಶ್ವತವಲ್ಲದೆ, ಮೇಲೇರಿ ಕೆಳಗಿಳಿಯುವಂತಹ ಕಡಲ ಅಲೆಗಳಂತೆ, ಬಂದುಹೋಗುತ್ತವೆ. ಇದು ನಮ್ಮ ಅಸ್ತಿತ್ವ.

ಕಣ್ಣಿಗೆ ಕಾಣದ ಆ 'ಪರಮಾತ್ಮ'ನನ್ನು ಅರಿಯುವುದು ಹೇಗೆ? ಇದು ಬಹಳ ಕಾಲದಿಂದ ಮನುಷ್ಯನನ್ನು ಕಾಡುತ್ತಿರುವ ಪ್ರಶ್ನೆ. ಅದಕ್ಕೆ ಉತ್ತರವಾಗಿ, ಕಡಲ ಅಲೆಯಿದ್ದರೆ ಕಡಲು ಇದೆ ಎಂದೇ ಅರ್ಥವಲ್ಲವೆ?, ಹಾಗೆಯೇ ಸೃಷ್ಟಿ ಇದೆ ಎಂದರೆ, ಸೃಷ್ಟಿಕರ್ತನೂ ಇದ್ದಾನೆ ಎಂದು ಅರ್ಥ. ಅಲೆಗಳನ್ನು ಕಂಡಾಗ ಅದರ ಮೂಲವಾದ ಸಮುದ್ರ ನಮಗೆ ಹೇಗೆ ಕಾಣುವುದೋ, ಅದೇ ರೀತಿಯಲ್ಲಿ ಸೃಷ್ಟಿಯನ್ನು ನೋಡುತ್ತಾ, ಅರ್ಥ ಮಾಡಿಕೊಳ್ಳುತ್ತಾ, ಅದರ ರೂಪ, ಗುಣಗಳನ್ನು ಅರಿಯುತ್ತಾ ಅದರ ಮೂಲವಾದ ಪರಮಾತ್ಮನನ್ನು ಅನುಸಂಧಾನ

ಮಾಡಿಕೊಳ್ಳಬೇಕು ಎನ್ನುವುದೇ ಈ ಮುಕ್ತಕದ ಆಂತರ್ಯ, ಜಗತ್ತಿನ ಮೂಲಕವೇ ಜಗತ್ಕಾರಕನನ್ನು ಅರಿತುಕೊಳ್ಳಬೇಕು. ರೂಪದ ಮೂಲಕವೇ ರೂಪವನ್ನು ಸೃಜಿಸಿದ ಆ ಪರತತ್ವವನ್ನು ಅರಿತುಕೊಂಡು, ನಂತರ ಆ ಪರತತ್ವವನ್ನು ಗಟ್ಟಿಯಾಗಿ ಹಿಡಿದುಕೊಂಡು, ರೂಪವನ್ನು ತೊರೆದು ಪರತತ್ವವನ್ನು ಸೇರಬೇಕು ಎನ್ನುವುದೇ ತತ್ವ

ವಾಚಕರೆ, ಈ ಸೃಷ್ಟಿಯನ್ನರಿಯುವುದು ಅಷ್ಟು ಸುಲಭವಲ್ಲ. ಮಾನವ ಮಾತ್ರರಾದ ನಮಗೆ, ನಮ್ಮ ಅರಿವಿನ ಮಿತಿಯಿಂದ ಸೃಷ್ಟಿಯ ಸಂಪೂರ್ಣ ಚಿತ್ರವರ್ಥವಾಗುವುದಿಲ್ಲ. ಸೃಷ್ಟಿಯನ್ನರಿಯುವುದೇ ಕಷ್ಟವಾದರೆ, ಇನ್ನು ಸೃಷ್ಟಿಕರ್ತನನ್ನು ಅರಿಯುವುದು ಮತ್ತಷ್ಟು ಕಷ್ಟವಾಗುತ್ತದೆ ಅಲ್ಲವೇ? ನಾವು ಶಾಂತಚಿತ್ತರಾಗಿ, ಅಂತರ್ಮುಖಿಗಳಾಗಿ, ಬಾಹ್ಯಪ್ರಪಂಚವನ್ನು ನಮ್ಮ ಮನಸ್ಸಿನಿಂದ ಹೊರಹಾಕಿ, ಒಳಗಿರುವ ಚೈತನ್ಯವನ್ನು ಉದ್ದೀಪನಗೊಳಿಸಿದಾಗ, ಆ ಪರಮ ಚೇತನದ ದರ್ಶನವಾಗಬಹುದು. ಹಾಗೆ ದರ್ಶನವಾದ ಪರಮ ಚೇತನ ನಮ್ಮಲ್ಲಿ ಸ್ಥಿರವಾಗಬೇಕಾದರೆ ಧೀರ್ಗಕಾಲದ ಪ್ರಯತ್ನ ಬೇಕು. ಜಗತ್ತಿನಲ್ಲಿ ಇದ್ದು, ಜಗತ್ತನ್ನು ಸಂಪೂರ್ಣವಾಗಿ ತೊರೆದರೆ, ನಮಗೆ ಜಗತ್ಕಾರಕ ಸಿಗುತ್ತಾನೆ, ಶುದ್ಧ ಪ್ರಯತ್ನ ಪಡಬೇಕು.

ಮುಕ್ತಕ - 891

ನಿನ್ನ ಕಹಿಸಿಹಿಯೆಲ್ಲ ಕಡಲೊಳುಪ್ಪಾಗುವುದು |

ನಿನ್ನೆಲ್ಲ ಗುಣಗಳುಂ ಬ್ರಹ್ಮದೊಳಗಂತು ||

ಪುಣ್ಯವೋ,ಪಾಪವೋ,ಅಹಿತವೋ, ಹಿತವೋ ಅದು |

ಚೆನ್ನಹುದು ಬೊಮ್ಮನಲಿ - ಮಂಕುತಿಮ್ಮ ||

ಕಡಲೊಳುಪ್ಪಾಗುವುದು=ಕಡಲೊಳು+ಉಪ್ಪಾಗುವುದು, ಬ್ರಹ್ಮದೊಳಗಂತು=ಬ್ರಹ್ಮದೊಳಗೆ+ಅಂತು, ಚೆನ್ನಹುದು=ಚೆನ್ನ+ಅಹುದು. ಅಹುದು=ಆಗುತ್ತದೆ

ನದಿಯ ಸಿಹಿ ನೀರು ಹರಿದು ಕಡಲ ಸೇರಿದಾಗ ಉಪ್ಪಾಗುತ್ತದೆ. ಹಾಗೆಯೇ, ಬದುಕಿನಲ್ಲಿ ನೀನುಂಡ ಕಹಿ-ಸಿಹಿಗಳೆಲ್ಲವೂ ಪರಬ್ರಹ್ಮನಲ್ಲಿ ಲೀನವಾಗುತ್ತವೆ. ನೀನು ಮಾಡಿರುವ, ಪುಣ್ಯವೋ, ಪಾಪವೋ, ಅಹಿತವೋ, ಹಿತವೊ

ಅದು ಅವನಲ್ಲಿ ಸೇರಿದಮೇಲೆ, ಅದ್ಯಾವುದೂ ಇಲ್ಲದೆ ಪರಬ್ರಹ್ಮನಲ್ಲಿ ಚೆನ್ನಾಗಿ ಸೇರಿಹೋಗುತ್ತದೆ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಕಡಲ ಆವಿ ಗಗನವನ್ನು ಸೇರಿ ಮೋಡವಾಗಿ, ಮಳೆಯಾಗಿ ಧರೆಗೆ ಇಳಿದಾಗ, ಅದು ಶುದ್ಧವಾಗಿರುತ್ತದೆ. ಭೂಮಿಯನ್ನು ತಲುಪಿದ ಮೇಲೆ ಅದು ಹರಿಯುವಾಗ, ಭೂಮಿಯ ಗುಣಗಳನ್ನೆಲ್ಲಾ, ಗ್ರಹಿಸುತ್ತಾ, ತನ್ನ ರುಚಿಯನ್ನು ಬದಲಾಯಿಸಿಕೊಳ್ಳುತ್ತಾ, ಮುಂದೆ ಮುಂದೆ ಸಾಗಿ, ಕಡಲನ್ನು ಸೇರುತ್ತದೆ. ಹಾಗೆ ಸೇರಿದಮೇಲೆ ಅದು





ತನ್ನ ಎಲ್ಲಾ ರುಚಿಗಳನ್ನೂ ಕಳೆದುಕೊಂಡು ಕೇವಲ ಉಪ್ಪಾಗುತ್ತದೆ. ಹಾಗೆಯೇ ನಾವು ನಮ್ಮ ಜನ್ಮದಾರಭ್ಯ ಅನುಭವಿಸಿದ ನೋವು ನಲಿವು, ಹಿಂಸೆ, ಕಷ್ಟ ಸಂತೋಷ ಮುಂತಾದವುಗಳು, ನಾವು ಬದುಕಿನಲ್ಲಿ ಮಾಡಿದ ಪುಣ್ಯ, ಪಾಪ, ಹಿತ, ಅಹಿತ ಎಲ್ಲವೂ ಆ ಪರಬ್ರಹ್ಮನಿಗೆ ಸೇರಿದ್ದು.

ಇಲ್ಲಿ ಒಂದು ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕಡಲು ಮಳೆಗೆ ಮೂಲ, ತನ್ಮೂಲಕ ನದಿಗೆ ಮೂಲ. ಕಡಲಲ್ಲಿ ಇದ್ದ ನೀರೇ ಆವಿಯಾಗಿ, ಮಳೆಯಾಗಿ, ನದಿಯಾಗಿ ಮತ್ತೆ ಕಡಲನ್ನು ಸೇರುವುದು. ಹಾಗೆಯೇ ನಮ್ಮ ಮೂಲವಾದ ಪರಬ್ರಹ್ಮವೂ ಸಹ, ತಾನೇ ಕೋಟ್ಯಾಂತರ ರೂಪಗಳನ್ನು ಧಾರಣೆ ಮಾಡಿ, ಆ ರೂಪಗಳ ಮೂಲಕ ನೋವು, ನಲಿವು, ಹಿಂಸೆ, ಕಷ್ಟ, ಸಂತೋಷ, ಪುಣ್ಯ, ಪಾಪ, ಹಿತ, ಅಹಿತ ಎಲ್ಲವನ್ನೂ ಅನುಭವಿಸುತ್ತಿದ್ದಾನೆ. ಹಾಗೆ ಅವುಗಳನ್ನು ಅನುಭವಿಸುವಾಗ, ನದಿ ಕಡಲ ನೀರನ್ನು ಸೇರಿದೊಡನೆಯೇ ಉಪ್ಪಾಗುವಂತೆ, ಈ ಗುಣಗಳೂ ಸಹ ಪರಬ್ರಹ್ಮನಲ್ಲಿ ಸೇರಿಹೋಗಿ ಅವನದೇ ಗುಣವಾಗಿ ಬಿಡುತ್ತದೆ. ಎಲ್ಲವೂ ಅವನದೇ ಗುಣವಾದಮೇಲೆ, ಅದರಲ್ಲಿ ಚೆನ್ನ ಅಥವಾ ಚೆನ್ನಿಲ್ಲ ಎನ್ನುವ ಮಾತೇ ಉದ್ಭವವಾಗುವುದಿಲ್ಲ.

ಆದರೆ ಲೌಕಿಕ ಬದುಕಿನಲ್ಲಿ, ನಾವು ನಮ್ಮ ಅಹಂಕಾರದಿಂದ ಅಥವಾ ಪ್ರಾಕೃತಭಾವದಿಂದ ನೋವು, ನಲಿವು, ಹಿಂಸೆ, ಕಷ್ಟ, ಸಂತೋಷ, ಪುಣ್ಯ, ಪಾಪ, ಹಿತ, ಅಹಿತ ಎನ್ನುವ ಗುಣಗಳನ್ನು ನಾವು ಮಾಡುತ್ತಿದ್ದೇವೆ ಮತ್ತು

ಅನುಭವಿಸುತ್ತಿದ್ದೇವೆ ಎಂದು ಅಂದುಕೊಳ್ಳುತ್ತಿರುತ್ತೇವೆ. ಅಹಂಕಾರವನ್ನು ತೊರೆದರೆ ನಮ್ಮ ಅಸ್ತಿತ್ವವು ಮರೆಯಾಗಿ, ಎಲ್ಲವೂ ಪರಬ್ರಹ್ಮನೇ ಎಂದಾದರೆ ಎಲ್ಲ ಗುಣಗಳೂ, ಭಾವಗಳೂ, ಅನುಭವಗಳೂ, ಅವನಲ್ಲಿ ಸೇರಿ ಲೀನವಾಗಿ ಹೋಗುತ್ತವೆ. ಹಾಗೆ ಲೀನವಾದಗುಣಗಳು ಮತ್ತು ಅನುಭವಗಳು ತಮ್ಮತನವನ್ನು ಕಳೆದುಕೊಂಡು, ಪರಬ್ರಹ್ಮನೇ ಆಗಿಬಿಡುತ್ತದೆ ಎನ್ನುವುದೇ ಈ ಮುಕ್ತಕದ ಆಂತರ್ಯ.

ಅಹಂಕಾರವನ್ನು ಬಿಡು " ಎನ್ನುವುದೇ ಈ ಮುಕ್ತಕವು ನಮಗೆ,ಕೊಡುವ ಗೂಢ ಸಂದೇಶ ಮತ್ತು ಆದೇಶ.

272



**ಮುಕ್ತತ - 892**

**ಹೊರಗೆ, ವಿಶ್ವದಿನಾಚೆ, ದೂರದಲಿ, ನೀಲದಲಿ |**

**ಒಳಗೆ, ಹೃತ್ಕೂಪದಾಳದಲಿ, ಮಸಕಿನಲಿ ||**

**ನೆಲೆಗಳಿಂತೆರಡು ರಹಸ್ಯಕವುಗಳುಲಿ |**

**ಕಲೆತಂದು ನೀಂ ಜ್ಞಾನಿ – ಮಂಕುತಿಮ್ಮ ||**

ವಿಶ್ವದಿನಾಚೆ=ವಿಶ್ವದಿನ್+ಆಚೆ, ಹೃತ್ಕೂಪದಾಳದಲಿ=ಹೃತ್+ಕೂಪದ+ಆಳದಲಿ,

ನೆಲೆಗಳಿಂತೆರಡು=ನೆಲೆಗಳು+ಇಂತು+ಎರಡು, ರಹಸ್ಯಕವುಗಳುಲಿ=ರಹಸ್ಯಕವುಗಳ+ಉಲಿ,

ಕಲೆತಂದು=ಕಲೆತ+ಅಂದು. ನೀಲದಲಿ=ಗಗನದಲಿ, ಹೃತ್ಕೂಪ=ಹೃದಯದಲ್ಲಿ,

ಹೊರಗೆ, ಎಂದರೆ ಈ ಜಗತ್ತಿನ ಪರಿಧಿಯಿಂದ ಆಚೆ, ದೂರದಲಿ, ಗಗನದಲ್ಲಿರುವ ರಹಸ್ಯಶಕ್ತಿ ಮತ್ತು ಒಳಗೆ, ಎಂದರೆ ಹೃದಯಾಂತರಾಳದಲಿ, ಮಸುಕುಮಸುಕಾಗಿರುವ ನಮ್ಮ ಆತ್ಮ ಶಕ್ತಿ ಎರಡೂ ಕಲೆತು ಒಂದಾದಾಗ ನಮಗೆ ಜ್ಞಾನವುಂಟಾಗುತ್ತದೆ, ಮತ್ತು ನಾವು ಜ್ಞಾನಿಗಳಾಗುತ್ತೇವೆ ಎಂದು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಇಡೀ ಜಗತ್ತನ್ನೇ ಆವರಿಸಿಕೊಂಡಿರುವ ಆ ಪರತತ್ವ, ಪಂಚಭೂತಗಳಿಂದಾದ ಜಗತ್ತಿಗಿಂತ ಮೇಲೆ ಎಂದರೆ ಪಂಚತತ್ವಗಳ ಪರಿಧಿಯಿಂದಾಚೆ ಇದೆ. ಅದೇ ಪರತತ್ವ ತನ್ನದೇ ತತ್ವದಿಂದ ಈ ಜಗತ್ತಿನಲ್ಲಿ ಕೋಟಿ ಕೋಟಿ ರೂಪಗಳನ್ನೂ ತಳೆದು, ವ್ಯಾಪಕವಾಗಿ ಹರಡಿಕೊಂಡಿದೆ. ತನ್ನ ಮೂಲಸ್ವರೂಪದಲ್ಲಿ ಅದು 'ಶುದ್ಧ ಸತ್ವ. ಆದರೆ ಪಂಚೀಕೃತವಾದ, ಎಂದರೆ ಪಂಚಭೂತಗಳಿಂದಾದ ದೇಹದ ಸಂಪರ್ಕಕ್ಕೆ ಬಂದಮೇಲೆ, ಆ ಶುದ್ಧ ಸತ್ವಕ್ಕೆ ಮಸುಕಾದ ಪರದೆ ಕವಿದು ಬಿಡುತ್ತದೆ. ಮೋಹ ಮಮಕಾರಗಳ ಪರದೆ ಕವಿದು ತನ್ನ ಸ್ವರೂಪವನ್ನು ಮರೆತು ಹೋಗುತ್ತದೆ.

ಹೀಗೆ ಆತ್ಮ, ತನ್ನ ಮೂಲ ಸ್ವರೂಪವನ್ನು ಮರೆತು ಈ ಜಗತ್ತಿನಲ್ಲಿ ತನ್ನನ್ನು ತಾನು, ಈ ಜಗತ್ತಿನೊಂದಿಗೆ ಗುರುತಿಸಿಕೊಳ್ಳುತ್ತಾ, ಇಂದ್ರಿಯ ಸಂಬಂಧವಾಗ ಸುಖಗಳನ್ನು ಅನುಭವಿಸುತ್ತಾ ಮತ್ತು ಹಲವಾರು ಪ್ರಾಕೃತ ಭಾವಗಳನ್ನು ಬೆಳೆಸಿಕೊಳ್ಳುತ್ತಾ, ತನ್ನ ರೂಪವನ್ನು ಬದಲಾಯಿಸಿಕೊಳ್ಳುತ್ತಾ ಸಾಗುತ್ತದೆ. ಅಜ್ಞಾನದ ಪರದೆಯಿಂದ ಕವಿಯಲ್ಪಟ್ಟು, ತಾನು ಜ್ಞಾನ ಸ್ವರೂಪವೆಂದು ಮರೆತುಹೋಗುತ್ತದೆ. ಈ ಜಗತ್ತಿನ ನಂಟು ಮತ್ತು ಆ ನಂಟನ್ನು ಸೃಷ್ಟಿಸಿದ ಅಂಟಿನಿಂದ, ಬದುಕಿಗೆ ಅಂಟಿಕೊಂಡಿರುತ್ತದೆ. ಹಾಗೆ ಅಂಟಿಕೊಂಡಿದ್ದರೂ, ತನ್ನ ಮೂಲವಾದ ಆ ಪರತತ್ವವನ್ನು ಸೇರಲು ಮತ್ತು ಹಾಗೆ ಸೇರಿದ ಸ್ಥಿತಿಯಲ್ಲಿನ ಆನಂದವನ್ನು ಅನುಭವಿಸುವ ಆಸೆಯನ್ನು ಇಟ್ಟುಕೊಂಡೇ ಇರುತ್ತದೆ.

ಆ ಆಸೆ ಬಲವಂದು, ಪ್ರಯತ್ನವನ್ನು ಪಟ್ಟಾಗ, ಕಾಲಕ್ರಮೇಣ ನಿಧಾನವಾಗಿ ಈ ಭುವಿಯ ಬಂಧನಗಳೆಲ್ಲಾ ಕಳಚಿ,





ಮಾಯೆಯ ಪೊರೆ ಸರಿದು, ಮೋಹದ ಪರದೆ ತೊಲಗಿದಾಗ, ಅಂತರಂಗದಲ್ಲಿರುವ ಸತ್ವ ಮತ್ತು ಈ ಜಗತ್ತಿನಾಚೆ ಇರುವ ಪರತತ್ವವೂ ಒಂದೇ ಎಂದು ಅರಿವಾಗುತ್ತದೆ. ಹಾಗೆ ಅರಿವಾದಾಗ ನಾವು ಜ್ಞಾನಿಗಳಾಗುತ್ತೇವೆ, ಎನ್ನುತ್ತಾರೆ ಮಾನ್ಯ ಡಿವಿಜಿಯವರು. “ಅತ್ಯತ್ತಿಷ್ಟದ್ದಶಾಂಗುಲಂ' ಎಂದು ಹೇಳಲ್ಪಟ್ಟಿರುವ ಆ ಪರಮಾತ್ಮ, ಎಂದರೆ ಬೃಹಚೇತನ ಮತ್ತು 'ಗುಹಾಯಾಂ' ಎಂದರೆ ನಮ್ಮ ಅಂತರಂಗದಲ್ಲಿ ನೆಲೆಸಿರುವ ಅಣುಚೇತನವೂ ಒಂದೇ, ಎಂಬ

ಅರಿವು ಮೂಡಿದಾಗ, ನಮ್ಮಲ್ಲಿ ಜ್ಞಾನವುಂಟಾಗಿ, ನಾವು ಆನಂದದ ಸ್ಥಿತಿಯಲ್ಲಿ, ತೇಲಾಡಬಹುದು. ನಿರಂತರ ಪ್ರಯತ್ನದಿಂದ ಅಂತಹ ಸ್ಥಿತಿಯನ್ನು ಸಾಧಿಸುವುದು ಸಾಧ್ಯ.

**ಮುಕ್ತಕ - 893**

**ಸ್ವಪ್ನ ಲೋಕವ ಜಾಗೃತಂ ಸುಳ್ಳೆನುವನಲ್ತೆ।**
**ಸುಪ್ತಂಗೆ ಜಾಗೃತನ ಲೋಕಮುಮ್ ಸುಳ್ಳೇ ॥**
**ಸ್ವಪ್ನ ಜಾಗೃತ್ಸುಪ್ತಿಗಳ ಹಿಂದೆ ನಿರ್ಲಿಪ್ತ-।**
**ಗುಪ್ತಾತ್ಮನಿಹುದು ದಿಟ - ಮಂಕುತಿಮ್ಮ ॥**

ಸುಳ್ಳೆನುವನ=ಸುಳ್ಳು+ಎನುವನ್+ಅತ್ತೆ. ಜಾಗೃತ್ಸುಪ್ತಿಗಳ=ಜಾಗೃತ್+ಸುಪ್ತಿಗಳ,
ಗುಪ್ತಾತ್ಮನಿಹುದು=ಗುಪ್ತ+ಆತ್ಮನ್+ಇಹುದು ಅಲೆ=ಅಲ್ಲವೇ?

ಸ್ವಪ್ನ ಲೋಕವನ್ನು ಜಾಗೃತನು ಸುಳ್ಳು ಎನ್ನುವಂತೆ ಮಲಗಿ ನಿದ್ರಿಸುವವನಿಗೆ ಜಾಗೃತನ ಲೋಕವೂ ಸುಳ್ಳೆನಿಸುತ್ತದೆ. ಈ ಜಾಗೃತ, ಸ್ವಪ್ನ ಮತ್ತು ಸುಪ್ತ, ಅವಸ್ಥೆಗಳಿಗೆ ಅತೀತವಾದ ಮತ್ತು ಈ ಅವಸ್ಥೆಗಳ ಪ್ರಭಾವಕ್ಕೊಳಗಾಗದ, ಎಂದರೆ ನಿರ್ಲಿಪ್ತ ಸ್ಥಿತಿಯಲ್ಲಿ, ಗೂಢವಾಗಿ 'ಆತ್ಮ'ವಿರುವುದು ದಿಟ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸ್ವಪ್ನ ಕಾಣುವುದು ಮತ್ತು ಜಾಗೃತವಾಗಿರುವುದು ಮನಸ್ಸು, ಸ್ವಪ್ನ, ಜಾಗೃತಾವಸ್ಥೆಗಳಲ್ಲಿ ಅಲ್ಲದೆ ಸುಪ್ತ, ಎಂದರೆ ಸುಮ್ಮನೆ, ವಿಶ್ರಾಂತವಾಗಿರುವುದೂ ಇರುವುದೂ ಸಹ ಈ ಮನಸ್ಸೇ. ಆದರೆ ಈ ಮನಸ್ಸಿನ ಮೂರು ಅವಸ್ಥೆಗಳು ಸ್ವತಂತ್ರವಾಗಿ ನಿಲ್ಲುತ್ತವೆ. ಸ್ವಪ್ನದಲ್ಲಿ ಕಂಡದ್ದು ಜಾಗೃತಾವಸ್ಥೆಯಲ್ಲಿ ನೆನಪೂ ಉಳಿಯುವುದಿಲ್ಲ ಮತ್ತು ಮತ್ತೆ ಆ ಚಿತ್ರವನ್ನು ಕಾಣಲೂ ಆಗುವುದಿಲ್ಲ. ಜಾಗೃತಾವಸ್ಥೆಯಲ್ಲಿನ ವಿಷಯಗಳನ್ನು ಯಥಾವತ್ತಾಗಿ ಸ್ವಪ್ನದಲ್ಲಿ ಕಾಣಲೂ ಆಗುವುದಿಲ್ಲ. ಇನ್ನು ಸುಪ್ತ ಮನಸ್ಸು ಯಾವುದನ್ನೂ ಕಾಣದೆ ಸ್ವಸ್ಥವಾಗಿ ವಿಶ್ರಾಂತವಾಗಿರುತ್ತದೆ. ಜಾಗೃತಾವಸ್ಥೆಯಲ್ಲಿ, ಮನೋವ್ಯಾಪಾರಕ್ಕೆ ಬುದ್ಧಿಯ ಸಾಂಗತ್ಯವಿರುತ್ತದೆ. ಸ್ವಪ್ನಲೋಕದಲ್ಲಿ, ಮನಸ್ಸು ಲಂಗುಲಗಾಮಿಲ್ಲದೆ, ಜಾಗೃತಾವಸ್ಥೆಯಲ್ಲಿ ಅಸಾಧ್ಯವಾದುದನ್ನೆಲ್ಲಾ ಕಾಣುತ್ತಾ, ಒಂದು ಭ್ರಮಾಲೋಕದಲ್ಲಿ ವಿಹರಿಸುತ್ತದೆ. ಹಾಗಾಗಿ ಮಾನ್ಯ ಗುಂಡಪ್ಪನವರು ಹೇಳುವಂತೆ ಜಾಗೃತಕ್ಕೆ ಸ್ವಪ್ನ ಸುಳ್ಳು ಮತ್ತು ಸ್ವಪ್ನಕ್ಕೆ ಜಾಗೃತ ಸುಳ್ಳು.

ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳು ಕೂಡಿ ಆಗಿರುವುದು ನಮ್ಮ ಅಸ್ಥಿತ್ವ, ಮಲಗಿದಾಗ 'ಕಾಯ'ದ ಕೆಲಸ ನಿಂತು ದೇಹ ವಿಶ್ರಾಂತಗೊಳ್ಳುತ್ತದೆ. ಮನಸ್ಸು ಕನಸಿನ ಲೋಕದಲ್ಲಿರಬಹುದು ಅಥವಾ ಸುಪ್ತವಾಗಿ ತಾನೂ ವಿಶ್ರಾಂತಿ ತೆಗೆದುಕೊಳ್ಳಬಹುದು. ಬುದ್ಧಿ ನಿಷ್ಕ್ರಿಯವಾಗುವುದು. ಆತ್ಮ ಮಾತ್ರ ಈ ಮೂರಕ್ಕೂ ಭಿನ್ನವಾಗಿ, ಇವುಗಳಾವುದಕ್ಕೂ ಅಂಟದೇ, ನಿರ್ಲಿಪ್ತವಾಗಿ 'ಸಾಕ್ಷೀಭೂತ'ವಾಗಿ ಇರುತ್ತದೆ. ಆತ್ಮಕ್ಕೆ ನಿದ್ದೆಯೂ ಇಲ್ಲ. ವಿಶ್ರಾಂತಿಯೂ ಇಲ್ಲ. ಈ ಜಗತ್ತಿಗೆ ಪರಮಾತ್ಮ ಹೇಗೆ ಆಧಾರನೋ ಹಾಗೆಯೇ ನಮ್ಮ ಮನಸ್ಸು, ಬುದ್ಧಿ, ದೇಹಗಳಿಗೆ ಆತ್ಮವೇ ಅಧಾರ. ಹಾಗಾಗಿ ಆತ್ಮ ಸದಾ ಜಾಗೃತ.

ಜಗತ್ತಿಗೆ ಗಾಢವಾಗಿ ಅಂಟಿಕೊಂಡಿರುವ ಮನಸ್ಸು, ಜಾಗೃತಾವಸ್ಥೆಯಲ್ಲಿ ಸಾಕಾರಗೊಳ್ಳದ ಆಲೋಚನಾ ಲಹರಿಯನ್ನು, ಕೆಲಬಾರಿ ಕನಸಿನಲ್ಲಿ ಸಾಕಾರಗೊಳಿಸಿಕೊಳ್ಳುತ್ತದೆ. ಶಾಂತ ಮನಸ್ಸು, ಕನಸು ಕಾಣುವುದು ಕಡಿಮೆ. ಶಾಂತ ಮನಸ್ಸು ಬಲು ಬೇಗ ಸುಪ್ತವಾಗಿ, ಮಲಗಿ ಶಾಂತವಾಗುತ್ತದೆ. ಅತಿಯಾದ ಚಿಂತನೆ, ಯೋಜನೆ ಮತ್ತು ಆಲೋಚನೆಗಳಿಂದ ಕಲುಷಿತಗೊಂಡ ಮನಸ್ಸು, ಅಧಿಕವಾಗಿ ಗುಣಗಳನ್ನು ಬೆಳೆಸಿಕೊಳ್ಳುತ್ತಾ, ಆತ್ಮಕ್ಕೆ ಹೊತ್ತು ಹೋಗಬೇಕಾದ ಹೊರೆಯನ್ನು ಅಧಿಕವಾಗಿಸುತ್ತದೆ. ಮನಸ್ಸು ಶಾಂತವಾದರೆ, ಆತ್ಮಕ್ಕೆ ಸುಖ. ಶಾಂತ ಮನಸ್ಸು ಆತ್ಮನನ್ನು ಪರಮಾತ್ಮನಲ್ಲಿ ಅನುಸಂಧಾನವಾಗಿಸುವುದರಲ್ಲಿ ಸಹಾಯಕವಾಗಿರುತ್ತದೆ. ರೀತಿಯ ಅನುಸಂಧಾನವಾದರೆ ಪರಮಾತ್ಮ ತತ್ವವು ನಿಚ್ಚಳವಾಗಿ, ನಮಗೆ 'ಜ್ಞಾನ' ಉಂಟಾಗುತ್ತದೆ. ಪ್ರಯತ್ನಿಸಿದರೆ ಎಲ್ಲರಿಗೂ ಸಾಧ್ಯ.

**ಮುಕ್ತಕ – 894**

**ಭಾನದಯಾಸ್ತಗಳಿನಲ್ತೆ ದಿಕ್ಕಾಲಗಳ ।**

**ಮಾನಗಣಿತವು ನಮಗೆ? ಭಾನುವಿರದೊಡದೇಂ ? ॥**

**ಅನಂತ್ಯ, ಶುದ್ಧ ಸತ್ತಾಮಾತ್ರ, ಬೊಮ್ಮನದು ।**

**ಲೀನನಾಗದರೊಳಗೆ - ಮಂಕುತಿಮ್ಮ ॥**

ಭಾನದಯಾಸ್ತಗಳಿನಲ್ಲೆ=ಭಾನು+ಉದಯ+ಅಸ್ತ್ರಗಳಿನ್+ಅಲ್ತೆ, ದಿಕ್ಕಾಲಗಳ=ದಿಕ್ಕು+ಕಾಲಗಳ,

ಭಾನುವಿರದೊಡದೇಂ=ಭಾನುವು+ಇರದೊಡೆ+ಏಂ, ಲೀನನಾಗದರೊಳಗೆ=ಲೀನವಾಗು+ಅದರೊಳಗೆ.
ಮಾನಗಣಿತ=ಅಳತೆ ಮತ್ತು ಲೆಕ್ಕಾಚಾರ, ಅನಂತ್ಯ=ಅನಂತ, ಶುದ್ಧಸತ್ತ=ಶುದ್ಧ ಸತ್ವ,
ಬೊಮ್ಮನದು=ಪರಬ್ರಹ್ಮನದು.

ಸೂರ್ಯನ ಉದಯ ಮತ್ತು ಮುಳುಗುವಿಕೆಯಿಂದ, ದಿಕ್ಕುಗಳ ಅಳತೆ ಮತ್ತು ಕಾಲದ ಲೆಕ್ಕಾಚಾರವನ್ನು ನಾವು ಮಾಡುತ್ತೇವೆ. ಸೂರ್ಯನೇ ಇಲ್ಲದೆ ಇದ್ದಿದ್ದರೆ? ಆಗ ಅನಂತವಾದ ಪರಬ್ರಹ್ಮನ ಶುದ್ಧ ಸತ್ವ ಎಲ್ಲೆಡೆಯಲ್ಲೂ ಕಾಣುತ್ತದೆ. ಅಂತಹ ಶುದ್ಧ ಸತ್ವದಲ್ಲಿ ಲೀನವಾಗು ಎಂದು ಆದೇಶಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

275

ಕಗ್ಗರಸಧಾರೆ ಸಂಕೇತಮಯ ಲೋಕ 894 – 898

ಒಂದು ಅವ್ಯಾಹತವಾಗಿ ಓಡುವ ಪ್ರವಾಹ, ಕಾಲ. ಅದಕ್ಕೆ ಅಣೆಕಟ್ಟುಗಳನ್ನು ಕಟ್ಟಲು ಸಾಧ್ಯವಿಲ್ಲ. ಕಾಲದ ನಿರಂತರ ಓಟದ ಘಟಲದ ಮೇಲೆ ನಾವು ಗೆರೆಗಳನ್ನು ಎಳೆದು ಕ್ಷಣ, ನಿಮಿಷ, ಗಂಟೆ, ದಿನ, ವಾರ, ಪಕ್ಷ, ತಿಂಗಳು ವರುಷ ಎಂದು ವಿಭಾಗಿಸಿದ್ದೇವೆ. ಅಂದರೆ ನಮ್ಮ ಸೌರಮಂಡಲದ ಸೂರ್ಯನ ಉದಯ ಮತ್ತು ಅಸ್ತ್ರಗಳನ್ನು ಆಧರಿಸಿ ನಾವು ಈ ಜಗತ್ತಿನಲ್ಲಿ ಕಾಲದ ಗಣನೆಯನ್ನು ಮಾಡುತ್ತೇವೆ. ಅಕಸ್ಮಾತ್ ಈ ಸೂರ್ಯನೇ ಇಲ್ಲದೆ ಹೋಗಿದ್ದರೆ, ಹಾಗೆ ಯಾವ ವಿಭಾಗವನ್ನೂ ಮಾಡಲಾಗದೆ ಕಾಲದ ಗಣನೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಹಾಗೆ ಆಲೋಚಿಸಲು ಸಾಧ್ಯವೇ ಇಲ್ಲ. ಏಕೆಂದರೆ ಈ ಭೂಮಿಯ ಅಸ್ತಿತ್ವವೇ ನಮ್ಮ ಸೂರ್ಯನ ಬೆಳಕು ಶಾಖಗಳಿಂದಾಗಿದೆ. ಹಾಗಾಗಿ ಕಾಲದ ವಿಭಾಗವೂ ಬಹಳ ವೈಜ್ಞಾನಿಕವಾಗಿದೆ.

ಈ ಸೂರ್ಯ, ಭೂಮಿ ಮತ್ತು ಸಕಲ ಚರಾಚರಗಳ ಹುಟ್ಟು ಮತ್ತು ಅಸ್ಥಿತ್ವಕ್ಕೆ ಕಾರಣ ಆ ಪರತತ್ವ, ಪರತತ್ವ ಶುದ್ಧ ಸತ್ವದಿಂದ ಕೂಡಿದೆ. ಸೂರ್ಯನಿರುವುದರಿಂದ, ಕಾಲದ ಗಣನೆ ಮತ್ತು ಅದನ್ನನುಸರಿಸಿ ನಮ್ಮ ಎಲ್ಲ ಆಚಾರಗಳು, ವಿಚಾರಗಳು, ರೂಢಿಯಲ್ಲಿರುವ ಸಂಪ್ರದಾಯಗಳು, ಉದಾ: ಹದಿನಾಲ್ಕು ದಿನಗಳಿಗೊಮ್ಮೆ ಹುಣ್ಣಿಮೆ ಅಮಾವಾಸ್ಯೆಗಳು, ಸೂರ್ಯ ಚಂದ್ರರ ಉದಯಾಸ್ತಮಾನಗಳನ್ನಾಧರಿಸಿ ನಾವು ಆಚರಿಸುವ ಹಬ್ಬಗಳು (ರಂಜಾನ್, ದೀಪಾವಳಿ, ಯುಗಾದಿ, ಇತ್ಯಾದಿ) ಇವುಗಳ ಆಚರಣೆ ಮತ್ತು ಅನುಸರಣೆಯಲ್ಲಿ ನಾವು ಆ ಪರತತ್ವವನ್ನು ಶುದ್ಧ ಸ್ವರೂಪದಲ್ಲಿ

ಅನುಸಂಧಾನಮಾಡಲು ಅಸಮರ್ಥರು. ಏಕೆಂದರೆ ನಮಗೆ 'ಮಂತ್ರಕ್ಕಿಂತ ಉಗುಳೇ ಹೆಚ್ಚು ಎನ್ನುವಂತೆ ತತ್ವಕ್ಕಿಂತ ಸಂಪ್ರದಾಯವೇ ಮುಖ್ಯವಾಗುತ್ತದೆ. ನಾವು ಪರಮಾತ್ಮನ ಶುದ್ಧ ಸತ್ವವನ್ನು ನಮ್ಮೊಳಗೆ ಇಳಿಸಿಕೊಳ್ಳಲಾದರೆ, ನಾವೂ ಅದರೊಳಗೆ ಒಂದಾಗಿ ಬಂಧವಿಮುಕ್ತರಾಗಬಹುದು. ಆದರೆ ಸೂರ್ಯನಿಲ್ಲದಿದ್ದರೆ ಭೂಮಿಯಿಲ್ಲ. ಭೂಮಿಯಿಲ್ಲದಿದ್ದರೆ, ನಾವಿಲ್ಲ. ನಾವೇ ಇಲ್ಲದಿದ್ದಮೇಲೆ ಶುದ್ದ ಸತ್ವವಿದ್ದರೆಷ್ಟು ಬಿಟ್ಟರೆಷ್ಟು ಎನ್ನುವ ಪ್ರಶ್ನೆ ನಮ್ಮೊಳಗೆ ಬರಬಹುದು.

"ಹೃದಾಕಾಶೇ ಚಿದಾದಿತ್ಯಃ ಭಾಸತೇ ಚ ನಿರಂತರಂ? ನಾಸಮೇತಿ ನೋದೇತಿ ಕಥಂ ಸಂಧ್ಯಾಂ ಉಪಾಸ್ಮಹೇ" - ಎಂದು ಮೈತ್ರಾಯನಿ ಉಪನಿಷತ್ತು ಹೇಳುತ್ತದೆ. ಎಂದರೆ ನನ್ನ ಹೃದಯವೆಂಬ ಆಕಾಶದಲ್ಲಿ ಜ್ಞಾನವೆಂಬ ಸೂರ್ಯ ಉದಯಾಸ್ತಮಾನಗಳಿಲ್ಲದೆ ಸದಾ ಬೆಳಗುತ್ತಿರಲು, ನಾನು ಹೇಗೆ 'ಸಂಧ್ಯೆ'ಯನ್ನು ಉಪಾಸನೆ ಮಾಡಲಿ? ಎಂದರ್ಥ. ಅಂತರಂಗದೊಳಕ್ಕೆ ಪರತತ್ವದ ಶುದ್ಧಸತ್ವವು ಬರಲು ಇರುವ ಅಡ್ಡಿಗಳನ್ನೆಲ್ಲಾ ನೀನು ಸಾಧನೆಯಿಂದ ತೊಲಗಿಸಿಕೋ, ನಿಮ್ಮ ಮನಸ್ಸಿನಲ್ಲಿ ನೀನು ನಿರ್ಮಿಸಿಕೊಂಡಿರುವ, ಕಾಲದ ಮತ್ತು ಆ ಕಾಲದ ಗಣನೆಯಿಂದ ನಿರ್ಮಿತವಾದ ಎಲ್ಲ ಗೋಡೆಗಳನ್ನೂ ಕೆಡವಿಹಾಕು. ಅಂತಹ ಸ್ಥಿತಿಯಲ್ಲಿ ನಿನಗೆ ಪರಮಾತ್ಮನ ಶುದ್ಧ ಸ್ವರೂಪದ ದರ್ಶನವಾಗಿ, ಪರತತ್ವ ಶುದ್ಧರೂಪದಲ್ಲಿ ನಿನ್ನೊಳಕ್ಕೆ ಇಳಿಯುತ್ತದೆ. ಅಂತಹ ಶುದ್ಧ ಸತ್ವದ ತತ್ವದೊಳಗೆ ನೀನು ಲೀನನಾಗು ಎಂದು ಆದೇಶವನ್ನಿತ್ತಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ, ನಮ್ಮಂತಹ ಹುಲುಮಾನವರಿಗೆ ಊಹಿಸಲೂ ಸಾಧ್ಯವಿಲ್ಲದ ಸ್ಥಿತಿ, ಆದರೆ ಶುದ್ಧ ಪ್ರಯತ್ನದಿಂದ ಅಂತಹ ಸ್ಥಿತಿಗೆ ಹೋಗಬಹುದು .





**ಮುಕ್ತಕ - 895**

**ಸಂಕೇತಭಾವಮಯ ಲೋಕಜೀವನದ ನಯ |**

**ಸಂಖ್ಯೆ ಗುಣ ಹೇತು ಕಾರ್ಯಗಳ ಲಕ್ಷಣದಿಂ- ||**

**ದಂಕಿತಂಗಳು ಪದ ಪದಾರ್ಥ ಸಂಬಂಧಗಳು |**

**ಅಂಕೆ ಮೀರ್ದದು ಸತ್ವ - ಮಂಕುತಿಮ್ಮ ||**

ಲಕ್ಷಣದಿಂದಂಕಿತಂಗಳು= ಲಕ್ಷಣದಿಂದ+ಅಂಕಿತಂಗಳು, ಮೀರ್ದದು=ಮೀರಿದ ಅದು.

ಈ ಲೋಕದ ಜೀವನ, ಸಂಕೇತ ಮತ್ತು ಭಾವಗಳಿಂದ ಕೂಡಿದೆ. ಸಂಖ್ಯೆ, ಗುಣ ಮತ್ತು ಕಾರ್ಯ ಲಕ್ಷಣಗಳಿಂದ ಪದಾರ್ಥಗಳ ಗುರುತು ಮತ್ತು ಅವುಗಳ ಪರಸ್ಪರ ಸಂಬಂಧಗಳಿರುತ್ತವೆ. ಆದರೆ ಇವುಗಳೆಲ್ಲಕ್ಕೂ ಆಧಾರವಾದ ಆ ಪರತತ್ವ, ಈ ಎಲ್ಲದರಿಂದ ಅತೀತವಾಗಿರುತ್ತದೆ, ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಶುದ್ಧ ಪರತತ್ವದಿಂದಾದ್ದು, ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿ ಎಂಬ ಪಂಚಭೂತಗಳು. ಈ ಪಂಚಭೂತಗಳ ಗುಣಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳ ಸಹಾಯದಿಂದ ನಾವು ಈ ಜಗತ್ತಿನಲ್ಲಿರುವುದೆಲ್ಲವನ್ನೂ ನೋಡುತ್ತೇವೆ, ಅರಿಯುತ್ತೇವೆ ಮತ್ತು ಅನುಭವಿಸುತ್ತೇವೆ. ಅವುಗಳ ಮೂಲಕ ಜಗತ್ತನ್ನು ನಾವು ನೋಡುವಾಗ ಮತ್ತು ಈ ಜಗತ್ತಿನೊಂದಿಗೆ ಸಂಪರ್ಕ, ಸಂಬಂಧವನ್ನು ಹೊಂದಿರುವಾಗ ನಮಗೆ ಅವುಗಳ ನಾಮ, ರೂಪ, ಸಂಖ್ಯಾ, ಗುಣ ಮತ್ತು ಕಾರ್ಯ ಬೇಧಗಳು ಕಾಣುತ್ತವೆ ಮತ್ತು ಆ ಭೇದಗಳ ಮೂಲಕವೇ ನಾವು ಈ ವಸ್ತು, ವಿಷಯ ಮತ್ತು ವ್ಯಕ್ತಿಗಳನ್ನು ಗುರುತಿಸುವುದು.

ಪರಮಾತ್ಮನೇ ಈ ಜಗತ್ತನ್ನು ಸೃಷ್ಟಿಸಿ, ತಾನೇ ಇದರೊಳಕ್ಕೆ ಚೈತನ್ಯರೂಪದಲ್ಲಿ ಒಳನುಗ್ಗಿ, ಬೇರೆ ಬೇರೆ ರೂಪ, ಬಣ್ಣ, ಆಕಾರ, ರುಚಿ, ಗಂಧ ಮುಂತಾದವುಗಳಿಂದ ಪ್ರಕಟಗೊಂಡಿದ್ದಾನೆ, ಎನ್ನುವುದು ನಮ್ಮ ಸನಾತನದ ನಂಬಿಕೆ. ಹಾಗೆ ಆ ಪರಮಾತ್ಮ, ತಾನೇ ಸೃಷ್ಟಿಸಿದ 'ಜಡ' ದ ಸಂಸರ್ಗಕ್ಕೆ ಬಂದಾಗ ರೂಪ, ಗುಣ, ಸಂಖ್ಯಾ ಮುಂತಾದ ಭೇದಗಳಿಂದ ಗೋಚರಿಸುತ್ತಾನೆ. ವಸ್ತುವಿಷಯ ಮತ್ತು ವ್ಯಕ್ತಿಗಳಲ್ಲಿ ಭೇದದಿಂದ ಪ್ರಕಟಗೊಂಡಿದ್ದರೂ ಮೂಲ ಸ್ವರೂಪದಲ್ಲಿ ಆ ಪರತತ್ವ ಶುದ್ಧ ತತ್ವವಾಗೇ ಉಳಿಯುತ್ತದೆ. ಉದಾ಼ ನಮ್ಮ ಮನೆಗೆ 'ವಿದ್ಯುತ್' ಕಂಬದಿಂದ, ನಮ್ಮ ಮನೆಯೊಳಗಳವಡಿಸಿರುವ 'ಮೀಟರ್' ಮೂಲಕ ಹರಿದು ಬರುವ ವಿದ್ಯುತ್, ತನ್ನ ಮೂಲ ಗುಣವನ್ನು ಇಟ್ಟುಕೊಂಡಿದ್ದರೂ, ಅದರಿಂದ ನಾವು ಉಪಯೋಗಿಸುವ ಉಪಕರಣಗಳ ಬೇಧದಿಂದ ಭಿನ್ನಭಿನ್ನವಾಗಿ ಕೆಲಸಮಾಡುವುದಿಲ್ಲವೆ ಮತ್ತು ಭಿನ್ನಭಿನ್ನವಾದ ಫಲ (output) ಕೊಡುವುದಿಲ್ಲವೇ?

ನಾವು ಆಧ್ಯಾತ್ಮದ ಹಾದಿಯಲ್ಲಿರಬೇಕಾದರೆ, ರೂಪ, ಸಂಖ್ಯಾ, ಗುಣ, ಸ್ವಭಾವ ಮತ್ತು ಕಾರ್ಯ ಬೇಧಗಳನ್ನು ನೋಡುತ್ತ ಅವುಗಳನ್ನು ಅನುಭವಿಸುತ್ತಿದ್ದರೂ, ಈ ಬೇಧಗಳಿಗೆ ಕಾರಣವಾದ ಮತ್ತು ಅವುಗಳಲ್ಲಿದ್ದರೂ ಅವುಗಳಿಗೆ ಹೊರತಾಗಿ, ಅತೀತವಾಗಿ ಇರುವ ಆ ಪರತತ್ವದ ಶುದ್ಧ ರೂಪವನ್ನು ಅನುಸಂಧಾನಮಾಡಿದಾಗ ನಮಗೆ ವಿಶ್ವಾತ್ಮಭಾವದ ಅನುಭವವಾಗುತ್ತದೆ. ಅಂತಹ ಅನುಭವಕ್ಕೆ ನಾವು ನಮ್ಮನ್ನು ನಾವು ತೆರೆದುಕೊಳ್ಳಬೇಕು. ಬೇಧಗಳನ್ನು ತೊರೆದು, ಅವುಗಳಿಗೆ ಕಾರಣವಾದ ಪರತತ್ವವನ್ನು ನಮ್ಮ ಮನಸ್ಸಿನಲ್ಲಿ ಸದಾ ಬೆಳಗಿಸಿಕೊಂಡರೆ, ಸದಾ ಆನಂದದ ಸ್ಥಿತಿಯಲ್ಲಿರಬಹುದು. ಈ ಜಗತ್ತಿನ ಬದುಕಿನ ಸೆಳೆತಗಳ ನಡುವೆ ಇದ್ದು ಅವುಗಳಿಂದ ನಮ್ಮನ್ನು ನಾವು ಬಿಡಿಸಿಕೊಂಡು ಸದಾಕಾಲ ಪರತತ್ವಾನುಭವದ ಅನುಭವ ಪಡೆಯಲು ಪ್ರಯತ್ನ ಪಡಬಹುದು. ನಮ್ಮ ಪ್ರಯತ್ನ ಎಷ್ಟು ತೀವ್ರವಾದರೆ ಅಷ್ಟು ಫಲ.

**ಮುಕ್ತಕ – 896**

**ಭೌತವಿಜ್ಞಾನ ವಿವರಗಳಿನೇನಾತ್ಮಂಗೆ ? |**

**ಪ್ರೇತ ಪ್ರಯಾಣಕಥೆಯೆಂತಿರ್ದೊಡೇನು ? ||**

**ಜಾತಿ ನೀತಿ ಸಮಾಜ ವರ್ಗಭೇದದಿನೇನು ? |**

**ಘಾತಿಯಿಲ್ಲಾತ್ಮಂಗೆ - ಮಂಕುತಿಮ್ಮ ||**

ವಿವರಗಳಿನೇನಾತ್ಮಂಗೆ= ವಿವರಗಳಿನ್+ಏನು+ಆತ್ಮಂಗೆ, ಪ್ರೇತ ಪ್ರಯಾಣಕಥೆಯೆಂತಿರ್ದೊಡೇನು ?=ಪ್ರೇತ+ಪ್ರಯಾಣ+ಕಥೆಯು+ಎಂಟೆ+ಇರ್ದೊಡೆ+ಏನು?

ವರ್ಗಭೇದದಿನೇನು=ವರ್ಗಭೇದದಿನ್+ಏನು?ಘಾತಿಯಿಲ್ಲಾತ್ಮಂಗೆ=ಘಾತಿ+ಇಲ್ಲ+ಆತ್ಮಂಗೆ

ಭೌತ ವಿಜ್ಞಾನದ ವಿವರಗಳಿಂದ ಆತ್ಮನಿಗೇನಾಗಬೇಕಾಗಿದೆ? ಆತ್ಮ, ಈ ದೇಹವನ್ನು ಬಿಟ್ಟಮೇಲೆ ಏನಾಗುವುದು ಎನ್ನುವ ವಿಚಾರ ಹೇಗಿದ್ದರೇನು?ಅದರಿಂದ ಆತ್ಮಕ್ಕೇನು? ಜಾತಿ, ನೀತಿ, ಸಮಾಜ ಮತ್ತು ವರ್ಗ ಭೇಧದಿಂದ ಅದಕ್ಕೆ ಏನಾಗಬೇಕು? ಇವಾವುಗಳಿಂದಲೂ ಆತ್ಮನಿಗೆ ಯಾವ ರೀತಿಯ ಧಕ್ಕೆಯೂ ಉಂಟಾಗುವುದಿಲ್ಲ ಎಂದು ಹೊರಗಿನ

ರೂಪ ಮತ್ತು ಅದರೊಳಗಿರುವ ಚೇತನದ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗುಣ ರೂಪ ಮತ್ತು ಆಕಾರಗಳನ್ನು ಹೊಂದಿರುವ ಈ ಜಗತ್ತಿನ ವಸ್ತುಗಳನ್ನು ಪರೀಕ್ಷಿಸಿ ನೋಡುವುದು, ಅವುಗಳ ಗುಣಗಳನ್ನು ವಿಶ್ಲೇಷಿಸುವುದು ಮತ್ತು ಅವುಗಳಿಂದ, ಬೇರೆ ಬೇರೆ ರೂಪಗಳನ್ನು ಹೊಂದಿರುವ ಜೀವಿಗಳ ಜೀವನದ ಮೇಲೆ ಆಗುವ ಪ್ರಭಾವವನ್ನು ಅಳೆಯುವುದು, ಭೌತವಿಜ್ಞಾನದ ಕೆಲಸ. ಆದರೆ ಯಾವ ಗುಣ, ರೂಪ ಮತ್ತು ಆಕಾರಗಳನ್ನೂ ಹೊಂದಿರದ ಮತ್ತು ಕೇವಲ ಶುದ್ಧ ಸತ್ವವನ್ನು ತನ್ನ ಗುಣವಾಗಿಟ್ಟುಕೊಂಡಿರುವ 'ಆತ್ಮ' ಈ ಭೌತ ವಿಜ್ಞಾನದ ಪರೀಕ್ಷೆಗಳಿಗೆ ಅತೀತವಾಗಿ ನಿಲ್ಲುತ್ತದೆ. ಆದ್ದರಿಂದ ಭೌತ ವಿಜ್ಞಾನದಿಂದ 'ಆತ್ಮ'ಕ್ಕೇನೂ ಆಗಬೇಕಿಲ್ಲ ಎನ್ನುತ್ತಾರೆ ಡಿವಿಜಿಯವರು.



ಈ 'ಆತ್ಮ' ದೇಹವನ್ನು ಹೊಂದಿದೆ. ಹಾಗೆ ಹೊಂದಿದ್ದಷ್ಟು ದಿನ ಆ ದೇಹದೊಂದಿಗೆ ಈ ಜಗತ್ತಿನ ಜೀವನ. ಕಾಲಾನುಕಾಲಕ್ಕೆ ಈ ದೇಹವನ್ನು ಬಿಟ್ಟು ಪ್ರೇತವಾಗಿ ಹೋಗುತ್ತದೆ. ಆದರೆ ಈ ದೇಹದಲ್ಲಿರುವಾಗ, ಸತ್ತ ನಂತರದ ಕಥೆಯೋ ಅಥವಾ ಈ ದೇಹಕ್ಕೆ ಬರುವ ಮುನ್ನಿನ ಕಥೆಯೋ, ಇದ್ಯಾವುದೂ ಆತ್ಮಕ್ಕೆ ಬೇಕಾಗಿಲ್ಲ. ಹಿಂದಿನ ದೇಹದಲ್ಲಿ ಸಂಚಯಿಸಿದ ಕರ್ಮಶೇಷಗಳನ್ನು ಇಂದಿನ ದೇಹಕ್ಕೆ ಮತ್ತು ಇಂದಿನ ದೇಹವನ್ನು ಬಿಡುವಾಗ ಉಳಿದಿರುವ ಕರ್ಮವನ್ನು ಮುಂದಿನ ದೇಹಕ್ಕೆ ತಲುಪಿಸುವ 'ರವಾನೆ ಗುಮಾಸ್ತೆ'(dispatch clerk)ಯ ಕೆಲಸವನ್ನು, ತನಗೆ ಏನನ್ನೂ ಅಂಟಿಸಿಕೊಳ್ಳದೆ, ಕೇವಲ ಸಾಕ್ಷೀ ಭಾವದಿಂದ ಮಾಡುತ್ತದೆ. ಅಷ್ಟೇ ಅಲ್ಲ ನಮ್ಮ ಮನಸ್ಸು, ಬುದ್ಧಿ, ದೇಹಗಳು, ಈ ಜಗತ್ತಿನ ಈ ಜೀವನದಲ್ಲಿ ಅನುಸರಿಸುವ ಜಾತಿ, ನೀತಿ, ಸಮಾಜ ಮತ್ತು ವರ್ಗಭೇಧಗಳಿಗೆಲ್ಲಾ ಅತೀತವಾಗಿ ನಿಂತುಕೊಳ್ಳುವುದರಿಂದ, ಆತ್ಮಕ್ಕೆ ಇವಾವುದರ ನಂಟೂ ಅಂಟುವುದಿಲ್ಲ.

ಹೀಗೆ ಇಲ್ಲಿ ಇದ್ದರೂ ಮತ್ತು ಇಲ್ಲಿ ಇರುವುದಕ್ಕೆ ಎಂದರೆ ನಮ್ಮ ಅಸ್ತಿತ್ವಕ್ಕೆ ಕಾರಣವಾದ ಚೇತನಾ ಸ್ವರೂಪವಾದ ಆತ್ಮ, ಇಲ್ಲಿ ಇರುವು ಯಾವುದಕ್ಕೂ ಅಂಟದೆ, ನಿತ್ಯವಾಗಿ ಮತ್ತು ಶುದ್ಧವಾಗಿ ಇರುತ್ತದೆ ಎನ್ನುವ ವಿಷಯವನ್ನು ಮನಗಂಡು ನಾವು 'ಆತ್ಮ' ಎಂದು ಅರಿತು ಬಾಳಿದರೆ ಸುಖ ಮತ್ತು ಆನಂದ. ಹಾಗಲ್ಲದೆ ನಾವು, ನಮ್ಮನ್ನು ಈ ಜಗತ್ತಿನಲ್ಲಿರುವ ರೂಪ ಎಂದು ಭಾವಿಸಿ ಈ ಜಗತ್ತಿನ ಎಲ್ಲಕ್ಕೂ ಅಂಟಿಕೊಂಡರೆ ದುಃಖ, ಆಯ್ಕೆ ಮಾಡುವ ಸ್ವಾತಂತ್ರ್ಯ ನಮಗೆ ಕರುಣಿಸಿದ್ದಾನೆ ಆ ಪರಮಾತ್ಮ, ಹಾಗಾಗಿ ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 897**

**ಶೂನ್ಯವೆಲ್ಲವುವೆಂಬೊಡಂತೆನಿಸುವುದದೇನು? ।**

**ಅನ್ಯವಿಲ್ಲೆನುವರಿವದೊಂದಿರ್ಪುದರ್ಳಲ್ತೆ? ॥**

**ಚಿನ್ಮಯವದನೆ ನೀಂ ಸತ್ಯವೆಂದಾಶ್ರಯಿಸು ।**

**ಶೂನ್ಯವಾದವೆ ಶೂನ್ಯ – ಮಂಕುತಿಮ್ಮ ॥**

ಶೂನ್ಯವೆಲ್ಲವುವೆಂಬೊಡಂತೆನಿಸುವುದದೇನು? =ಶೂನ್ಯವು+ಎಲ್ಲವುಂ+ಎಂಬೊಡೆ+ಅಂತೆ+ ಅನಿಸುವುದು+ಅದೇನು?
ಅನ್ಯವಿಲ್ಲೆನುವರಿವದೊಂದಿರ್ಪುದಲೆ=ಅನ್ಯವು+ಇಲ್ಲ+ಎನುವ+ಅರಿವು+ಅದೊಂದು+ಇರ್ಪುದು+ಅಲ್ತೆ.
ಚಿನ್ಮಯವದನೆ=ಚಿನ್ಮಯವು+ಅದನೆ, ಸತ್ಯವೆಂದಾಶ್ರಯಿಸು=ಸತ್ಯವು+ಎಂದು+ಆಶ್ರಯಿಸು,
ಎಂಬೊಡೆ=ಎನ್ನುವಂತಾದರೆ, ಶೂನ್ಯ= ಏನೂ ಇಲ್ಲದ ಸ್ಥಿತಿ, ಇರ್ಪುದು=ಇದೆ, ಅಲೆ=ಅಲ್ಲವೇ?

ದೇವರಿಲ್ಲ, ಎಲ್ಲವೂ ಶೂನ್ಯ ಎಂದು ನೀನು ಹೇಳುವುದಾದರೆ, ಹಾಗೆ ಹೇಳುವುದಕ್ಕೆ ನಿನಗೆ ಆ ಅರಿವಿಲ್ಲದೆ, ಹೇಗೆ ಅನಿಸುತ್ತದೆ? ದೇವರು ಇಲ್ಲ ಎಂದು ಹೇಳುವ ಅರಿವಾದರೂ ಅಲ್ಲಿ ಇದೆಯಲ್ಲ. ಆ ಅರಿವೇ ಸತ್ವ, ಚಿನ್ಮಯ ಸ್ವರೂಪವಾದ ಪರಮಾತ್ಮ. ಹಾಗಾಗಿ ನೀನು ಅದನ್ನು ಆಶ್ರಯಿಸು. ಶೂನ್ಯ ಎಂದು ಹೇಳಲು, ಒಂದು ವ್ಯಕ್ತಿ ಮತ್ತು ಶೂನ್ಯವೆಂದು ಹೇಳುವ ಅರಿವು, ಎಂದರೆ ಜ್ಞಾನವು, ಇದೆಯಾದ್ದರಿಂದ ಶೂನ್ಯವಾದವೇ, 'ಶೂನ್ಯ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ದೇವರಿಲ್ಲ ಎಂದು ಹೇಳುವವರದು ನಿರೀಶ್ವರ' ವಾದ. ಎಂದರೆ ದೇವರು ಎಂಬುವುದು ಇಲ್ಲ ಎಂದು ಅವರ ಅಭಿಪ್ರಾಯ. ಕಾಣುವ ಪ್ರಯತ್ನವನ್ನು ಮಾಡದೆ, ಕಣ್ಣಿಗೆ ಕಾಣದ್ದು 'ಇಲ್ಲ'ವೆಂದು ವಾದಿಸುವ ಜನ ಅವರು. ಆದರೆ ಮಾನ್ಯ ಗುಂಡಪ್ಪನವರು ಕೇಳುವ ಪ್ರಶ್ನೆ ಬಹಳ ಸೂಕ್ತವಾಗಿದೆ. 'ಹಾಗೆ, ದೇವರು ಇಲ್ಲ' ಎಚಿದು ಎನ್ನುವುದಾದರೆ, ಹಾಗೆ

ಎನ್ನುವವರು ಯಾರು? ಮತ್ತು ಹಾಗೆ ಎನಿಸುವುದು ಯಾರಿಗೆ? "ಎನ್ನುವ ಪ್ರಶ್ನೆಗಳಿಗೆ ನಮಗೆ ಬಹಳ ಸೂಕ್ತವಾದ ಉತ್ತರಗಳು ಸಿಗುತ್ತವೆ. ನಿರೀಶ್ವರವಾದಿಗೆ 'ಏನೂ ಇಲ್ಲ, ಎಂದರೆ ಎಲ್ಲವೂ ಶೂನ್ಯ' ಎಂದು ಅನಿಸಬೇಕಾದರೆ ಹಾಗೆ ಅನ್ನಿಸುವ 'ಅವನಿರ'ಬೇಕು ಮತ್ತು ಹಾಗೆ ಅನಿಸಬೇಕಾದರೆ ಅಂತಹ 'ಅರಿವು' ಇರಬೇಕು, ಅಲ್ಲವೇ? ಹಾಗೆ ಅವನೂ ಇದ್ದು, ಅವನಿಗೆ ದೇವರಿಲ್ಲ ಎಂಬ 'ಅರಿವೂ' ಇದ್ದರೆ, ಶೂನ್ಯ ಹೇಗಾಗುತ್ತದೆ. ಹಾಗಾಗಿ ಶೂನ್ಯವೆಂಬುದೇ ಇಲ್ಲ, ಎನ್ನುತ್ತಾರೆ ಮಾನ್ಯ ಡಿವಿಜಿಯವರು.

ನಿರೀಶ್ವರವಾದಿಗೆ 'ದೇವರಿಲ್ಲ' ಎಂದು ಅನಿಸುವ ಅನಿಸಿಕೆಗೆ ಕಾರಣವೇ ಆ ಶುದ್ಧ ಜ್ಞಾನ. ಆ ಜ್ಞಾನವೇ ಪರಮಾತ್ಮನ ಪ್ರತೀಕ. ಆದ್ದರಿಂದಲೇ 'ಚಿನ್ಮಯವದನೆ ನೀಂ ಸತ್ಯವೆಂದಾಶ್ರಯಿಸು' ಎಂದು ಚಿತ್ ಸ್ವರೂಪವಾದ ಶುದ್ಧ ಜ್ಞಾನವೇ ಅದು, ಅದನ್ನು ನೀನು ಆಶ್ರಯಿಸು ಎಂದು ಆದೇಶ ನೀಡಿದ್ದಾರೆ ಮಾನ್ಯ ಡಿವಿಜಿಯವರು. ನಂಬುವವನು ಮತ್ತು ನಂಬದವನು, ಎಲ್ಲರಿಗೂ ಆಶ್ರಯವೇ, ಪರತತ್ವ. ಅದರಲ್ಲಿ ನಿಂತು, ಅದೇನೆಂದು ಅರಿಯದೆ, 'ಅದು ಇಲ್ಲ' ಎಂದರೆ ಹೇಗೆ ಸಾಧ್ಯ?. ಚಾರ್ವಾಕರೆಂದು ಕರೆಯಲ್ಪಡುತ್ತಿದ್ದ, ಈ ನಿರೀಶ್ವರವಾದಿಗಳು ಹಿಂದೆಯೂ ಇದ್ದರು, ಇಂದೂ ಇದ್ದಾರೆ. ಅವರಿರುವುದೂ ಸಹ, ಪರಮಾತ್ಮನ ಲೀಲಾವಿನೋದದ ಒಂದು ಪಾತ್ರವೆಂದು ನಾವು ತಿಳಿಯಬೇಕು.

'ಇಲ್ಲ' ಎನ್ನುವ ವ್ಯಕ್ತಿ ತಾನಿರುವುದು ಎಲ್ಲಿ ಮತ್ತು ಯಾವುದರಲ್ಲಿ ಎಂದು ಯೋಚಿಸುವುದಿಲ್ಲ ಅಥವಾ ಯೋಚಿಸಲು ನಿರಾಕರಿಸುತ್ತಾನೆ. ಅದು ಮೂರ್ಖತನ. ಜಗತ್ತಿನ ಬೇಧಗಳಿಗೆ ಅತೀತನಾಗಿ, ಶುದ್ಧಸತ್ವಾತ್ಮಕವಾದಂತಹ, ಜ್ಞಾನಸ್ವರೂಪವಾದ ಆ ಪರತತ್ವವನ್ನು, ಆಶ್ರಯಿಸಬೇಕು. ಕುತರ್ಕ ಮತ್ತು ವಿತಂಡ ವಾದಗಳನ್ನು ತೊರೆದು ನಿರ್ಮಲ ಮನಸ್ಸಿನಿಂದ, ಅಹಂಕಾರ ರಹಿತವಾದ ಮನಸ್ಸಿನಿಂದ ಚಿನ್ಮಯವಾದ ಆ 'ಜ್ಞಾನವನ್ನು' ಆಶ್ರಯಿಸಬೇಕು. ಅದೇ ಆಧ್ಯಾತ್ಮ ಸಾಧನೆ.

28ಸಂ

| ಕಗ್ಗರಸಧಾರೆ | ಸಂಕೇತಮಯ ಲೋಕ 894 – 898 |
|---|---|

**ಮುಕ್ತಕ - 898**

**ನರನರೀ ಚಿತ್ರಗಳು, ನಾಟಕದ ಪಾತ್ರಗಳು |**

**ಪರಿಪರಿಯ ವೇಷಗಳು, ವಿವಿಧ ಭಾಷೆಗಳು ||**

**ಬರುತಿಹುವು, ಬೆರೆಗೆನಿಸಿ ಮೆರೆಯುವುವು, ತೆರಳುವುವು |**

**ಮೆರವಣಿಗೆಯೋ ಲೋಕ – ಮಂಕುತಿಮ್ಮ**

ಬೆರೆಗೆನಿಸಿ=ಬೆರಗು+ಎನಿಸಿ, ಬೆರಗು= ಆಶ್ಚರ್ಯ.

ಈ ಜಗತ್ತನ್ನು ಒಂದು ಮೆರವಣಿಗೆ ಎಂದು ಹೇಳಿ, ಈ ಮೆರವಣಿಗೆಯಲ್ಲಿರುವುದು, ಪ್ರಕೃತಿ ಮತ್ತು ಪುರುಷರ ಚಿತ್ರಗಳು, ಕೇವಲ ನಾಟಕಕದ ಪಾತ್ರಗಳಂತೆ ಇವೆ. ಇವು ಆಡುವ ಭಾಷೆಗಳು ಬೇರೆ ಬೇರೆ, ಇವರು ತೊಡುವ ವೇಷಗಳು ಪರಿಪರಿಯಾದದ್ದು, ಈ ಪಾತ್ರಗಳು ಬರುತ್ತವೆ, ಆ ಪಾತ್ರದಲ್ಲಿ ಮೆರೆಯುತ್ತವೆ ಮತ್ತು ನೇಪತ್ಯಕ್ಕೆ ಸರಿದು ಹೋಗುತ್ತವೆ. ಪರಮಾತ್ಮ ಸೃಷ್ಟಿಯಾದ ಈ ಲೋಕ ಒಂದು ಮೆರವಣಿಗೆಯಂತೆ ಅನಿಸುತ್ತದೆ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವೂ ಸಹ ಆ ಮೆರವಣಿಗೆಯ ಒಂದು ಪಾತ್ರವಷ್ಟೇ!!! ಪರಮಾತ್ಮನ ಸೃಷ್ಟಿಯ ಎಲ್ಲದರ ನಿರಂತರ ಮೆರವಣಿಗೆ. ಕೋಟಿ ಕೋಟಿ ವೈವಿಧ್ಯತೆಯಿಂದ ಕೂಡಿದ ರೂಪಗಳನ್ನು ಹೊತ್ತ ಜೀವಿಗಳ, ಸಾವಿರಾರು ವಿಧವಾದ ಭಾಷೆಗಳನ್ನು ಆಡುವ ಜೀವಿಗಳ, ಆ ಭಾಷೆಯಲ್ಲೇ ಕ್ಷಣಕ್ಷಣವೂ ಬದಲಾಗುವ ಭಾವಗಳನ್ನು ಹೊತ್ತ ಮತ್ತು ವ್ಯಕ್ತಪಡಿಸುವ ಜೀವಿಗಳ, ಮನುಷ್ಯನಂತಹ ವಿಕಸಿತ ಪ್ರಾಣಿಗಳ, ತಮ್ಮ ಮಿತಿಗಳಲ್ಲೇ ಜೀವಿಸುವ ಜೀವಿಗಳ, ಗಗನದಲ್ಲಿ ಹಾರಾಡುವ ಚಿತ್ರವಿಚಿತ್ರವಾದ ವಿನ್ಯಾಸಗಳಲ್ಲಿ ಸೃಷ್ಟಿಸಲ್ಪಟ್ಟ ಮತ್ತು ನಯನ ಮನೋಹರವಾದ ಬಣ್ಣಗಳನ್ನು ಧರಿಸಿರುವ ಪಕ್ಷಿಗಳ, ಭೂಮಿಯ ಮೇಲಿನ ಕೀಟಗಳ, ಹಾವುಗಳ, ಕ್ರೂರ ಮತ್ತು ಸಾಧು ಸ್ವಭಾವದ ಪ್ರಾಣಿಗಳ ಒಂದು ಸುಂದರವಾದ ಮೆರವಣಿಗೆ:

ಈ ಮೆರವಣಿಗೆಗೆ ಮೆರಗು ಕೊಡುವಂತಹ, ಹಲ ಕೋಟಿ ವೈವಿಧ್ಯತೆಯಿಂದ ಕೂಡಿದ, ತೀರ ಸಣ್ಣದರಿಂದ ಹಿಡಿದು ಬೃಹತ್ತಾಗಿರುವ, ಚಿತ್ರವಿಚಿತ್ರ ಅಕಾರಗಳಿಂದ, ಸುಂದರ ವಿನ್ಯಾಸಗಳಿಂದ, ಆಹ್ಲಾದವೀಯುವ ಸುಗಂಧಗಳಿಂದ ಕೂಡಿದ ಹೂಗಳಿಂದ, ಅನ್ಯ ಜೀವಿಗಳಿಗೆ ಆಹಾರವಾಗುವ ರುಚಿರುಚಿಯಾದ ಹಣ್ಣುಗಳಿಂದ, ಬಹೂಪಯೋಗಿಯಾಗಿರುವ, ಗಿಡ, ಮರ, ಬಳ್ಳಿಗಳ ಸಸ್ಯವರ್ಗವೂ ಇದೆ. ಸ್ಥಿರ ಜೀವಿಗಳಾದ ಈ ಗಿಡಮರಗಳ ಮತ್ತು ಚರ ಜೀವಿಗಳಾದ ಅನ್ಯ ಜೀವಿಗಳ ಅಸ್ತಿತ್ವದ ಪರಸ್ಪರ ನಿರ್ಭರತೆಯೇ ಈ ಸೃಷ್ಟಿಯ ಒಂದು ಸುಂದರ ಆಯಾಮ.

ಇಚಿತಹ ಒಂದು ಸುಂದರ, ಅದ್ಭುತ ಮತ್ತು ನಿರಂತರ ಮೆರವಣಿಗೆಯಲ್ಲಿ ನಮ್ಮದು ಒಂದು ಪಾತ್ರ. ಈ ಮೆರವಣಿಗೆಯನ್ನು ನೋಡುವ ಮತ್ತು ಅದರ ಒಂದು ಪಾತ್ರವನ್ನು ವಹಿಸುವ ಸೌಭಾಗ್ಯ ನಮ್ಮದು. ನಮ್ಮನ್ನೂ ಸೇರಿಸಿ, ಈ ಮೆರವಣಿಗೆಯ ಎಲ್ಲಾ ಪಾತ್ರಗಳೂ ಮತ್ತು ಈ ಮೆರವಣಿಗೆ ಇರಬೇಕಾದ ವಿನ್ಯಾಸವೂ ಆ ಪರಮಾತ್ಮನ ಸೃಷ್ಟಿ, ಪರಮಾತ್ಮ, ತನ್ನ ಸಂತೋಷಕ್ಕೆ ತಾನೇ ತನ್ನಿಂದಲೇ ಸೃಷ್ಟಿಸಿಕೊಂಡಂತಹ ಒಂದು ಸುಂದರ ಮೆರವಣಿಗೆ, ಇಲ್ಲಿಗೆ ಬಂದು, ಇಲ್ಲಿ ಇದ್ದು, ಇದನ್ನು ಅನುಭವಿಸಿ, ಹೊಸತಿಗೆ ತಾವು ಮಾಡಿಕೊಡುತ್ತಾ ಹಳತು ನಿರ್ಗಮಿಸುತ್ತಾ ಇರುತ್ತದೆ, ತನ್ನ ಹೊಸತನವನ್ನು, ಆಕರ್ಷಣೆಯನ್ನು ಸದಾ ನವನವೀನವಾಗಿ ಇಟ್ಟುಕೊಂಡಿರುವ ಈ ಪರಮಾತ್ಮನ,ಮೆರವಣಿಗೆಯಲ್ಲಿ ನಾವು ನಮ್ಮ ವಿಧಿತ ಪಾತ್ರವನ್ನು ಚೊಕ್ಕವಾಗಿ ನಿರ್ವಹಿಸಿ ನಿರ್ಗಮಿಸಿದರೆ ನಮ್ಮ ಜೀವನ ಸಾರ್ಥಕವಾಗುತ್ತದೆ.

**ಮುಕ್ತಕ – 899**

**ಜಗದೀ ಜಗತ್ತ್ವವನು, ಮಾಯಾವಿಚಿತ್ರವನು |**

**ಒಗೆದಾಚೆ ಬಿಸುಡೆಲ್ಲ ಕರಣವೇದ್ಯವನು ||**

**ಮಿಗುವುದೇಂ? ರೂಪಾಖ್ಯೆಯೊಂದುಮಿಲ್ಲದ ವಸ್ತು |**

**ಹೊಗಿಸಾ ಕಡೆಗೆ ಮತಿಯ – ಮಂಕುತಿಮ್ಮ ||**

ಜಗದೀ=ಜಗದಈ, ಒಗೆದಾಚೆ=ಒಗೆದು+ಆಚೆ, ರೂಪಾಖ್ಯೆಯೊಂದುಮಿಲ್ಲದ=ರೂಪ+ಆ+ಒಂದು+ಇಲ್ಲದ, ಹೊಗಿಸಾ=ಹೊಗಿಸು+ಆ ಕರಣ=ಉಪಕರಣ- ಇಂದ್ರಿಯಗಳು, ಮತಿಯ=ಹೊಗಿಸು

ಜಗತ್ವದಿಂದ(ಜಗತ್ ತತ್ವ) ಆಗಿರುವ ಈ ಜಗತ್ತಿನ ಚಿತ್ರ ವಿಚಿತ್ರವಾದ ಮಾಯಾ ಚಿತ್ರವನ್ನು ತೆಗೆದು ಬಿಸಾಡು, ನಿನಗೆ ಈ ಜಗತ್ತಿನ ಅರಿವುಂಟಾಗಿಸುವ ಎಲ್ಲ ಉಪಕರಣಗಳನ್ನೂ ಒಗೆಯಾಚೆ. ನಂತರ ಮಿಗುವುದು ಏನು? ರೂಪ, ಹೆಸರು ಮುಂತಾದವುಗಳಾವುದೂ ಇಲ್ಲದ ಒಂದು ವಸ್ತು. ಅದನ್ನು ಅರಿಯಲು ನಿನ್ನ ಬುದ್ಧಿಯನ್ನು ಆ ಕಡೆ ತಿರುಗಿಸು ಎಂದು ಉಪದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

ನಾವು ಈ ಜಗತ್ತಿನಲ್ಲಿ ಇದ್ದೇವೆ ಮತ್ತು ಈ ಜಗತ್ತಿನಲ್ಲಿ ಕಾಣುವುದೆಲ್ಲವನ್ನೂ ಕಾಣುತ್ತಿದ್ದೇವೆ ಮತ್ತು ಕೇಳುವುದೆಲ್ಲವನ್ನೂ ಕೇಳುತ್ತಿದ್ದೇವೆ ಎಂದರೆ, ನಮ್ಮ ಇಂದ್ರಿಯಗಳ ಮೂಲಕ ಈ ಜಗತ್ತನ್ನು ನೋಡುತ್ತಿದ್ದೇವೆ ಮತ್ತು ಅನುಭವಿಸುತ್ತಿದ್ದೇವೆ ಎಂದು ಅರ್ಥ, ಶುದ್ಧ ಸತ್ವದ ಸಹಾಯದಿಂದ ಬೆಳಗುವ ಪ್ರತಿಯೊಂದನ್ನೂ ನಾವು ರೂಪ ಮತ್ತು ಹೆಸರುಗಳ ಗುರುತನ್ನು ಹಿಡಿದು ನೋಡುತ್ತಿದ್ದೇವೆ. ಇಲ್ಲಿ ಕಾರ್ಯಮಾತ್ರ ಕಾಣುತ್ತಿದೆ, ಕಾರಣವಲ್ಲ. ಶಬ್ದ ಸ್ಪರ್ಶ, ರೂಪ ರಸ ಗಂಧಗಳ ಅನುಭವ ನಮಗೆ ನಮ್ಮ ಇಂದ್ರಿಯಗಳ ಮೂಲಕ ಆಗುತ್ತದೆ. ಅವುಗಳನ್ನೇ 'ಕರಣ' ಎಂದರು ಮಾನ್ಯ ಗುಂಡಪ್ಪನವರು.

282

| | |
|---|---|
| ಕಗ್ಗರಸಧಾರೆ | ಮೋಕ್ಷಾತುರ ೩೨೨ - |
| ೨ಸ೦೩ | |

ಚಿತ್ರವಿಚಿತ್ರವಾದ ಈ ಜಗತ್ತನ್ನು ನೋಡಲು ನಿನಗೆ ಒದಗುವ 'ಕರಣ'ಗಳನ್ನು ಒಗೆದುಬಿಡು, ಬಿಸಾಡಿಬಿಡು ಎನ್ನುತ್ತಾರೆ ಡಿವಿಜಿ. ಎಂದರೆ ನಮ್ಮ ಇಂದ್ರಿಯಾನುಭವದ ಆಚೆ ಹೋಗು ಎಂದು ಆದೇಶವನ್ನಿತ್ತಿದ್ದಾರೆ. ಹಾಗೆ ನಮ್ಮ ಎಲ್ಲಾ 'ಕರಣ'ಗಳ ಕೆಲಸವನ್ನೂ ಸ್ಥಬ್ಧವಾಗಿಸಿ, ಶಾಂತವಾಗಿ ಅಂತರ್ಮುಖಿಗಳಾದರೆ, ಆಗ ನಮ್ಮ ಅನುಭವಕ್ಕೆ ಬರುವುದು ಕೇವಲ ರೂಪ ಅಥವಾ ಆಕಾರವಿಲ್ಲದ ಮತ್ತು ಯಾವ ಹೆಸರನ್ನೂ ಹೊಂದಿರದ ಆ ಶುದ್ಧ ಸತ್ವವೇ ಎನ್ನುತ್ತಾರೆ. ನಿನಗೆ ಅದನ್ನು ಅನುಭವಿಸಬೇಕಾದರೆ 'ಹೊಗಿಸಾ ಕಡೆಗೆ ಮತಿಯ' ಎಂದವರು ಹೇಳುವಂತೆ ನಮ್ಮ ದೇಹ,

ಮನಸ್ಸು, ಬುದ್ಧಿಗಳನ್ನು, ತಮ್ಮ ಜಗತ್ಸಂಬಂಧವಾದ ಎಲ್ಲಾ ಕೆಲಸಗಳನ್ನೂ ನಿಲ್ಲಿಸಿ ಆ ಪರತತ್ವದೆಡೆಗೆ ತಿರುಗಿಸಿದರೆ ಅಲ್ಲಿ ನಮಗೆ ಶುದ್ಧ ಸತ್ವವೇ ಕಾಣುತ್ತದೆ ಎನ್ನುವುದು 'ತತ್ಯ'

ಕಣ್ಣು ಬಿಟ್ಟರೆ ಸೆಳೆತಗಳು, ಪ್ರತಿ ಶಬ್ದವೂ ಒಂದು ಸೆಳೆತ. ಮನಸ್ಸಿನಲ್ಲಿ ಮೂಡುವ ಚಿತ್ರ ವಿಚಿತ್ರ ಆಲೋಚನೆಗಳನ್ನುಂಟು ಮಾಡುತ್ತವೆ. ಈ ನೋಡುವ ಮತ್ತು ಕೇಳುವ ಕರಣಗಳು. ಇವುಗಳನ್ನು ನಿರ್ಭಂಧಿಸುವುದು ಅಷ್ಟು ಸುಲಭವಲ್ಲ. ಸಾಧನೆಯಿಂದ ಹಿಡಿತಕ್ಕೆ ತಂದುಕೊಂಡರೆ ಆಗ ಮನಸ್ಸನ್ನು ಬುದ್ಧಿಯನ್ನು ಶುದ್ಧಸತ್ವದ ಕಡೆಗೆ ತಿರುಗಿಸಿ ಅದರ ಬೆಳಕನ್ನು 'ಜ್ಞಾನ'ದ ರೂಪದಲ್ಲಿ ನಮ್ಮ ಒಳಕ್ಕೆ ತಂದುಕೊಳ್ಳಬಹುದು. ಪ್ರಯತ್ನಪಟ್ಟರೆ ಎಲ್ಲರಿಗೂ ಸಾಧ್ಯ. ಮೊದಲಿಗೆ ಅದನ್ನು ಪಡೆಯುವ ಪ್ರಭಲವಾದ ಇಚ್ಚೆಯುಂಟಾಗಬೇಕು, ಪೂರಕ ಪ್ರಯತ್ನವಾದಲ್ಲಿ, ಸಾಧನೆ ಖಂಡಿತ ಸಾಧ್ಯ.

**ಮುಕ್ತಕ – 9ಸಂಸಂ**

**ಸುತ್ತಮುತ್ತಣ ಗಾಳಿಯಾವಗಂ ನನ್ನೊಡಲ ।**
**ನೊತ್ತಿದೊಡಮಾ ಹೊರೆಯ ಮನಸು ಕಾಣದವೋಲ್ ॥**
**ಬಿತ್ತರದ ಲೋಕಭಾರವನಾತ್ಮನರಿಯದಿರೆ ।**
**ಮುಕ್ತಲಕ್ಷಣವದುವೆ – ಮಂಕುತಿಮ್ಮ ॥**

ಗಾಳಿಯಾವಗಂ=ಗಾಳಿ+ಆವಗಂ, ನನ್ನೊಡಲನೊತ್ತಿದೊಡಮಾ=ನಮ್ಮ+ಒಡಲನು+ಒತ್ತಿದೊಡಂ+ಆ ಲೋಕಭಾರವನಾತ್ಮನರಿಯದಿರೆ=ಲೋಕಭಾರವನು+ಆತ್ಮ+ಅರಿಯದಿರೆ,ಮುಕ್ತಲಕ್ಷಣವದುವೆ=ಮುಕ್ತ+ಲಕ್ಷಣವು+ಅದುವೆ. ಬಿತ್ತರದ=ವಿಸ್ತಾರವಾದ.

ಸುತ್ತಲಿನ ಗಾಳಿ ನಮ್ಮ ದೇಹವನ್ನು ಯಾವಾಗಲೂ ಒತ್ತಿ ಹಿಡಿದ್ದರೂ, ಹೇಗೆ ಅದರ ಭಾರ ನಮ್ಮ ಮನಸ್ಸಿಗೆ ಭಾಸವಾಗುವುದಿಲ್ಲವೋ, ಹಾಗೆಯೇ ಈ ವಿಸ್ತಾರವಾದ ಲೋಕದ ಭಾರ ನಮ್ಮ ಆತ್ಮಕ್ಕೆ ಭಾಸವಾಗದಿದ್ದರೆ ಅದೇ 'ಆತ್ಮ' ದ ಮುಕ್ತ ಸ್ಥಿತಿ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ

ಪಂಚಭೂತಗಳಲ್ಲಿ ಒಂದಾದ 'ಗಾಳಿ' ಎಲ್ಲೆಡೆಯಲ್ಲೂ ಇದೆ. ಗಾಳಿಯಿಲ್ಲದ ಸ್ಥಿತಿಗೆ ನಿರ್ವಾತ'ವೆಂದು ಹೆಸರು. ನಿರ್ವಾತದಲ್ಲಿ ಏನೂ ಇರಲು ಸಾಧ್ಯವಿಲ್ಲ. ಗಾಳಿ ನಮ್ಮ ಭೂಮಿಯ ಮೇಲೆ ಹತ್ತು ಸಾವಿರ ಕಿಲೋಮೀಟರ್ ತನಕ ವಿಸ್ತಾರವಾಗಿ ನಾಲ್ಕು ಸ್ಥರಗಳಲ್ಲಿ ವ್ಯಾಪಿಸಿಕೊಂಡಿದೆ. ಗಾಳಿಗೆ ಸರ್ವತೋಮುಖವಾದ ಒತ್ತಡವಿದೆ ಎಂದು ನಾವು ನಮ್ಮ ಪ್ರಾಥಮಿಕ ಶಾಲೆಯ ವಿಜ್ಞಾನದ ಪಾಠಗಳಲ್ಲಿ ಓದಿದ್ದೇವೆ. ಈ ಒತ್ತಡವಿರುವುದರಿಂದ ಮತ್ತು ಭೂಮಿಯ ಗುರುತ್ವದ ಬಲದಿಂದ ಈ ಭೂಮಿಯ ಮೇಲೆ ಜೀವಿಗಳು ಜೀವಿಸಲು ಸಾಧ್ಯ. ನಾವೂ ಸಹ ಅಂತಹ 'ಗಾಳಿಯ ಸರ್ವತೋಮುಖವಾದ ಒತ್ತಡಕ್ಕೆ ಒಳಗಾಗಿದ್ದರೂ ಅದನ್ನು ನಾವು ಅನುಭವಿಸುವುದಿಲ್ಲ ಅಥವಾ ಅದು ನಮಗೆ ಭಾಸವಾಗುವುದಿಲ್ಲ, ಅಲ್ಲವೇ? ಏಕೆಂದರೆ ಆ ಒತ್ತಡ ಸಹಜವಾದದ್ದು. ಆದರೆ ಬಿರುಗಾಳಿಯಲ್ಲಿ ನಿಂತರೆ ಆ ಒತ್ತಡದ ಅನುಭವವಾಗಬಹುದು. ಹಾಗಾಗಿ ಸಹಜ ಸ್ಥಿತಿಯಲ್ಲಿ ನಮಗೆ ಆ ಗಾಳಿಯ ಒತ್ತಡದ ಅನುಭವ ಆಗುವುದಿಲ್ಲ.

ಅದೇ ರೀತಿ 'ಆತ್ಮ ಪಂಚಭೂತಗಳಿಂದಾದ ಈ ದೇಹವನ್ನು ಹೊಕ್ಕು ಈ ಜಗತ್ತಿನಲ್ಲಿ ಜೀವಿಸುವಾಗ, ಮನಸ್ಸು ಮತ್ತು ಬುದ್ಧಿಗಳ ಸಂಸರ್ಗದಲ್ಲಿ ನಡೆವಾಗ ಬರುವ ಹಲವಾರು ಬದುಕಿನ ಒತ್ತಡಗಳನ್ನು ಅನುಭವಿಸುತ್ತದೆ. ಆ ಅನುಭವವೇ ಬದುಕಿನ ಜಂಜಾಟವೆನ್ನಬಹುದು. ಹುಟ್ಟಿದಾರಭ್ಯ ನಮ್ಮ ಆಸೆ ಆಕಾಂಕ್ಷೆಗಳ, ನೋವು ನಲಿವುಗಳ, ಪ್ರೀತಿ ಪ್ರೇಮಗಳ, ದ್ವೇಷಾಸೂಯಗಳ, ತೃಪ್ತಿ ಅತೃಪ್ತಿಗಳ, ನಡುವೆ ನಾವು ನಡೆಸುವ ಜೀವನದಲ್ಲಿ ಬರುವ ಪರಿಸ್ಥಿತಿಗಳ ಸರ್ವತೋಮುಖವಾದ ಒತ್ತಡವನ್ನು ಮತ್ತು ಆ ಒತ್ತಡದಿಂದ ಆಗುವ ನೋವು ನಲಿವುಗಳನ್ನು ಅಂತರಂಗಕ್ಕೆ ಇಳಿಸಿಕೊಳ್ಳದೆ, ನಿರ್ಲಿಪ್ತತೆಯಿಂದ ಇದ್ದರೆ, ಅದು ಆತ್ಮವನ್ನು ತಟ್ಟದೇ ಇದ್ದರೆ, ಆಗ ಆತ್ಮ 'ಮುಕ್ತ' ಸ್ಥಿತಿಯಲ್ಲಿರುತ್ತದೆ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಆ ಒತ್ತಡಗಳನ್ನು ಅಂತರಂಗಕ್ಕೆ ಇಳಿಸಿಕೊಂಡರೆ, ಅದು ನಮ್ಮ ಸ್ವಭಾವದೊಳಕ್ಕೆ ಇಳಿದು, ನಮ್ಮ ಗುಣವಾಗಿ ನಮ್ಮನ್ನು ಇನ್ನಷ್ಟು ಈ ಜಗತ್ತಿನೊಂದಿಗೆ ಅಂಟಿಕೊಳ್ಳಲು ಪ್ರೇರೇಪಿಸುತ್ತದೆ. ಹಾಗೆ ಅಂಟಿಕೊಂಡ ಗುಣಗಳು ಆತ್ಮಕ್ಕೆ ಹೊರೆಯಾಗುತ್ತದೆ ಮತ್ತು ಮುಕ್ತಿಗೆ ಮಾರಕವಾಗುತ್ತದೆ. ಆದರೆ, ನಮಗೆ ಆದ ಎಲ್ಲಾ ಅನುಭವಗಳನ್ನೂ ನಿರ್ಲಿಪ್ತತೆಯಿಂದ ಅನುಭವಿಸಿ, ಅದು ಒಳನುಗ್ಗದಂತೆ ತಡೆದು, ನಿವಾರಿಸಿಕೊಂಡರೆ, ದೇಹದಿಂದ ದೇಹಕ್ಕೆ

ಪ್ರಯಾಣಮಾಡುವ ' ಆತ್ಮದ ಪ್ರಯಾಣ ಹಗುರವಾಗುತ್ತದೆ. ಎಲ್ಲಿಯ ತನಕ ಮನಸ್ಸು ಬುದ್ಧಿ ದೇಹಗಳು ಈ ಜಗತ್ತಿನ ವಿಷಯಗಳಲ್ಲಿ ಅಂಟಿಕೊಂಡಿರುತ್ತದೆಯೋ ಅಲ್ಲಿಯ ತನಕ ಆತ್ಮ ಸೊರಗಿರುತ್ತದೆ. ಆದರೆ ಪ್ರಯತ್ನ ಪೂರ್ವಕವಾಗಿ ಆತ್ಮದ ಹೊರೆಯನ್ನು ಸಂಪೂರ್ಣವಾಗಿ ನಿವಾರಿಸಿದರೆ ಅದು 'ಆತ್ಮ' ವನ್ನು ' ಮುಕ್ತ' ಸ್ಥಿತಿಗೆ ಕೊಂಡು ಹೋಗುತ್ತದೆ. ಇದಕ್ಕೆ ಹಲವಾರು ಮಾರ್ಗಗಳನ್ನು ನಮಗೆ ನಮ್ಮ ಪೂರ್ವಜರು ತೋರಿದ್ದಾರೆ. ಆ ಮಾರ್ಗದಲ್ಲಿ ನಡೆದು ಪ್ರಯತ್ನ ಪಟ್ಟರೆ ನಮಗೂ ' ಮುಕ್ತಿ' ಸಿಗಬಹುದು.



ಕಗ್ಗರಸಧಾರೆ ಮೋಕ್ಷಾತುರ ೮೯೯-೯ಸ೦೩

**ಮುಕ್ತಕ – 9ಸ೦1**

**ನಾನು ನಾನೇ ನಾನೆನುತ್ತ ಕಿರಿಕೊಡದ ನೀರ್ |**

**ಗಾನಗೆಯ್ವುದು ಹೆಮ್ಮೆಯಿಂ ಕಡಲ ಮರೆತು ||**

**ನೂನದಿಂದಲ್ಲವೆನುವಬ್ಧಿಯೊಳಗದನಿರಿಸಿ |**

**ಮೌನವದು ಮಣ್ಕರಗಿ – ಮಂಕುತಿಮ್ಮ ||**

ನಾನೆನುತ್ತ=ನಾನು+ಎನುತ್ತ,ನೂನದಿಂದಲ್ಲವೆನುವಬ್ಧಿಯೊಳಗದನಿರಿಸೆ=ನೂನದಿಂದ+ಎಲ್ಲ+ಎನುವ+ಅಬ್ಧಿಯೊಳಗೆ+ಅದನು +ಇರಿಸೆ, ಮಣ್ಕರಗಿ=ಮಣ್ಣು+ಕರಗಿ

ನೂನ=ತತ್ವ(ನಾಣ್ಯ), ಅಬ್ಧಿ=ಕಡಲು, ಸಮುದ್ರ

ನೀರು ತುಂಬಿದ ಒಂದು ಚಿಕ್ಕ ಮಣ್ಣಿನ ಕೊಡ, ತನಗಿಂತ ಕೋಟ್ಯಾಂತರಪಟ್ಟು ಹಿರಿಯದಾದ, ಕಡಲನ್ನು ಮರೆತು, 'ನಾನು' ಎಂಬ ಭಾವದಿಂದ, ನಾನೇ ಎಲ್ಲವೂ, ಎನ್ನ ಬಿಟ್ಟರೆ ಬೇರಾವುದೂ ಇಲ್ಲವೆಂಬಂತಹ ಭಾವವನ್ನು ಬೀಗುತ್ತದೆ. ಆದರೆ ಆ ಕೊಡವನ್ನು ತೆಗೆದುಕೊಂಡು ಹೋಗಿ ಸಮುದ್ರದ ನೀರಿನಲ್ಲಿ ಮುಳುಗಿಸಿದರೆ ಆಗ ಆ ಕೊಡದ

ನೀರು ಕಡಲ ನೀರಲ್ಲಿ ಸೇರಿ, ಆ ಕೊಡದ ಮಣ್ಣು ಕರಗಿ ಮೌನವಾಗಿ 'ನಾನು' ಎಂಬ ಭಾವವಿಲ್ಲದಂತಾಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಕೊಡವೆನ್ನುವುದು ಒಂದು ರೂಪಕವಷ್ಟೇ. ಅದನ್ನು ನಮ್ಮ ದೇಹಕ್ಕೆ ಹೋಲಿಸಿಕೊಳ್ಳಬೇಕು ಮತ್ತು ಅದರೊಳಗಿನ ನೀರನ್ನು ನಮಗಿರುವ ಜ್ಞಾನಕ್ಕೆ ಹೋಲಿಸಿಕೊಳ್ಳಬೇಕು. ಹಾಗೆ ಜಗತ್ತಿನ ಅಗಾಧ ಜ್ಞಾನ ಸಾಗರದಲ್ಲಿ ನಮಗೆ ಗೊತ್ತಿರುವುದು ಕೇವಲ ಒಂದು ಬಿಂದುವಿನ ಒಂದು ಲಕ್ಷಪಾಲಿನಷ್ಟೂ ಅಲ್ಲ. ಆದರೆ, ನಾವು ಆ ಕೊಡದಂತೆ, ನಮಗಿರುವ ಅಲ್ಪಜ್ಞಾನವೇ 'ಮಹಾಜ್ಞಾನ'ವೆನ್ನುವಂತೆ ಬೀಗುತ್ತಾ ಅಹಂಕಾರ ತೋರುತ್ತಾ ಅನ್ಯರನ್ನು ವಿಮರ್ಶೆ ಮಾಡುತ್ತಾ, ಪರರನ್ನು ಕುಹಕವಾಡುತ್ತಾ, ಇರುತ್ತೇವೆ. ನಮ್ಮಂತಹವರನ್ನು ನೋಡಿಯೇ 'ಅಲ್ಪಜ್ಞಾನಿ ಮಹಾಗರ್ವಿ' ಎನ್ನುವ ಮಾತನ್ನು ಹೇಳಿರಬೇಕು. ಈ ಜಗತ್ತಿನ ಜ್ಞಾನಗಳು ಮತ್ತು ಈ ಜಗತ್ತನ್ನು ಸೃಜಿಸಿದ ಆ ಪರತತ್ವದ ಕುರಿತಾದ ಜ್ಞಾನ, ನಮಗೆ ಇದ್ಯಾವುದರ ಅರಿವಿಲ್ಲದಿದ್ದರೂ ನಾವು ಮಹಾಜ್ಞಾನಿಗಳ ರೀತಿ ಬೀಗುವುದನ್ನು ನೋಡಿದರೆ, ನಗು ಬರುತ್ತದೆ.

ಕೆಳಗಿರುವವನು ಏಣಿಯ ಸಹಾಯದಿಂದ ಮೇಲೆ ಹತ್ತ ಬಹುದು. 'ನಾನು ಮೇಲೆ ಇದ್ದೇನೆ' ಎನ್ನುವಂತಹ ಭ್ರಮೆಯಲ್ಲಿರುವವನು ಮೇಲೆ ಹತ್ತಲು ಸಾಧ್ಯವೇ ಇಲ್ಲ ಅಲ್ಲವೇ?. ನಾವೆಲ್ಲಾ ಅಂತಹ ಭ್ರಮೆಯಲ್ಲಿದ್ದೇವೆ. ನಮಗೆ ಏನು ಅರಿವಿದೆ ಮತ್ತು ನಮ್ಮ ಜ್ಞಾನವೆಷ್ಟು ಎಂದು ನಮಗೆ ಗೊತ್ತೇ ಇಲ್ಲ, ಆದರೂ, ನಾವು 'ಕೂಪಸ್ಥ ಮಂಡೂಕ' ಎಂದರೆ ಬಾವಿಯೊಳಗಿನ ಕಪ್ಪೆ, " ಭಾವಿಯನ್ನೇ ಜಗತ್ತೆಂದು, ಅದನ್ನು ಬಿಟ್ಟರೆ ಬೇರೇನೂ ಇಲ್ಲವೆನ್ನುವಂತಹ ಭಾವದಲ್ಲಿರುತ್ತದೆಯಲ್ಲ, ಹಾಗಿದ್ದೇವೆ . ಹಾಗೆ ನಾವೂ ಸಹ ಏನೂ ಅರಿಯದೆ, ಅರಿತ ಭ್ರಮೆಯಲ್ಲಿದ್ದರೆ, ಅರಿವು ಮೂಡುವುದು ಹೇಗೆ?

ನಮಗೇನು ಗೊತ್ತಿದೆಯೋ ಅದನ್ನು ದೃಢಪಡಿಸಿಕೊಳ್ಳಬೇಕು. ಮತ್ತಷ್ಟು ಅರಿಯುವ ಜಿಜ್ಞಾಸೆ ಮನದಲ್ಲಿ ಉಂಟಾಗಬೇಕು. 'ನನಗೇನೂ ಗೊತ್ತಿಲ್ಲ, ನಾನು ಖಾಲಿ ಕೊಡ' ಎನ್ನುವ ಸತ್ಯವನ್ನು ಅರಿತು ಒಪ್ಪಿಕೊಳ್ಳಬೇಕು. ಅರಿವಿನ ದಾಹವುಂಟಾಗಿ ನಮ್ಮ 'ಪಾತ್ರ ಶುದ್ಧಿ'ಯಾಗಬೇಕು. ನಂತರ ಸದ್ಗುರುವಿನ ಮಾರ್ಗದರ್ಶನದಲ್ಲಿ, ಸಜ್ಜನರ ಸಂಗದಲ್ಲಿದಲ್ಲಿದ್ದರೆ, ಶಾಂತವಾಗಿ ಮೌನವಾಗಿದ್ದರೆ 'ಜ್ಞಾನ' ತಾನೇ ತಾನಾಗಿ ಮೂಡುತ್ತದೆ. ಆಗ ನಮ್ಮ ಅಹಂಕಾರ 'ಕಡಲ ನೀರಲ್ಲಿ ಕರಗಿದ ಮಣ್ಣಿನ ಕೊಡ' ದಂತಾಗಿ ನಾವು ಈ ವಿಶ್ವ ಚೈತನ್ಯದಲ್ಲಿ ಒಂದಾಗಬಹುದು. ವಿನೀತನಾಗಿ ಅಹಂಕಾರನ್ನು ತ್ಯಾಗಮಾಡಿದರೆ, ಅಮೃತದಂತಹ ಜ್ಞಾನವನ್ನು ನಮ್ಮ ಕೊಡದೊಳಕ್ಕೆ ಬರಮಾಡಿಕೊಂಡರೆ, ಆಗ ನಾವೂ ಸಹ ಜ್ಞಾನವೆಂಬ ಕಡಲಲ್ಲಿ ಒಂದಾಗಿ, ಆನಂದವಾಗಿ ತೇಲಾಡಬಹುದು.

**ಮುಕ್ತಕ – 9ಸಂ2**

**ಮಲಗಿದೋದುಗನ ಕೈಹೊತ್ತಗೆಯು ನಿದ್ದೆಯಲಿ ।**

**ಕಳಚಿ ಬೀಳ್ವುದು; ಪಕ್ವಫಲವಂತು ತರುವಿಂ ॥**

**ಇಳೆಯ ಸಂಬಂಧಗಳು ಸಂಕಲ್ಪನಿಯಮಗಳು ।**

**ಸಡಿಲವುವು ಬಾಳ್ ಮಾಗೆ - ಮಂಕುತಿಮ್ಮ ॥**

ಮಲಗಿದೋದುಗನ=ಮಲಗಿದ ಓದುಗನ

ಕೈಯಲ್ಲಿ ಪುಸ್ತಕವನ್ನು ಹಿಡಿದು ಓದುತ್ತಾ ಮಲಗಿದವನಿಗೆ ನಿದ್ರೆ ಬಂದರೆ, ಹೇಗೆ ಕೈಯಲ್ಲಿರುವ ಪುಸ್ತಕ ಜಾರಿ ಬೀಳುತ್ತದೆಯೋ ಹಾಗೆಯೇ, ಪಕ್ವವಾದ ಫಲವೂ ಮರದಿಂದ ಬೀಳುತ್ತದೆ. ಈ ಜಗತ್ತಿನ ಸಂಬಂಧಗಳು, ಸಂಕಲ್ಪಗಳು ಮತ್ತು ನಿಯಮಗಳೂ ಸಹ ನಾವು ಅಂತರಂಗದಲ್ಲಿ ಪಕ್ವವಾದಂತೆ ಸಡಿಲವಾಗುವುವು, ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸ್ವಲ್ಪ ಹಾಗೇ ಒರಗಿ ಪುಸ್ತಕ ಓದುತ್ತಿರುವವನಿಗೆ ನಿದ್ರೆ ಬಂದೊಡನೆಯೇ, ಕೈಲಿದ್ದ ಪುಸ್ತಕ ಜಾರಿಬೀಳುವುದು. ಏಕೆಂದರೆ ಮಲಗಿ ನಿದ್ರೆಗೆ ಜಾರುವಾಗ, ನಮಗೆ ಪ್ರಾಪಂಚಿಕ ವಸ್ತುಗಳ ಮೇಲೆ ಹಿಡಿತ ಸಡಿಲವಾಗುತ್ತದೆ. ಹಾಗೆಯೇ ಒಂದು ಮರದಲ್ಲಿನ ಕಾಯಿ, ಇನ್ನೂ ಹಸಿಯಾಗಿ ಕಾಯಾಗಿ ಇರುವ ತನಕ ಗಿಡ ತೊಟ್ಟಿನ ಮೂಲಕ ಅದನ್ನು ಭದ್ರವಾಗಿ ಹಿಡಿದುಕೊಂಡಿರುತ್ತದೆ. ಆ ಕಾಯಿ ಮಾಗಿ ಹಣ್ಣಾದಾಗ, ತಾನೇ ತಾನಾಗಿ ಗಿಡದ ಹಿಡಿತದಿಂದ ಮುಕ್ತವಾಗಿ, ಕೆಳಗೆ ಬೀಳುತ್ತದೆ. ಇವೆರಡು ರೂಪಕಗಳನ್ನಿತ್ತು, ಅಂತರಂಗದಲ್ಲಿ ನಾವು ಪಕ್ವವಾಗುತ್ತಾ ಬಂದಂತೆ, ನಾವು ಅಂಟಿಕೊಂಡಿರುವ

ಈ ಜಗತ್ತಿನ ಸಂಬಂಧಗಳು ಮತ್ತು ಆ ಸಂಬಂಧಗಳ ನಿಯಮಗಳೂ ಸಹ, ಸಡಿಲವಾಗುತ್ತವೆ ಎನ್ನುವುದೇ ಈ ಮುಕ್ತಕದ ಹೂರಣ.

ಇಲ್ಲಿ ಪುಸ್ತಕವನ್ನು ಹಿಡಿದಿರುವವನು ವ್ಯಕ್ತಿ, ಅವನನ್ನು ಪುಸ್ತಕ ಹಿಡಿಲ್ಲವಲ್ಲ. ನಿದ್ರೆಯಿಂದ ಹಗುರಾದ ದೇಹ ಭಾರವಾದ ಪುಸ್ತಕವನ್ನು ಬಿಟ್ಟುಬಿಡುತ್ತದೆ. ಹಾಗೆಯೇ ಕಾಯನ್ನು ಗಟ್ಟಿಯಾಗಿ ತೊಟ್ಟಿನ ಬಲದಿಂದ





ಹಿಡಿದಿರುವುದು, ಮರ, ಕಾಯಿ ಮಾಗಿ ಹಣ್ಣಾದಾಗ, ತೊಟ್ಟು ಒಣಗಿ ಹಗುರಾಗಿ, ಹಣ್ಣಿನ ತೂಕ ಹೆಚ್ಚಾಗಿ ತೊಟ್ಟು ಅದನ್ನು ಹಿಡಿದಿಡಲಾರದೆ ಬಿಟ್ಟು ಬಿಡುತ್ತದೆ, ಅಲ್ಲವೇ? ಹಾಗೆಯೇ ಈ ಜಗತ್ತಿನ ವಸ್ತು ವಿಷಯ ಮತ್ತು ವ್ಯಕ್ತಿಗಳನ್ನು ನಾವು ಮೋಹ ಮತ್ತು ವ್ಯಾಮೋಹಗಳೆಂಬ ಅಂಟಿನಿಂದ ಹಿಡಿದುಕೊಂಡಿರುತ್ತೇವೆ. ಅವುಗಳಿಂದ ನಮಗೆ ನೋವು ಮತ್ತು ನಲಿವು, ದುಃಖ ಮತ್ತು ಸಂತೋಷ, ಬೇಸರ, ಜಿಗುಪ್ಸೆ ಮಮಕಾರ ಮತ್ತು ಮೋಹಗಳಂತಹ ಭಾವಗಳು ಉಂಟಾಗಿ ಅವು ನಮ್ಮನ್ನು ಈ ಜಗತ್ತಿನ ಎಲ್ಲಕ್ಕೂ ಅಂಟಿಸಿಬಿಡುತ್ತದೆ. ಇದು ಬಿಡಿಸಲಾರದ ಅಂಟು (gum)

ಆದರೆ ನಮಗೆ ಈ ಬದುಕಿನ ನಂಟಿನಿಂದ ಉಂಟಾದ, ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗಿನ ಸಂಬಂಧ ಮತ್ತು ಆ ಸಂಬಂಧಕ್ಕೆ ಇರುವ ನಿಬಂಧನೆಗಳಿಗೆ ಅಂಟಿಕೊಂಡಿರುವಷ್ಟು ದಿನ ಮಾತ್ರ ಇರುತ್ತದೆ. ಬದುಕಿನ ಅಶಾಶ್ವತೆಯನ್ನು ಅರಿತಾಗ ಮತ್ತು ಸೃಷ್ಟಿಕರ್ತನನ್ನು ಕುರಿತು ಚಿಂತನೆ, ಅರಿವು ಹೆಚ್ಚಾದಾಗ ಮನಸ್ಸು ಬುದ್ದಿ,

ಹಗುರಾಗಿ, ಈ ಜಗತ್ತಿನ ಬಂಧನಗಳೆಲ್ಲಾ ಭಾರವೆನಿಸಿದಾಗ ಅವು ತಾನೇ ತಾನಾಗಿ, ನಿದ್ದೆ ಬಂದಾಗ ಕೈಲಿದ್ದ ಪುಸ್ತಕ ಜಾರಿ ಬಿದ್ದಂತೆ, ಮಾಗಿದ ಹಣ್ಣು ಮರದ ಹಿಡಿತದಿಂದ ಬಿಡಿಸಿಕೊಂಡು ಕೆಳಗ ಬಿದ್ದಂತೆ, ಒಂದೊಂದಾಗಿ ಬೀಳುತ್ತಾ ಹೋಗುತ್ತವೆ. "ಸಡಿಲವುವು ಬಾಳ್ ಮಾಗೆ " ಎಂದು ಗುಂಡಪ್ಪನವರು ಹೇಳುವಂತೆ ನಮ್ಮ ಬಾಳು ಅನುಭವಗಳ ಪ್ರಭಾವಕ್ಕೊಳಗಾಗಿ ಸತ್ಯವನ್ನು ಮತ್ತು ತನ್ಮೂಲಕ ಸತ್ವವನ್ನೂ ಅರಿತು ಪಕ್ವವಾಗಬೇಕು. ಹಾಗೆ ಪಕ್ವವಾದಾಗ, ಮುಕ್ತಿಯ ಮಾರ್ಗದಲ್ಲಿ ನಮ್ಮ ನಡಿಗೆ ಆರಂಭವಾಗುತ್ತದೆ. ನಮ್ಮ ಬಾಳನ್ನು ಪರತತ್ವದ ಅಡಿದಾವರೆಗಳಲ್ಲಿ ಬಾಗಿಸಬೇಕು ಮತ್ತು ಬದುಕನ್ನು ಮಾಗಿಸಬೇಕು. ಹಾಗಾದಾಗ ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – ೯೦೩**

**ಮೋಕ್ಷದಾಶೆಯೊಳಮತ್ಯಾತುರತೆಯೊಳಿತಲ್ಲ ।**
**ಶಿಕ್ಷೆ ಬಹುಕಾಲ ನಡೆಯದೆ ಮೋಕ್ಷವಿಲ್ಲ ॥**
**ಲಕ್ಷ್ಯ ತಪ್ಪದೆ ಚರಿಸು ಸಾಮಾನ್ಯಧರ್ಮಗಳ ।**
**ಮೋಕ್ಷ ಸ್ವತಸ್ಸಿದ್ದ - ಮಂಕುತಿಮ್ಮ ॥**

ಮೋಕ್ಷದಾಶೆಯೊಳಂಮತ್ಯಾತುರತೆಯೊಳಿತಲ್ಲ=ಮೋಕ್ಷದ ಆಶೆಯೊಳಂ+ಅತಿ+ಆತುರತೆ+ಒಳಿತಲ್ಲ,

ಶಿಕ್ಷೆ = ಶಿಕ್ಷಣ, ಲಕ್ಷ್ಯ = ಗುರಿ, ಸ್ವತಸ್ಸಿದ್ಧ = ತಾನೇ ತಾನಾಗಿ ಫಲಿಸುವುದು.

ಮೋಕ್ಷ ಪಡೆಯಬೇಕೆಂಬ ಆಸೆಯಲ್ಲಿ ಅತಿಯಾದ ಆತುರತೆ ಸರಿಯಲ್ಲ. ಏಕೆಂದರೆ ಮೋಕ್ಷದ ಸ್ಥಿತಿಗೆ ತಲುಪಲು ಬಹುಕಾಲದ ಶಿಕ್ಷೆ, ಎಂದರೆ ಶಿಕ್ಷಣ ಅಗತ್ಯ. ಆ ಹಾದಿಯಲ್ಲಿ ಗುರಿಯನ್ನು ಬಿಡದೆ ಬಹಳಕಾಲ ಸಾಮನ್ಯಧರ್ಮಗಳ ಸಾಧನೆ ಮಾಡಿದರೆ, ಮೋಕ್ಷ ಖಂಡಿತ ಸಿಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮೋಕ್ಷವೆಂದರೆ 'ಮುಕ್ತ ಸ್ಥಿತಿ, ಮುಕ್ತ ಸ್ಥಿತಿ ಯೆಂದರೆ, 'ಬಂಧನ'ವಿಲ್ಲದ ಸ್ಥಿತಿ. ಯಾವ ಸ್ಥಿತಿಯಲ್ಲಿ ಮನಸ್ಸು ಬುದ್ಧಿ ದೇಹಗಳು ಪ್ರಾಪಂಚಿಕ ಸೆಳೆತಗಳ ಹಿಡಿತದಿಂದ ಹೊರಬಂದಿವೆಯೋ ಆ ಸ್ಥಿತಿಯೇ ಮುಕ್ತ ಸ್ಥಿತಿ. ಈ ಜಗತ್ತಿನಲ್ಲಿ ಇದ್ದು, ಈ ಜಗತ್ತಿನ ಯಾವುದಕ್ಕೂ ಅಂಟದ ಸ್ಥಿತಿಯೇ ಮುಕ್ತ ಸ್ಥಿತಿ. ಆದರೆ ಈ ಜಗತ್ತಿನಲ್ಲಿದ್ದು ಈ ಜಗತ್ತಿಗೆ ಅಂಟದೆ ಹೇಗೆ ಇರುವುದು? ಈ ಅಂಟು ಹೇಗಿರುತ್ತದೆ? ಮತ್ತು ಎಲ್ಲಿರುತ್ತದೆ? ಎನ್ನುವ ಪ್ರಶ್ನೆಗೆ ಉತ್ತರವಾಗಿ ಕ್ಲುಪ್ತವಾಗಿ ಹೇಳಬೇಕಾದರೆ, 'ನಾನು - ನನ್ನದು " ಎನ್ನುವ ಮಮಕಾರವನ್ನು ಬಿಟ್ಟರೆ ಮುಕ್ತರಾಗಬಹುದು. ಈ ಮಮಕಾರವೇ ಅಂಟು ಮತ್ತು ಅದು ನಮ್ಮ ದೇಹ ಮನಸ್ಸು ಬುದ್ಧಿಗಳ ಸ್ವಾಭಾವದಲ್ಲಿರುತ್ತದೆ. ಪ್ರತಿಯೊಬ್ಬರೂ ತಮ್ಮನ್ನು ತಾವೇ ಪರೀಕ್ಷಿಸಿಕೊಂಡು ನೋಡಿಕೊಂಡರೆ, ಆಗ ತಮಗಿರುವ 'ಅಂಟಿನ' ಪ್ರಮಾಣದ ಅರ್ಥವಾಗುತ್ತದೆ.

ಆ ಅಂಟನ್ನು ತೊಳೆದುಕೊಳ್ಳಲು ಧೀರ್ಘಕಾಲದ ತಪಸ್ಸು ಬೇಕು. ತಪಸ್ಸು ಎಂದರೆ ತಪನ, ಎಂದರೆ ಇರುವ, ಆದರೆ ಬೇಡದ್ದನ್ನು ಹೊರಹಾಕಿ, ಇಲ್ಲದ, ಆದರೆ ಬೇಕಾದ್ದನ್ನು ಒಳಬರಮಾಡಿಕೊಳ್ಳಲು ತೀವ್ರ ಪ್ರಯತ್ನವೇ ತಪಸ್ಸು. ಈ ಪ್ರಯತ್ನದಲ್ಲಿ ನಾವು ಹಲವುಬಾರಿ ಹತ್ತು ಹೆಜ್ಜೆ ಮುಂದೆಯಿಟ್ಟು ಎಂಟು ಹೆಜ್ಜೆ ಹಿಂದೆ ಬರುವ ಸಾಧ್ಯತೆಗಳುಂಟು. ಹಾಗಾಗಬಾರದೆಂದರೆ, ಮಾನ್ಯ ಡಿವಿಜಿಯವರು ಹೇಳುವ ಸಾಮಾನ್ಯ ಧರ್ಮಗಳನ್ನು ನಿರಂತರವಾಗಿ ಪಾಲಿಸಿದರೆ, ದೃಢವಾಗಿ ಮುಂಜೆ ಹೆಜ್ಜೆ ಇಡುವ ಪ್ರಯತ್ನ ನಮ್ಮದಾಗುತ್ತದೆ. ಈ ಸಾಮಾನ್ಯ ಧರ್ಮಗಳಾವುದೆಂದರೆ, ಬದುಕಿನಲ್ಲಿ ನಮ್ಮ ಮತ್ತು ನಮ್ಮ ಕಾರಣದಿಂದ ಅನ್ಯರ ಶಾಂತಿ ಮತ್ತು ನೆಮ್ಮದಿಗಳು ಕದಡದೆ ಇರಲು, ನಾವು ಪಾಲಿಸಬೇಕಾದ ಬದುಕಿನ ಕ್ರಮವೇ ಸಾಮಾನ್ಯಧರ್ಮ.

ಆ ರೀತಿಯ ಜೀವನ ಕ್ರಮಕ್ಕೆ ಮತ್ತು ಪಾಲಿಸಬೇಕಾದ ಸಾಮಾನ್ಯ ಧರ್ಮಕ್ಕೆ ನಮಗೆ ನಮ್ಮ ಪೂರ್ವಜರ, ಸಾಧು- ಸತ್ಪುರುಷ ಭೋಧನೆಯ ಅನೇಕಾನೇಕ ದೃಷ್ಟಾಂತಗಳು, ವೇದ, ಉಪನಿಷತ್ತು, ಪುರಾಣಗಳಲ್ಲಿ ಹೇರಳವಾಗಿ ಸಿಗುತ್ತದೆ. ಅದನ್ನೆಲ್ಲಾ ಓದುವ ಮೊದಲು, ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು, ನಾವು ಏನು ಎಂದು ಅರಿತುಕೊಳ್ಳಬೇಕು, ನಮಗೆ ಏನು ಬೇಕು ಎಂದು ನಿರ್ಧರಿಸಿಕೊಳ್ಳಬೇಕು, ಅದನ್ನು ಹೊಂದಬೇಕಾದರೆ ನಾವು ಏನುಮಾಡಬೇಕು ಎಂದು ತಿಳಿದುಕೊಳ್ಳಬೇಕು, ಆ ದಾರಿಯಲ್ಲಿ ನಡೆಯಲು ಬೇಕಾದ ಮಾರ್ಗದರ್ಶನವನ್ನು ನಮ್ಮ ಗುರುಹಿರಿಯರಿಂದ ಶ್ರದ್ಧೆಯಿಂದ ಪಡೆದುಕೊಳ್ಳಬೇಕು. ಅವರು ತೋರಿದ ಮಾರ್ಗದಲ್ಲಿ ನಿರಂತರ ನಡೆದಾಗ ನಮಗೆ ಈ ಜೀವನದ 'ಅಂಟು'ಗಳು ಕ್ರಮೇಣ ನಶಿಸಿ, ನಾವು ಮುಕ್ತ ಸ್ಥಿತಿಯನ್ನು ತಲುಪಬಹುದು. ಇದು ಜನ್ಮಜನ್ಮಾಂತರದಲ್ಲಿ ಆಗುವ ಸಂಸ್ಕಾರ. "ಶಿಕ್ಷೆ ಬಹುಕಾಲ ನಡೆಯದೆ ಮೋಕ್ಷವಿಲ್ಲ" ಎಂದು ಗುಂಡಪ್ಪನವರು ಹೇಳುವಂತೆ ನಿರಂತರ ಪ್ರಯತ್ನದಿಂದ ಮಾತ್ರ "ಮುಕ್ತಿ" ಸಾಧ್ಯ

ಮುಕ್ತಕ ೯ಸ೦4

ವಹಿಸು ಕೆಲ ಭಾರಗಳ, ಸಹಿಸು ಕೆಲ ನೋವುಗಳ ।

ಪ್ರಹರಿಸರಿಗಳನನಿತು ಯುಕ್ತಗಳನರಿತು ॥

ಮಹಿಯ ನಾಟಕದಿ ನೀಂ ಮನಸಿಟ್ಟು ಕುಣಿಕುಣಿದು ।

ವಿಹರಿಸಾತ್ಮಾಲಯದಿ - ಮಂಕುತಿಮ್ಮ ॥

ಪ್ರಹರಿಸರಿಗಳನನಿತು=ಪ್ರಹರಿಸು+ಅರಿಗಳನು+ಅನಿತು, ಯುಕ್ತಗಳನರಿತು=ಯುಕ್ತಗಳನ್ನು+ಅರಿತು.

ವಿಹರಿಸಾತ್ಮಾಲಯದಿ=ವಿಹರಿಸು+ಅತ್ಮಾಲಯದಿ(ಆಲಯದಿ).

ಅರಿಗಳನು=ಶತ್ರುಗಳನು, ಅನಿತು=ಆದಷ್ಟು, ಪ್ರಹರಿಸು+ಪ್ರಹಾರಮಾಡು, ಹೊಡೆ. ಯುಕ್ತಗಳನ್ನು=ಸರಿ-ತಪ್ಪುಗಳನ್ನು, ವಿಹರಿಸು=ಹಾರಾಡು, ಸಂಚಾರಮಾಡು.

ಬದುಕಿನಲ್ಲಿ ಕೆಲವು ಭಾರಗಳನ್ನು ಹೊತ್ತುಕೋ, ಕೆಲವು ನೋವುಗಳನ್ನು ಸಹಿಸಿಕೋ, ನಿನ್ನ ಶತ್ರುಗಳನ್ನು ಆದಷ್ಟು ಬಗ್ಗುಬಡಿ, ಬದುಕುವಾಗ ಯುಕ್ತ-ಅಯುಕ್ತಗಳನ್ನು ಅರಿತು, ನಿನಗೆ ವಹಿಸಿದ ಈ ಭೂಮಿಯ ಮೇಲಿನ ನಾಟಕದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು, ನಿನ್ನ ಪಾತ್ರವನ್ನು ವಹಿಸು. ಹಾಗೆ ಮಾಡುವಾಗ ನೀನು ಆತ್ಮದ ಆಲಯದಲ್ಲಿ ವಿಹರಿಸು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಭೂಮಿಯ ಯಾವುದೋ ಒಂದು ಭಾಗದಲ್ಲಿ ಹುಟ್ಟಿದಮೇಲೆ, ಒಂದು ರೂಪವನ್ನು ಹೊತ್ತು ಈ ಬದುಕಿಗೆ ಬಂದಾದಮೇಲೆ, ನಾವು ಏನಾದರೂ ಮಾಡುತ್ತಾ ಜೀವನಮಾಡಬೇಕು ಅಲ್ಲವೇ? ಹಾಗೆ ಜೀವನ ಮಾಡುವಾಗ ಹಲವಾರು ಜವಾಬ್ದಾರಿಗಳ ಹೊರೆಯನ್ನು ಹೊರಬೇಕಾಗುತ್ತದೆ ಮತ್ತು ಹಾಗೆ ಅವುಗಳನ್ನು ಹೊರುವಾಗ ಆಗುವ ನೋವುಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಅವುಗಳನ್ನು ಹೊತ್ತು ಸಹಿಸಿಕೊಳ್ಳಬೇಕು.ಪ್ರಹರಿಸರಿಗಳನನಿತು"

ಎನ್ನುತ್ತಾರೆ ಡಿವಿಜಿಯವರು. ಈ ಭೂಮಿಯ ಜೀವನದಲ್ಲಿ ನಮಗಿರುವ ಅರಿಗಳು, ಎಂದರೆ 'ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ' ಗಳೆಂಬ ಅರಿಷಡ್ವರ್ಗ'ಗಳು. ಇವುಗಳೇ ನಮ್ಮ ಅಂತರಂಗದ ಶತ್ರುಗಳು. ಅವುಗಳ ಮೇಲೆ ಆದಷ್ಟು ಪ್ರಹಾರಮಾಡು ಎಂದು ಆದೇಶಿಸಿದ್ದಾರೆ, ಮಾನ್ಯ ಗುಂಡಪ್ಪನವರು. ಏಕೆಂದರೆ ಅವುಗಳೇ ನಮ್ಮ ಶಾಂತ ಮತ್ತು ಆನಂದದ ಬದುಕಿನ ಶತ್ರುಗಳು.

ಇನ್ನು ಹೇಗೆ ಬದುಕಬೇಕು ಎನ್ನುವುದಕ್ಕೆ 'ಮನಸಿಟ್ಟು ಕುಣಿಕುಣಿದು, ಎನ್ನುತ್ತಾರೆ ಡಿವಿಜಿ. ಬದುಕುವುದರಲ್ಲಿ ಉತ್ಸಾಹವನ್ನು ಎಂದಿಗೂ ಕಳೆದುಕೊಳ್ಳಬಾರದು. ಹೊರೆಯನ್ನು ಹೊರುವಾಗ ಅಥವಾ ಕಷ್ಟಗಳನ್ನು ಸಹಿಸುವಾಗ ಆಗಲಿ, ಅಂತರಂಗದ ಶತ್ರುಗಳ ಮೇಲಿನ ಹೋರಾಟದಲ್ಲಾಗಲೀ, ಉತ್ಸಾಹವನ್ನು ಕಳೆದುಕೊಳ್ಳಬಾರದು. ಒಂದು ಬಾರಿ ಉತ್ಸಾಹವನ್ನು ಕಳೆದುಕೊಂಡರೆ ಬದುಕು ತೀರ ಅಸಹನೀಯವಾಗಿ, ದುರ್ಭರವಾಗುತ್ತದೆ. ಹಾಗಾಗಿ ನಮಗೆ ದಕ್ಕಿದ ಪಾತ್ರವನ್ನು ನಿರ್ಲಿಪ್ತತೆ'ಯಿಂದ ವಹಿಸಬೇಕು. ಹಾಗೆ ವಹಿಸುವಾಗ ಸರಿ ತಪ್ಪುಗಳನ್ನು, ಸೂಕ್ತತೆ, ಪ್ರಸ್ತುತತೆಗಳನ್ನು ಅರಿತು ನಮ್ಮ ಪಾತ್ರವನ್ನು ನಿರ್ವಹಿಸಬೇಕು.





ಹಾಗೆ ನಿನ್ನ ಪಾತ್ರವನ್ನು ನಿರ್ವಹಿಸುವಾಗ, 'ಅತ್ಮಾಲಯದಲ್ಲಿ ವಿಹರಿಸು' ಎನ್ನುವಂತೆ ಜೀವಿಸಬೇಕು. ಎಂದರೆ ಇಲ್ಲಿ ಹೊರೆಹೊತ್ತಿದ್ದರೂ, ಕಷ್ಟಗಳನ್ನು ಸಹಿಸುತ್ತಿದ್ದರೂ, ಬದುಕಿನ ಪಾತ್ರವನ್ನು ನಿರ್ವಹಿಸುತ್ತಿದ್ದರೂ, 'ನಾನು' ಹೊರುತ್ತಿದ್ದೇನೆ, ಸಹಿಸುತ್ತಿದ್ದೇನೆ ಮತ್ತು ಹೋರುತ್ತಿದ್ದೇನೆ ಎನ್ನುವಂತಹ ಭಾವಗಳಿಲ್ಲದೆ, ಯಾವುದಕ್ಕೂ ಅಂಟದೆ, ನಿರ್ಲಿಪ್ತನಾಗಿ, ಇವುಗಳನ್ನೆಲ್ಲಾ ಮಾಡುತ್ತಿರುವ ಮನಸ್ಸು ಬುದ್ಧಿ ದೇಹಗಳನ್ನು ಒಂದು 'ಸಾಕ್ಷೀಭಾವದಿಂದ ನೋಡಿದರೆ, ಆಗ ಅವುಗಳಿಂದ ಉಂಟಾಗಬಹುದಾದ ಭಾವನೆಗಳ ಅಂಟು', ಆತ್ಮಕ್ಕೆ ಅಂಟದೆ, ಆತ್ಮ ನಿರ್ಮಲವಾಗಿ, ಆನಂದದ ಸ್ಥಿತಿಯಲ್ಲಿರುತ್ತದೆ ಅಥವಾ ಇರಬೇಕು ಎನ್ನುವದೇ ಈ ಮುಕ್ತಕದಲ್ಲಿನ ಆಶಯ. ನಿರ್ಲಿಪ್ತನಾಗಿರಬೇಕು ಎಂದು

ಸುಲಭವಾಗಿ ಹೇಳಿಬಿಡಬಹುದು, ಆದರೆ ಹಾಗಿರಬೇಕಾದರೆ ಧೀರ್ಘಕಾಲದ ಕಠಿಣ ಪರಿಶ್ರಮಬೇಕು. ದೂರದಿಂದ ನಿಂತು ನೋಡಿದಾಗ ಬಹಳ ಕಷ್ಟವೆನಿಸಿದರೂ, ಒಳನುಗ್ಗಿ ಪ್ರಯತ್ನ ಪಟ್ಟರೆ ಎಲ್ಲರಿಗೂ ಸಾಧ್ಯವಾಗುತ್ತದೆ, ಶ್ರದ್ಧೆಯಿಂದ ಪ್ರಯತ್ನ ಮಾಡಿದರೆ,

**ಮುಕ್ತಕ – 9ಸ೦5**

**ಶ್ವಾನ ತಿಪ್ಪೆಯ ಮೇಲೆ ಮಲಗಿರಲು ಪೂರ್ವಿಕ |**

**ಜ್ಞಾನ ಪಶ್ಚಾತ್ತಾಪ ಶುಭಚಿಂತೆಯಂತೆ ||**

**ಏನೊ ವಾಸನೆ ಬೀಸಲದು ಹಾರಿ ದುಮುಕುವುದು |**

**ಮಾನವನ ಮನಸಂತು – ಮಂಕುತಿಮ್ಮ ||**

ಈ ಮುಕ್ತಕದಲ್ಲಿ ಮಾನವನ ಮನಸ್ಸನ್ನು ನಾಯಿಗೆ ಹೋಲಿಸಿದ್ದಾರೆ. ಇಲ್ಲಿ ನಾಯಿಯ ಉಪಮೆಯನ್ನು ಕೊಟ್ಟು, ತಿಪ್ಪೆಗುಂಡಿಯ ಮೇಲೆ ಮಲಗಿದ ನಾಯಿ ಕಣ್ಣ ಮುಚ್ಚಿ ತನ್ನ ಪೂರ್ವ ಜ್ಞಾನವನ್ನು ಕೆದಕಿ ಅಲ್ಲಿ ಆದ ತಪ್ಪುಗಳನ್ನು ಕುರಿತು ಪಶ್ಚಾತ್ತಾಪ ಪಡುತ್ತಿರಲು, ಅದಕ್ಕೆ ಯಾವುದಾದರೂ ವಸ್ತುವಿನ ವಾಸನೆ ಬರಲು ತಕ್ಷಣ ತನ್ನೆಲ್ಲಾ ಆಲೋಚನೆ ಪಶ್ಚಾತ್ತಾಪಗಳನ್ನು ತೊರೆದು 'ಚಂಗೆಂದು' ಆ ವಾಸನೆ ಬಂದ ಕಡೆಗೆ ಹಾರುತ್ತದೆಂದು ಹೇಳಿ, ಮಾನವನ ಮನಸ್ಸ ಸಹ ಹಾಗೆಯೇ ಎಂದು ಉಲ್ಲೇಖಿಸಿದ್ದಾರೆ. ಮಾನ್ಯ ಗುಂಡಪ್ಪನವರು.

ನಮ್ಮ ಮನಸ್ಸ ಸಹ ಹಲವಾರು ಬಾರಿ, ನಮ್ಮ ಗತ ಜೀವನದ ಘಟನೆಗಳನ್ನು ನೆನಪಿಸಿಕೊಂಡು, ಅಲ್ಲಿ ನಡೆದ ಒಪ್ಪು-ತಪ್ಪುಗಳ ಲೆಕ್ಕಾಚಾರವನ್ನು ಹಾಕುತ್ತಾ 'ಹಾಗಾಗಬಾರದಾಗಿತ್ತು. ಅಯ್ಯೋ ಹೀಗಾಯಿತಲ್ಲ, ನಾನು ಎಂತಹ ತಪ್ಪು ಮಾಡಿಬಿಟ್ಟೆ, ಆದ್ದರಿಂದ ನನಗೆ ಈ ಗತಿ' ಮುಂತಾದಾಗಿ ಆಲೋಚಿಸುತ್ತಾ ಇರುತ್ತದೆ, ಅಲ್ಲವೇ? ನಾವು ಮಾಡಿದ ತಪ್ಪು, ಮೋಸ, ದ್ರೋಹ, ತೋರಿದ ಕೋಪ, ಅಸಹನೆ, ಆಡಿದ ಕೆಟ್ಟ ಮಾತುಗಳು, ಮಾಡಿದ ಕುಕೃತ್ಯಗಳ ಮತ್ತು ನಮ್ಮ ಮನದಲ್ಲಿ ಸುಳಿದಾಡುವ ಹೊಲಸು ಆಲೋಚನೆಗಳ ರಾಶಿಯೇ ನಮ್ಮ ಮನಸ್ಸಿನಲ್ಲಿರುವ 'ತಿಪ್ಪೆಗುಂಡಿ', ಅವುಗಳು ಏನೆಂದು ನಮ್ಮ ಮನಸ್ಸಿಗೆ ಮಾತ್ರ ಗೊತ್ತು ಅಲ್ಲವೇ? ಅವುಗಳನ್ನೆಲ್ಲಾ ಕೆದಕಿ ಆಲೋಚಿಸಿ ನಾವೂ ಸಹ ಬಹಳಷ್ಟು ಬಾರಿ 'ಹೀಗಾಗಬಾರದಿತ್ತು, ಹಾಗೆ ಮಾಡದೆ ಹೋಗಿದ್ದಿದ್ದರೆ ಹೀಗಾಗುತ್ತಿರಲಿಲ್ಲ ಮತ್ತು ಅಯ್ಯೋ ನಾನು ತಪ್ಪು ಮಾಡಿಬಿಟ್ಟೆ, ನನ್ನಿಂದ ಅನ್ಯರಿಗೆ ತೊಂದರೆಯಾಯಿತು' ಹೀಗೆ ಪಶ್ಚಾತ್ತಾಪಡುತ್ತಾ

ಇರುವಾಗ, ನಿಶ್ಚಯವಾಗಿ ನಮ್ಮನ್ನು ನಾವು ಸುಧಾರಿಸಿಕೊಳ್ಳುತ್ತಿದ್ದೇವೆ, ಎನ್ನುವಂತೆ ಇರುತ್ತದೆ, ನಮ್ಮ ಆಲೋಚನೆ. ಆದರೆ, ಅದೆಲ್ಲಾ ಕ್ಷಣಿಕ ಜ್ಞಾನ ಮತ್ತು ತಾತ್ಕಾಲಿಕ ವೈರಾಗ್ಯ,

ಆರೋಗ್ಯ ಸರಿಯಿಲ್ಲದಾಗ, ಯಾವುದಾದರೂ ವಿಶೇಷವಾದ ಖಾದ್ಯವನ್ನು ತಿನ್ನಲು ಮನಸ್ಸು ಒಪ್ಪುವುದಿಲ್ಲ ಅದೂ ಸಹ ತಾತ್ಕಾಲಿಕ ವೈರಾಗ್ಯ, ಒಂದು ಬಾರಿ ಆರೋಗ್ಯ ಸುಧಾರಿಸಿಬಿಟ್ಟರೆ ಮತ್ತೆ ಮಾಮೂಲು, ಸಿಕ್ಕ ಸಿಕ್ಕ ವಸ್ತುಗಳನ್ನು ಅಂಕೆಯಿಲ್ಲದೆ ತಿಂದು ಮತ್ತೆ ಆರೋಗ್ಯ ಕೆಡಿಸಿಕೊಳ್ಳುವುದು. 'ನಾಯಿ ಬಾಲ' ಕ್ಕೆ ದಬ್ಬೆ ಕಟ್ಟಿ ಅದನ್ನು ನೆಟ್ಟಗಾಗಿಸಲು ಸಾಧ್ಯವೇ? ಹಾಗೆ ನಮ್ಮ ಮನಸೂ ಸಹ. ತನ್ನ ಪೂರ್ವ ಕರ್ಮಗಳ ಬಗ್ಗೆ ಎಷ್ಟು ಪಶ್ಚಾತ್ತಾಪವಾದರೂ, ಅದು ಗಟ್ಟಿಯಾಗಿ ನೆಲೆ ನಿಲ್ಲದೆ, ಮನಸ್ಸು ಚಂಚಲವಾಗಿ ಮತ್ತೆ ಮತ್ತೆ ಅದೇ ತಪ್ಪನ್ನು ಮಾಡುತ್ತಲೇ ಇರುತ್ತದೆ. 'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್' (ಭ.ಗೀ-ಕರ್ಮಯೋಗ-5)ಎನ್ನುತ್ತಾನೆ ಭಗವಾನ್ ಶ್ರೀ ಕೃಷ್ಣ. ಒಂದು ಕ್ಷಣವೂ ಸ್ಥಿರವಾಗಿ ನಿಲ್ಲಲು ಮತ್ತು ಯಾವ ಕೆಲಸವನ್ನೂ ಮಾಡದೆ ಇರಲು ಈ ಮನಸ್ಸಿಗೆ ಸಾಧ್ಯವೇ ಇಲ್ಲ, ಎಂದು ಹೀಗೆಯೇ ಮಾನವನ ಮನಸೂ ಸಹ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಅಂತಹ ಮನಸ್ಸನ್ನು ನಿರಂತರ ಅಭ್ಯಾಸದಿಂದ, ಪ್ರಯತ್ನಪೂರ್ವಕವಾಗಿ ಒಂದೆಡೆ ನಿಲ್ಲಿಸಲಾದರೆ ಮತ್ತು ಹಾಗೆ ನಿಂತ ಮನಸ್ಸಿನಲ್ಲಿ ಸದ್ವಿಚಾರಗಳ ಮಂಥನವಾದರೆ, ಅದರಿಂದ ಉಂಟಾಗುವ ಸತ್ವದ ಜ್ಞಾನ ಮನಸ್ಸಿನಲ್ಲಿ ದೃಢವಾದರೆ, ಆಗ ಮನಸ್ಸು ಸುಧಾರಿಸುತ್ತದೆ ಮತ್ತು ಹಿಂದೆ ಮಾಡಿದ ತಪ್ಪುಗಳು ಮತ್ತೆ ಮಾಡಲಾಗದ ಸ್ಥಿತಿಗೆ ತಲುಪಬಹುದು. ಅಭ್ಯಾಸಬಲದಿಂದ ಮನೋನಿಗ್ರಹವನ್ನು ಸಾಧಿಸಬೇಕು. ನಮ್ಮ ಇಡೀ ಜೀವನದಲ್ಲಿ ನಡೆಯುವ ಎಲ್ಲ ವಿಧ್ಯಮಾನಗಳಿಗೂ ಬೀಜಾಂಕುರವಾಗುವುದೇ ಈ ಮನಸ್ಸಿನಲ್ಲಿ. ಈ ಮನಸ್ಸೆಂಬ ಭೂಮಿಯಲ್ಲಿ ನೆಲವನ್ನು ಉತ್ತು, ಬಿತ್ತು, ಕಳೆ ಕಿತ್ತು, ಕೊಳೆ ತೆಗೆದು, ಹಸನಾಗಿಸಿದರೆ ಆಗ ಮೊಳೆಯುವ ಆಲೋಚನೆಗಳು ಮತ್ತು ತದ್ವಾರಾ ಆಗುವ ನಮ್ಮ ಕರ್ಮಗಳೂ ಸಹ ಶುದ್ಧವಾಗಿದ್ದು ಅವುಗಳು ನೀಡುವ ಫಲಗಳು ನಮ್ಮ ಆನ್ನೋದ್ಧಾರಕ್ಕೆ ಪೂರಕವಾಗಿರುತ್ತದೆ.

ಅಂತಹ ಪ್ರಯತ್ನವನ್ನು ನಾವು ಮಾಡಿದರೆ 'ಸುಖ' ಇಲ್ಲದಿದ್ದರೆ ಮಾನ್ಯ ಗುಂಡಪ್ಪನವರು ಹೇಳುವ ಆ 'ಶುನಕ'ದ ರೀತಿ ಇರುತ್ತದೆ ನಮ್ಮ ಜೀವನ, ಆಯ್ಕೆ ನಮ್ಮದೇ ಅಲ್ಲವೇ?





**ಮುಕ್ತಕ – ೨ಸ೦6**

**ತತ್ತ್ವ ಸಾಕ್ಷಾತ್ಕಾರ ಚಿತ್ತಶುದ್ಧಿಯಿನಹುದು |**

**ಚಿತ್ತಶೋಧನೆ ಮತಿಚಮತ್ಕಾರವಲ್ಲ ||**

**ಬಿತ್ತರದ ಲೋಕಪರಿಪಾಕದಿಂ, ಸತ್ಕರ್ಮ |**

**ಸಕ್ತಿಯಿಂ ಶುದ್ಧತೆಯೊ – ಮಂಕುತಿಮ್ಮ ||**

ಚಿತ್ತಶುದ್ದಿಯಿನಹುದು=ಚಿತ್ತಶುದ್ಧಿಯಿನ್+ಅಹುದು
ಅಹುದು=ಆಗುತ್ತದೆ. ಬಿತ್ತರದ=ವ್ಯಾಪಕವಾದ, ಸತ್ಕರ್ಮ=ಒಳ್ಳೆಯ ಕೆಲಸ, ಲೋಕಪರಿಪಾಕದಿಂ=ಬದುಕಿನ ಅನುಭವದಿಂದ, ಸಕ್ತಿಯಿಂ=ಆಸಕ್ತಿಯಿಂದ,

ತತ್ವದ ಅರಿವು ಕೇವಲ ಚಿತ್ತದ ಶುದ್ಧಿಯಿಂದ ಆಗುತ್ತದೆ. ಚಿತ್ತದಲ್ಲಿನ ಕಶಲಗಳನ್ನು ತೆಗೆಯುವುದು ಕೇವಲ ಬುದ್ಧಿವಂತಿಕೆಯ ಕೆಲಸವಲ್ಲ. ಆಸಕ್ತಿಯಿಂದ ಸತ್ಕರ್ಮಗಳನ್ನು ಮಾಡುತ್ತಾ ಬದುಕಿನ ಅನುಭವವನ್ನು ಪಡೆದು ಮತ್ತು ಆ ಅನುಭವದ ಸಾರವನ್ನು ಅಂತರಂಗಕ್ಕೆ 'ಪಾಕ'ದಂತೆ ಇಳಿಸಿಕೊಂಡಾಗ, ಚಿತ್ತದ ಶುದ್ಧತೆ ಸಿದ್ಧಿಸುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಚಿತ್ತ ಶುದ್ಧಿಯಿಲ್ಲದ ಮನಸ್ಸಿಗೆ ತತ್ವಸಾಕ್ಷಾತ್ಕಾರವಾಗುವುದು ಅಸಾಧ್ಯ. ಕಾರಣವೇನೆಂದರೆ, ಈಗಾಗಲೇ ಹಲವಾರು ಅಶುದ್ಧ ವಿಚಾರಗಳು ಅಲ್ಲಿ ತುಂಬಿ ನೆರೆದಿರುವಾಗ ತತ್ವಕ್ಕೆ ಸ್ಥಳವೇ ಇರುವುದಿಲ್ಲ ಅಲ್ಲವೇ? ಹಾಗಾಗಿ

ಅಲ್ಲಿರುವ ಹೊಲಸನ್ನು ಹೊರತೆಗೆಯಬೇಕು. ಅದಕ್ಕೂ ಮೊದಲು ನಮ್ಮೊಳಗಿರುವ ಯಾವುದು ಹೊಲಸು ಮತ್ತು ಯಾವುದಲ್ಲ, ಎಂದು ಅರಿಯಬೇಕಲ್ಲವೇ? ಕೇವಲ ಬುದ್ಧಿವಂತಿಕೆಯ ಚಮತ್ಕಾರದಿಂದ ಅರ್ಥವಾಗುವುದಿಲ್ಲ. ಅದು ನಮಗೆ ನಮ್ಮ ಜೀವನದ ಅನುಭವದಿಂದ ಗೊತ್ತಾಗುತ್ತದೆ. ನಮ್ಮನ್ನು ನಾವು ಬದುಕಿನ ಅನುಭವಗಳಿಗೆ ಒಡ್ಡಿಕೊಂಡರೆ, ತೆರೆದುಕೊಂಡರೆ ಮಾತ್ರ 'ಸತ್ವ ಗ್ರಹಣ' ಸಾಧ್ಯ.

ಸುಮ್ಮನೆ ಬದುಕುವುದಕ್ಕಿಂತ ಬದುಕಿನ ಪ್ರತೀ ಪ್ರಸಂಗವನ್ನೂ ಅನುಭವಿಸಬೇಕು ಮತ್ತು ಆ ಅನುಭವದ ಸಾರವನ್ನು ಅಂತರಂಗಕ್ಕೆ ಇಳಿಸಿಕೊಳ್ಳಬೇಕು. ರುಚಿಯಾದ ಊಟಮಾಡಿದಾಗ ಅದರ ಸವಿಯನ್ನು, ಒಂದು ಸುಗಂಧಭರಿತ ಹೂವನ್ನು ನೋಡಿದರೆ ಅದರ ಸುಗಂಧವನ್ನು, ಪ್ರಕೃತಿಯನ್ನು ನೋಡಿದರೆ ಅದರ ರಮಣೀಯತೆಯನ್ನು, ಒಬ್ಬರಿಗೆ ಉಪಕಾರ ಮಾಡಿದಾಗ ನಮ್ಮ ದೈನ್ಯತೆ ಮತ್ತು ಧನ್ಯತೆಯ ಭಾವವನ್ನು, ಮತ್ತೊಬ್ಬರು ನಮಗುಪಕಾರ ಮಾಡಿದರೆ ಅವರ ಹಿರಿಮೆಯನ್ನು ಮತ್ತು ನಮ್ಮ ಕೃತಜ್ಞತೆಯನ್ನು, ಹೀಗೆ ಪ್ರತೀ ಪ್ರಸಂಗದ ಅನುಭವದಿಂದ ಉಂಟಾಗುವ ಭಾವವನ್ನು ಒಳಗೆ ತುಂಬಿಕೊಳ್ಳಬೇಕು. 'ಬಿತ್ತರದ ಲೋಕಪರಿಪಾಕದಿಂ ಎಂದರೆ ವಿಕೃತವಾದ ಮತ್ತು ಧೀರ್ಘ ಕಾಲದ ಅನುಭವದಿಂದ ನಾವು ಪಕ್ವವಾಗಬೇಕು. ಹಾಗೆ ಪಕ್ವವಾದಾಗ, ಮನಸ್ಸಿನಲ್ಲಿ ಇರುವ ಹೊಲಸನ್ನು ಹೊರತಳ್ಳಿ ತತ್ವವನ್ನು ಸತ್ವರೂಪದಿ 'ಬಟ್ಟಿ' ಇಳಿಸಿಕೊಳ್ಳಲು ಸಹಾಯವಾಗುತ್ತದೆ.





ಇದಕ್ಕೆ ಗುಂಡಪ್ಪನವರು ಹೇಳುವಂತೆ ಆಸಕ್ತಿ ಬೇಕು, ಸತ್ಕರ್ಮಗಳನ್ನು ಮಾಡಬೇಕು. ಅವುಗಳನ್ನು ಮಾಡಲು ವಿದ್ಯೆ, ಸಂಸ್ಕಾರ, ಸತ್ಸಂಗ, ಸದಾಚಾರ ಎಲ್ಲವನ್ನೂ ಅನುಸರಿಸಬೇಕು. ಸತ್ ಯಾವುದು ಅಸತ್ ಯಾವುದು ಎಂದು, ನಮ್ಮ ಗುರು ಹಿರಿಯರ ಮಾರ್ಗದರ್ಶನದಿಂದ ಕಲಿಯಬೇಕು. ಒಟ್ಟಾರೆ ಹೇಳಬೇಕಾದರೆ ನಾವು ಉತ್ತಮರಾಗಲು, ಹಲವಾರು ಮಾರ್ಗಗಳಿವೆ. ಯಾವುದನ್ನಾದರೂ ಆಯ್ದುಕೊಂಡು, ಆಸಕ್ತಿಯಿಂದ ಮುನ್ನಡೆದರೆ, ನಮ್ಮ ಉದ್ಧಾರದ

ಬಾಗಿಲುಗಳು ತಾವೇ ತಾವಾಗಿ ತೆರೆದುಕೊಂಡು, ನಾವು 'ಸತ್'ನೊಳಕ್ಕೆ ಇಳಿದಾಗ, 'ಸತ್ವ ರೂಪದಿ' ತತ್ವ ನಮ್ಮೊಳಕ್ಕೆ ಇಳಿಯುತ್ತದೆ. ಅಲ್ಲಿ ನಮಗೆ ಶುದ್ಧ ತತ್ವದ ಸಾಕ್ಷಾತ್ಕಾರವಾಗುತ್ತದೆ. ಪ್ರಯತ್ನ ಪಟ್ಟರೆ ಎಲ್ಲರಿಗೂ ಸಾಧ್ಯ.

**ಮುಕ್ತಕ – 9ಸ೦7**

**ತನುರುಜೆಗೆ ಪಥ್ಯಾನ್ನ ಬಾಯ ಚಪಲಕ್ಕಲ್ಲ |**

**ಮನದ ಶಿಕ್ಷೆಗೆ ಲೋಕ, ಮಮಕಾರಕಲ್ಲ ||**

**ಗುಣಚರ್ಯೆ ವಿಶ್ವಸಮರಸಕೆ, ಕಾಮಿತಕಲ್ಲ |**

**ಮುನಿವೃತ್ತಿ ಸೂತ್ರವಿದು ಮಂಕುತಿಮ್ಮ ||**

ತನುರುಜೆ=ದೇಹಾರೋಗ್ಯ, ವಿಶ್ವಸಮರಸಕೆ=ಜಗತ್ತಿನಲ್ಲಿನ ಹೊಂದಾಣಿಕೆಗೆ, ಚರ್ಯ=ನಡವಳಿಕೆ, ಕಾಮಿತಕಲ್ಲ=ಆಸೆ ಪೂರೈಕೆಗಲ್ಲ

ದೇಹದ ಆರೋಗ್ಯವನ್ನು ಕಾಪಾಡುವುದಕ್ಕಾಗಿ ಪಥ್ಯದ ಆಹಾರ, ನಮ್ಮ ಬಾಯಿ ಚಪಲವನ್ನು ತೀರಿಸಲು ಅಲ್ಲ. ಈ ಲೋಕದ ಬದುಕು ನಮಗೆ ಜೀವನದಲ್ಲಿ ಪಾಠ ಕಲಿಸಲಿಕ್ಕಾಗಿಯೇ ಹೊರತು, ಮಮಕಾರವನ್ನು ಬೆಳೆಸಿಕೊಳ್ಳಲು ಅಲ್ಲ. ನಮ್ಮ ಗುಣ ಮತ್ತು ನಮ್ಮ ನಡವಳಿಕೆ, ಜಗತ್ತಿನಲ್ಲಿ ನಮ್ಮನ್ನು ಸಮರಸದೊಂದಿಗೆ ಬದುಕಲೇ ವಿನಃ, ನಮ್ಮ ಸ್ವಂತದ ಆಸೆಗಳನ್ನು ಈಡೇರಿಸಿಕೊಳ್ಳಲು ಅಲ್ಲ. ಹೀಗೆ ಬದುಕುವುದೇ ಋಷಿಗಳಂತೆ ಬದುಕುವುದಕ್ಕೆ ಸೂತ್ರ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಆಹಾರ ನಮ್ಮ ದೇಹದ ಆರೋಗ್ಯಕ್ಕಾಗಿ ಸೇವಿಸಬೇಕೇ ಹೊರತು, ಬಾಯಿ ಚಪಲಕ್ಕಲ್ಲ ಎನ್ನುವುದು, ರೀತಿ ಮತ್ತು ನೀತಿ, ಆದರೆ ತ್ರಿಗುಣಾವೃತವಾದ ಮನಸ್ಸು, ಬುದ್ಧಿಗಳು ಬೇರೆ ಬೇರೆ ರುಚಿಗಳಲ್ಲಿ ತೃಪ್ತಿ ಹೊಂದುವುದಕ್ಕಾಗಿ, ನಿಗ್ರಹವಿಲ್ಲದೆ ತಿನ್ನುತ್ತಾ ಆರೋಗ್ಯವನ್ನು ಕೆಡಿಸಿಕೊಳ್ಳುತ್ತದೆ. ಬಾಯಿಗೆ ರುಚಿಯಾದದ್ದು ಮತ್ತು ಮನಸ್ಸು ಬುದ್ಧಿಗಳಿಗೆ ಹಿತವಾದ ಆಹಾರ ದೇಹಾರೋಗ್ಯಕ್ಕೆ ಪೂರಕವಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆದರೂ, ಇಂದ್ರಿಯಗಳ ಲಾಲಸೆ ನಮ್ಮನ್ನು ನಿಗ್ರಹದಿಂದ ಇರಲು ಬಿಡುವುದಿಲ್ಲ. ಹಾಗೆ ನಿಗ್ರಹದಿಂದ ಆಹಾರ ಸೇವಿಸಲಾದರೆ ಅದು ಸಾಧನೆ.

ಬದುಕಿನಲ್ಲಿನ ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗೆ ಮಮಕಾರವನ್ನು ಬೆಳೆಸಿಕೊಂಡರೆ, ಅದು ನಮ್ಮನ್ನು ಕುಗ್ಗಿಸಿ, ನೋವನ್ನು ಕೊಟ್ಟು, ಏನನ್ನೂ ಕಲಿಸದೆ, ಕೊರಗುವಂತೆ ಮಾಡುತ್ತದೆ. ಬದುಕಿನಲ್ಲಿ ನಾವು ಪಡೆಯುವ





ಅನುಭವ ನಮ್ಮನ್ನು ಸು-ಶಿಕ್ಷಣಕ್ಕೊಳಗಾಗಿಸಿ, ಪಾಠ ಕಲಿಸಿ, ನಮ್ಮನ್ನು ಉತ್ತಮ ವ್ಯಕ್ತಿಗಳನ್ನಾಗಿಸಬೇಕು. ಈ ಜಗತ್ತಿನ ಮಾಯೆಯಲ್ಲಿ ಮೋಹವುಂಟಾದರೆ, ನೋವು ಕಟ್ಟಿಟ್ಟ ಬುತ್ತಿ. ನಾವು ಬೆಳೆಸಿಕೊಳ್ಳುವ ಗುಣ, ಬುದ್ದಿ, ಜ್ಞಾನ ಮತ್ತು ವಿಜ್ಞಾನವೆಲ್ಲ ನಮ್ಮನ್ನು ಈ ಜಗತ್ತಿನಲ್ಲಿ, ಪರಮಾತ್ಮ ಸೃಷ್ಟಿಯ ಸಕಲದೊಂದಿಗೆ, ಬೇಧವಿಲ್ಲದೆ, ಸಾಮರಸ್ಯದಿಂದ ಬದುಕಲು ಕಲಿಸಬೇಕು ಮತ್ತು ಪೂರಕವಾಗಬೇಕು. ಅದನ್ನು ಬಿಟ್ಟು, ನಮ್ಮ ಮನಸ್ಸುಗಳಲ್ಲಿ ಉಂಟಾಗುವ ಆಸೆಗಳನ್ನು ಪೂರೈಸಿಕೊಳ್ಳಲು ಮಾತ್ರ ನಮ್ಮ ಕಲಿಕೆ ಸೀಮಿತವಾದರೆ, ಅನ್ಯ ಪ್ರಾಣಿಗಳಿಗೂ ನಮಗೂ ವ್ಯತ್ಯಾಸವೇ ಇರುವುದಿಲ್ಲ.

ಹೀಗೆ ಮಿತ ಮತ್ತು ಹಿತವಾದ ಆಹಾರ, ಮಮಕಾರ ರಹಿತಾದ ಜಗತ್ತಿನ ಸಂಬಂಧ ಮತ್ತು ಸಂಪರ್ಕಗಳು ಮತ್ತು ನಮ್ಮ ಕಲಿಕೆಯಿಂದ ಕೇವಲ 'ಗುಣಗ್ರಹಣ' ವಾಗಿ ನಾವು ಜಗತ್ತಿನಲ್ಲಿ ಸಾಮರಸ್ಯವನ್ನು ಕಂಡುಕೊಳ್ಳಲಾದರೆ, ನಮ್ಮ ಮನಸ್ಸುಗಳಲ್ಲಿ ಭೇಧ ನಶಿಸಿ, ನಮ್ಮ ಎಲ್ಲ ಯೋಚನೆ, ಯೋಜನೆ ಮತ್ತು ಕಾರ್ಯಗಳು, ಕಿಂಚಿನ್ಮಾತ್ರದಲ್ಲಾದರೂ, ಜಗತ್ಕಲ್ಯಾಣಕ್ಕಾದರೆ, ನಾವು ನಮ್ಮ ಪೂರ್ವದ ಋಷಿ-ಮುನಿಗಳ ಸಂಸ್ಕೃತಿಯನ್ನು ಪಾಲಿಸಿದಂತಾಗುತ್ತದೆ ಎನ್ನುವುದೇ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಗೂಢಾರ್ಥ. ಇದರಿಂದ ಆತ್ಮ ತೃಪ್ತಿ ಮತ್ತು ಆತ್ಮ ಸಂಸ್ಕಾರವಾಗುತ್ತದೆ. ಮಾರ್ಗ ಬಹಳ ಕಠಿಣವಾದರೂ, ಕ್ರಮಿಸಲು ಅಸಾಧ್ಯವಲ್ಲ. ಪ್ರಯತ್ನಪಟ್ಟರೆ ಎಲ್ಲರಿಗೂ ಸಾಧ್ಯ

**ಮುಕ್ತಕ – ೯ಸ೦8**

**ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ |**

**ನಿಜಕುಕ್ಷಿ ಚಿಂತೆಯೇಂ ಮೊದಲು ಮನೆತಾಯ್ಗೆ ||**

**ಭುಜಿಪ ಪತಿಸುತರೊಪ್ಪ ತುಪ್ಪವವಳೂಟಕ್ಕೆ |**

**ಭಜಿಸು ನೀನಾ ವ್ರತವ – ಮಂಕುತಿಮ್ಮ ||**

ಭುಜಿಸಲ್ಕಲಿತವನೆ=ಭಿಜಿಸಲು+ಕಲಿತವನೆ, ಪತಿಸುತರೊಪ್ಪ+ಪತಿ+ಉತರ+ಒಪ್ಪ,

ತುಪ್ಪವವಳೂಟಕ್ಕೆ=ತುಪ್ಪವು+ಅವಳ+ಊಟಕ್ಕೆ, ನೀನಾ= ನೀನು+ಆ

ಒಪ್ಪ=ತೃಪ್ತಿ, ಭುಜಿಸು=ತಿನ್ನು, ಸೇವಿಸು, ಭಜಿಸು=ಧ್ಯಾನಿಸಿ ಪಾಲಿಸು

ತನ್ನಲಿರುವುದನ್ನು ಪರರಿಗೆ ನೀಡಿ ತಾನು ಉಣ್ಣುವವನೇ ಈ ಜಗತ್ತಿಗೆ ಯಜಮಾನನಂತೆ. ತಾಯಿಗೆ ತನ್ನ ಹಸಿವಿನ ಚಿಂತೆ ಇರುತ್ತದೇನು? ತನ್ನ ಪತಿ ಮತ್ತು ಮಕ್ಕಳು ಭುಜಿಸಿ ತೃಪ್ತಿಪಟ್ಟರೆ ಅವಳಿಗದೇ ತುಪ್ಪದೂಟದ ಸಮಾನ. ಅಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ವ್ರತವನ್ನು ನೀನೂ ಸಹ ಆಚರಿಸು, ಎಂಬ ಸಂದೇಶವನ್ನು, ಆದೇಶದ ರೂಪದಲ್ಲಿ ನಮಗೆ ಇತ್ತಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ .



-___________

“ಕೊಡುವುದರಲ್ಲಿನ ತೃಪ್ತಿ ಪಡೆಯುವುದರಲ್ಲಿ ಇರುವುದಿಲ್ಲ' ಎನ್ನುವುದು ಎಲ್ಲ ಹೃದಯವಂತರ ಅನುಭವವಲ್ಲವೇ? 'ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು, ಪರರಿಗೆ,ಕಳ್ಳಂಗೆ ನೃಪಂಗೆ-ಸರ್ವಜ್ಞ' ಎನ್ನುವ ಸರ್ವಜ್ಞ ಕವಿಯ ವಚನ, 'ಕೊಡು'ವುದರ ಸಾರ್ಥಕತೆಯನ್ನು ಸಾರುತ್ತದೆ. 'ನ ಕಾಂಚನ ವಸತ್ ಪ್ರತ್ಯಾಚಕ್ಷಿತ, ತಸ್ಮಾದ್ಯಯಾಕಯಾಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್' ಎನ್ನುತ್ತದೆ ತೈತ್ತರೀಯ ಉಪನಿಷತ್ತಿನ ಧೃಗುವಲ್ಲಿ. ಹಾಗಾಗಿ ನೀಡುವುದು ಅತ್ಯುತ್ತಮ, ಅನ್ಯರಿಗೆ ನೀಡಿ, ಅವರ ತೃಪ್ತಿಯಲ್ಲಿ ತನ್ನ ಸಂತೋಷವನ್ನು ಕಾಣುವವನೇ ಈ ಜಗದಲ್ಲಿ ಒಡೆಯನಂತೆ, ಎಂದಿದ್ದಾರೆ ಮಾನ್ಯ ಗುಂಡಪ್ಪನವರು.

ಕೊಡುವವನ ಕೈ ಎಂದಿಗೂ ಮೇಲಿರುತ್ತದೆ. ಅಂತಹವನು ಈ ಜಗತ್ತಿನಲ್ಲಿ ಒಡೆಯನೇ ಅಲ್ಲವೇ? ಹಾಗೆಯೇ ಮನೆಯಲೆಲ್ಲರಿಗೂ ನೀಡಿ, ಅವರು ತೃಪ್ತರಾದಮೇಲೆ, ತಾನು ಉಣ್ಣುವ ತಾಯಿ, ತನಗೇನೂ ಉಳಿಯದಿದ್ದರೂ, ಎಲ್ಲರಿಗೂ ನೀಡಿದನಂತರ, ತಾನು ಕೇವಲ ನೀರನ್ನೇ ಕುಡಿದು ತೃಪ್ತಳಾಗುತ್ತಾಳೆ. ಇದು 'ತಾಯಿ' ಯ ಸ್ವಭಾವ. ನೀನೂ ಸಹ ಅಂತಹ ಗುಣವನ್ನು ಬೆಳೆಸಿಕೋ, ನಿನ್ನ ಜೀವನದಲ್ಲಿ ಆ ರೀತಿ ಜೀವಿಸುವುದನ್ನೇ ನಿನ್ನ 'ವ್ರತ'ವನ್ನಾಗಿಸಿಕೋ ಎಂಬ ಆದೇಶವೇ ಈ ಮುಕ್ತಕದ ಆಂತರ್ಯ,

ಅದೊಂದು ಉದಾತ್ತ ಭಾವ. ತ್ಯಜಿಸುವ ಮನಸ್ಸು ಬೇಕು, ಪರರಿಗಾಗಿ ತ್ಯಜಿಸುವ ಮನೋಭಾವ ಬೇಕು ಮತ್ತು ಹಾಗೆ ತ್ಯಜಿಸಿ, ಪಶ್ಚಾತ್ತಾಪವಿಲ್ಲದಂತಹ ತೃಪ್ತಿಯನ್ನು ಅನುಭವಿಸಬೇಕು. "ತ್ಯಾಗೇನೈಕೇ ಅಮೃತತ್ವ ಮಾನಶುಃ" ಎಂದರೆ, ತ್ಯಾಗಮಾಡುವ ಮತ್ತು ಅಂತಹ ತ್ಯಾಗದಿಂದ ಅನ್ಯರಿಗೆ ಉಪಕರಿಸುವ ಮತ್ತು ಅನ್ಯರನ್ನು ತೃಪಿಪಡಿಸುವುದರಿಂದ ನಮಗೆ ಅಮೃತತ್ವ ಎಂದರೆ ಮನದಲ್ಲಿ ಒಂದು ಮಧುರವಾದ ಭಾವ ಉಂಟಾಗುತ್ತದೆ. ಆದರೆ ಕೊಡುವಾಗ, ನಿರಪೇಕ್ಷೆಯಿಂದ ಕೊಡಬೇಕು, ನಿರಹಂಕಾರದಿಂದ ಕೊಡಬೇಕು. ಒಳ್ಳೆಯದನ್ನೇ ಕೊಡಬೇಕು, ಸಮಗ್ರವಾಗಿ ಕೊಡಬೇಕು ಮತ್ತು ಕೊರಗದೆ ಕೊಡಬೇಕು. ಅನ್ಯರ ತೃಪ್ತಿ ಮತ್ತು ಸಂತೋಷದಲ್ಲಿ ನಾವು ನಮ್ಮ ತೃಪ್ತಿ ಮತ್ತು ಸಂತೋಷವನ್ನು ಕಾಣಲಾದರೆ, ಜಗತ್ತಿನಲ್ಲಿ ನಮಗಿಂತ ಸುಖಿಗಳು ಇರಲಾರರು.

**ಮುಕ್ತಕ – ೨೮೨**

**ಮಗುವಾಗಿ ಬೊಂಬೆಗಂದತ್ತು ಪಿರಿಯರ ಕಾಡಿ ।**

**ಜಗದುಣಿಸುಗಳನುಂಡು ಬೆಳೆದವಂ ತಾನೆ ॥**

**ಮಗುಗಳನು ಬೆಳಸುತ್ತ ಮನೆಯನಾಳುವವೋಲು ।**

**ಜಗವನಾಳ್ವನು ಜಾಣ - ಮಂಕುತಿಮ್ಮ ॥**

ಬೊಂಬೆಗಂದತ್ತು=ಬೊಂಬೆಗೆ+ಅಂದು+ಅತ್ತು, ಜಗದುಣಿಸುಗಳನುಂಡು=ಜಗದ+ಉಣಿಸುಗಳನು+ಉಂಡು, ಮನೆಯನಾಳುವವೋಲು=ಮನೆಯನು+ಆಳುವ+ಓಲು, ಜಗವನಾಳ್ವನು=ಜಗವನು+ಆಳ್ವನು.
ಪಿರಿಯರ =ಹಿರಿಯರ, ಉಣಿಸುಗಳನು=ತಿಂಡಿಗಳನು, ಓಲು=ಹಾಗೆ

ಮಗುವಾಗಿದ್ದಾಗ ಬೊಂಬೆಗಾಗಿ, ಹಿರಿಯರನ್ನು ಕಾಡಿ, ಅತ್ತು, ಗೋಳಾಡಿ ಹಾಗೆ ಪಡೆದದ್ದನ್ನು, ಅನುಭವಿಸಿ, ಸಂತೋಷಪಟ್ಟು ಬೆಳೆದ ತಾನೇ, ಮಕ್ಕಳನ್ನು ಬೆಳೆಸುತ್ತಾ, ಮನೆಯಲ್ಲಿ ಹಿರಿಯನಾಗಿ, ಎಲ್ಲವನ್ನೂ ಆಳುವವನಂತೆ ಈ ಜಗತ್ತನ್ನು ಆಳುವವನು, ಜಾಣ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮಕ್ಕಳಾಗಿದ್ದಾಗ, ಏನೋ ಚಪಲ, ಚಾಂಚಲ್ಯ, ಕಂಡದ್ದೆಲ್ಲಾ ಬೇಕು ಎನ್ನುವ ಮನೋಭಾವ. ಅದಕ್ಕಾಗಿ ಹಠ. ಹೀಗೆ ಬಾಲ್ಯದಲ್ಲಿದ್ದವರು ಬೆಳೆದಂತೆ, ವಿವೇಕ ಮೂಡಿದಂತೆ, ಶಾಂತರಾಗುತ್ತಾರೆ. ಯುಕ್ತಾಯುಕ್ತತೆಗಳ ವಿವೇಚನೆ ಬೆಳೆಯುತ್ತದೆ. ಹಾಗೆ ಬೆಳೆದು ದೊಡ್ಡವರಾದ ಮೇಲೆ ಒಂದು ವೃತ್ತಿ, ಸಂಸಾರ ಎಂದು ಕಟ್ಟಿಕೊಂಡಮೇಲೆ, ಆ ಸಂಸಾರದ ಭಾರವನ್ನು ಹೊತ್ತು, ಜವಾಬ್ದಾರಿಯುತವಾಗಿ ವರ್ತಿಸುತ್ತಾ, ತಮ್ಮ ವೈಯಕ್ತಿಕ ಅವಶ್ಯಕತೆಗಳ ಪೂರೈಕೆಗಿಂತ ಕುಟುಂಬದ ಸಕಲರ ಒಳಿತನ್ನು ನೋಡುತ್ತಾರೆ. ಇನ್ನು ಅವರಿಗೆ ಮಕ್ಕಳಾಗಿಬಿಟ್ಟರೆ, ಅವರ ಲಾಲನೆ, ಪಾಲನೆ, ವಿದ್ಯಾಭ್ಯಾಸ, ಆರೋಗ್ಯ ಮತ್ತು ಸಂಸ್ಕಾರಗಳ ಕಡೆಗೆ ಇವರ ಗಮನ ಹರಿಯುತ್ತದೆ.

ಈ ಹಂತದಲ್ಲಿ, ಒಂದು ಸಮಯದಲ್ಲಿ ಮಗುವಾಗಿದ್ದವನು, ಇಂದು ಪ್ರಬುದ್ಧನಾಗಿ ಬೆಳೆಯುತ್ತಾನೆ. ಹಾಗೆ ಬೆಳೆದವನೇ 'ಜಾಣ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಇಲ್ಲಿ ಈ ವಿಚಾರವನ್ನು ವ್ಯಕ್ತಿಗತವಾಗಿ ನೋಡದೆ ಒಟ್ಟು ಸಮಾಜದ ದೃಷ್ಟಿಯಿಂದ ನೋಡಿದರೆ, ಮನುಷ್ಯ ಬೆಳೆದಂತೆ ತನ್ನ ವ್ಯಕ್ತಿಗತವಾದ ಅವಶ್ಯಕತೆಗಳನ್ನು ಕಡೆಗಣಿಸಿ ಒಟ್ಟು ಸಮಾಜದ ಒಳಿತನ್ನು ಬಯಸುವ ಪ್ರವೃತ್ತಿ ಬೆಳೆಸಿಕೊಂಡರೆ, ಆಗ ನೈಜ ಅವಶ್ಯಕತೆಗಳು ಗೌಣವಾಗಿ, ಸಾಮೂಹಿಕ

ಸೌಕರ್ಯವೇ ಧ್ಯೆಯವಾಗುತ್ತದೆ. ಯಾರಿಂದಲೂ ಏನನ್ನೂ ಬಯಸದೆ, ಎಲ್ಲರಿಗೂ 'ಕೊಡುವ' ಮನೋಭಾವ ಬಂದಾಗ ಅವನು ಕೊಡುವ 'ಒಡೆಯ 'ನಾಗುತ್ತಾನೆ.

ಹಾಗಾಗಬೇಕಾದರೆ ಬೆಳೆಯಬೇಕು. 'ನಾನು' ಎನ್ನುವುದು 'ನಾವು' ಆಗಬೇಕು. ಹಾಗಾಗಬೇಕಾದರೆ ಎರಡು ವಿಷಯಗಳನ್ನು ನೀಗಿಕೊಳ್ಳಬೇಕಾಗುತ್ತದೆ. ಒಂದು 'ಸ್ವಾರ್ಥ', ಎರಡು 'ಅಹಂಕಾರ' . ನಮಗೆ ದಕ್ಕಿದ್ದರಲ್ಲಿ





ಸಂತೋಷಪಟ್ಟು, ಹಾಗೆ ದಕ್ಕಿಸಿಕೊಂಡದ್ದರಲ್ಲಿ, ಅಲ್ಪವಾದರೂ ಅನ್ಯರಿಗೆ ನೀಡುವ ಮತ್ತು ಆ ಅನ್ಯರ ಸಂತೋಷದಲ್ಲಿ ನಮ್ಮ ಸಂತೋಷವನ್ನು ನೋಡುವ ಪ್ರವೃತ್ತಿ ಬಂದಾಗ, ನಾವು ಕಿಂಚಿತ್ ಬೆಳೆದಂತೆ ಆಗುತ್ತದೆ. ಅದು, ಮಾನ್ಯ ಗುಂಡಪ್ಪನವರು ಹೇಳುವ 'ಜಗದೊಡೆಯ'ನಾಗುವ ದಿಕ್ಕಿನಲ್ಲಿ ಮೊದಲ ಹೆಜ್ಜೆ. ವಿಪರ್ಯಾಸವೇನೆಂದರೆ, ಇಂದಿನ ಸ್ವಾರ್ಥ ಪೂರಿತ ಸಮಾಜದಲ್ಲಿ ನಾವೆಲ್ಲಾ ಆ ದಿಕ್ಕಿನಲ್ಲಿ ನೋಡುತ್ತಲೂ ಇಲ್ಲ, ಇನ್ನು ಆ ಹಾದಿಯಲ್ಲಿ ನಡೆಯುವುದು ಬಹಳ ದೂರ, ಮನಸ್ಸಿನಲ್ಲಿ ಇಚ್ಛೆ ಮತ್ತು ಆ ಇಚ್ಛೆಗೆ ಪೂರಕವಾಗಿ ಪ್ರಯತ್ನ ಎರಡೂ ಆದರೆ ಎಂದೋ ಒಂದು ದಿನ ನಾವೂ ಸಹ ಜಾಣರಾಗಬಹುದು.

**ಮುಕ್ತಕ – 91ಸಂ**

**ಸಾಮಾನ್ಯರೊಳ್ ಪುಟ್ಟಿ, ಸಾಮಾನ್ಯರೊಳ್ ಬೆಳೆದು |**
**ಭೂಮಿಪತಿಪಟ್ಟವನು ಜನ ತನಗೆ ಕಟ್ಟಲ್ ||**
**ಸಾಮರ್ಥ್ಯದಿಂದವರನಳ್ದ ಲಿಂಕನನಂತೆ |**
**ಸ್ವಾಮೀ ಲೋಕಕೆ ಯೋಗಿ – ಮಂಕುತಿಮ್ಮ**

ಸಾಮರ್ಥ್ಯದಿಂದವರನಾಳ= ಸಾಮರ್ಥ್ಯದಿಂದ+ಅವರನು+ಆಳ ಪುಟ್ಟಿ=ಹುಟ್ಟಿ

ಇಲ್ಲಿ ಮಾನ್ಯ ಗುಂಡಪ್ಪನವರು, 1861-65 ರ ನಡುವೆ ಅಮೇರಿಕಾ ದೇಶದ ಅಧ್ಯಕ್ಷನಾಗಿದ್ದ 'ಅಬ್ರಹಾಂ ಲಿಂಕನ್' ನ ವಿಚಾರವನ್ನು ಉಲ್ಲೇಖಿಸುತ್ತಾ, ಹೇಗೆ ಅವನು ಸಾಮಾನ್ಯರಲ್ಲಿ ಹುಟ್ಟಿ, ಬೆಳದು ತನ್ನ ಸಾಮರ್ಥ್ಯ, ಸ್ವಾರ್ಥರಾಹಿತ್ಯ ಮತ್ತು ತ್ಯಾಗದಿಂದ, ಭೂಮಿಪತಿ ಪಟ್ಟವನ್ನು ಏರಿದ, ಎಂದು ಹೇಳುತ್ತಾ ಅಂತಹವರು ತಮ್ಮ ಯೋಗ್ಯತೆಯಿಂದ ಲೋಕಕ್ಕೆ ಸ್ವಾಮಿಯಂತಾಗುತ್ತಾರೆ ಎಂದು ಹೇಳುತ್ತಾರೆ.

ಆಣ್ಗೆ ಅಮೆರಿಕಾದಲ್ಲಿ, ಆಫ್ರಿಕಾ ಖಂಡದಿಂದ ವಲಸೆಬಂದ, ಕರಿಯ ಬಣ್ಣದ ಆಫ್ರಿಕನರನು 'ವರ್ಣ ಬೇಧ'ವನ್ನು ಅನುಸರಿಸಿ ಬಿಳಿಯರು ತಮ್ಮ 'ಗುಲಾಮ' ರನ್ನಾಗಿಸಿಕೊಂಡು, ದೌರ್ಜನ್ಯವನ್ನು ನಡೆಸುತ್ತಿದ್ದರು. ಅಂತಹ ಹೀನ ಪದ್ಧತಿಯನ್ನು ಕಟುವಾಗಿ ವಿರೋಧಿಸಿ ಮತ್ತು ಅದರ ನಿರ್ಮೂಲನಕ್ಕೆ ಆಂದೋಲನವನ್ನು ನಡೆಸಿದವನು "ಅಬ್ರಹಾಂ ಲಿಂಕನ್'. ಅದರ ಪರಿಣಾಮವಾಗಿ ಅಮೇರಿಕಾ ಎರಡು ಭಾಗವಾಗಿ ಹಂಚಿ ಹರಿದು ಹೋಗುವ ಸಂಭವವಿತ್ತು. ತನ್ನ ವಿವೇಚನೆಯಿಂದ ಹೋರಾಡಿ ಎರಡೂ ಭಾಗಗಳನ್ನು ಒಗ್ಗೂಡಿಸಿದವನನ್ನು ಜನರು ಅ ದೇಶದ ಅಧ್ಯಕ್ಷನನ್ನಾಗಿಸಿದರು. ಉದಾತ್ತತೆಯಿಂದ ಒಂದು ಕಡೆ ಗುಲಾಮ ಪದ್ದತಿಯನ್ನು ನಿರ್ಮೂಲನ ಮಾಡಿ ಮತ್ತೊಂದು ಕಡೆ ತನ್ನ ದೇಶ ಇಬ್ಭಾಗವಾಗುವುದನ್ನು ತಡೆದು, ಅಧ್ಯಕ್ಷ ಪದವಿಯನ್ನು ಪಡೆದರೂ ತೀರ ಸಾಮಾನ್ಯನಂತೆ ಜೀವಿಸಿದ ಅವನು, ಈ ಲೋಕದಲ್ಲಿ ಸ್ವಾಮಿಯಂತೆ ಜೀವಿಸಿದ ಎಂದು ಒಂದು ಉದಾಹರಣೆಯನ್ನು ನೀಡಿದ್ದಾರೆ.





ಅವರುಗಳು ಯೋಗಿಗಳು. ಶುದ್ಧ ಚಿತ್ತದಿಂದ, ಸ್ವಾರ್ಥದ ಭಾವ ಲವಲೇಶವೂ ಇಲ್ಲದೆ, ಕೇವಲ ಜಗತ್ಕಲ್ಯಾಣವನ್ನೇ ಗುರಿಯಾಗಿಟ್ಟುಕೊಂಡು ತಮ್ಮ ಕಡೆಯುಸಿರಿನ ತನಕ ಆ ಧ್ಯೇಯಕ್ಕೆ ಬದ್ದರಾಗಿದ್ದಂತಹವರು

ಜಗತ್ತಿಗೆ ಆದರ್ಶವಾಗಬೇಕು. ಅಂತಹ ಭಾವಗಳು ನಮ್ಮ ಜೀವನದಲ್ಲಿ ನಾವು ಪಾಲಿಸಿದರೆ ಅವುಗಳೇ ನಮ್ಮನ್ನು ಔನ್ನತ್ಯಕ್ಕೆ ಏರಿಸಲು ಪೂರಕವಾಗುತ್ತವೆ. ಆದರೆ ಧೃಢತೆ ಮತ್ತು ಏಕಾಗ್ರತೆಯ ಅವಶ್ಯಕತೆ ಇದೆ.

ಅದು 154 ವರ್ಷಗಳ ಹಿಂದಿನ ಕಥೆ. ಇಂದಿಗೂ ಆದರ್ಶವಾಗಬಲ್ಲದು. ಆದರೆ ನಮ್ಮ ಜನನಾಯಕರಲ್ಲಿ ಎಷ್ಟು ಜನರಿಗೆ ಅಂತಹ ಉದಾತ್ತ ಭಾವಗಳು ಮತ್ತು ಧೈಯಗಳಿವೆ. ಇವರುಗಳು ರಾಜಕೀಯಕ್ಕೆ ಬರುವುದು, ಸಮಾಜ ಸೇವೆಯ ಸೋಗಿನಲ್ಲಿ, ಅವರ್ಗಳು ನಿಜವಾಗಿ ಮಾಡುವುದು ಸಮಾಜದ 'ಸ್ವಾಹಾ', ಎರಡೂ ಕೈಗಳಲ್ಲಿ ಹತ್ತು ತಲೆಮಾರಿಗಾಗುವಷ್ಟನ್ನು ತಮ್ಮ ಒಂದು ಅವಧಿಯಲ್ಲೇ ಬಾಚಿಕೊಂಡುಬಿಡಬೇಕೆನ್ನುವ ದುರಾಸೆಯ ಜನ ನಮ್ಮ ಜನನಾಯಕರು. ಇವರು ಅವರೆಂದಿಲ್ಲ, ಎಲ್ಲರೂ ದಗಲ್ಬಾಜಿಗಳೇ. ಅವರ ದುರಾಸೆ ಬೇರೆ ಎಲ್ಲ ರೀತಿಯ ಅನಾಚಾರ ಅತ್ಯಾಚಾರಗಳಿಗೆ ದಾರಿಯಾಗುತ್ತದೆ. ಸಮಗ್ರಾಂದೋಲನವೇ ಇದರಿಂದ ಮುಕ್ತಿಗೆ ದಾರಿ. ಅಚಿದು "ಅಬ್ರಹಾಂ ಲಿಂಕನ್" ನಡೆಸಿದಂತಹ ಆಂದೋಲನವೇ ಆಗಬೇಕು. ಅಂತಹ ನಾಯಕರಿಗಾಗಿ ನಮ್ಮ ದೇಶ ಕಾಯುತ್ತಿದೆ, ಅಲ್ಲವೇ?

ಮುಕ್ತಕ - 911

ರಣದಿ ಬಿದ್ದಾ ಸೈನ್ಯಪತಿ ಸಿಡ್ನಿಯುತ್ಕ್ರಮಣ -।
ದೊಣಗುಬಾಯಿಗೆ ನೀರನೊಡ್ಡಲ್ ಅದನವನು ॥
ತನಗಿಂತ ಕೆಲದ ಭಟಗದು ಸಲ್ವುದೆಂದಿತ್ತು ।
ತಣಿವನಾಂತುದ ನೆನೆಯೊ - ಮಂಕುತಿಮ್ಮ ॥

ಸಿಡ್ನಿಯುತ್ಕ್ರಮಣದೊಣಗುಬಾಯಿಗೆ=ಸಿಡ್ನಿಯ+ಉತ್ಕ್ರಮಣದ+ಒಣಗು+ಬಾಯಿಗೆ, ನೀರನೊಡಲ್=ನೀರನ್+ಒಡಲ್, ಅದನವನು=ಅದನು+ಅವನು ಸಲ್ವುದೆಂದಿತ್ತು=ಸಲ್ವುದು+ಎಂದು+ಇತ್ತು, ತಣಿವನಾಂತುದ=ತಣಿವನ್+ಆಂತುದ, ಕೆಲದ ಕೆಳಗಿನ ಭಟ=ಸೈನಿಕ, ಸೇವಕ

ರಣರಂಗದಲ್ಲಿ ಬಿದ್ದ ಸೈನ್ಯಾಧಿಪತಿ 'ಸಿಡ್ನಿ'ಗೆ ಬಾಯಾರಿದಾಗ, ಅವನ ಸೇವಕ ಅವನಿಗೆ ನೀರನ್ನು ನೀಡಲು ಬಂದಾಗ, ಅವನು ತನಗಿಂತ, ತನ್ನ ಕೈಕೆಳಗೆ ಹೋರಾಡುವ ಸಾಮಾನ್ಯ ಸೈನಿಕನಿಗೆ ಇನ್ನೂ ಹೆಚ್ಚು ಬಾಯಾರಿಕೆಯಾಗಿ ಅವನಿಗೆ ಆ ನೀರಿನ ಅವಶ್ಯಕತೆ ಇರಬಹುದೆಂದು, ಆ ನೀರನ್ನು ಅವನಿಗೆ ನೀಡಿ ಸಂತೋಷಪಡುತ್ತಾನೆ. ನೀನೂ ಸಹ ಆ ರೀತಿ ನೀಡಿ ಸಂತಸಪಡು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ

ಕಗ್ಗರಸಧಾರೆ ತೇನ ತ್ಯಕ್ರೇನ ಭುಂಜೀಥಾಃ ೨ಸ೦೨ -

913

ಮುಕ್ತಕ ೨ಸ೦೪ ರಲ್ಲಿ ' ತ್ಯಜಿಸಿ ಭುಜಿಸತಿವನೆ ಜಗಕೆ ಯಜಮಾನ' ಎನ್ನುವ ಭಾವವನ್ನೇ ಮುಂದುವರೆಸುತ್ತಾ ಮಾನ್ಯ ಗುಂಡಪ್ಪನವರು, ಈಗ್ಗೆ 5ಸ೦ಸ೦ ವರ್ಷಗಳಿಗೂ ಹಿಂದೆ ಇಂಗ್ಲೆಂಡ್ ದೇಶದ ಸೇನಾಧಿಪತಿಯಾಗಿದ್ದ 'ಸಿಡ್ನಿ' ಎಂಬ ಸೇನಾಧಿಪತಿಯ ಕತೆಯನ್ನು ಉಲ್ಲೇಖಿಸುತ್ತಾರೆ. ಅವನೊಂದು ಬಾರಿ ಯುದ್ಧರಂಗದಲ್ಲಿ ಗಾಯಗೊಂಡು ಬಿದ್ದಾಗ ಅವನ ದಾಹ ತಣಿಸಲು ಅವನ ಸೇವಕ ನೀರನ್ನು ತಂದಾಗ, ಪಕ್ಕದಲ್ಲೇ ಬಿದ್ದು ನರಳುತ್ತಿದ್ದ ಮತ್ತೊಬ್ಬ ಸಾಮಾನ್ಯ ಸೈನಿಕ ದೈನ್ಯದಿಂದ ಆ ನೀರನ್ನು ನೋಡುತ್ತಾನೆ. ಅದನ್ನು ಕಂಡು 'ಸಿಡ್ನಿ " ಪಾಪ ನನಗಿಂತ ಇವನ ಬಾಯಾರಿಕೆಯ ತೀವ್ರತೆ ಅಧಿಕವಾಗಿರಬಹುದೆಂದು ಭಾವಿಸಿ, ಆ ನೀರನ್ನು ಅವನಿಗಿತ್ತು ತಾನು ತೃಪ್ತನಾಗುತ್ತಾನೆ. ಇದೇ 'ತ್ಯಜಿಸಿ ಭುಜಿಸುವ' ಭಾವ.

“ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು, ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ' ಎನ್ನುವ ಸರ್ವಜ್ಞ ಕವಿಯ ವಚನವೂ ಸಹ ಇದೆ ಭಾವವನ್ನು ಸೂಸುತ್ತದೆ. ನಾವು ಪಡೆದು ಅನುಭವಿಸುವುದಕ್ಕಿಂತ ಅನ್ಯರ ಅವಶ್ಯಕತೆಗಳನ್ನರಿತು, 'ಅದಮ' ಅವರಿಗೆ ಒದಗುವುದು, ಒಂದು ಮಹತ್ತರ ಭಾವ, ಏಕೆಂದರೆ 'ನೀಡುವುದರಲ್ಲಿನ ತೃಪ್ತಿ ಪಡೆಯುವುದರಲ್ಲಿರುವುದಿಲ್ಲ' ಎನ್ನುವುದು ಜಗತ್ಸತ್ಯ. ಇದನ್ನು ಮನಗಂಡು ನೀಡಿ ಸುಖಪಡುವವನು, ಜಗತ್ತಿನಲ್ಲಿ ಧನ್ಯನಾಗುತ್ತಾನೆ.

ಆದರೆ ತನ್ನಲ್ಲಿಲ್ಲದಿದ್ದರೂ, ತನಗೆ ಅವಶ್ಯಕತೆ ಇದ್ದರೂ, ತನಗೆ ದಕ್ಕಿದ ವಸ್ತುವನ್ನು, ತಾನು ಅನುಭವಿಸಿ ತೃಪ್ತಿಪಡುವುದಕ್ಕಿಂತಾ, ಅನ್ಯರುಪಯೋಗಕ್ಕೆ ಅದನ್ನು ನೀಡಿ, ಅವರದನ್ನು ಪಡೆದುತೃಪ್ತಿಪಟ್ಟಾಗ, ಆ ಅನ್ಯರ ತೃಪ್ತಿಯನ್ನು ಕಂಡು ತಾನು ಸಂತೋಷಪಡುವವನನೇ, ಜಗತ್ತಿನಲ್ಲಿ ಒಡೆಯನಂತಿರುತ್ತಾನೆ, ಎನ್ನುವುದೇ ಇಲ್ಲಿನ ಭಾವ. ತನ್ನಲ್ಲಿರುವುದನ್ನು ಸ್ವಾರ್ಥದಿಂದ ತಾನೊಬ್ಬನ್ನೇ ಅನುಭವಿಸಬೇಕೆನ್ನುವವನು ತನ್ನಲ್ಲಿರುವುದನ್ನು ತಾನು ಉಂಡು, ತೃಪ್ತನಾದಮೇಲೆ, ಮಿಕ್ಕರೆ ಅನ್ಯರಿಗೆ ಕೊಡುವ ಯೋಚನೆ ಮಾಡುವವನು, 'ಮಧ್ಯಮ', ತನಗೆ ಅವಶ್ಯಕತೆ ಇದ್ದರೂ ತನ್ನಲ್ಲಿರುವುದನ್ನು ಅನ್ಯರಿಗೆ ನೀಡಿ ಅವರ ಸಂತೋಷದಲ್ಲಿ ತನ್ನ ಸಂತೋಷವನ್ನು ಕಾಣುವವನು 'ಉತ್ತಮ' ಎಂದು ಹೇಳಬಹುದು. 'ತಣಿವನಾಂತುದ ನೆನೆಯೊ ' ಎಂದು ಹೇಳಿ ಅಂತಹ ನೀಡುವುದರಿಂದ ಬರುವ ತೃಪ್ತಿ' ಯನ್ನು ನೀನೂ

ನೆನೆ ಎಂದು ಒಂದು ಸಂದೇಶವನ್ನು ನೀಡಿದ್ದಾರೆ ಶ್ರೀ ಡಿವಿಜಿ ಯವರು. ನಮಗೂ ಅಂತಹ ಬುದ್ಧಿ ಮತ್ತು ಭಾವ ಬಂದರೆ ನಾವೂ ಧನ್ಯರಾಗಬಹುದು.





**ಮುಕ್ತಕ - 912**

**ಇಂದ್ರಿಯಗಳೊಳು ಬಾಳಿ ಜೀವ ಪಕ್ವಂಗೊಳ್ಳ ।**

**ಲಿಂದ್ರಿಯಂಗಳ ಮೀರಿ ಮೇಲೇರಿ ಜಾಣಿಂ ॥**

**ದಿಂದ್ರಿಯಂಗಳನಾಳಿ ಲೋಕವಂ ಸಂತಯಿಪ ।**

**ಬಂಧು ಜೀವನ್ಮುಕ್ತ - ಮಂಕುತಿಮ್ಮ ॥**

ಪಕ್ವಂಗೊಳ್ಳಲಿಂದ್ರಿಯಂಗಳ=ಪಕ್ವಗೊಳ್ಳಲ್+ಇಂದ್ರಿಯಂಗಳ, ಮೇಲೇರಿ=ಮೇಲೆ+ಏರಿ, ಜಾಣಿಂದಿಂದ್ರಿಯಂಗಳನಾಳಿ=ಜಾಣಿನ್+ಇಂದ್ರಿಯಂಗಳನ್+ಆಳಿ, ಜೀವನ್ಮುಕ್ತ=ಜೀವನ್+ಮುಕ್ತ ಜಾಣಿನ್=ಜಾಣತನದಿಂದ, ಸಂತಯಿಪ=ಸಾಂತ್ವನ ನೀಡುವ, ಇಂದ್ರಿಯಂಗಳನಾಳಿ-ಇಂದ್ರಿಯಗಳನ್ನು ಜಯಿಸಿ,

ಇಂದ್ರಿಯಗಳ ಅನುಭವಗಳನ್ನು ಪಡೆದು, ಬದುಕಿನ ಅನುಭವಗಳಿಂದ ಪಕ್ವವಾಗಿ, ಆ ಇಂದ್ರಿಯಗಳು ನೀಡುವ ಸುಖಗಳ ಅಪೇಕ್ಷೆಯನ್ನು ತೊರೆದು, ಅಂತರಂಗದಿಂದ ಬೆಳೆದು ಮೇಲೆ ಏರಿ, ಜಾಣತನದಿಂದ ಇಂದ್ರಿಯಗಳನ್ನು ಹತೋಟಿಗೆ ತಂದುಕೊಂಡು, ಅನ್ಯರ, ಎಂದರೆ ಇನ್ನೂ ಇಂದ್ರಿಯಗಳ ಸುಳಿಯಲ್ಲಿ ಇರುವವರನ್ನು ಸಂತೈಸುವ ಸ್ಥಿತಿಗೆ ತಲುಪಿದರೆ ಅವನೇ 'ಜೀವನ್ಮುಕ್ತ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೂ ಮತ್ತು ಈ ಜಗತ್ತಿಗೂ ಇರುವ ನಂಟಿಗೆ ಸೇತುವೆ ಈ ಇಂದ್ರಿಯಗಳು. ಇವುಗಳ ಸಕ್ರಿಯತೆಯಿಂದಲೇ ನಾವು ನೋಡುವುದು, ಕೇಳುವುದು, ಮೂಸುವುದು, ಸ್ಪರ್ಶಿಸುವುದು, ಆಸ್ವಾಧಿಸುವುದು. ಅವುಗಳು ಸಕ್ರಿಯವಾಗಿ ನಮ್ಮನ್ನೂ ಸಕ್ರಿಯವಾಗಿಡುತ್ತವೆ ಮತ್ತು ನಮ್ಮನ್ನು ಈ ಜಗತ್ತಿನ ಸಕಲಕ್ಕೂ ಅಂಟಿಸುತ್ತದೆ. ನಮ್ಮ ಎಲ್ಲಾ ಸುಖ ಮತ್ತು ದುಃಖಗಳು, ಪ್ರೀತಿ-ಪ್ರೇಮಗಳು, ನೋವು-ನಲಿವುಗಳು, ರಾಗ-ದ್ವೇಷಗಳು, ಕೋಪ-ತಾಪಗಳು, ಎಲ್ಲಕ್ಕೂ ನಮ್ಮ ಈ

ಇಂದ್ರಿಯ ಸಂಬಂಧವೇ ಕಾರಣ. ಎಲ್ಲಿಯ ತನಕ ನಾವು ಈ ಅಂಟಿನಿಂದ ಈ ಜಗತ್ತಿಗೆ ಅಂಟಿಕೊಂಡಿರುತ್ತೇವೆಯೋ, ಅಲ್ಲಿಯ ತನಕ ನಮಗೆ ನಮಗೆ ಮುಕ್ತಿ ಇಲ್ಲ.

ಆದರೆ ನಾವು ಪಕ್ವಗೊಳ್ಳಬೇಕಾದರೆ, ಜೀವನದ ಸಂಪೂರ್ಣ ಅನುಭವವನ್ನು ಪಡೆದು, ಅವುಗಳ ನಶ್ವರತೆಯನ್ನು ಮನಗಂಡು, ಸ್ವಲ್ಪ ಸ್ವಲ್ಪವಾಗಿ ಈ ಜಗತ್ತಿನ ಅಂಟಿನಿಂದ ಜಾಣತನದಿಂದ ಬಿಡಿಸಿಕೊಂಡು, ಇಂದ್ರಿಯಗಳ ಪ್ರಭಾವದಿಂದ ಹೊರಬಂದು, ನಮ್ಮ ಆಸೆಗಳನ್ನು ಹತ್ತಿಕ್ಕಿ, ಅನ್ಯರ ಅವಶ್ಯಕತೆಗಳನ್ನು ಪೂರೈಸುವ ಸ್ಥಿತಿಗೆ ತಲುಪಬೇಕು. ಹಾಗಾದರೆ ಅದು ಪಕ್ವತೆ. ಆ ಸ್ಥಿತಿಯಲ್ಲಿ ನಾವು ಪ್ರಬುದ್ಧರಾಗಿ, ಆಸೆಯ ಬುಗ್ಗೆಗಳು ನಮ್ಮ ಮನದಲ್ಲಿ ಏಳದಿರಲು, ಆ ಆಸೆಗಳು ಉಂಟಾಗಿಸುವ ಎಲ್ಲ ರೀತಿಯ ಭಾವಗಳಿಂದ ಹೊರಬರಬಹುದು. ನಮ್ಮ ವೈಯಕ್ತಿಕ ಅವಶ್ಯಕತೆಗಳೇ ಇಲ್ಲಿವೆಂದಾದರೆ, ಆಗ ಒಂದು ವಿಶಾಲ ಮನೋಭಾವವುಂಟಾಗಿ, ಮಾನ್ಯ ಗುಂಡಪ್ಪನವರು "ಲೋಕವಂ ಸಂತಯಿಪ' ಎಂದು ಹೇಳುವಂತೆ ಅನ್ಯರನ್ನು ಸಂತೈಸುವ ಸ್ಥಿತಿಗೆ ನಾವು ತಲುಪಬಹುದು.

| |
|---|
| ೩ಸಂಸಂ |

| | |
|---|---|
| ಕಗ್ಗರಸಧಾರೆ<br>913 | ತೇನ ತ್ಯಕ್ತೇನ ಭುಂಜೀಥಾಃ ೨ಸ೦೨ - |

ಅಚಿತಹ ಸ್ಥಿತಿಯಲ್ಲಿ ನಾವು ಇಂದ್ರಿಯ ಪ್ರಭಾವಗಳಿಂದ ಹೊರಬಂದಿರುತ್ತೇವಾದ್ದರಿಂದ, ಯಾವ ಬಂಧನಕ್ಕೂ ಒಳಗಾಗದೆ ಇರುತ್ತೇವಾದ್ದರಿಂದ, ನಾವು 'ಮುಕ್ತರಾಗುತ್ತೇವೆ. ಅದೇ ನಿಜವಾದ ಆನಂದದ ಸ್ಥಿತಿ. ಪರಿಸ್ಥಿತಿಗಳ ಒತ್ತಡದಿಂದ ಆ ಸ್ತರಕ್ಕೆ ತಳ್ಳಲ್ಪಡುವರು, ಕೆಲವರು. ಸ್ವಪ್ರಯತ್ನದಿಂದ ಆ ಸ್ಥಿತಿಗೆ ತಲುಪುವವರು ಕೆಲವರು. ಈ ಜಗತ್ತಿನ ಆನಂದದಲ್ಲೇ ಮುಳುಗಿರುವವರು ಹಲವರು. ನಾವು ಯಾವ ಸ್ಥರದಲ್ಲಿದ್ದೇವೆ ಎಂದು ಅರಿತರೆ ಮುಂದಿನ ಸ್ಥರಕ್ಕೆ ಹೋಗುವ ಪ್ರಯತ್ನವನ್ನು ಮಾಡಬಹುದು. ಎಷ್ಟು ಶ್ರಮ ಪಟ್ಟರೆ ಅಷ್ಟು ಫಲ.

**ಮುಕ್ತಕ – 913**

**ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು |**
**ಕತ್ತಲೆಯ ಮೊಡಕು ಮೂಲೆಗಳ ಸೇರದಿರು ||**

**ಭಾಸ್ಕರನನುಗ್ರಹವೆ ನೂತ್ನ ಜೀವನಸತ್ವ ।**

**ಮೃತ್ಯು ನಿನಗಲ್ಪತೆಯೊ – ಮಂಕುತಿಮ್ಮ ॥**

ಭಾಸ್ಕರನನುಗ್ರಹವೆ=ಭಾಸ್ಕರನ+ಅನುಗ್ರಹವೆ, ನಿನಗಲ್ಪತೆಯೊ=ನಿನಗೆ+ಅಲ್ಪತೆಯೊ

ಭಾಸ್ಕರನ=ಸೂರ್ಯನ, ರವಿಯ, ನೂತ್ನ=ಹೊಸ, ನವೀನ, ಅಲ್ಪತೆಯೊ=ಗೌಣ, ಕ್ಷುಲ್ಲಕ

ವಿಸ್ತಾರದಲ್ಲಿ ಬಾಳು, ವೈಶಾಲ್ಯತೆಯಿಂದ ಬದುಕು, ಅಜ್ಞಾನದಿಂದ ಜಗತ್ತಿನ ಸಂಪರ್ಕ ತೊರೆದು ಮೂಲೆ ಸೇರದಿರು. ಬೆಳಕನ್ನೇ ತೋರುವ ಆ ಭಾಸ್ಕರನ ಅನುಗ್ರಹದಿಂದಲೇ ಈ ಜಗತ್ತಿನಲ್ಲಿ ಎಲ್ಲವೂ ನವನವೀನವಾಗಿ ಮತ್ತೆ ಬದುಕಿನ ಉತ್ಸಾಹವನ್ನು ತುಂಬಿಕೊಳ್ಳುತ್ತವೆ. ಒಂದು ವಿಸ್ತಾರವಾದ ಬದುಕಿನಲ್ಲಿ 'ಸಾವು' ಎನ್ನುವುದು ಒಂದು ತೀರ 'ಗೌಣ' ವಾದ ವಿಷಯ ಎಂಬುದನ್ನು ತಿಳಿ, ಎನ್ನುವ ಸಂದೇಶವನ್ನು ನೀಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಾತಿ, ಮತ, ಭಾಷೆ, ದೇಶ ಮತ್ತು ಕಾಲಗಳ ಎಲ್ಲೆಗಳನ್ನು ಮೀರಿ ಒಂದು ವಿಶಾಲವಾದ ಮನೋಭಾವದಿಂದ ಜೀವಿಸಬೇಕು ಮತ್ತು ಹಾಗೆ ಜೀವಿಸುವಾಗ, ನಾನು, ನನ್ನದು ಎನ್ನುವ ಗೋಡೆಗಳನ್ನು ಕೆಡವಿ ಜಗತ್ತಿನ ಜೀವನದಲ್ಲಿ ಒಂದಾಗಬೇಕು ಎನ್ನುವುದೇ ಇಲ್ಲಿನ ಸಾರಾಂಶ, ಇವೆಲ್ಲವುಗಳ ಗೋಡೆಗಳನ್ನು ನಿರ್ಮಿಸಿಕೊಂಡು, ಹೊರಗಿನಿಂದ ಬರುವ ಬೆಳಕನ್ನು ತಡೆದು, ಒಳಗೆ ಕತ್ತಲಾಗಿಸಿಕೊಂಡು, ಕಣ್ಣು ಕಾಣದ ಗಾವಿಲರಂತೆ ಬದುಕಿದರೆ, ಏನನ್ನೂ ಪಡೆಯಲೂ ಆಗುವುದಿಲ್ಲ, ಬೆಳೆಯಲೂ ಸಾಧ್ಯವಿಲ್ಲ ಅಲ್ಲವೇ? ಹಾಗಾಗಿ, ಆ ಗೋಡೆಗಳನ್ನು ಕೆಡವಿ ನಮ್ಮ ಮನದೊಳಕ್ಕೆ ಜ್ಞಾನದ ಬೆಳಕನ್ನು ಹರಿಯ ಬಿಡಬೇಕು. 'ಆ ನೋ ಭದ್ರಾಃ ಕೃತವೋ ಯಂತು ವಿಶ್ವತಃ" ಎಂದರೆ, ಜಗತ್ತಿನ ಎಲ್ಲೆಡೆಯಿಂದಲೂ ನನ್ನ ಒಳಕ್ಕೆ ಜ್ಞಾನದ ಬೆಳಕು ಹರಿದು ಬರಲಿ, ಎನ್ನುವ ಉದಾತ್ತ ಭಾವವನ್ನು ಸೂಸುವ ವೇದ ಸೂಕ್ತದ ಆಶಯವು ನಮ್ಮೆಲ್ಲರ ಮನದಲ್ಲಿ ಅರಳಬೇಕು. ಸೂರ್ಯನೇ ಬೆಳಕು ಮತ್ತು ಬೆಳಕೇ ಜ್ಞಾನದ ಪ್ರತೀಕ ಮತ್ತು ಜ್ಞಾನದಿಂದಲೇ ಹೊಸತನ. ಹಾಗಾಗಿ ಮಾನ್ಯ ಗುಂಡಪ್ಪನವರು ಭಾಸ್ಕರನನುಗ್ರಹವೆ ನೂತ್ನ ಜೀವನಸತ್ವ' ಎಂದಿದ್ದಾರೆ.

ಹೀಗೆ ಜ್ಞಾನ ನಮ್ಮ ಒಳಗೆ ಹರಿದು ಬರಲು ವಿಶ್ವಾತ್ಮಭಾವವುಂಟಾಗಿ, ಆತ್ಮದ ನಿರಂತರತೆಯ ಅರಿವಾಗಿ 'ಮೃತ್ಯು. ಎಂದರೆ ಮರಣ, ಸಾವು' ನಮಗೆ ತೀರ ಗೌಣವಾಗಿ ಕಾಣುತ್ತದೆ. ಏಕೆಂದರೆ ಮೃತ್ಯುವಿನಿಂದ ಯಾವುದು ಅಂತ್ಯವಾಗುವುದಿಲ್ಲವೋ ಅದೇ, ಆತ್ಮ, ಆ ಆತ್ಮವೇ ಜ್ಞಾನದ ಪ್ರತೀಕ. ದೇಹ, ಮನಸ್ಸು, ಬುದ್ಧಿಗಳು ತಮ್ಮ ಸ್ವಸ್ಥಾನಕ್ಕೆ ತೆರಳಿದಾಗ, ಆತ್ಮ ಮತ್ತೊಂದು ರೂಪವನ್ನು ಧರಿಸಿ ತನ್ನ ಜ್ಞಾನದ ಹಾದಿಯ ಪ್ರಯಾಣವನ್ನು ಸಾಗಿಸುತ್ತದೆ. ಆತ್ಮನ ಈ ನಿರಂತರ ಪ್ರಯಾಣದಲ್ಲಿ ಎಷ್ಟು ಬಾರಿ 'ಸಾವು' ಸಂಭವಿಸಿದೆಯೋ ಯಾರಿಗೆ ಗೊತ್ತು. ಹಾಗಾಗಿ 'ಮೃತ್ಯು' ಎಲ್ಲಕ್ಕೂ ಅಂತ್ಯವಲ್ಲವೆಂದು ಅರಿತು, ಅದನ್ನು ಗೌಣವಾಗಿ ಕಾಣಬೇಕು ಎನ್ನುವುದೂ ಸಹ ಈ ಮುಕ್ತಕದ ಸಾರಾಂಶ.

ಹೃದಯ ವೈಶಾಲ್ಯವನ್ನು ಬೆಳೆಸಿಕೊಳ್ಳಬೇಕು. ಮನಃಪಟಲದಲ್ಲಿ, ಬೆಳಕ ಹರಿವನ್ನು ತಡೆವ ಗೋಡೆಗಳನ್ನೆಲ್ಲಾ ಕೆಡವಿ, ಜ್ಞಾನವನ್ನು ಒಳಹರಿಯಬಿಟ್ಟು, ಕೇವಲ ನಮಗೋಸ್ಕರ ಬಾಳದೆ. ವಿಶ್ವಜೀವನವನ್ನು ಅಳವಡಿಸಿಕೊಂಡರೆ ಸಿಗುವ ಆನಂದಕ್ಕೆ ಪಾರವಿರುವುದಿಲ್ಲ. ಅಂತಹ ಆನಂದವನ್ನು ಪಡೆಯುವ ಪ್ರಯತ್ನವನ್ನು ನಾವೂ ಸಹ ಮಾಡಬಹುದು

**ಮುಕ್ತಕ – 914**

**ತೆರೆಯಾಗು ವಿಶ್ವಜೀವನದ ದಿವ್ಯಾಬ್ಧಿಯಲಿ ।**
**ಕರಗಿಸದರಲಿ ನಿನ್ನ ಬೇರೆತನದರಿವ ॥**
**ಮರುತನುರುಬನು ತಾಳುತೇಳುತೋಲಾಡುತ್ತಾ ।**
**ವಿರಮಿಸಾ ಲೀಲೆಯಲಿ - ಮಂಕುತಿಮ್ಮ ॥**

ದಿವ್ಯಾಬ್ಧಿಯಲಿ=ದಿವ್ಯ+ಅಭಿಯಲಿ, ಕರಗಿಸದರಲಿ=ಕರಗಿಸು+ಅದರಲಿ, ಬೇರೆತನದರಿವ=ಬೇರೆತನದ+ಅರಿವ, ಮರುತನುರುಬನು=ಮರುತನ+ಉರುಬನು, ತಾಳುತೇಳುತೋಲಾಡುತ್ತಾ=ತಾಳುತ+ಏಳುತ+ಓಲಾಡುತ್ತಾ,

ವಿರಮಿಸಾ=ವಿರಮಿಸು+ಆ, ಅಬ್ಧಿ=ಕಡಲು, ಮರುತನ=ಗಾಳಿಯ, ಉರುಬನು=ರಭಸವನು

'ನಾನು ಬೇರೆ' ಎನ್ನುವ ಭಾವವನ್ನು ತೊರೆದು, ಕಡಲಿನಲ್ಲಿ ಗಾಳಿಯ ಬೀಸುವಿಕೆಯಿಂದ, ಮೇಲೇಳುತಾ, ಬೀಳುತ್ತಾ ಕಡಲಲ್ಲಿ ಒಂದಾಗುವ 'ಅಲೆ'ಯಂತೆ ನೀನೂ ಸಹ ಈ ಜಗತ್ಸಾಗರದಲ್ಲಿ ಮತ್ತು ಪರಮಾತ್ಮನ ಲೀಲೆಯಲ್ಲಿ ಒಂದಾಗಿ ಬಾಳು, ಎಂದು ಆದೇಶವನ್ನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು.

ಇಂದು ಹುಟ್ಟಿ, ಬೆಳೆದು, ಹೂತು, ಕಾತು, ಹಣ್ಣಾಗಿ ತರಗೆಲೆಯಂತೆ ನಾಳೆ ಉದುರಿಹೋಗುವಂತಹದ್ದು ನಮ್ಮ ಜೀವನ. ನಮ್ಮ ಅಸ್ತಿತ್ವವನ್ನೇ ಸಂಪೂರ್ಣವಾಗಿ ಕಳೆದುಕೊಳ್ಳುವ ಈ ಜೀವನದಲ್ಲಿ ನಾವು, 'ನಾನು, ನಾನು' ಎಂದು ಎಷ್ಟು ಅರುಚಾಡಿದರೂ, ಇದಕ್ಕೊಂದು ಅಂತ್ಯವುಂಟು. ಇಂತಹ ಕ್ಷಣಿಕ ಬದುಕನ್ನು ಪಡೆದ ನಾವು





ಸುಮ್ಮನೆ ಕಿರುಚಿ ಅರುಚಾಡಿದರೆ, ಶ್ರಮವೊಂದನ್ನು ಬಿಟ್ಟರೆ, ಯಾವ ಸಾಧನೆಯನ್ನೂ ಮಾಡಿದಂತಾಗುವುದಿಲ್ಲ. ಸಮುದ್ರದಲ್ಲಿ ಗಾಳಿಯ ರಭಸದಿಂದ, ಮೇಲೆಕ್ಕೆದ್ದು ಕ್ಷಣಿಕ ಅಸ್ತಿತ್ವವನ್ನು ಹೊಂದಿ, ಕ್ಷಣಾರ್ಧದಲ್ಲಿಯೇ ಕರಗಿ, ತನ್ನ ಅಸ್ತಿತ್ವವನ್ನು ಕಳೆದುಕೊಂಡು, ಕಡಲೊಳಕ್ಕೆ ಸೇರಿಹೋಗುವ 'ಅಲೆ'ಯಂತೆ, 'ನಾನು ಬೇರೆ' ಎನ್ನುವ ಭಾವವನ್ನು ಬಿಟ್ಟು ಜಗತ್ತಿನ ಬದುಕಿನಲ್ಲಿ ಸೇರಿ ಹೋಗಬೇಕು ಎನ್ನುವುದೇ ಈ ಮುಕ್ತಕದ ಹೂರಣ.

ಮಮಕಾರವನ್ನು ತೊರೆದರೆ ಹಾಗಾಗಲು ಸಾಧ್ಯ. ಆದರೆ ಮಮಕಾರವನ್ನು ತೊರೆಯುವುದು ಅಷ್ಟು ಸುಲಭವೇ? ಈ ಜಗತ್ತಿನ ಸೆಳೆತಗಳಿಂದ ಹಿಗ್ಗಾ ಮುಗ್ಗ ಎಳೆದಾಡಲ್ಪಡುವ ನಾವು, ಅಂತಹ ಸ್ಥಿತಿಗೆ ಹೋಗಬೇಕಾದರೆ ಬಹಳಷ್ಟು ಪ್ರಯಾಸಪಡಬೇಕು. ಪುರಂದರದಾಸರು ತಮ್ಮ ಉದರವೈರಾಗ್ಯವಿದು' ಎನ್ನುವ ಗೀತೆಯಲ್ಲಿ, 'ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ, ಏನೆಲ್ಲಕೆ ದೇವ ಪ್ರೇರಣೆಯೆಂದು' ಎನ್ನುತ್ತಾ, 'ನಾನು' ಎನ್ನುವ ಭಾವವನ್ನು ತೊರೆದು, ನಮ್ಮ ಬದುಕು ದೇವ ಪ್ರೇರಣೆಯಿಂದ ನಡೆಯುತ್ತದೆ ಎಂದು ನಂಬಬೇಕು, ಎನ್ನುತ್ತಾರೆ. ಹಾಗೆ ನಂಬಿದರೆ, ಆ

ನಂಬಿಕೆಯೇ 'ಮಮಕಾರ'ವನ್ನು ನಮ್ಮಿಂದ ದೂರಾಗಿಸುತ್ತದೆ. ಆಗ ಮಾನ್ಯ ಗುಂಡಪ್ಪನವರು "ಎಲ್ಲರೊಳಗೊಂದಾಗು - ಮಂಕುತಿಮ್ಮ" ಎಂದು ಹೇಳುವಂತೆ, ಕಡಲ ಅಲೆ ಕಡಲಲ್ಲಿ ಲೀನವಾಗುವಂತೆ, ನಾವೂ ಸಹ. ಎಲ್ಲರೊಳಗೆ ಒಂದಾಗಬಹುದು.

"ವಿರಮಿಸಾ ಲೀಲೆಯಲಿ' ಎಂದಿದ್ದಾರೆ ಡಿವಿಜಿ, ಎಂದರೆ, 'ನಮ್ಮನ್ನೇ ನಾವು ನೋಡಿಕೊಳ್ಳುವುದನ್ನು ತೊರೆದರೆ, ಅರ್ಥಾತ್ 'ಮಮ' ಕಾರವನ್ನು ತೊರೆದರೆ, ಜಗತ್ತನ್ನು ನೋಡಬಹುದು, ಸೃಷ್ಟಿಯನ್ನು ನೋಡುತ್ತಾ ಸೃಷ್ಟಿಕರ್ತನನ್ನು ಮತ್ತು ಅವನ ಲೀಲೆಯನ್ನೂ ನೋಡಬಹುದು ಮತ್ತು ಆ ಲೀಲೆಯಲ್ಲಿ ನಾವೂ ಒಂದಾಗಬಹುದು. ಕಡಲ ನೀರು ಸೂರ್ಯನ ಶಾಖದಿಂದ ಆವಿಯಾಗಿ, ಮೋಡವಾಗಿ, ಮಳೆಯಾಗಿ ಧರೆಗಿಳಿದು ನದಿಯಾಗಿ ಒಂದು ಹೆಸರನ್ನು ಹೊತ್ತು ಹರಿಯುತ್ತಾ ತನ್ನ ಮೂಲವಾದ ಕಡಲನ್ನು ಸೇರುತ್ತದೆ. ಹಾಗೆ ಕಡಲ ಸೇರಿದ ನದಿ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡು ಕಡಲಲ್ಲಿ ಲೀನವಾಗುವಂತೆ, ಸೃಷ್ಟಿಯಿಂದಲೇ ಅಸ್ತಿತ್ವವನ್ನು ಪಡೆದ ನಾವು ಅದರೊಳಗೊಂದಾದರೆ, ನಮ್ಮ ಗಮ್ಯವಾದ ಆ ಪರಮಾತ್ಮನಲ್ಲಿ ಮತ್ತು ಅವನ ಲೀಲೆಯಲ್ಲಿ ಒಂದಾಗಬಹುದು.

3ಸ03



**ಮುಕ್ತಕ - 915**

**ಬರಿಯ ಪೊಳ್ಳುವಿಚಾರ ಮಾನುಷವ್ಯಾಪಾರ |**

**ಪರಿಕಿಸಲು ಪುಣ್ಯವೆಂಬುದುಮಹಂಕಾರ ||**

**ಅರಳಿ ಮೊಗವನಿನಿತಿನಿತು, ನಕ್ಕು ನಗಿಸಿರೆ ಸಾರ |**

**ಹೊರೆ ಮಿಕ್ಕ ಸಂಸಾರ - ಮಂಕುತಿಮ್ಮ ||**

ಪುಣ್ಯವೆಂಬುದುಮಹಂಕಾರ=ಪುಣ್ಯವೆಂಬುದುಂ+ಅಹಂಕಾರ, ಮೊಗವನಿತಿನಿತು=ಮೊಗವನ್+ಇನಿತು+ಇನಿತು,

ಈ ಜಗತ್ತಿನಲ್ಲಿ ಮನುಷ್ಯ ಮನುಷ್ಯರ ನಡುವೆ ನಡೆಯುವುದೆಲ್ಲಾ ಹುರುಳು-ತಿರುಳು ಇಲ್ಲದ ಪೊಳ್ಳುವಿಚಾರ. ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ ಪುಣ್ಯವೆಂಬುದೂ ಸಹ ಅಹಂಕಾರದ ಮಾತು. ಮುಖವನ್ನು ಪ್ರಸನ್ನವಾಗಿಟ್ಟುಕೊಂಡು ತಾನೂ ನಕ್ಕು, ಇತರರನ್ನೂ ನಗಿಸಿದರೆ, ಬದುಕು ಸತ್ವಯುತವಾಗಿರುತ್ತದೆ. ಮಿಕ್ಕ ಸಂಸಾರವೆಲ್ಲ ಕೇವಲ ಭಾರವಾದ ಹೊರೆಯಾಗಿರುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಾಮಾನ್ಯವಾಗಿ ಲೋಕದ ಜನರ ಜೀವನವನ್ನು ಗಮನಿಸಿದರೆ, ಎಲ್ಲೋ ಕೆಲವರನ್ನು ಬಿಟ್ಟರೆ ಮಿಕ್ಕೆಲ್ಲರೂ ಬದುಕುವುದು ಸಾಧಾರಣ ಬದುಕು. ಹುಟ್ಟಿದಾರಭ್ಯ ಏನನ್ನೋ ಕಲಿತು, ಯಾವುದೋ ವೃತ್ತಿಯಲ್ಲಿ ತೊಡಗಿ, ಹಣ ಸಂಪಾದನೆ ಮಾಡಿ, ಮನೆ, ಮಡದಿ ಅಥವಾ ಗಂಡ, ಮಕ್ಕಳು, ಎಂದು ಸಂಸಾರದಲ್ಲಿ ಮುಳುಗಿ, ತಿಂದು, ಉಂಡು, ಮಲಗಿ ಬೆಳಗು, ಬೈಗುಗಳನ್ನು, ಕಳೆಯುತ್ತಾ ಆಯುಸ್ಸನ್ನು ಕಳೆದು, ಕಡೆಗೊಂದು ದಿನ ಕೃಶವಾದ ದೇಹವನ್ನು ತೊರೆದು ಪ್ರಾಣತ್ಯಾಗ ಮಾಡಿ, ಒಂದು ಜನ್ಮವನ್ನು ಸಂಪೂರ್ಣಗೊಳಿಸಿವುದು. ಅಂತಹ ಬದುಕಿನಲ್ಲಿಯ ಸಾಧನೆ ಸೊನ್ನೆ. ಇನ್ನೂ ಕೆಲವರಿದ್ದಾರೆ, ಏನನ್ನಾದರೂ ಹೊಸತನ್ನು ಮಾಡುತ್ತಲೇ ಇರಬೇಕು, ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಬೇಕು ಎನ್ನುವ ತುಡಿತದ ಕಾರಣ, ಅವರ ದುಡಿಮೆ, ಹಣ ಸಂಪಾದನೆ, ಆಸ್ತಿ ಸಂಚಯನ, ಹಲವಾರು ತಲೆಮಾರುಗಳಿಗಾಗುವಷ್ಟು ಸಂಪತ್ತಿನ ಶೇಕರಣೆ ಮಾಡಿದರೂ, ಎಲ್ಲವನ್ನೂ ಇಲ್ಲಿಯೇ ಬಿಟ್ಟು ಹೊರಡಬೇಕಾದುದ್ದರಿಂದ, ಆ ಸಾಧನೆಯ ಸಾರ್ಥಕ್ಯವೂ ಶೂನ್ಯ. ಇದನ್ನೇ ಮಾನ್ಯ ಗುಂಡಪ್ಪನವರು 'ಬರಿಯ ಸೊಳ್ಳುವಿಚಾರ ಮಾನುಷ ವ್ಯಾಪಾರ" ಎಂದಿದ್ದಾರೆ. ಅಂತಹ ಬದುಕಿನಲ್ಲಿ ಯಾವ ಸಾರ್ಥಕ್ಯವೂ ಇಲ್ಲ.

ಮತ್ತೂ ಕೆಲವರು, ಸಮಾಜ ಸೇವೆಯನ್ನು ಮಾಡುತ್ತಾರೆ ಮತ್ತು ಬಹಳಷ್ಟು ಬಾರಿ ತಮ್ಮನ್ನು ನಂಬಿದ ಮತ್ತು ತಮ್ಮ ಮೇಲೆ ಆಧಾರಪಟ್ಟಿರುವವರನ್ನು ಕಡೆಗಣಿಸಿ, ತಮಗೂ ಹಾನಿ ಮಾಡಿಕೊಂಡು, ತಮ್ಮ ಸುಖವನ್ನೂ ತ್ಯಜಿಸಿ ಅನ್ಯರಿಗುಪಕಾರ ಮಾಡುವ ಕೆಲಸವನ್ನು ಮಾಡುತ್ತಾರೆ. ಇಂತಹವರನ್ನು ಮನೆಗೆ ಮಾರಿ, ಪರರಿಗುಪಕಾರಿ' ಎನ್ನುತ್ತಾರೆ. ಹಾಗೆ ಮಾಡುವಾಗ ಅವರಿಗೆ ಅದೇನೋ ಒಂದುರೀತಿಯ ಸಂತೋಷ, ಆನಂದ. ಅದು ಪುಣ್ಯ ಕೆಲಸವಾದರೂ 'ನಾನು' ಅಂತಹ ಕೆಲಸವನ್ನು ಮಾಡಿ ಪುಣ್ಯ ಸಂಪಾದಿಸುತ್ತೇನೆ, ಅನ್ಯರಿಗುಪಕಾರ ಮಾಡುವ

"ಭಾಗ್ಯ ನನ್ನದು' ಎಂದು ಬೀಗುತ್ತಾರೆ. ಹಾಗೆ ಮಾಡುವುದೂ ಸಹ ಕೇವಲ 'ಅಹಂಕಾರದ ಭಾವ ದಿಂದಾಗುತ್ತದಾದ್ದರಿಂದ ಅದೂ ಸಹ ಸರಿಯಲ್ಲ ಎನ್ನುತ್ತಾರೆ ಡಿವಿಜಿಯವರು. ಮಾಡಿದ ಕೆಲಸಕ್ಕೆ ಸನ್ಮಾನ, ಬಿರುದು, ತಾಮ್ರ ಪತ್ರ, ಮಾಶಾಸನ ಹೀಗೆ ಏನನ್ನಾದರೂ ಪಡೆದರೆ 'ಪುಣ್ಯ'ವೆಲ್ಲಿ ಬಂತು, ಅದೂ ಸಹ ವ್ಯಾಪಾರದಂತಾಗುತ್ತದೆ ಅಲ್ಲವೇ?

ಆದರೆ ಇಂತಹ ಭಾವಗಳನೆಲ್ಲಾ ತೊರೆದು ಹೇಗಿರಬೇಕು? ಎನ್ನುವ ಪ್ರಶ್ನೆಗೆ ಮಾನ್ಯ ಗುಂಡಪ್ಪನವರು, 'ಪ್ರಸನ್ನ ಚಿತ್ತನಾಗಿ, ಅರಳಿದ ಮುಖನಾಗಿ, ನಗುನಗುತ್ತಾ, ನಿನ್ನ ಮನಸ್ಸಿನಲ್ಲಿನ ನಗುವಿನ ಕಾರಣವನ್ನು ಅನ್ಯರಿಗೂ ಹಂಚಿ, ಅವರ ನಗುವಿಗೂ ಕಾರಣನಾಗಿ ಬದುಕು" ಎನ್ನುತ್ತಾರೆ. ಅದು ಹಗುರವಾದ ಬದುಕು. ಬಂದು ಹೋಗುವ ನಡುವೆ, ನಮ್ಮ ಜೀವನ ಹಗುರಾಗಬೇಕು. ಯಾವ ಅಂಟೂ ಇಲ್ಲದೆ, ಯಾವ ಹೊರೆಯ ಭಾರವೂ ಇಲ್ಲದೆ, ಅಂಟಿ ಅಂಟದ ಹಾಗೆ ಇದ್ದು, ನಮ್ಮ ಮತ್ತು ಅನ್ಯರ ಬದುಕನ್ನೂ ಒಂದು 'ಸಾಕ್ಷೀಭೂತ' ವಾಗಿ ನೋಡುತ್ತಾ ಬದುಕನ್ನು ಕಳೆದರೆ ಒಳ್ಳೆಯದು ಎನ್ನುವ ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು. ಇದು ಸಾಧನೆಯಿಂದ ಬರುವಂತಹ ಭಾವ. ಪ್ರಯತ್ನಪೂರ್ವಕವಾಗಿ ಸಾಧಿಸಿದರೆ, ಅಂತಹ ಹಗುರವಾದ ಜೀವನ ನಮ್ಮದಾಗಬಹುದು, ಜಗತ್ತಿನಲ್ಲಿ ಅಲ್ಲದೆ, ಜಗದಾತ್ಮಭಾವದಲ್ಲಿ ನಾವು ಜೀವಿಸುವಂತಾಗುತ್ತದೆ.

**ಮುಕ್ತಕ – 916**

**ಜನ್ಮ ಸಾವಿರ ಬರಲಿ, ನಷ್ಟವದರಿಂದೇನು ? |**
**ಕರ್ಮ ಸಾವಿರವಿರಲಿ, ಕಷ್ಟ ನಿನಗೇನು? ||**
**ಬ್ರಹ್ಮ ಹೃದಯದಿ ನಿಲ್ಲೆ ಮಾಯೆಯೇಂಗೈದೊಡೇಂ? |**
**ಇಮ್ಮಿದಳ ಸರಸವಿದು - ಮಂಕುತಿಮ್ಮ ||**

ನಷ್ಟವದರಿಂದೇನು=ನಷ್ಟವು+ಅದರಿಂದ+ಏನು, ಮಾಯೆಯೇಂಗೈದೊಡೇಂ=ಮಾಯೆ+ಯೇಂ+ಗೈದೊಡೆ+ಏಂ, ಇಮ್ಮಿದಳ=ಇನಿಯಳ,

ಸಾವಿರಾರು ಜನ್ಮಗಳು ಬರಲಿ, ಅದರಿಂದ ನಷ್ಟವೇನೂ ಇಲ್ಲ. ಆ ಜನ್ಮಗಳಲ್ಲಿ, ನಮ್ಮ ಕರ್ಮಗಳು ಸಾವಿರಾರು ಆಣಲಿ, 'ಬ್ರಹ್ಮ' ಹೃದಯದಲ್ಲಿ ಸ್ಥಿರವಾಗಿ ನಿಂತರೆ, ಅದನ್ನು ಅನುಭವಿಸಲು ನಮಗೇನು ಕಷ್ಟ? ಈ ಮಾಯೆಯೆಂಬ ಮೋಹಿನಿ ಏನು ಮಾಡಿದರೇನು? ಈ ಜಗತ್ತಿನ ಲೀಲಾ ವಿನೋದವನ್ನು, ಪ್ರೇಯಸಿಯ ಸರಸವೆಂಬಂತೆ ಬಗೆದು ಶಾಂತವಾಗಿ ಜೀವಿಸಬಹುದು ಎಂದು ಬದುಕಿನಲ್ಲಿ ಇದ್ದು, ಅದನ್ನು ಅನುಭವಿಸುತ್ತಾ ಇದ್ದರೂ, ನಿರ್ಲಿಪ್ತತೆಯ ಜೀವನದ ಮಾರ್ಗವನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ನಾವು ಹಿಂದೆಯೂ ಈ ಜಗತ್ತಿನಲ್ಲಿ ಹುಟ್ಟಿದ್ದೆವು. ಮುಂದೆಯೂ ಹುಟ್ಟುತ್ತೇವೆ. ನಮ್ಮ ಹುಟ್ಟಿನಲ್ಲಿ ನಮ್ಮ





ಪ್ರಮೆಯವೇನೂ ಇರುವುದಿಲ್ಲ. ಅದು ತಾನೇ ತಾನಾಗಿ, ತನ್ನದೇ ವಿನ್ಯಾಸದಲ್ಲಿ ನಡೆಯುವ ಒಂದು ವ್ಯವಸ್ಥೆ. ಹಿಂದಿನ ಹುಟ್ಟಿನ ನೆನಪುಗಳು ನಮಗೆ ಇಲ್ಲ, ಹಾಗೆಯೇ ಮುಂದೆ ಎಂತಹ ರೀತಿಯ ಜನ್ಮ ಬರುತ್ತದೆ ಎನ್ನುವುದೂ ನಮಗೆ ಗೊತ್ತಿಲ್ಲ. ಅಷ್ಟೇ ಅಲ್ಲ 'ಇದು ನಮಗೆ ಇಷ್ಟವಿಲ್ಲ, ಇದು ಬಹಳ ಕಷ್ಟ' ಎಂದು ಇಲ್ಲಿಂದ ಪಲಾಯನ ಮಾಡಲೂ ಸಾಧ್ಯವಿಲ್ಲ. ಅನುಭವಿಸಿಯೇ ತೀರಬೇಕು. ಈ ವಿಷಯ ಎಲ್ಲರಿಗೂ ಗೊತ್ತಿರುವುದೇ ಅಲ್ಲವೇ? ಹಾಗಿರುವಾಗ ಎಷ್ಟು ಜನ್ಮಗಳು ಬಂದರೇನು? ಅವುಗಳಲ್ಲಿ ಎಷ್ಟು ಕಷ್ಟ ಅನುಭವಿಸಿದರೇನು? ಅವುಗಳು ಶಾಶ್ವತವಲ್ಲದಮೇಲೆ ?

ಆದರೆ ಈ ಜನುಮಗಳಲ್ಲಿ ನಾವು ಅನುಭವಿಸುವ ಕಷ್ಟಗಳಿಂದಾಗುವ ಅನುಭವಗಳು ನಮ್ಮ ಗುಣಪರಿವರ್ತನೆಗೆ ಕಾರಣವಾಗಿ, ನಮ್ಮ ಸ್ವಭಾವವಾಗುವ ಸಾಧ್ಯತೆಗಳಿವೆ. ಹಾಗಾಗಿ ಆ ಕಷ್ಟಗಳ ಅನುಭವಗಳು ನಮ್ಮ ಒಳಗೆ ಹೊಕ್ಕು, ಸ್ವಭಾವವಾಗಿ ನೆಲೆಯೂರದಂತೆ ಆಗಬೇಕಾದರೆ, ಮಾನ್ಯ ಗುಂಡಪ್ಪನವರು 'ಬ್ರಹ್ಮ ಹೃದಯದಿ ನಿಲ್ಲೇ' ಎಂದು ಹೇಳುವಂತೆ, ಸದಾ ಕಾಲ ಆ ಪರಮಾತ್ಮನನ್ನು ಮನಸ್ಸಲ್ಲಿ ನಿಲ್ಲಿಸಿಕೊಂಡು, ಈ ಜಗತ್ತು ಮತ್ತು ಇದರಲ್ಲಿನ ನಮ್ಮಯ ಜೀವನ ಆ ಪರಬ್ರಹ್ಮನ ಲೀಲಾವಿನೋದದ ನಾಟಕದ ಒಂದು ಅಂಕ, ಇದರಲ್ಲಿ ನಾವೆಲ್ಲಾ ಕೇವಲ ಪಾತ್ರಧಾರಿಗಳು, ಇದ್ಯಾವುದೂ ಸತ್ಯವಲ್ಲ, ಇದು ಮಾಯೆ ಎಂಬ ಅರಿವನ್ನಿಟ್ಟುಕೊಂಡು ಬದುಕಿದರೆ, ಎಷ್ಟು ಜನ್ಮ ಬಂದರೇನು? ಎಷ್ಟು

ಕಷ್ಟಗಳನ್ನು ಅನುಭವಿಸಿದರೇನು? ಯಾವುದಕ್ಕೂ ಅಂಟದ ಮತ್ತು ಯಾವುದನ್ನೂ ಅಂಟಿಸಿಕೊಳ್ಳದ, ನಿರ್ಲಿಪ್ತ ಬದುಕನ್ನು ಬದುಕಿಬಿಡಬಹುದು.

ಹಾಗೆ, ಸದಾಕಾಲ ನಮ್ಮ ಮನಸ್ಸು ಬುದ್ಧಿಗಳು ಪರಬ್ರಹ್ಮನಲ್ಲಿ ಲೀನವಾಗಿದ್ದರೆ, ಬದುಕಿನ ಎಲ್ಲಾ ಕೆಲಸಗಳನ್ನೂ ಮಾಡುತ್ತಾ ಇದ್ದರೂ, ಅವುಗಳ ಪ್ರಭಾವ ನಮ್ಮ ಮೇಲೆ ಆಗದೆ, ಅದೊಂದು ಮಾಯೆಯಾಡುವ ನಾಟಕವೆಂದು ಭಾವಿಸುತ್ತಾ ಬದುಕಿದರೆ, ಯಾವ ಜನ್ಮದಲ್ಲಿ ಏನು ಬಂದರೂ ಯಾವುದೂ ನಮ್ಮನ್ನು ಬಾಧಿಸದೆ, ನಮ್ಮ ಗುಣಗಳ ಮೇಲೆ ಪ್ರಭಾವ ಬೀರುವುದಿಲ್ಲವಾದ್ದರಿಂದ, ನಿರ್ಲಿಪ್ತತೆಯೇ ನಮ್ಮ ಗುಣವಾಗುತ್ತದೆ ಮತ್ತು ನಾವು 'ಮುಕ್ತಭಾವದಿಂದ ಜೀವಿಸಬಹುದು, ಎನ್ನುವುದೇ ಈ ಮುಕ್ತಕದ ಹೂರಣ. ಅಂತಹ ಬದುಕನ್ನು ಬದುಕಲಾದರೆ ನಮಗಿಂತ ಅದೃಷ್ಟಶಾಲಿಗಳು ಬೇರಾರೂ ಇರಲು ಸಾಧ್ಯವಿಲ್ಲ ಅಲ್ಲವೇ? ಧೀರ್ಘಕಾಲದ ಸಾಧನೆ ಮತ್ತು ಪ್ರಯತ್ನದಿಂದ ಅಂತಹ ಸ್ಥಿತಿಯನ್ನು ಸಾಧಿಸಬಹುದು.

| 3ಸಿ06 |
|---|

| ಕಗ್ಗರಸಧಾರೆ | ನಕ್ಕು ನಗಿಸಿರೆ ಸಾರ 914 - 918 |
|---|---|

**ಮುಕ್ತಕ – 917**

**ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ |**

**ನಗುವ ಕೇಳುತ ನಗುವುದತಿಶಯದ ಧರ್ಮ ||**

**ನಗುವ ನಗಿಸುವ ನಗಿಸಿ ನಗುತ ಬಾಳುವ ವರವ |**

**ಮಿಗೆ ನೀನು ಬೇಡಿಕೊಳೊ - ಮಂಕುತಿಮ್ಮ ||**

ಮಿಗೆ = ಅಧಿಕವಾಗಿ

ನಗುವುದು ಮಾನವನ ಸಹಜವಾದ ಧರ್ಮ. ನಗಿಸುವುದು ನಾವು ಆಚರಿಸಬಹುದಾದ, ಪರಧರ್ಮ. ಮತ್ತೊಬ್ಬರ ನಗುವನ್ನು ಕೇಳುತ್ತಾ, ನಾವು ನಗುವುದು ಅತಿಶಯದ ಧರ್ಮ. ನಾವು ನಗುವ, ನಗಿಸುವ, ಮತ್ತೊಬ್ಬರನ್ನು ನಗಿಸುವಾಗ ನಾವೂ ನಗುವಂತಹ ಭಾವವಿರಲಿ ಎಂದು ನೀನು ಅಧಿಕವಾಗಿ ಆ ವರವನ್ನು, ಪರಮಾತ್ಮನಲ್ಲಿ ಬೇಡಿಕೊಳ್ಳು, ಎಂದು ಒಂದು ಅದ್ಭುತ ಸಂದೇಶವನ್ನು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಇಡೀ ಸೃಷ್ಟಿಯಲ್ಲಿ ಪ್ರಾಣಿ ಸಂಕುಲದಲ್ಲಿ 'ನಗಲು' ಸಾಧ್ಯವಾಗುವುದು, ಕೇವಲ ಮನುಷ್ಯ ಪ್ರಾಣಿಗೆ, ಅದು ಮನುಷ್ಯನ ಸಹಜ ಗುಣ, ಆದ್ದರಿಂದ ಮನುಷ್ಯರಿಗೆ ನಗುವುದು ಸಹಜ ಧರ್ಮ, ಅಕಸ್ಮಾತ್ ಯಾರಾದರೂ ನಗದೇ ಇದ್ದರೆ, ಅವರಲ್ಲಿ ಏನೋ ಕೊರತೆ ಎಂದೇ ಅರ್ಥ. ಮನಸ್ಸಿಗೆ ಸಂತೋಷವಾದಾಗ ನಗುವುದು ಮನುಷ್ಯರ ಸಹಜ ಧರ್ಮ. ಹಾಗೆ ತಾವು ನಗುವಾಗ, ತಮ್ಮ ನಗುವಿನ ಕಾರಣವನ್ನು ಇತರರೊಡನೆ ಹಂಚಿಕೊಂಡು, ಅವರನ್ನೂ ನಗಿಸುವುದು, ಪರಧರ್ಮ, ಎಂದರೆ ಪರರಿಗಾಗಿ ನಾವು ಆಚರಿಸಬೇಕಾದ ಧರ್ಮ. ಹಾಗೆಯೇ, ಮತ್ತೊಬ್ಬರು ನಗುತ್ತಿರುವಾಗ, ಅವರ ನಗುವಿನ ಕಾರಣವನ್ನು ನಮ್ಮ ಮನದಲ್ಲಿ ಅನುಭವಿಸಿ, ಅವರ ನಗುವನ್ನು ಕೇಳುತ್ತಾ, ನಾವೂ ನಗುವುದು, ಅತಿಶಯದ ಧರ್ಮ.

ಹಾಗಾಗಿ, ನಾವು ನಗುವುದು, ಅನ್ಯರನ್ನು ನಗಿಸುವುದು ಅಥವಾ ಅನ್ಯರ ನಗುವನ್ನು ಕಂಡು ನಾವು ನಗುವುದು, ಎಲ್ಲವೂ ಮನುಷ್ಯರ 'ನಗೆ' ಯ ಧರ್ಮದಲ್ಲಿ ಪರಿಭಾಷೆಯಲ್ಲಿ ಬರುತ್ತವೆ. ಆದರೆ ನಮ್ಮಲ್ಲಿ ಕೆಲವರು ನಗುವುದೇ ಇಲ್ಲ. ಮಾನಸಿಕ ರೋಗದಿಂದ ಬಳಲುವ ಅವರಿಗೆ, ಯಾವುದೇ ವಿಷಯ, ಆನಂದ ಅಥವಾ ಸಂತೋಷವನ್ನು ಕೊಡುವುದಿಲ್ಲ, ಹಾಗಾಗಿ, ಅವರು ನಗುವುದಿಲ್ಲ. ಕೆಲವರು "ನಾವು ಬಹಳ ಉತ್ತಮರು, ಅನ್ಯರ ಹಾಗೆ ಅಲ್ಲ. ಅವರೆದುರು ನಾವು ನಕ್ಕರೆ, ಸದರವಾಗಿಬಿಡುತ್ತೇವೆ" ಎನ್ನುವಂತಹ ದುರ್ಭಾವದ ಬಿಗುಮಾನದಿಂದ ನಗುವುದಿಲ್ಲ. ಇದೂ ಒಂದು ರೀತಿಯ ಮಾನಸಿಕ ರೋಗವೇ. ಮತ್ತೂ ಕೆಲವರಿಗೆ ಬದುಕಿನ ಕಾರ್ಪಣ್ಯಗಳ ನಡುವೆ ನಲುಗಿ, ನೊಂದು, ಬೆಂದು, ಪಾಪ ನಗೆಯನ್ನೇ ಕಳೆದುಕೊಂಡುಬಿಟ್ಟಿರುತ್ತಾರೆ. ಕೆಲವು ಅತಿಶಯದ ವ್ಯಕ್ತಿಗಳಿದ್ದಾರೆ, ಇವರುಗಳು ಮನಸ್ಸಿನಲ್ಲಿ ಎಷ್ಟೇ ನೋವು, ಕಷ್ಟ ಮತ್ತು ದುಃಖವಿದ್ದರೂ, ಎಂತಹ ಸಂದರ್ಭದಲ್ಲೂ ತಾವೂ ನಗುತ್ತಾ, ಅನ್ಯರನ್ನೂ ನಗಿಸುತ್ತಾ, ಪರರ ನಗೆಯಲ್ಲಿ ತಾವೂ ಭಾಗಿಯಾಗುವ ಮನೋಭಾವವಿಟ್ಟುಕೊಂಡಿರುತ್ತಾರೆ. ಅಂತಹವರು ಅತೀ ಉತ್ತಮರು.

ಕೆಲವರದು ಗಹಗಹಿಸುವ ನಗೆ, ಕೆಲವರದು ಮುಗುಳುನಗೆ, ಕೆಲವರದು ಮೃದು ಮಂದಹಾಸ, ಮತ್ತೆ ಕೆಲವರದು ತುಟಿಯಂಚಿನ ಕಿರುನಗೆ, ನಗೆ ಹೇಗಾದರೂ ಇರಲಿ, ಮನಸ್ಸು ಸಂತೋಷಪಡುವುದು ಮುಖ್ಯ, ನಗಲಾದವರ ಕುರಿತು ಒಂದು ಹಾಡು ಜ್ಞಾಪಕಕ್ಕೆ ಬರುತ್ತದೆ "ನಗ ಬೇಕು, ನಗಿಸ ಬೇಕು ಇದೇ ನನ್ನ ಧರ್ಮ, ನಗಲಾರೆ ಎಂದರೇ, ಅದು ನಿನ್ನ ಕರ್ಮ" ಎಂದು. ಹಾಗಾಗಿ ನಾವು ನಗುವ, ನಮ್ಮ ನಗುವನ್ನು ಇತರರಿಗೆ ಹಂಚುತ್ತಾ ಅನ್ಯರನ್ನು ನಗಿಸುವ, ಹಾಗೆ ಅನ್ಯರು ನಗುವಾಗ ಅವರ ನಗುವಿನಲ್ಲಿ ನಮ್ಮ ನಗುವನ್ನು ಸೇರಿಸಿ ಆನಂದಪಡುವಂತಹ ಸ್ವಭಾವ ನಮ್ಮದಾಗಲಿ ಎಂದು ಆ ಪರಮಾತ್ಮನನ್ನು ಬೇಡಿಕೋ ಎಂದು ಮಾನ್ಯ ಗುಂಡಪ್ಪನವರು ಆದೇಶಿಸಿದ್ದಾರೆ ಈ ಮುಕ್ತಕದಲ್ಲಿ. ಮುಕ್ತ ಮನಸಿದ್ದರೆ ನಗಬಹುದು. ನಗಲು ಸಂತೋಷಪಡುವ ಮನೋಭಾವವಿರಬೇಕು. ಈ ಮುಕ್ತಕದ ಆಶಯದಂತೆ ನಮಗೆ ನಕ್ಕು, ನಗಿಸಿ, ಮತ್ತೆ ಪರರ ನಗುವಿನೊಡನೆ ನಾವೂ ನಗಲು ಸಾಧ್ಯವಾದರೆ, ನಮ್ಮಂತಹ ಸುಖಿಗಳು ಈ ಜಗತ್ತಿನಲ್ಲಿ ಬೇರೆ ಇರಲು ಸಾಧ್ಯವಿಲ್ಲ ಅಲ್ಲವೇ?

**ಮುಕ್ತಕ – 918**

**ನೆನೆನೆನೆದು ಗಹನವನು, ಜೀವನರಹಸ್ಯವನು ।**
**ಮನವ ಬಳಲಿಸಿ ಸೋಲಿಸಿರುವ ತತ್ವವನು ॥**
**ಮನನದೇಕಾಂತದಲಿ ಮೌನದ ಧ್ಯಾನದಲಿ ।**
**ಮಣಿಮಣಿದು ಕೈಮುಗಿಯೊ - ಮಂಕುತಿಮ್ಮ ॥**

ಮನನದೇಕಾಂತದಲಿ= ಮನನದ+ಏಕಾಂತದಲ್ಲಿ

ಮೌನದದಿಂದ ಮಾಡುವ ಧ್ಯಾನದಲ್ಲಿ ಮತ್ತು ಮನನ ಮಾಡುವಾಗಿನ ಏಕಾಂತದಲ್ಲಿ, ನಿನ್ನ ಮನವನ್ನು ಬಳಲಿಸಿ, ಸೋಲಿಸಿರುವ ಆ ಗಹನವಾದ ಜೀವನ ರಹಸ್ಯವನ್ನು ನೆನೆನೆನೆದು, ಬಾರಿ ಬಾರಿ ತಲೆಬಾಗಿ, ಕೈ ಮುಗಿಯೋ ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು

'ಮನವ ಬಳಲಿಸಿ ಸೋಲಿಸಿರುವ ತತ್ವವನು' ಎಂದಿದ್ದಾರೆ ಗುಂಡಪ್ಪನವರು. ಎಂದರೆ, ಬಹಳ ಗಹನವಾದ ತತ್ವವನ್ನು ಅರಿಯಲು ಪ್ರಯತ್ನ ಪಟ್ಟು, ಜಪ, ತಪ ಧ್ಯಾನ ಮುಂತಾದವುಗಳಿಂದ ಅದರ ನಿಜ ಸ್ವರೂಪವನ್ನು ಅರಿತು,

ನಮ್ಮ ಹೃದಯದಲ್ಲಿ ಅದನ್ನು ನೆಲೆನಿಲ್ಲಿಸಿಕೊಂಡು, ಅದನ್ನೇ ದೃಢವಾಗಿ ಧಾರಣೆ ಮಾಡಿದಾಗ ಮನಸ್ಸು ಅದರೊಳಗೆ ಸ್ಥಿರವಾದಾಗ ಅದು ಸಾಧನೆ.

ಯಾವುದೋ 'ಒಂದು' ರೂಪವಿದ್ದಿದ್ದರೆ ಅದು ನಮಗೆ ಗೋಚರವಾಗಿದ್ದಿರಬಹುದು. ಎಲ್ಲ ರೂಪಗಳೂ ಅದರದೇ ಆಗಿರುವಾಗ ನಾವು ಯಾವ ರೂಪವನ್ನು 'ಅದು' ಎಂದು ನೋಡುವುದು. ನಮ್ಮ ಆಲೋಚನಾ ಅಥವಾ ಕಲ್ಪನಾ ಕ್ಷಮತೆ ಸೀಮಿತವಾಗಿರುವುದರಿಂದ ನಾವು ನೋಡುವ ರೂಪವೂ ಸೀಮಿತ ಅಲ್ಲವೇ? ಎಲ್ಲ ರೂಪಗಳನ್ನೂ ಹೊತ್ತಿರುವುದೇ ಆ 'ಗಹನ ತತ್ವ' ಎಂದು ಅರಿತು ದೃಢವಾಗಿ ನಂಬಿದರೆ ಆಗ ನಮಗೆ ಒಂದು ಬೃಹತ್ ಚಿತ್ರವನ್ನು ಅಥವಾ ಪರತತ್ವದ ಸರ್ವವ್ಯಾಪಕತ್ವವನ್ನು ಕಾಣಲು ಸಾಧ್ಯವಾಗಬಹುದು.

| ೩ಸ೦೪ |
|---|

| ಕಗ್ಗರಸಧಾರೆ, | ಎಲ್ಲರಿಗಮೀಗ ನಮೋ 919 - 923 |
|---|---|

ಹಾಗೆ ನೋಡಬೇಕಾದರೆ ಅಥವಾ ನಮ್ಮ 'ನೋಡುವ ಪ್ರಯತ್ನ' ಸಫಲವಾಗಬೇಕಾದರೆ ಡಿವಿಜಿಯವರು ಹೇಳುವಂತೆ ಮನಸ್ಸಿನಲ್ಲಿನ ಎಲ್ಲ ಹೊಲಸನ್ನೂ ಗುಡಿಸಿ ತೊಳೆದು, ಮೌನವಾಗಿ, ಏಕಾಂತದಲ್ಲಿ ದ್ಯಾನಮಾಡುವಾಗ, ನಾವು ಅಂತರಂಗದಲ್ಲಿ ಕಾಣಲು ಪ್ರಯತ್ನಪಡುತ್ತಿರುವ, ಆ ಪರತತ್ವವಕ್ಕೆ ಶರಣಾಗಿ, ತಲೆಬಾಗಿ ಕೈಮುಗಿಯ ಬೇಕು. 'ರಾಜಾ ಕುಲಶೇಖರ' ರ ಮುಕುಂದಮಾಲ ಸ್ತೋತ್ರದಲ್ಲಿ ಅನಂತ ವೈಕುಂಠ ಮುಕುಂದ ಕೃಷ್ಣ ಗೋವಿಂದ ದಾಮೋದರ ಮಾಧವೇತಿ, ವಕ್ತುಂ ಸಮರ್ತೋಽಪಿ ನ ವಕ್ತಿ ಕಶ್ಚಿತ್ ಅಹೋ ಜನಾನಾಂ ವ್ಯಸನಾಭಿಮುಖ್ಯಂ' ಎನ್ನುತ್ತಾ, ಆ ಪರಮಾತ್ಮನ ನಾಮಗಳನ್ನು ಹೇಳುವ ಸಾಮರ್ಥ್ಯವಿದ್ದರೂ ವ್ಯಸನಾಭಿಮುಖರಾಗಿ ಹೇಳುವುದಿಲ್ಲ ಎನ್ನುತ್ತಾರೆ. ಜಗತ್ತಿನ ವ್ಯಾಮೋಹ ಬಿಟ್ಟರೆ, ವ್ಯಸನಗಳನ್ನು ತೊರೆದರೆ, ಶುದ್ಧ ಅಂತಃಕರಣದಿಂದ ಶರಣಾಗಿ ತಲೆಬಾಗಿದರೆ ಆ ಪರತತ್ವ ಗೋಚರಿಸಬಹುದು. ದೃಢ ಮತ್ತು ಧೀರ್ಘಕಾಲದ ಪ್ರಯತ್ನ ಬೇಕು.

**ಮುಕ್ತಕ – 919**

**ಜೀವನದುದಯ ರಹಸ್ಯ, ಜೀವವಿಲಯ ರಹಸ್ಯ ।**

**ಜೀವನದ ದೃಶ್ಯ ಮರುವಿನ ಬಿಸಿಲುದುರೆ ॥**

**ಭಾವಿಸಲಿದೇ ತತ್ವ: ಬ್ರಹ್ಮ ಮಾಯೆಯೆ ವಿಶ್ವ ।**

**ಕೇವಲಾತ್ಮ ಬ್ರಹ್ಮ - ಮಂಕುತಿಮ್ಮ ॥**

ಜೀವನದುದಯ+ಜೀವನದ+ಉದಯ, ಭಾವಿಸಲಿದೇ =ಭಾವಿಸಲು+ಇದೇ, ಕೇವಲಾತ್ಮ =ಕೇವಲ+ಆತ್ಮ

ವಿಲಯ=ಅಂತ್ಯ

ಒಟಿದು ಜೀವಿಯ ಹುಟ್ಟು ಮತ್ತು ಸಾವು ಎರಡೂ ನಮಗೆ ರಹಸ್ಯವಾಗಿಯೇ ಇದೆ. ಇನ್ನು ಜೀವನದ ದೃಶ್ಯವೋ, ಮರಳುಗಾಡಿನ ಮರೀಚಿಕೆಯಂತೆ ಇದೆ. ನಾವು ಇಷ್ಟನ್ನು ಮಾತ್ರ ಭಾವಿಸಿಕೊಳ್ಳಬಹುದು ಮತ್ತು ನಮಗೆ ಆರ್ಥವಾಗುವುದು ಇಷ್ಟೇ ತತ್ವ, ಪರಮಾತ್ಮನು ಸೃಷ್ಟಿಸಿರುವ ಮಾಯೆಯೇ 'ವಿಶ್ವ'. ಮಾಯೆಯಿಂದ ಹೊರಬಂದರೆ ನಮಗೆ ಕೇವಲ ಬ್ರಹ್ಮದ ಅನುಭವವಾಗುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಒಂದು 'ಜೀವ' ಎಂದರೆ ಚೇತನ ತನ್ನ ಇಚ್ಛೆಯಿಂದಲೇ ಪಂಚಭೂತಗಳಿಂದಾದ ಒಂದು ದೇಹವನ್ನು ಧಾರಣೆಮಾಡಿದರೆ, ಒಂದು ಜೀವಿಯ ಆವಿರ್ಭಾವವಾಗುತ್ತದೆ ಎನ್ನುವ ತತ್ವವನ್ನು ಒಪ್ಪಿಕೊಂಡರೆ, ಆ ಜೀವಿ ಈ ಹಿಂದೆ ಎಷ್ಟು ದೇಹ ಅಥವಾ ರೂಪಗಳನ್ನು ಧರಿಸಿತ್ತು? ಈಗ ಈ ರೂಪವನ್ನೇ ಏಕೆ ಧಾರಣೆ ಮಾಡಿದೆ? ಅದು ಹೊತ್ತು ತಂದ ಗುಣಗಳೇನು? ಇಲ್ಲಿ ಇದರ ಜೀವನದ ಉದ್ದೇಶವೇನು? ಇದು ಈ ದೇಹವನ್ನು ಎಂದು ತೊರೆಯುತ್ತದೆ? ಮುಂದೆ ಯಾವ ರೂಪವನ್ನು ಧರಿಸುತ್ತದೆ? ಎನ್ನುವ ಪ್ರಶ್ನೆಗಳಿಗೆ ಉತ್ತರಿಸುವುದು ಅಸಾಧ್ಯ, ಆದ್ದರಿಂದ ಅದು ರಹಸ್ಯ.

ಇನ್ನು ಈ ಜೀವದ ಇಲ್ಲಿನ ಜೀವನ ಹೇಗಿರುತ್ತೆಂದರೆ, "ಜೀವನದ ದೃಶ್ಯ ಮರುವಿನ ಬಿಸಿಲ್ಗುದುರೆ" ಎನ್ನುತ್ತಾರೆ ಗುಂಡಪ್ಪನವರು. ಎಂದರೆ ಮರಳುಗಾಡಿನ ಬಿಸಿಲ್ಗುದುರೆಯಂತೆ ಎನ್ನುತ್ತಾರೆ. ಎಂತೆಂತಹದೋ ಆಸೆಗಳನ್ನು ಹೊತ್ತು, ಆ ಆಸೆಗಳ ಸುತ್ತ, ಹತ್ತು ಹಲವಾರು ರೀತಿಯ ಭಾವನೆಗಳನ್ನು ಹೆಣೆದುಕೊಂಡು, ಏಳುತ್ತಾ, ಬೀಳುತ್ತಾ, ಏನನ್ನೋ ಸಾಧಿಸುವ ಹುಮ್ಮಸ್ಸಿನಿಂದ ನುಗ್ಗುತ್ತಾ, ಆ ದಾರಿಯಲ್ಲಿ ಕಷ್ಟಗಳನ್ನು ಎದುರಿಸುತ್ತಾ, ಏನನ್ನೋ ಸಾಧಿಸಿದೆನೆಂಬ 'ಅಹಮ್ಮಿನಿಂದ ಬೀಗುತ್ತಾ ಅಥವಾ ಸಾಧನೆಯ ಹಾದಿಯಲ್ಲಿ ಸೋತರೆ, ಕೊರಗಿ, ಕನಲಿ ಸೊರಗುತ್ತಾ, ಮರೀಚಿಕೆಯ ಹಿಡಿಯುವ ಪ್ರಯತ್ನದಲ್ಲಿ ಸೋತ ಭಾವ ಹೊತ್ತು, ಬದುಕಿನ ಅಂತ್ಯದಲ್ಲಿ ಏನನ್ನೂ ಉಳಿಸಿಕೊಳ್ಳಲಾಗದೆ ಹತಾಶೆಯಿಂದ ಬದುಕು ಕೊನೆಯಾಗುವುದು. ಕೆಲವರನ್ನು ಹೊರತು, ಸರ್ವೇ ಸಾಮಾನ್ಯ ಎಲ್ಲರ ಬದುಕೂ ಹೀಗೆ ಇರುತ್ತದೆ.

ಇದು ಏಕೆ ಹೀಗೆ? ಎಂದರೆ, ಇದು ಮಾಯೆ ಎಂದು, ಮುಕ್ತಕ 74 ರಲ್ಲಿ "ಹೊಮ್ಮುವೆನು ಕೋಟಿರೂಪದಲಿ ನಾನೆಂದು, ಬೊಮ್ಮನೆಳಸಿದನಂತೆ. ಆ ಬೆಳಸಿಕೆಯೇ ಮಾಯೆ" ಎಂದು ಮಾನ್ಯ ಗುಂಡಪ್ಪನವರು, ಹೇಳುತ್ತಾರೆ. ಅರ್ಥವಾಗದ ಈ ಜಗತ್ತು ನಮಗೆ ಮಾಯೆ. ನಾವು ಇದನ್ನು ತಪ್ಪಾಗಿ ಅರ್ಥೈಸುವುದರಿಂದ ಬಯಸಿದ ಫಲ ಸಿಗದಿದ್ದಾಗ ಇದು ಮಾಯೆ. ಹಾಗಾಗಿ ಇದನ್ನು ನೋಡುವ ಮತ್ತು ಅರ್ಥೈಸುವ ನಮ್ಮ ಪರಿಯೇ ಸರಿಯಾಗಿಲ್ಲ ಎಂದುಕೊಳ್ಳುವುದೇ ಉತ್ತಮ. ಆ ಪರಮಾತ್ಮ ತನ್ನಿಂದಲೇ ಈ ಜಗತ್ತನ್ನು ಸೃಷ್ಟಿಸಿ, ತಾನೂ ಇದರೊಳಕ್ಕೆ ಸೇರಿ, ಈ ಎಲ್ಲಾ ರೂಪಗಳ ಮೂಲಕ ತನ್ನ ಲೀಲೆಯನ್ನು ತಾನೇ ಅನುಭವಿಸುತ್ತಿದ್ದಾನೆ. ಇಲ್ಲಿ ನಾವು ಇಲ್ಲವೇ ಇಲ್ಲ, ನಾವು ಎನ್ನುವುದು ಕೇವಲ ನಮ್ಮ ಅಹಂಕಾರದ ಅಥವಾ ಅಜ್ಞಾನದ ಭಾವ. ಇದನ್ನು ತೊರೆದರೆ ನಮಗೆ ಸಕಲ ಚರಾಚರಗಳಲೂ ಆ ಪರಬ್ರಹ್ಮನ ಅಸ್ಥಿತ್ವ ಮತ್ತು ಲೀಲೆ ಗೋಚರವಾಗುವುದು. ಆಗ ನಮಗೆ ಏಕಾತ್ಮಭಾವ ಅಥವಾ ಜಗದಾತ್ಮಭಾವದ ಅನುಭೂತಿಯಾಗುತ್ತದೆ. ಅದೇ ಆಧ್ಯಾತ್ಮ ಸಾಧನೆ. ಅಂತಹ ಅನುಭೂತಿಯನ್ನು ಪಡೆಯಬೇಕೆನ್ನುವುದೇ ಈ ಮುಕ್ತಕದ ಆಶಯ.

| |
|---|
| 31ಸಂ |

ಮುಕ್ತಕ - 92ಸಂ

ಆರಲೆನ್ನಯ ಹೃದಯ ಕರಣಗಳ ಕಾವುಗಳು ।
ಸೇರಲೆನ್ನಯ ಜೀವ ವಿಶ್ವಜೀವದಲಿ ॥
ಧಾರುಣಿಯ ಮಡಿಲನ್ನ ಕೊಳಲಿ; ಜಗ ಮರೆತಿರಲಿ ।
ಹಾರಯಿಸು ನೀನಿಂತು - ಮಂಕುತಿಮ್ಮ ॥

ಆರಲೆನ್ನಯ=ಆರಲಿ+ಎನ್ನಯ, ಸೇರಲೆನ್ನಯ=ಸೇರಲಿ+ಎನ್ನಯ, ಮಡಿಲೆನ್ನ=ಮಡಿಲು+ಎನ್ನ
ಕಾವು=ಬಿಸಿ, ತೀವ್ರತೆ, ಪಟುತ್ವ, ಧಾರುಣಿ=ಭೂಮಿ, ಕೊಳಲಿ=ತೆಗೆದುಕೊಳ್ಳಲಿ, ಹಾರಯಿಸು=ಆಶಿಸು

"ಪುಟಿದು ಕುಣಿದೇಳುವ ನನ್ನ ಮನಸ್ಸು ಬುದ್ಧಿ ಮತ್ತು ದೇಹದ ತುಡಿತಗಳೆಲ್ಲವೂ ಶಾಂತವಾಗಲಿ. ನನ್ನ ಜೀವ ವಿಶ್ವಾತ್ಮದಲ್ಲಿ ಸೇರಲಿ. ಭೂಮಿ ನನ್ನನ್ನು ತನ್ನೊಳಗೆ ಸೇರಿಸಿಕೊಳ್ಳಲಿ ಮತ್ತು ಜಗತ್ತು ನನ್ನನ್ನು ಮರೆತುಹೋಗಲಿ" ಎನ್ನುವಂತಹ ಬಯಕೆಗಳನ್ನಿಟ್ಟುಕೋ ಎಂದು, ಬದುಕಿನಿಂದ ನಿರ್ಗಮಿಸುವಾಗ ಯಾವ ರೀತಿಯ ಮನೋಭಾವವಿಟ್ಟುಕೊಳ್ಳಬೇಕೆಂಬುದರ ಸೂಚನೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಮನಸ್ಸು, ಬುದ್ಧಿ ಮತ್ತು ದೇಹಗಳು ಸದಾಕಾಲ ಈ ಜಗತ್ತಿನೊಂದಿಗಿನ ಸಂಪರ್ಕ ಸಂಬಂಧದಿಂದ, ಪ್ರತಿಯೊಂದಕ್ಕೂ ಪ್ರತಿಕ್ರಿಯೆ ನೀಡುತ್ತಾ, ಕ್ರಿಯಾಶೀಲವಾಗಿದ್ದು ತುಡಿಯುತ್ತಿರುತ್ತದೆ ಮತ್ತು ಅತಿ ಉತ್ಸಾಹದಿಂದ ಪುಟಿದೇಳುತ್ತಿರುತ್ತದೆ. ಇಂದ್ರಿಯಗಳ ಲಾಲಸೆಯನ್ನು ತೃಪ್ತಿಗೊಳಿಸಲು ಸದಾಕಾಲ ಪರದಾಡುತ್ತಲೇ ಇರುತ್ತದೆ, ಅಲ್ಲವೇ?. ಇದರಿಂದ ಪಡೆದುಕೊಳ್ಳುವುದಾವುದೂ ಶಾಶ್ವತವಲ್ಲ, ಕೇವಲ ಕ್ಷಣಿಕ ಆಸೆಗಳಿಗಾಗಿ ನಮ್ಮ ಈ ಪರದಾಟ ಎಂದು ಅರಿವಿದ್ದರೂ ಈ ಜಗತ್ತಿನ ಸೆಳೆತ ನಮ್ಮನ್ನು ಬಿಡುವುದೇ ಇಲ್ಲ. ಹೀಗೆ ತುಡಿಯುವ
'ಹೃದಯ -ಕರಣಗಳು' ಶಾಂತವಾಗಬೇಕಾದರೆ, ಅಂತರಂಗದ ಪಕ್ವತೆ ಬರಬೇಕು. ಅಂತರಂಗದ ಪಕ್ವತೆ, ಬದುಕಿನಲ್ಲಿ ತಿಂದ ಪೆಟ್ಟುಗಳಿಂದುಂಟಾದ ಜೀವನದ ಅನುಭವಗಳಿಂದ ಮತ್ತು ಅನುಭವಿಸಿದ ಸುಖದ ನಶ್ವರತೆಯನ್ನು ಅರಿತುಕೊಂಡಾಗ, ಬರುತ್ತದೆ.

ಹೇಗೆ ಅಂತರಂಗದ ಪಕ್ವತೆ ಬಂದಾಗ 'ನಾನು-ನನ್ನದು' ಎನ್ನುವ ಮಮಕಾರ ತೊಲಗಿ ಜಗದಾತ್ಮಭಾವ ಉಂಟಾಗಿ, ಒಂದು ವಿಶಾಲ ಮನೋಭಾವ ಬಂದು, ತನ್ನ ಇಂದ್ರಿಯಗಳ ತುಡಿತವನ್ನು ತಣಿಸಿಕೊಳ್ಳುವ ಪ್ರಯತ್ನದಿಂದ ಜಗದೊಳಿತಿನ ಕಡೆಗೆ ಮನಸ್ಸು ತಿರುಗಿದರೆ 'ಸೇರಲೆನ್ನಯ ಜೀವ ವಿಶ್ವಜೀವದಲಿ' ಎನ್ನುವ ಮಾನ್ಯ ಗುಂಡಪ್ಪನವರ ಆಶಯ ನೆರವೇರುತ್ತದೆ. ಈ ಜೀವ ದೇಹವನ್ನು ಬಿಟ್ಟು ಹೊರಟಾಗ, ಈ ಧರೆ ನಮ್ಮನ್ನು ಆರಡಿ ಮೂರಡಿ ನೆಲದಲ್ಲಿ ಸ್ವೀಕರಿಸಿದಾಗ, ಜಗತ್ತು ನಮ್ಮನ್ನು ಮರೆಯಲಿ ಎಂದು ಹೇಳುತ್ತಾರೆ, ಡಿವಿಜಿ. ಎಂದರೆ ನಾವು ಬದುಕಿರುವಾಗ, ಜಗತ್ತಿಗೆ ಉಪಕರಿಸುವ ಕೆಲಸ ಮಾಡಿದರೂ ನಮ್ಮ ಹೆಸರನ್ನು ಉಳಿಸಬೇಕೆಂಬ 'ಆಸೆ'ಯನ್ನು ಬಿಡಬೇಕು ಎನ್ನುವ ಸೂಚನೆ ಅಲ್ಲವೇ?





ಹೀಗೆ ಬದುಕಿನ ಅನುಭವಗಳಿಂದ, ಜಗದ ನಶ್ವರತೆಯ ಅನುಭವವಾಗಿ, ಅರಿವುಮೂಡಿ, ಮಮಕಾರ ತೊರೆದು, ಜಗದಾತ್ಮಭಾವದಿಂದ, ಮಾಡುವ ಕೆಲಸದಿಂದ ಜಗಕುಪಕಾರವಾದರೂ, ತಾನು ಯಾವ ರೀತಿಯ ಹೆಸರು ಕೀರ್ತಿಗಳನ್ನೂ ಆಶಿಸದೆ ಬದುಕಿ ನಿರ್ಗಮಿಸುವಂತಹ ಬದುಕು ನಮ್ಮದಾಗಲಿ ಎಂದು ಆಶಿಸಬೇಕು ಎನ್ನುವ ಹಿತನುಡಿಗಳನ್ನು ನೀಡಿದ್ದಾರೆ, ಮಾನ್ಯ ಗುಂಡಪ್ಪನವರು. ಬದುಕಿನ ನಂತರದ ಆಶಯವು ಹೀಗಾದಾಗ, ಇಂದಿನ ಬದುಕೂ ಸಹ ಸುಧಾರಿಸುವುದರಲ್ಲಿ ಸಂದೇಹವೇ ಇಲ್ಲ ಅಲ್ಲವೇ?

**ಮುಕ್ತಕ – 921**

**ಇಳಿಯುವೆನು ಮುಳುಗುವೆನು ವಿಶ್ವಾತ್ಮ ಸಾಗರದಿ |**

**ಮುಳುಮುಳುಗಿ ಕಳೆಯುವೆನು ಬೇರೆತನದರಿವ ||**

**ಇಳೆಬಾನ್ಗಳಾಟದಲ್ಲಿ ಕುಣಿಯುವೆನು ಮೈಮರೆತು |**

**ಗಳಿಸಿ ಮನಃಸ್ಥಿತಿಯ - ಮಂಕುತಿಮ್ಮ ||**

ಬೇರೆತನದರಿವ ?=ಬೇರೆತನದ+ಅರಿವ, ಇಳೆಬಾನ್ಗಳಾಟದಲಿ=ಇಳೆ+ಬಾನುಗಳ+ಆಟದಲಿ,

ಇಳೆ=ಭೂಮಿ, ಬಾನು+ಆಗಸ,

ನಾನು ಬೇರೆ, ನಾನು ಎಲ್ಲರಿಗಿಂತ ಭಿನ್ನ ಎನ್ನುವ ಭಾವವನ್ನು ಕಳೆದುಕೊಂಡು, ವಿಶ್ವಾತ್ಮಭಾವದ ಸಾಗರಲ್ಲಿ ನಾನು ಇಳಿಯುತ್ತೇನೆ, ಮುಳುಗುತ್ತೇನೆ, ಈ ಆಕಾಶ ಮತ್ತು ಧಾರೆಗಳ ನಡುವಿನ ಬಾಳಿನಲ್ಲಿ ಮೈ ಮರೆತು ಕುಣಿಯುತ್ತೇನೆ, ಎನ್ನುವಂತಹ ಆಶಯಗಳನ್ನು ತುಂಬಿಕೊಂಡ ಮನಸ್ಸಿನ ಸ್ಥಿತಿಯನ್ನು ಬೆಳೆಸಿಕೊಳ್ಳುತ್ತೇನೆ ಎಂದು ಹೇಳುತ್ತಾ, ನಮಗೂ ಅಂತಹ ಸ್ಥಿತಿಗೆ ಹೋಗಲು ಮಾರ್ಗವನ್ನು ಸೂಚಿಸಿದ್ದಾರೆ ನಮ್ಮ ಗುಂಡಪ್ಪನವರು.

ನಮ್ಮ ಬದುಕಿನಲ್ಲಿ ನಾವು ಎಲ್ಲಿಯ ತನಕ 'ನಾನು, ನನ್ನದು, ನನ್ನಿಂದ, ನನಗೆ' ಎನ್ನುವ 'ನಾನತ್ವದ' ಭಾವಗಳನ್ನು ಪ್ರದರ್ಶಿಸುತ್ತಾ ಇರುತ್ತೇವೆಯೋ, ಅಲ್ಲಿಯ ತನಕ ನಮಗೆ ವಿಶಾಲ ಮನೋಭಾವ ಮತ್ತು ವಿಶ್ವಾತ್ಮ ಭಾವ ಬರುವುದಿಲ್ಲ. ಈ ನಾನತ್ವದ ಭಾವಗಳು ನಮ್ಮ ಅಂತರಂಗದ ಬೆಳೆವಣಿಗೆಗೆ ತಡೆಯೊಡ್ಡುವ ಗೋಡೆಗಳು. ಅವುಗಳನ್ನು ಕೆಡವಿದ ಹೊರತು ನಾವು ಔನ್ನತ್ಯವನ್ನು ಪಡೆಯಲು ಸಾಧ್ಯವೇ ಇಲ್ಲ. ಅದಕ್ಕಾಗಿಯೇ ಮಾನ್ಯ ಗುಂಡಪ್ಪನವರು 'ಕಳೆಯುವೆನು ಬೇರೆತನದರಿವ' ಎಂದರು. ಹಾಗೆ ನಾವು ನಮ್ಮ ಬೇರೆತನದ' ಅರಿವನ್ನು ತೊರೆದರೆ ಮಾತ್ರ ನಮಗೆ ಎಲ್ಲರೊಳಗೆ ಒಂದಾಗಿ ಬೆರೆಯಲು ಸಾಧ್ಯ.

ಮೇಲೆ ಆಕಾಶ ಕೆಳಗೆ ಭೂಮಿ, ನಡುವೆ ನಮ್ಮ ಜೀವನ. ಇಲ್ಲಿರುವ ಎಲ್ಲರೊಡನೆ ನಮ್ಮ ಸಂಪರ್ಕ. ಭಾವನಾತ್ಮಕ, ಸಾಮಾಜಿಕ, ಸಾಂಸ್ಕೃತಿಕ, ವೈಯಕ್ತಿಕ ಹೀಗೆ ಹತ್ತು ಹಲವಾರು ರೀತಿಯ ನಂಟು ಇರುತ್ತದೆ. ಆದರೆ ಈ ನಂಟಿಗೆಲ್ಲಾ ಕಾರಣವನ್ನು ಹುಡುಕಲಾಗುವುದಿಲ್ಲ. ಏಕೆಂದರೆ ನಮ್ಮ ಜೀವನವೂ ಪರಮಾತ್ಮನ ಲೀಲಾವಿನೋದದ

ಒಂದು ಅಂಕವಷ್ಟೇ!!!! ಅದನ್ನು ಮನಗಾಣಬೇಕು, ಅದರಲ್ಲಿ ಒಂದಾಗಿ ಮೆರೆಯಬೇಕು ಪರಮಾತ್ಮಾನುಭವದ ಉನ್ಮತ್ತತೆಯಲ್ಲಿ ತಮ್ಮ ಬದುಕನ್ನು ಕಳೆದು, ಇಡೀ ಜಗತ್ತಿಗೆ ಭಕ್ತಿಯ ಪಾರವಶ್ಯದ ಸೊಗಡನ್ನು ಪಸರಿಸಿದ ಭಕ್ತರ ಕಥೆಗಳು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೇರಳವಾಗಿ ಸಿಗುತ್ತದೆ ಅಲ್ಲವೇ? ಅವರ ಜೀವನವನ್ನು ಗಮನಿಸಿ ನಾವೂ ಸಹ ಪಾಲಿಸಿದರೆ ನಾನತ್ವವನ್ನು ಹೋಗಲಾಡಿಸಿಕೊಳ್ಳಬಹುದು, ಅಹಂಕಾರವನ್ನು ತೊರೆಯಬಹುದು.

ನಮ್ಮ ಸನಾತನದ ಋಷಿಮುನಿಗಳೂ ಸಹ, ಅವರ ಜಪ, ತಪಸ್ಸು, ಧ್ಯಾನ, ಜ್ಞಾನಗಳನ್ನೆಲ್ಲಾ ಸದಾಕಾಲ ಲೋಕಕಲ್ಯಾಣಕ್ಕಾಗಿಯೇ ಮೀಸಲಿಟ್ಟು ಬೇರೆತನದರಿವನ್ನು ಸಂಪೂರ್ಣವಾಗಿ ನೀಗಿಕೊಂಡು ವಿಶ್ವಾತ್ಮಭಾವದಲ್ಲಿ ಮುಳುಗಿ ಮೆರೆಯಲ್ಲಿಲ್ಲವೇ? ಅಂತಹ ಸ್ಥಿತಿಗೆ ತಲುಪು ಎಂದು ಆದೇಶಿಸಿದ್ದಾರೆ ಮಾನ್ಯ ಡಿವಿಜಿಯವರು. ಈ ಜೀವನದ, ಎಂದರೆ ಅವರು ಹೇಳುವ 'ಇಳೆಬಾನ್ಗಳಾಟದಲಿ' ಮತ್ತು ಇಲ್ಲಿನ ಸೆಳೆತಗಳಿಂದ ಮುಕ್ತರಾಗಿ ಆ ಸ್ಥಿತಿಗೆ ತಲುಪಲು, ಬಹಳ ಕಷ್ಟ. ಆದರೆ ಅಸಾಧ್ಯವಲ್ಲ. ಆಶಯವಿದ್ದರೆ ಮತ್ತು ಅದಕ್ಕೆ ಪೂರಕವಾದ ಪ್ರಯತ್ನವಿದ್ದರೆ ಎಲ್ಲರಿಗೂ ಸಾಧ್ಯ,

**ಮುಕ್ತಕ – 922**

**ಎಲ್ಲರಿಗಮೀಗ ನಮೋ - ಬಂಧುಗಳೆ, ಭಾಗಿಗಳೆ |**
**ಉಲ್ಲಾಸವಿತ್ತವರೆ, ಮನವ ತೊಳೆದವರೆ ||**
**ಟೊಳ್ಳು ಜಗ, ಸಾಕು ಬಾಳ್-ಎನಿಸಿ ಗುರುವಾದವರೆ |**
**ಕೊಳ್ಳಿರಿ ನಮವವೆನು - ಮಂಕುತಿಮ್ಮ ||**

ಎಲ್ಲರಿಗಮೀಗ=ಎಲ್ಲರಿಗಂ+ಈಗ, ಉಲ್ಲಾಸವಿತ್ತವರೆ=ಉಲ್ಲಾಸ+ಇತ್ತವರೆ, ಗುರುವಾದವರೆ=ಗುರುವು+ಆದವರೆ ಭಾಗಿಗಳು=ಹಂಚಿಕೊಂಡವರು, ನಮವ=ನಮಸ್ಕಾರವನ್ನು.

ನನ್ನ ಬಂಧುಗಳೇ, ನನ್ನ ಬದುಕನ್ನು ಹಂಚಿಕೊಂಡವರೇ, ಎನಗೆ ಸಂತೋಷವನ್ನು ಕೊಟ್ಟವರೇ, ಎನ್ನ ಮನವನ್ನು ತೊಳೆದವರೇ, ಈ ಜಗತ್ತು ಟೊಳ್ಳು, ಈ ಬಾಳು ಸಾಕು ಎನ್ನುವಂತಹ ಭಾವವನ್ನು ಎನಗೆ ಬರುವಂತೆ ಮಾಡಿ, ನನ್ನ ಗುರುಸ್ಥಾನದಲ್ಲಿರುವವರೇ, ನಿಮಗೆಲ್ಲರಿಗೂ ನನ್ನ ನಮಸ್ಕಾರ, ಎಂದು ಹೇಳುತ್ತಾ, ನೀವೂ ಸಹ ಅಂತಹ

ಭಾವ ಮನಸ್ಸಿನಲ್ಲಿ ತುಂಬಿಕೊಂಡು ನೀವು ನಮನವನ್ನು ಹೇಳಿ ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹುಟ್ಟಿನಿಂದ ತಂದೆ, ತಾಯಿ, ಅಕ್ಕ, ಅಣ್ಣ, ತಮ್ಮ, ತಂಗಿ ಮುಂತಾದ ಬಂಧುತ್ವದ ಕೊಂಡಿಗಳು ನಮಗಿರುತ್ತದೆ. ಇನ್ನು ನಾವೇ ಕಟ್ಟಿಕೊಳ್ಳುವ ಬಂಧಗಳು ಹಲವಾರು. ನಮ್ಮ ಪ್ರಮೇಯವೇ ಇಲ್ಲದೆ ನಮ್ಮ ಮೇಲೆ ಪ್ರಭಾವ ಬೀರುವಂತಹ ಜನರು ಮತ್ತು ಅವರ ಜೀವನದಿಂದಲೂ ನಾವು ಬೆಳೆಯುತ್ತೇವೆ, ಪ್ರಭಾವಿತರಾಗುತ್ತೇವೆ ಮತ್ತು





ಕಲಿಯುತ್ತೇವೆ. ಬದುಕಿನಲ್ಲಿ ಹೇಗಿರಬೇಕು ಅಥವಾ ಹೇಗಿರಬಾರದು ಎಂದು ಕಲಿಯುತ್ತೇವೆ. ಇವರುಗಳು ನಮಗೆ ಕಲಿಸುವಾಗ ನಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾರೆ, ಕೈ ಹಿಡಿದು ನಡೆಸುತ್ತಾರೆ, ನಮ್ಮ ಕಷ್ಟವನ್ನು ನಿವಾರಿಸಿ ಸಂತೋಷವನ್ನು ನೀಡುತ್ತಾರೆ ಅಥವಾ ತಮ್ಮ ಕಷ್ಟವನ್ನು ನಮಗಿತ್ತು ದುಃಖವನ್ನೂ ನೀಡುತ್ತಾರೆ. ಬದುಕಿನಲ್ಲಿ ಪ್ರತೀ ಕ್ಷಣವೂ, ಎಲ್ಲರಿಂದ ಮತ್ತು ಎಲ್ಲಾ ಘಟನೆಗಳಿಂದಲೂ ಏನಾದರೊಂದು ಕಲಿಯುತ್ತಲೇ ಇರುತ್ತೇವೆ, ಅಲ್ಲವೇ? ಹಾಗಾಗಿ ಅವರನ್ನೆಲ್ಲಾ ನಮ್ಮ ಗುರುಗಳೆಂದು ಪರಿಗಣಿಸಬೇಕು ಮತ್ತು ಅವರಿಗೆ ಕೃತಜ್ಞತೆಯಿಂದ ನಮಸ್ಕರಿಸಬೇಕು.

ಹೀಗೆ ಕಲಿತ ಪಾಠದಿಂದ ನಮಗೆ ಈ ಜಗತ್ತು ಟೊಳ್ಳು ಅಥವಾ ಇಲ್ಲಿನ ಎಲ್ಲಾ ಸುಖ ದುಃಖಗಳು ತಾತ್ಕಾಲಿಕ ಎಂದು ಅನಿಸುತ್ತದೆ ಮತ್ತು ಹಾಗೆ ಅನಿಸಿದರೆ ಮಾತ್ರ ನಾವು ಏನಾದರೂ ಕಲಿತ ಹಾಗೆ ಆಗುತ್ತದೆ. ಆ ರೀತಿಯ ಕಲಿಕೆಯಿಂದ ನಮ್ಮ ಮನಸ್ಸಿನ ಕಲ್ಮಶಗಳು ತೊಳೆದು, ನಾವು ಮತ್ತಷ್ಟು ಪ್ರಜ್ಞಾವಂತರಾಗುತ್ತೇವೆ. ಇಂತಹ ಅರಿವಿನಿಂದ ಸತ್ಯವಾವುದು, ಅಸತ್ಯವಾವುದು ಎನ್ನುವಂತಹ ಭೇಧವನ್ನು ಅರಿಯಲಾದರೆ, ಆಗ ಸತ್ಯವನ್ನು ಹಿಡಿದು, ಈ ಜಗತ್ತಿನ ಮೇಲೆ ಒಂದು ವಿರಕ್ತ ಭಾವ ಬಂದು, ಮಾನ್ಯ ಗುಂಡಪ್ಪನವರು ಹೇಳುವಂತೆ 'ಸಾಕು ಬಾಳ್' ಎನಿಸಿದರೆ, ಆಗ ನಮ್ಮ ಕಲಿಕೆ ಸಂಪೂರ್ಣ ಎಂದು ಆಗುತ್ತದೆ.

ಹುಟ್ಟಿದನಂತರ ಬದುಕಲೇ ಬೇಕು. ಸುಮ್ಮನೆ ತಿಂದು, ಮಲಗಿ, ಎದ್ದು, ಓಡಾಡಿ, ಬಾಳಿದರೆ ಅದು ನಿಷ್ಪ್ರಯೋಜಕ ಬಾಳು. ಹಾಗಲ್ಲದೆ ಮಾನ್ಯ ಗುಂಡಪ್ಪನವರು "ಲೋಕದಿಂದ ನಿರ್ಲೋಕ' ಎನ್ನುವಂತೆ ಈ ಲೋಕದಿಂದಲೇ ಎಲ್ಲವನ್ನೂ ಕಲಿತು ಈ ಜಗತ್ತಿನ ಜೀವನದ ಅಶಾಶ್ವತೆಯನ್ನು ಮನಗಂಡು, ನಮ್ಮ ಬದುಕಿನಲ್ಲಿ, ನಮ್ಮ ಬದುಕನ್ನು ಹಂಚಿಕೊಂಡು, ಸಂತಸವನ್ನು ಕೊಟ್ಟು, ಅನುಭವಗಳ ಪಾಠವನ್ನು ಕಲಿಸಿ, ಬೆಳೆಯಲು ಸಹಕರಿಸಿದ ಪ್ರತಿಯೊಂದಕ್ಕೂ, ಪ್ರತಿಯೊಬ್ಬರಿಗೂ ಕೃತಜ್ಞತಾಪೂರ್ವಕವಾದ ನಮನಗಳನ್ನು ಸಲ್ಲಿಸಬೇಕು. ಆ ರೀತಿಯ ಭಾವದಿಂದ ನಮಗೆ 'ಧನ್ಯತೆ' ಯ ಅನುಭವವಾಗುತ್ತದೆ. ಹೃದಯ ತೃಪ್ತಿಯಿಂದ ತುಂಬುತ್ತದೆ, ಬದುಕು ಸಾರ್ಥಕವಾಗುತ್ತದೆ. ಅಂತಹ ಸಾರ್ಥಕತೆಯನ್ನು ನಾವೂ ಸಹ ಪಡೆಯುವ ಪ್ರಯತ್ನವನ್ನು ಮಾಡಬೇಕು.





**ಮುಕ್ತಕ - 923**

**ನಿನಗಾರು ಗುರುವಹರು? ನೀನೊಬ್ಬ ತಬ್ಬಲಿಗ |**

**ಉಣುತ ದಾರಿಯ ಕೆಲದಿ ಸಿಕ್ಕಿದೆಂಜಲನು ||**

**ದಿನವ ಕಳೆ ; ಗುರುಶಿಷ್ಯಪಟ್ಟಗಳು ನಿನಗೇಕೆ |**

**ನಿನಗೆ ನೀನೇ ಗುರುವೊ - ಮಂಕುತಿಮ್ಮ ||**

ನಿನಗಾರು=ನಿನಗೆ+ಯಾರು, ಗುರುವಹರು=ಗುರುವು+ಅಹರು, ಸಿಕ್ಕಿದೆಂಜಲನು=ಸಿಕ್ಕಿದ+ಎಂಜಲನು, ತಬ್ಬಲಿಗ=ಗತಿಯಿಲ್ಲದವ, ಉಣುತ=ತಿನ್ನುತ್ತಾ ಅಥವಾ ಸ್ವೀಕರಿಸುತ್ತ, ಕೆಲದಿ=ಬದಿಯಲ್ಲಿ.

ನಿನಗೆ ಯಾರು ಗುರುವಾಗುತ್ತಾರೆ? ನೀನೊಬ್ಬ ಗತಿಯಿಲ್ಲದವ. ದಾರಿಯಲ್ಲಿ ಸಿಕ್ಕಿದೆಂಜಲನ್ನು ತಿನ್ನುತ್ತ ದಿನವನ್ನು ದೂಡು. ನಿನಗೊಬ್ಬ ಗುರು, ನೀನೊಬ್ಬ ಶಿಷ್ಯ ಎಂಬ ಪಟ್ಟಗಳು ನಿನಗೇಕೆ? ನಿನಗೆ ನೀನೆ ಗುರುವೋ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮೆಲ್ಲರ ಮನಸ್ಸುಗಳಲ್ಲಿ ಪುಟಿದೇಳುವ ಪ್ರಶ್ನೆಗಳೇ ಮಾನ್ಯ ಗುಂಡಪ್ಪನವರ ಮನಸ್ಸಿನಲ್ಲೂ ಉದ್ಭವಿಸಿತ್ತು. ಅಂತಹ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವ ಗುರುವು ಅವರಿಗೆ ಸಿಗಲಿಲ್ಲ. ನಮಗೂ ಸಿಗುವುದಿಲ್ಲ. ಹಾಗೆ ಯಾರಾದರೂ ನಮಗೆ ಸಿಕ್ಕಿದ್ದಾರೆ ಎಂದುಕೊಂಡರೆ, ಆ ಗುರುವಿನ ಬೋಧನೆ ನಮಗೆ ಅವರ ದರ್ಶನವನ್ನು ಮಾತ್ರ ಬೋಧಿಸುತ್ತದೆಯೇ ವಿನಃ, ನಾವು ನಮ್ಮ ದರ್ಶನವನ್ನು ಪಡೆಯುವ ಮಾರ್ಗವನ್ನು ತೋರುವುದಿಲ್ಲ. ಹಾಗಾಗಿ ನೀವು ಈ 'ಜ್ಞಾನ' ದ ಅರುಸುವಿಕೆಯಲ್ಲಿ ನೀವೊಬ್ಬ ತಬ್ಬಲಿ ಎಂದು ಒಪ್ಪಿಕೊಳ್ಳಲೇ ಬೇಕು. ಆದರೆ ಗುಂಡಪ್ಪನವರು ತಮ್ಮ ಬದುಕಿನ ಹಾದಿಯಲ್ಲಿ ದೊರೆತ ಪ್ರತಿ ಅನುಭವವನ್ನೂ ಒಂದು ಪಾಠದಂತೆ, ಕಲಿಸಿದ ಪ್ರತಿಯೊಬ್ಬರನ್ನೂ ಒಬ್ಬ ಗುರುವಂತೆ ಕಾಣುತ್ತಾ ಮುಂದೆ ಮುಂದೆ ಸಾಗಿ ತಮ್ಮದೇ ದರ್ಶನವನ್ನು ಕಂಡುಕೊಂಡರು. ಋಷಿಗಳೋಪಾದಿ, ಅವರು ಅದನ್ನೇ ಜಗತ್ತಿಗೆ ಜಗತ್ತಿಗೆ ಹಂಚಿದರು.

ಅಂತಹ ಮಾರ್ಗವನ್ನೇ ನಾವೂ ಸಹ ಅನುಸರಿಸಬೇಕು ಎನ್ನುವುದೇ ಇಲ್ಲಿನ ಸೂಚ್ಯಾರ್ಥ ನಮ್ಮ ಅನುಭವಗಳಿಂದ ನಮ್ಮ ಮನಸ್ಸುಗಳಲ್ಲಿ ಜಿಜ್ಞಾಸೆಯುಂಟಾಗಬೇಕು, ವಿಚಾರಮಂಥನವಾಗಬೇಕು, ನಮಗೆ ಸತ್ಯದ ಅರಿವಾಗಬೇಕು ಮತ್ತು ಆ ಅರಿವು ನಮಗೆ ಪರತತ್ವದ ದರ್ಶನವನ್ನು ನೀಡಬೇಕು. ಹಾಗೆ ನಮಗೆ ಬದುಕಿನ ಅನುಭವಗಳನ್ನು ನೀಡುವ ಪ್ರತೀ ಅನುಭವವೂ ಬದುಕು ನೀಡುವ ಎಂಜಲಾಹಾರವಾಗಿ, ಅದನ್ನು ನೀಡುವ ವ್ಯಕ್ತಿ ಅಥವಾ ವಿಷಯಗಳೇ ನಮಗೆ ಗುರುಗಳಾಗಬೇಕು. ನಮ್ಮ ಮನಸ್ಸು ಬುದ್ಧಿಗಳಲ್ಲಿ ನಡೆಯುವ ಮಂಥನವೇ ಪಾಠವಾಗಬೇಕು, ನಮಗೆ ನಾವೇ ಗುರುಗಳಾಗಬೇಕು.

ಆದರೆ ಇಂದಿನ ಸಾಮಾಜಿಕ ಸ್ಥಿತಿಯನ್ನು ನೋಡಿದರೆ ಯಾರಿಗೂ, ನಿಲ್ಲುವ ಸಮಯವೇ ಇಲ್ಲ. ನಿಂತರೆ ತಾನೇ ನೋಡುವುದು, ನೋಡಿದರೆ ತಾನೇ ಗಮನಿಸುವುದು, ಗಮನಿಸಿದರೆ ತಾನೇ ಪ್ರಶ್ನೆ, ಪ್ರಶ್ನೆ ಎದ್ದರೆ ತಾನೇ ಜಿಜ್ಞಾಸೆ,

ಜಿಜ್ಞಾಸೆಯಾದರೆ ಮಾತ್ರ ಸತ್ಯದರಿವು ಮತ್ತು ತತ್ವದ ದರ್ಶನ. ನಾವೆಲ್ಲಾ ಅದರಿಂದ ದೂರವಿದ್ದೇವೆ. ನಮಗೂ ಪ್ರಶ್ನೆಗಳಿವೆ, ಆದರೆ ಪ್ರಶ್ನೆಗಳಲ್ಲೇ ಬಹಳ ಗೊಂದಲಗಳಿರುವಾಗ ಇನ್ನು ಉತ್ತರಗಳು ಸ್ಪಷ್ಟವಾಗಲು ಸಾಧ್ಯವೇ? ನಿಂತು ನೋಡುವ ಅಭ್ಯಾಸಮಾಡಿಕೊಂಡು, ಸತ್ಯದ ಮತ್ತು ಸತ್ವದ ಅನುಭವವನ್ನು ಪಡೆಯಬೇಕೆಂಬ ತೀವ್ರ ಅಪೇಕ್ಷೆ ಉಚಿಟಾದರೆ, ಆಗ ನಮಗೆ ನಾವೇ ಗುರುಗಳಾಗಿ ಜ್ಞಾನವನ್ನು ಪಡೆಯುವ ಹಾದಿಯಲ್ಲಿ ಮುನ್ನಡೆಯಬಹುದು ಅಲ್ಲವೇ?

**ಮುಕ್ತಕ – 924**

**ಮನೆಯ ಮಾಳಿಗೆಗಲ್ಲ, ಮುಡಿಯ ಕೊಪ್ಪಿಗೆಗಲ್ಲ ।**
**ಇನಿವಣ್ಣು ತನಿಯ ಕಾಳೆಂಬುದೇನಿಲ್ಲ ॥**
**ಬಣಗು ಕುರಿಚಲು ಗಿಡದ ಬಾಳೇನು? ನೀನಂತು ।**
**ಒಣಗಿದೊಡೆ ಸವುದೆ ಸರಿ - ಮಂಕುತಿಮ್ಮ ॥**

ಮಾಳಿಗೆಗಲ್ಲ=ಮಾಳಿಗೆಗೆ+ಅಲ್ಲ, ಕೊಪ್ಪಿಗೆಗಲ್ಲ=ಕೊಪ್ಪಿಗೆಗೆ=ಅಲ್ಲ. ಕಾಳೆಂಬುದೇನಿಲ್ಲ= ಕಾಳು +ಎಂಬುದು+ಏನು+ಇಲ್ಲ, ಬಾಳೇನು= ಬಾಳು+ಏನು, ನೀನಂತು=ನೀನು+ಅಂತು, ಕೊಪ್ಪಿಗೆ=ತುರುಬು, ಮುಡಿ, ಇನಿವಣ್ಣು=ಸಿಹಿಯಾದ ಹಣ್ಣು, ಸವುದೆ= ಸೌದೆ, ಉರುವಲು

ನೀನು ಒಂದು ಕುರಿಚಲು ಗಿಡವಿದ್ದಂತೆ. ಹೇಗೆ ಕುರಿಚಲು ಗಿಡ, ಯಾವ ಮನೆಯ ಮಾಳಿಗೆಗೆ ತೊಲೆಯೋ, ಧೂಲವೋ ಆಗುವುದಿಲ್ಲವೋ ಅಥವಾ ಯಾರ ಮುಡಿಗೂ ಅಂದ ಮತ್ತು ಸುಗಂಧವನ್ನೀಯುವ ಹೂಗಳನ್ನು ಅರಳಿಸುವುದಿಲ್ಲವೋ ಅಥವಾ ರುಚಿಯಾದ ಹಣೋ ಅಥವಾ ಅಹಾರವಾಗಬಹುದಾದ ಧಾನ್ಯವನ್ನೋ ಕೊಡುವುದಿಲ್ಲವೋ ಹಾಗೆಯೇ ನಿನ್ನ ಜೀವನವೂ ಸಹ, ನಿಷ್ಪ್ರಯೋಜಕ. ಹೇಗೆ ಕುರಿಚಲು ಗಿಡ ಒಣಗಿದರೆ ಕೇವಲ ಒಲೆಗೆ ಒಡ್ಡಲು ಸೌದೆಯಾಗಬಹುದೋ ಅದೇ ರೀತಿ ನೀನು ಎಂದು, ನಮ್ಮೆಲ್ಲರ ಬದುಕಿನ ಪರಿಯನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಒಂದು ಬೃಹತ್ತಾದ ಮರ, ತನ್ನ ಕೊಂಬೆ ರೆಂಬೆಗಳನ್ನು ವಿಶಾಲವಾಗಿ ಹರಡಿಕೊಂಡು, ಪಕ್ಷಿ, ಉರಗ, ಕ್ರಿಮಿ, ಕೀಟಗಳಿಗೆ ತಂಗುದಾಣವಾಗಿ, ಸುಗಂಧಭರಿತ ಹೂಗಳನ್ನಿತ್ತು, ಸುರುಚಿಯ ಹಣ್ಣುಗಳನ್ನು ಇತ್ತು, ಕಡೆಗೆ ಕಡಿದು

ಹಾಕಿದರೆ ಯಾರದಾದರೂ ಮನೆಯ ಮೇಲ್ಛಾವಣಿಗೆ ತೊಲೆ ಅಥವಾ ದೂಲವಾಗಿ, ತನ್ನನ್ನು ಆಶ್ರಯಿಸಿದವರಿಗೆ ನೆರಳನ್ನು ಕೊಟ್ಟು ಬಹೂಪಯೋಗಿಯಾಗಿರುತ್ತದೆ. ಇನ್ನು ಕೆಲವು ಮರಗಳು ಕೇವಲ ಹಣ್ಣನ್ನೋ ಅಥವಾ ಹೂವನ್ನೂ ಕೊಟ್ಟು ಧನ್ಯರಾಗುತ್ತವೆ. ಇನ್ನು ಕೆಲವು ಗಿಡಗಳು ಕಾಳುಗಳನ್ನಾದರೂ ಕೊಟ್ಟು ಧನ್ಯರಾಗುತ್ತವೆ. ಆದರೆ ಮನುಷ್ಯನೋ ಕೇವಲ ಕುರಿಚಲು ಗಿಡವಿದ್ದಂತೆ, ಆಶ್ರಯ, ಹಣ್ಣು, ಹೂವು, ಕಾಯಿ, ಹೀಗೆ ಯಾವುದನ್ನೂ ನೀಡದೆ, ಕೇವಲ ಒಲೆಗೆ ಒಟ್ಟಲು ಸೌದೆ ಅಥವಾ ಉರುವಲಾಗಬಹುದು. ಅಷ್ಟು ಮಿತಪ್ರಯೋಜನವಿರುವವನೇ ಮನುಷ್ಯ ಪ್ರಾಣಿಯೂ ಸಹ ಎನ್ನುವಂತೆ ಮಾನ್ಯ ಗುಂಡಪ್ಪನವರು, ನಮ್ಮನ್ನು ಕುರಿಚಲು ಗಿಡಗಳಿಗೆ ಹೋಲಿಸಿದ್ದಾರೆ. ಕೂಲಂಕುಶವಾಗಿ ನೋಡಿದರೆ ಇದು ವಾಸ್ತವ ಅಲ್ಲವೇ?





ನಮ್ಮಲ್ಲಿ ಎಷ್ಟು ಜನರಿಗೆ ಪರರಿಗೆ ಉಪಕರಿಸುವ ಬುದ್ಧಿಯಿರುತ್ತದೆ? ಅಕಸ್ಮಾತ್ ಆ ಬುದ್ಧಿಯಿದ್ದರೆ, ಎಷ್ಟು ಜನರಿಗೆ ಉಪಕಾರಮಾಡುವ ಶಕ್ತಿ ಅಥವಾ ಕ್ಷಮತೆ ಇರುತ್ತದೆ. ಕ್ಷಮತೆ ಇದ್ದವನಿಗೆ ಮನಸ್ಸು ಬರುವುದಿಲ್ಲ ಮತ್ತು ಮನಸ್ಸು ಇದ್ದವನಿಗೆ ಕ್ಷಮತೆ ಇರುವುದಿಲ್ಲ. ಒಟ್ಟಾರೆ ಮನುಷ್ಯ ಮತ್ತೊಬ್ಬರಿಗೆ ಉಪಕಾರಿಯಾಗಲಾರ ಅಥವಾ ಪ್ರಯೋಜನಕ್ಕೂ ಯೋಗ್ಯನಲ್ಲ. ಆದರೆ ಸೃಷ್ಟಿಯ ಬೇರೆ ಯಾವುದಕ್ಕೂ ಇಲ್ಲದ ಒಂದು ಅದ್ಭುತ ಶಕ್ತಿ ಮನುಷ್ಯನಿಗೆ ಕೊಟ್ಟಿದ್ದಾನೆ ಪರಮಾತ್ಮ.

ತನ್ನನ್ನು ತಾನು ತಿದ್ದಿಕೊಳ್ಳುವ, ವೃದ್ಧಿಗೊಳಿಸಿಕೊಳ್ಳುವ ಶಕ್ತಿ ಗಳಿಸುವ ಮತ್ತು ಆ ಶಕ್ತಿಯನ್ನು ಹಂಚುವ ಯೋಗ್ಯತೆ ಮತ್ತು ಕ್ಷಮತೆಯನ್ನು ಕೇವಲ ಮನುಷ್ಯನಿಗೆ ಕೊಟ್ಟಿದ್ದಾನೆ ಆ ಪರಮಾತ್ಮ. ಅಂತಹ ಯೋಗ್ಯತೆಯನ್ನು ಸರಿಯಾಗಿ ಪ್ರಯೋಗ ಮತ್ತು ಉಪಯೋಗ ಮಾಡಿದ್ದಲ್ಲಿ, ನಮ್ಮಲ್ಲಿ ಪ್ರತಿಯೊಬ್ಬರೂ 'ಪರೋಪಕಾರಿ'ಗಳಾಗಿ, ಕುರಿಚಲು ಗಿಡಗಳಂತೆ ಅಲ್ಲದೆ ಬೃಹತ್ ವೃಕ್ಷಗಳಂತೆ ಬಾಳಬಹುದು.

**ಮುಕ್ತಕ – 925**

**ಜೋಳಿಗೆಯ ಪಿಡಿದು ನೀನೂರಿನೂರಿಗೆ ನಡೆದು |**

**ಹೇಳುತ್ತ ಹಾಡುಗಳ, ಭಾರಗಳ ಮರೆತು ||**

**ಬೀಳು ಮೇಲುಗಳೆಣಿಕೆಯಿಂ ಮನವನಲುಗಿಸದೆ |**

**ಬಾಳ ನಡೆಸುವುದೆಂದೊ? – ಮಂಕುತಿಮ್ಮ ||**

ನೀನೂರಿನೂರಿಗೆ=ನೀನು+ಊರಿನ+ಊರಿಗೆ, ಮೇಲುಗಳೆಣಿಕೆಯಿಂ=ಮೆಲುಗಳ+ಎಣಿಕೆಯಿಂ, ಮನವನಲುಗಿಸದೆ=ಮಾನವನು+ಅಲುಗಿಸದೆ, ನಡಸುವುದೆಂದೊ=ನಡೆಸುವುದು+ಎಂದೋ, ಪಿಡಿದು+ಹಿಡಿದು,

ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಒಂದು ವಿರಕ್ತಭಾವದ ಆಶಯವನ್ನು ಹೊತ್ತು, ತಮಗೆ ತಾವೇ, "ನೀನು, ಕಷ್ಟ ಸುಖಗಳ ಗೆರೆಯನ್ನು ದಾಟಿದ ಮನಸ್ಸನ್ನು ಹೊಂದಿದ ಜೋಗಿಯಂತೆ, ಜೋಳಿಗೆಯನ್ನು ಹಿಡಿದು, ಊರಿಂದ ಊರಿಗೆ ಹಾಡುತ್ತಾ, ಬದುಕಿನ ಭಾರವನು ಮರೆತು ಬಾಳನ್ನು ನಡೆಸುವುದು ಎಂದೋ?' ಎಂದು ಕೇಳಿಕೊಳ್ಳುತ್ತಾ, ಅಂತಹ ಮುಕ್ತ ಭಾವದ ಬದುಕನ್ನು ನಡೆಸಿದರೆ ಚೆನ್ನ ಎನ್ನುವಂತಹ ಸಂದೇಶವನ್ನು ನಮಗೂ ನೀಡಿದ್ದಾರೆ.

ಬದುಕಿನಲ್ಲಿ ಎಲ್ಲಕ್ಕೂ ಅಂಟಿಕೊಂಡು, ಸಂಬಂಧಗಳನ್ನು ಕಟ್ಟಿಕೊಂಡು ಮತ್ತು ಕಟ್ಟಿಕೊಂಡ ಸಂಬಂಧಗಳನ್ನು ಸಮರ್ಪಕವಾಗಿ ನಿಭಾಯಿಸಲು ಆಗದೆ, ಓಡಿಹೋಗುವುದು ಪಲಾಯನ, ಅದು ಹೇಡಿಗಳ ಹಾದಿ. ಆದರೆ ಬದುಕಿನ ಏಳುಬೀಳುಗಳನ್ನೆಲ್ಲಾ ಎದುರಿಸಿ, ಕಷ್ಟಸುಖಗಳನ್ನೆಲ್ಲಾ ಅನುಭವಿಸಿ ಪಕ್ವಗೊಂಡು, ಬದುಕಿನ ಸತ್ವಹೀನತೆಯನ್ನು ಮನಗಂಡು, ತತ್ವದ ಅನುಸಂಧಾನಮಾಡಿ ಸ್ವಾರ್ಥ ತೊರೆದು ಜಗಕುಪಕರಿಸುವ ಮನವುಂಟಾಗಿ, ತಾನು ಮನಗಂಡ ಸತ್ವವನ್ನು ತತ್ವರೂಪದಲ್ಲಿ ಲೋಕಕ್ಕೆ ಹಂಚುವ ಜೋಗಿಯಂತಾಗಬೇಕು ಎನ್ನುವುದೇ ಈ ಮುಕ್ತಕದ ಆಶಯ. ಮಾನ್ಯ ಗುಂಡಪ್ಪನವರೂ ಸಹ ಜೋಳಿಗೆ ಹಿಡಿದು ಊರಿಂದೂರಿಗೆ ಹೋಗದಿದ್ದರೂ, ತಾವಿದ್ದಲ್ಲೇ ಅಂತಹ ಜೀವನವನ್ನು ನಡೆಸಿದರು.

ಬದುಕಿನ ಅಂಟು ಬಹಳ ಗಟ್ಟಿ, ಇಂದು ಮಾರುಕಟ್ಟೆಯಲ್ಲಿ ಸಿಗುವ'ಫೇವಿಕೋಲ್, ಕ್ವಿಕ್ ಫಿಕ್ಸ್' ನಂತಹ ಅಂಟುಗಳಿಗಿಂತ ಸಾವಿರ ಪಟ್ಟು ಹೆಚ್ಚು ಗಟ್ಟಿ. ನಾವು ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ಪಟ್ಟರೂ, ಅದೇ ನಮ್ಮನ್ನು ಬಿಡದ ಹಾಗೆ ಅಂಟಿಕೊಂಡಿರುತ್ತದೆ. ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನೇ ಮಾಡದೆ, ಅದೇ 'ಚೆನ್ನ'ವೆಂಬಂತೆ ಬದುಕುವವರೇ ನಮ್ಮಲ್ಲಿ ಅತ್ಯಧಿಕ. ಹಲವರು ಪ್ರಯತ್ನ ಮಾಡಬಹುದು. ಆದರೆ ಆ ಪ್ರಯತ್ನದಲ್ಲಿ ಬರುವ ಕ್ಲಿಷ್ಟತೆಗಳನ್ನು ಎದುರಿಸಲು ಮತ್ತು ನಿವಾರಿಸಲು ಸಾಧ್ಯವಾಗದಾಗ, ಕೈಬಿಟ್ಟು, ಒಂದು ರೀತಿಯ 'ಅಭಾವ ವೈರಾಗ್ಯ' ವನ್ನು ತಾಳುತ್ತಾರೆ. ಕೇವಲ ಕೆಲವೇ ಕೆಲವು ಜನ, ಛಲ ಬಿಡದೆ ಆ ಮಾರ್ಗದಲ್ಲಿ ಬರುವ ಎಲ್ಲಾ ಏಳು ಬೀಳುಗಳನ್ನೂ ದಾಟಿ ಮುಂದುವರೆಯುತ್ತಾರೆ. ಅವರುಗಳು ನಿಜಾರ್ಥದಲ್ಲಿ ವಿರಾಗಿಗಳು, ವಿರಕ್ತರು.

ಶ್ರೀ ಪುರಂದರದಾಸರ ಜೀವನವನ್ನು ಓದಿದರೆ ನಮಗೆ ವಿರಕ್ತಿ ಎಂಬುವುದು ಹೇಗೆ ಬರುತ್ತದೆ ಎಂದು ಅರ್ಥವಾಗುತ್ತದೆ. ಕೆಲಬಾರಿ ಕೆಲವರು ಜನ್ಮತಃ ವಿರಕ್ತರಾಗೇ ಹುಟ್ಟುತ್ತಾರೆ. ಅದು ಅವರುಗಳು ಸಂಚಯಿಸಿದ ಪೂರ್ವ ಕರ್ಮಾನುಸಾರವಿರುತ್ತದೆ. ಬದುಕಿನ ಎಲ್ಲಾ ಕಷ್ಟಸುಖಗಳನ್ನು ಅನುಭವಿಸಿ, ಅವುಗಳ ನೀರಸತೆಯನ್ನು ಮನಗಂಡು ಅವುಗಳಿಂದ ಪ್ರಯತ್ನಪೂರ್ವಕವಾಗಿ ಬಿಡಿಸಿಕೊಂಡು, ಮಾನ್ಯ ಗುಂಡಪ್ಪನವರು 'ಮನವನಲುಗಿಸದೆ ಬಾಳ ನಡೆಸುವುದೆಂದೊ?' ಎಂದು ಕೇಳುವಂತೆ ನಮ್ಮನ್ನು ನಾವೇ ಪ್ರಶ್ನಿಸಿಕೊಂಡು, ದೃಢ ಮನಸ್ಸಿನಿಂದ ಮುನ್ನಡೆದರೆ, ನಮ್ಮಿಂದ ನಮಗೂ ಪ್ರಯೋಜನವಾಗುತ್ತದೆ ಮತ್ತು ಇತರರಿಗೂ ಉಪಕರಿಸಿದಂತಾಗುತ್ತದೆ. ಆ ಹಾದಿಯಲ್ಲಿದ್ದರೆ ಇಂದೋ, ಮುಂದೆಂದೋ ಒಂದು ದಿನ ನಾವೂ ಸಹ ಮನವನಲುಗಿಸದೆ' ಬಾಳ ನಡೆಸಬಹುದು.

**ಮುಕ್ತಕ - 926**

**ತೊಲಗೆಲವೊ ಮನೆಯಿಂದ ಮನವು ಬರಡಾದಂದೆ ।**

**ಹೊಲಸ ತೊಳೆಯಲು ತೋಳ್ ಬಲ ಕುಗ್ಗಿದಂದ ॥**

**ತೊಲಗು ಜಗದಿಂ ದೂರ, ಇಳೆಗಾಗದಿರು ಭಾರ ।**

**ತೊಲಗಿ ನೀಂ ಮರೆಯಾಗು - ಮಂಕುತಿಮ್ಮ ॥**

ತೊಲಗೆಲವೊ=ತೊಲಗು+ಎಲವೊ, ಬರಡಾದಂದೆ= ಬರದು+ಆದ+ಅಂದೆ,

ಕುಗ್ಗಿದಂದೆ=ಕುಗ್ಗಿದ+ಅಂದೆ,ಇಳೆಗಾಗದಿರು=ಇಳೆಗೆ+ಆಗದಿರು ಇಳೆಗೆ=ಭೂಮಿಗೆ,

ಮನಸ್ಸು ಬರಡಾದಂದು, ಮನದ ಹೊಲಸನ್ನು ತೊಳೆಯಲು ಶಕ್ತಿ ಕುಗ್ಗಿದರೆ, ಜಗಕ್ಕೆ ಮತ್ತು ಜಗದ ಜನರಿಗೆ ಭಾರವಾಗದೆ, ಮನೆ ಬಿಟ್ಟು ದೂರ ಯಾರಿಗೂ ಹೊರೆಯಾಗದ ಹಾಗೆ ಹೊರಟು ಬಿಡು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಬೈರಾಗಿಯಂತೆ ಬದುಕುವ ಸೂತ್ರ, ವಾನಪ್ರಸ್ಥದ ಹಾದಿಯನ್ನು ಮಾನ್ಯ ಗುಂಡಪ್ಪನವರು ತೋರಿದ್ದಾರೆ. ಸಮಾಜದಲ್ಲಿ ಇರುವಾಗ ಅದಕ್ಕೆ ಪೂರಕವಾಗಿ ಬದುಕಬೇಕು. ಸಮಾಜದ ಎಲ್ಲರೊಂದಿಗೆ ಬೆರೆತು ಎಲ್ಲರಲ್ಲೂ ಪ್ರೀತಿ ಸೌಹಾರ್ದತೆಯಿಂದ ಬದುಕಬೇಕು. ನಮ್ಮ ಮನಸ್ಸಿನಲ್ಲಿ ಪ್ರೀತಿಯನ್ನು ತುಂಬಿಕೊಂಡು, ಅದನ್ನು ಎಲ್ಲರಿಗೂ ಹಂಚುತ್ತಾ ಬದುಕಬೇಕು. ಅದು ಸಾರ್ಥಕ ಬದುಕು. ಹಾಗೆ "ಪ್ರೀತಿಯ ಒರತೆ ನಿನ್ನ ಮನದಲ್ಲಿ ಬತ್ತಿದರೆ, ಸಮಾಜಕ್ಕೆ ನೀಡಲು ನಿನ್ನಲ್ಲಿ ಏನೂ ಇಲ್ಲವಾಗುತ್ತದೆ ಮತ್ತು ಮನಸ್ಸು ಬರಡಾಗುತ್ತದೆಯಾದ್ದರಿಂದ, ಸಮಾಜದಿಂದ ದೂರ ತೊಲಗಿ ಹೋಗು" ಎನ್ನುವುದು ಇಲ್ಲಿನ ಆದೇಶ.

ಬದುಕಿನಲ್ಲಿ ಪ್ರತೀ ಕ್ಷಣವೂ ನಮ್ಮನ್ನು ನಾವು ಉತ್ತಮಗೊಳಿಸಿಕೊಳ್ಳುವ ಪ್ರಯತ್ನದಲ್ಲಿರಬೇಕು. ಆ ಪ್ರಯತ್ನದಲ್ಲಿನ ಹೆಜ್ಜೆಗಳೇ ನಮ್ಮೆಲ್ಲಾ ಓದು, ವಿದ್ಯೆ, ಅಧ್ಯಯನ, ಧ್ಯಾನ, ಜಪ, ತಪಗಳು. ಅವುಗಳು ನಮ್ಮ ಒಳಗೆ ಅಂದರೆ ಅಂತರಂಗಕ್ಕೆ ಅಂಟಿಕೊಂಡಿರುವ ಹೊಲಸನ್ನು ತೊಳೆಯಲು ಒದಗುತ್ತವೆ. ಹಾಗೆ ತೊಳೆಯುವ ಪಕ್ರಿಯೆಯಲ್ಲಿ ಶಕ್ತಿಕುಂದಿದರೆ, ಅಂದು ಬದುಕಿನಿಂದ ನಿರ್ಗಮಿಸಬೇಕು ಎನ್ನುವುದೇ ಇಲ್ಲಿನ ಆಂತರ್ಯ.

ಎಚಿದು ನಾವು ನಮ್ಮ ಭಾರವನ್ನು ಹೊರಲು ಅಸಮರ್ಥರಾಗುತ್ತೇವೆಯೋ ಮತ್ತು ಅನ್ಯರು ನಮ್ಮ ಭಾರ ಹೊರಬೇಕಾದ ಪರಿಸ್ಥಿತಿ ಏರ್ಪಡುತ್ತದೋ ಅಂದು ಈ ಬದುಕಿನಿಂದ ದೂರಾಗಬೇಕು. ಹಿಂದೆ ನಮ್ಮ ಸಂಸ್ಕೃತಿಯಲ್ಲಿ 'ವಾನಪ್ರಸ್ಥ' ಕ್ಕೆ ಹೋಗುವ ಕ್ರಮವಿತ್ತು. ಎಂದು ನಮ್ಮಿಂದ ನಾವಿರುವ ಸಮಾಜಕ್ಕೆ ಯಾವುದೇ ರೀತಿಯ ಪ್ರಯೋಜನವಿಲ್ಲವೋ ಅಂದು ವನಕ್ಕೆ ತೆರಳಿ ತಪಸ್ಸನ್ನು ಮಾಡುತ್ತಾ ಸಿಕ್ಕ ಆಹಾರವನ್ನು ತಿನ್ನುತ್ತಾ ದೇಹ





'ತ್ಯಾಗಮಾಡುವ ಪದ್ಧತಿ ಇತ್ತು. ಇಂದು ಅದು ಸಾಧ್ಯವಿಲ್ಲ ಎಂದು ಅನಿಸುತ್ತದೆ ಅಥವಾ ಇಂದಿನ ವೃದ್ಧಾಶ್ರಮಗಳೇ ವಾನಪ್ರಸ್ಥದ ತಾಣಗಳೋ !!!!!

ಬದುಕಿರುವಾಗ, ಬದುಕಿನಿಂದ ಏನನ್ನಾದರೂ ಪಡೆದು ನಾವು ಸುಧಾರಿಸಬೇಕು ಅಥವಾ ಬದುಕಿಗೆ ಏನನ್ನಾದರೂ ನೀಡಿ ಅನ್ಯರ ಬದುಕು ಸುಧಾರಿಸುವಂತೆ ಆಗಬೇಕು. ಈ ಎರಡೂ ಆಗದಿದ್ದ ಮೇಲೆ ಮಾನ್ಯ ಗುಂಡಪ್ಪನವರು ಹೇಳುವಂತೆ 'ತೊಲಗಿ ಮರೆಯಾಗುವುದೇ ಲೇಸು ಅಲ್ಲವೇ? ಅಂಗಡಿಯಲ್ಲಿ ಸರುಕೆಲ್ಲಾ ಖಾಲಿಯಾದಮೇಲೆ ಅಂಗಡಿಯನ್ನು ಮುಚ್ಚುವುದೇ ಒಳ್ಳೆಯದಲ್ಲವೇ?

**ಮುಕ್ತಕ – 927**

**ತೊಲಗು ನಿರ್ಜನದೆಡೆಗೆ; ತೊಲಗು ಮಸಣದ ಕಡೆಗೆ |**

**ಒಲವ ಬೇಡಿಸದೆಡೆಗೆ ; ಅಳುವು ಬರದೆಡೆಗೆ ||**

**ವಿಲಯವಾಗಿಸಿ ಮನವನ್, ಅಲುಗಾಡಿಸದೆ ತುಟಿಯ |**

**ತೊಲಗಿ ಮಲಗಲ್ಲಿ ನೀಂ – ಮಂಕುತಿಮ್ಮ ||**

ನಿರ್ಜನದೆಡೆಗೆ=ನಿರ್ಜನದ+ಎಡೆಗೆ, ಬೇಡಿಸದೆಡೆಗೆ=ಬೇಡಿಸದ+ಎಡೆಗೆ, ಬರದೆಡೆಗೆ=ಬರದ+ಎಡೆಗೆ,

ಮಲಗಲ್ಲಿ=ಮಲಗು+ಅಲ್ಲಿ ನಿರ್ಜನ=ಜನರಿಲ್ಲದ, ವಿಲಯ ಸೇರಿಬಿಡುವುದು.

ಯಾರೂ ಇಲ್ಲದ ಕಡೆಗೆ, ಸಾವಿನೆಡೆಗೆ ತೊಲಗು. ಯಾರಿಂದಲೂ ಪ್ರೀತಿ ಒಲವು ಬಯಸದ ಮತ್ತು ದುಃಖವಿಲ್ಲದ ಸ್ಥಿತಿಯಲ್ಲಿ ನಿನ್ನ ಮನಸ್ಸನ್ನು ಲಯಗೊಳಿಸು. ಮೌನದಿಂದ ನೀನು ಅಂತಹ ಸ್ಥಿತಿಯಲ್ಲಿ ಮಲಗು ಎಂದು ಆದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

“ಲೋಕದಿಂದ ನಿರ್ಲೋಕ' 'ಎಲ್ಲರೊಳಗೊಂದಾಗು' 'ಲೋಕಭಾರವನಾತ್ಮನರಿಯದಿರೆ' 'ತ್ಯಾಗಿಯವನ್ ಅಂತರದಿ' ಎಂದು ಮಾನ್ಯ ಗುಂಡಪ್ಪನವರು ತಮ್ಮ ಹಲವಾರು ಮುಕ್ತಕಗಳಲ್ಲಿ ಒಳಗಿನಿಂದ ಹಗುರಾಗುವುದು ಹೇಗೆ ಎನ್ನುವುದಕ್ಕೆ ದೃಷ್ಟಾಂತ ಸಹಿತ ವಿವರಿಸಿದ್ದಾರೆ. ಹೀಗೆ ಲೋಕದಲ್ಲಿ ಇದ್ದು ನಿರ್ಲೋಕವಾಗುವ, ಲೋಕದ ಭಾರವನ್ನು ಆತ್ಮ ಅರಿತು, ಅಂತರಂಗದಿಂದ ಎಲ್ಲವನ್ನೂ ತ್ಯಾಗಮಾಡಿ, ಜಗತ್ತಿನ ಅಂಟನ್ನು ಬಿಡಿಸಿಕೊಂಡು, ಮನಸ್ಸನ್ನು ಹಗುರಾಗಿಸಿಕೊಂಡು ಲೋಕದಿಂದ ವಿಮುಖನಾಗಬೇಕೆಂಬ ಆದೇಶವನ್ನು ನೀಡಿದ್ದಾರೆ ಡಿವಿಜಿಯವರು.

“ಒಲವ ಬೇಡಿಸದೆಡೆಗೆ' ಎಂದರೆ ಎಲ್ಲಿ ನಮಗೆ ಮಮಕಾರ ಅಥವಾ ಮೋಹದಿಂದ ಅನ್ಯರ ಒಲವು ಅಥವಾ ಪ್ರೀತಿಯ ಅವಶ್ಯಕತೆ ಇರುವುದಿಲ್ಲವೋ ಮತ್ತು 'ಅಳುವು ಬರದೆಡೆಗೆ' ಎಂದರೆ ಅಂತಹ ಒಲವು ಅಥವಾ





ಪ್ರೀತಿಯಯನ್ನು ಬಯಸಿ, ನಮಗದು ಸಿಗದಿದ್ದರೆ, ನಿರ್ಮೋಹಿಯಾಗಿ, ಮನಸ್ಸಿಗೆ ದುಃಖವಾಗದಂತ ಸ್ಥಿತಿಗೆ ತಲುಪಬೇಕು. ಅಂತಹ ಸ್ಥಿತಿಯಲ್ಲಿ ಮೌನವಾಗಿರುತ್ತಾ ಮನಸ್ಸನ್ನು ವಿಲಯ'ವಾಗಿಸು ಎಂದರೆ, ಜಗತ್ತಿನ ವಿಷಯ ಮತ್ತು ವಾಸನೆಗಳಲ್ಲಿ ಲಯವಾಗಿದ್ದ ಮನವನ್ನು ಅವುಗಳಿಂದ ಬಿಡಿಸಿಕೊಂಡು ತನ್ನ ಮೂಲ ಸ್ವರೂಪದೊಳಕ್ಕೆ ವಿ-ಲಯ (withdraw)ವಾಗಿಸಿ, ಮೌನವನ್ನು ವಹಿಸಿ ಮಲಗು ಎಂದರೆ ವಿಶ್ರಮಿಸು ಎಂದು ಸಂದೇಶ.

ಕಡೆಯುಸಿರಿರುವ ತನಕ ಜಗತ್ತಿನ ವ್ಯಾಮೋಹಕ್ಕೆ ಅಂಟಿಕೊಂಡು ಬದುಕುವ ನಮಗೆ, ಈ ವ್ಯಾಮೋಹವನ್ನು ಬಿಡಲು ಸಾಧ್ಯವಿಲ್ಲವಾದ್ದರಿಂದ, ಮಾನ್ಯ ಗುಂಡಪ್ಪನವರು ಹೇಳಿರುವ ಸ್ಥಿತಿಗೆ ತಲುಪುವುದು ಅಥವಾ ಅಂತಹ

ಸ್ಥಿತಿಯನ್ನು ನಮ್ಮ ಬದುಕಿನಲ್ಲಿ ಊಹಿಸಲೂ ಸಾಧ್ಯವೇ ಇಲ್ಲವೆನ್ನುವಂತಾಗಿದೆ. ಮೈಕೈ ಉಡುಗಿ, ಬದುಕಿನಿಂದ ಏನನ್ನಾದರೂ ಪಡೆಯುವುದಾಗಲೀ ಅಥವಾ ಬದುಕಿಗೆ ಏನನ್ನಾದರೂ ಕೊಡುವುದಾಗಲೀ ನಮ್ಮಿಂದ ಸಾಧ್ಯವಿಲ್ಲವೆಂದಾದಾಗ ಮೌನವಾಗಿ ಬದುಕಿನಿಂದ ತೊಲಗಿಬಿಡುವುದೇ ಒಳ್ಳೆಯದಲ್ಲವೇ? ಅಂತಹ ಸ್ಥಿತಿಗೆ ತಲುಪಲು ಅನುಭವದ ಪಾಠ ಕಲಿತಿರಬೇಕು, ತೃಪ್ತಿಯಿಂದುಂಟಾದ ವಿರಕ್ತ ಭಾವ ನಮ್ಮಲ್ಲಿ ಬರಬೇಕು. ಅಂತಹ ವಿರಕ್ತಿಯನ್ನು ತುಂಬಿಕೊಂಡು ಮೌನವಾಗಿ ಬದುಕನ್ನು ಬಿಡಬೇಕು. ಹಾಗಾದರೆ ನಾವು ಬದುಕನ್ನು ಗೆದ್ದ ಹಾಗೆ ಆಗುತ್ತದೆ.

**ಮುಕ್ತಕ – 928**

**ಕಡೆಯಗಾಲವನು ತಾನೆ ಮುನ್ನರಿತು ಕಾಡಾನೆ |**
**ಯಡವಿಯೊಳದೊಂದು ದೂರದ ಗವಿಯನೈದಿ ||**
**ಬಿಡುವುದಾಯೆಡೆ ಮೌನದಿಂದಸುವನೆನ್ನುವರು |**
**ಕಡೆಯ ಸಾರಂತು ನೀಂ – ಮಂಕುತಿಮ್ಮ ||**

ಮುನ್ನರಿತು=ಮುನ್ನ+ಅರಿತು, ಕಾಡಾನೆಯಡವಿಯೊಳದೊಂದು=ಕಾಡಾನೆಯು+ಅಡವಿಯೊಳು+ಅದು+ಒಂದು, ಗವಿಯನೈದಿ-ಗವಿಯನ್+ಐದಿ, ಬಿಡುವುದಾಯೆಡೆ=ಬಿಡುವುದು+ಆ+ಎಡೆ, ಮೌನದಿಂದಸುವನೆನ್ನುವರು=ಮೌನದಿಂದ+ಅಸುವನು+ಎನ್ನುವರು, ಸಾರಂತು=ಸಾರು+ಅಂತು
ಕಡೆಯಗಾಲವನು= ಅಂತಿಮ ಸಮಯವನ್ನು, ಐದಿ=ಸೇರಿ, ಹೊಕ್ಕು, ಎಡೆ=ಸ್ಥಳ, ಅಸುವನು=ಉಸಿರನ್ನು, ಸಾರು= ಹೋಗು, ಅಂತು=ಹಾಗೆ

'ಕಾಡಾನೆ' ತನ್ನ ಮರಣ ಸನ್ನಿಹಿತವಾಯಿತೆಂದು ಮೊದಲೇ ಅರಿತು, ಕಾಡಿನಲ್ಲಿನ ಒಂದು ಗುಹೆಯೊಳಕ್ಕೆ ಸೇರಿ, ಮೌನವಾಗಿ ತನ್ನ ಉಸಿರನ್ನು ಬಿಡುವುದು ಎಂದು ಹೇಳುತ್ತಾರೆ. ನೀನೂ ಸಹ, ನಿನ್ನ ಅಂತ್ಯಕಾಲ ಹತ್ತಿರವಾದಾಗ, ಹಾಗೆ ದೂರ ಸರಿದು, ಮೌನವಾಗಿ ಕೊನೆಯುಸಿರನ್ನು ಬಿಟ್ಟು ಈ ಲೋಕದಿಂದ ಸರಿದು ಹೋಗು ಎಂದು, ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ನಮ್ಮ ಮರಣ ಎಂದು ಬರುತ್ತದೆ ಎಂದು ಅರಿಯಲು ಸಾಧ್ಯವಿಲ್ಲ. ಆದರೆ ಮರಣ ಇಂದೇ ಅಲ್ಲದಿದ್ದರೂ, ಎಂದೋ ಒಂದು ದಿನ ನಿಶ್ಚಯವಾಗಿ ಬಂದೇ ಬರುತ್ತದೆ ಎಂದು ನಮಗೆ ಗೊತ್ತು. ಆದರೆ ನಾವು ಸಾಯುವುದಕ್ಕೆ ಸಿದ್ಧರಿರುವುದಿಲ್ಲ. ಜಗತ್ತಿನೊಂದಿಗೆ ನಂಟು ಅಷ್ಟು ಗಟ್ಟಿಯಾಗಿರುತ್ತದೆ. ಈ ಜಗತ್ತನ್ನು ಬಿಡಲು ಮನಸ್ಸೇ ಬರುವುದಿಲ್ಲ. ಹಾಗಿದ್ದಮೇಲೆ ಮರಣಕ್ಕೆ ಸಿದ್ಧರಿರುವುದು ಹೇಗೆ ಸಾಧ್ಯ. ದೇಹಕ್ಕೆ ವಯಸ್ಸಾಗಿ, ಕೈಕಾಲುಗಳು ಉಡುಗಿ, ಪಟುತ್ವ ಕಳೆದುಕೊಂಡು ತನ್ನ ಕೆಲಸಗಳಿಗೂ ಅನ್ಯರ ಮೇಲೆ ಆಧಾರಪಡುವಂತಹ ಸಮಯ ಬಂದರೂ, ಮರಣಕ್ಕೆ ಸಿದ್ಧರಾಗುವುದಿಲ್ಲ. ಇನ್ನು ಮನಸ್ಸು ಬುದ್ಧಿಗಳು, ಬದುಕಿನ ಎಲ್ಲಾ ರೀತಿಯ ಅನುಭವಗಳನ್ನು ಪಡೆದು, ಸುಖ ದುಃಖಗಳನ್ನು ಅನುಭವಿಸಿ, ಎಲ್ಲವೂ ಒಂದು ದಿನ ಅಂತ್ಯವಾಗಲೇ ಬೇಕು ಎಂದು ಅರಿತುಕೊಂಡರೂ, ಈ ಜಗತ್ತಿನ ಮೇಲಿನ ವ್ಯಾಮೋಹವನ್ನು ಬಿಟ್ಟು ಅಂತರಂಗದಲ್ಲಿ ದೃಢವಾಗಿ ಮರಣಕ್ಕೆ ಸಿದ್ಧವಾಗುವುದಿಲ್ಲ.

ಎಲ್ಲರಿಗೂ ಮರಣವೆಂದರೆ ಭಯ. ಏಕೆಂದರೆ ಜನ್ಮದ ಹಿಂದಿನದು ನಮಗೆ ಗೊತ್ತಿಲ್ಲ. ಮರಣದ ನಂತರವೇನೆಂದು ನಮಗೆ ಅರಿವಿಲ್ಲ. ಹಾಗಾಗಿ ನಮಗೆ ಗೊತ್ತಿರುವುದು ಕೇವಲ ಈಗಿನ ನಮ್ಮ ಜನ್ಮ ಮತ್ತು ಇಂದಿನ ನಮ್ಮ ಅಸ್ತಿತ್ವ. "ಅಯ್ಯೋ ಇದನ್ನು ಕಳೆದುಕೊಂಡು ಬಿಟ್ಟರೆ, ಮತ್ತೇನು ಮಾಡುವುದು? ಅಯ್ಯೋ ಮರಣದಿಂದ ನಾವು ಗಳಿಸಿದ ಎಲ್ಲವನ್ನೂ ಬಿಟ್ಟು ಹೋಗಬೇಕಲ್ಲಾ" ಎನ್ನುವ ಭ್ರಮಾಪೂರಿತವಾದ ಭಯ. ಈ ರೀತಿಯ ಭಯವನ್ನು ಕೊನೆಯ ಉಸಿರಿರುವ ತನಕ ನಮ್ಮೊಳಗೇ ಇಟ್ಟುಕೊಂಡಿದ್ದರೆ, ಮರಣವನ್ನು ಆನಂದದಿಂದ ಸ್ವಾಗತಿಸುವ ಗುಣ ನಮಗೆ ಬರುವುದೇ ಇಲ್ಲ. ಸುಖವಾದ ಮರಣ ಬೇಕೆಂದರೆ, ಆ ಕಾಡಾನೆಯಂತೆ ಮೌನವಾಗಿ ನೀನು ಸರಿದು ಹೋಗು ಎಂದು ಆದೇಶಿಸಿದ್ದಾರೆ ಮಾನ್ಯ ಗುಂಡಪ್ಪನವರು.

ನಾವು ಇಷ್ಟಪಡಲಿ ಅಥವಾ ಪಡದೇ ಇರಲಿ, ಮರಣವಂತೂ ನಿಶ್ಚಿತ. ಹಾಗಿರಬೇಕಾದರೆ ಇಲ್ಲಿರುವಾಗ ಮತ್ತು ಈ ಜಗತ್ತಿನೊಂದಿಗೆ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಂಡು ಬದುಕುತ್ತಿರುವಾಗ, ಈ ಜಗತ್ತಿಗೆ ಮತ್ತು ಈ ಬದುಕಿನಲ್ಲಿ ನಾವು ಆರ್ಜಿಸಿದ ಯಾವುದಕ್ಕೂ ಅಂಟೀ ಅಂಟದಹಾಗೆ ಇದ್ದು ನಿರ್ಗಮಿಸಿದರೆ, ನಮ್ಮದು ಒಂದು ವಿರಕ್ತ, ನಿರ್ಲಿಪ್ತ ಮತ್ತು ಶಾಂತ ಮರಣವಾಗುತ್ತದೆ. ಹಾಗೆ ಪ್ರಾಣ ತ್ಯಾಗ ಮಾಡಿದವರನ್ನು ನಾವು ಬಹಳಷ್ಟು ಜನರನ್ನುನಮ್ಮ ಈ ಸಮಾಜದಲ್ಲಿ ಕಾಣುತ್ತೇವೆ. ವ್ಯಾಮೋಹ ಬಿಟ್ಟರೆ ಮರಣದಲ್ಲಿ ನೋವು ಕಡಿಮೆ. ಅಂಟಿಕೊಂಡಿದ್ದರೆ ಅಳಲು ಮತ್ತು ಗೋಳು ಇದ್ದೇ ಇರುತ್ತದೆ.

**ಮುಕ್ತಕ 929**

**ಸದ್ದು ಮಾಡದೆ ನೀನು ಜಗಕೆ ಬಂದವನಲ್ಲ ।**

**ಒದ್ದಾಟ ಗುದ್ದಾಟ ಬಾಳೆಲ್ಲವಾಯ್ತು ॥**

**ಗದ್ದಲವ ಬಿಡಲು ಕಡೆದಿನವಾನುವಾದೀತೇ ।**

**ನಿದ್ದೆವೊಲು ಸಾವ ಪಡೆ - ಮಂಕುತಿಮ್ಮ ॥**

ಬಾಳೆಲ್ಲವಾಯ್ತು=ಬಾಳೆಲ್ಲವು+ಆಯ್ತು. ಕಡೆದಿನವಾನುಮಾದೀತೇ=ಕಡೆದಿನವು+ಆನುಮ್+ಆದೀತೆ,

ನಿದ್ದೆವೋಲು=ನಿದ್ದೆಯ+ಒಲು ಆನುಮ್=ಆದರೂ, ಒಲು=ಹಾಗೆ, ಅಂತೆ

ನೀನು ಈ ಜಗತ್ತಿಗೆ ಬರುವಾಗ ಸದ್ದು ಮಾಡಿಕೊಂಡೇ ಬಂದವನು ಮತ್ತು ಬಾಳಿನುದ್ದಕ್ಕೂ ಗದ್ದಲದಲ್ಲೇ ಬದುಕಿದವನು. ಕಡೆಯಪಕ್ಷ ನಿನ್ನ ಅಂತಿಮ ಕ್ಷಣದಲ್ಲಾದರೂ ಈ ಗದ್ದಲದಿಂದ ಹೊರಬಂದು ನಿದ್ರೆಯಂತಹ ಸಾವನ್ನು ಪಡೆ ಎಂದು ಸೂಚಿಸಿದ್ದಾರೆ, ಮಾನ್ಯ ಗುಂಡಪ್ಪನವರು.

ಎಲ್ಲರೂ ಈ ಜಗತ್ತಿಗೆ ಬರುವಾಗ ಸದ್ದು ಮಾಡಿಕೊಂಡೇ ಬರುತ್ತಾರೆ. ಅಕಸ್ಮಾತ್ ಹುಟ್ಟಿದಾಕ್ಷಣ ಸದ್ದು ಮಾಡದೆ ಇದ್ದರೆ, ಬೆನ್ನ ತಟ್ಟಿಯೋ, ಹೊಟ್ಟೆ ಚಿವುಟಿಯೋ ಸದ್ದು ಮಾಡಿಸುತ್ತಾರೆ. ಹಾಗೆ ಹುಟ್ಟಿದ ದಿನ ಆರಂಭವಾದ "ಸದ್ದು' ಜೀವನ ಪರ್ಯಂತ ನಿಲ್ಲುವುದೇ ಇಲ್ಲ. ಬಹಳಷ್ಟು ಜನರ ಶಬ್ದ, ಖಾಲಿ ಮಡಕೆಯಲ್ಲಿನ ಗೋಲಿಯ ಶಬ್ದದಂತೆ ಇರುತ್ತದೆ. ಪುಟ್ಟ ಮಗುವಾಗಿನಿಂದ 'ತನ್ನ ತನವನ್ನು ರೂಪಿಸಿಕೊಳ್ಳಲು, ಸ್ಥಾಪಿಸಲು ಬಹು ಪ್ರಯತ್ನದ ಗದ್ದಲ. ಈ ಗದ್ದಲ ಸಾವಿನವರೆಗೂ ನಿಲ್ಲುವುದೇ ಇಲ್ಲ ಅಲ್ಲವೇ?

ಕೆಲವರು ಮಾತ್ರ ನಿ:ಶಬ್ದವಾಗಿ, ತಮ್ಮಷ್ಟಕ್ಕೆ ತಾವು ಬದುಕುತ್ತಾರೆ. ಅವರುಗಳು ಏನನ್ನಾದರೂ ಸಾಧಿಸಿದ್ದರೂ ಸಹ ಆ ಸಾಧನೆಯೂ ಸದ್ದು ಗದ್ದಲವಿಲ್ಲದೆ ನಡೆದು, ತಮ್ಮ ಛಾಪನ್ನು ಎಲ್ಲೂ ಮುದ್ರಿಸದೆ, ಅಜ್ಞಾತರಾಗಿ, ಮೌನವಾಗಿ

ಬದುಕಿನಿಂದ ನಿರ್ಗಮಿಸುತ್ತಾರೆ. ಅಂತಹವರು ಬಹಳ ವಿರಳ. ಮತ್ತೆ ಕೆಲವರ ಶಬ್ದ ಕೇವಲ ಬದುಕಿನಲ್ಲಿ ಅಸ್ತಿತ್ವಕ್ಕೆ ಮಾಡುವ ಒದ್ದಾಟ ಪರದಾಟಗಳೇ ಆಗಿರುತ್ತದೆ. ಇಂತಹವರಿಗೆ ಬದುಕಿನಿಂದ ಪಡೆಯುವುದಷ್ಟೇ ಗೊತ್ತಿರುತ್ತದೆ, ಕೊಡುವುದಕ್ಕೆ ಏನೂ ಇರುವುದಿಲ್ಲ. ಹಾಗಾಗಿ ಇವರ ಶಬ್ದ ಇವರ ಪ್ರಯೋಜನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಮತ್ತೆ ಕೆಲವರಿದ್ದಾರೆ, ಅವರ ಶಬ್ದ ಎಲ್ಲರನ್ನೂ ವಿಚಲಿತ(disturb)ಗೊಳಿಸುತ್ತದೆ. ಅವರುಗಳಿಗೆ ಸದಾ ಕಾಲ ಅನ್ಯರಿಗೆ ಹಿಂಸೆ ಕೊಟ್ಟು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದೋ ಅಥವಾ ತಮ್ಮನ್ನು ತಾವು ರೂಪಿಸಿಕೊಳ್ಳುವುದೋ ನಡೆಯುತ್ತದೆ. ರಸ್ತೆಯಲ್ಲಿ ಸುಮ್ಮಸುಮ್ಮನೆ ತಮ್ಮ ಕಾರಿನ ಹಾರ್ನ್ ಹೊಡೆದು ರಸ್ತೆಯಲ್ಲಿರುವವರಿಗೆಲ್ಲಾ ಕಿರಿಕಿರಿಯುಂಟು ಮಾಡುವವರಂತೆ, ಇವರುಗಳು ಸದ್ದು ಮಾಡುತ್ತಲೇ ಇರುತ್ತಾರೆ .

"ಬದುಕಿನಲ್ಲಿ ಶಬ್ಧಮಾಡದೆ ಬದುಕಲು ಸಾಧ್ಯವಿಲ್ಲವೇ?" ಎಂದರೆ, ಹೌದು ಸ್ವಲ್ಪ ಕಷ್ಟ. ಏನನ್ನಾದರೂ ಕಲಿಯಲು ಅಥವಾ ಪಡೆಯಲು ಒಂದಿಷ್ಟು ಶಬ್ದದ ಅವಶ್ಯಕತೆಯುಂಟು. ಆದರೆ ಕಲಿಕೆ ಅಥವಾ ಗ್ರಹಿಕೆಗಿಂತ ಶಬ್ದವೇ





ಹೆಚ್ಚಾದರೆ ತೊಂದರೆಯಾಗುತ್ತದೆ. ಬದುಕಿನಲ್ಲಿ ನಾನಾ ಕಾರಣಗಳಿಗೆ ಸದ್ದು ಮಾಡುವ ನಾವು, ಕಡೆಯ ಪಕ್ಷ ಬದುಕಿನ ಕಡೆಯ ದಿನಗಳಲ್ಲಿ, ಬದುಕಿನಿಂದ ಮತ್ತೇನನ್ನೂ ಪಡೆಯಲಾಗುವುದಿಲ್ಲ ಅಥವಾ ಬದುಕಿಗೆ ಮತ್ತೇನನ್ನೂ ನೀಡಲಾಗುವುದಿಲ್ಲ ಎಂದು ಅರಿತು, ನಮ್ಮೆಲ್ಲಾ ಸದ್ದುಗಳನ್ನು ನಿಲ್ಲಿಸಿ, ಜಗತ್ತಿನಲ್ಲಿ ಹರಡಿಕೊಂಡಿದ್ದ ನಮ್ಮ ಎಲ್ಲ ಸಂಬಂಧ, ಸಂಪರ್ಕದ ಭಾವಗಳ ಕೊಂಡಿಗಳನ್ನು ಹಿಂತೆಗೆದು(withdraw)ಕೊಂಡು, ನಿದ್ರೆಮಾಡುವಾಗ ಇರುವಂತೆ, ಏಕಾಂಗಿಯಾಗಿ, ಮೌನವಾಗಿ, ಶಾಂತವಾಗಿ, ದೇಹತ್ಯಾಗಮಾಡಿದರೆ, ನಮ್ಮ ಕೊನೆಯಗಳಿಗೆಯಲ್ಲಾದರೂ ನಾವೂ ನೆಮ್ಮದಿಯಾಗಿದ್ದು ಜಗತ್ತಿಗೂ ಒಂದಿಷ್ಟು ನೆಮ್ಮದಿಯನ್ನು ನೀಡಿದಂತಾಗುತ್ತದೆಯಲ್ಲವೇ? ಪ್ರಯತ್ನಪಟ್ಟರೆ ಸಾಧ್ಯ!!!

**ಮುಕ್ತಕ – 93ಸಂ**

**ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ |**

**ಯಾರ ಭುಜಕಂ ನಿನ್ನ ಭಾರವಾಗಿಸದೆ ||**

**ಆರ ಸೆಲೆ ಸುಳಿವುಮಂಟದವೊಲಾಗಿಸಿ ನಿನ್ನ |**

**ಪಾರಗಾಣಿಸ ಬೇಡು – ಮಂಕುತಿಮ್ಮ ||**

ಸುಳಿವುಮಂಟದವೊಲಾಗಿಸಿ=ಸುಳಿವುಂ+ಅಂಟದ+ಒಲು+ಆಗಿಸಿ

ಸೆಲೆ=ಸೆಳೆತ, ಪಾರಗಾಣಿಸು=ಕೊನೆಮುಟ್ಟಿಸು

"ಯಾರೋ ನೀಡುವ ಕೈತುತ್ತಿಗೆ ನಾನು ಕಾಯುವಂತಾಗದೆ, ಯಾರ ಭುಜಕ್ಕೂ ನಾನು ಹೊರೆಯಾಗದೆ, ಯಾರದೇ ಪ್ರೀತಿ, ಪ್ರೇಮ ಮತ್ತು ಮೋಹಗಳ ಸೆಳೆತಕ್ಕೆ ಅಂಟದಹಾಗೆ, ಈ ಜಗತ್ತಿನಿಂದ ನಿರ್ಗಮಿಸುವ ದಾರಿ ತೋರೋ" ಎಂದು ಪರಮಾತ್ಮನಲ್ಲಿ ಬೇಡು ಎಂದು, ತಮಗೇನು ಬೇಕೋ ಅದನ್ನು ಹೇಳುತ್ತಾ, ನೀವೂ ಸಹ ಅದನ್ನೇ ಬೇಡಿ ಪಡೆದುಕೊಳ್ಳಿ ಎಂದು ಆದೇಶ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಅನ್ಯರಲ್ಲಿ ಬೇಡುವುದಕ್ಕಿಂತ ಹೀನವಾದ ಸ್ಥಿತಿ ಯಾವುದೂ ಇಲ್ಲ. ಬೇಡುವಾಗ ದೈನ್ಯತೆ ತುಂಬಿ, ಆಸೆಗಣ್ಣುಗಳಿಂದ ನೀಡುವವರನ್ನು ನೋಡುತ್ತಾ, ಇಲ್ಲದ ಭಕ್ತಿ ಮತ್ತು ಪ್ರೀತಿಗಳನ್ನು ತೋರುತ್ತಾ ಬೇಡುವುದು, ಹೂ... ಅದಕ್ಕಿಂತ ಹೀನ ಸ್ಥಿತಿ ಬೇಕೇ? ನಮ್ಮಲ್ಲಿ ಅದನ್ನು 'ನಾಯಿಪಾಡು' ಎನ್ನುತ್ತಾರೆ. ಮಾತ್ರವಲ್ಲ, ಬದುಕಿನಲ್ಲಿ ನಾವು ಯಾರಿಗೂ ಹೊರಯಾಗದ ಸ್ಥಿತಿಯಲ್ಲಿರಬೇಕು. ನಮ್ಮ ಕೈಲಾಗದತನದಿಂದ ನಾವು ಅನ್ಯರಿಗೆ ಹೊರೆಯಾಗುವ ಸ್ಥಿತಿ ಬಂದರೆ, ದೈನ್ಯತೆ ನಮ್ಮ ಮನಸ್ಸಲ್ಲಿ ತುಂಬಿ ನಾವು ಖಿನ್ನರಾಗುತ್ತೇವೆ. ನಾವು ಇಷ್ಟಪಡದಿದ್ದರೂ ಕೆಲವು ಬಾರಿ ಪರಿಸ್ಥಿತಿಗಳ ಒತ್ತಡದಿಂದ, ಅನ್ಯಮಾರ್ಗವಿಲ್ಲದೆ ದೀನರಾಗಬೇಕಾಗುತ್ತದೆ ಮತ್ತು ಅನ್ಯರಿಗೆ ಹೊರೆಯಾಗಬೇಕಾಗುತ್ತದೆ. ಜೀವನದಲ್ಲಿ ಎಂದಿಗೂ ಅಂತಹ ಸ್ಥಿತಿ ಬಾರದಿರಲೆಂದು ನಾವು ಪರಮನಲ್ಲಿ ಬೇಡಬೇಕು.

ಇದನ್ನೇ ಗುರು ದ್ರೋಣಾಚಾರ್ಯರು "ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಂ, ದೇಹಿ ಮೇ ಕೃಪಯಾ ಕೃಷ್ಣ, ತ್ವಯಿ ಭಕ್ತಿಮಚಲಂ" ಎಂದು ಅನಾಯಾಸದ ಮರಣ, ದೈನ್ಯತೆಯಿಲ್ಲದ ಜೀವನ ಮತ್ತು ಮನದಲ್ಲಿ ಪರಮನ ಕುರಿತು ಅಚಲವಾದ ಭಕ್ತಿಯನ್ನು ಬೇಡುತ್ತಾರೆ. ನಮ್ಮ ಪ್ರಾರ್ಥನೆಯೂ ಅದೇ ಆಗಬೇಕು. ಮುಕ್ತಕ 64ಸಂ ರಲ್ಲಿ ಮಾನ್ಯ ಗುಂಡಪ್ಪನವರು 'ತಿರುಕ ನೀನೀ ಬ್ರಹ್ಮಪುರಿಯೊಳದ ಮರೆಯದಿರು" ಎನ್ನುತ್ತಾ ನಾವೆಲ್ಲಾ ಹುಟ್ಟಿದಾರಭ್ಯ ಸಾಯುವತನಕ 'ಬಿಕ್ಷುಕ'ರೆನ್ನುತ್ತಾರೆ. ಸದಾಕಾಲ ಅನ್ಯರಿಂದ ಏನಾನ್ನಾದರೋ ಬೇಡುತ್ತಲೇ ಇರುವ ಭಿಕ್ಷುಕರು. ಇದಕ್ಕೆಲ್ಲಾ ಕಾರಣ ನಮ್ಮ ಆಸೆಗಳು, ವಸ್ತು, ವಿಷಯ ಮತ್ತು ವ್ಯಕ್ತಿಗಳ ಮೇಲಿನ ಪ್ರೀತಿ ಮತ್ತು ವ್ಯಾಮೋಹಗಳು. ಜಗತ್ತಿನ ಅಂಟನ್ನು ಬಿಡಿಸಿಕೊಂಡರೆ ನಂಟೂ ಸಹ ಬಿಡುತ್ತದೆ. ನಂಟು ಬಿಟ್ಟರೆ ಗಂಟುಗಳು ಬಿಡಿಸಿಕೊಂಡು ನಾವು ಮುಕ್ತರಾಗಿ ಮುನ್ನಡೆಯಬಹುದು.

ಸದ್ದಿಲ್ಲದೇ ನಮ್ಮ ಕೈಲಾದದ್ದನ್ನು ಜಗತ್ತಿಗೆ ನೀಡಿ 'ತಾನ್ ಎಲೆಯ ಪಿನಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು' ಎಚಿದು ಮಾನ್ಯ ಗುಂಡಪ್ಪನವರು ಹೇಳುವಂತೆ ಇದ್ದು, ಈ ಜಗತ್ತಿನಿಂದ ನಿರ್ಗಮಿಸುವ ವರವನ್ನು ಬೇಡಬೇಕು. ಅಂತಹ ವರದಿಂದ 'ಆತ್ಮ ಬಂಧನಗಳಿಂದ ಮುಕ್ತವಾಗುತ್ತದೆ ಮತ್ತು ಹೊಸಹೊಸ ಬಂಧನಗಳನ್ನು ಅಂಟಿಸಿಕೊಳ್ಳದಂತಹ ಸ್ಥಿತಿಗೆ ತಲುಪುತ್ತದೆ. ನಮ್ಮೆಲ್ಲ ದುಃಖಗಳಿಗೂ ಈ ಬಂಧನಗಳೇ ಕಾರಣವೆಂದಾದಮೇಲೆ, ಅದರಿಂದ ಬಿಡುಗಡೆಯ ಬೇಡುವುದೇ ಸೂಕ್ತವಲ್ಲವೇ? ಈ ಜಗತ್ತಿನಲ್ಲಿ ಪಡೆದುಕೊಳ್ಳುವುದನ್ನೆಲ್ಲ ಪಡೆದು, ಕೊಡುವುದನ್ನೆಲ್ಲಾ ಕೊಟ್ಟು ನಮ್ಮ ಜಾಡ್ಯಗಳು ನಿ:ಶೇಷವಾಗಿ, ನಾವು ಹಗುರಾಗಿ ಈ ಜಗತ್ತಿನಿಂದ ನಿರ್ಗಮಿಸುವ ಆಸೆಯನ್ನು ಹೊತ್ತು ಆ ಪರಮಾತ್ಮನಲ್ಲಿ ನಮ್ಮನ್ನು ಹಾಗೆ ಇಲ್ಲಿಂದ ಪಾರುಮಾಡಿಸು ಎಂದು ಬೇಡಬೇಕು ಎನ್ನುವುದೇ ಈ ಮುಕ್ತಕದ ಹೂರಣ. ಅಂತಹ ಸ್ಥಿತಿ ಯಾರಿಗೆ ಬೇಡ ಹೇಳಿ. ಕೇವಲ ಬೇಕೆಂದರೆ ಸಾಲದು ಅದಕ್ಕೆ ಅರ್ಹತೆಯನ್ನೂ ಬೆಳೆಸಿಕೊಳ್ಳಬೇಕು.

**ಮುಕ್ತಕ – 931**

**ವೇದಾಂತವಾಕ್ಯಗಳ ನಮಕಾನುವಾಕಗಳ |**
**ಕೇದಾರಗೌಳ ಮಣಿರಂಗಾರಭಿಗಳ ||**
**ನಾದಂಗಳಲಿ ಮನವ ಬೆರೆಸಿ ನಿಸ್ತ್ರಿಮಿಸೆ |**
**ಸಾಧನವೊ ಮುಕ್ತಿಗದು - ಮಂಕುತಿಮ್ಮ ||**

ನಮಕಾನುವಾಕಗಳ=ನಮಕ+ಅನುವಾಕುಗಳ, ಮಣಿರಂಗಾರಭಿಗಳ=ಮಣಿರಂಗ+ಆರಭಿಗಳ, ನೀನುತ್ಕ್ರಮಿಸೆ=ನೀನು ಉತ್ಕ್ರಮಿಸೆ, ಮುಕ್ತಿಗದು=ಮುಕ್ತಿಗೆ+ಅದು

ವೇದಾಂತದ ವಾಕ್ಯಗಳನ್ನು ಅಥವಾ ಉಪನಿಷತ್ತಿನ ಸಾರವನ್ನು ಸಾರುವ ವಾಕ್ಕುಗಳಲ್ಲಿ ಅಥವಾ ಕೇದಾರಗೌಳ, ಮಣಿರಂಗ ಅಥವಾ ಆರಭಿಯಂತಹ ಸಂಗೀತದ ರಾಗಗಳಲ್ಲಿನ ವಿಸ್ತಾರವನ್ನು ಕೇಳುತ್ತಾ ಅದರೊಳಗೆ





ತಲ್ಲೀನನಾಗಿ ನೀನು ಈ ಜಗತ್ತನ್ನು ತೊರೆದರೆ, ಅದೇ ಮುಕ್ತಿಗೆ ಸಾಧನ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಶುದ್ಧಸತ್ಯ ಮತ್ತು ಸತ್ವವನ್ನು ಪ್ರತಿಪಾದಿಸುವ ವೇದ ಮತ್ತು ಉಪನಿಷತ್ತಿನ ಅನುವಾಕಗಳನ್ನು ಕೇಳುವಾಗ ಮನಸ್ಸು ಅನ್ಯವಿಷಯಗಳ ಮೇಲೆ ಹರಿಯದೆ ಪರತತ್ವದಲ್ಲಿ ತಲ್ಲೀನಗೊಳ್ಳುತ್ತದೆ. ಅವುಗಳು ಅರ್ಥವಾಗಲಿ ಅಥವಾ ಅರ್ಥವಾಗದೆ ಇರಲಿ ಅವುಗಳಲ್ಲಿನ ಜ್ಞಾನ ನಮ್ಮನ್ನು ತನ್ನೆಡೆಗೆ ಸೆಳೆದು ನಮಗೆ ಏಕಾಗ್ರತೆಯನ್ನು ನೀಡಿ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ, ಇದು ಕೇವಲ ಅನುಭವದಿಂದ ಅರ್ಥವಾಗುತ್ತದೆ.

ಹಾಗೆಯೇ ನಮ್ಮ ಮನಸ್ಸಿಗೆ ನೆಮ್ಮದಿಯನ್ನು ನೀಡುವುದು 'ಸಂಗೀತ', ಇದನ್ನು ಉದಾಹರಿಸಿ ಕೇದಾರಗೌಳ, ಮಣಿರಂಗ ಮತ್ತು ಆರಭಿಯಂತಹ ರಾಗಗಳ ಉಲ್ಲೇಖಮಾಡಿದ್ದಾರೆ ಡಿವಿಜಿಯವರು. ನಾವು ಮಾಡುವ ಪೂಜೆ, ಧ್ಯಾನ ಮತ್ತು ತಪಸ್ಸುಗಳಿಗಿಂತ, ಸುಲಭವಾಗಿ, ಶೀಘ್ರವಾಗಿ ಮತ್ತು ನೇರವಾಗಿ ಪರತತ್ವದೊಂದಿಗೆ ಸಂಪರ್ಕ ಕಲ್ಪಿಸುವ ಕ್ಷಮತೆ ಇರುವುದು 'ಸಂಗೀತ'ಕ್ಕೆ. ಆ ಸಂಗೀತವನ್ನು ಆಲಿಸುವಾಗ ಆ ರಾಗಗಳ ವಿಸ್ತಾರ ಮತ್ತು ಪ್ರಸ್ತಾರಗಳು ನಮಗೆ ಪರತತ್ವದ ದರ್ಶನ ಮಾಡಿಸುತ್ತದೆ.

ಹೀಗೆ ವೇದದ ಅನುವಾಕ್ಕುಗಳನ್ನು ಮತ್ತು ಸಂಗೀತವನ್ನು ಆಲಿಸುವಾಗ ಮನಸ್ಸು ಏಕಾಗ್ರಗೊಂಡು, ಜಗತ್ತಿನ ಅಂಟು ಮತ್ತು ನಂಟು ಬಿಟ್ಟುಹೋಗುತ್ತದಾದ್ದರಿಂದ, ಅದನ್ನು ಸಾಧನವೊ ಮುಕ್ತಿಗದು' ಎಂದರು ಮಾನ್ಯ ಗುಂಡಪ್ಪನವರು. ಈ ದೇಹವನ್ನು ಬಿಡುವ ಕಾಲದಲ್ಲಿ ಅಂತಹ, ಆಂಟಿಲ್ಲದ ಮತ್ತು ನಂಟಿಲ್ಲದ ಸ್ಥಿತಿಗೆ ನಾವು ತಲುಪಲಾದರೆ ಅದಕ್ಕಿಂತ ಭಾಗ್ಯ ಬೇಕೆ? ಅದುವೇ ಮುಕ್ತಿಗೆ ಸಾಧನವಾಗುತ್ತದೆ, ಆತ್ಮ ಸಂಸ್ಕರಣ ಮತ್ತು ಆತ್ಮಾನಂದಕ್ಕೆ ನಾಂದಿಯಾಗುತ್ತದೆ.





**ಮುಕ್ತಕ - 932**

**ಮೋಹನಾನಂದಭೈರವಿ ಶಂಕರಾಭರಣ |**

**ಶಾಹನ ಕುರಂಜಿ ಕೇದಾರ ಕಾಪಿಗಳ ||**

**ಮೋಹಸರ್ವಸ್ವ ರಾಗಾಬ್ಧಿಯೋ ಬ್ರಹ್ಮ |**

**ಗಾಹಿಸದರೊಳಗೆ ನೀಂ - ಮಂಕುತಿಮ್ಮ ||**

ಮೋಹನಾನಂದಭೈರವಿ=ಮೋಹನ+ಆನಂದಭೈರವಿ, ಗಾಹಿಸದರೊಳಗೆ=ಗಾಹಿಸು+ಅದರೊಳಗೆ

ಗಾಹಿಸು= ತಲ್ಲೀನನಾಗು

ಮಾನ್ಯ ಗುಂಡಪ್ಪನವರು ಸಂಗೀತದಲ್ಲಿ ಬಹಳ ಆಸಕ್ತಿಯುಳ್ಳವರಾಗಿದ್ದರು, ಸ್ವತಃ ವಾಗ್ಗೇಯಕಾರರಾಗಿದ್ದರು ಮತ್ತು ಸಂಗೀತ ಶಾಸ್ತ್ರವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಹಾಗಾಗಿ ಅವರು ಏನೆನ್ನುತ್ತಾರೆ ನೋಡಿ!!!!! 'ಮೋಹನ, ಆನಂದಭೈರವಿ, ಶಂಕರಾಭರಣ, ಶಾಹನ, ಕುರಂಜಿ, ಕೇದಾರ, ಕಾಪಿ' ಗಳಂತಹ ರಾಗಗಳಲ್ಲಿ ಹೊರ ಹೊಮ್ಮುವ ಸಂಗೀತವು ಪರಬ್ರಹ್ಮನನ್ನು ಆರಾಧಿಸುವ ರಾಗಗಳ ಕಡಲು. ಆ ವಿಸ್ತಾರವಾದ ರಾಗಗಳ ಕಡಲಲ್ಲಿ ನೀನು ಮುಳುಗಿ ಲೀನವಾಗು ಎಂಬ, ಕಿವಿಮಾತನ್ನು ಹೇಳಿದ್ದಾರೆ ಈ ಮುಕ್ತಕದಲ್ಲಿ.

ಸಂಗೀತವನ್ನು ಹಾಡಿದರೂ ಅಥವಾ ಕೇಳಿದರೂ, ಅದೊಂದು ತಪಸ್ಸಿದ್ದಂತೆ. ಸಂಗೀತವನ್ನು ಕೇಳುತ್ತಿದ್ದರೆ ಈ ಜಗತ್ತನ್ನು ಮರೆಯಬಹುದು. ತನ್ಮಯತೆಯಿಂದ ಕೇಳುತ್ತಿದ್ದರೆ ನಮ್ಮನ್ನು ನಾವು ಆ ನಾದಗಳ ಕಡಲಿನಲ್ಲಿ ಕರಗಿಸಿಕೊಂಡು 'ನಾವು ಅಥವಾ ನಾನು' ಇಲ್ಲದಂತಹ ಸ್ಥಿತಿಯಲ್ಲಿ ಆನಂದದಿಂದ ಇರಬಹುದು. ಜಗತ್ತಿನಲ್ಲಿರುವ ಶಬ್ದಗಳ ಸಮೂಹ 'ನರಕ'ದ ಅರಚಿದ್ದಂತೆ. ಆದರೆ ಸಂಗೀತದ ಅಲೆಗಳಿಂದ ತುಂಬಿದ ಸ್ವರಗಳ ಕಡಲು ಬ್ರಹ್ಮಾನಂದವನ್ನು ಕೊಡುವ ಸ್ವರ್ಗ ಸುಖದಂತೆ. ಅದೊಂದು ಭಿನ್ನ ಮತ್ತು ದಿವ್ಯ ಲೋಕ, ಸಂಗೀತದ ಮಾಧುರ್ಯವನ್ನು ಆಲಿಸಿ ಸವಿಯಲು ಮತ್ತು ಆನಂದಿಸಲು ಒಂದು ಭಿನ್ನವಾದ ಮನೋಭಾವ ಬೇಕು. "ಬಲ್ಲವರೇ ಬಲ್ಲರು ಬೆಲ್ಲದ ಸವಿಯ" ಎಂಬಂತೆ.

ಸಂಗೀತದ ಮಹತ್ವಕ್ಕೆ ಒಂದು ದೃಷ್ಟಾಂತವೆಂದರೆ, ಜರ್ಮನಿಯ ಬರ್ಲಿನ್ ನಗರದಲ್ಲಿ ಒಂದು ಸಂಜೆ, ಒಂದು ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಹದಿಮೂರು ವರ್ಷದ ಬಾಲಕ 'ಯಹೂದಿ ಮೆನುಹಿನ್' ನ ಪಿಟೀಲು ವಾದನ. ಅಲ್ಲಿನ ಕಾರ್ಯಕ್ರಮಗಳಲ್ಲಿ ಬಹಳ ಶಿಸ್ತಿನ ಆದೇಶಗಳಿರುತ್ತಿತ್ತು. ಇಂತಹ ಸಮಯಕ್ಕೆ ಬರಬೇಕು, ಇಂತಹ ವಸ್ತ್ರವನ್ನೇ ಧರಿಸಿರಬೇಕು, ನಿಗದಿತ ಸ್ಥಳದಲ್ಲೇ ಕೂರಬೇಕು, ಮಧ್ಯೆ ಮಾತನಾಡಬಾರದು, ವೇದಿಕೆಯಮೇಲೆ ಹೋಗಬಾರದು ಮುಂತಾದಾಗಿ, ಆ ಬಾಲಕನ ಅಂದಿನ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂದು, ಅಂತ್ಯದಲ್ಲಿ ಸಭಿಕರಲ್ಲಿದ್ದ ಓರ್ವ ವ್ಯಕ್ತಿ, ಶಿಸ್ತಿನ ಎಲ್ಲಾ ಕಟ್ಟಳೆಗಳನ್ನೂ ಮುರಿದು, ವೇದಿಕೆಯ ಮೇಲೆ ಹೋಗಿ, ಆ ಬಾಲಕನನ್ನು ಬಿಗಿದಪ್ಪಿಕೊಂಡು "ಇಂದು ದೇವರಿದ್ದಾನೆಂದು ನಾನು ನಂಬುತ್ತೇನೆ" ಎಂದನಂತೆ. ಆ

ವ್ಯಕ್ತಿಯೇ, ಸೃಷ್ಟಿಗೆ ವ್ಯಾಖ್ಯಾನ ಬರೆದಂತಹ ಮಹಾನ್ ಮೇಧಾವಿ ವಿಜ್ಞಾನಿ 'ಆಲ್ಬರ್ಟ್ ಐನ್ಸ್ಟೈನ್ '.

ಭಕ್ತಿಯ ಪಾರವಶ್ಯದಲ್ಲಿ ಮತ್ತು ವಿರಕ್ತಿಯ ತುರೀಯಾವಸ್ಥೆಯಲ್ಲಿ ಸಂಗೀತದ ಕಡಲಲ್ಲಿ ಮುಳುಗಿ ಲೀನವಾದವರ ಚರಿತ್ರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೇರಳವಾಗಿ ಕಾಣಬಹುದು. ಪುರಂದರ ದಾಸರು, ಕನಕ ದಾಸರು, ತ್ಯಾಗರಾಜರು, ಅನ್ನಮಾಚಾರ್ಯರು, ಮಹಾರಾಷ್ಟ್ರದ ಸಂತರು, ಮೀರಾ, ಕಬೀರ್, ಸೂಫೀ ಸಂತರು ಮುಂತಾದವರೆಲ್ಲರ ಭಕ್ತಿಗೆ ಸಂಗೀತವೇ ಮಾಧ್ಯಮವಾಗಿತ್ತು. ಹಾಗಾಗಿ ಸಾಧ್ಯವಾದರೆ ಶುದ್ಧ ಮತ್ತು ಮನಸ್ಸಿಗೆ ಸಾಂತ್ವನವನ್ನು ನೀಡುವ ಸಂಗೀತವನ್ನು ಆಲಿಸುತ್ತಾ, ನಮ್ಮ ಮನಸ್ಸಿನಲ್ಲಿ ಜಗತ್ತಿನ ಶಬ್ದಗಳ ಬುಗ್ಗೆಗಳು ಏಳದಂತೆ, ಜಗತ್ಕಾರಕನನ್ನು ಮನದಲ್ಲಿ ಅನುಸಂಧಾನ ಮಾಡಬಹುದಾದ ನಾದಗಳ ಕಡಲಲ್ಲಿ ಮುಳುಗಿ ಆನಂದವನ್ನು ಅನುಭವಿಸುವ ಅಭ್ಯಾಸವನ್ನು ಮಾಡಿಕೊಂಡರೆ, ಅಂತ್ಯಕಾಲದಲ್ಲಿ ಮಾನ್ಯ ಗುಂಡಪ್ಪನವರು ಹೇಳುವ ನಮ್ಮ 'ಉತ್ಕ್ರಮಣ' ಶಾಂತವಾಗಿ ಮತ್ತು ಮೌನವಾಗಿ ಆಗಬಹುದು. ಎಲ್ಲರೂ ಪ್ರಯತ್ನಪಡಬಹುದು. ಯಾರು ಎಷ್ಟು ತೀವ್ರತೆಯಿಂದ ಪ್ರಯತ್ನಿಸಿದರೆ, ಅವರಿಗೆ ಅಷ್ಟು ಫಲ!

**ಮುಕ್ತಕ – 933**
**ಕಷ್ಟ ಜೀವದ ಪಾಕ, ಕಷ್ಟ ಧರ್ಮ ವಿವೇಕ |**
**ಎಷ್ಟೆಷ್ಟು ನೀತಿಯುಕ್ತಿಗಳ ಬಗೆದಡೆಯುಂ ||**
**ಇಷ್ಟಿಷ್ಟು ನಿನ್ನೊಳ್ ಒಳತಿಳಿವಿಲ್ಲದಿರೆ ನಷ್ಟ |**
**ದೃಷ್ಟಿ ಸೂಕ್ಷ್ಮವೆ ಗತಿಯೊ - ಮಂಕುತಿಮ್ಮ ||**

ಬಗೆದಡೆಯುಂ=ಬಗೆದು+ಒಡೆಯುಂ, ಒಳತಿಳಿವಿಲ್ಲದಿರೆ = ಒಳತಿಲಿವು+ಇಲ್ಲದಿರೆ,

ಜೀವ ಪಕ್ವವಾಗುವುದು ಕಷ್ಟ, ಧರ್ಮದ ವಿವೇಕ ಬರುವುದೂ ಸಹ ಕಷ್ಟ ಎಷ್ಟು ನೀತಿಕಥೆಗಳನ್ನು ಓದಿ, ಕೇಳಿ ಅರಿತುಕೊಂಡರೂ, ಅಂತರಂಗದಲ್ಲಿನ ವಿವೇಕ ಉದ್ದೀಪನವಾಗದಿದ್ದರೆ ಪ್ರಯೋಜನವಿಲ್ಲ. ಅವುಗಳನ್ನು ಅರಿಯಲು ಸೂಕ್ಷ್ಮ ದೃಷ್ಟಿಯಿರಬೇಕು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವ ಪಕ್ವವಾಗುವುದೆಂದರೆ ಜಗದ ಅಂಟಿನಿಂದ ತನ್ನನ್ನು ತಾನು ಬಿಡಿಸಿಕೊಳ್ಳುವುದು ಎಂದರ್ಥ. ಪಾಪ ಆ ಜೀವ, ಬಿಡಬೇಕೆಂದುಕೊಂಡರೂ, ಜಗತ್ತಿನ ವ್ಯಾಮೋಹ ಅದನ್ನು ಬಿಡಲೊಲ್ಲದು. ಹಾಗಾಗಿ ಜೀವ ಪರಿಪೂರ್ಣ ಪಕ್ವತೆಯನ್ನು ಪಡೆಯುವುದು ಕಷ್ಟ. ಧರ್ಮವೆಂದರೆ ಒಂದು ವಸ್ತು ವಿಷಯ ಅಥವಾ ವ್ಯಕ್ತಿಗಳ ಮೂಲ ಸ್ವಭಾವ. ಈ ಪರಿಭಾಷೆಯಲ್ಲಿ ಧರ್ಮವನ್ನು ಅರಿಯಲು ಕಷ್ಟ. ಏಕೆಂದರೆ ನಾವು ಅವುಗಳನ್ನು ನೋಡುವುದು ನಮ್ಮ ಅರ್ಥೈಸುವ ಕ್ಷಮತೆಗನುಗುಣವಾಗಿ ಅಲ್ಲವೇ? ನಮ್ಮ ಕ್ಷಮತೆಯಲ್ಲಿ ಕೊರತೆ ಇದ್ದರೆ, ಇದ್ದರೆ ಏನು... ಇದ್ದೇ ಇರುತ್ತದೆ, ನಾವು ಸತ್ಯಸ್ವರೂಪವನ್ನು ಅರಿಯಲು ಸಾಧ್ಯವಿಲ್ಲ. ಹಾಗಾಗಿ ಜಗತ್ತಿನಲ್ಲಿ ಧರ್ಮವನ್ನು ಅರಿಯುವುದು ಕಷ್ಟ.





ಈ ಜೀವ, ಜಗತ್ತಿನ ವ್ಯಾಮೋಹದಿಂದ ಬಿಡಿಸಿಕೊಳ್ಳಲು, ತನ್ನನ್ನು ತಾನು ಮುಕ್ತಗೊಳಿಸಿಕೊಳ್ಳಲು ಬಹಳ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತದೆ. ಸದಾಚಾರ, ಸದ್ವಿಚಾರ, ಸತ್ಸಂಗಗಳಂತಹ ಮಾರ್ಗಗಳಿಂದ ಪ್ರಯತ್ನ ಪಡುತ್ತದೆ. ನೀತಿಕಥೆಗಳನ್ನು ಓದುತ್ತದೆ, ಕೇಳುತ್ತದೆ ಮತ್ತು ಅದರೊಳಗಿನ ತಿರುಳನ್ನೂ ಅರಿಯುತ್ತದೆ. ಆದರೂ ಪಕ್ವತೆ ಬಾರದಿರಲು ಕಾರಣವೇನೆಂದರೆ, ಇವುಗಳನ್ನೆಲ್ಲಾ ಓದಿ, ಕೇಳಿ, ತಿಳಿದು, ಅರಿತು ಒಳಗಿಳಿಸಿಕೊಂಡರೂ, ಅಂತರಂಗದ ಬೆಳಕಿಲ್ಲದಿದ್ದರೆ, ಇವುಗಳ ಸಾರವನ್ನು ಪಡೆದುಕೊಂಡು ತನ್ನನ್ನು ತಾನು ಬೆಳಗಿಸಿಕೊಳ್ಳಲು ಸಾಧ್ಯವಿಲ್ಲ. ಹೊರಗಿನಿಂದ ಎಷ್ಟೇ ವಿಚಾರಗಳನ್ನು ಕಳುಹಿಸಿದರೂ (transmitter), ಒಳಗಡೆ ಪಡೆಯುವ (receiver) ಯೋಗ್ಯತೆ ಇಲ್ಲದಿದ್ದರೆ, ಒಳಹೊಕ್ಕಿದ್ದೆಲ್ಲಾ ನಿರರ್ಥಕವಲ್ಲವೇ? ಹಾಗಾಗಿ ಒಳ ಬೆಳಕನ್ನು ಹೆಚ್ಚಿಸಿಕೊಂಡರೆ ಪಡೆಯುವುದು ಸುಲಭ. ಕಣ್ಣು ಬಿಟ್ಟರೆ ನೋಡಬಹುದು. ಕಣ್ಣು ಮುಚ್ಚಿಕೊಂಡರೆ, ಹೊರಗೆ ಎಷ್ಟು ಬೆಳಕಿದ್ದರೂ, ನೋಡಲಾಗುವುದೆ? ಇದನ್ನೇ ಮಾನ್ಯ ಗುಂಡಪ್ಪನವರು 'ಇಷ್ಟಷ್ಟು ನಿನ್ನೊಳ್ ಒಳತಿಳಿವಿಲ್ಲದಿರೆ ನಷ್ಟ ಎಂದಿದ್ದಾರೆ.

ಆದರೆ ಈ ಒಳ ಅರಿವನ್ನು ಹೆಚ್ಚಿಸಿಕೊಳ್ಳುವುದು ಅಷ್ಟು ಸುಲಭವಲ್ಲ, ಪ್ರಯತ್ನಪೂರ್ವಕವಾಗಿ ನಮ್ಮಲ್ಲಿರುವ ಅಜ್ಞಾನವನ್ನು ಬಲವಂತವಾಗಿ ಹೊರತಳ್ಳಬೇಕು. ಒಳಗೆ ಒಂದು ಭೂಮಿಕೆಯನ್ನು ಸಿದ್ಧಪಡಿಸಿಕೊಂಡು ಅದರೊಳಕ್ಕೆ

ಶುದ್ಧ ಸತ್ವವನ್ನು ಬರಮಾಡಿಕೊಂಡರೆ ಆಗ ಜೀವ ಪಕ್ವವಾಗುತ್ತದೆ, ಜಗದ ವ್ಯಾಮೋಹ ಬಿಟ್ಟುಹೋಗುತ್ತದೆ ಮತ್ತು ಧರ್ಮದ ಅರಿವೂ ಆಗುತ್ತದೆ. ಆದರೆ ಇದೆಲ್ಲ ಅಲ್ಪ ಪ್ರಯತ್ನದಿಂದ ಸಾಧ್ಯವಿಲ್ಲ. ದೃಢ ನಿಶ್ಚಯದಿಂದ, ಧೀರ್ಘಕಾಲದ ಮತ್ತು ನಿರಂತರ ಪ್ರಯತ್ನದಿಂದ ಮಾತ್ರ ಆಗುವ ಸಂಸ್ಕಾರ, ಸ್ವ-ಇಚ್ಛೆಯಿಂದ ನಮ್ಮನ್ನು ನಾವು ಅದಕ್ಕೆ ಒಡ್ಡಿಕೊಳ್ಳಬೇಕು. ಜಗತ್ತಿನಲ್ಲಿದ್ದರೂ ಜಗತ್ತಿನ ವ್ಯಾಮೋಹದಿಂದ ವಿಮುಖರಾಗಿ ಸತ್ವವನ್ನು ಮಾತ್ರ ಗ್ರಹಿಸಿದರೆ ಜನ್ಮಜನ್ಮಾಂತರದಲ್ಲಾದರೂ ನಮಗೆ ಪಕ್ವತೆ ಬರಬಹುದು ಮತ್ತು ಧರ್ಮದ ಅರಿವಾಗಬಹುದು. ಪ್ರಯತ್ನ ನಿರಂತರವಾಗಬೇಕು, ಅಷ್ಟೇ!!!!!!





**ಮುಕ್ತಕ 934**

**ನೂರಾರು ಮತವಿಹುದು ಲೋಕದುಗ್ರಾಣದಲಿ |**

**ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್ ||**

**ಸಾರದಡುಗೆಯನೊಳವಿಚಾರದೊಲೆಯಲ್ಲಿ ಮಾಡು |**

**ಬೇರೆ ಮತಿ ಬೇರೆ ಮತ - ಮಂಕುತಿಮ್ಮ ||**

ಮತವಿಹುದು=ಮತವು+ಇಹುದು, ಲೋಕದುಗ್ರಾಣದಲಿ=ಲೋಕದ+ಉಗ್ರಾಣದಲಿ,

ರುಚಿಗೊಪ್ಪುವುದನದರೊಳ್=ರುಚಿಗೆ+ಒಪ್ಪುವುದನು+ಅದರೊಳ್,

ಸಾರದಡುಗೆಯನೊಳವಿಚಾರದೊಲೆಯಲಿ=ಸಾರದ+ಅಡುಗೆಯನು+ಒಳ+ವಿಚಾರದ+ಒಲೆಯಲಿ,

ಉಗ್ರಾಣ= ದಿನಸಿ, ಧಾನ್ಯ ಮತ್ತು ಮನೆಯಲ್ಲಿ ಅಡುಗೆ ಸಾಮಗ್ರಿಗಳನ್ನು ಸಂಗ್ರಹಮಾಡಿಡುವ ಸ್ಥಳ,

ಸಾರದ=ಸತ್ವದ, ಮತಿ =ಬುದ್ಧಿ, ಮತ=ಅಭಿಪ್ರಾಯ.

ಈ ಜಗತ್ತಿನಲ್ಲಿ ನೂರಾರು ಮತಗಳಿವೆ. ನಿನ್ನ ಮನಸ್ಸಿಗೆ ಇಷ್ಟವಾದ ಯಾವುದಾದರೊಂದು ಮತವನ್ನು ನೀನು ಆರಿಸಿಕೋ, ನಿನ್ನ ಮನಸ್ಸಿನ ಒಲೆಯಲ್ಲಿ ಆ ವಿಚಾರವನ್ನು ಅಡುಗೆಮಾಡಿ ಸಾರವನ್ನು ಅನುಭವಿಸು. ಯಾರ ಬುದ್ಧಿ ಹೇಗಿರುತ್ತದೋ ಹಾಗೆ ಅವರ ಮತ, ಎಂದರೆ ಅಭಿಪ್ರಾಯ ಹಾಗಿರುತ್ತದೆ ಎಂದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದೇ 'ಪರವಸ್ತುವನ್ನು ಅರಿಯುವ ಮಾರ್ಗಗಳು ಸಾವಿರಾರು. ಪ್ರತಿಯೊಬ್ಬನಿಗೂ ಅವನವನದೇ ರೀತಿಯಲ್ಲಿ ಅದನ್ನು ಕಂಡುಕೊಳ್ಳುವ ಅಧಿಕಾರ ಮತ್ತು ಸಂಪೂರ್ಣ ಸ್ವಾತಂತ್ರ್ಯ ಉಂಟು, ಯಾರು ಹೇಗೆ ಕಂಡುಕೊಂಡರೆ ಅವರಿಗೆ ಹಾಗೆ ಕಾಣುವುದು. ಪ್ರತಿಯೊಬ್ಬರ ದರ್ಶನವೂ ಅವರವರ ವಿಚಾರದ ಆಧಾರದ ಮೇಲೆ ಇರುತ್ತದೆ. ಇದನ್ನೇ ಅವರವರ ಭಾವಕ್ಕೆ ಅವರವರ ಬಕುತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ, ಹರನ ಭಕ್ತರಿಗೆ ಹರ, ಹರಿಯ ಭಕ್ತರಿಗೆ ಹರಿ, ನರರೇನು ಭಾವಿಸುವರದರಂತೆ ಕಾಣುವನು' ಎಂದರು ಶಿವ ಶರಣರು. ಹಾಗಾಗಿ ಆ ಪರತತ್ತ್ವ ಎನ್ನುವುದು ಅವರವರ ಭಾವಕ್ಕೆ ಸಂಬಂಧಿಸಿದ್ದು, ಆಕಾಶಾತ್ ಪತಿತಂ ತೋಯಂ ಯಥಾ ಗಚ್ಚತಿ ಸಾಗರಂ ಸರ್ವ ದೇವ ನಮಸ್ಕಾರಂ ಕೇಶವಂ ಪ್ರತಿಗಚ್ಚತಿ' ಎಂದರು ನಮ್ಮ ಹಿರಿಯರು. ಯಾವ ಪದ್ಧತಿಯನ್ನು ಅನುಸರಿಸಿ, ಯಾವುದೇ ಹೆಸರಿನಿಂದ ನಮಸ್ಕರಿಸಿದರೂ, ಆಕಾಶದಿಂದ ಬಿದ್ದ ಮಳೆಯ ನೀರು ಹರಿಯುವಾಗ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟ ನದಿಗಳಾದರೂ ಸೇರುವುದು ಒಂದೇ ಕಡಲೆಂಬಂತೆ, ಆ ನಮಸ್ಕಾರ ಕೇಶವನನ್ನೇ ಮುಟ್ಟುತ್ತದೆ ಎಂದು ಅರ್ಥ.

ಹೀಗೆ ಆ ಪರತತ್ವವನ್ನು ಕುರಿತಾದ ನಮ್ಮ ಚಿಂತನೆಗೆ, ಜಗತ್ತಿನಲ್ಲಿರುವ ಸಾವಿರಾರು ಮಾರ್ಗಗಳಲ್ಲಿ ಯಾವುದಾದರೊಂದು ಮಾರ್ಗವನ್ನು ಹುಡುಕಿಕೊಂಡು, ಆ ಮಾರ್ಗವನ್ನು ದೃಢವಾಗಿ ನಂಬಿ, ಮನಸ್ಸಿನ ಒಲೆಯಲ್ಲಿ ವಿಚಾರದ ಪಾತ್ರೆಯನ್ನಿಟ್ಟು, ಆ ಪಾತ್ರೆಯಲ್ಲಿ ನಮ್ಮ ಅಭಿಪ್ರಾಯವನ್ನು ಕಾಯಿಸಿ, ಕುದಿಸಿ, ಶೋಧಿಸಿ,

ಕೊಳಕನ್ನು ನಿವಾರಿಸಿ, ಸಾರವನ್ನು ಮಾತ್ರ ನಮಗೆ ಸಿಗುವಂತೆ ಅಡುಗೆ ಮಾಡಿ, ಆ ಸಾರದಡುಗೆಯ ಪಾಕ ನಮಗೆ ಸಿಗುವಂತಾದರೆ ಆಗ ನಾವೂ ಸಹ ಅಂತರಂಗದಿಂದ ಪಕ್ವವಾಗಬಹುದು ಅಲ್ಲವೇ? ಅನ್ಯರೊಡನೆ ಅಭಿಪ್ರಾಯಭೇಧವಿದ್ದರೂ, ಅವರ ಅಭಿಪ್ರಾಯಗಳನ್ನು ಗೌರವಿಸುತ್ತಾ, ನಮ್ಮ ದರ್ಶನವನ್ನು ಮುಂದುವರೆಸುತ್ತಾ ಹೋಗುವುದೇ ಜಾಣತನ.

ಇಲ್ಲಿ ಅನ್ಯರ ಭಾವ ಅಭಿಪ್ರಾಯ ಅಥವಾ ಮತವನ್ನು ಕುಹಕವಾಡುವುದಾಗಲೀ, ಅಲ್ಲಗೆಳೆಯುವುದಾಗಲೀ, ಖಂಡಿಸುವುದಾಗಲೀ ಸಲ್ಲ. ಏಕೆಂದರೆ ಯಾರ ಬುದ್ಧಿ ಮತ್ತು ವಿಚಾರ ಹೇಗಿರುತ್ತದೆಯೋ ಅವರ ಮತವೂ ಹಾಗಿರುತ್ತದೆ. ನಾವು ಅನ್ಯರ ಬಗ್ಗೆ ಚಿಂತೆ ಮಾಡದೆ ನಮ್ಮ ದರ್ಶನವನ್ನು ಮತ್ತಷ್ಟು ನಿಚ್ಚಳವಾಗಿಸುವ ಹಾದಿಯಲ್ಲಿ ದೃಢ ಮತ್ತು ದಿಟ್ಟ ಹೆಜ್ಜೆಗಳನ್ನಿಡುತ್ತಾ ಮುಂದುವರೆಯಬೇಕು. ಆನೋ ಭದ್ರಾಕ್ರತವೋ ಯಂತು ವಿಶ್ವತಃ ಎನ್ನುವುದು ಕೇನೋಪನಿಶತ್ತಿನ ಸೂಕ್ತ. ಸದ್ವಿಚಾರಗಳು ಎಲ್ಲೆಡೆಯಿಂದಲೂ (ನನ್ನೆಡೆಗೆ) ಬರಲಿ ಎಂದು ಬೇಡುವ ಸೂಕ್ತ. ಹಾಗೆ ಎಲ್ಲಕಡೆಯಿಂದ ಬರುವ 'ಸತ್'ವಿಚಾರಗಳನ್ನು ಒಳಗಿಳಿಸಿಕೊಂಡು ನಮ್ಮದೇ ರೀತಿಯಲ್ಲಿ ಆ ಪರತತ್ವವನ್ನು ಕಾಣಬೇಕು ಎನ್ನುವುದು ಈ ಮುಕ್ತಕದ ಹೂರಣ.

**ಮುಕ್ತಕ – 935**

**ಮೆಣಸು ಹಿಪ್ಪಲಿ ಶುಂಠಿ ಜೀರಿಗೆಗಳೆಲ್ಲ ಸರಿ |**
**ಅನುವಪ್ಪುದೊಂದೊಂದು ರೋಗಗೊಂದೊಂದು ||**
**ನಿನಗಮಂತೆಯೆ ನೂರು ನೀತಿಸೂತ್ರಗಳಿರಲು |**
**ಅನುವನರಿವುದೆ ಜಾಣು – ಮಂಕುತಿಮ್ಮ ||**

ಅನುವಪ್ಪುದೊಂದೊಂದು=ಅನುವು+ಅಪ್ಪು+ಒಂದೊಂದು, ನಿನಗಮಂತೆಯೆ=ನಿನಗಂ+ಅಂತೆಯೆ
ಅನುವನರಿವುದೆ=ಅನುವನ್+ಅರಿವುದೆ, ಅಪ್ಪು=ಆಗುತ್ತದೆ ಅನುವನ್=ಸೂಕ್ತವಾದದ್ದನ್ನು, ಜಾಣು=ಜಾಣತನ.

ಮೆಣಸು ಹಿಪ್ಪಲಿ ಶುಂಠಿ ಜೀರಿಗೆ ಮುಂತಾದ ಪದಾರ್ಥಗಳು ಔಷಧೀಯ ಗುಣಗಳನ್ನು ಹೊಂದಿದ್ದು, ನಮ್ಮ ದೇಹದ ಒಂದೊಂದು ರೋಗಕ್ಕೆ ಒಂದೊಂದು ಔಷಧಿಯಂತೆ ಸೂಕ್ತವಾಗಿರುತ್ತವೆ. ಅದೇ ರೀತಿ ನಮ್ಮ ಮಾನಸಿಕ ಮತ್ತು

ಆಧ್ಯಾತ್ಮಿಕ ರುಗ್ಧತೆ ಅಥವಾ ಖಾಯಿಲೆಯನ್ನು ವಾಸಿಮಾಡಲು ನೂರಾರು ನೀತಿ ಸೂತ್ರಗಳು ಇರುವಾಗ, ನಿನಗೆ ಸೂಕ್ತವಾದದ್ದನ್ನು ಆರಿಸಿಕೊಳ್ಳುವುದೇ ಜಾಣತನ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

| 331 |
|---|

| ಕಗ್ಗರಸಧಾರೆ | ಮತಿಯಂತೆ ಮತ 934 938 |
|---|---|

'ಮೆಣಸು ಹಿಪ್ಪಲಿ ಶುಂಠಿ ಜೀರಿಗೆ ಇವುಗಳೆಲ್ಲ ಔಷಧೀಯ ಗುಣಗಳುಳ್ಳ ಸಾಂಬಾರ ಪದಾರ್ಥಗಳು. ಅವುಗಳನ್ನು ಶೀತಕ್ಕೆ, ವಾತಕ್ಕೆ, ಪಿತ್ತಕ್ಕೆ ಎಂಬಂತೆ ಬೇರೆ ಬೇರೆಯಾಗಿಯೂ ಮತ್ತು ಹಲವಾರು ರೀತಿಯ ಮಿಶ್ರಣಗಳಲ್ಲಿಯೂ ಬಳಸಿ ಕಷಾಯಗಳನ್ನು ಮಾಡಿ ಬಳಸುತ್ತಾರೆ, ಜಗತ್ತಿನಾದ್ಯಂತ, ಮುಖ್ಯವಾಗಿ 'ಭಾರತ ಖಂಡದಲ್ಲಿ. ಇದನ್ನು ಉದಾಹರಣೆಯನ್ನು ನೀಡುತ್ತಾ ಡಿವಿಜಿಯವರು, ಇದೇ ರೀತಿ ಬೇರೆ ಬೇರೆ ಮಾರ್ಗಗಳು ಆಧ್ಯಾತ್ಮ ಸಾಧನೆಗೂ ಇವೆ, ಅವುಗಳಲ್ಲಿ ನೀನು ಆವುದನ್ನು ಆಯ್ದುಕೊಂಡರೂ ಗುರಿಮುಟ್ಟಬಹುದು, ಅದರ ಸೂಕ್ತಾಸೂಕ್ತತೆಯನ್ನು ನೀನೇ ಜಾಣತನದಿಂದ ನಿರ್ಧರಿಸಿ, ನಿನಗೆ ಅನುವಾದ ಮಾರ್ಗವನ್ನು ನೀನೆ ಅಯ್ದುಕೋ, ಎಂದಿದ್ದಾರೆ ಮಾನ್ಯ ಗುಂಡಪ್ಪನವರು.

ಯೋಗ, ಧ್ಯಾನ, ಜಪ, ತಪ, ಪೂಜೆ, ಅಧ್ಯಯನ, ಅಧ್ಯಾಪನ, ತೀರ್ಥಯಾತ್ರೆ, ಯಾಗ, ಹೋಮ, ಹವನ, ಪರೋಪಕಾರ, ಜಗದುಪಕಾರ ಹೀಗೆ ಹಲವಾರು ಮಾರ್ಗಗಳು ಇವೆ, ನಮ್ಮ ಅಂತರಂಗದ ಶುದ್ಧಿಗೆ, ಯಾವ ಮಾರ್ಗವನ್ನು ಅನುಸರಿಸಿದರೂ ಆ ಪರತತ್ವದ ಅನುಭವ ಮತ್ತು ದರ್ಶನವಾಗುತ್ತದೆ. ಆದರೆ ಒಂದು ಮಾರ್ಗವನ್ನು ಆಯ್ದುಕೊಂಡು ಅಥವಾ ಒಂದೆರಡು ಮಾರ್ಗಗಳ ಸೂಕ್ತ ಮಿಶ್ರಣದ ಮಾರ್ಗವನ್ನು ತೀವ್ರತೆಯಿಂದ ಸಾಧನೆಮಾಡಿದರೆ ಮಾತ್ರ ಸಾಧ್ಯ. ಯಾವುದರಲ್ಲೂ ಆಳವಾದ ಆಸಕ್ತಿ ಮತ್ತು ಅಭ್ಯಾಸವಿಲ್ಲದೆ ಇದ್ದರೆ ಯಾವುದನ್ನೂ ಸಾಧಿಸಿದಂತಾಗುವುದಿಲ್ಲ.

ಅದೆಲ್ಲಕ್ಕಿಂತ ಮೊದಲು ನಮಗೆ ರೋಗವಿದೆ ಎಂದು ನಮಗೆ ಅರಿವಾಗಬೇಕು ಮತ್ತು ನಾವು ನಮ್ಮ ರೋಗದ ಲಕ್ಷಣವನ್ನು ಅರಿತುಕೊಳ್ಳಬೇಕು. ನಂತರ ಸೂಕ್ತ ಔಷಧಿಯ ಆಯ್ಕೆಯಾಗಬೇಕು ಮತ್ತು ಆ ಔಷಧಿಯನ್ನು ರೋಗ

ಸುಧಾರಿಸುವವರೆಗೂ ಶ್ರದ್ಧೆಯಿಂದ ಸೇವಿಸಬೇಕು. ಆನ್ನೋದ್ಧಾರದ ಮಾರ್ಗದಲ್ಲಿ ನಮಗೆ ಬಾಧಕವಾಗಿರುವುದೆಲ್ಲವನ್ನೂ ನಿವಾರಿಸಿ ನಮ್ಮನ್ನು ಔನ್ನತ್ಯಕ್ಕೆ ಕೊಂಡುಹೋಗುವ, ಪರತತ್ವದ ದರ್ಶನ ಮತ್ತು ಅರಿವನ್ನು ಮೂಡಿಸುವ ಯಾವುದೇ ಮಾರ್ಗವಾದರೂ ಸರಿ ನಾವೇ ಆಯ್ದುಕೊಳ್ಳಬೇಕು ಮತ್ತು ಆಯ್ದುಕೊಂಡ ಮಾರ್ಗದಲ್ಲಿ ಶ್ರದ್ಧೆಯಿಂದ ಮುನ್ನಡೆದರೆ ಎಂದೋ ಒಂದು ದಿನ ನಮ್ಮ ರೋಗವು ವಾಸಿಯಾಗಿ ಹಗುರಾಗಿ ಆತ್ಮ ಪರಮಾತ್ಮನನ್ನು, ಪರತತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗಬಹುದು. ಆದರೆ ಮಾರ್ಗ ನಮ್ಮದೇ ಆಗಿರಬೇಕು. ಯಾರದೋ ಮಾರ್ಗವನ್ನು ತುಳಿದರೆ ನಮ್ಮ ನಮ್ಮದೇ ಆದಂತಹ 'ದರ್ಶನ' ದಿಂದ ವಂಚಿತರಾಗುತ್ತೇವೆ.

**ಮುಕ್ತಕ – 936**

**ವಿಶದವಾದೊಂದು ಜೀವನಧರ್ಮದರ್ಶನವ |**

**ನುಸುರಿಕೊಳೆ ತನ್ನ ಮನಸಿಗೆ ತಾನೆ ಬಗೆದು ||**

**ನಿಸದವಂ ಗ್ರಂಥಾನುಭವಗಳಿಂದಾರಿಸುತ |**

**ಹೊಸೆದನೀ ಕಗ್ಗವನು – ಮಂಕುತಿಮ್ಮ ||**

ವಿಶದವಾದೊಂದು=ವಿಶದಂ+ಆದ+ಒಂದು,

ಜೀವನಧರ್ಮದರ್ಶನವನುಸುರಿಕೊಳೆ=ಜೀವನಧರ್ಮ+ದರ್ಶನವನು+ಉಸಿರಿಕೊಳೆ,

ಗ್ರಂಥಾನುಭವಗಳಿಂದಾರಿಸುತ=ಗ್ರಂಥ+ಅನುಭವಗಳಿಂದ+ಆರಿಸುತ, ಹೊಸೆದನೀ=ಹೊಸೆದೆನು+ಈ

ವಿಶದ=ಸ್ಪಷ್ಟ, ನಿಸದ=ನಿಶ್ಚಯ, ಹೊಸೆ=ಹೆಣೆ, ಕಗ್ಗ = ಹಗ್ಗ

ಹಿಂದಿನ ಎರಡು ಮುಕ್ತಕಗಳಲ್ಲಿ "ನಿನ್ನ ಮನಕೆ ಒಪ್ಪುವ ಮತವನ್ನು ಆಯ್ದುಕೊಂಡು ಅಂತರಂಗದಲ್ಲಿ ಮಥನಮಾಡಿ ನಿನಗೆ ಕಂಡ ಸತ್ಯವನ್ನು ಭದ್ರವಾಗಿ ಹಿಡಿದುಕೊಂಡು ಮುಂದುವರೆ" ಎಂದು ನಮಗೆ ಅರುಹಿದ್ದಾರೆ. ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ತಾನು ಸಹ ಹೀಗೆಯೇ ಮಾಡಿದೆ ಎಂದು ಹೇಳುತ್ತಾರೆ.

ವಾಚಕರೆ ಒಂದು ವಿಷಯವನ್ನು ನಾವು ಚೆನ್ನಾಗಿ ಅರಿತುಕೊಳ್ಳಬೇಕು. ಮಾನ್ಯ ಗುಂಡಪ್ಪನವರು ಏನನ್ನು ನಂಬಿದ್ದರೋ, ಏನನ್ನು ಯೋಚಿಸಿದರೋ ಅದನ್ನೇ ಹೇಳಿದರು ಮತ್ತು ಏನನ್ನು ಹೇಳಿದರೋ ಹಾಗೆಯೇ ಬದುಕಿದರು. ಅಂತಹ ವ್ಯಕ್ತಿಗಳು ನಮಗೆ ಬದುಕಿನಲ್ಲಿ ಸಿಗುವುದು ಬಹಳ ದುರ್ಲಭ, ಹಾಗಾಗಿಯೇ ಮಾನ್ಯ ಗುಂಡಪ್ಪನವರು ಇಂದಿಗೂ ಮತ್ತು ಎಂದೆಂದಿಗೂ ಪ್ರಸ್ತುತವಾಗಿ ಉಳಿಯುತ್ತಾರೆ. ಅವರು 'ನಾನು ಸ್ಪಷ್ಟವಾದ ಒಂದು ವಿಚಾರವನ್ನು ನನ್ನ ಜೀವನದ ಧರ್ಮದ ದರ್ಶನವೆಂದು ಬಗೆದು, ಅದರ ವಿಚಾರವನ್ನು ಗ್ರಂಥಗಳಿಂದ ಮತ್ತು ಬದುಕಿನ ಅನುಭವಗಳಿಂದ ಆರಿಸಿಕೊಂಡು, ಅರಿತುಕೊಂಡು ಈ ಕಗ್ಗವೆಂಬ ಹಗ್ಗವನ್ನು ಹೊಸೆದಿದ್ದೇನೆ ಎಂದು ಹೇಳುತ್ತಾರೆ. ಅದು ಅವರ ಮಾರ್ಗವಾಯಿತು.

ನಾವೂ ಸಹ ಅದನ್ನೇ ಅನುಸರಿಸಬೇಕೇ? ಎಂದರೆ, ಮುಕ್ತಕ್ಕ 934 ರಲ್ಲಿ ಬೇರೆ ಮತಿ ಬೇರೆ ಮತ' ಎಂದು ಹೇಳಿದಂತೆ ನಮ್ಮ ಮತಿಗೆ ತಕ್ಕಂತೆ ನಮ್ಮ ಮತವನ್ನು ನಾವು ಆಯ್ದುಕೊಳ್ಳಬಹುದು. ಆದರೆ ನಮ್ಮ ವಿಚಾರ ಸ್ಪಷ್ಟವಾಗಿರಬೇಕು ಮತ್ತು ನಿಶ್ಚಯವಾಗಿರಬೇಕು. ಹಾಗಾದರೆ ನಾವೂ ಸಹ ಅಂತಿಮ ಸತ್ಯದ ದರ್ಶನವನ್ನು ಪಡೆಯಬಹುದು. ಆದರೆ ಅವರು ನಮಗೊಂದು ಮಾರ್ಗವನ್ನು ತೋರಿದ್ದಾರೆ. ಆ ಮಾರ್ಗದಲ್ಲಿ ನಡೆದು ಕ್ರಮಿಸಿದರೆ ನಾವು ನಮ್ಮದೇ ಆದ ಗಮ್ಯವನ್ನು ಕಂಡುಕೊಳ್ಳಬಹುದು. ಅದಕ್ಕೆ ನಮಗೆ ಪರತತ್ವವನ್ನು ಅರಿಯುವ ಆಸಕ್ತಿಯುಂಟಾಗಬೇಕು. ಆ ದಿಕ್ಕಿನಲ್ಲಿ, ಹಿಂದೆ ನಡೆದವರ ಮತ್ತು ಯಶಸ್ಸನ್ನು ಕಂಡವರ ಮತವನ್ನು ಅನುಸರಿಸಿ ನಮ್ಮದೇ ಆದ ಸತ್ಯವನ್ನು ಕಂಡುಕೊಳ್ಳಬಹುದು.

ಇಂದಿನ ವ್ಯಸ್ತ ಜೀವನ ಶೈಲಿಯಲ್ಲಿ, ಹಿಂದೆ, ಅಕ್ಕ ಪಕ್ಕ ಮತ್ತು ಮುಂದೆಯೂ ನೋಡಲಾಗದ ಸ್ಥಿತಿಯಲ್ಲಿರುವ ನಮಗೆ ಈ ಮುಕ್ತಕಗಳು ಒಂದು ದಾರಿದೀಪವೆನ್ನುವುದರಲ್ಲಿ ಸಂದೇಹವೇ ಇಲ್ಲ. ಇವುಗಳಲ್ಲಿರುವ ಸತ್ವವನ್ನು ಮತ್ತು ತತ್ವವನ್ನು ಅನುಸಂಧಾನಮಾಡಿ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಮಾನ್ಯ ಗುಂಡಪ್ಪನವರ ಪ್ರತಿ ಶ್ರದ್ಧೆ ಮತ್ತು ಗೌರವ ತೋರಿದಂತಾಗುತ್ತದೆ ಮತ್ತು ನಮಗೆ ಮುನ್ನಡೆಯಲು ಮಾರ್ಗವಾಗುತ್ತದೆ.

**ಮುಕ್ತಕ – 937**

**ಹೃದ್ಯ ಹೃದಯೇಂಗಿತಕೆ ರಾಗ ತಾಳದ ಕಟ್ಟು |**

**ಗದ್ಯ ಲೌಕಿಕ ತಾತ್ತ್ವಿಕಕ್ಕಚ್ಚುಕಟ್ಟು ||**

**ಮಧ್ಯದಲಿ ಮಿಸುಕಿ ನೆಲಬಿಟ್ಟು ಬಾನ್ ಮುಟ್ಟದಿಹ |**

**ಪದ್ಯವಧಿಕಪ್ರಸಂಗಿ - ಮಂಕುತಿಮ್ಮ ||**

ಹೃದಯೇಂಗಿತಕೆ=ಹೃದಯ+ಇಂಗಿತಕೆ, ತಾತ್ತ್ವಿಕಕ್ಕಚ್ಚುಕಟ್ಟು =ತಾತ್ತ್ವಿಕಕ್ಕೆ+ಅಚ್ಚುಕಟ್ಟು,

ಮುಟ್ಟದಿಹ=ಮುಟ್ಟದೆ+ಇಹ, ಪದ್ಯವಧಿಕಪ್ರಸಂಗಿ=ಪದ್ಯವು+ಅಧಿಕ+ಪ್ರಸಂಗಿ

ಬಾನ್ =ಆಕಾಶ, ಮುಗಿಲು, ಅಧಿಕಪ್ರಸಂಗಿ=ತಲೆಹರಟೆ

ನಮ್ಮ 'ಹೃದಯ'ದ ಇಂಗಿತವನ್ನು ಅರುಹಲು, ರಾಗ ತಾಳ ಮತ್ತು ಲಯಗಳ ಚೌಕಟ್ಟಿನಲ್ಲಿರುವ 'ಸಂಗೀತ' ಮಾಧ್ಯಮವಾಗುತ್ತದೆ. ಲೌಕಿಕದ ತತ್ವಗಳನ್ನು ಹೇಳಲು, ಗದ್ಯ ಅಚ್ಚುಕಟ್ಟಾಗಿರುತ್ತದೆ. ಆದರೆ ಇವೆರಡರ ಮಧ್ಯೆ ಇದ್ದು ಇತ್ತ ಭೂಮಿಯ ಮೇಲೂ ನಿಲ್ಲಲಾಗದೆ ಅತ್ತ ಆಕಾಶಕ್ಕೂ ಏರಲಾಗದೆ ಇರುವ 'ಪದ್ಯ' ರೂಪ ಅಧಿಕಪ್ರಸಂಗಿ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಇಲ್ಲಿ ತಾವು ಮುಕ್ತಕಗಳನ್ನು ಪ್ರಸ್ತುತಪಡಿಸಿದ ಪ್ರಯೋಗವನ್ನು ತಾವೇ ವಿಶ್ಲೇಷಿಸುತ್ತಾ 'ಪದ್ಯ' ರೂಪದಲ್ಲಿರುವ ಈ ಮುಕ್ತಕಗಳನ್ನು ಉಪಯೋಗಿಸಿದ ತಾನು ಅಧಿಕಪ್ರಸಂಗಿ ಎಂದು ಕರೆದುಕೊಳ್ಳುತ್ತಾರೆ. ಅವರನ್ನು ವಿಶ್ಲೇಷಣೆ ಮಾಡುವ ಅಧಿಕಾರ ಅವರಿಗೆ ಮಾತ್ರವಿದೆ, ನಮಗಿಲ್ಲ. ಏಕೆಂದರೆ ಅವರ ಜ್ಞಾನದ ಮುಂದೆ ನಮ್ಮದೆಲ್ಲ ಕಿಂಚಿನ್ಮಾತ್ರ. ಹಾಗಾಗಿ ವಿಶ್ಲೇಷಣೆ ಸಲ್ಲ.

ಒಂದು ಕಡೆ ಹೃದಯಾಂತರಾಳದ ಪ್ರಸ್ತುತಿಗೆ ಸಂಗೀತ ಮತ್ತು ಲೌಕಿಕದ ವಿಷಯಕ್ಕೆ ಗದ್ಯ ಎಂದು ಹೇಳುತ್ತಾರೆ. ಇಲ್ಲಿ ಇವರ ಮುಕ್ತಕಗಳಲ್ಲಿ ಕಾಣುವುದೇನು? ಜಗತ್ತಿನ ಸೃಷ್ಟಿ, ಸೃಷ್ಟಿಕರ್ತ, ಸೃಷ್ಟಿಸಲ್ಪಟ್ಟ ಈ ಜಗತ್ತು ಮತ್ತು ಈ ಜಗತ್ತಿನ ಮೇಲಿರುವ ಸಕಲ ಜೀವರಾಶಿಗಳ ಎಲ್ಲಾ ಆಯಾಮಗಳನ್ನು ಕುರಿತು ಬರೆದ ಈ 'ಮಂಕುತಿಮ್ಮನ ಕಗ್ಗ' ದ ಮುಕ್ತಕಗಳಲ್ಲಿ ತಾತ್ವಿಕ, ಲೌಕಿಕ, ಪಾರಮಾರ್ಥಿಕ, ಹೀಗೆ ಎಲ್ಲಾ ವಿಷಯಗಳನ್ನೂ ತಮ್ಮ ಹೃದಯಾಂತರಾಳದಿಂದ 'ಪದ್ಯ' ರೂಪದಲ್ಲಿ ನಮಗೆ ಇತ್ತು ತಾವೂ ಧನ್ಯರಾಗಿ ನಮಗೂ ಧನ್ಯತೆಯನ್ನು ಪಡೆಯುವ ಹಾದಿಯನ್ನು ತೋರಿದ್ದಾರೆ ಅಲ್ಲವೇ?

ವಾಚಕರೆ, ಈ ಮುಕ್ತಕಗಳು ಯಾವುದೇ ರೂಪದಲ್ಲಿದ್ದರೂ, ಅವುಗಳು ಪ್ರತಿಪಾದಿಸುವ ತತ್ವಗಳನ್ನು ನಾವು ಓದಿ, ಅರ್ಥೈಸಿಕೊಂಡು ಅದರೊಳಗೆ ಅಡಗಿರುವ ತತ್ವ ಮತ್ತು ಸತ್ವವನ್ನು ನಮ್ಮೊಳಕ್ಕೆ ಇಳಿಸಿಕೊಂಡು ನಮ್ಮ ಜೀವನಗಳನ್ನು ಸುಧಾರಿಸಿಕೊಳ್ಳಲು ನಾವು ಪ್ರಯತ್ನಪಟ್ಟರೆ ಅದುವೇ ನಾವು ಮಾನ್ಯ ಗುಂಡಪ್ಪನವರಿಗೆ ತೋರುವ ಗೌರವ, ಅಲ್ಲವೇ?





**ಮುಕ್ತಕ – 938**

**ಕವಿಯಲ್ಲ, ವಿಜ್ಞಾನಿಯಲ್ಲ, ಬರಿ ತಾರಾಡಿ |**

**ಅವನರಿವಿಗೆಟುಕುವವೊಲೊಂದಾತ್ಮನಯನ ||**

**ಹವಣಿಸಿದನದನು ಪಾಮರಜನರ ಮಾತಿನಲಿ |**

**ಕವನ ನೆನಪಿಗೆ ಸುಲಭ - ಮಂಕುತಿಮ್ಮ ||**

ಅವನರಿವಿಗೆಟುಕುವವೊಲೊಂದಾತ್ಮನಯವ= ಅವನ+ಅರಿವಿಗೆ+ಎಟುಕುವ+ಒಲು+ಒಂದು+ಆತ್ಮ+ನಯವ,

ಹವಣಿಸಿದನದನು+ಹವಣಿಸಿದನು+ಅದನು

ತಾರಾಡಿ=ಕೆಲಸವಿಲ್ಲದೆ ಸುಮ್ಮನೆ ಓಡಾಡುವವ, ಹವಣಿಸು=ಹೊಂದಿಸು.

ನಾನು ಕವಿಯಲ್ಲ, ವಿಜ್ಞಾನಿಯೂ ಅಲ್ಲ, ಕೇವಲ ಅಲ್ಲಿಂದಿಲ್ಲಿಗೆ ತಾರಾಡುವವನು. ನನ್ನ ಅರಿವಿಗೆ ಎಟುಕಿದ್ದನ್ನು ಆತ್ಮದೊಂದಿಗೆ ಅನುನಯಿಸಿ ಸಾಮಾನ್ಯ ಜನರ ಮಾತಿನಲ್ಲಿ ಹೊಂದಿಸಿ ಬರೆದಿದ್ದೇನೆ. ಕವನ ನೆನಪಿಗೆ ಸುಲಭವೆಂದು ಇದನ್ನು ಪದ್ಯದ ರೂಪದಲ್ಲಿ ಬರೆದಿದ್ದೇನೆ, ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಹೇರಳವಾದ ಸಾಹಿತ್ಯವನ್ನು ಸೃಷ್ಟಿಸಿ ತಮ್ಮ ಸುತ್ತಲಿನ ಜನರ ಮಾನಸಿಕ ವಿಕಸನಕ್ಕೆ ಮತ್ತು ಉದ್ಧಾರಕ್ಕೆ ಕಾರಣರಾದ ಗುಂಡಪ್ಪನವರು, ಪ್ರಕಾಂಡ ಜ್ಞಾನ ಸಮುದ್ರವೇ ಆದ ಅವರು, 'ನಾನು ಕವಿಯಲ್ಲ, ವಿಜ್ಞಾನಿಯಲ್ಲ ಬರಿಯ ತಾರಾಡಿ' ಎಂದು ಹೇಳಿಕೊಳ್ಳುವುದು ಅವರ ಸರಳತೆ ಮತ್ತು ದೀನತೆಯನ್ನು ತೋರುತ್ತದೆ. ಉನ್ನತವಾದ ಅರಿವನ್ನು ಕೈಗೆ ಎಟುಕಿಸಿಕೊಳ್ಳುವ ಅದ್ಭುತ ಸಾಮರ್ತ್ಯವಿದ್ದ ಗುಂಡಪ್ಪನವರು ಕೇವಲ ವಿಜ್ಞಾನಿಯಲ್ಲ 'ಮಹಾನ್ ಜ್ಞಾನಿ' ಎನ್ನುವುದರಲ್ಲಿ ಸಂದೇಹವೇ ಇಲ್ಲ. ಕನ್ನಡದ ಆಧ್ಯಾತ್ಮ ಸಾಹಿತ್ಯ ಲೋಕದಲ್ಲಿ ಏಕಮೇವಾದ್ವಿತೀಯ'ರಾಗಿ ನಿಲ್ಲುತ್ತಾರೆ ನಮ್ಮ ಗುಂಡಪ್ಪನವರು.

ಮಂಕುತಿಮ್ಮನ ಕಗ್ಗವನ್ನು ಬರೆಯುವಾಗ ನಾನು ಅಲ್ಲಿ ಇಲ್ಲಿ ಓಡಾಡುವಾಗ ಹೆಕ್ಕಿ ಹೊಂದಿಸಿದ ವಿಚಾರಗಳನ್ನು ಆತ್ಮಾನುಸಂಧಾನ ಮಾಡಿಕೊಂಡು ಅವುಗಳನ್ನೆಲ್ಲಾ ಹವಣಿಸಿ ಹೆಣೆದು ಬರೆದಿದ್ದೇನೆ ಎಂದರೂ, ಇಲ್ಲಿರುವ ವಿಚಾರಗಳೆಲ್ಲಾ, ಅವರ ಗ್ರಂಥಾಭ್ಯಾಸ, ಜೀವನಾನುಭವ, ಚಿಂತನ ಮತ್ತು ಮನನಗಳಿಂದ ಅವರ ಅಂತರಂಗದಲ್ಲಿ ಚಿಮ್ಮಿದ ಅಣಿಮುತ್ತುಗಳು. ಕನ್ನಡ ಸಾಹಿತ್ಯದ ದಿಗ್ಗಜರಲ್ಲೊಬ್ಬರಾದ 'ಕುವೆಂಪು', "ವೇದ, ವೇದಾಂತ, ಉಪನಿಷತ್ತು, ಪುರಾಣ' ಗಳನ್ನೂ ಓದದಿದ್ದರೂ ಪರವಾಗಿಲ್ಲ, ಆತ್ಮೋದ್ಧಾರಕ್ಕೆ 'ಮಂಕುತಿಮ್ಮನಕಗ್ಗ' ವನ್ನು ಓದಿದರೆ ಸಾಕು' ಎಂದು ಹೇಳಿದ್ದರಂತೆ.

'ಪದ್ಯ' ಭೂಮಿಯಮೇಲೆ ಭದ್ರವಾಗಿ ನಿಲ್ಲದೆ, ಆಕಾಶಕ್ಕೂ ಏರದೆ ಇರುತ್ತದೆಯಾದರೂ, “ಕವನ ನೆನಪಿಗೆ ಸುಲಭ ಎಂದರೆ ಹತ್ತಾರು ಬಾರಿ ಓದಿಕೊಂಡರೆ ನೆನಪಿನಲ್ಲಿ ಇಟ್ಟುಕೊಳ್ಳುವುದು ಸುಲಭವಾದ್ದರಿಂದ, ಇದನ್ನು ಪದ್ಯದಲ್ಲಿ ಬರೆದಿದ್ದೇನೆ ಎಂದು ಹೇಳುತ್ತಾರೆ. ನೆನಪಿನಲ್ಲಿ ಉಳಿದರೆ, ಅದರ ಚಿಂತನೆ ಮತ್ತು ಮನನವಾಗಿ ಅದರೊಳಗಿನ ಸತ್ವ ಮತ್ತು ತತ್ವವನ್ನು ನಮ್ಮೊಳಗೆ ಇಳಿಯಬಹುದು ಎಂದು, ನಮಗೆ ಉಪಕಾರವನ್ನೇ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು. ಅವರ ಚಿಂತನೆಗಳು ನಮಗೆ ದಾರಿದೀಪವಾಗಬೇಕು ಅಲ್ಲವೇ?

**ಮುಕ್ತಕ – 939**

**ಸಂದೇಹವೀ ಕೃತಿಯೊಳಿನ್ನಿಲ್ಲವೆಂದಲ್ಲ ?**

**ಇಂದು ನಂಬಿಹುದೆ ಮುಂದೆಂದುವೆಂದಲ್ಲ ??**

**ಕುಂದು ತೋರ್ದಂದದನು ತಿದ್ದಿಕೊಳೆ ಮನಸುಂಟು ?**

**ಇಂದಿಗೀ ಮತ ಉಚಿತ ? ಮಂಕುತಿಮ್ಮ ??**

ಸಂದೇಹವೀ ಸಂದೇಹವು+ಈ, ಕೃತಿಯೊಳಿನ್ನಿಲ್ಲವೆಂದಲ್ಲ=ಕೃತಿಯೊಳು +ಇನ್ನು+ಇಲ್ಲವು+ಎಂದಲ್ಲ,

ನಂಬಿಹುದೆ=ನಂಬಿ+ಇಹುದೆ, ಮುಂದೆಂದುಮೆಂದಲ್ಲ=ಮುಂದೆ+ಎಂದುಂ+ಎಂದು+ಅಲ್ಲ,

ತೋರ್ದಂದದನು=ತೋರ್ದ+ಅಂದು+ಅದನು, ಇಂದಿಗೀ=ಇಂದಿಗೆ+ಈ

ಕುಂದು = ತಪ್ಪು, ಕೊರತೆ, ಮತ =ಅಭಿಪ್ರಾಯ

ನಾನು ಬರೆದ ಈ ಕೃತಿಯಲ್ಲಿ ಇನ್ನು ಸಂದೇಹವೇ ಇಲ್ಲ' ಎಂದಲ್ಲ, ಇರಬಹುದು. ಇಂದು ನಾನು ನಂಬಿರುವ ವಿಷಯಗಳೇ ಮುಂದೆಯೂ ಎಂದೆಂದಿಗೂ ಅನ್ವಯ ಎಂದೂ ಅಲ್ಲ. ಯಾರಾದರೂ ನಾ ಬರೆದದ್ದರಲ್ಲಿ ಕೊರತೆ ಅಥವಾ ಕುಂದನ್ನು ತೋರಿದರೆ, ಅದನ್ನು ಒಪ್ಪಿಕೊಂಡು, ನಾನು ನನ್ನನ್ನು ತಿದ್ದಿಕೊಳ್ಳಲು ಸದಾ ಸಿದ್ಧ. ಆದರೆ ಇಂದು. ನಾ ಬರೆದಿರುವುದು ಇಂದಿಗೆ ಉಚಿತವೆನಿಸುತ್ತದೆ ಎಂದು, ಬಹಳ ವಿನಯವಾಗಿ, ವಿಶಾಲ ಮನೋಭಾವದಿಂದ ತಮ್ಮ ಮನದಾಳವನ್ನು ತೆರೆದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಂಕುತಿಮ್ಮನ ಕಗ್ಗದ ಒಟ್ಟು 945 ಮುಕ್ತಕಗಳ ಮಾಲಿಕೆಯಲ್ಲಿ 93ಸಂ ಮುಕ್ತಕಗಳಲ್ಲಿ ಅದ್ಭುತ ಜಗತ್ಸತ್ಯಗಳನ್ನು ಪ್ರತಿಪಾದಿಸಿ ಸರ್ವಕಾಲಕ್ಕೂ ಸೂಕ್ತವೆನಿಸುವಂತೆ ಬರೆದು, ಬಹಳ ವಿನಯದಿಂದ ' ಈ ಕೃತಿಯಲ್ಲಿ ಸಂದೇಹಗಳು ಇಲ್ಲವೇ ಇಲ್ಲ ಎಂದಲ್ಲ ಎಂದು ತಮ್ಮನ್ನು ತಾವು ವಿಮರ್ಶೆಗೆ ಒಡ್ಡಿಕೊಳ್ಳುವ ಮಹಾತ್ಮರೇ ಮಾನ್ಯ ಡಿ.ವಿ. ಗುಂಡಪ್ಪನವರು. ಅವರ ಮುಕ್ತ ಭಾವ ಸಾಮಾನ್ಯವಾಗಿ ಎಲ್ಲರಿಗೂ ಬರುವುದಿಲ್ಲ. ಈ ಕೃತಿಯೊಳಗೆ ಕೊರತೆಗಳು ಅಥವಾ ಕುಂದುಗಳು ಇದ್ದಲ್ಲಿ ತಾನು ತಿದ್ದಿಕೊಳ್ಳಲು ಸಿದ್ಧನಿದ್ದೇನೆ ಎಂದು ಬರೆದು ಅವರು ತಮ್ಮ ಔನ್ನತ್ಯವನ್ನು ಮೆರೆದಿದ್ದಾರೆ.

ಈಗ್ಗೆ 72 ವರ್ಷಗಳ ಹಿಂದೆ ಬರೆದಿದ್ದರೂ ಇಂದಿಗೂ ಮತ್ತು ಎಂದೆಂದಿಗೂ ಪ್ರಸ್ತುತವಾಗಿರುವ ಮುಕ್ತಕಗಳ ಸತ್ವವನ್ನು 'ಇಂದು ನಂಬಿಹುದೆ ಮುಂದೆಂದುವೆಂದಲ್ಲ' ಎಂದು ಹೇಳುತ್ತಾ ಮುಂದೆ ಬರುವ ಚಿಂತಕರನ್ನು ಸ್ವಾಗತಿಸುತ್ತಾರೆ ಗುಂಡಪ್ಪನವರು. ಆದರೆ ಇಂದಿನ ಸಾಹಿತಿಗಳಿಗೆ ಮತ್ತು ಚಿಂತಕರಿಗೆ ಹೋಲಿಸಿಕೊಂಡರೆ ಗುಂದಪ್ಪನರು ಎಷ್ಟು ಉನ್ನತ ಶಿಖರದಲ್ಲಿದ್ದಾರೆ ಎನ್ನುವುದು ಅರ್ಥವಾಗುತ್ತದೆ.

ಹೀಗೆ ತಾವು ಮಾಡಿದ ಕೆಲಸವನ್ನು ತಾವೇ ವಿಮರ್ಶೆ ಮಾಡಿಕೊಳ್ಳುತ್ತಾ, ತನ್ನ ತಪ್ಪಿದ್ದರೆ ತಾನು ತಿದ್ದಿಕೊಳ್ಳಲು ಸಿದ್ಧ ಎಂದು ಹೇಳುತ್ತಾ ವಿನಯ ಸಂಪನ್ನತೆಯ ಉತ್ತುಂಗತೆಯಲ್ಲಿ ನಿಂತಿದ್ದಾರೆ ಮಾನ್ಯ ಗುಂಡಪ್ಪನವರು. ಅವರ ಈ ಭಾವ ನಮಗೆ

ದಾರಿದೀಪವಾಗಬೇಕು. ಅವರ ಹಾದಿಯನ್ನು ತುಳಿಯಬೇಕು ಮತ್ತು ನಾವು ನಮ್ಮ ಅಹಂಕಾರವನ್ನು ತೊರೆಯಬೇಕು. ಅಂತಹ ಉನ್ನತಭಾವದ ಮಾನ್ಯ ಗುಂಡಪ್ಪನವರಿಗೆ ಶಿರಬಾಗಿ ನಮಿಸುತ್ತೇನೆ.





**ಮುಕ್ತಕ – 94ಸಂ**

**ವ್ಯಾಕರಣ ಕಾವ್ಯಲಕ್ಷಣಗಳನ್ನು ಗಣಿಸದೆಯೆ |**
**ಲೋಕತಾಪದಿ ಬೆಂದು ತಣಿಪನೆಳಸಿದನಂ ||**
**ಈ ಕಂತೆಯಲಿ ತನ್ನ ನಂಬಿಕೆಯ ನೆಯ್ದಿಹನು |**
**ಸ್ವೀಕರಿಕೆ ಬೇಳ್ಪವರು - ಮಂಕುತಿಮ್ಮ ||**

ತಣಿಪನೆಳಸಿದವಂ= ತಣಿಪನ್ + ಎಳಸಿದವಂಗಣಿಸದೆಯೆ=ಗಣನೆಗೆ ತೆಗೆದುಕೊಳ್ಳದೆ, ಲೋಕತಾಪದಿ=ಬದುಕಿನ ಬೇಗೆಯಲ್ಲಿ, ತಣಿಪನ್=ತಂಪನ್ನು, ಎಳಸಿದವಂ=ಬಯಸಿದವನು, ಕಂತೆ=ಕಟ್ಟು(ನಾಮಪದ), ನೆಯ್ದಿಹನು=ಹೆಣೆದಿಹನು, ಸ್ವೀಕರಿಕೆ=ಸ್ವೀಕರಿಸಲು, ಬೇಳ್ಪವರು=ಬೇಕಿದ್ದವರು.

ವ್ಯಾಕರಣ ಮತ್ತು ಕಾವ್ಯ ಲಕ್ಷಣಗಳನ್ನಾವುದನ್ನೂ ಪರಿಗಣಿಸದೆ, ಬದುಕಿನ ಬೇಗೆಯಲ್ಲಿ ಬೆಂದು, ನೊಂದು, ಬವಣೆಯಿಂದ ಸಾಂತ್ವನವನ್ನು ಬಯಸಿದವನು, ಅದರಿಂದ ಪಡೆದ ರಸಾನುಭವವನ್ನು ಮತ್ತು ತಾನು ನಂಬಿದ ವಿಚಾರವನ್ನು, ಈ 'ಕಗ್ಗ' ಎಂಬ ಕಂತೆಯಲ್ಲಿ ಹೆಣೆದಿಹನು. ಬೇಕಿದ್ದವರು ಸ್ವೀಕರಿಸಬಹುದು ಎಂದು, ನಿರ್ಲಿಪ್ತತೆಯ ಪರಮಾವಧಿಯನ್ನು ಮೆರೆಯುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತತ್ವ ಮತ್ತು ಸತ್ವಕ್ಕೆ, ತತ್ವ ಮತ್ತು ಸತ್ವವೇ ಆಧಾರ ಮತ್ತು ಅಲಂಕಾರ, ವ್ಯಾಕರಣ, ಕಾವ್ಯ, ಛಂದಸ್ಸು ಮುಂತಾದವುಗಳ ಮೆರಗಿನ ಅವಶ್ಯಕತೆ ತತ್ವ ಪ್ರತಿಪಾದೇಯಕ್ಕೆ ಬೇಕಿಲ್ಲ. ಆದ್ದರಿಂದಲೇ ಮಾನ್ಯ ಗುಂಡಪ್ಪನವರು ಈ 'ಮಂಕುತಿಮ್ಮನ ಕಗ್ಗ' ವನ್ನು ಬರೆಯುವಾಗ ಆ ರೀತಿಯ ಕಾವ್ಯ ಲಕ್ಷಣಗಳ ಮೆರುಗನ್ನು ಗಣಿಸದೆ ಕೇವಲ ತಮ್ಮ ಬದುಕಿನ ಅನುಭವ ಮತ್ತು ಅಂತರಂಗದ ಚಿಂತನೆಯನ್ನು ಮುಕ್ತಕಗಳ ರೂಪದಲ್ಲಿ ಮಂಡಿಸಿದ್ದಾರೆ. ಈ ರೀತಿಯ ತತ್ವವನ್ನು ಸಾರಲು ಅವರಿಗೆ ಜೀವನದ ನೋವು, ಕ್ಲಿಷ್ಟತೆಯ ಅನುಭವ ಮತ್ತು ಆ ಅನುಭವದಿಂದ ಮುಕ್ತರಾಗಿ ಸಾಂತ್ವವನ್ನು ಕಂಡುಕೊಳ್ಳುವ ಆಸ್ಥೆಯೇ ಕಾರಣವಾಯಿತು.

ಆದರೆ ಅವರು ಅವುಗಳನ್ನು ಅನುಭವಿಸುವಾಗ, ಅವುಗಳಿಂದ ದೂರ ನಿಂತು ಸಾಕ್ಷೀಭೂತರಾಗಿ ಅನುಭವಿಸಿದ್ದರಿಂದ, ಅದು ಕೇವಲ ಅವರ ವೈಯಕ್ತಿಕ ಅನುಭವವಾಗದೆ, ಲೋಕಾನುಭಾವವಾಯ್ತು. ಅಂತಹ

ಲೋಕಾನುಭವವನ್ನೇ ನಮ್ಮ ಉದ್ಧಾರಕ್ಕಾಗಿ ಮುಕ್ತಕಗಳ ರೂಪದಲ್ಲಿ ನೀಡಿದ್ದಾರೆ ಮಾನ್ಯ ಗುಂಡಪ್ಪನವರು. ಆದ್ದರಿಂದಲೇ ಈ ಮುಕ್ತಕಗಳಲ್ಲಿ ಒಂದು ಸಾರ್ವಕಾಲಿಕತೆ ಮತ್ತು ಜಗದ್ವೈಶಾಲ್ಯ ಕಾಣಲು ಸಿಗುತ್ತದೆ. ಇದನ್ನೇ ಅವರು "ಈ ಕಂತೆಯಲಿ ತನ್ನ ನಂಬಿಕೆಯ ನೆಯ್ದಿಹನು' ಎಂದಿದ್ದಾರೆ. ತಾನು ಹೇಳಿದ್ದನ್ನು ಎಲ್ಲರೂ ಓದಬೇಕು ಅಥವಾ ಕೇಳಬೇಕು ಎನ್ನುವ ದೌಷ್ಟವಿಲ್ಲದೆ, ಬೇಕಾದವರು ಸ್ವೀಕರಿಸಬಹುದು ಎಂದು ಓದುಗನ ಸ್ವಾತಂತ್ರ್ಯವನ್ನು ಗೌರವಿಸಿದ್ದಾರೆ ಮಾನ್ಯ ಗುಂಡಪ್ಪನವರು. ಇದೊಂದು ಧೀಮಂತ ಮತ್ತು ಉದಾತ್ತ ಭಾವವಲ್ಲವೇ?

ಮಾನ್ಯ ಗುಂಡಪ್ಪನವರ ಈ ಮುಕ್ತಕಗಳನ್ನು ಕೇವಲ ಓದಲು ಭಾಷಾ ಪಾಂಡಿತ್ಯವಿದ್ದರೆ ಸಾಕು. ಆದರೆ ಇದನ್ನು ಅರ್ಥೈಸಿಕೊಂಡು, ನಮ್ಮ ಜೀವನದ ಅನುಭವವನ್ನು ಇಲ್ಲಿ ಪ್ರತಿಪಾದಿಸಿರುವ ತತ್ವದೊಂದಿಗೆ ಸಮನ್ವಯ ಮಾಡಿಕೊಂಡು, ನಮ್ಮ ಬದುಕಿನಲ್ಲಿ 'ಶುದ್ಧ ಆಧ್ಯಾತ್ಮದ ಬೆಳೆಗೆ ಬೀಜಾಂಕುರವಾಗಿಸಿಕೊಳ್ಳಲು, ಒಂದು ವಿಭಿನ್ನವಾದ ಸಂಸ್ಕಾರದ ಅವಶ್ಯಕತೆ ಇದೆ. ತೀವ್ರವಾಗಿ ಲೌಕಿಕದಲ್ಲಿ ಮುಳುಗಿದವರಿಗೆ, ಈ ಮುಕ್ತಕಗಳು ಹೇಳುವ ವಿಚಾರ ಅರ್ಥವಾದರೂ, ತತ್ವ ಒಳಹೊಗುವುದಿಲ್ಲ. ಹಾಗಾಗಿಯೇ ಮಾನ್ಯ ಗುಂಡಪ್ಪನವರು 'ಸ್ವೀಕರಿಕೆ ಬೇಳವರು ಎಂದು ಹೇಳಿ, ಬೇಕಿದ್ದವರು ಇದನ್ನು ಸ್ವೀಕರಿಸಲಿ ಎಂದು ಸೂಚಿಸಿದ್ದಾರೆ. ಸುಮ್ಮನೆ ಓದಿ ಮರೆತುಬಿಡುವುದೋ ಅಥವಾ ಈ ಮುಕ್ತಕಗಳಲ್ಲಿನ ತತ್ವಗಳನ್ನು ಅಂತರಂಗಕ್ಕೆ ಇಳಿಸಿಕೊಂಡು ಉದ್ಧಾರವಾಗುವುದೋ ನಮ್ಮ ನಮ್ಮ ಆಯ್ಕೆಗೆ ಬಿಟ್ಟದ್ದಲ್ಲವೇ?

**ಮುಕ್ತಕ – 941**

**ಮಂಕುತಿಮ್ಮನ ಹೆಸರು ಬಿಂಕಕ್ಕೆ ಸಾಲದೆನೆ |**

**ವೆಂಕನಿಗೂ ಕಂಕನಿಗೊ ಶಂಕರಾರ್ಯನಿಗೋ ||**

**ಅಂಕಿತವ ಮಾತ್ರೆ ಜನರವರೋದಿದರೆ ಸಾಕು |**

**ಶಂಕೆ ನಿನಗೇನಿಹುದೋ - ಮಂಕುತಿಮ್ಮ ||**

ಸಾಲದೆನೆ=ಸಾಲದು+ಎನೆ, ಜನರವರೋದಿದರೆ=ಜನರು+ಅವರು+ಓದಿದರೆ, ನಿನಗೇನಿಹುದೋ=ನಿನಗೆ+ಏನು+ಇಹುದೊ. ವೆಂಕ+ವೆಂಕಟರಮಣ, ಕಂಕ=ಧರ್ಮರಾಯ, ಶಂಕರಾರ್ಯ=ಶಂಕರಾಚಾರ್ಯರು ಶಂಕೆ-ಅನುಮಾನ

ಹೆಸರೊಂದನ್ನಿಡಬೇಕು ಎನ್ನುವ ಬಿಂಕಕ್ಕೆ 'ಮಂಕುತಿಮ್ಮ'ನ ಹೆಸರು ಸಾಲದೇನು? ಅದಕ್ಕೆ ವೆಂಕಟರಮಣ, ಧರ್ಮರಾಯ ಅಥವಾ ಶಂಕರಾಚಾರ್ಯರಂತಹ ಖ್ಯಾತ ಹೆಸರುಗಳನ್ನೇ ಅಂಕಿತವನ್ನಾಗಿ ಇಡಬೇಕೇನು? ಹೆಸರಿಗಿಂತ, ತತ್ವವನ್ನು ಮತ್ತು ಸತ್ವವನ್ನು ಅರಿಯಬೇಕೆಂದು ಜನರು ಓದಿದರೆ ಸಾಕು, ಅದರೊಳಗೆ ನಿನಗೇನೂ ಅನುಮಾನ? ಎಂದು ಹೆಸರಿಗಿಂತ ಬರಹದಲ್ಲಿನ ತಿರುಳು ಮುಖ್ಯ ಎನ್ನುವಂತೆ ಹೇಳುತ್ತಾರೆ ಮಾನ್ಯ ಗುಂಡಪ್ಪನವರು.





ಹೆಸರು ಹೊರಗುರುತಿಗೆ ಮತ್ತು ಕೃತಿಯ ತಿರುಳು ಒಳಗುರುತಿಗೆ, ಇದೇ ಸತ್ಯ. ಹೆಸರೇನೇ ಆದರೂ ಒಬ್ಬ ವ್ಯಕ್ತಿಯನ್ನು ಗುರುತಿಸುವುದು ಅವರು ಮಾಡುವ ಕೆಲಸದಿಂದ ಮತ್ತು ಆ ಕೆಲಸದ ಪ್ರಯೋಜಕತ್ವದಿಂದ, ಹಾಗಾಗಿ ಕೃತಿ ಮುಖ್ಯವೇ ಹೊರತು ಹೆಸರಲ್ಲ ಎನ್ನುತ್ತಾರೆ ಡಿವಿಜಿಯವರು. ಹಾಗೆ ನೋಡಿದರೆ ಬಹಳಷ್ಟು ಜನರಿಗೆ ಇಟ್ಟ ಹೆಸರಿಗೂ ಅವರಿರುವುದಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಉದಾಃ ದುಡ್ಡಿಲ್ಲ ಕಾಸಿಲ್ಲ ಸಂಪತ್ತಯ್ಯಂಗಾರ್, ಲಂಗೊಟಿಗೂ ಗತಿಯಿಲ್ಲ ಪೀತಾಂಬರಯ್ಯ, ಬರೀ ಸುಳ್ಳು ಹೇಳುವವ ಸತ್ಯಮೂರ್ತಿ, ನರಪೇತಲ ಆದರೆ ಹೆಸರು ಭೀಮರಾವ್, ಹೀಗೆ

ಮೊಟ್ಟ ಮೊದಲ ಬಾರಿಗೆ 1943ನೆ ಇಸವಿಯಲ್ಲಿ ಮಂಕುತಿಮ್ಮನ ಕಗ್ಗವನ್ನು ಪ್ರಕಟಿಸಿದಾಗ ಮಾನ್ಯ ಗುಂಡಪ್ಪನವರು ತಮ್ಮನ್ನು ತಾವು ಲೇಖಕರು ಎಂದುಕೊಳ್ಳದೆ 'ಸಂಪಾದಕರು' ಎಂದಿದ್ದರು(ಕೃಪೆ:ಶ್ರೀಕಾಂತ್). ಅಂದರೆ ಎಲ್ಲೆಲ್ಲೋ ಇರುವುದನ್ನು ಹೆಕ್ಕಿ ಸಂಪಾದಿಸಿದವನು ಎನ್ನುವಂತೆ. ಅಂತಹ ಮಹನೀಯರು ಕೃತಿಯಲ್ಲಿನ ವಿಷಯಕ್ಕೆ ಮಹತ್ವವನ್ನು ಕೊಟ್ಟಿದ್ದಾರೆಯೇ ಹೊರತು ಕೃತಿಕರ್ತನ ಹೆಸರಿಗಲ್ಲ. ಮಂಕುತಿಮ್ಮ ಎಂದರೆ ಏನೂ ಅರಿಯದವನು ಎಂದರ್ಥ. ವೇದ ವೇದಾಂತಗಳ, ಉಪನಿಷತ್ತುಗಳ, ಸಾರವನ್ನು ತಾವು ಅನುಭವಿಸಿ ತಮ್ಮ ಅನುಭವದ ಸಾರವನ್ನು ಲೋಕಹಿತಕ್ಕಾಗಿ ಉಣಬಡಿಸಿದ 'ಋಷಿ' ಸಮಾನರಾದ ಮಾನ್ಯ ಗುಂಡಪ್ಪನವರು ತಮ್ಮನ್ನು ತಾವು 'ಮಂಕುತಿಮ್ಮ' ಎಂದು ಕರೆದುಕೊಂಡು ತಮ್ಮ ಸದ್ಭಾವವನ್ನು, ವಿನಯವನ್ನು ಮೆರೆದಿದ್ದಾರೆ. ಅವರಿಗೆ ನಮ್ಮ ನಮನ.

'ಮಂಕುತಿಮ್ಮ' ಎಂದಲ್ಲದೆ ಬೇರೆ ಏನೇ ಹೆಸರಾಗಿದ್ದಿದ್ದರೂ ಈ 945 ಮುಕ್ತಕಗಳ ಸತ್ವದಲ್ಲಿ ಯಾವ ವ್ಯತ್ಯಾಸವೂ ಆಗುತ್ತಿರಲಿಲ್ಲ ಅಲ್ಲವೇ? "ಜನರವರೋದಿದರೆ ಸಾಕು" ಎನ್ನುವ ಉದಾತ್ತ ಭಾವದಿಂದ ನಮ್ಮೆಲ್ಲರ

ಅಂತರಂಗದ ಉದ್ಧಾರಕ್ಕೆ ಈ ಮಂಕುತಿಮ್ಮನ ಕಗ್ಗವನ್ನು ನಮಗೆ ನೀಡಿ ಮಹದುಪಕಾರವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು. ನಾವೂ ಸಹ ಇದರಲ್ಲಿನ ತತ್ವವನ್ನು ಮನಗಂಡು, ಒಳಗಿಳಿಸಿಕೊಂಡು, ತಳುಕ ತೊರೆದು, ಸತ್ವಭರಿತರಾದರೆ ಇದನ್ನು ಓದಿದ್ದಕ್ಕೆ ಒಂದು ಸಾರ್ಥಕತೆ ಅಲ್ಲವೇ?:





**ಮುಕ್ತಕ - 942**

**ಹರಸುವುದದೇನ ನೀಂ? ವರವದೇನೆಂದರಿವೆ? |**

**ಸರಿಯಿಂದು ತೋರುವುದು ನಾಳೆ ಸರಿಯಿಹುದೆ ||**

**ನಿರುಕಿಸುವುದೆಂತು ಚಿರಕಾಲದೊಳ್ಳಿತನಿಂದು? |**

**ಅರಿವ ದೈವವೇ ಹೊರಗೆ – ಮಂಕುತಿಮ್ಮ ||**

ಹರಸುವುದದೇನ=ಹರಸುವುದು+ಅದು+ಏನ, ವರವದೇನೆಂದರಿವೆ=ವರವು+ಅದು+ಏನೆಂದು+ಅರಿವೇ,
ನಿರುಕಿಸುವುದೆಂತು=ನಿರುಕಿಸುವುದು+ಎಂತು, ಚಿರಕಾಲದೊಳ್ಳಿತನಿಂದು=ಚಿರಕಾಲದ+ಒಳ್ಳಿತನು+ಇಂದು
ವರವು=ಉತ್ತಮವಾದದ್ದು, ನಿರುಕಿಸುವುದು=ನಿರೀಕ್ಷಿಸುವುದು, ಚಿರಕಾಲದ=ಧೀರ್ಘಕಾಲದ,
ಹೊರಗೆ=ಕಾಪಾಡಲು.

ಮತ್ತೊಬ್ಬರನ್ನು ಹರಸುವುದಾಗಲೀ ಅಥವಾ ತನಗಾಗಿ ಏನನ್ನಾದರೂ ಬೇಡುವುದಾಗಲೀ ಮಾಡಲು ನೀನು ಅದನ್ನು ಸರಿಯಾಗಿ ಅರಿತಿದ್ದೀಯೇನು? ಏಕೆಂದರೆ ಇಂದು ಸರಿಯೆನ್ನಿಸುವುದು, ಸದಾಕಾಲ ಸರಿಯಿರುತ್ತದೆ ಎಂದು ನಿನಗೆ ಗೊತ್ತಿದೆಯೇ? ಅಥವಾ ಏನನ್ನಾದರೂ ಬೇಡುವಾಗ ನಿನಗೆ ಸೂಕ್ತವಾದದ್ದನ್ನೇ ಬೇಡುತ್ತಿದ್ದೇನೆಂದು ನಿನಗೆ ಗೊತ್ತಿದೆಯೇ? ಹಾಗಿರಬೇಕಾದರೆ ಧೀರ್ಘ ಕಾಲದ ಹಿತವನ್ನು ಇಂದು ಬಯಸುವುದು ಹೇಗೆ? ಆ ದೈವವೇ ಎಲ್ಲವನ್ನೂ ಅರಿತು ಹೊರೆಯುವುದುಂಟು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಯಾರೋ ಮತ್ತೊಬ್ಬರಿಗೆ 'ಲಾಟರಿ'ಯಲ್ಲಿ ಹಣ ಬರಲಿ ಎಂದು ಹರಸಿಬಿಡುತ್ತಾರೆ. ಹಣ ಬರುತ್ತದೆ ಮತ್ತು ಬಂದ ಮೇಲೆ ಅವರು ಪಡುವ ಪಾಡು, ಅವಸ್ಥೆ ಆ ದೇವರಿಗೇ ಪ್ರೀತಿ. ಹರಸುವುದೇನೋ ಒಳ್ಳೆಯದೇ ಆದರೂ, ಯಾವ ಹಾರೈಕೆ ಒಳ್ಳೆಯದು ಎಂದು ನಮಗೆ ಗೊತ್ತಿರುವುದಿಲ್ಲವಲ್ಲ. ದೇವರಲ್ಲಿ ನಾವು ಏನನ್ನಾದರೂ ಬೇಡುತ್ತೇವೆ. ಹಾಗೆ ಬೇಡುವಾಗ ನಾವು ಬೇಡುವುದು ನಮಗೆ ಒಳಿತೋ ಅಲ್ಲವೋ ಎನ್ನುವ ಪರಿವೆಯೇ ಇಲ್ಲದೆ ಬೇಡುತ್ತೇವೆ ಅಲ್ಲವೇ? ಏಕೆಂದರೆ ನಮಗೇನು ಒಳಿತು ಅಥವಾ ನಮಗೇನು ಕೆಡುಕು ಎಂದು ನಮಗೆ ಗೊತ್ತಿರುವುದೇ ಇಲ್ಲ ಮತ್ತು ಇಂದು ಬೇಡಿ ಪಡೆದದ್ದು ನಾಳೆಗೆ ನಮಗೆ ದುಃಖಕ್ಕೆ ಕಾರಣವಾಗಬಹುದು. ಇಂತಹ ಅನುಭವಗಳು ಪ್ರತಿಯೊಬ್ಬರ ಜೀವನದಲ್ಲೂ, ಒಂದೇ ರೀತಿಯದ್ದಲ್ಲದಿದ್ದರೂ ಆಗಿಯೇ ಇರುತ್ತವೆ. ಒಂದು ಬಾರಿ ನಿಂತಿರುಗಿ ನೋಡಿಕೊಳ್ಳಬೇಕು ಅಷ್ಟೆ.

ವಸ್ತು ಸ್ಥಿತಿ ಹೀಗಿರಬೇಕಾದರೆ ನಾವು, ಅನ್ಯರಿಗೆ ಧೀರ್ಗಕಾಲದ ಒಳಿತನ್ನು ಹರಸುವುದೋ ಅಥವಾ ನಮಗಾಗಿ ಅಂತಹ ಒಳಿತನ್ನು ಬೇಡುವುದೋ ಸಾಧ್ಯವಿಲ್ಲ ಅಲ್ಲವೇ? ಸ್ಥೂಲವಾಗಿ ಇದು ಒಳಿತು ಮತ್ತು ಇದು ಕೆಡುಕು ಎಂದು ಅರಿವಿದ್ದರೂ ಸೂಕ್ಷ್ಮದಲ್ಲಿ ಅದು ಯಾವ ರೀತಿ ನಮ್ಮ ಜೀವನಗಳಲ್ಲಿ ಕೆಲಸಮಾಡುತ್ತದೆ ಎಂದು ನಮಗೆ ಗೊತ್ತಿರುವುದಿಲ್ಲ. ಹಾಗಾಗಿ ಏನು ಮಾಡಬೇಕು ಎಂದರೆ, ಇಂದು ನಾವು ಮಾಡುವ ಕೆಲಸವನ್ನು





ನಿರ್ವಂಚನೆಯಿಂದ ಸಮರ್ಪಕವಾಗಿ ಮಾಡಬೇಕು, ಅದರಿಂದ ಏನನ್ನೂ ಬಯಸದೆ ಬಂದದ್ದನ್ನು ಪರಮಾತ್ಮನ ಪ್ರಸಾದವೆಂದು ಅರಿತು ಅನುಭವಿಸಬೇಕು.

'ಅರಿವ ದೈವವೇ ಹೊರಗೆ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಆ ದೈವ ಎನ್ನುವುದು ತಾಯಿಯಂತೆ. ತಾಯಿಗೆ ತನ್ನ ಮಗುವಿಗೆ ಯಾವುದು ಒಳಿತು, ಯಾವುದು ಒಳಿತಲ್ಲ ಎಂಬ ಅರಿವಿರುತ್ತದೆ. ಮಗು ಬೇಡಿದರೂ ಬೇಡದಿದ್ದರೂ ಆ ಮಗುವಿಗೆ ಏನು ಒಳಿತೋ ಅದನ್ನೇ ಕೊಡುತ್ತಾಳೆ ಆ ತಾಯಿ. ಹಾಗೆಯೇ ದೈವದ ಬಳಿ ನಾವು ಏನನ್ನೂ ಬೇಡದಿದ್ದರೂ ನಮಗೆ ಒಳಿತಾವುದೆಂದು 'ಅರಿವ ದೈವವೇ' ಅರಿತು ಸೂಕ್ತ ಸಮಯಕ್ಕೆ, ಸೂಕ್ತ ವಸ್ತುವನ್ನು ನಮಗೆ ಕೊಟ್ಟು 'ಹೊರಗೆ' ಎಂದರೆ ಪೊರೆಯುತ್ತದೆ ಎಂದು ಭಾವಿಸಬೇಕು. ಹಾಗಾಗಿ ಹರಸುವುದನ್ನು ಮತ್ತು

ಬಯಸುವುದನ್ನು ಬಿಟ್ಟು ಬಂದದ್ದನ್ನು ಆನಂದವಾಗಿ, ಪೊರೆಯುವವನ ಪ್ರಸಾದವೆಂದು ಬಗೆದು ತೃಪ್ತರಾಗಿರುವುದೇ ಲೇಸು ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 943**

**ಬೇಡಿದದನೀವನೀಶ್ವರನೆಂಬ ನಚ್ಚಿಲ್ಲ।**
**ಬೇಡಲೊಳಿತಾವುದೆಂಬುದರರಿವುಮಿಲ್ಲ ॥**
**ಕೂಡಿಬಂದುದನೆ ನೀನ್ ಅವನಿಚ್ಛೆಯೆಂದು ಕೊಳೆ।**
**ನೀಡುಗೆದೆಗಟ್ಟಿಯನು ಮಂಕುತಿಮ್ಮ॥**

ಬೇಡಿದದನೀವನೀಶ್ವರನೆಂಬ=ಬೇಡಿದುದನು+ಈವನು+ಈಶ್ವರನು+ಎಂಬ,
ಬೇಡಲೊಳಿತಾವುದೆಂಬುದರರಿವುಮಿಲ್ಲ=ಬೇಡಲು+ಒಳಿತು+ಆವುದು+ಎಂಬುದರ+ಅರಿವುಂ+ಇಲ್ಲ,
ಅವನಿಚ್ಛೆಯೆಂದುಕೊಳೆ =ಅವನ+ಇಚ್ಛೆ+ಎಂದು+ಕೊಳೆ ನಚ್ಚಿಲ್ಲ=ನಂಬಿಕೆಯಿಲ್ಲ. ಅವನಿಚ್ಛೆ=ಪರಮಾತ್ಮನಿಚ್ಚೆ,

ನೀನು ಆ ಪರಮಾತ್ಮನಲ್ಲಿ ಬೇಡಿದುದನ್ನೆಲ್ಲಾ ನಿನಗವನು ಕೊಡುವನು ಎಂದು ನಂಬಿಕೆಯಿಲ್ಲ. ಅಷ್ಟೇ ಅಲ್ಲ ಅವನಲ್ಲಿ ಏನನ್ನು ಬೇಡಬೇಕು ಮತ್ತು ಏನನ್ನು ಬೇಡಬಾರದು ಎಂಬುದರ ಪ್ರಜ್ಞೆಯೂ ನಿನಗಿಲ್ಲ. ಹಾಗಿರುವಾಗ ಆಯಾ ಸಮಯಕ್ಕೆ ಸಿಕ್ಕದ್ದನ್ನು ಆ ಪರಮಾತ್ಮನೇ ಇತ್ತದ್ದೆಂದು ಅರಿತು, ನಂಬಿ ಹಾಗೆ ಬಂದದ್ದನ್ನು ಅನುಭವಿಸಲು ನಿನ್ನ ಎದೆಯನ್ನು ಗಟ್ಟಿಯಾಗಿಸಿಕೋ ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತಿನ ಬದುಕಿನಲ್ಲಿ ಆಸೆಗಳ ಬುಗ್ಗೆಗಳು ನಮ್ಮ ಮನಸ್ಸುಗಳಲ್ಲಿ ಸದಾಕಾಲ ಏಳುತ್ತಲೇ ಇರುತ್ತವೆ. ನಮ್ಮ ಪ್ರಯತ್ನ ಮೀರಿದಾಗ ಆ ದೇವರಲ್ಲಿ ನಮ್ಮ ಪ್ರಾರ್ಥನೆ ಸಲ್ಲುತ್ತಿರುತ್ತದೆ. ಹಾಗೆ ನಾವು ಪ್ರಾರ್ಥಿಸಿದ್ದೆಲ್ಲಾ ನಮಗೆ ದಕ್ಕುವುದಿಲ್ಲವಾದ್ದರಿಂದ, ಆ ದೇವರು ನಮ್ಮ ಎಲ್ಲಾ ಪ್ರಾರ್ಥನೆಗಳನ್ನೂ ಮನ್ನಿಸಲಿಲ್ಲವೆಂದೇ ಅರ್ಥವಲ್ಲವೆ?

ಇನ್ನು ನಮ್ಮ 'ಬೇಕು'ಗಳು ನಮಗೆ ಒಳಿತನ್ನು ಮಾಡುತ್ತವೆಯೋ ಅಥವಾ ಕೆಡುಕನ್ನೇ ಮಾಡುತ್ತವೆಯೋ ಎಂಬ ಪರಿವೆ ನಮಗಿರುವುದಿಲ್ಲ. ಒಟ್ಟಾರೆ ಬಯಸುತ್ತಿರುತ್ತೇವೆ. ಹಾಗೆ ಬಯಸಿ, ಅದನ್ನು ಪಡೆಯಲು ನಾವು ಪ್ರಯತ್ನಿಸಿ, ಪಡೆದುಕೊಂಡದ್ದು ನಮಗೆ ಒಳಿತನ್ನೇ ಮಾಡುತ್ತದೆ ಎಂಬ ಅರಿವೂ ನಮಗಿಲ್ಲ. ಬಹಳಷ್ಟು ಬಾರಿ ನಾವು ಬಯಸಿ ಪಡೆದದ್ದರಿಂದ ತಾತ್ಕಾಲಿಕ ಸುಖವನ್ನು ಪಡೆದು ಧೀರ್ಘಕಾಲದ ಸಂಕಷ್ಟಗಳಲ್ಲಿ ಸಿಲುಕಿಕೊಳ್ಳುತ್ತೇವೆ, ಅಲ್ಲವೇ? ಇದು ಬಹುಶಃ ಎಲ್ಲರ ಅನುಭವವೂ ಹೌದು.

ಹಾಗಾಗಿ ಜೀವನದಲ್ಲಿ, ಏನನ್ನೂ ಬಯಸದೆ, ನಮ್ಮ ಕೃಷಿಯನ್ನು ಸಾಗಿಸುತ್ತಾ, ಅದರಿಂದ ಏನೇ ಸಿಕ್ಕರೂ ಅದು ನಮಗೆ ಆ ಪರಮಾತ್ಮನಿತ್ತ ಪ್ರಸಾದ ಎಂದು ಭಾವಿಸಿ, ನಮ್ಮ ಬಯಕೆಗಳಿಗೆ ನಾವು ಅಂಟಿಕೊಳ್ಳದೆ, ಒಂದು ನಿರ್ಲಿಪ್ತತೆ ಬೆಳೆಸಿಕೊಂಡರೆ ಆಗ ಮಾನ್ಯ ಗುಂಡಪ್ಪನವರು ನೀಡುಗೆದೆಗಟ್ಟಿಯನು' ಎಂದು ಹೇಳುವಂತೆ ಧೈರ್ಯದಿಂದ, ಭಯವಿಲ್ಲದೆ ಗಟ್ಟಿಯಾಗಿ ಬದುಕಬಹುದು. ಅಂತಹ ಸ್ಥಿತಿಯಲ್ಲಿ ದುಃಖವಿರುವುದಿಲ್ಲ, ಸಂತಾಪವಿರುವುದಿಲ್ಲ, ವಿಹ್ವಲತೆ ಇರುವುದಿಲ್ಲ. ನಾವೂ ಸಹ ಅಂತಹ ಜೀವನವನ್ನು ರೂಪಿಸಿಕೊಂಡರೆ ಅದೊಂದು ಸಾರ್ಥಕ ಬದುಕಾಗುತ್ತದೆ.

**ಮುಕ್ತಕ – 944**

**ತಮ್ಮೆಲ್ಲ ಹಸಿವುಗಳ ತಣಿಯಿಪನಿತನ್ಯೋನ್ಯ ।**
**ಹೊಮ್ಮುಗೌದಾರ್ಯ ಜನಜನಪದಂಗಳಲಿ ॥**
**ಬೊಮ್ಮನೆಲ್ಲರನಾಳ್ವನಿಹನೆನುವ ನೆನಪಿನಲಿ ।**
**ನೆಮ್ಮದಿಯ ಪಡೆಗೆ ಜಗ – ಮಂಕುತಿಮ್ಮ ॥**

ತಣಿಯಿಪನಿತನ್ಯೋನ್ಯ=ತಣಿಯಿಪ+ಅನಿತ+ಅನ್ಯೋನ್ಯ, ಹೊಮ್ಮುಗೌದಾರ್ಯ=ಹೊಮ್ಮುಗೆ+ಔದಾರ್ಯ, ಜನಜನಪದಂಗಳಲಿ=ಜನ+ಜನಪದಂಗಳಲಿಬೊಮ್ಮನೆಲ್ಲರನಾಳ್ವನಿಹನೆನುವ=ಬೊಮ್ಮನು+ಎಲ್ಲರನು+ಆಳ್ವ+ಇಹನು+ಎನುವ, ತಣಿಯಿಪ=ತಣಿಸುವ, ಬೊಮ್ಮನು=ಪರಬ್ರಹ್ಮನು,

ಜಗತ್ತಿನ ಜನರೆಲ್ಲರ ಬಯಕೆಗಳನ್ನು ಈಡೇರಿಸಲು ಇರುವ ಜಗದ್ವಸ್ತುಗಳನ್ನು ಜಗತ್ತಿನ ಜನರೆಲ್ಲರೂ ಸೌಹಾರ್ಧತೆಯಿಂದ, ಔದಾರ್ಯದಿಂದ ಮತ್ತು ಅನ್ಯೋನ್ಯತೆಯಿಂದ ಹಂಚಿಕೊಂಡು ಬಾಳಲಿ, ಎಲ್ಲರನ್ನೂ ಕಾಯುವ

ಪರಬ್ರಹ್ಮನೊಬ್ಬನಿರುವನು ಎಂದು ದೃಢವಾಗಿ ನಂಬಿ, ನೆಮ್ಮದಿಯನ್ನು ಈ ಜಗತ್ತು ಪಡೆಯಲಿ ಎಂದು ತುಂಬು ಹೃದಯದ ಆಶಯವನ್ನು ವ್ಯಕ್ತಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"There is sufficient in this world for everyone's need and not for greed" ಹಾಗಾಗಿ ಈ ಜಗತ್ತಿನಲ್ಲಿರುವ ಎಲ್ಲ ಸಂಪನ್ಮೂಲಗಳನ್ನೂ ಎಲ್ಲರೂ ಸಮನಾಗಿ ಹಂಚಿಕೊಂಡು ಅನ್ಯೋನ್ಯತೆಯಿಂದ ಬಾಳಿದರೆ ಜಗತ್ತು ಬಾಳಲು ಒಂದು ಸುಂದರ ತಾಣವಾಗುತ್ತದೆ ಎಂಬುವುದು ಮಾನ್ಯ ಗುಂಡಪ್ಪನವರ ಅಂದಿನ ಆಶಯ.





ಅಂದೂ ಜಗತ್ತಿನ ಪರಿಸ್ಥಿತಿ ಹಾಗಿರಲಿಲ್ಲ. ಇಂದು ಇನ್ನಷ್ಟು ಹದಗೆಟ್ಟಿದೆ. ಕೇವಲ ಸ್ವಾರ್ಥದಿಂದ ಕೂಡಿದ ಮನೋಭಾವದ ಜನರೇ ಅಧಿಕವಾಗಿದ್ದಾರೆ. 'ಹಂಚಿಕೊಂಡು ಬಾಳಲರಿಯದ ಜನ ವಂಚನೆಯ ಮಾಡುತಿಹರು ಎನ್ನುವುದು ಕವಿ ವಾಣಿ.

ಮನುಷ್ಯನೂ ಸಹ ಪರಮಾತ್ಮನ ಸೃಷ್ಟಿಯಲ್ಲಿ ಅನ್ಯ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ಗಿಡ, ಮರಗಳಂತೆ ಅಲ್ಲವೇ? ಆದರೆ ಇವನು ಸೃಷ್ಟಿಯಲ್ಲಿ ಅಧಿಕ ಯೋಚನಾ ಶಕ್ತಿಯನ್ನು ಹೊಂದಿದ್ದಾನೆ ಹಾಗಾಗಿ ಇವನು ಸೃಷ್ಟಿಯ ಎಲ್ಲವನ್ನೂ ಆ ಪರಮಾತ್ಮ ತನಗಾಗಿ ಸೃಷ್ಟಿಸಿದ್ದಾನೆ ಎನ್ನುವಂತಹ ದುರ್ಬುದ್ಧಿಯನ್ನು ಹೊಂದಿದ್ದಾನೆ. ಇದರಿಂದಲೇ ಇವನಿಗೆ ಎಲ್ಲವೂ ತನ್ನದು, ತನಗಾಗಿ ಮತ್ತು ತನಗಾಗಿಯೇ ಸೃಷ್ಟಿಸಲ್ಪಟ್ಟಿದೆ ಎನ್ನುವ ದುರಾಸೆ ಮತ್ತು ದುರ್ಬುದ್ಧಿ, ಈ ರೀತಿಯ ಭಾವ ನಮಗೆ ಕಂಡಲ್ಲೆಡೆಯೆಲ್ಲಾ ಕಾಣಸಿಗುತ್ತದೆ. "ಸರ್ವೇ ಸುಖಿನಃ ಸಂತು, ಸರ್ವೇ ಸಂತು ನಿರಾಮಯಾಃ ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿತ್ ದುಃಖಮಾಗ್ಭವೇತ್" ಎನ್ನುವುದು ವೇದೋಕ್ತಿ ಎಷ್ಟು ಸುಂದರ ನುಡಿಗಳು, ಅದನ್ನು ಪಾಲಿಸಿದರೆ ಜಗತ್ತಿನಲ್ಲಿರುವವರೆಲ್ಲರೂ ಆನಂದದಿಂದ ಇರಬಹುದು.

ಅಂತಹ ಆಶಯವನ್ನೇ ವ್ಯಕ್ತಪಡಿಸುತ್ತಾ ಮಾನ್ಯ ಗುಂಡಪ್ಪನವರು ಜಗತ್ತಿನ ಜನರೆಲ್ಲರೂ ಸದ್ಭಾವದಿಂದ ಬಾಳಲಿ ಎಂದು ಆಶಿಸುತ್ತಾ, ಹಾಗೆ ಬದುಕಿದರೆ ಇಡೀ ಜಗತ್ತೇ ನೆಮ್ಮದಿಯನ್ನು ಪಡೆಯುತ್ತದೆ ಎಂದಿದ್ದಾರೆ. ನಾವೂ ನಮ್ಮ ನಡೆ ಮತ್ತು ನುಡಿಗಳಲ್ಲಿ ಅಂತಹ ಸದ್ಭಾವವನ್ನು ಬೆಳೆಸಿಕೊಂಡರೆ ಈ ಜಗತ್ತನ್ನು ಸುಂದರವಾಗಿಸಲು ಮತ್ತು ಆನಂದದಾಯಕವಾಗಿಸಲು ನಮ್ಮ ಕಿರುಕಾಣಿಕೆಯನ್ನು ಸಲ್ಲಿಸುತ್ತಾ ಒಂದು ಸಾರ್ಥಕ ಜೀವನ ಮಾಡಿದಂತಾಗುತ್ತದೆ ಅಲ್ಲವೇ? ಪ್ರಯತ್ನಪಟ್ಟರೆ ಸಾಧ್ಯ.

**ಮುಕ್ತಕ – 945**

**ಶರಣುವೊಗು ಜೀವನರಹಸ್ಯದಲ್ಲಿ ಸತ್ವದಲಿ ।**

**ಶರಣು ಜೀವನದ ಸುಮವೆನಿ ಯತ್ನದಲಿ ॥**

**ಶರಣಂತರಾತ್ಮಗಂಭೀರ ಪ್ರಶಾಂತಿಯಲಿ ।**

**ಶರಣು ವಿಶ್ವಾತ್ಮದಲಿ - ಮಂಕುತಿಮ್ಮ ॥**

ಸುಮವೆನಿಪ =ಸುಮವು+ಎನಿಪ, ಶರಣಂತರಾತ್ಮಗಂಭೀರ ಪ್ರಶಾಂತಿಯಲಿ=ಶರಣು+ಅಂತರಾತ್ಮ+ಗಂಭೀರ+ಪ್ರಶಾಂತಿಯಲಿ, ವಿಶ್ವಾತ್ಮದಲಿ=ವಿಶ್ವ+ಆತ್ಮದಲ್ಲಿ ಶರಣುವೊಗು=ಶರಣಾಗು, ಸುಮವೆನಿಪ=ಹೂವಂತೆನಿಸುವ,

ಜೀವನದ ಸತ್ವದ ರಹಸ್ಯಕ್ಕೆ ನೀನು ಶರಣಾಗು. ಈ ಜೀವನವನ್ನು ಹೂವಂತೆ ಸುಂದರವಾಗಿಸುವ ಪ್ರಯತ್ನಕ್ಕೆ ಶರಣಾಗು. ಅಂತರಂಗದ ಪ್ರಶಾಂತತೆಯಲ್ಲಿ ಗಂಭೀರವಾಗಿ ಪರತತ್ವಕ್ಕೆ ಶರಣಾಗು. ಜಗತ್ತಿನಲ್ಲಿರುವ ವಿಶ್ವಾತ್ಮಭಾವಕ್ಕೆ ಶರಣಾಗು ಎಂದು ನಾವು ನಮ್ಮ ನಮ್ಮ ಜೀವನಗಳಲ್ಲಿ ಅಂತಿಮವಾಗಿ ಸಾಧಿಸಿಬೇಕಾದ ಸ್ಥಿತಿಯನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

'ನಾನು' ಎಂಬುದನ್ನು ಬಿಟ್ಟು ನಾವು ಆ ರಹಸ್ಯವಾದ, ಆದರೂ ಇಡೀ ಜಗತ್ತಿನ ಮೇಲೆ ಪ್ರಭಾವ ಬೀರುತ್ತಿರುವ ಆ ಪರಮಸತ್ವಕ್ಕೆ ಶರಣಾಗಬೇಕು. ಇದನ್ನೇ ಮಾನ್ಯ ಗುಂಡಪ್ಪನವರು 'ಭಾವಕೊಳಪಡದಂತೆ ಅಳತೆಗಳವಡದಂತೆ, ಆ ವಿಚಿತ್ರಕೆ ನಮಿಸೋ'(ಮುಕ್ತಕ -2) ಎನ್ನುತ್ತಾರೆ. ನಾವು ಜಗತ್ತಿನ ಎಲ್ಲಾ ಅನುಭವಗಳನ್ನೂ ಪಡೆದು ನಂತರ ಅವುಗಳನ್ನು ತೊರೆದು ಅಂತರಂಗದಲ್ಲಿ ಸಂಪೂರ್ಣವಾಗಿ ಈ ಪರತತ್ವಕ್ಕೆ ಶರಣಾಗಬೇಕು.

ಜೀವನವ 'ಸುಮವೆನಿಪ ಯತ್ನದಲಿ' ಎಂದಿದ್ದಾರೆ ಡಿವಿಜಿ. ಎಂದರೆ ಬದುಕಿನ ಅನುಭವಗಳನ್ನು ಹಗುರವಾಗಿ ತೆಗೆದುಕೊಂಡು ಹೇಗೆ ನಾವು ಹೂವಿನ ಸುಗಂಧವನ್ನು ಮಾತ್ರ ಹೀರುತ್ತೇವೋ ಹಾಗೆಯೇ ಜೀವನದ ಅನುಭವದ ಸಾರವನ್ನು ಮಾತ್ರ ತೆಗೆದುಕೊಂಡು, ಬದುಕನ್ನು ಜಗತ್ತಿಗೆ ಸುಗಂಧ, ಸುಫಲ ಮತ್ತು ಸುರುಚಿಯನ್ನು ನೀಡುವ ಹೂವಿನಂತಾಗಿಸುವ ನಮ್ಮ ಪ್ರಯತ್ನದಲ್ಲಿ ನಾವು ಶರಣಾಗತರಾದಂತೆ ತೊಡಗಿಕೊಳ್ಳಬೇಕು ಎನ್ನುವ ಆಶಯ ಹೊತ್ತಿರಬೇಕು. ಇದೇ ಭಾವವನ್ನೇ ಮಾನ್ಯ ಡಿವಿಜಿಯವರು 'ಸುಫಲ ಸುಮಭರಿತ ಪಾದಪದಂತೆ ನೈಜಮಾದೊಳ್' ಎನ್ನುತ್ತಾರೆ ತಮ್ಮ ' ವನಸುಮ' ದಲ್ಲಿ.

ಇಂತಹ ಭಾವಗಳನ್ನು ಮನದಲ್ಲಿ ತುಂಬಿಕೊಂಡಾಗ, ಖಂಡಿತವಾಗಿಯೂ ಅಲ್ಲೊಂದು ಮೌನ ಮತ್ತು ಪ್ರಶಾಂತತೆ ತುಂಬಿಕೊಳ್ಳುತ್ತದೆ ಮತ್ತು ಪರತತ್ವವನ್ನೇ ಅನುಸಂಧಾನಮಾಡುವಂತಹ ಭೂಮಿಕೆ ನಮ್ಮ ಮನಸ್ಸುಗಳಲ್ಲಿ ಸಿದ್ಧವಾಗುತ್ತದೆ. ಆಗ ಜಗತ್ತಿನ ಎಲ್ಲ ಬೇಧಗಳೂ ಅಳಿಸಿಹೋಗಿ ವಿಶ್ವಾತ್ಮಭಾವ ನೆಲೆಯಾಗುತ್ತದೆ. ಅಂತಹ "ನಿರ್ಮಲವಾದ ಸ್ಥಿತಿಗೆ ನೀನು ಶರಣಾಗಿ ಅಲ್ಲಿ ನೀನು ನೆಲೆನಿಲ್ಲು" ಎನ್ನುವಂತಹ ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು.

ಬದುಕಿನ ಎಲ್ಲ ಅನುಭವಗಳ ನಂತರ ಅವುಗಳ ಪ್ರಭಾವವೆಲ್ಲಾ ನಮ್ಮಲ್ಲಿ ಅಳಿಸಿಹೋಗಿ ಅಂತಹ 'ವಿಶ್ವಾತ್ಮಭಾವ' ಕ್ಕೆ ಶರಣಾಗಿ ಅಲ್ಲಿ ನಾವು ಭದ್ರವಾಗಿ ನೆಲೆನಿಲ್ಲುವಂತಾದರೆ, ಅದಕ್ಕಿಂತ ಬೇರೆ ಭಾಗ್ಯ ಬೇಕೇ? ಅಂತಹ ಸ್ಥಿತಿಯಲ್ಲಿ ನೆಲೆನಿಲ್ಲುವ ಪ್ರಯತ್ನವನ್ನು ನಾವೆಲ್ಲಾ ಮಾಡಬೇಕು.

## ಪದ್ಯಾರಂಭ ಆಕಾರಾಣ


ಅಕ್ಕಿಯೊಳಗನ್ನವನು 655 (ಸಂ-3)

ಅಗೆದು ಗೊಬ್ಬರವಿಕ್ಕಿ 478 (ಸಂ-3)

ಅಜ್ಞಾತವಾದುದನು 107 (ಸಂ-1)

ಅಡಿಜಾರಿ ಬೀಳುವುದು 345 (ಸಂ-2)

ಅಣಗಿದ್ದು ಬೇಸಿಗೆಯೊಳ್ 744 (ಸಂ-4)

ಆರ್ಣವನ ಕಣ್ಣಿಂದೆ 688 (ಸಂ-3)

ಅಣುಭೂತ ಭೂಗೋಲ 84 (ಸಂ-1)

ಅಣುಸಂಖ್ಯೆಯೆಣಿಸುವವನು 113 (ಸಂ-1)

ಅತ್ಯಂತದುತ್ಕಟದ 687 (ಸಂ-3)

ಅತಿಶಯದದೃಷ್ಟ 381 (ಸಂ-2)

ಅರ್ಥವುಂಟನುಭವಕ್ಕೆ 518 (ಸಂ-3)

ಅದರಿಂದ ನೀತಿನಯ 407 (ಸಂ-2)

ಅದು ಒಳಿತು ಇದು ಕೆಟ್ಟದು 365 (ಸಂ-2)

ಅದು ಬೇಕು ಇದು ಬೇಕು 224 (ಸಂ-2)

ಅನ್ನದಾತುರಕ್ಕಿಂತ 652 (ಸಂ-3)

ಅನ್ನವುಣುವಂದುನ 748 (ಸಂ-4)

ಅನಿಲಗುಣಭೂಗುಣಗಳಿಂ 337 (ಸಂ-2)

ಅನುಬಂಧಜೀವಜೀವಕೆ 168 (ಸಂ-1)

ಅನುಭವದ ಪರಿ ನೂರ್ವರಿಗೆ 516 (ಸಂ-3)

ಅನುಭವದ ಪಾಲೊಳು 544 (ಸಂ-3)

ಅನುರಾಗದುಃಖಂಗಳೊಮ್ಮೊಮ್ಮೆ 422 (ಸಂ-2)

ಅಪರಮಿತವೇನಲ್ಲ 675 (ಸಂ-3)

ಅಪ್ಪಾಲೆ ತಿಪ್ಪಾಲೆ 303 (ಸಂ-2)

ಅಮೃತಕಣವಂ ಮರ್ತ್ಯ 190 (ಸಂ-1)

ಅರಸಡವಿಗೈದಿದೊಡಂ 706 (ಸಂ-1)

ಅಶ್ವತ್ಥವಿಲ್ಲಿ ಬಾಡಿದೊಡೇನು 886 (ಸಂ-4)

ಅಷ್ಟದಿಗ್ಗಜವೆ ನೀನು 583 (ಸಂ-3)

ಅಸಮದಲ್ಲಿ ಸಮತೆಯನು 241 (ಸಂ-2)

ಅಹುದು ಬಾಳ್ ಭಂಡತನ 587 (ಸಂ-3)

ಅಳಬೇಕು ನಗಬೇಕು 812 (ಸಂ - 2)

ಅಳುವೇನು? ನಗುವೇನು? 433 (ಸಂ-2)

ಅಳೆವರಾರ್ ಪೆಣ್ಗಂಡುಗಳ 414 (ಸಂ-4)

ಆಗಸದ ಬಾಗು 217 (ಸಂ-2)

ಆಗುಂಬೆಯಸ್ತಮಯ 57 (ಸಂ-1)

ಆಟಕ್ಕೆ ಫಲವೇನು 330 (ಸಂ-2)

ಆಟವೋ ಮಾಟವೋ 261 (ಸಂ-2)

ಆತುಮದಸಂಸ್ಥಿತಿಗೆ 866 (ಸಂ-4)

ಆತುರತೆಯಿರದ 822 (ಸಂ-4)

ಆತುರತೆಯೇನಿರದು 363 (ಸಂ-2)

ಆದಿದಿವಸವದಾವುದು 86 (ಸಂ-1)

ಆನೆಗಾ ಇರುವೆಗಾ 278 (ಸಂ-2)

ಆರ ಕೈತುತ್ತಿಗಂ 930 (ಸಂ-4)

ಆರಣ್ಯಕದಪುಷ್ಪಗಳ 566 (ಸಂ-3)

ಆರಲೆನ್ನಯ ಹೃದಯ 920 (ಸಂ-4)

ಆರಿಗಾವುದು ತಕ್ಕುದು 871 (ಸಂ-4)

ಆರೋಗ್ಯಭಾಗ್ಯವನು ಮನಕೆ 816 (ಸಂ-4)

ಆವ ಋಣಕೋಸುಗವೊ 512 (ಸಂ-3)

ಆವ ಕಡೆ ಹಾರುವುದೊ 732 (ಸಂ-4)

ಆವಗಾಳಿಯದಾವ ಧೂಳ್ಕಣವ 839 (ಸಂ-4)

ಆವ ಜನ್ಮದ ಋಣವೊ 335 (ಸಂ-1)

ಅರಸೊಬ್ಬನಲ್ಲ 149 (ಸಂ-1)
ಅರಿ ಮಿತ್ರ ಸತಿ ಪುತ್ರ 172 (ಸಂ-1)
ಅರುಣೋದಯ ಪ್ರಭೆಯ 495 (ಸ-3)
ಅರೆಗಣ್ಣ ನಮದೆಂದು 47 (ಸಂ-1)
ಅರೆಗಳಿಗೆಯನುಭವವೆ 221 (ಸಂ-2)
ಅರೆದಿನದ ನಮ್ಮ ಯತ್ನದಿ 868 (ಸಂ-4)
ಅರೆಯರೆಯೆ ನಮಗೆ 219 (ಸಂ-2)
ಅವತರಿಸಿಹನು ಬೊಮ್ಮ 37 (ಸಂ-1)
ಅವರೆಷ್ಟು ಧನವಂತ 747 (ಸಂ-4)
ಅವಿಧಿತಾಖಂಡ ಸತ್ವದಪಾರ 100 (ಸಂ-1)
ಆವ ಜೀವದ ಪಾಕ 609 (ಸಂ-3)
ಆವ ನೆಲದಲಿ ಮೇದೊ 842(ಸಂ-4)
ಆವ ಬೇಳೆಯದಾವ ನೀರಿನಲಿ 160 (ಸಂ-1)
ಆ ವಿಶ್ವರೂಪಸಂದರ್ಶನದಿ 322 (ಸಂ-2)
ಆವುದರಿನಾವಾಗ ದೈವ 513 (ಸಂ-3)
ಅವುದಿರುವಿಕೆಗಾದಿ 90 (ಸಂ-1)
ಆವುದೊ ಒಳಿತೆಂದು 222 (ಸಂ-2)
ಆಶೆಗಳ ಕೆಣಕದಿರು 792 (ಸಂ-4)
ಆಶೆ ಬಲೆಯನು ಬೀಸಿ 356 (ಸಂ-2)
ಆಶೆ ಮಂಥರೆ 542 (ಸಂ-3)


## ಪದ್ಯಾರಂಭದ ಅಕಾರಾಣ


ಆಹ! ಈ ಮೋಹಗಳೊ 42 (ಸಂ-1)
ಆಳನೀಳಗಳ ಕಾಣಲ್ಕಾಗಿಸದೆ 289 (ಸಂ-2)
ಆಳವನು ನೋಡಿ 558 (ಸಸಂ-3)
ಇದು ನಡೆಯಲಿಲ್ಲ. 358 (ಸಸಂ-2)
ಇನ್ನೇನು ಮತ್ತೇನುಗತಿ 360 (ಸಸಂ-2)
ಇರಬಹುದು; ಚಿರಕಾಲ ಬೊಮ್ಮ 35 (ಸಂ-1)
ಇರಲಿ ಜೀವರಹಸ್ಯ 46 (ಸಂ-1)
ಇರುವ ಕೆಲಸವ ಮಾಡು 601 (ಸಂ-3)
ಇರುವನ್ನಮೀ ಬಾಳು ದಿಟ 398 (ಸಂ-2)
ಇರುವುದರೊಳಾದಿನಿತು 862 (ಸಸಂ-4)
ಇಲ್ಲಿ ಚೆನ್ನಲ್ಲಿ ಚೆನ್ನು 301 (ಸಂ-2)
ಇಹುದಕಿಂತೊಳಿತಿಹುದು 215 (ಸಂ-2)
ಇಹುದೊ ಇಲ್ಲವೊ 3 (ಸಂ-1)
ಇಳಿಯುವೆನು ಮುಳುಗುವೆನು 921 (ಸಂ-4)
ಋಣವ ತೀರಿಸಬೇಕು 628 (ಸಂ-3)
ಋತುಚಕ್ರ ತಿರುಗುವುದು 140 (ಸಂ-1)
ಎಡರುತೊಡರೆನಲೇಕೆ 729(ಸಂ-4)
ಯಡವದೆಯೆ ಮೈಗಾಯ 698 (ಸಂ-3)
ಎಣಿಕೆಯೊಳಿತಾದೊಡೆಯು 823 (ಸಂ-4)
ಎತ್ತಣಿನೊ ದೃಕ್ಷರಿಧಿಯಾಚೆಯಿಂ 92 (ಸಂ-1)
ಎತ್ತೆತ್ತ ನೋಡಲುಂ 837 (ಸಂ-4)
ಎತ್ತಲೋ ಕಾಡುಮಬ್ಬಿನ ಬಳ್ಳಿ 564 (ಸಂ-3)
ಎದೆ ಮಾರುವೋಗದೊಡೆ 436 (ಸಂ-2)
ಎದ್ದೆದ್ದು ಬೀಳುತಿಹೆ 658 (ಸಂ-3)
ಎನಗೆ ಸುಖವಿಲ್ಲವದರಿಂ 514 (ಸಂ-3)
ಎನ್ನ ಬೇಡಿಕೆ ನಷ್ಟವಹುದೆಂತು 515 (ಸಂ-3)
ಎನಿತು ನೀಂ ಗೆಲಿದೆಯೆಂದೆನರು 595 (ಸಂ-3)
ಎನಿತೆನಿತ್ತು ವಿಕಾರ ಪರಿಣಾಮ 393 (ಸಂ-2)

ಇಳೆಯಬಿಟ್ಟೆನ್ನುಮೆತ್ತಲು 16  (ಸಂ-1)
ಇಳೆಯಿಂದ ಮೊಳಕೆ 661 (ಸಂ-3)
ಇಂಗಿತಜ್ಞಾನವಿಲ್ಲದ ಬಂಧು 176 (ಸಂ-1)
ಇಂತು ಹೊರಗೊಳಗುಗಳು 441 (ಸಂ-2)
ಇಂದ್ರಿಯಗಳೊಳು ಬಾಳಿ 912 (ಸಂ-4)
ಇಂದ್ರಿಯವ ಜಯಿಸಿದೆಯೊ 382 (ಸಂ-2)
ಇಂದ್ರಿಯಾತೀತವನು 693 (ಸಂ-3)
ಇಂದು ಮದುವೆಯ ಹಬ್ಬ 171 (ಸಂ-1)
ಇಂದೆದ್ದತೆರೆ ನಾಳೆ 231  (ಸಂ-2)
ಈ ಜಗದ ಗಂಧ ಪರಿಪರಿ 374  (ಸಂ-2)
ಈ ವಿಶ್ವದಲ್ಲಿ ನೋಡಲ್ 72  (ಸಂ-1)
ಉಣುವುದುಡುವುದು 170 (ಸಂ-1)
ಉತ್ತಮತೆಯಿಂತೆಂದು 697 (ಸಂ-3)
ಉದರಶಿಖಿಯೊಂದುಕಡೆ 605 (ಸಂ-3)
ಉದರದೈವಕೆ ಜಗದೊಳ್ 377 (ಸಂ-2)
ಉಪ್ಪಿಷ್ಟು ಹುಳಿಯಿಷ್ಟು 294  (ಸಂ-2)
ಉರಿಯಾರಿ ಮಳೆಗೆರೆಯ 865 (ಸಂ-4)
ಉರಿಯುತಿರೆ ಹೊಟ್ಟಕಿಚ್ಚು 2ಸ01  (ಸಂ-2)
ಉಸಿರವೊಲನುಕ್ಷಣಂ 226  (ಸಂ-2)
ಉಂಡಾತನುಣುತಿರುವರನು 68ಸಂ  (ಸಂ-3)
ಋಣದ ಜಾಲವನಂತ 182 (ಸಂ-1)
ಋಣದ ಮೂಟೆಯ ಹೊರಿಸಿ 169  (ಸಂ-1)
ಎರಡು ಕೋಣೆಗಳ ನೀಂ 701 (ಸಂ-4)
ಎರಡು ತೆರ ಮೌಲ್ಯಂಗಳೆಲ್ಲಕಂ 663 (ಸಂ-3)
ಎರಡು ಮಿರಬಹುದು ದಿಟ 29  (ಸಂ-1)
ಎಲ್ಲ ಅರೆಬೆಳಕು 68 (ಸಂ-1)
ಎಲ್ಲಕಂ ನಿನಗಿಲ್ಲ 584 (ಸಂ-3)
ಎಲ್ಲ ನಾಶನವೆಲ್ಲ ಕಾಲವಶ 742 (ಸಂ-4)
ಎಲ್ಲ ಬರಿ ಗೊಣಗಾಟ 686 (ಸಂ-4)
ಎಲ್ಲರಿಗವಾಗಿ ತಾನ್ 270 (ಸಂ-2)
ಎಲ್ಲರಿಗಮೀಗ ನಮ್ಮೊ 922 (ಸಂ-4)
ಎಲ್ಲರೊಳು ತಾನು 803 (ಸಂ-4)
ಎಲ್ಲರುಂ ಜಿತಮನಸ್ಕರೆ 276 (ಸಂ-2)
ಎಲ್ಲಿಯದನೋ 415 (ಸಂ-2)
ಎಲ್ಲಿಯೋ ವಿಧಿಯ ಗೂಢದ 361 (ಸಂ-2)
ಎಲೆಕಟ್ಟನಾಗಾಗ 328 (ಸಂ-2)
ಎಲೆಗಳನು ಕಡ್ಡಿ ಕಡ್ಡಿಯ ರೆಂಬೆ 562 (ಸಂ-3)
ಎಲ್ಲೆಲ್ಲಿಯುಂ ಮೋಹ 36 (ಸಂ-1)
ಎಷ್ಟು ಚಿಂತಿಸಿದೊಡಂ 34  (ಸಂ-1)
ಎಷ್ಟು ನೀನುಂಡರೇಂ 677 (ಸಂ-3)
ಎಷ್ಟು ಬಗೆ ಯಂತ್ರಗಳೊಳ್ 325 (ಸಂ-2)
ಎಳಸಿನಡಿ ಗಿಡದ ಬಿಗಿ 536 (ಸಂ-3)
ಎಳೆಯ ತರು ದಿನದಿನವು 419  (ಸಂ-2)
ಎಂದಿಗಾನುಂ ನಿನ್ನ 737 (ಸಂ-4)

## ಪದ್ಯಾರಂಭದ ಅಕಾರಾದ


ಎಂದೊ ನಿನಗೊಂದು ದಿನ 659 (ಸಂ-3)
ಏಕೆದಿಂದಲನೇಕ 134 (ಸಂ-1)
ಏಕವಾಗವೆ ದೈವಚಿತ್ತ 369 (ಸಂ-2)
ಏನಾನುಮಂ ಮಾಡು 79ಸಂ (ಸಂ-4)
ಏನಾದೊಡೆಯುಮಪ್ಪುದುಂಟು 784 (ಸಂ-4)
ಏನಾದೊಡೇನು? ನೀನೆಲ್ಲಿ 353 (ಸಂ-1)
ಏನು ಜೀವನದರ್ಥ? 4 (ಸಂ-1)
ಏನು ಪ್ರಪಂಚವಿದು 10 (ಸಂ-2)
ಏನು ಭೈರವಲೀಲೆ? 9 (ಸಂ-4)
ಏನೆ ನಿಜವಿರಲಿ 324 (ಸಂ-4)
ಏನೇನು ಹಾರಾಟ 821 (ಸಂ-4)
ಏನೊ ಕಣ್ಣನು ಪಿಡಿವುದು 731 (ಸಂ-4)
ಏಸು ಸಲ ತಪವಗೈದು 699 (ಸಂ-3)
ಏಳಿಸುವುದೊಂದು 439 (ಸಂ-2)
ಐಕ್ಯ ನಾನಾತ್ವಗಳು 242 (ಸಂ-2)
ಒಗಟೆಯೇನೀ ಸೃಷ್ಟಿ 6 (ಸಂ-1)
ಒಟ್ಟಿನಲಿ ತತ್ತ್ವವಿದು 311 (ಸಂ-2)
ಒಡರಿಸುವನೆಲ್ಲವನ್ 708 (ಸಂ-4)
ಒಡೆಯದಿರು ತಳಹದಿಯ 878 (ಸಂ.4)
ಒಡೆಯನಾವೆಡೆ ಸಾರನೆಂದು 223 (ಸಂ.2)
ಒಡೆಯನೆಂದೋ ಬಂದು 707 (ಸಂ.4)
ಒಣಗಿ ಬೇಸಗೆಯಿಂದ 207 (ಸಂ.2)
ಒಬ್ಬನುಣುವೂಟದಲಿ 430 (ಸಂ.2)
ಒಮ್ಮನಸಿನಿಂದ ನೀನೀ 849 (ಸಂ.4)
ಒಂದು ಜನ್ಮದ ಲೆಕ್ಕ 312 (ಸಂ-2)
ಒಂದು ದಿನದೌತಣಕ್ಕೆ 769 (ಸಂ-4)
ಒಂದೆ ಗಗನವ ಕಾಣುತೆ 14 (ಸಂ-1)
ಓರೊಧ್ವನಿಚ್ಛೆಗುಣ 334 (ಸಂ-2)
ಓಲೆಕಾರನಿಗೇಕೆ ಬರೆದ 727 (ಸಂ-1)
ಔದಾರ್ಯ ತಾಯಿ ನೀತಿಗೆ 758 (ಸಂ-2)
ಅಂತರಂಗದ ಗವಾಕ್ಷಗಳ 557 (ಸಂ-3)
ಅಂತರಂಗವನೆಲ್ಲ ಬಿಚ್ಚಿ 194 (ಸಂ-2)
ಅಂತವೆಲ್ಲಕುಮಿರುವುದಿರಲಿ 786 (ಸಂ-4)
ಅಂತಾನುಮಿಂತಾನಮೆಂತೊ 376 (ಸಂ-2)
ಅಂತೂ ಇಂತೋ ಎಂತೋ 685 (ಸಂ-3)
ಅಂದಂದಿಗಾದನಿತು 253 (ಸಂ-2)
ಅಂದಿಗಂದಿನ ಕೆಲಸ 782 (ಸಂ-2)
ಅಂಬುಧಿಯ ಮಡಕೆಯಲಿ 491 (ಸಂ-4)
ಕಕ್ಷಿಗಾರನವೊಲೇ ಪೋರುತ್ತೆ 575 (ಸಂ.3)
ಕಟ್ಟಡದ ಪರಿಯನಿಟ್ಟಿಗೆ 532 (ಸಂ. 3)
ಕಡಲ ಕಡೆದರು ಸುರಾಸುರರು 259 (ಸಂ. 2)
ಕದಲ್ಗಳೊಂದಾದೊಡಂ 725 (ಸಂ.4)
ಕಡಿದೊಡೆ ಪರೀಕ್ಷೆಗುಳಿವುವು 819 (ಸಂ. 4)
ಕಡೆಗಾಲವನ್ನು ತಾನೆ 928 (ಸಂ. 4)
ಕಣ್ಣಿರದೆ ರವಿಯೇನು 489 (ಸಂ. 3)
ಕಣ್ಣೆರಡದೇಕೆರಡುಂ 234 (ಸಂ.2)
ಕಣ್ಣೆರದು ನೋಡು 851 (ಸಂ.4)
ಕತ್ತಲೆಯೊಳೇನನೋ ಕಂಡು 484 (ಸಂ.2)

ಒಮ್ಮೆ ಹೂದೋಟದಲಿ 754 (ಸಂ.4)
ಒತ್ವ ನಾನೆಂದು ನೀನೆಂತು 338 (ಸಂ.2)
ಒತ್ವನೇ ನಿಲುವೆ ನೀನ್ 689 (ಸಂ.3)
ಒಲ್ಲೆನೆನದಿರು ಬಾಳನ್ 258 (ಸಂ.2)
ಒಲ್ಲೆನೆನುವರದಾ 244 (ಸಂ.2)
ಒಳಿತೆಂದು ಸೊಗಸೆಂದು 126 (ಸಂ.1)
ಒಳ್ಳೆ ಲೆಕ್ಕಿಗನಲ್ಲ ಪರಮೇಷ್ಟಿ 313 (ಸಂ.2)
ಒಂದಗಳು ಹೆಚ್ಚಿರದು 673 (ಸಂ.3)
ಒಂದಿಹುದುಪಾಯ 48 (ಸಂ-1)
ಒಂದು ಕಡೆ ಚಿಗುರುತಲಿ 561 (ಸಂ-3)
ಒಂದು ಕಣ್ಣಳುವಂದು 262 (ಸಂ-2)
ಒಂದು ಕೊಂಬೆಯು ಬಾಡಲ್ 252 (ಸಂ-2)
ಕದಗಳಿಯನು ಬಿಗಿದು 41 (ಸಂ. 1)
ಕನಲ್ದ ಹುಲಿ ಕೆರಳ್ದ ಹರಿ 197 (ಸಂ. 1)
ಕನಸು ದಿಟ, ನೆನಸು ದಿಟ 394 (ಸಂ. 2)
ಕಮಲವುದಯದೊಳರಳಿ 91 (ಸಂ. 1)
ಕರ್ಮಋಣಶೇಷಂಗಳ್ 314 (ಸಂ. 2)
ಕರವೆರಡದೃಷ್ಟಕ್ಕೆ 158 (ಸಂ. 1)
ಕರುಮ ಬಂದಿರಬಹುದು 179 (ಸಂ. 1)
ಕಲ್ಮಶದ ವಲ್ಮೀಕವೆಂದೊಡಲ 396(ಸಂ.2)
ಕಲ್ಲಾಗಿ ನಿಲ್ಲುವನು 205 (ಸಂ.2)
ಕಲೆಗಳಲಿ ಪರಮಕಲೆ 825 (3ಸಂ. 4)
ಕವಿ, ಚಿತ್ರಕೋವಿದನು 472 (ಸಂ.3)
ಕವಿಯಲ್ಲ ವಿಜ್ಞಾನಿಯಲ್ಲ 938 (ಸಂ. 4)

## ಪದ್ಯಾರಂಭದ ಅಕಾರಾಣ

ಕಷ್ಟಜೀವದಪಾಕ 933 (ಸಂ.4)
ಕಳವಳವ ನೀಗಿಬಿಡು 828 (ಸಂ.4)
ಕ್ರಮದ ನಭವಿಕೃತಿ 115 (ಸಂ.1)
ಕ್ರಮವೊಂದು ಲಕ್ಷ್ಯವೊಂದು 8 (ಸಂ. 1)
ಕ್ಷಣದಿಂದನುಕ್ಷಣಕೆ 767 (ಸಂ. 4)
ಕ್ಷಣವದೊಂದೆ ಅನಂತಕಾಲ 445 (ಸಂ. 2)
ಕ್ಷಣವೊಂದರೊಳೆ ಪೂರ್ತಿ 181 (ಸಂ. 1)
ಕ್ಷಮೆ ದೋಷಿಗಳಲಿ 715 (ಸಂ . 4)
ಕಾಕತಾಳೀಯ ಕಥೆ 305 (ಸಂ.2)
ಕಾಗೆಯುಂ ಕೋಗಿಲೆಯುಂ 775 (ಸಂ. 4)
ಕಾಡುಹಕ್ಕಿ ಹುಳಕ್ಕೆ 565 (ಸಂ-3)
ಕೆಟ್ಟ ಪ್ರಪಂಚವಿದು 625 (ಸಂ-3)
ಕೆಂಡಮುಸುಡಿಯ ದೈವ 586 (ಸಂ-3)
ಕೇಳಿಯುಂ ಮಾಯೆಯದು 94 (ಸಂ-1)
ಕ್ಲೇಶ ನೂರಾಗಿರೆಯು 480 (ಸಂ-3)
ಕೈಕಯಿಯವೊಲು ಮಾತೆ 608 (ಸಂ-3)
ಕೈಕೇಯಿ ಸತ್ಯಭಾಮೆಯರಂಶ 418 (ಸಂ-2)
ಕೊಲೆಗಡಿಕನೆನಿಪ ಹುಲಿ 245 (ಸಂ-2)
ಕೊಳಕೆಂದು ಹುಳುಕೆಂದು 820 (ಸಂ-4)
ಕೊಳದ ಜಲ ನಿನ್ನ ಮನ 829 (ಸಂ-4)
ಕೊಳದಿ ನೀಂ ಮೀವಂದು 431 (ಸಂ-2)
ಕೋಟಿದೆಸೆಯುಸಿರುಗಳು 273 (ಸಂ-2)

ಕಾಯಕವ ಚರಿಪುದು 713 (ಸಂ-4)
ಕಾಯಕವ ಚರಿಸುತ್ತ 736 (ಸಂ-4)
ಕಾಯಕಿಂತಾತ್ಮ ಪಿರಿದು 883 (ಸಂ-4)
ಕಾಯನಿರ್ಣೇಯವದರೊಳು 102 (ಸಂ-1)
ಕಾಯ ಮಾತ್ರದುದಲ್ಲ 399 (ಸಂ-2)
ಕಾಯವನು ಮೃದ್ಭಾಂಡ 389 (ಸಂ-2)
ಕಾರಿರುಳೊಳಾಗಸದಿ ತಾರೆ 424 (ಸಂ-2)
ಕಾರುಣ್ಯ ಸರಸ ಸೌಂದರ್ಯ 28 (ಸಂ-1)
ಕಾಲನದಿಯಲಿ ನಮ್ಮ 362 (ಸಂ-2)
ಕಾಲವಕ್ಷಯ ದೀಪ 1ಸಂ4 (ಸಂ-1)
ಕಾಷಾಯವೇಂ ತಪಸು 612 (ಸಂ-3)
ಕಾಳನುದಯದಿ ಬಿತ್ತೆ 781 (ಸಂ-4)
ಕಾಂಕ್ಷೆಗಳ ಬೋಧಿಸುವ 175 (ಸಂ-1)
ಕಿಡಿ ಸಣ್ಣದನು ಮೇಲೆಬಿದ್ದ 577 (ಸಂ-3)
ಕಿವುಡುತನ ತಪ್ಪಿತೆ 632 (ಸಂ-3)
ಕ್ಷಿತಿಚಕ್ರ ರವಿಚಕ್ರ 162 (30-1)
ಕ್ಷಿತಿರುಹಕ್ಕೆ ಸುಮಫಲ 569 (ಸಂ-3)
ಕ್ಷೀರಾನ್ನದಿಂದ ನರಪುಷ್ಟಿ 341 (ಸಂ-2)
ಕುದಿ ಹೆಚ್ಚೆ ವಗಟಹುದು 378 (ಸಂ-2)
ಕುರುಡನಿನಚಂದ್ರರನು 55 (ಸಂ-1)
ಕುಸುಮ ಕೋಮಲಗಾತ್ರ 416 (ಸಂ-2)
ಕುಸುಮಸಖನೇಂ ನೀನು 626 (ಸಂ-3)
ಕ್ಷುತ್ತುಮಮತೆಗಳು ಜೀವಕೆ 610 (ಸಂ-3)
ಕುಂದದೆಂದಿಗುಮೆನ್ನಿಸುವ ' 785 (ಸಂ-4)
ಕೃತ್ರಿಮವೊ ಜಗವೆಲ್ಲ 22 (ಸಂ-1)
ಕೋಡುಗಲ್ಲನು ಹತ್ತಿ 801 (ಸಂ-4)
ಕಂಡ ದೈವಕ್ಕೆಲ್ಲ 20 (ಸಂ-1)
ಖದ್ಯೋತನಂತೆ ಬಿಡುಗೊಳದೆ 662 (ಸಂ-3)
ಗಗನ ತಲೆನವಿರಾಗ 86 (ಸಂ-1)
ಗಗನ ನೀಲಿಮೆಯೆನ್ನ ಕಣ್ಗೆ 52 (ಸಂ-1)
ಗಗನ ಬಿಸಿಗವಸಾಗಿ 504 (ಸಂ-3)
ಗಣನೆಗೆಟುಕದ ಗುಣಗಳ 467 (ಸಂ-3)
ಗತಿಯೇನು ಎನಗೆನುತ 768 (ಸಂ-4)
ಗರಡಿಸಾಮಿಂದೆ ನೀನ್ 596 (ಸಂ-3)
ಗರುವಭಂಗವಾಗಿಸಿದನು 660 (ಸಂ-3)
ಗರ್ವಪಡದುಪಕಾರಿ 806 (ಸಂ-4)
ಗ್ರಹಗತಿಯ ತಿದ್ದುವನೆ 366 (ಸಂ-2)
ಗಾರೆಗಚ್ಚೇನಲ್ಲ 298 (ಸಂ-2)
ಗಾಳಿಮಣ್ಣುಂಡೆಯೊಳಹೊಕ್ಕು 19 (ಸಂ-1)
ಗಾಳಿಯನು ಗುದ್ದಿದರೆ 483 (ಸಂ-3)
ಗಿಡದಿ ನಗುತಿರುವ ಹೂ 300 (ಸಂ-2)
ಗಿರಿಯ ಮೇಲಕೆ ದೊಡ್ಡ 304 (ಸಂ-2)
ಗ್ರೀಸಿನಾಕಬ್ಬಗಳನೋದುವರು 60 (ಸಂ-1)
ಗುಡಿಯ ಪೂಜೆಯೋ ಕಥೆಯೊ 832 (ಸಂ-4)
ಗುಡಿಸಿಲೇನೊಣಹುಲ್ಲು 872 (ಸಂ-4)
ಗುಣಿಗುಣಿಸಿ ತಿಣಕುತ್ತ 355 (ಸಂ-2)
ಗುದ್ದಲಿಯಿನಾದೀತೆ 635 (ಸಂ-3)
ಗುರಿಯನ್ನೈದದೊಡೊಮ್ಮೆ 824 (ಸಂ-4)
ಗುಹೆಯಡಕೆ ಗುಹೆ ಬಲಕೆ 482 (ಸಂ-3)
ಗೃಹದಿ ರಾಷ್ಟ್ರದ ಸಮಾಜದಿ 623 (ಸಂ-3)

ಪದ್ಯಾರಂಭದ ಅಕಾರಾದ


ಗೋಳಾಡಲುಂ ಬೇಡ 264 (ಸಂ-2)

ಗೌರವಿಸು ಜೀವನವ 475 (ಸಂ-3)

ಘನತತ್ತ್ವವೊಂದಕ್ಕೆ 766 (2ಸಂ-4)

ಘೋರವನು ಮೋಹವನು 799 (ಸಂ-4)

ಚಲನೆ ವಿಶ್ವಾಸ್ತರಣೆ 88 (2ಸಂ-1)

ಚಾರು ದೃಶ್ಯಂಗಳಿಂ 457 (ಸಂ-3)

ಚಿತ್ತದನುಭವ ಭಾವ 64 (ಸಂ-1)

ಚಿರಶಿಕ್ಷೆಯಿಂ ನಿನಗೆ 808 (ಸಂ-4)

ಚಿಂತೆ ಸಂತಾಪಗಳು 645 (ಸಂ-3)

ಚೀಟಿಯಾಟದ ಬಿನದಿ 80 (ಸಂ-1)

ಚೂರುಗಳು ಹದಿನಾರು 553 (ಸಂ-3)

ಚೆಲುವು ನಗುವುಗಳ 722 (ಸಂ-4)

ಚೌಕಟ್ಟನಂತನದರೊಳು 106 (ಸಂ-1)

ಜಗದಕಲ್ಯಾಣದೊಳಗಾತ್ಮ 807 (ಸಂ-4)

ಜಗದ ಬಂದೀಗೃಹದಿ 460 (ಸಂ-3)

ಜಗದ ಸೊಗದರಸಿಕೆಯ ಫಲ 864 (ಸಂ-4)

ಜಗದ ಸಂತಾಪ ಸಂತಸ 618 (ಸಂ-3)

ಜಗದೀ ಜಗತ್ತ್ವವನು 899 (ಸಂ-4)

ಜಗ ಬೆಳೆದು ಚಿಗುರುತಿರೆ 525 (ಸಂ-3)

ಜಗವೆನ್ನ ಮುದ್ದಿಸದು 649 (ಸಂ-3)

ಜಟ್ಟಿ ಕಾಳಗದಿ ಗೆಲ್ಲದೊಡೆ 588 (ಸಂ-3)

ಜಡವೆಂಬುದೇನು ಸೃಷ್ಟಿಯಲ್ಲಿ 111 (ಸಂ-1)

ಜಡವೇನು? ಜೀವವೇಂ? 108 (ಸಂ-1)

ಜನಕಜೆಯ ದರುಶನದಿ 382 (ಸಂ-2)

ಜನ್ಮ ಸಾವಿರ ಬರಲಿ 916 (ಸಂ-4)

ಜೀವ ಜಡರೂಪ 2 (ಸಂ-1)

ಜೀವದುದಯ ರಹಸ್ಯ 919 (ಸಂ-4)

ಜೀವನದ ಪರಿಪೂರ್ಣ 321 (ಸಂ-2)

ಜೀವನದ ಮೂಲ 560 (ಸಂ-3)

ಜೀವನವದೊಂದು ಕಲೆ 740 (ಸಂ-4)

ಜೀವನವದೊಂದು ಪರಮೈಶ್ವರ್ಯ 250 (ಸಂ-2)

ಜೀವನ ವ್ಯಾಪಾರ 820 (ಸಂ-4)

ಜೀವನೋದ್ಯಮವೆಲ್ಲ 476 (ಸಂ-3)

ಜೀವಸತ್ತ್ವದಪಾರ 503 (ಸಂ-3)

ಜೀವಿ ಬೇಡದಿರೆ ದೈವವನು 488 (ಸಂ-3)

ಜೀವಿಸಂಘವಿದೇನು? 327 (ಸಂ-2)

ಜ್ಞೇಯದ ದ್ವೀಪಕ 103 (ಸಂ-1)

ಜೋಳಿಗೆಯ ಪಿಡಿದು 925 (ಸಂ-4)

ಟಗರೆರಡ ಬೆಳೆಸಿ 162 (ಸಂ-1)

ತಕ್ಕಡಿಯ ದೈವ ಪಿಡಿದು 508 (ಸಂ-3)

ತಡಕಾಟ ಬದುಕೆಲ್ಲ 186(ಸಂ-1)

ತತ್ತ್ವಸಾಕ್ಷಾತ್ಕಾರ 906 (ಸಂ-4)

ತನಗಿಂತ ಹಿರಿದ 486 (3ಸಂ-3)

ತನಗೆ ಬಾರದ ಲಾಭ 738 (ಸಂ-4)

ತನ್ನ ಬೆವರಿನ ಕೊಳದಿ 538(ಸಂ-3)

ತನ್ನ ಮನದಾಟಗಳ ತಾನೆ 739 (ಸಂ-4)

ತನ್ನಯ ಮನೋರಥಂಗಳ 88ಸಂ (ಸಂ-4)

ತನ್ನ ರುಚಿ ರಾಮರುಚಿ 765 (ಸಂ-4)

ತನ್ನ ಶಕ್ತಿಯನಳೆದು 576 (ಸಂ-3)

ತನ್ನ ಶಿಲುಬೆಯ ತಾನೆ 718 (ಸಂ-4)

ಜನಿಸಿದುದು ಮೃತಿಯನ್ 122 (ಸಂ-1)
ಜನಿಸಿದೆಡೆಯಿಂ ಕಡಲವರೆಗಂ 412 (ಸಂ-2)
ಜಲಧಿತೀರದಿ ನಿಂತು 99 (ಸಂ-1)
ಜವನ ನಿಂದುಮುದೇಕೆ 402 (ಸಂ-2)
ಜ್ವರಬಂದು ತನುಬೆಂದ 788 (ಸಂ-4)
ಜಾನಪದಗಳು ರಾಜ್ಯ 410 (ಸಂ-2)
ಜಾನಪದ ಶಿಷ್ಟಿಯಲಿ 885 (ಸಂ-4)
ಜ್ವಾಲಮಾಲಾಕುಲ ಜಗತ್ 93 (ಸಂ-1)
ಜೀವಋಣಗಳ ಲೆಕ್ಕ 284 (ಸಂ-2)
ಜೀವಕಾರಣಮೂಲ 527 (ಸಂ-3)
ಜೀವಗತಿಗೊಂದು 25 (ಸಂ-1)
ತನ್ನ ಹೊಳಹೊಳಪುಗಳ 77 (ಸಂ-1)
ತನುಭವ ವ್ಯಾಮೋಹ 421 (ಸಂ-2)
ತನುರಜೆಗೆ ಪಥ್ಯಾನ್ನ 9ಸ07 (ಸಂ-4)
ತನುವ ತಣಿಸುವ ತುತ್ತು 665 (ಸಂ-3)
ತನುವೇನು? ಮನವೇನು? 121 (ಸಂ-1)
ತಪ್ಪನಿನಿತು ಸೈಸದೆ 295 (ಸಂ-2)
ತಮ್ಮೆಲ್ಲ ಹಸಿವುಗಳ 944 (ಸಂ-4)
ತರಚುಗಾಯವ ಕೆರೆದು 644 (ಸಂ-3)
ತರಣಿ ಕಿರಣದ ನಂಟು 71 (ಸಂ-1)
ತರಣಿದರ್ಶನಕಿಂತ 774 (ಸಂ-3)
ತರಣಿ ಶಶಿಪಥಗಳನು 537 (ಸಂ-3)

## ಪದ್ಯಾರಂಭದ ಅಕಾರಾದ

ತರಿದುಬಿಡು ತೊರೆದುಬಿಡು 648(ಸಂ-3)
ತರುಜಾತಿ ಖಗಜಾತಿ 236 (ಸಂ-2)
ತರುಣಿತನ್ನೊಡವೆಗಳ 78 (ಸಂ-1)
ತಲೆ ಕೊಡವ ತಳೆದಿರಲು 741 (ಸಂ-4)
ತಲೆಪಾಗಿನೊಳಕೊಳಕ 719 (ಸಂ-4)
ತಲೆಯ ಮೇಗಡೆ ಬೇರು 251 (ಸಂ-2)
ತಲೆಯಿಂದ ತಲೆಗೆ 408 (ಸಂ-2)
ತಲೆಯೊಳಗೆ ನೆರದಿಹವು 203 (ಸಂ-2)
ತಳಮಳವಿದೇನಿಳೆಗೆ 17 (ಸಂ-1)
ತಳಿರ ನಸುಕೆಂಪು 438 (ಸಂ-2)
ತಳೆಯಲಾರನೆ ಬೊಮ್ಮ 831 (ಸಂ-4)
ತ್ಯಜಿಸಿ ಭುಜಿಸಲಲಿತವನೆ 908 (ಸಂ-4)
ತೋಯಿಸುತ ಬೇಯಿಸುತ 156 (ಸಂ-1)
ತಂಗಳುಣಿಸಾದೊಡಂ 210 (ಸಂ-2)
ತಂದೆಮಕ್ಕಳಿಗೆ ಹದ 174 (ಸಂ-1)
ದನ ಸಿಂಗ ಹುಲಿ ಹಕ್ಕಿ 209 (ಸಂ-2)
ದರಿಯಿರದೆ ಗಿರಿಯಿಲ್ಲ 293(ಸಂ-2)
ದಾರಿಗುರಿಗಳ ಗೊತ್ತು 642(ಸಂ-3)
ದಾಸರೋ ನಾವೆಲ್ಲ 385 (ಸಂ-2)
ದ್ರಾಕ್ಷಿರಸವೇನಲ್ಲ 26ಸಂ (ಸಂ-2)
ದಿನದಿನವು ಕುಸಿದು 791 (ಸಂ-4)
ದಿವಸ ಕೊಳಗದಿನ್ 684 (ಸಂ-3)
ದಿವಸದಿಂ ದಿವಸಕ್ಕೆ 682 (ಸಂ-3)
ದಿವ್ಯ ಚರಿತಂಗಳ ಪ್ರತ್ಯುಕ್ತಿ 861 (ಸಂ-4)

ತಾಪಿಸುತೆ ತಣಿಯಿಸುತ 159 (ಸಂ-1)
ತಾಯೊ ತಂಗಿಯೊ ಎನಿಪ 453 (ಸಂ-3)
ತಾಳಿ ಮೆಲೆಮೆಲನೊಮ್ಮೆ 550 (ಸಂ-3)
ತ್ರಾಸಿನಲಿ ಕಪ್ಪೆಗಳ 606 (ಸಂ-4)
ತಿದ್ದಿಕೊಳೊ ನಿನ್ನ ನೀಂ 292 (ಸಂ-2)
ತಿರಿದನ್ನವುಂಬಂಗೆ 671 (ಸಂ-3)
ತಿರುಕ ನೀನೀ ಬ್ರಹ್ಮಪುರಿಯೊಳ್ 640 (ಸಂ-3)
ತಿರುಗಿಸಲಿ ವಿಧಿರಾಯ 599 (ಸಂ-3)
ತಿರುತಿರುಗಿ ತಿರುಗುತ್ತೆ 316 (3ಸಂ-2)
ತಿರುತಿರುಗಿ ತೊಳಲುವುದು 23 (2ಸಂ-1)
ತಿಳಿವಾವುದಿಳೆಗೆ 520 (3ಸಂ-3)
ತಿಳಿವಿಗೊಳಿತೆನಿಸಿದುದು 554 (ಸಂ-3)
ತಿಂಗಳಾರರ ದುಡಿತ 443 (ಸಂ-2)
ತುಂಬುದಿಟ ಜೀವಿತದ 395 (ಸಂ-2)
ತೃಣಕೆ ಹಸಿರೆಲ್ಲಿಯದು 52 (2ಸಂ-1)
ತೃಪ್ತಿಯರಿಯದ ವಾಂಛ 379 (ಸಂ-2)
ತೆರಪನರಿಯದೆ ಪರಿವ 411 (ಸಂ-2)
ತೆರಿಗೆಗಳು ಹಲವುಂಟು 248 (ಸಂ-2)
ತೆರೆಯಾಗು ವಿಶ್ವಜೀವನದ 914 (ಸಂ-4)
ತೆರೆಯೇಳುವುದು ದೈವಸತ್ತ್ವ 230 (ಸಂ-2)
ತೊಟ್ಟಿಲುಗಳೆಷ್ಟೋ 674 (ಸಂ-3)
ತೊರೆಯ ತೆರೆಸಾಲ್ಗಳ್ 229 (ಸಂ-2)
ತೊಲಗು ನಿರ್ಜನದೆಡೆಗೆ 927 (ಸಂ-4)
ತೊಲಗೆಲವೊ ಮನೆಯಿಂದ 926 (ಸಂ-4)
ದಿವಿಜಸುಧೆ ಬರಿಮಧುವೊ 870 (ಸಂ-3)
ದೃಶ್ಯವೆಲ್ಲವು ನಶ್ಯ 400 (ಸಂ-2)
ದೃಷ್ಟಿಚುಕ್ಕೆಯದೊಂದ 447 (ಸಂ-3)
ದ್ವೈತವೇನದ್ವೈತವೇನ್ 809 (ಸಂ-4)
ದೇವದಾನವರ ರಣರಂಗ 192 (ಸಂ-1)
ದೇವನೇನತಿಶಯಿತಮಾನಿಸನೆ 500 (ಸಂ-3)
ದೇವಮಂದಿರ ಭಜನೆ 499 (ಸಂ-3)
ದೇವರಿದಿದೆಲ್ಲ 581 (ಸಂ-3)
ದೇವರ್ಕಳುದಿಸಿ 404 (ಸಂ-2)
ದೇವರೆಂಬುದದೇನು 5 (ಸಂ-1)
ದೇವಾಂಶ ಪಶ್ವಂಶ 2ಸ04 (ಸಂ-2)
ದೇಹವೆಂಬುದು ಕುದುರೆ 397 (ಸಂ-2)
ದೇಹಾತುಮಂಗಳೆರಡಂಗಗಳು 388 (ಸಂ-2)
ದ್ವೇಷರೋಷಗಳವೊಲೆ 178 (ಸಂ-1)
ದೈವಕೃಪೆಯೆನುವುದೇಂ? 505 (ಸಂ-3)
ದೈವವೆನಿಸಿರುತೆ 151 (ಸಂ-1)
ದೊರೆಗೆ ನೀಂಬಿನ್ನಯಿಸೆ 506 (ಸಂ-3)
ದೊರೆತನದ ಜಟಿಲಗಳ 709 (ಸಂ-4)
ದೊರೆಮೂವರಿರುವಲ್ಲಿ 150 (ಸಂ-1)
ದೊರೆಯ ವೇಷವ ಧರಿಸಿ 580 (ಸಂ-3)
ದೊರೆವ ಜೀತಕ್ಕೆ ದುಡಿತ 779 (ಸಂ-4)
ದೋಷಿಯವನಿವನು 280 (ಸಂ-2)
ದಂಡನಿರ್ಣಯದಿ ನೀಂ 507 (ಸಂ-3)
ದ್ವಂದ್ವಲೋಕವನಕ್ಷಿಯುಗದೆ 695 (ಸಂ-3)

## ಪದ್ಯಾರಂಭದ ಅಕಾರಾಣ


ಧನ್ಯತಮವಾ ಘಳಿಗೆ 678 (ಸಂ-3)
ಧನ್ಯ ಹೊಲೆಯರ ನಂದ 764 (ಸಂ-4)
ಧರ್ಮ ನಿರ್ಣಯ ನಿನಗೆ 622 (ಸಂ-3)
ಧರ್ಮವೆಂಬುದದೇನು? 97 (ಸಂ-1)
ಧರ್ಮಸಂಕಟದಿ ಮನ 555 (ಸಂ-3)
ಧರಣಿಗೋಳವು ಮೂಸ 603 (ಸಂ-3)
ಧರಿಸಿದ್ದುದಲ ಧರ್ಮ? 621 (ಸಂ-3)
ಧರೆಯ ನೀರ್ಗಾಗಸದ 129 (ಸಂ-1)
ಧರೆಯ ಬದುಕೇನ್ 27 (ಸಂ-1)
ಧರೆಯೆ ಕೋಸಲ 711 (ಸಂ-4)
ಧರೆ ಸಸ್ಯಫಲದಿ 235 (ಸಂ-2)
ಧ್ವನಿತ ಪ್ರತಿಧ್ವನಿತ 617 (ಸಂ-3)
ಧಾತನೆಣ್ಣೆಯ ಗಾಣ 357 (ಸಂ-2)
ಧಾತ್ರಿಯನು ಮದುವೆ 143 (ಸಂ-1)
ಧಾರಿಣಿಯ ವಾಸಿಗಳೆ 367 (ಸಂ-2)
ಧಾರುಣಿಯ ನಡಿಗೆಯಲಿ 762 (ಸಂ-4)
ಧಾರುಣೀಸುತೆಯವೊಲು 277 (ಸಂ-2)
ನಕ್ಷತ್ರ ಮಂಡಲದಿ 61 (ಸಂ-1)
ನಗುನಗುವ ಕಣ್ಗಳಿಗೆ 833 (ಸಂ-4)
ನಗುಮನದಿ ಲೋಗರ 728 (ಸಂ-4)
ನಗುವು ಸಹಜದ ಧರ್ಮ 917 (ಸಂ-4)
ನಗುವೊಂದು ರಸಪಾಕ 434 (ಸಂ-2)
ನಟಿಪುದೊಮ್ಮೊಮ್ಮೆ 364 (ಸಂ-2)
ನದಿಯ ತೆರೆಯವೊಲುರುಳಿ 18 (ಸಂ-1)
ನಭದ ಬಯಲೊಳನಂತ 85 (ಸಂ-1)
ನರರಸ್ವಭಾವ ವಕ್ರಗಳ 287 (ಸಂ-2)
ನರವಿವೇಕವದೇನು 540 (ಸಂ-3)
ನಲಿಸುವೊಲಿಸುವ 726 (ಸಂ-4)
ನವನವ ಪ್ರಶ್ನೆಗಳು 852 (ಸಂ-4)
ನಶ್ವರಾಕೃತಿ ನಾಮಮಯ 890 (ಸಂ-4)
ನಾಚಿಕೆಯದೇಕೆ 268 (ಸಂ-2)
ನಾಚಿಕೆಯನ್ನಾಗಿಸುವು 285 (ಸಂ-2)
ನಾಟಕದೊಳನುವಿಂದ 255 (ಸಂ-2)
ನಾಟಕವ ನೋಡು 254 (ಸಂ-2)
ನಾನು ನಾನೇ ನಾನೆನುತ್ತೆ 901 (ಸಂ-4)
ನಾನೆನುವವನೆ ವಿಶ್ವಚಕ್ರನಾಭಿ 139 (ಸಂ-1)
ನಾನೆಂಬುದೊಂದಂಶ 793 (ಸಂ-4)
ನಾಯಕನಿಗಿರಲಿ ರಣವಿಜಯ 735 (ಸಂ-4)
ನಾವುಣ್ಣುವನ್ನಗಳು 119 (ಸಂ-1)
ನಾಸಿಕದ ಮಾಟದಿಂದಾ 306(ಸಂ-2)
ನಾಸಿಕದೊಳುಚ್ಛ್ವಾಸ 712 (ಸಂ-4)
ನ್ಯಾಯಾಧಿಪತಿ ತನ್ನ 814 (ಸಂ-4)
ನಿನಗಾರು ಗುರುವಹರು 923 (ಸಂ-4)
ನಿನಗಿರದ ಕಣ್ ಬಾಯಿ 571 (ಸಂ-3)
ನಿನ್ನ ಕಣ್ ಕಿವಿ ಮನ 530 (ಸಂ-3)
ನಿನ್ನ ಕಹಿಸಿಹಿಯಲ್ಲ 891 (ಸಂ-4)
ನಿನ್ನಜ್ಜ ಮುತ್ತಜ್ಜ 339 (ಸಂ-2)
ನಿನ್ನ ಜೀವಿತವೆಲ್ಲ 336 (ಸಂ-2)
ನಿನ್ನ ಹೆಗಲಿನ ಹೊರೆಯ 551 (ಸಂ-3)
ನಿನ್ನ ಹೆಣವನು ನೀನೆ 717 (ಸಂ-4)

ನಯದಿಂದ ಸೋಕು 274 (ಸಂ-2)
ನಯನಯುಗದಿಂ ಜಗವ 613 (ಸಂ-3)
ನರಕ ತಪ್ಪಿತು ಧರ್ಮಜಂಗೆ 511 (ಸಂ-3)
ನರ ಜೀವನದ ರಣದಿ 592 (ಸಂ-3)
ನರನರೀ ಚಿತ್ರಗಳು 898 (ಸಂ-4)
ನರನಾರಿ ಮೋಹದಿಂ 406 (ಸಂ-2)
ನರನೊಂದು ವವಹಾರಕ 664 (ಸಂ-3)
ನರಪರೀಕ್ಷೆಯೆ 33 (ಸಂ-1)
ನರರಭಯಬಯಕೆಗಳೆ 24 (ಸಂ-1)
ನರಭಾಷೆ ಬಣ್ಣಿಪುದೆ 63 (ಸಂ-1)
ನರರವೊಲೆ ಸುರರು 487 (ಸಂ-3)
ನಿನ್ನೆಂಜಲುಗಳಾವ 841 (ಸಂ-4)
ನಿನ್ನೇಳು ಬೀಳುಗಳು 510 (ಸಂ-3)
ನಿಲದೆ ನಡೆವುದು ಮೊದಲು 329 (ಸಂ-2)
ನಿಶಿಯೊಳೇಂ ಕಾಣಬಾರನು 40 (ಸಂ-1)
ನಿಶಿ ಹಿಂದೆ, ನಿಶಿ ಮುಂದೆ 481 (ಸಂ-3)

ನೀರಧಿ ಬ್ರಹ್ಮ 771 (ಸಂ-4)
ನೀರನೆರೆ ತನ್ನೆದುರಿನಣೆಕಟ್ಟ 535 (ಸಂ-3)
ನೀಲ ವಿಸ್ತರವಿರಲು 451 (ಸಂ-3)
ನೀಳುಗೆರೆ ಬಳುಬಳುಕೆ 452 (ಸಂ-3)
ನುಡಿಗಟ್ಟಿನಾಟದಕ್ಕರಚೀಟಿ 187 (ಸಂ-1)

## ಪದ್ಯಾರಂಭದ ಅಕಾರಾಣ

ನೂತ್ನತೆಯ ಪೂರ್ಣತೆಯ 227 (ಸಂ-2)
ನೂರಾರು ಮತವಿಹುದು 934 (ಸಂ-4)
ನೂರಾರು ಸರಕುಗಳು 666 (ಸಂ-3)
ನೃತ್ಯವೋ ಬ್ರಹ್ಮನಟರಾಜ 850 (ಸಂ-4)
ನೆನೆನೆನೆದು ಗಹನವನು 918 (ಸಂ-4)
ನೆರಳನಿನಿತನು ಕೊಡುವ 746 (ಸಂ-4)
ನೆಲದ ಬೇಸಾಯ 847 (ಸಂ-4)
ನೆಲವೊಂದೆ ಹೊಲಗದ್ದೆ 237 (ಸಂ-3)
ನೇತ್ರಯುಗಳಂ ಪಿಡಿಗು 770 (ಸಂ-4)
ನೈರಾಶ್ಯನಿರತಂಗೆ 798 (ಸಂ-4)
ನೋಡುನೋಡುತ ಲೋಕ 184 (ಸಂ-1)
ಪ್ರತ್ಯೇಕ ಸುಖವ ನೀಂ 619 (ಸಂ-3)
ಪ್ರತ್ಯೇಕ ಸುಖವಲ್ಲದುದು 432 (ಸಂ-2)
ಪಾಕನಿನ್ನೊಳದೊಂದು 120 (ಸಂ-1)
ಪಾತಕಿಯೊಳಾಗ್ರಹವ 281 (ಸಂ-2)
ಪಾಪವೆಂಬುದದೇನು 282 (ಸಂ-2)
ಪಾರಿಜಾತವ ಕಂಡು 473 (ಸಂ-3)
ಪ್ರಾಕ್ತನದ ವಾಸನೆಯ 541 (ಸಂ-3)
ಪ್ರಾರಬ್ಧ ಕರ್ಮಮುಂ 153 (ಸಂ-1)
ಪ್ರಾರಬ್ಧದಲಿ ನಿನ್ನ 509(ಸಂ-3)
ಪ್ರಾಲೇಯಗಿರಿಗುಹೆಯ 519 (ಸಂ-3)
ಪಿಡಿ ಗಳಿಸು ಭುಜಿಸು 456 (ಸಂ-3)

ನಂಟುತಂಟೆಗಳ ಗಂಟೇ 73 (ಸಂ-1)
ನಂಬದಿದ್ದನು ತಂದೆ 485 (ಸಂ-3)
ನಂಬುದೇವರ ನಂಬು 638 (ಸಂ-3)
ಪದರಪದರಗಳಿಹವು 199 (ಸಂ-1)
ಪರಕಿಹವೆ ಸೋಪಾನ 257 (ಸಂ-2)
ಪರದ ಮೇಲ್ಕಣ್ಣಿಟ್ಟು 256 (ಸಂ-2)
ಪರದೈವವನು ತೊರೆಯೆ 529 (ಸಂ-3)
ಪರಬೊಮ್ಮ ಜೀವಭೇದದಿ 405 (ಸಂ-2)
ಪರಬೊಮ್ಮನಾ ವಿಧಿಯ 157 (ಸಂ-1)
ಪರಬೊಮ್ಮನೀ ಜಗವ 32 (ಸಂ-1)
ಪರಮಪದದಲಿ ನೋಡು 559 (ಸಂ-3)
ಪರಮಲಾಭವ ಗಳಿಸ 749 (ಸಂ-4)
ಪರಮಾಣುವಿಂ ಪ್ರಪಂಚಗಳ 116 (ಸಂ-1)
ಪರಮೇಷ್ಠಿನಿಜಚಾತುರಿಯ 193 (ಸಂ-1)
ಪರಹಿತದ ಮಾತಿರಲಿ 745 (ಸಂ-4)
ಪರಿಪರಿ ಪರೀಕ್ಷೆಗಳು 589 (ಸಂ-3)
ಪರಿಪರಿಯ ರೂಪಕಾಂತಿಗಳ 189 (ಸಂ-1)
ಪರಿಪರಿಯ ರೂಪದಲಿ 776 (ಸಂ-4)
ಪರಿಪರಿಯ ರೂಪಿನಲಿ 218 (ಸಂ-2)
ಪರಿಪರಿಯ ವಿಶ್ವಪ್ರಕೃತಿ 454 (ಸಂ-3)
ಪರಿಪೂರ್ಣ ಸುಖವನ್ 887 (ಸಂ-4)
ಪರಿಮಿತಿಯನರಿತಾಶೆ 714 (ಸಂ-4)
ಪ್ರಕೃತಿಯನವರತ ಮನಜನ 859 (ಸಂ-4)
ಪ್ರಕೃತಿಯಿಂ ಸೊರಗಿರುವ 148 (ಸಂ-1)
ಪ್ರತ್ಯಕ್ಷವಿಲ್ಲದಾ ಸ್ವಾಮಿಯಂ 710 (3ಸಂ-4)
ಪಿರಿದೆಲ್ಲ ಮತನೀತಿಗಳಿಗಿಂತ 524 (ಸಂ-3)
ಪ್ರಿಯಹಿತಗಳನ್ವೇಷೆಯಿಂ 858 (ಸಂ-4)
ಪ್ರೀತಿ ಮಹಿಮೆಯ ಚಿತ್ರ 462 (ಸಂ-3)
ಪುಣ್ಯದಿಂ ಬಂದ ಸಿರಿ 183 (ಸಂ-1)
ಪುಣ್ಯಪಾಪ ಋಣಾನುಬಂದ 152 (ಸಂ-1)
ಪುಣ್ಯಪಾಪದ ಮಿಶ್ರ 317 (ಸಂ-2)
ಪುರುಷನ ಸ್ವಾತಂತ್ರ 590 (ಸಂ-3)
ಪುರುಷಬುದ್ಧಿಯೆ ಸಾಕು 548 (ಸಂ-3)
ಪುರುಷಯೋಚನೆಯೆಲ್ಲ 527 (ಸಂ-3)
ಪುರುಷ ಸ್ವತಂತ್ರತೆಯ 13 (ಸಂ-1)
ಪುರುಷಂ ಸ್ವತಂತ್ರನೋ 533 (ಸಂ-3)
ಪುಲಿಸಿಂಗದುಚ್ಛ್ವಾಸ 131 (ಸಂ-1)
ಪುಸ್ತಕದಿ ದೊರೆತರಿವು 65 (ಸಂ-1)
ಪುಸಿಯ ನೀಂ ಪುಸಿಗೈದು 39 (ಸಂ-1)
ಪೂಸರದಿ ಕಾಂತಿ ಸೌರಭ 342 (ಸಂ-2)
ಪೆರತೊಂದು ಬಾಳ ನೀನಾಳ್ವ 845 (ಸಂ-4)
ಪೆರೆಯ ಗುಣಂಗಳಿನ್ನೂರು 297 (ಸಂ-2)
ಪ್ರೇಮ ಕನಲೆ ಪಿಶಾಚಿ 428 (ಸಂ-2)
ಪ್ರೇಮಬೀಜಗಳಿಹುವು 246 (ಸಂ-2)
ಪ್ರೇಮಾತಿಶಯವಿರದ 6ಸ07 (ಸಂ-3)
ಪೊಡೆಯುಣಿಸ ಮಿಗ ಹಕ್ಕಿ 191 (ಸಂ-1)
ಹೊಸರಸಂ ಬೇರಿಗನುದಿನ 154 (ಸಂ-1)
ಪೌರುಷತ್ವಕ್ಕಾಶೆ ಛಾಟಿ 815 (3ಸಂ-4)
ಪಂಚಕವೊ ಪಂಚಪಂಚಕವೊ 320 (ಸಂ-2)
ಪಂಚಭೂತಗಳಂತೆ 319 (ಸಂ-2)

## ಪದ್ಯಾರಂಭದ ಅಕಾರಾದ


ಪಂಡಿತರೆ ಶಾಸ್ತ್ರಿಗಳ 49 (1-ಸಂ)

ಫಲವಿಲ್ಲ ಕಾರ್ಯಕಾರಣ 54 (ಸಂ-1)

ಫಲವೇನು ಹೆಣಗಾಡಿ 585 (ಸಂ-3)

ಬಚ್ಚಿಟ್ಟುಕೊಂಡಿಹುದೆ 31 (1-ಸಂ)

ಬಡಗಿ ಬೇಸಾಯಿ ಕರ್ಮಿಗ 668(ಸಂ-3)

ಬದುಕಿಗಾರ್ ನಾಯಕರು 7 (2ಸಂ-1)

ಬದುಕು ಕದನದ ತೆರನ 591 (2ಸಂ-3)

ಬದುಕು ಜಟಕಾ ಬಂಡಿ 600 (ಸಂ-3)

ಬದುಕೊಂದು ಕದನವೆಂದಂಜಿ 598 (3ಸಂ-3)

ಬನ್ನ ಬವಣೆಗಳ ತಾನ್ 123 (ಸಂ-1)

ಬನ್ನಿರಾಡುವ ಕಣ್ಣಮುಚ್ಚಾಲೆ 82 (ಸಂ-1)

ಬರದಿಹುದರೆಣಿಕೆಯಲಿ 759 (ಸಂ-4)

ಬರಿಭಕ್ತಿ ಬರಿ ಕರ್ಮ 810 (ಸಂ-4)

ಬರಿಯ ಪೊಳ್ಳುವಿಚಾರ 915 (ಸಂ-4)

ಬರಿಯ ಬುದ್ಧಿ ವಿಮರ್ಶೆ 539 (ಸಂ-3)

ಬರಿಯ ಹೆಣ್ ಬರಿದು 413 (ಸಂ-2)

ಬರಿಯೋದು ಬರಿವಾದ 692 (ಸಂ-3)

ಬರುವೆಲ್ಲ ಬೇನೆಗಂ 67ಸಂ (ಸಂ-3)

ಬರೆವ ಹಲಗೆಯನೊಡೆದು 79 (ಸಂ-1)

ಬಲುಹಳೆಯ ಲೋಕವಿದು 875 (ಸಂ-4)

ಬಹಿರದ್ಭುತವ ಮನುಜ 490 (ಸಂ-3)

ಬಹಿರಂತರಗಳೊಂದು 133 (ಸಂ-1)

ಬಹಿರಂತರೈಕ್ಯವನು 492 (ಸಂ-3)

ಬಹುಜನಂ ಕೈಮುಗಿದ 493 (ಸಂ-3)

ಬಹುರಹಸ್ಯವೊ ಸೃಷ್ಟಿ 836 (ಸಂ-4)

ಬಾಳ್ಕೆಯಲಿ ನೂರೆಂಟು 643 (ಸಂ-3)

ಬಾಂದಳದ ಬಾಗು 444 (ಸಂ-2)

ಬಿಟ್ಟೆನೆಲ್ಲವನೆಂಬ 813 (ಸಂ-4)

ಬಿಡುವಿಲ್ಲದೀ ಜೀವಿತಾಪಣದ 594 (ಸಂ-3)

ಬಿತ್ತ ಮಳೆಗಳವೋಲು 597 (ಸಂ-3)

ಬಿದ್ದುದನು ನಿಲ್ಲಿಪುದೆ 474 (ಸಂ-3)

ಬಿಳಲಲ್ಲ ಬೇರಲ್ಲ 563 (ಸಂ-3)

ಬಿಂದುವಿಸರಗಳನುವು 448 (ಸಂ-2)

ಬೀಸಿದಲ್ಲದೆ ಬೂದಿ 291 (ಸಂ-2)

ಬಿಳಲಲ್ಲ ಬೇರಲ 563 (ಸಂ-3)

ಬಿಂದುವಿಸರಗಳನುವು 448 (ಸಂ-2)

ಬೀಸಿದಲ್ಲದೆ ಬೂದಿ 291 (ಸಂ-2)

ಬೀಳಿಸದಿರೆಲೊ ನಿನ್ನ 844 (ಸಂ-4)

ಬೀಳಿಪುದ ನಿಲ್ಲಿಪುದು 232 (ಸಂ-2)

ಬುದ್ಧಿಪ್ರಕಾಶದಿಂದೆ 545 (ಸಂ-3)

ಬುದ್ಧಿಮಾತಿದು ನಿನಗೆ 783 (ಸಂ-4)

ಬೆಟ್ಟಕ್ಕೆ ಸನ್ನೆ ಹಾಕಿರುವ 578 (ಸಂ-3)

ಬೆದಕಾಟ ಬದುಕೆಲ್ಲ 2ಸ08 (ಸಂ-2)

ಬೆನ್ನಿನಗಲವನಳೆದು 579 (3ಸಂ-3)

ಬೆರಗಾಗಿಸುವುವೆಲ್ಲ 496 (ಸಂ-3)

ಬೆರಳುಗಳ ನೋಡು 24ಸಂ (ಸಂ-2)

ಬೆಳೆಹೊಳಪು ವಿಕಸನ 87 (3ಸಂ-1)

ಬೆಂಕಿಯುಂಡೆಯ ಬೆಳಕು 45 (ಸಂ-1)

ಬೇಕು ಜೀವನಯೋಗ 703(ಸಂ-4)

ಬೇಕು ಬೇಕದು ಬೇಕು 371 (ಸಂ-2)

ಬಹುವಾಗಲೆಳಿಸಿ ತಾನ್ 76 (ಸಂ-1)
ಬಹುವಿದ್ಯೆ ಬಹುತರ್ಕ 742 (ಸಂ-4)
ಬಳಲಿ ನೆಲದಲ್ಲಿ ಮಲಗಿ 873 (ಸಂ-4)
ಬ್ರಹ್ಮವೇ ಸತ್ಯ 3ಸಂ (ಸಂ-1)
ಬ್ರಹ್ಮಾನುಸಂದಾನ 753 (ಸಂ-4)
ಬಾನಾಚೆಯಿಂ ವಿಶ್ವತತ್ವ 138 (ಸಂ-1)
ಬಾನೊಳಿರುವುದೆ ಪಕ್ಷಿ 641 (ಸಂ-3)
ಬಾಳ ಸಿರಿ ಸೊಗಸುಗಳ 265(ಸಂ-2)
ಬಾಳ ಹಳಿವುದದೇಕೆ 266 (ಸಂ-2)
ಬಾಳಿನೊಳಕಿಚ್ಚು 348 (ಸಂ-2)
ಬಾಳು ಪಾಳೆನ್ನುವರ 263 (ಸಂ-2)
ಬೇಡಿದುದನೀವನೀಶ್ವರ 943 (ಸಂ-4)
ಬೇರಯಿಸಿ ನಿಮಿಷ 38 (ಸಂ-1)
ಬೊಮ್ಮನೇ ಸಂಸ್ಕೃತಿಯ 272 (ಸಂ-2)
ಬಂಧನಗಳೆಲ್ಲವನು 694 (ಸಂ-3)
ಬಂಧನವದೇನಲ್ಲ 429 (ಸಂ-2)
ಬಂಧುಬಳಗವು 173 (ಸಂ-1)
ಬಂಧುವು ಮಿತ್ರನುಂ 177(ಸಂ-2)
ಭಕ್ತಿ ನಂಬುಗೆ ಸುಲಭ 528 (ಸಂ-3)
ಭಾನದಯಾಸ್ತಗಳಿಂ 894 (ಸಂ-4)
ಭಾವದಾವೇಶದಿಂ 542 (ಸಂ-3)
ಭಾವರಾಗೋದ್ರೇಕ 423 (ಸಂ-2)


## ಪದ್ಯಾರಂಭದ ಅಕಾರಾಣ


ಭ್ರಾಂತಿಯೋ ಸಂಪೂರ್ಣ 889 (ಸಂ-4)
ಭಿತ್ತಿಯೊಂದಿಲ್ಲದಿರೆ 105 (ಸಂ-1)
ಭುಕ್ತಿ ನಿನಗೆಲ್ಲಿಯದು 840 (ಸಂ-4)
ಭುಕ್ತಿ ಪಥ ಮುಕ್ತಿಪಥ 616 (ಸಂ-3)
ಭೂವಿಷಯದಲಿ ಪುದಿದ 70 (ಸಂ-1)
ಭೋಜನದಿ ಪರಮಭೋಜನ 752 (ಸಂ-4)
ಭೌತವಿಜ್ಞಾನ ವಿವರ 896 (ಸಂ-4)
ಭೌತವಿಜ್ಞಾನಿ ರವಿತಾರೆ 62 (ಸಂ-1)
ಮಕ್ಕಳ ಭವಿಷ್ಯಕ್ಕೆ 420 (ಸಂ-2)
ಮಗುವಾಗಿ ಬೊಂಬೆಗೆಂದತ್ತು 909 (ಸಂ-4)
ಬಡಕೆಯನು ಬಡಿದು 874 (ಸಂ-4)
ಮಣಿಮಂತ್ರ ತಂತ್ರಸಿದ್ಧಿ 59 (ಸಂ-1)
ಮರ ನೀನರಿಯುವೊಡೆ 817 (ಸಂ-4)
ಮರುಕದುಂಬಿದ ಕಣ್ಣ 296 (ಸಂ-2)
ಮರೆತಿಹನೆ ಬೊಮ್ಮ 81(3ಸಂ-1)
ಮಲಗಿದೋದುಗನ ಕೈ 902 (ಸಂ-4)
ಮಲೆಕಣಿವೆಗಳ ಬೆರೆಗು 58 (ಸಂ-1)
ಮಳೆಗೊಂದು ಬೆಳೆಗೊಂದು 780 (ಸಂ-4)
ಮಾರ್ಗಣೆಯೆ ಮುಖ್ಯ 869 (ಸಂ-4)
ಮಾತೆವೊಲೊ ಪಿತನವೊಲೊ 427 (ಸಂ-2)
ಮಾನವರೋ ದಾನವರೋ 12 (ಸಂ-1)
ಮಾನವ ಚಿಂತೆ 83 (ಸಂ-1)
ಮಾನುಷದ ಚರಿತೆ 409 (ಸಂ-2)
ಮಾನುಷ್ಯ ಚರಿತೆ 163 (ಸಂ-1)

ಮತಿಗರ್ಥವಾದೊಡೇಂ 755 (ಸಂ-4)
ಮತಿ ನಯನದಂತೆ 547 (ಸಂ-3)
ಮತಿಯು ತಾಂ ಸತ್ಯ 228 (ಸಂ-2)
ಮತಿವಂತರಿದ್ದರಲ 877 (ಸಂ-4)
ಮನದ ಭಾವಗಳ 567 (3ಸಂ-3)
ಮನದ ಭಾವಿತಕ್ಕೊಪ್ಪುವ 568 (ಸಂ-3)
ಮನದಿಂದ ಮನಕೆ ಪಾರುದು 247 (ಸಂ-2)
ಮನವನಾಳ್ವುದು 375 (ಸಂ-2)
ಮನಸು ಬೆಳೆದಂತೆಲ್ಲ 211 (ಸಂ-2)
ಮನಸು ಬೆಳೆಯಲಿ ಭುಜಿಸಿ 794 (ಸಂ-4)
ಮನುಜಕುಲವೊಂದು 238 (ಸಂ-2)
ಮನುಜರೂಪದಿನಾದರವನು 426 (ಸಂ-2)
ಮನುಜಲೋಕವಿಕಾರ 196 (ಸಂ-1)
ಮನುಜಸಾಕಲ್ಯದನುಭವಕೆ 517 (ಸಂ-3)
ಮನೆಯ ತೊರೆದೋಡಲೇಂ 373 (ಸಂ-2)
ಮನೆಯ ಮಾಳಿಗೆಗೆಲ್ಲ 924 (ಸಂ-4)
ಮನೆಯ ಸುಡುತಿಹ ಬೆಂಕಿ 667 (ಸಂ-3)
ಮನೆಯ ಸಂಸಾರದಲಿ 702 (ಸಂ-3)
ಮನೆಯೆ ಮಠವೆಂದು ತಿಳಿ 611 (ಸಂ-1)
ಮನೆಯೆಲ್ಲಿ ಸತ್ಯಕ್ಕೆ? 50 (ಸಂ-4)
ಮನೆಯೊಳೊ ಮಠದೊಳೊ 653 (ಸಂ-3)
ಮರಣದಿಂ ಮುಂದೇನು? 846 (ಸಂ-4)
ಮರಣಶಯ್ಯೆಯದೆಂದು 401 (ಸಂ-2)
ಮರ ತನ್ನ ಹೆತ್ತ ಬೀಜವ 75 (ಸಂ-1)
ಮಾಯೆಯೆಂಬಳ ಸೃಜಿಸಿ 602 (ಸಂ-3)
ಮಾಯೆಯೇ ಸರಸಿ 145 (ಸಂ-1)
ಮಾಯೆಯೊಮ್ಮೊಮ್ಮೆ 147 (ಸಂ-1)
ಮಾರನಂ ದಂಡಿಸಿರ 614 (ಸಂ-3)
ಮಾವುಸಸಿಯನು ನೆಟ್ಟು 733 (ಸಂ-4)
ಮಿಡಿಚೇಪೆಕಾಯಿಗಳ 344 (3ಸಂ-2)
ಮಿತ ನಿನ್ನ ಗುಣಶಕ್ತಿ 349 (ಸಂ-2)
ಮಿತಿಯನರಿತಾಶೆ 881 (ಸಂ-4)
ಮುಕ್ತಯೆಂಬುದು ಮನದ 647 (ಸಂ-3)
ಮುಕ್ಕೋಟಿ ದೇವತೆಗಳ್ 368 (ಸಂ-2)
ಮುಗ್ಧನಾಗದೆ ಭುಜಿಸು 639 (ಸಂ-3)
ಮುತ್ತಿರುವುದಿಂದು ಭೂಮಿಯಂ 11 (ಸಂ-1)
ಮುದಿಕುರುಡಿ ಹೋಂಗೆಯನು 863 (ಸಂ-4)
ಮುನ್ನಾದ ಜನುಮಗಳ 760 (ಸಂ-4)
ಮುಸುಕಿಹುದು ಹುಟ್ಟಳಿವು 838 (ಸಂ-4)
ಮುಳುಗದಿರು, ಜೀವನದ 750 (ಸಂ-4)
ಮುಂದೇನೋ ಮತ್ತೇನೋ 681 (3ಸಂ-3)
ಮೂರಿರಲಿ ವಾದ ಮುನ್ನೂರು 772 (ಸಂ-4)
ಮೂಲವಸ್ತುವದೊಂದು 142 (ಸಂ-1)
ಮೃಗಶೇಷವಿರುವನಕ 879 (ಸಂ-4)
ಮೃತನ ಸಂಸಾರಕಥೆ 716 (ಸಂ-4)
ಮೃತ್ಯು ತಾಂ ಬಂದು 180 (ಸಂ-1)
ಮೃತ್ಯುವಿಂ ಭಯವೇಕ 835 (ಸಂ-4)
ಮೆಣಸು ಹಿಪ್ಪಲಿ ಶುಂಠಿ 935 (ಸಂ-4)

## ಪದ್ಯಾರಂಭದ ಅಕಾರಾಣ


ಮೆರೆಯುವುವು ನೂರಾರು 721 (ಸಂ-4)

ಮೇಲಿಂದ ನಕ್ಷತ್ರ 56 (ಸಂ-1)

ಮೇಲೆ ಕೆಳಗೊಳಗೆ ಬಳಿ 43 (ಸಂ-1)

ಮೇರು ಪರ್ವತಕಿಹುವ 763 (ಸಂ-4)

ಮೊಗನಾಲ್ಕು ನರಗಿನಂತೆಯೇ 195 (ಸಂ-1)

ಮೊಳೆವ ಸಸಿಯೊಳು ನಾನು 795 (ಸಂ-4)

ಮೋಕ್ಷದಾಶೆಯೊಳಂ 903 (ಸಂ-4)

ಮೋಹನಾನಂದ ಭೈರವಿ 932 (ಸಂ-4)

ಮೌನದಿಂದಂಬಲಿಯ 651 (ಸಂ-3)

ಮೌನದೊಳೊ ಮಾತಿನ 124 (ಸಂ-1)

ಮಂಕುತಿಮ್ಮನ ಹೆಸರು 941 (ಸಂ-4)

ಮಂದಾಕ್ಷಿ ನಮಗಿಹುದು 44 (ಸಂ-1)

ಮಂದಿರದ ಶಿಲ್ಪಿ, ಯಂತ್ರಗಳ 471 (ಸಂ-3)

ಯತನಕರ್ತವ್ಯವದು 867 (ಸಂ-3)

ಯಮನಿಗೇಕಪಕೀರ್ತಿ 279 (ಸಂ-2)

ಯಾತ್ರಿಕರು ನಾವು 672 (ಸಂ-3)

ಯುಕ್ತಿಸಾಮ್ರಾಜ್ಯದಲಿ 501 (ಸಂ-3)

ಯುದ್ಧವಾಗಲಿ 634 (ಸಂ-3)

ರಣದಿ ಬಿದ್ದಾ ಸೈನ್ಯಪತಿ 911 (ಸಂ-4)

ರದನೋದಯಜ್ವರಕೆ 387 (ಸಂ-2)

ರವಿ ನಿಲದೆ ಸುತ್ತುತಿರೆ 683 (ಸಂ-3)

ರವಿಮಾತ್ರದಿಂದಲ್ಲ 118 (ಸಂ-1)

ರಸರುಚಿಗಳನು ಕಲಿಸಿ 188 (ಸಂ-1)

ರಾಗಿಮುದ್ದೆಯ ನುಂಗಿ 650 (ಸಂ-3)

ರಾಮಕಾರ್ಮುಕ 856 (ಸಂ-4)

ಲೀಲೆಯೇಂ ಬಾಳೆಲ್ಲ? 267 (ಸಂ-2)

ಲೋಕಜೀವನದೆ ಮಾನಸದ 620 (ಸಂ-3)

ಲೋಕದಲಿ ಭಯವಿರಲಿ 827 (ಸಂ-4)

ಲೋಕವೆಲ್ಲವು ಚಿತ್ರ 751 (ಸಂ-4)

ಲೋಕವೆಲ್ಲವು ದೈವಲೀಲೆ 354 (ಸಂ-2)

ಲೋಚನದ ಸಂಚಾರ 761 (ಸಂ-4)

ವಕ್ತ್ರವುಂಟೆಲ್ಲರಿಗೆ 570 (ಸಂ-3)

ವಕ್ರಋಜುಮಿಶ್ರ ಜಗ 98 (2ಸಂ-1)

ವನಜಂತುಗಳ ಸಸ್ಯ 818 (ಸಂ-4)

ವನದಿ ನಿರ್ಜನದಿ 372 (ಸಂ-2)

ವನ್ಯಮೃಗಗಳ ನಡುವೆ 309 (ಸಂ-2)

ವಸ್ತುವಿಜ್ಞಾನದಿಂ 884 (ಸಂ-4)

ವಹಿಸು ಕೆಲಭಾರಗಳ 9ಸ04 (ಸಂ-4)

ವ್ಯಕ್ತಿಮಾತ್ರದ ವಿಭವ 888 (ಸಂ-4)

ವ್ಯರ್ಥವೀ ಜೀವನದ 271 (ಸಂ-2)

ವ್ಯರ್ಥವೆಂದೆನಿಪುದಲ 66 (ಸಂ-1)

ವ್ಯಸನಕಾರಣವೊಂದು 466 (ಸಂ-3)

ವಾಯುವಂಕಾಣ್ಬನಾರ್? 144 (ಸಂ-1)

ವಾಸನೆ ವಿವೇಚನೆಗಳ್ 700 (3ಸಂ-3)

ವ್ಯಾಕರಣ ಕಾವ್ಯ ಲಕ್ಷಣಗಳನ್ನು 940 (ಸಂ-4)

ವ್ಯಾಮೋಹವಿಲ್ಲದ ಪ್ರೇಮ 757 (ಸಂ-4)

ವಿಧಿಗೆ ನೀಂ ಕಾರ್ಯನಕ್ಷೆಯ 549(ಸಂ-3)

ವಿಧಿಯ ಹೊರೆಗಳನ್ನು 161 (ಸಂ-1)

ವಿವಿಧರಸಗಳ ಭಟ್ಟ 470 (ಸಂ-3)

ವಿಶದವಾದೊಂದು ಜೀವನ 936 (ಸಂ-4)

ರಾಮಣೀಯಕದಿ ನಲಿವಕ್ಷಿ 435 (ಸಂ-2)
ರಾಮನಡಿಯಿಟ್ಟನೆಲ 130 (ಸಂ-1)
ರಾಮನಿರ್ದದು ರಾವಣ 288 (ಸಂ-2)
ರಾಮನುಚ್ಛ್ವಾಸವಲೆದಿರದೆ 132 (ಸಂ-1)
ರಾಮನುಂ ಭರತನುಂ 461 (ಸಂ-3)
ರಾಯ ಮುದಿದಶರಥನ 146 (ಸಂ-1)
ರಾವಣನ ದಶಶಿರವದೇಂ 202 (ಸಂ-2)
ರಾವಣನ ಹಳಿವವನೆ 283 (3ಸಂ-2)
ರುಚಿಯೊಪ್ಪೆ ರಸನೆಗದು 347 (ಸಂ-2)
ರೇಖಾರಹಸ್ಯಗಳು 34ಸಂ (ಸಂ-2)
ಲಾವಣ್ಯವಾತ್ಮಗುಣ 468 (ಸಂ-3)
ವಿಶ್ವಪರಿಧಿಯದಲ್ಲೊ 136 (ಸಂ-1)
ವಿಷಯಭೋಗವಿರಕ್ತಿ 778 (ಸಂ-4)
ವಿಷಯಸನ್ನಿಧಿಗಿಂತ 627 (ಸಂ-3)
ವಿಸ್ತಾರದಲಿ ಬಾಳು 913 (ಸಂ-4)
ವೇದಗಳು ಶಾಸ್ತ್ರಗಳು 523 (ಸಂ-3)
ವೇದ ಲೋಕಾಚಾರ 521 (ಸಂ-3)
ವೇದಾಂತವಾಕ್ಯಗಳ 931 (ಸಂ-4)
ವೈವಿಧ್ಯವೊಂದು ಕೃಪೆ 629 (ಸಂ-3)
ಶಕ್ತಿ ಕರಣಕ್ಕಿರಲಿ 437 (ಸಂ-2)
ಶಕ್ತಿ ಮೀರ್ದ ಪರೀಕ್ಷೆ 556 (ಸಂ-3)

## ಪದ್ಯಾರಂಭದ ಅಕಾರಾಣ

ಶರಣುವೊಗು ಜೀವನರಹಸ್ಯ 945 (ಸಂ-4)
ಶರಧಿಯೊಳಗಣ ವಸ್ತುಗಳ 225 (ಸಂ-1)
ಶರನಿಧಿಯನೀಜುವನು 696 (ಸಂ-3)
ಶಶ್ವದ್ವಿಕಾಸನಹಾಸನ 531 (ಸಂ-3)
ಶ್ವಸನನಾಗಸದಿ 155 (ಸಂ-1)
ಶ್ಯಾಮಸುಂದರನವನೆ 95 (ಸಂ-1)
ಶ್ವಾನ ತಿಪ್ಪೆಯಮೇಲೆ 905 (ಸಂ-4)
ಶಿಲೆಯಾಗಿ ನಿದ್ರಿಸುತ್ತಿರ್ದಾಕೆ 109 (1ಸಂ-1)
ಶಿವ ಸೌಖ್ಯ ಸೌಂದರ್ಯ 127 (ಸಂ-1)
ಶಿಶುಗಳವಲಕ್ಕಿ ಬೆಲ್ಲದ 679 (ಸಂ-3)
ಶೀತವಾತಗಳಾಗ 646 (ಸಂ-3)
ಸರಿಯಾಗಲಿಲ್ಲವದು 582 (ಸಂ-3)
ಸರಿಹದದ ಕಾಳು 796 (ಸಂ-4)
ಸರ್ವರುಂ ಸಾಧುಗಳೆ 275 (ಸಂ-2)
ಸರ್ವಹಿತವೊಂದುಂಟೆ? 854 (ಸಂ-4)
ಸರ್ವಾರ್ಥಸಹಭಾಗಿತೆಗೆ 882 (ಸಂ-4)
ಸಹಜನಗ್ನತೆ ನಮಗೆ 214 (ಸಂ-2)
ಸ್ರವಿಸುವುದು ಜೀವರಸ 464 (ಸಂ-3)
ಸ್ರಷ್ಟುಸಂಕಲ್ಪಲಿಪಿಯೆಲ್ಲ 67 (ಸಂ-1)
ಸ್ವಪ್ನಲೋಕವ ಜಾಗೃತಂ 893 (ಸಂ-4)
ಸ್ವರರಾಗಗೀತಿಗಳು 465 (ಸಂ-3)
ಸ್ವಸ್ಥತೆಯ ಕದಲಿಸದ 723 (ಸಂ-4)

ಶೀತಾಳೆ ಸಿಡುಬು 787 (ಸಂ-4)
ಶ್ರೀಯನಾಯುವ ಬಲವ 546 (ಸಂ-4)
ಶ್ರೀ ವಿಷ್ಣು ವಿಶ್ವಾದಿಮೂಲ 1 (ಸಂ-1)
ಶುನಕ ಬೆಂಬತ್ತಿತಲ 690 (ಸಂ-3)
ಶುಭವಾವುದಶುಭವಾವುದು 804 (ಸಂ-4)
ಶೃತಿಯರ್ಥ ವಿಶದ 552 (ಸಂ-3)
ಶೂನ್ಯವೆಲ್ಲವುಂ 897 (ಸಂ-4)
ಸಕ್ಕರೆಯ ಭಕ್ಷ್ಯವನು 290 (ಸಂ-2)
ಸಚ್ಚಿದಾನಂದಂಗಳ್ 125 (ಸಂ-1)
ಸತತಮಾರ್ಗಣೆ 857 (ಸಂ-4)
ಸತ್ತವೆನ್ನಾಶೆಗಳು 206 (ಸಂ-2)
ಸತ್ಯವಂತನನರಸಲ್ 198 (ಸಂ-1)
ಸತ್ಯವೆಂಬುದದೆಲ್ಲಿ? 332 (ಸಂ-2)
ಸತ್ಯವೆಂಬುದದೇನು? 96 (ಸಂ-1)
ಸತ್ಯವೆಂಬುದದೇನು ಸೈನಿಕನ 479 (ಸಂ-3)
ಸತ್ಯ ಶಿವ ಸುಂದರದ 331 (ಸಂ-2)
ಸತ್ಯಾನುಭವವೆಲ್ಲರಿಗೆ 333 (ಸಂ-2)
ಸತ್ತೆನೆನಂದೆನಬೇಡ 593 (ಸಂ-3)
ಸದ್ದುಮಾಡದೆ ನೀನು 929 (ಸಂ-4)
ಸನ್ನಿಹಿತ ಮನುಜನಲಿ 286 (ಸಂ-2)
ಸಮತೆ ಸಂಯಮ ಶಮಗಳಂ 704 (ಸಂ-4)
ಸಮವರ್ತಿಗಳು 243 (ಸಂ-2)
ಸಮವಿಲ್ಲ ಸೃಷ್ಟಿಯಲಿ 239 (ಸಂ-2)
ಸರಕಾರ ಹರಿಗೋಲು 308 (ಸಂ-2)
ಸರಿಗೆ ಪಂಚೆಯೋ 631 (ಸಂ-3)
ಸಾಕುಸಾಕೆನಿಸುವುದು 343 (ಸಂ-2)
ಸಾಜಗುಣವೆಂದು 213 (ಸಂ-2)
ಸಾಧ್ಯಪಡದಾರಿಗಂ 633 (ಸಂ-3)
ಸಾಮಾನ್ಯರೂಪದಲಿ 777 (ಸಂ-4)
ಸಾಮಾನ್ಯರೊಳ್ ಪುಟ್ಟಿ 910 (ಸಂ-4)
ಸಾರಸುಖರಸನಿಧಿ 323 (ಸಂ-2)
ಸಾರ್ವಭೌಮತೆ ನಾಲ್ಕು 756 (ಸಂ-4)
ಸಾರ್ವಭೌಮನು ಸೃಷ್ಟಿ 805 (ಸಂ-4)
ಸಾರ್ವಲೌಕಿಕ ಸೌಖ್ಯ 853 (ಸಂ-4)
ಸಾಸಿರದ ಯುಕ್ತಿ 636(ಸಂ-3)
ಸ್ಥಾಪಿತವೆಜೀವ 117 (ಸಂ-1)
ಸ್ವಾತಿ ಮಳೆಹನಿ 370 (ಸಂ-2)
ಸ್ವಾಭಾವಿಕವ ಮರೆತು 310 (ಸಂ-2)
ಸ್ವಾರಸ್ಯವಮಿತಂ 676 (ಸಂ-3)
ಸಿರಿದರಿದ್ರತೆಗಳೆ 637 (ಸಂ-3)
ಸಿರಿಮಾತ್ರಕೇನಲ್ಲ 657 (ಸಂ-3)
ಸಿರಿ ಸೊಬಗುಗಳ ಬೆದಕು 216 (ಸಂ-2)
ಸ್ಥಿರ ಹಿಮಾಚಲ ಬೊಮ್ಮ 848 (ಸಂ-4)
ಸ್ಮಿತವಿರಲಿ ವದನದಲಿ 724 (ಸಂ-4)
ಸಿರಿ ಸೊಬಗುಗಳ ಬೆದಕು 216 (ಸಂ-2)
ಸ್ಥಿರ ಹಿಮಾಚಲ ಬೊಮ್ಮ 848 (ಸಂ-4)
ಸ್ಮಿತವಿರಲಿ ವದನದಲಿ 724 (3ಸಂ-4)
ಸಿಂಧುವನು ಹಿಮಗಿರಿಗೆ 876 (ಸಂ-4)
ಸುಟ್ಟ ಹಗ್ಗದಿ ಬೂದಿ 797 (ಸಂ-4)
ಸುತ್ತ ಮುತ್ತಣ ಗಾಳಿ 900 (ಸಂ-4)

## ಪದ್ಯಾರಂಭದ ಅಕಾರಾಣ


ಸುತ್ತಿ ಸುತ್ತುವ ಹಕ್ಕಿ 691 (ಸಂ-3)

ಸುತೆಯ ಪೋಷಿಸಿ ಬೆಳೆಸಿ 497 (ಸಂ-3)

ಸುಮ್ಮನಿರಲೊಲ್ಲದೆ 326 (ಸಂ-2)

ಸುಮ್ಮನೊಬ್ಬಂಟಿ 74 (ಸಂ-1)

ಸುರಪಸಭೆಯಲಿ 307 (ಸಂ-2)

ಸುಲಭವೇನಲ್ಲ 855 (ಸಂ-4)

ಸುಳ್ಳಲ್ಲ ಕಥೆಯತಿರುಕನು 390 (ಸಂ-2)

ಸುಂದರತೆಯೆನುವುದೇಂ 446 (ಸಂ-2)

ಸುಂದರದ ರಸ ನೂರು 455 (ಸಂ-3)

ಸುಂದರವನೆಸಗು 269 (ಸಂ-2)

ಸ್ಥೂಲಸೂಕ್ಷ್ಮ ವಿವೇಕ 630 (ಸಂ-3)

ಸೃಷ್ಟಿಕಥೆ ಕಟ್ಟುಕಥೆ 139 (ಸಂ-1)

ಸೃಷ್ಟಿಚೋದನೆಗಳಿಂ 860 (ಸಂ-4)

ಸೃಷ್ಟಿಯದ್ಭುತಶಕ್ತಿ 502 (5ಸಂ-3)

ಸೃಷ್ಟಿಯ ವಿಧಾನದಲಿ 233 (ಸಂ-2)

ಸೃಷ್ಟಿಯಾಶಯವದೇಂ 26 (ಸಂ-1)

ಸೃಷ್ಟಿರೂಪಂಗಳವತಾರ 114 (3ಸಂ-1)

ಸೆರೆಬಿದ್ದು ಧರ್ಮಪಾದಪ 526 (ಸಂ-3)

ಸೆಳೆಯುತಿರುವದದೊಂದು 51 (3ಸಂ-1)

ಸೇರಿರ್ಪುವುಸಿರುಗಳೊಳ್ 843 (ಸಂ-4)

ಸೈನಿಕನು ನೀನು 734 (ಸಂ-4)

ಸೊಗಸು ಬೇಡದ ನರಪ್ರಾಣಿ 442 (ಸಂ-2)

ಸೊಟ್ಟುಗಳ ನೆಟ್ಟಗಾಗಿಪ 359 (ಸಂ-2)

ಸೌಂದರ್ಯದಾಲಯ ಬರಿ 449 (ಸಂ-2)

ಹಟವಾದಕೆಡೆಯಲ್ಲಿ 299 (ಸಂ-2)

ಹಣ್ಣೇನು ಕಾಯೇನು 800 (ಸಂ-4)

ಹತ್ಯೆಯೋ ಹನ್ಯತೆಯೊ 624 (ಸಂ-3)

ಹರ್ಮ್ಯಾಗ್ರಕೇರಿ 802 (ಸಂ-4)

ಹರಡುವುದು ಸಾಜ 534 (ಸಂ-3)

ಹರಸುವುದದೇನ ನೀರಿ 942 (ಸಂ-4)

ಹರಿಗೆ ನಿನ್ನನುರಾಗ 425 (ಸಂ-2)

ಹರಿಭಜಕರೊಳು ಭಯದಿ 494 (ಸಂ-3)

ಹಳೆಯ ಭಕ್ತಿ ಶ್ರದ್ಧೆ 15 (ಸಂ-1)

ಹಳೆಯ ಮಲೆ ಹಳೆಯ ನೆಲ 164 (ಸಂ-1)

ಹಳೆಸೂರ್ಯ ಹಳೆಚಂದ್ರ 141 (ಸಂ-1)

ಹಾಗೆಯೋ ಹೀಗೆಯೋ 669 (ಸಂ-3)

ಹಾಲ ಕಾಯಿಸಿ ಹೆಪ್ಪನಿಕ್ಕಿ 615 (ಸಂ-3)

ಹಾಲಿನೊಳು ಬೆಣ್ಣೆ 101 (ಸಂ-1)

ಹಾಸ್ಯಗಾರನೋ ಬೊಮ್ಮ 318 (ಸಂ-2)

ಹಾಳು ಹಾಳೆಲ್ಲ ಬಾಳ್ 249 (ಸಂ-2)

ಹಿಮಗಿರಿಯ ಕಂಡಂಗೆ 11ಸಂ (ಸಂ-1)

ಹಿಮಗಿರಿಯೊಳವಿತಿಹುದು 112 (ಸಂ-1)

ಹಿಂದಣದರುಳಿವಿರದು 458 (ಸಂ-3)

ಹೀಗೊ ಹಾಗೋ ಹೇಗೊ 834 (ಸಂ-4)

ಹುದುಗಿಹದದಲ್ಲಿ ಪರಮಾತ್ಮ 351 (ಸಂ-2)

ಹುರಿಯುರುಳೆ ಹಾವಲ್ಲ 391 (ಸಂ-2)

ಹುಲ್ಲಾಗು ಬೆಟ್ಟದಡಿ 789 (ಸಂ-4)

ಹುಲಿಯ ಕೆಣಕುವುದು 380 (ಸಂ-2)

ಸೌಂದರ್ಯದೊಳ್ ದ್ವಂದ್ವ 450 (ಸಂ-2)
ಸೌಂದರ್ಯಬಾಂಧವ್ಯಗಳನು 392 (ಸಂ-2)
ಸೌಂದರ್ಯಬಾಂಧವ್ಯಗಳು 220 (ಸಂ-2)
ಸೌಂದರ್ಯವೊಂದು ದೈವ 469 (ಸಂ-3)
ಸಂಕೇತಭಾವಮಯ 895 (ಸಂ-4)
ಸಂಗೀತಕಲೆಯೊಂದು 826 (ಸಂ-4)
ಸಂಗೀತ ತಲೆದೂಗಿಸುವುದು 498 (ಸಂ-3)
ಸಂತತದ ಶಿಕ್ಷೆಯಿಂ 705 (ಸಂ-4)
ಸಂದೇಹವೀ ಕೃತಿಯೊಳ್ 939 (ಸಂ-4)
ಸಂಪೂರ್ಣಗೋಳದಲಿ 135 (ಸಂ-1)
ಸಂಬಳದ ಹಂಬಲವೊ 315 (ಸಂ-2)
ಹಕ್ಕಿ ಮುನ್ನರಿಯುವುದೆ 73ಸಂ (ಸಂ-4)
ಹುಳು ಹುಟ್ಟಿ ಸಾಯುತಿರೆ 166 (ಸಂ-1)
ಹೂವ ತಳೆವ ಗುಲಾಬಿ 477 (ಸಂ-3)
ಹೃದಯಕೊಪ್ಪುವ ಭಾಷೆ 463 (ಸಂ-3)
ಹೃದಯ ಜೀವನಕೆನಿತು 185 (ಸಂ-1)
ಹೃದಯದಬ್ಬರವೇನು 386 (ಸಂ-2)
ಹೃದಯಪುಷ್ಪಮರಂದ 459 (ಸಂ-3)
ಹೃದ್ಯಹೃದಯೇಂಗಿತಕೆ 937 (ಸಂ-4)
ಹೆಸರನರಿಯದ ಸಸಿಯೊಳ್ 69 (ಸಂ-1)
ಹೆಸರು ಹೆಸರೆಂದು ನೀಂ 654 (ಸಂ-3)
ಹೆಸರು ಹೆಸರೆಂಬುದೇಂ 656 (3ಸಂ-3)
ಹೇಮಕುಂಭದಿ ಕೊಳಚೆ 417 (3ಸಂ-2)
ಹೇರಾಳು ಮೂಟೆಗೂಲಿಯ 346 (ಸಂ-2)

ಪದ್ಯಾರಂಭದ ಅಕಾರಾಣ

ಹೇಳಲಾಗದ ಹಸಿವು 350 (ಸಂ-2)
ಹೊಟ್ಟೆಯಲಿ ಹಸಿವು 384 (ಸಂ-2)
ಹೊಟ್ಟೆಯೊಂದರ ರಗಳೆ 200 (ಸಂ-1)
ಹೊಟ್ಟೆರಾಯನ ನಿತ್ಯದ 352 (ಸಂ-2)
ಹೊತ್ತು ಕಣಕಣದಿ 302 (ಸಂ-2)
ಹೊನ್ನೆಂದು ಜಗದಿ ನೀಂ 21 (ಸಂ-1)
ಹೊರಗಾವುದೊಳಗಾವುದೀ 128 (ಸಂ-1)
ಹೊರಗುಹೊರೆಯಾಗದವೋಲ್ 811 (ಸಂ-4)
ಹೊರಗೆ ಲೋಕಾಸಕ್ತಿ 773 (ಸಂ-4)
ಹೊರಗೆ, ವಿಶ್ವದಿನಾಚೆ 892 (ಸಂ-4)
ಹೊರಗೆ ಹೊಳೆವೊಂದು 440 (ಸಂ-2)

ಹೊಸಚಿಗುರು ಹಳೆಬೇರು 522  (ಸಂ-3)

ಹೊಸತನವೆ ಬಾಳು 720  (ಸಂ-4)

ಹೊಸಹೊಸದು ತಾನಾಗು 165 (ಸಂ-1)

ಹೊಸಹೊಸಬನಾಗು 604 (ಸಂ-3)

ಹೊಳಪು ಹೊಳಪಿನ ನಡುವೆ 403 (ಸಂ-2)

ಹೋರಾಡು ಬೀಳ್ವನ್ನಂ 573 (ಸಂ-3)

ಹೋರು ಧೀರತೆಯಿಂದ 574  (ಸಂ-3)



# ರವಿ ತಿರುಮಲೈ

ಮೂಲತಃ ಕೋಲಾರ ಜಿಲ್ಲೆಯುವರಾದ ರವಿ ತಿರುಮಲೈಯವರು ವಾಣಿಜ್ಯ ಪದವಿ ಪಡೆದು ಕೆನರಾ ಬ್ಯಾಂಕಿನಲ್ಲಿ ೨೦ ವರ್ಷಗಳ ಸೇವೆ ಸಲ್ಲಿಸಿ, ನಿವೃತ್ತಿ ಪಡೆದು, ಬಹಳ ವರ್ಷಗಳ ಕಾಲ ಮೈಸೂರಿನಲ್ಲಿ ವಾಸಿಸಿ, ಪ್ರಸ್ತುತ ಬೆಂಗಳೂರಿನಲ್ಲಿದ್ದಾರೆ. ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯ ಸುಖೀ ಸಂಸಾರದ ಕೇಂದ್ರ ಬಿಂದು ಇವರು. ಕನ್ನಡ ಪ್ರೇಮ, ಪುಸ್ತಕ ಓದುವುದು, ತರ್ಜುಮೆ ಮಾಡುವುದು, ಲೇಖನ, ಕವನ, ಹಾಡುಗಳನ್ನು ಬರೆಯುವುದು, ರಂಗಭೂಮಿ, ಹಳೆಯ ಚಿತ್ರ ಸಂಗೀತ, ಹೀಗೆ ಅವರ ಹವ್ಯಾಸಗಳು ಹಲವು. ಉತ್ತಮ ಶಾಸ್ತ್ರೀಯ ಸಂಗೀತ ಕೇಳುವುದೆಂದರೆ ಇವರಿಗೆ ಬಹಳ ಇಷ್ಟ. ಇವರ ಒಂದು ಕವನ ಸಂಕಲನ, ಒಂದು ಲೇಖನಗಳ ಸಂಗ್ರಹ ಸದ್ಯದಲ್ಲೇ ಪ್ರಕಟವಾಗಲಿದೆ.

ಪ್ರಚಾರಪ್ರಿಯರಲ್ಲದ ತಿರುಮಲೈಯವರು ಈಗ್ಗೆ ೫ ವರ್ಷಗಳಿಂದ ಮುಖಪುಸ್ತಕದ ಕನ್ನಡಬ್ಲಾಗಿನಲ್ಲಿ ದಿನಕ್ಕೊಂದರಂತೆ ಬರೆದ "ಮಂಕುತಿಮ್ಮನ ಕಗ್ಗ"ಗಳ ವ್ಯಾಖ್ಯಾನಗಳ ಸಂಗ್ರಹವೇ ಈ ಪುಸ್ತಕ. ಇದನ್ನು ಬರೆದ ಅವರು, ಇದು ತನಗೆ ಒಂದು ಕಲಿಯುವಿಕೆಯ ಮಾಧ್ಯಮ ಎಂದು ನಮ್ರರಾಗಿ ಹೇಳಿಕೊಳ್ಳುತ್ತಾರೆ.

ಬೆಲೆ : ರೂ. 250/–

ಪ್ರಕಾಶಕರು : ವಿಜಯರವಿ ಪ್ರಕಾಶನ, ಬೆಂಗಳೂರು – 560 076 ದೂರವಾಣಿ– 080–2668 5249